ಕಾರಂತರ ಕಾದಂಬರಿಗಳಲ್ಲಿ ಮನುಷ್ಯರ ನಡವಳಿಕೆಗಳು

ಡಾ. ಕೇಶವ ಶರ್ಮ ಕೆ.



ಕಾರಂತರ ಕಾದಂಬರಿಗಳಲ್ಲಿ ಮನುಷ್ಯರ ನಡವಳಿಕೆಗಳು

ಡಾ. ಕೇಶವ ಶರ್ಮ ಕೆ.

ವಾಚಸ್ಪತಿ ಪ್ರಕಾಶನ
658, 2ನೇ ಮಹಡಿ, 4ನೇ ಮುಖ್ಯ ರಸ್ತೆ
4ನೇ ಕ್ರಾಸ್, ಇ ಮತ್ತು ಎಫ್ ಬ್ಲಾಕ್
2ನೇ ಹಂತ, ರಾಮಕೃಷ್ಣನಗರ, ಮೈಸೂರು.

Karanthara Kadambarigalalli Manushyara Nadavalikegalu

Author and Address :

Dr. Keshavasharma K.

Rtd. Professor
1st Cross, Shanthinagara
Near Chowdamma Temple, B.R. Project, Badravathi
Mob. : 9448730611
E-mail: dr.keshavasharma.K@gmail.com

Published by :

Vachaspathi Prakashana

658, 2nd Floor, 4th Main Road
4th Cross, E & F Block, 2nd Stage
Ramakrishnanagar, Mysore.

Pages : viii+216+4=228
First Impression : 2024

Copies : 600
Price : Rs.285-00
Used Paper : Maplito
ಪುಟಗಳು : viii + ೨೧೬ + ೪ = ೨೨೮
ಮೊದಲ ಮುದ್ರಣ : ೨೦೨೪
ಪ್ರತಿಗಳು : ೬೦೦

ಬೆಲೆ : ರೂ.೨೮೫-೦೦
ಮುಖಪುಟ ವಿನ್ಯಾಸ : ಶ್ರೀಮತಿ ಸರೋಜ, ಮೈಸೂರು
ಅಕ್ಷರ ಜೋಡಣೆ : ಉನ್ನತಿ ಗ್ರಾಫಿಕ್ಸ್, ಮೈಸೂರು
ಮುದ್ರಣ : ಪ್ರಿಂಟ್ ಕಲ್ಚರ್, ಮೈಸೂರು

ಅರ್ಪಣೆ

ಪ್ರೀತಿ ಬೆರೆತ ಗಂಜಿ ಕೂಡ
ಸುಧೆಗೆ ತಮವು ಸತ್ಯವು
ಏನೇ ಯಾವುದಿರಲಿ ಬಾಳ್ಗೆ
ಪ್ರೀತಿಯೊಂದೆ ನಿತ್ಯವೂ...

ಲೇಖಕರ ಮಾತು

ಕಾರಂತರ ಕಾದಂಬರಿಗಳನ್ನು ಕುರಿತು ಬರೆಯುವುದು ಎಂದರೆ ಅವರ ಅನುಭವ ಜನ್ಯವಾದ ಜ್ಞಾನ ರೂಪವನ್ನು ನಾವು ಪಡೆದಂತೆ. ಅವರ ಅನುಭವ ಎನ್ನುವುದು ಅತ್ಯಂತ ಆಳದಲ್ಲಿದೆ. ಮನುಷ್ಯರ ನಡವಳಿಕೆಗಳನ್ನು ಅವರು ಅತ್ಯಂತ ಸೂಕ್ಷ್ಮವಾಗಿ ನೋಡಿದ್ದಾರೆ. ಅದನ್ನು ಕಾದಂಬರಿಗಳಲ್ಲಿ ಹೇಳಿದ್ದಾರೆ. ಅವರ ಕಾದಂಬರಿಗಳನ್ನು ಓದುವುದು ಅಂದರೆ ಮನುಷ್ಯರ ನಡವಳಿಕೆಯನ್ನು ಅರ್ಥ ಮಾಡಿಕೊಳ್ಳುವುದೂ ಹೌದು. ಒಬ್ಬ ಮನೋವಿಜ್ಞಾನಿಯು ನೋಡುವಂತೆ ಅವರು ಜನರನ್ನು ನೋಡುತ್ತಾರೆ. ಅವರನ್ನು ಅರ್ಥ ಮಾಡಿಕೊಳ್ಳುತ್ತಾರೆ.ಆದ್ದರಿಂದಲೇ ಅವರು ಅತ್ಯಂತ ಮಹತ್ವದ ಲೇಖಕರಾಗಿದ್ದಾರೆ. ಇಲ್ಲಿ ಅವರ ಕಾದಂಬರಿಗಳಲ್ಲಿ ಬರುವ ಮನುಷ್ಯರ ನಡವಳಿಕೆಗಳನ್ನು ಕುರಿತು ಬರೆದಿದ್ದೇನೆ. ನಾನಾ ರೀತಿಯವರು ಇದರಲ್ಲಿ ಇದ್ದಾರೆ. ಇದು ಒಂದು ಪ್ರಯತ್ನ ಮಾತ್ರ.

ಹಿತೈಷಿಗಳಾದ ಕೆ.ವಿ.ಎನ್., ಬರಗೂರು, ಮಲ್ಲೇಪುರಂ, ಕಲ್ಗುಡಿ, ಆರ್.ಜಿ. ಹಳ್ಳಿ ನಾಗರಾಜ್, ಎಚ್.ಎಲ್.ಪುಷ್ಪ, ಮಾಲಗತ್ತಿ ದಂಪತಿಗಳು, ಡಾ. ಪಿ.ವಿ.ಭಂಡಾರಿ ಅವರಿಗೆ ವಂದನೆಗಳು

ಕರಡು ತಿದ್ದಿದ ಡಾ. ಪಾಂಡುರಂಗ, ಅಭಿಜಿತ್ ಮತ್ತು ಕವನರಿಗೆ, ಸಬಿತಾ, ನಹುಷ, ನಿಯತಿಯರಿಗೆ,

ಬೆರಳಚ್ಚು ಮಾಡಿಕೊಟ್ಟ ಮೇರಿ, ಸಂಪತ್ತು, ಶ್ರೀಮತಿ ಸಂಪತ್ತು ಅವರಿಗೆ,

ಪ್ರಕಟಿಸುತ್ತಿರುವ ಪ್ರಕಾಶಕರಾದ ಶ್ರೀ ಕೆ.ಸಿ. ಓಂಕಾರಪ್ಪ ಅವರಿಗೂ, ಪುಟ ವಿನ್ಯಾಸ ಮಾಡಿದ ಶ್ರೀಮತಿ ಉಷಾ ಅವರಿಗೂ, ಮುಖಪುಟ ವಿನ್ಯಾಸಗೊಳಿಸಿದ ಶ್ರೀಮತಿ ಸರೋಜ ಅವರಿಗೂ, ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಮುದ್ರಣಾಲಯದ ಮಾಲೀಕರು ಹಾಗೂ ಸಿಬ್ಬಂದಿವರ್ಗದವರಿಗೂ ಕೃತಜ್ಞತೆಗಳು.

ಓದುವ ನಿಮಗೆ ಕೃತಜ್ಞತೆಗಳು...

– **ಡಾ. ಕೇಶವ ಶರ್ಮ ಕೆ.**

ಪರಿವಿಡಿ

* ಪೂರ್ವ ಪೀಠಿಕೆ 1
* ಸ್ವಂತ ಸುಖಗಳು 12
* ಕುಟುಂಬ 27
* ಆಧ್ಯಾತ್ಮಿಕತೆ ಎಂಬ ಭ್ರಾಂತಿ 60
* ಸುಪ್ತವಾದ ಪ್ರಜ್ಞೆಯ ಪ್ರಶ್ನೆ 77
* ವಾಸ್ತವ ಮತ್ತು ಮಿಥ್ಯೆಗಳು 177
* ಅನುಬಂಧ 211

* * *

ಪೂರ್ವ ಪೀಠಿಕೆ

ನಮ್ಮ ನಡವಳಿಕೆಗಳು ನಮ್ಮ ಆಲೋಚನೆಯ ಕ್ರಮವನ್ನು ಹೇಳುತ್ತದೆ. ನಮ್ಮ ಆಲೋಚನೆಯು ಹುಟ್ಟುವುದು ನಾವು ವಾಸ ಮಾಡುತ್ತಿರುವ ಸಮಾಜದ ಮೂಲದಿಂದ. ನಮ್ಮ ಸಮಾಜದಲ್ಲಿ ಆದರ್ಶ ಸಂಸ್ಕೃತಿಯು ಇರುತ್ತದೆ. ಅದೇ ರೀತಿಯಲ್ಲಿ ಸಾಮಾನ್ಯವಾದ ಸಂಸ್ಕೃತಿಯು ಇರುತ್ತದೆ. ಕೆಲವು ವಿಶ್ವಾತ್ಮಕವಾದ್ದು ಕೂಡಾ ಹೌದು. ಕೆಲವನ್ನು ನಾವು ಕಾಲದ ಹಿನ್ನಲೆಯಲ್ಲಿ ಗುರುತಿಸಬಹುದು. ಮತ್ತೆ ಕೆಲವನ್ನು ನಾವು ದಾಖಲಿತವಾದ ಮಾದರಿಯೆಂದು ಕರೆಬಹುದು. ಸಂಸ್ಕೃತಿಗೆ ಸಮಾಜದ ಮೌಲ್ಯವೂ ಅಷ್ಟೇ ಮುಖ್ಯವಾಗುತ್ತದೆ. ನಮ್ಮ ಜೀವನದ ಕ್ರಮವು ಹೇಗೆ ವ್ಯಕ್ತವಾಗುತ್ತದೆ ಎನ್ನುವುದು ಅತ್ಯಂತ ಮುಖ್ಯ. ಕೆಲವನ್ನು ನಾವು ಸಂಪ್ರದಾಯದಲ್ಲಿ ಕಾಣುತ್ತೇವೆ. ಸಂಸ್ಥೆಗಳು, ಕುಟುಂಬ, ಸಾಮಾಜಿಕ ಸಂವಹನಗಳು ನಮ್ಮ ನಡವಳಿಕೆಯನ್ನು ಹೇಳುತ್ತವೆ ಎಂದು ರೇಮಾಂಡ್ ವಿಲಿಯಂಸ್ ಹೇಳುತ್ತಾನೆ. (ದ ಲಾಂಗ್ ರೆವ್ಯೂಷನ್, 1961, ಪುಟ. 57–70) ನಡವಳಿಕೆಗೂ ಮನೋಸ್ಥಿತಿಗೂ ಒಂದು ಸಂಬಂಧವು ಇದೆ.

ನಮ್ಮ ಮನೋಸ್ಥಿತಿಯು ಸಂಕೀರ್ಣವಾಗಿದೆ. ಅದು ಅತೀವ ಚಂಚಲತೆಯು ಇದ್ದರೆ ಅದರ ಪರಿಣಾಮವು ನಮ್ಮ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಅದು ಪರಿವರ್ತನಾಶೀಲವೂ ಹೌದು. ಅದು ಆಲೋಚನೆಗಳನ್ನು ಕಟ್ಟುತ್ತದೆ ಮತ್ತು ಆಲೋಚನೆಗಳನ್ನು ಕೆಡವುತ್ತದೆ. ಅವುಗಳು ನಮ್ಮ ಗ್ರಹಿಕೆಯ ದ್ಯೋತಕಗಳೂ ಹೌದು. ಹಾಗೆಂದು ಅದನ್ನು ಅನಿಯಮಿತವೆಂದು ಹೇಳಲು ಬರುವುದೂ ಇಲ್ಲ. ಅನುಮಾನ. ಚಂಚಲತೆ, ಅಸ್ಪಷ್ಟತೆ ಮುಂತಾದವು ಹೇಗೆ ನಮ್ಮ ಮನಸ್ಸಿನ ಗುಣವೆಂದು ಹೇಳುತ್ತೇವೆಯೋ ಅದರ ರೀತಿಯಲ್ಲಿಯೇ ಖಚಿತತೆ, ನಿರ್ಧಾರ, ಬದ್ಧತೆಗಳೂ ಗುಣಗಳೇ ಆಗಿರುತ್ತವೆ. ಯಾವುದೇ ರೀತಿಯಲ್ಲಿ

ನೋಡಿದರೂ ಅದರ ಸ್ವರೂಪವನ್ನು ನಾವು ಅದರ ಅಭಿವ್ಯಕ್ತಿಯಲ್ಲಿಯೇ ಕಾಣಬೇಕಾಗುತ್ತದೆ. ಆಲೋಚನೆಯೇ ಅನೇಕ ಸಾರಿ ಅರ್ಥಗಳನ್ನು ಕಟ್ಟುತ್ತದೆ. ಈ ಕಾರಣದಿಂದ ಆಲೋಚನೆಯನ್ನು ನಾವು ಅರ್ಥಹೀನವೆಂದು ಹೇಳುವುದು ಅಸಾಧ್ಯವೂ ಹೌದು. ಅರ್ಥದ ಸ್ವರೂಪವೇ ಕಟ್ಟಲ್ಪಟ್ಟದ್ದೂ ಹೌದು. ಯಾವುದನ್ನು ನಾವು ಅರ್ಥವೆಂದು ಹೇಳುತ್ತೇವೆ ಅದಕ್ಕೂ ನಮ್ಮ ಚಟುವಟಿಕೆಗೂ ನಿರ್ಣಾಯಕವಾದ ಸಂಬಂಧವಂತೂ ಇದ್ದೇ ಇದೆ.

ನಮ್ಮ ಚಟುವಟಿಕೆ ಮತ್ತು ಅದರ ಅಭಿವ್ಯಕ್ತಿಯು ಈ ಕಾರಣದಿಂದ ಉತ್ಪಾದಿತ. ಮತ್ತು ಅದಕ್ಕೆ ಅದರದೇ ಆದ ಅನನ್ಯತೆಯೂ ಇದೆ. ನಮ್ಮ ಗ್ರಹಿಕೆ ಬೇರೆ, ಅದರ ಅರ್ಥವು ಬೇರೆ, ಅದರ ಅನನ್ಯತೆಯು ಬೇರೆ ಮುಂತಾಗಿ ನಾವು ಹೇಳಲು ಬರುವುದೂ ಇಲ್ಲ. ಅರ್ಥದ ಸ್ವರೂಪವನ್ನು ನಾವು ನಮಗೆ ಬೇಕಾದಂತೆ ಕಟ್ಟಿಕೊಂಡೇ ಅಭಿವ್ಯಕ್ತಿ ಮಾಡುತ್ತೇವೆ. ಆದ್ದರಿಂದಲೇ ಅರ್ಥಗಳು ಸ್ವತಂತ್ರವಲ್ಲ. ಅದನ್ನು ಸ್ವತಂತ್ರವೆಂದು ನಿರಚನವಾದಿಗಳು ಭಾವಿಸಿಕೊಳ್ಳುತ್ತಾರೆ. ಆದರೆ ಯಾವುದೇ ಒಂದು ಪದದ ಅರ್ಥವನ್ನು ನೋಡುವಾಗ ನಾವು ಈ ಬಗೆಯ ಅರಿವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಬರಹದಲ್ಲಿ ನಾವು ಬಳಸುವ ಪದಗಳನ್ನು ಅದರ ಉದ್ದೇಶಕ್ಕೆ ಅನುಸಾರವಾಗಿ ಬೇರೆಯಾಗುತ್ತದೆ. ಹೀಗಾಗಿ ಮಾರ್ಕ್ಸವಾದಿಗಳು ಪದದ ಬಳಕೆ ಮತ್ತು ಅದನ್ನು ಹೇಳುವವನ ಗ್ರಹಿಕೆ ಹಾಗೂ ಅದರ ಚರಿತ್ರೆಯನ್ನು ಜೊತೆಗೆ ನೋಡಬೇಕು ಎಂದು ಹೇಳುತ್ತದೆ. ಸಾಂದರ್ಭಿಕ ಅರ್ಥ ಅಥವಾ ಪದದ ಚಾರಿತ್ರಿಕ ಸಂದರ್ಭವು ಬಹಳ ಮುಖ್ಯವಾಗಿರುವುದೂ ಹೌದು. ಹಾಗೆ ನೋಡುವುದಿದ್ದರೆ ಯಾವುದೇ ಪದದ ಬಳಕೆ ವಾಸ್ತವವಾಗಿ ಚರಿತ್ರೆಗೆ ಒಂದು ಪ್ರತಿಕ್ರಿಯೆ ಮಾತ್ರವೇ ಆಗಿದೆ. ಅದು ಒಂದು ಅಭಿಪ್ರಾಯ ಮಾತ್ರವೂ ಹೌದು. ಆದರೆ ಯಾವಾಗ ನಾವು ಸಾಹಿತ್ಯವನ್ನು ಜನರಿಗಿಂಥ ಬೇರೆ ಎಂದು ಹೇಳುತ್ತೇವೆಯೋ ಆಗ ಅದನ್ನು ಮತ್ತು ಅದರ ಹಿಂದೆ ಇರುವ ಆಲೋಚನೆಯ ಕ್ರಮವನ್ನು ನೋಡುವ ಕ್ರಮವು ಬೇರೆಯಾಗುತ್ತದೆ. ಅದರ ಸ್ವರೂಪವನ್ನು ನಾವು ಅನನ್ಯವಾದ ಸಂಗತಿಯೆಂದು ಹೇಳಲು ಹೊರಡುತ್ತೇವೆ.

ನಾವು ಅರ್ಥ ಮಾಡಿಕೊಳ್ಳಬೇಕಾದ ಅಂಶವೆಂದರೆ ಸಾಹಿತ್ಯದ ಬರವಣಿಗೆಯು ಕೂಡಾ ತಾತ್ವಿಕವಾದ ಸಂಗತಿಯೆಂದು ಮಾತ್ರವೇ. ಆದರೆ ಯಾವಾಗ ಬರಹವನ್ನು ನಾವು ಬೇರೆ ಮಾದರಿಯಲ್ಲಿ ನೋಡಲು ತೊಡಗುತ್ತೇವೆಯೋ ಆಗ ಅದರ ಸ್ವರೂಪವನ್ನು ನಿರ್ದಿಷ್ಟವಾದ ಚಹರೆಯಾಗಿ ಮಾತ್ರವೇ ಗುರುತಿಸುತ್ತೇವೆ. ಆದರೆ ಬರಹವು ವಾಸ್ತವವಾಗಿ ಒಂದು ತಾತ್ವಿಕವಾದ ಚಟುವಟಿಕೆಯೂ ಆಗಿದೆ.

ಅದರ ಸ್ವರೂಪವನ್ನು ಅದರ ತಾತ್ವಿಕತೆಯಿಂದ ಭಿನ್ನವಾಗುತ್ತಾ ನೋಡುತ್ತೇವೆಯೋ ಆಗ ಅದರ ಸ್ವರೂಪವನ್ನು ಒಂದು ವಿಶಿಷ್ಟವಾದ ಘಟಕವೆನ್ನುವಂತೆ ಭಾವಿಸುತ್ತೇವೆ. ಬರಹದ ಚಟುವಟಿಕೆಯಿಂದಾಗಿಯೇ ನಾವು ಲೇಖಕರಾಗಿದ್ದೇವೆ. ಮತ್ತು ಬರಹವು ನಮ್ಮ ಬರಹಗಾರರನ್ನಾಗಿಯೂ ಮಾಡಿದೆ. ಬರಹವೆನ್ನುವುದನ್ನು ಚರಿತ್ರೆಯಿಂದ ಬೇರೆ ನೋಡಬೇಕು ಎಂದು ನವ್ಯ ವಿಮರ್ಶಕರು ಹೇಳುತ್ತಾರೆ. ಆದರೆ ವಾಸ್ತವದ ಪರಿಸ್ಥಿತಿಯು ಬೇರೆ. ಒಂದು ಸಂಸ್ಕೃತಿಯಲ್ಲಿ ಅನೇಕ ಅಂಶಗಳು ಇರುತ್ತವೆ. ಕುಂದಾಪುರಕ್ಕೂ ಉಡುಪಿಗೂ ಕೊಂಟಕ್ಕೂ ಪುತ್ತೂರಿಗೂ ಹೇಳಿಕೊಳ್ಳುವಂಥ ಪ್ರಾದೇಶಿಕ ಅಂತರಗಳಿಲ್ಲ. ಆದರೆ ಕುಂದಾಪುರದಲ್ಲಿ ಒಂದು ಬಗೆಯ ಕನ್ನಡವನ್ನು ಮಾತಾಡುತ್ತಾರೆ. ಪುತ್ತೂರಿನಲ್ಲಿ ವ್ಯಾವಹಾರಿಕ ಭಾಷೆ ತುಳು. ಈ ಪ್ರದೇಶಗಳ ನಡುವೆ ಇರುವ ಸಾಂಸ್ಕೃತಿಕ ಅಂತರವು ಹೆಚ್ಚಿನದು ಎಂದು ಅನಿಸುತ್ತದೆ. ವಾಸ್ತವದ ಪರಿಸ್ಥಿತಿಯೂ ತುಂಬಾ ಭಿನ್ನವಾಗಿದೆ. ಇದನ್ನು ನಾವು ಬೌದ್ಧಿಕ ಅಂತರ ಸಾಮಾಜಿಕ ಪರಿಸ್ಥಿತಿಗಳಲ್ಲಿಯೂ ನಾವು ತುಂಬಾ ವ್ಯತ್ಯಾಸವನ್ನು ಕಾಣುತ್ತೇವೆ. ಈ ಪ್ರದೇಶಗಳಲ್ಲಿ ಹಲವು ಜಾತಿಯವರು ವಾಸವನ್ನು ಮಾಡುತ್ತಾರೆ. ಅಷ್ಟೇ ಪ್ರದೇಶಗಳು ಭಿನ್ನವಾಗಿರುವುದರಿಂದ ಅವರ ನಡವಳಿಕೆಯಲ್ಲಿಯೂ ತುಂಬಾ ವ್ಯತ್ಯಾಸಗಳನ್ನು ಕಾಣುತ್ತೇವೆ. ಮಲೆಕುಡಿಯರು ಇರುವುದು ಧರ್ಮಸ್ಥಳ ಹತ್ತಿರ ಮರಳಿಮಣ್ಣಿಗೆ ಕಾದಂಬರಿಯು ನಡೆಯುವುದು ಕುಂದಾಪುರದ ಹತ್ತಿರ.

ಬರಹಕ್ಕೆ ಮತ್ತು ಚರಿತ್ರೆಗೆ ಒಂದು ನಿಕಟವಾದ ಸಂಬಂಧವೂ ಇದೆ. ನಾವು ಬರಹದ ಮೂಲಕವಾಗಿಯೇ ಒಂದು ಚರಿತ್ರೆಗೆ ಪ್ರತಿಕ್ರಿಯೆಯನ್ನು ಕೊಡುತ್ತೇವೆ. ಅದು ನಾವು ಚರಿತ್ರೆಗೆ ಪ್ರತಿಕ್ರಿಯೆಯನ್ನು ನೀಡುವ ವಿಧಾನವೂ ಹೌದು ಮತ್ತು ನಮ್ಮ ಅಭಿಪ್ರಾಯವೂ ಹೌದು. ಬರಹವೆನ್ನುವುದು ಮೂಲಭೂತವಾಗಿ ಒಂದು ಅಭಿಪ್ರಾಯ. ಈ ಮಾತು ಚರಿತ್ರೆಗೂ ಅನ್ವಯವಾಗುತ್ತದೆ. ಚರಿತ್ರೆಯೂ ಒಂದು ಅಭಿಪ್ರಾಯ ಮಾತ್ರವೇ ಆಗುತ್ತದೆ. ಯಾವಾಗ ನಾವು ಚರಿತ್ರೆಯನ್ನು ದ್ವಂದ್ವಾತ್ಮಕ ವಿಧಾನದಲ್ಲಿ ನೋಡಬಯಸುತ್ತೇವೆಯೋ ಆಗ ಅದರ ಸತ್ಯವು ತಿಳಿಯುತ್ತದೆ. ಆದ್ದರಿಂದ ಸಾಹಿತ್ಯ ಮತ್ತು ಚರಿತ್ರೆಯನ್ನು ಒಂದು ಸತ್ಯದ ಹಿನ್ನೆಲೆಯಲ್ಲಿ ನೋಡಲು ತೊಡಗುತ್ತೇವೆಯೋ ಆಗ ಮಾತ್ರವೇ ನಾವು ಸತ್ಯವನ್ನು ಹೇಳಿದಂತೆ ಅಗುತ್ತದೆ. ಅಭಿಪ್ರಾಯದ ಖಚಿತತೆಯೂ ಈ ಕಾರಣದಿಂದ ಬಹಳ ಮುಖ್ಯವಾಗಿದೆ. ಯಾವುದೇ ಒಂದು ಸತ್ಯವನ್ನು ನಾವು ಹೇಳುವಾಗ ಈ ಅರಿವನ್ನು ಹೊಂದಿರಬೇಕಾದ ಅಗತ್ಯವೂ ಇದೆ. ನಾವು ಯಾವುದನ್ನು ಬರೆಯುತ್ತೇವೆಯೋ ಅದಕ್ಕೂ ಒಂದು ಕಾರಣವೂ ಇರುತ್ತದೆ. ವಿನಾ ಕಾರಣ ಯಾವುದನ್ನು ಬರೆಯುವುದಿಲ್ಲ. ಮತ್ತು ಮಾತಾಡುವುದೂ

ಇಲ್ಲ. ಬರಹಕ್ಕೆ ಯಾವುದೇ ಉಪಯೋಗತಾ ಮೌಲ್ಯವು ಇಲ್ಲವೋ ಆಗ ನಾವು ಅದನ್ನು ಬರೆಯಲು ಹೋಗುವುದೂ ಇಲ್ಲ. ವಾಸ್ತವವಾಗಿ ಬರಹವೂ ಒಂದು ಚಟುವಟಿಕೆ. ಮತ್ತು ಅದರ ಉಪಯೋಗಕ್ಕೂ ಒಂದು ನಿಗದಿತವಾದ ಮೌಲ್ಯವಿದೆ. ಬರಹವು ಎಲ್ಲರೂ ಯಾಕೆ ಮಾಡುವುದಿಲ್ಲವೆಂದರೆ ಅವರು ಬರಹವನ್ನು ಅಭ್ಯಾಸ ಮಾಡಿಲ್ಲ ಎನ್ನುವುದಕ್ಕೆ ಮಾತ್ರವೇ. ಬರೆಯುವುದು, ಹೇಳುವುದು ಮುಂತಾದ ಚಟುವಟಿಕೆಯನ್ನು ನಾವು ಮಾಡುವುದೇ ನಿರ್ದಿಷ್ಟವಾದ ಸಂವಹನದ ಕಾರಣಕ್ಕಾಗಿ ಮಾತ್ರವೇ. ನಾವು ಯಾವುದನ್ನೇ ಆಗಲಿ ಬರೆಯಲು ಕಾರಣವಿದೆ ಮತ್ತು ಓದಲೂ ಕಾರಣವಿದೆ. ಆದರೆ ಬರೆಯುವುದು ಮತ್ತು ಓದುವುದು ಹೇಳುವುದು ಮತ್ತು ಕೇಳುವುದು ನಮ್ಮ ಅಗತ್ಯಕ್ಕೆ ತಕ್ಕಂತೆ ಮಾತ್ರವೇ. ಬರೆಯುವುದರಿಂದ ನಾವು ಖುಷಿ ಪಡುತ್ತೇವೆ. ಓದುವುದರಿಂದ ಖುಷಿ ಪಡುತ್ತೇವೆ. ಮತ್ತು ಹೇಳುವುದರಿಂದಲೂ ನಾವು ಹೆಚ್ಚು ಖುಷಿ ಪಡುತ್ತೇವೆ. ಇವುಗಳ ಹಿಂದೆ ನಮ್ಮ ಬಯಕೆಗಳು ಇರುತ್ತವೆ. ಬರಹದ ಅಭ್ಯಾಸ, ಓದಿನ ಅಭ್ಯಾಸ ಮುಂತಾದವುಗಳನ್ನು ನಾವು ಸಂತೋಷದ ಕಾರಣಕ್ಕಾಗಿ ಮಾಡುತ್ತೇವೆ ಎಂದರೆ ಅದರಲ್ಲಿ ಸುಖದ ಒಂದು ಭಾವನೆಯೂ ಇರುತ್ತದೆ. ಇದನ್ನು ಪ್ರಾಯ್ಡ್ ವಾದಿಗಳು ಒಂದು ತತ್ವವೆಂದು ಹೇಳಿದ್ದಾರೆ. ಆ ತತ್ವವೆಂದರೆ ಬಯಕೆಯ ಸಂಪೂರ್ಣತೆ. ಅದು ಭಾವನೆ ಮತ್ತು ಅದರ ಅಭಿವ್ಯಕ್ತಿಯ ಸಂತೋಷ. ಮಾತು ನಮಗೆ ಸಾಂತ್ವನವನ್ನು ಕೊಡುತ್ತದೆ. ಮತ್ತು ಅದರಲ್ಲಿ ನಾವು ಬಿಡುಗಡೆಯನ್ನು ಪಡೆಯುತ್ತೇವೆ. ಆತ್ಮೀಯರಲ್ಲಿ ನಾವು ನಮ್ಮ ದುಃಖವನ್ನು ಹಂಚಿಕೊಳ್ಳುತ್ತೇವೆ. ಮತ್ತು ಬಿಡುಗಡೆಯನ್ನು ಹೊಂದುತ್ತೇವೆ. ಬರೆಯುವುದೂ ಹೀಗೆ – ಒಂದು ಬಿಡುಗಡೆ. ಆದ್ದರಿಂದಲೇ ಬರೆಯುವುದು ಮತ್ತು ಅದರ ಸುಖವನ್ನು ಅನುಭವಿಸುವುದು ಬಹಳ ಮುಖ್ಯ. ಯಾವಾಗಲೂ ನಾವು ಈ ಸಂಗತಿಯನ್ನು ಗ್ರಹಿಸಬೇಕಾದ ಅಗತ್ಯವೂ ಇದೆ. ಬರಹವನ್ನು ಬಹಳ ದೊಡ್ಡದು ಎಂದು ಭಾವಿಸಬೇಕು ಎಂದು ಅರ್ಥವಲ್ಲ. ಬರೆಯುವುದು ಅದರ ಅಭ್ಯಾಸಗಳು ಮನುಷ್ಯರ ಕ್ರಿಯಾಶೀಲತೆಯ ದ್ಯೋತಕವೂ ಹೌದು. ಯಾವುದನ್ನು ನಾವು ಬೇರೆ ಬೇರೆ ಮಾಡಲು ಬರುವುದಿಲ್ಲ. ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು. ಕೆಲವರಿಗೆ ಚೆನ್ನಾಗಿ ಕತೆಯನ್ನು ಹೇಳಲು ಬರುತ್ತದೆ. ಆದರೆ ಅವರಿಗೆ ಬರೆಯುವುದಕ್ಕಾಗುವುದಿಲ್ಲ. ಮತ್ತೆ ಕೆಲವರು ಚೆನ್ನಾಗಿ ಕತೆಯನ್ನು ಬರೆಯುತ್ತಾರೆ. ಆದರೆ ಅವರಿಗೆ ಹೇಳಲು ಬರುವುದಿಲ್ಲ. ಇಲ್ಲಿ ಬರಹವು ಒಂದು ಉಪಕರಣ ಮಾತ್ರವೇ ಆಗಿರುತ್ತದೆ. ಮುದ್ರಣದ ತಂತ್ರಜ್ಞಾನವು ಬಂದ ಮೇಲೆ ಕತೆಯನ್ನು ಬರೆಯುವವರು ಮತ್ತು ಕತೆಯನ್ನು ಹೇಳುವವರು ಬೇರೆಯಾದರು. ಅಂದರೆ ಮುದ್ರಣದ ತಂತ್ರಜ್ಞಾನವು ಬಂದ ಮೇಲೆ ಅನೇಕ ಸಂಗತಿಗಳು ಬದಲಾದವು.

ಅದನ್ನು ಹೀಗೆಯೂ ಹೇಳಬಹುದು : ಮೌಖಿಕತೆಯಿಂದ ಬರಹದ ಕಡೆಗೆ. ಈ ಪಲ್ಲಟವು ಸಾಮಾನ್ಯವಾದದಲ್ಲ. ಕತೆ ಹೇಳುವವರು ಹೆಚ್ಚು ಅಥೆಂಟಿಕ್ ಅಥವಾ ಕತೆಯನ್ನು ಬರೆಯುವವರು ಹೆಚ್ಚು ಅಥೆಂಟಿಕ್ ಎಂದು ಹೇಳುವುದು ಸಾಧ್ಯವಿಲ್ಲ. ಆದರೆ ಯಾವಾಗ ಬರಹವನ್ನು ಮುದ್ರಿಸಲು ಪ್ರಾರಂಭವಾಯಿತೋ ಆಗ ಅಕ್ಷರಕ್ಕೆ ಹೆಚ್ಚು ಪ್ರಾಶಸ್ತ್ಯವು ಬಂತು. ಮತ್ತು ಅದರ ಪರಿಣಾಮವಾಗಿ ಅಥೆಂಟಿಸಿಟಿಯ ಪ್ರಶ್ನೆಯು ಬರಹದ ಸಾಕ್ಷ್ಯವನ್ನು ಒಳಗೊಂಡಿತು. ಆದರೆ ಒಂದಂತೂ ನಿಜ. ಬರಹವನ್ನು ನಾವು ಜ್ಞಾನದ ಒಂದು ಭಾಗವಾಗಿಯೇ ನೋಡಿದೆವು. ಮತ್ತು ಅದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟೆವು. ಬರಹವು ಅಧಿಕೃತವಾದುದರಿಂದ ಅದರ ಸ್ವರೂಪವು ಬೇರೆ ಮತ್ತು ಮೌಖಿಕತೆ ಬೇರೆ ಎಂದು ಹೇಳುತ್ತಾ ಬಂದಿರುವುದು ಇಲ್ಲಿ ಗಮನಾರ್ಹವಾಗಿದೆ. ಬರಹವನ್ನು ಹೆಚ್ಚು ಅಧಿಕೃತವೆಂದು ಹೇಳಿದರೆ ಅದರ ಸ್ವರೂಪವನ್ನು ಕೂಡಾ ನಾವು ಹೆಚ್ಚು ಗ್ರಹಿಸದೇ ಹೋಗುತ್ತೇವೆ. ಬರಹವನ್ನು ನೋಡುವಾಗ ಅದರ ಹಿಂದೆ ಒಂದು ಮೌನವಿದೆ. ಆ ಮೌನವೇ ಚರಿತ್ರೆಯ ಒಂದು ರೂಪವಾಗಿದೆ. ಮತ್ತು ಅದರ ಮೌನವನ್ನು ನಾವು ಗ್ರಹಿಸುವುದು ಎಂದರೆ ಅದರ ಹಿಂದೆ ಇರುವ ವಿವರಣೆಯನ್ನು ಸ್ವಲ್ಪ ಗಂಭೀರವಾಗಿಯೂ ಗ್ರಹಿಸುವುದೂ ಹೌದು. ಯಾವುದೇ ಚರಿತ್ರೆಗೆ ಅದರದೇ ಆದ ಒಂದು ಸ್ವರೂಪವಿದೆ. ಮತ್ತು ಅದನ್ನು ನೋಡುವಾಗ ಅದರ ಲಕ್ಷಣಗಳ ಹಿಂದೆ ಗಮನವನ್ನು ಇಟ್ಟುಕೊಳ್ಳಬೇಕಾದ ಅಗತ್ಯವೂ ಇದೆ. ಅದು ಬೇರೆ ಪ್ರಶ್ನೆಯೂ ಹೌದು. ಪುತ್ತೂರು ಸೀಮೆಯ ಜೀವನ ಕ್ರಮಕ್ಕೂ ಕುಂದಾಪುರ ಪರಿಸರದ ಜೀವನ ಕ್ರಮಕ್ಕೂ ಇರುವ ಅಂತರಗಳು ಕಾರಂತರ ಕಾದಂಬರಿಗಳ ಪಾತ್ರಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಬೆಟ್ಟದ ಜೀವ ಕಾದಂಬರಿಯು ನಡೆಯುವುದು ಪಂಜ ಸೀಮೆಯಲ್ಲಿ ಮರಳಿ ಮಣ್ಣಿಗೆಯ ರಾಮೈತಾಳನ ನಡವಳಿಕೆಯು ಒಂದು ವ್ರತನಿಷ್ಠ ಬ್ರಾಹ್ಮಣಿಕೆಯಲ್ಲಿ ಕಾಣುತ್ತೇವೆ. ಚೋಮನ ದುಡಿ ಕಾದಂಬರಿಯಲ್ಲಿಟ್ಟಿರುವುದು ಹವ್ಯಕ ಬ್ರಾಹ್ಮಣ. ಅವನದು ಪೌರೋಹಿತ್ಯ ವೃತ್ತಿಯಲ್ಲ. ರಾಮೈತಾಳನನ್ನು ನೋಡಿದರೆ ಸಂಕಪ್ಪಯ್ಯ ಹೆಚ್ಚು ಉದಾರಿಯಂತೆ ಕಾಣುತ್ತಾನೆ. ಅವನದು ತಮಾಷೆಯ ಮನೋವೃತ್ತಿ. 'ಪ್ರದೇಶಗಳು ಮತ್ತು ನಾವು ಇರಿಸಿಕೊಳ್ಳುವ ಸಂಬಂಧಗಳು ನಮ್ಮ ಪ್ರಜ್ಞೆಯನ್ನು ನಿಯಂತ್ರಿಸುತ್ತವೆಯೆಂದು ರೇಮಾಂಡ್ ವಿಲಿಯಂಸ್ ಹೇಳುತ್ತಾನೆ. (ರೇಮಾಂಡ್ ವಿಲಿಯಂಸ್, 2005, ಕಲ್ಚರ್ ಅಂಡ್ ಮೆಟಿಯರಿಸಂ, ವರ್ಸೋ)

ಬರಹದಲ್ಲಿ ಕಾರಣವೂ ಒಂದು ದೃಷ್ಟಿಯಿಂದ ಬಹಳ ಮಹತ್ವದ್ದು. ಬರೆಯುವುದು, ಓದುವುದು ಮತ್ತು ಕೇಳುವುದು ಹಾಗೂ ಹೇಳುವುದು ಎಲ್ಲವೂ

ಒಂದು ಬಗೆಯಲ್ಲಿ ನಮ್ಮ ಆಯ್ಕೆಗಳೇ ಆಗಿರುತ್ತವೆ. ಅದರ ಸ್ವರೂಪ ಮತ್ತು ಅದರ ಕುರಿತಾದ ಆಯ್ಕೆಗಳು ಬಹಳ ಮುಖ್ಯ. ನಮ್ಮ ಆಯ್ಕೆ ಮತ್ತು ಅದರ ಪರಿಣಾಮಗಳು ನಮಗೆ ಅಗತ್ಯವೂ ಆಗಿರುತ್ತವೆ. ಆದರೆ ಮಾತನ್ನು ಆಯ್ಕೆ ಮಾಡಿಕೊಳ್ಳುವಾಗ ಅದರ ಸ್ವರೂಪವು ಒಂದು ಬಗೆಯಲ್ಲಿ ಇರುತ್ತದೆ. ಬರಹದಲ್ಲಿ ನಮ್ಮ ಆಯ್ಕೆಗಳು ಮತ್ತೊಂದು ಬಗೆಯಲ್ಲಿ ಇರುತ್ತದೆ. ಯಾವುದನ್ನು ಹೇಗೆ ನಿರೂಪಿಸಬೇಕು ಎನ್ನುವುದು ನಮಗೆ ಬಹಳ ಮುಖ್ಯ. ನಮ್ಮ ಆಶಯ ಮತ್ತು ಅದಕ್ಕೆ ಅನುಗುಣವಾದ ನಿರೂಪಣೆಯೇ ಬಹಳ ಅಗತ್ಯ. ಆಶಯ ಮತ್ತು ಅದರ ಅಭಿವ್ಯಕ್ತಿಗೆ ಈ ಅರ್ಥದಲ್ಲಿ ಒಂದು ನಿಕಟವಾದ ಸಂಬಂಧವಿದೆ. ಅದನ್ನು ಮುಚ್ಚಲು ಆಗುವುದೂ ಇಲ್ಲ. ಈ ಮಾದರಿಗಳ ನಡುವಣ ಸಂಬಂಧವು ಬಹಳ ಸಂಕೀರ್ಣವಾಗಿರುವುದೂ ಹೌದು. ಬರೆಯುವುದು ಮತ್ತು ಅದರ ಮೂಲಕ ಹೇಳುವುದನ್ನು ನಾವು ಹಾಗೆಯೇ ವ್ಯಕ್ತಮಾಡಲಾರೆವು. ಮತ್ತು ಹೇಳಬಹುದಾದುದನ್ನು ನಾವು ಬರೆಯಲಾರೆವು. ಆದರೆ ಎರಡೂ ಅವುಗಳದೇ ಆದ ಸ್ವಂತಿಕೆಯನ್ನು ಪಡೆದಿರುತ್ತದೆ. ಅದರಲ್ಲಿ ಬೇರೆ ಸಾಧ್ಯತೆಗಳು ಇಲ್ಲ. ಅವುಗಳ ಸ್ವಂತಿಕೆಯು ಇರುವುದೇ ಮೂಲಭೂತವಾಗಿ ಭಿನ್ನವಾದ ವಿವರಣೆಯಲ್ಲಿ ಎನ್ನುವುದನ್ನು ನಾವು ಮರೆಯಬಾರದು. ಇಲ್ಲಿ ಮತ್ತೊಂದು ಮುಖ್ಯವಾದ ಅಂಶವಿದೆ. ಯಾವುದನ್ನು ನಾವು ಬರೆಯುತ್ತೇವೆಯೋ ಅದು ತನ್ನದೇ ಆದ ಚೌಕಟ್ಟನ್ನು ಹೊಂದಿರುವುದರಿಂದ ಅದರ ವ್ಯಾಪ್ತಿಯು ಭಿನ್ನವಾಗುತ್ತದೆ. ಆದರೆ ಯಾವಾಗ ಯಾವುದನ್ನು ನಾವು ಮಾತಾಡುತ್ತೇವೆಯೋ ಅದರ ಸ್ವರೂಪವು ಅನನ್ಯವಾದುದೂ ಹೌದು. ಅವುಗಳ ಹಿಂದೆ ಇರುವ ದೃಷ್ಟಿಕೋನವೂ ಬೇರೆಯಾಗಿರುತ್ತದೆ. ಬರಹವನ್ನು ನಾವು ಒಂದು ಬಗೆಯ ಉತ್ಪಾದನೆ ಎಂದು ಹೇಳಿದರೆ ಅದರ ಹಿಂದೆ ಇರುವ ಇರುವ ಉತ್ಪಾದಕ ಒತ್ತಡವು ಒಂದು ಬಗೆಯದು. ಆದರೆ ನಾವು ಮಾತಾಡುವಾಗ ಅದರ ಹಿಂದೆ ಇರುವ ಶಕ್ತಿಯು ಬೇರೆ ಬಗೆಯದೂ ಹೌದು. ಇವುಗಳು ಮಾತ್ರವೇ ಅಲ್ಲ ಯಾವುದೇ ಒಂದು ಉತ್ಪಾದನೆ ಮತ್ತು ಅದರ ಹಿಂದೆ ಇರುವ ಶಕ್ತಿಗಳಿಗೆ ಬೇರೆ ಬೇರೆ ಮುಖಗಳು ಇರುತ್ತವೆ. ಬರೆಯುವುದು ಎಂದರೆ ನಿರ್ದಿಷ್ಟವಾಗಿ ನಾವು ಕೆಲವನ್ನು ಪ್ರಾರಂಭ ಮಾಡುವುದು. ಮತ್ತು ನಿರ್ಧಾರಾತ್ಮಕವಾಗಿ ಮುಕ್ತಾಯ ಮಾಡುವುದು. ಆದರೆ ಮಾತನ್ನು ಹೇಳುವಾಗ ನಾವು ಅದರ ಸ್ವರೂಪವನ್ನು ಈ ರೀತಿಯಲ್ಲಿ ಗಣಿಸಲು ಬರುವುದೂ ಇಲ್ಲ. ಮಾತು ಕೇಳುವವನ ಆಸಕ್ತಿಯನ್ನು ಹೊಂದಿಕೊಂಡು ಬೇರೆಯಾಗುತ್ತದೆ. ಮತ್ತು ಇದರಲ್ಲಿ ಇರುವ ಅರ್ಥಗಳೂ ಬೇರೆಯಾಗಲು ಸಾಧ್ಯ. ಕಣ್ಣಿಗೆ ಕಾಣುವ ವಾಸ್ತವವನ್ನು ನಾವು ನೋಡುವಾಗ ಅದರ ಸ್ವರೂಪವನ್ನು ಮಾತಲ್ಲಿ ಹೇಳುವುದಕ್ಕೂ ಅದನ್ನು ಕುರಿತು ಬರೆಯುವುದಕ್ಕೂ

ವ್ಯತ್ಯಾಸವಿದೆ. ಬರಹವು ಒಂದು ಕಡೆಗೆ ಪ್ರಾರಂಭವಾಗಿ ಮತ್ತೊಂದು ಕಡೆಗೆ ಮುಕ್ತಾಯವಾಗುತ್ತದೆ. ಆದರೆ ಅದರ ಸ್ವರೂಪವನ್ನು ಆಯಾ ಸನ್ನಿವೇಶಗಳ ಹಿನ್ನೆಲೆಯಲ್ಲಿಯೇ ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವೂ ಇದೆ. ಇರುವ ವಾಸ್ತವವನ್ನು ನಾವು ಬರೆಯುವುದು ಎಂದರೆ ಅದರ ಮಿತಿಗಳನ್ನು ಮಾತ್ರವೇ ನೋಡುವುದೂ ಅಲ್ಲ. ಬ್ರಾಹ್ಮಣರೇ ಆದರೂ ರಾಮೈತಾಳ ಸಂಕಪ್ಪಯ್ಯ ಇವರೆಲ್ಲಾ ತಮ್ಮದೇ ಸಾಮಾಜಿಕ ಸ್ಥಾನಮಾನವನ್ನು ಹೊಂದಿದ್ದಾರೆ. ಅದನ್ನು ಕಾರಂತರು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಮರಳಿ ಮಣ್ಣಿಗೆಯ ಸೂರ, ಚೋಮನದುಡಿ ಚೋಮ, ಮೈಮನಗಳ ಸುಳಿಯಲ್ಲಿ ಬರುವ ದುಗ್ಗಿ–ಪಮ್ಮ ತಗ್ಗಿ ಬಗ್ಗಿ ನಡೆಯಲೇ ಬೇಕು. ಅದು ಅವರ ಮಾತುಗಳಲ್ಲಿ ಕಾಣಿಸುತ್ತದೆ. ಸಂಸ್ಕೃತಿಯಲ್ಲಿನ ತಾರತಮ್ಯಳು ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ. ಅಷ್ಟೇ ಇದು ಲಿಂಗತಾರತಮ್ಯಕ್ಕೂ ಕಾರಣವಾಗುತ್ತದೆ. ರಾಮೈತಾಳನ ನಿಯಂತ್ರಣದಲ್ಲಿರುವ ಸರಸೋತಿ–ಪಾರೋತಿಯರು, ತಮ್ಮೊಳಗೆ ಮಾತಾಡುತ್ತಾರೆಯೇ ವಿನಃ ಅವನ ಎದುರು ಮಾತಾಡುವುದಿಲ್ಲ. ಬೆಟ್ಟದ ಜೀವ ಕಾದಂಬರಿಯ ಗೋಪಾಲಯ್ಯ ಸಾಹಸಿ, ಕಾಡು ಕಡಿದು ತೋಟ ಮಾಡಿದ್ದಾನೆ. ಶಂಕರಿಯ ಒಂಟಿತನ ಒಂದು ಬಗೆಯದಾದರೆ ಅವರನ್ನು ಭೇಟಿಯಾದ ಶಿವರಾಮನು ತುಂಬಾ ಕುತೂಹಲಿ. ಅವನಿಗೆ ಸೂಕ್ಷ್ಮ ಸಂವೇದನೆ ಇದೆ.

"ಕೋಟ ಬ್ರಾಹ್ಮಣರ ಸಾಮಾಜಿಕ ಜೀವನ ಬಲ್ಲವರಿಗಂತೂ ರಾಮೈತಾಳ ಮತ್ತು ಶೀನಮಯ್ಯರ ಕೋಟ ಬ್ರಾಹ್ಮಣ ಸಮಾಜ ಕಳೆದ ನೂರು ವರ್ಷಗಳಲ್ಲಿ ಎದುರಿಸಿದ ಮೌಲ್ಯ ಪಲ್ಲಟದ ಸ್ಥಿತಿ, ಹೊಟ್ಟೆಪಾಡಿಗೆ ಊರು ಬಿಟ್ಟು ಪರದೇಶಿಗಳಾಗಬೇಕಾದ ಪರಿಸ್ಥಿತಿ, ರಾಮೈತಾಳ, ಶೀನಮಯ್ಯ, ಲಚ್ಚನಂತಹವರನ್ನು ಸೃಷ್ಟಿಸಿದ ಆರ್ಥಿಕ, ಸಾಮಾಜಿಕ ಕಾರಣ ಪರಂಪರೆ ಅತ್ಯಂತ ಗಾಢವಾಗಿ ಮನಸ್ಸನ್ನು ತಟ್ಟುತ್ತದೆ. ಯಾಕೆಂದರೆ ಕಾದಂಬರಿಯಲ್ಲಿ ಬರುವ ಈ ವಿವರಗಳು ಸಾಂಕೇತಿಕವಲ್ಲ. ಅವು ಕೋಟ ಬ್ರಾಹ್ಮಣರ ಬದುಕಿನ ಸ್ಥಿತ್ಯಂತರದ ಚರಿತ್ರೆಯ ಕಲಾತ್ಮಕ ವಿವರಣೆಯೇ ಆಗಿವೆ. ಆದರೆ ರಾಮೈತಾಳ, ಶೀನಮಯ್ಯರ ಪಾತ್ರದ ಅರ್ಥವಂತಿಕೆ ಕೋಟ ಬ್ರಾಹ್ಮಣರ ಸಾಮಾಜಿಕ ಬದುಕಿಗೇ ಸೀಮಿತವಾಗುವುದಿಲ್ಲ. ತಮ್ಮ ಚೂರು ನೆಲ ತಮ್ಮ ಮುಂದಿನ ತಲೆಮಾರನ್ನು ಸಾಕಲಾರದು ಎಂಬ ಭಯವಾಗಲೀ, ತಮ್ಮ ವೃತ್ತಿ ತಮ್ಮ ಮಕ್ಕಳಿಗೆ ಬೇಡ ಎಂಬ ತಮ್ಮ ಬಗ್ಗೆಯೇ ತಮಗಿರುವ ತಿರಸ್ಕಾರವಾಗಲೀ ಕೋಟಬ್ರಾಹ್ಮಣರಿಗೇ ಸೀಮಿತವಾಗಿಲ್ಲ. ಇಂದು ನೇಕಾರರಿಗೆ ತಮ್ಮ ಮಕ್ಕಳು ನೇಕಾರರಾಗುವುದು ಬೇಡ ಎನ್ನಿಸಿದೆ; ಬಡಗಿಗಳಿಗೆ ತಮ್ಮ ಮಕ್ಕಳು ಉಳಿ ಬಾಚಿ

ಹಿಡಿಯುವುದು ಬೇಡ ಎನ್ನಿಸಿದೆ. ಗಾಣಿಗರಿಗೆ, ಅಕ್ಕಸಾಲಿಗರಿಗೆ, ಸಮಗಾರರಿಗೆ ಪರಂಪರಾಗತ ಅರ್ಥ ವ್ಯವಸ್ಥೆ ರೂಪಿಸಿದ್ದ, ಉದ್ಯೋಗಗಳನ್ನೂ ಮಾಡಿಕೊಂಡಿದ್ದ ಎಲ್ಲರಿಗೂ ಈಗ ತಮ್ಮ ವೃತ್ತಿ ಇನ್ನು ಮುಂದೆ ತಮ್ಮನ್ನು ಸಾಕಲಾರದು ಎನ್ನುವ ಸತ್ಯ ಹೊಳೆಯುತ್ತಿದೆ. ಎಷ್ಟೋ ಸಾಂಪ್ರದಾಯಕ ವೃತ್ತಿಗಳು ಹೊಸ ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ದಾಳಿ ಎದುರಿಸಲಾರದೆ ನಾಶವಾಗಿಯೇ ಹೋಗಿವೆ. ಈ ಭಯ, ತಿರಸ್ಕಾರ, ಪರಕೀಯತೆ, ಅವನತಿಗಳು ಬ್ರಾಹ್ಮಣರಿಗೇ ಸೀಮಿತವಾಗಿಲ್ಲ; ಕೋಟದ ಭೌಗೋಳಿಕ ಗಡಿಗೂ ಸೀಮಿತವಾಗಿಲ್ಲ." (ಸಾಕ್ಷಿ. 38, ಪುಟ.53–54, ಏಪ್ರಿಲ್ 1978) ಜಿ.ರಾಜಶೇಖರ (ಪುಟ. 121) ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕೌಟುಂಬಿಕ ರಾಜಕಾರಣದ ಎರಡು ಮುಖಗಳಿವೆ: ಒಂದನೆಯದಾಗಿ ರಾಮೈತಾಳರ ವಿರುದ್ಧ ನಿಲ್ಲುವ ಸರಸೋತಿ: ಪಾರೋತಿಯರ ಪ್ರಪಂಚ. ರಾಮೈತಾಳರಿಗೆ ಜಮೀನಿನ ವಿಷಯ ಗೊತ್ತಿಲ್ಲ. ಅವರಿಗೆ ಗೊತ್ತಿರುವುದು ಪೌರೋಹಿತ್ಯ ಒಂದು ಮಾತ್ರ. ಅವರ ವಿರುದ್ಧವಾಗಿ ಭೂಮಿಯನ್ನು ಬಗ್ಗಿಸುವುದು; ಅದಕ್ಕೆ ಬೇಕಾದ್ದನ್ನು ಒದಗಿಸುವುದು ತಿಳಿದಿರುವುದು ಸರಸೋತಿ; ಪಾರೋತಿಯಂಥವರಿಗೆ ಮಾತ್ರ. ಕೌಟುಂಬಿಕ ರಾಜಕಾರಣದಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ ಪ್ರಕ್ರಿಯೆಗಳು ಬೇರೆಯಾಗುತ್ತವೆ. ಮೇಲು ನೋಟಕ್ಕೆ ಪುರುಷನೇ ಕುಟುಂಬವನ್ನು ಆಳುತ್ತಾನೆಂದು ನಾವು ಭಾವಿಸಿದರೂ ಅಂತರಾಳದಲ್ಲಿ ಸ್ತ್ರೀಯ ಅಧಿಕಾರಕ್ಕೆ ಬೇರೆ ಬೇರೆ ಚಹರೆಗಳಿವೆ. ಇದು ಒಂದು ಮುಖವಾದರೆ ಪ್ರಭುತ್ವದ ಬೇರೆ ಮುಖಗಳೂ ಕಾರಂತರ ಕಾದಂಬರಿಗಳಲ್ಲಿ ವ್ಯಕ್ತಗೊಂಡಿವೆ. ಕಾರಂತರ ಬಹುತೇಕ ಕಾದಂಬರಿಗಳಲ್ಲಿ ವ್ಯಕ್ತವಾಗುವುದು ಪ್ರಾದೇಶಿಕ ರಾಜಕಾರಣದ ವಿಭಿನ್ನ ರೂಪಗಳು. ಪ್ರಾದೇಶಿಕ ರಾಜಕಾರಣದಲ್ಲಿ ಬೇರೆ ಬೇರೆ ನಮೂನೆಗಳಿವೆ. ಅದು ರಾಷ್ಟ್ರರಾಜಕಾರಣಕ್ಕಿಂತ ಭಿನ್ನವಾದುದು. ಪ್ರಾದೇಶಿಕತೆಗೆ ಕೃಷಿಯುತ್ಪಾದನೆಯ ಮತ್ತು ಅದು ನಿರೂಪಿಸುವ ಸಂಬಂಧಗಳ ಸೂಕ್ಷ್ಮ ರೂಪಗಳಿವೆ. ಗಂಡು ಹೆಣ್ಣಿನ ಸಂಬಂಧದ ನಡುವೆ; ಜಾತಿಗಳ ನಡುವೆ; ಪ್ರಾದೇಶಿಕತೆ ಮತ್ತು ರಾಷ್ಟ್ರೀಯ ರಾಜಕಾರಣಗಳ ನಡುವೆ ವಿವಿಧ ಸ್ತರಗಳ ರಾಜಕಾರಣಗಳಿವೆ. ..'ನಂಬಿದವರ ನಾಕ–ನರಕ'ದಲ್ಲಿ ಬರುವ ಗಂಡು ಹೆಣ್ಣಿನ ಸಂಬಂಧಗಳಲ್ಲಿರುವ ರಾಜಕಾರಣದಲ್ಲಿ ವಾಗ್ದೇವಿಯ ಮೌನ – ಅವಳ ಮನೋಗತಿಯ ಸಂಕೀರ್ಣ ಅಭಿವ್ಯಕ್ತಿಯು ಒಂದು ಬಗೆಯದು. 'ಒಡಹುಟ್ಟಿದವರು' ಕಾದಂಬರಿಯಲ್ಲಿ ಸಂಸಾರದ ವಿಭಿನ್ನ ಮುಖಗಳ ಪರಿಚಯವಿದೆ.

ಕಾರಂತರ ಕಾದಂಬರಿಗಳು ಒಂದು ಹಂತದಲ್ಲಿ ಪ್ರಾದೇಶಿಕತೆಯ ನಿರೂಪಣೆಯಾಗಿದ್ದರೂ ಮತ್ತೊಂದು ದೃಷ್ಟಿಕೋನದಿಂದ ಅವು ಪ್ರಾದೇಶಿಕ ಚರಿತ್ರೆಯ

ಭಾಗಗಳೂ ಹೌದು. ಇದರಿಂದಾಗಿ ಕಾರಂತರ ಕಾದಂಬರಿಗಳಿಗೆ ಒಂದು ಬೇರಿದೆ. ಈ ಅರ್ಥದಲ್ಲಿ ಅವು ನೇರವಾಗಿ ವಿಶ್ವಾತ್ಮಕ ಧೋರಣೆಯನ್ನು ತುಂಬಾ ಶುಷ್ಕವಾಗಿ ಮಂಡಿಸುವುದಿಲ್ಲ ಹಾಗೂ ಆಯಾ ಪ್ರಾದೇಶಿಕ ಆವರಣದಲ್ಲಿ ಜೀವನಾನುಭವವನ್ನು ತಾರ್ಕಿಕವಾಗಿ ನಿರೂಪಿಸುವ ಕಾರಂತರ ಕಾದಂಬರಿಗಳು ತುಂಬಾ ಅರ್ಥವತ್ತಾದ ಮಂಡನೆಯೂ ಆಗುತ್ತದೆ.

ಕಾರಂತರ ಮನುಷ್ಯರು ಆಯಾ ಪ್ರದೇಶಕ್ಕೆ ಸಂಬಂಧಪಟ್ಟವರು. ಮತ್ತು ಅವರು ಪ್ರಾದೇಶಿಕತೆ; ಜಾತಿ; ಕುಟುಂಬಗಳ ಸದಸ್ಯರೂ ಹೌದು. ಇದರಿಂದಾಗಿಯೇ ಕಾರಂತರ ಕಾದಂಬರಿಗಳಲ್ಲಿ ಒಂದು ಮೂರ್ತ ರೂಪವು ಸಾಧ್ಯವಾಗುತ್ತದೆ. ಮತ್ತು ಪ್ರಾದೇಶಿಕ ಸಂಸ್ಕೃತಿಯ ಕುರಿತು ಬರೆಯುವ ಲೇಖಕರು ಏಕಕಾಲಕ್ಕೆ ಸಂಸ್ಕೃತಿಯ ಒಳಗಿನವರಾಗಿ ಮತ್ತು ಹೊರಗಿನವರಾಗಿ ವರ್ತಿಸಬೇಕಾತ್ತದೆ. ಕಾರಂತರು ಸಾಮಾಜಿಕ ಪರಿವರ್ತನೆಯ ಕುರಿತು ಬರೆಯುವಾಗ ಒಮ್ಮೊಮ್ಮೆ ಹೊರಗಿನವರಂತೆ, ಮತ್ತೆ ಕೆಲವೊಮ್ಮೆ ಒಳಗಿನವರಂತೆ ಬರೆಯುವ ಕ್ರಮಗಳು ಇದಕ್ಕೆ ಉದಾಹರಣೆಗಳಾಗಿವೆ. ಆದರೆ ಪ್ರಾದೇಶಿಕ ಸಂಸ್ಕೃತಿಯು ಅವರಿಗೆ ಬರಹಗಳ ಸಂಪನ್ಮೂಲಗಳಾಗಿವೆ. ಪ್ರಾದೇಶಿಕತೆಗೆ ಇರುವ ಕೆಲವು ವಿಶಿಷ್ಟ ನಿಯಮಗಳು ಕೂಡಾ ಕಾರಂತರಿಗೆ ಬಹು ಮುಖ್ಯವಾದ ಹಾಗೆ ಕಾಣಿಸುತ್ತದೆ. ಅದು ಅವರ ಬರಹಗಳ ಶಕ್ತಿ.

ವಾಸ್ತವ ಎಂದರೆ ಕಣ್ಣಿಗೆ ಕಾಣಿಸುವ ಸಂಗತಿಯನ್ನು ಮಾತ್ರವೇ ನೋಡುವುದೂ ಅಲ್ಲ. ಅದರಾಚೆಗೂ ಒಂದು ಸತ್ಯವಿದೆ. ಅದನ್ನು ಗ್ರಹಿಸಿಕೊಳ್ಳುವುದು ಬಹಳ ಮುಖ್ಯ. ಆದ್ದರಿಂದ ಯಾವುದೇ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಅದರ ಹಿಂದೆ ಇರುವ ಸತ್ಯವನ್ನು ಮತ್ತು ತತ್ವಜ್ಞಾನವನ್ನು ಅರ್ಥ ಮಾಡಿಕೊಳ್ಳುವುದೂ ಹೌದು. ಈ ಅನುಸಂಧಾನವು ಬಹಳ ಮುಖ್ಯವಾದ ಪ್ರಕ್ರಿಯೆಯೂ ಹೌದು. ಇದಕ್ಕೆ ಸಂಬಂಧ ಪಟ್ಟಂತೆ ಮತ್ತೆ ಕೆಲವು ವಿಷಯಗಳನ್ನು ನಾವು ಸ್ಪಷ್ಟಪಡಿಸಬೇಕಾದ ಅಗತ್ಯವೂ ಇದೆ. ಯಾವುದೇ ಸಂಗತಿಯು ಯಾವುದೇ ಪೂರ್ವ ಯೋಜನೆಯು ಇಲ್ಲದೆ ನಡೆಯುವುದೇ ಇಲ್ಲ. ಅದರ ಸ್ವರೂಪವನ್ನು ನಾವು ಕೇವಲ ಸ್ವಾಯತ್ತವಾದ ಘಟಕ ಎನ್ನುವಂತೆ ವಿವರಿಸಲು ಬರುವುದೂ ಇಲ್ಲ. ಸಾಹಿತ್ಯವೂ ಸೇರಿದಂತೆ ಯಾವುದೇ ಒಂದು ಉತ್ಪಾದನೆಯು ಸಕಾರಣವಾದದು. ಮತ್ತು ಅದರ ಸ್ವರೂಪವನ್ನು ನಾವು ಅದರ ಅಸ್ತಿತ್ವ ಮತ್ತು ಅದರ ಪರಿಣಾಮಗಳ ಹಿನ್ನೆಲೆಯಲ್ಲಿಯೇ ಕಾಣಬೇಕಾಗುತ್ತದೆ. ಯಾವಾಗ ನಾವು ಬರಹ ಮತ್ತು ಮಾತುಗಳನ್ನು ನಮ್ಮ ಆಲೋಚನೆಯ ಭಾಗವಾಗಿ ಬಳಸುತ್ತೇವೆ ಎನ್ನುವುದೂ

ಬಹಳ ಮುಖ್ಯ. ಯಾವುದೇ ಕೆಲಸಗಳನ್ನು ನಾವು ನಿರ್ದಿಷ್ಟವಾದ ಫಲಿತಾಂಶಗಳ ಹಿನ್ನೆಲೆಯಲ್ಲಿಯೇ ಕಾಣಬೇಕಾಗುತ್ತದೆ. ಆದರೆ ಅದನ್ನು ವಿವರಿಸಿಕೊಳ್ಳುವಾಗ ಅದರ ಸಾಧ್ಯತೆಯೇನು ಎಂದೂ ನೋಡಬೇಕಾಗುತ್ತದೆ. ವಾಸ್ತವವಾಗಿ ನಾವು ಮಾಡುವ ನಮ್ಮ ಕೆಲಸಗಳಿಗೆ ಅದರದೇ ಫಲಿತಾಂಶವೂ ಇರುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಕೆಲಸಗಳನ್ನು ಮಾಡುವಾಗ ಅದರದೇ ಆದ ಒಂದು ನಿಯಮವೂ ಇರುತ್ತದೆ. ಆ ನಿಯಮಗಳನ್ನು ನಾವು ಬಿಟ್ಟು ಯಾವುದೇ ಕೆಲಸವನ್ನು ಮಾಡುವುದು ಅಸಾಧ್ಯವೂ ಹೌದು. ನಿಯಮ ಮತ್ತು ಅದರ ರೀತಿಯು ಕೂಡಾ ಒಂದು ಹಂತದಲ್ಲಿ ಬಹಳ ಮಹತ್ವದ್ದೂ ಆಗುವುದು ಈ ಕಾರಣಕ್ಕೆ. ಆದರೆ ಯಾವ ರೀತಿಯಲ್ಲಿ ಇದನ್ನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎನ್ನುವುದು ವಿವೇಚನೆಗೆ ಬಿಟ್ಟ ವಿಷಯವೂ ಹೌದು. ಚಟುವಟಿಕೆಗಳಿಗೆ ಇರುವ ನಿಯಮಗಳು ಆಯಾ ಪರಿಣಾಮವನ್ನೂ ಸೂಚಿಸುತ್ತದೆ.

1947ರಲ್ಲಿ ಪ್ರಕಟವಾದ ಕಾರಂತರ 'ಸರಸಮ್ಮನ ಸಮಾಧಿ' ಆ ಕಾಲ ಧರ್ಮವನ್ನು ನೋಡಿದರೆ ತುಂಬಾ ವಿಶಿಷ್ಟವಾದುದು ಎಂದು ಅನಿಸುತ್ತದೆ. ನೀಲಾ ಚಲಯ್ಯ ಹೆಂಡತಿಯನ್ನು ಸರಿಯಾಗಿ ಬಾಳಿಸಲಾರದವನು. ಅವನ ಅರಿವಿಗೆ ಅದು ಬರುವುದು ಇಲ್ಲ. ಕಾರಂತರೇ ಹೇಳುವಂತೆ ಅವನೊಬ್ಬ ಪಡಪೋಶಿ ಗಂಡ. ಅವನ ಹೆಂಡತಿ ಬೆಳ್ಳಕ್ಕ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕಾದಂಬರಿ ಮನುಷ್ಯರ ವರ್ತನೆಯ ಬಗ್ಗೆ ಒಂದು ಕಟುವಾದ ವ್ಯಂಗ್ಯವಿದೆ.

ಯಾವುದನ್ನು ನಾವು ನಮ್ಮ ಕೆಲಸಗಳೆಂದು ಹೇಳುತ್ತೇವೆಯೋ ಅದರ ರೀತಿಯಲ್ಲಿಯೇ ಅನೇಕ ಘಟಕಗಳೂ ಇರುತ್ತವೆ. ಮತ್ತು ಘಟಕಗಳೇ ವಾಸ್ತವವಾಗಿ ಅವುಗಳ ರೂಪವನ್ನು ಸೂಚಿಸುತ್ತವೆ. ಕೆಲಸಗಳ ಮುಖ್ಯವಾದ ಅಂಶಗಳು ಅವುಗಳ ಅನನ್ಯತೆಯನ್ನು ಸೂಚಿಸುತ್ತವೆ. ಕೆಲಸಗಳು ನಮ್ಮ ಜೀವನದ ಭಾಗವೂ ಹೌದು. ಅದರಲ್ಲಿ ಯಾವುದೇ ಸಂಶಯವೂ ಇಲ್ಲ. ಆದರೆ ಯಾವಾಗ ಇವುಗಳನ್ನು ಹೇಗೆ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ನಾವು ಮಾಡುವ ನಮ್ಮ ಕೆಲಸಗಳನ್ನು; ಅದರ ಅನನ್ಯತೆಯನ್ನು ಮಾತ್ರವೇ ಒಂದು ಮಾನದಂಡವಾಗಿಯೂ ನೋಡುತ್ತೇವೆ. ಒಂದು ಚಟುವಟಿಕೆಯು ಮತ್ತೊಂದು ಚಟುವಟಿಕೆಯಿಂದ ಭಿನ್ನವಾಗುತ್ತದೆ. ಮತ್ತು ಅದರ ಸ್ವರೂಪ ಮತ್ತು ಲಕ್ಷಣಗಳೂ ಬೇರೆಯಾಗುತ್ತವೆ. ನಮ್ಮ ಯಾವುದೇ ಚಟುವಟಿಕೆ ಮತ್ತು ಅದರ ಸ್ವರೂಪವು ಒಂದಕ್ಕೆ ಒಂದು ಬೇರೆಯಾಗಲೂ ಬಹುದು. ಅದರ ಸಾಧ್ಯತೆಯು ಬೇರೆಯಾಗಬಹುದು. ಆದರೆ ಅವುಗಳನ್ನು ನಾವು ಜೀವನದಿಂದ ಮತ್ತು ಅದರ ಆವಶ್ಯಕತೆಯಿಂದ ಬೇರೆ

ಮಾಡಲು ಬರುವುದಿಲ್ಲ. ಒಂದು ಚಟುವಟಿಕೆಯು ಮತ್ತೊಂದು ಚಟುವಟಿಕೆಯಿಂದ ಭಿನ್ನವಾಗುವುದೂ ಅದರ ಮಿತಿಗಳಿಂದಲೂ ಹೌದು. ಆದರೆ ಯಾವುದನ್ನು ನಾವು ನಮ್ಮ ಚಟುವಟಿಕೆಯನ್ನು ಹೇಗೆ ನೋಡುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ಒಂದರ ಮಿತಿಯು ಮತ್ತೊಂದರ ಮಿತಿಯಾಗುವುದು ಸಾಧ್ಯವೂ ಇಲ್ಲ. ಆದರೆ ನಮ್ಮ ಚಟುವಟಿಕೆಯು ಅದರದೇ ಆದ ಫಲಿತಗಳನ್ನು ನೀಡುವುದೂ ಕೂಡಾ ಅದೇ ರೀತಿಯಲ್ಲಿ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಯಾವ ಕೆಲಸವನ್ನು ನಾವು ಮಾಡುತ್ತೇವೆಯೋ ಅದರ ಹಿಂದೆ ಇರುವ ಜ್ಞಾನವನ್ನು ನಾವು ಪ್ರತ್ಯೇಕವೆಂದು ಹೇಳಬೇಕಾದ ಅಗತ್ಯವಿಲ್ಲ. ಜ್ಞಾನವೇ ಬೇರೆ, ಕೆಲಸವೇ ಬೇರೆ ಎಂದು ವರ್ಗೀಕರಿಸುವುದು ಸರಿಯಾದ ಕ್ರಮವೂ ಅಲ್ಲ. ಪ್ರತಿಯೊಂದು ಕೆಲಸಕ್ಕೂ ಅದರದೇ ಆದ ನಿಲುವು ಮತ್ತು ಪ್ರಮೇಯಗಳು ಇರುತ್ತವೆ. ಇದು ಮುಖ್ಯವಾದ ಸಂಗತಿ.ಕೆಲಸವು ಬೇರೆ ಮತ್ತು ಅದರ ಹಿಂದೆ ಇರುವ ಜ್ಞಾನವೇ ಬೇರೆ ಮತ್ತು ಅವುಗಳಿಗೆ ಅಂತರವಿದೆ ಎಂದೂ ಭಾವಿಸಿದರೆ ಮಾತ್ರವೇ ಈ ಸಮಸ್ಯೆಯು ಉಂಟಾಗುತ್ತದೆ. ಕೆಲಸವೇ ಅನನ್ಯವೆಂದು ಅದಕ್ಕೆ ಯಾವುದೇ ಬೇರುಗಳು ಇಲ್ಲವೆಂದು ಹೇಳಲು ಬರುವುದೂ ಇಲ್ಲ. ಬೆಟ್ಟದ ಜೀವ, ಆಳ ನಿರಾಳ, ಸನ್ಯಾಸಿಯ ಬದುಕು, ಮೂಕಜ್ಜಿಯ ಕನಸುಗಳು ನಮಗೆ ಇದನ್ನು ಹೇಳುತ್ತವೆ.

ಕಾರಂತರ ಎಲ್ಲಾ ಕಾದಂಬರಿಗಳಲ್ಲಿ ಒಂದು ಬಗೆಯ ಜೀವನದ ಕುರಿತಾದ ಧೋರಣೆಗಳಿರುತ್ತವೆ. ಸ್ವಂತ ಎನ್ನುವುದು ಕಾರಂತರಲ್ಲಿ ಬೇರೆ ಬೇರೆ ಥರ ಸಾಮಾಜಿಕ ಸನ್ನಿವೇಶಗಳಲ್ಲಿ ರೂಪುಗೊಳ್ಳುತ್ತವೆ.

ಕಾರಂತರು ಸ್ಪಷ್ಟವಾಗಿ ಕೆಲವು ಸಂಗತಿ ಹೇಳುತ್ತಾರೆ. ತಮ್ಮ ಕಾದಂಬರಿಗಳ ಉದ್ದೇಶವನ್ನು ಅವರು ಹೇಳುತ್ತಾರೆ.

ಒಂದು ಅರ್ಥದಲ್ಲಿ ಕಾರಂತರು ಜೀವನವನ್ನು ಅತ್ಯಂತ ಹತ್ತಿರದಿಂದ ನೋಡಿದವರು. ಬದುಕನ್ನು ಅವರಷ್ಟು ನಿಕಟವಾಗಿ ಪರಿವೀಕ್ಷಿಸಿದವರು ಇಲ್ಲ.

ಸ್ವಂತ ಸುಖಗಳು

ಮರಳಿಮಣ್ಣಿಗೆ ಕಾದಂಬರಿಯಲ್ಲಿ ಕಾರಂತರು ವಿಶಿಷ್ಟವಾದ ಪ್ರಯತ್ನವನ್ನು ಮಾಡಿದ್ದಾರೆ. ಈ ಕಾದಂಬರಿಯಲ್ಲಿ ಅನೇಕವಿಚಾರಗಳಲ್ಲಿ ವ್ಯಕ್ತವಾಗುವುದು ಮನುಷ್ಯನ ಜೀವನದ ಅಂತರಂಗ. ಇದನ್ನು ಕಾರಂತರು ಬಿಡಿಸುವಾಗ ಅಪಾರವಾದ ತಾಳ್ಮೆಯನ್ನು ವಹಿಸಿಕೊಂಡಿದ್ದಾರೆ. ಅದರಲ್ಲಿ ಇರುವುದು ಗಂಡಿನ ಜೀವನ ಮತ್ತು ಅವನ ಅಬ್ಬರಗಳು. ಆ ಕಾದಂಬರಿಯಲ್ಲಿ ಬರುವ ಐತಾಳರು, ಲಚ್ಚ ಹಾಗೂ ರಾಮರನ್ನು ನೋಡಿದರೆ ಈ ಮಾತು ಅರ್ಥ ಪೂರ್ಣವಾಗುತ್ತದೆ. 'ಮೈಮನಗಳ ಸುಳಿಯಲ್ಲಿ' ಗರತಿಯಲ್ಲದವಳ ಆತ್ಮಕಥನವಾದರೂ ದಾಂಪತ್ಯದಲ್ಲಿನ ಸಾರ್ಥಕ, ಸಾಫಲ್ಯಗಳನ್ನು ವಿವೇಚಿಸಿರುವ, ತೃಪ್ತ ಜೀವನದ ಹಾದಿಯನ್ನೂ ಅರಸುವ ಪ್ರಯತ್ನವೇ ಈ ಕಾದಂಬರಿಯಾಗಿರುವುದು ಇಲ್ಲಿನ ವಿಶೇಷವಾಗಿದೆ. ಗಂಡು ಹೆಣ್ಣಿನ ಸಂಬಂಧದಲ್ಲಿ ಕಾಮದ ಪಾಲೆಷ್ಟು, ಪ್ರೇಮದ ಪಾಲೆಷ್ಟು, ದೇಹಕ್ಕೆ ತನ್ನದೇ ಆದ ಸೂಕ್ಷ್ಮತೆ, ರುಚಿ ಮತ್ತು ತಣಿವೆಗಳಿವೆಯೇ, ಇದ್ದರೂ ಮನಸ್ಸಿನಲ್ಲೇ ಅವುಗಳ ಉಗಮವಲ್ಲವೆ, ದೇಹ ಮತ್ತು ಮನಸ್ಸುಗಳ ನಂಟನ್ನು ಕಡಿದುಹಾಕಲು ಸಾಧ್ಯವೆ, ಅವುಗಳ ಮೇಳ, ಸಮಾನ ಧರ್ಮ ಮತ್ತು ಭಾವಸಾಮರಸ್ಯಗಳಲ್ಲವೆ ಲೈಂಗಿಕ ಸಂಬಂಧವನ್ನು, ಗಂಡು ಹೆಣ್ಣಿನ ಸಂಬಂಧವನ್ನು ಅರ್ಥಪೂರ್ಣ ವಾಗಿಸುವುದು ಎಂಬೆಲ್ಲ ಪ್ರಶ್ನೆಗಳನ್ನು ಈ ಕಾದಂಬರಿಯಲ್ಲಿ ಮಂಜುಳೆಯ ಪಾತ್ರದ ಮುಖಾಂತರ ಪರಿಶೀಲಿಸಲಾಗಿದೆ. ಈ ಪ್ರಶ್ನೆಗಳಿಗೆ ಅವಳೊಬ್ಬಳ ಪ್ರತಿಕ್ರಿಯೆಯಷ್ಟನ್ನೇ ಚಿತ್ರಿಸಿದೆ, ಅವಳ ಬಾಳಿನಲ್ಲಿ ಹಾದುಹೋಗುವ ಅನೇಕ ವ್ಯಕ್ತಿಗಳ ಪ್ರತಿಕ್ರಿಯೆಯನ್ನೂ ಚಿತ್ರಿಸಿಸುವುದರಿಂದ ಈ ಸಮಸ್ಯೆಯ ಸಂಪೂರ್ಣ ನೋಟವೇ ಇಲ್ಲಿ ಒದಗಿದೆ. ಮನುಷ್ಯ ಜೀವನದ ಅನಿವಾರ್ಯವೆನ್ನಬಹುದಾದ ಅದಮ್ಯವೆನ್ನಿಸುವ ಈ ಮೂಲ ಪ್ರವೃತ್ತಿ ಎಡೆಗೊಡೆಬಹುದಾದ ನೈತಿಕ ಪ್ರಶ್ನೆಗಳ ಬಗೆಗಿನ ಗೊಂದಲ, ಮೌಲ್ಯ

ನಿಷ್ಕರ್ಷೆಯ ಬಗೆಗಿನ ಸಂದೇಹ–ಇವುಗಳ ವಿಶ್ಲೇಷಣೆ ಈ ಕಾದಂಬರಿಯನ್ನು ಮಹತ್ವಪೂರ್ಣ ಕೃತಿಯನ್ನಾಗಿಸಿದೆ. ಆದುದರಿಂದ ವೇಶ್ಯಾಜೀವನವನ್ನು ಚಿತ್ರಿಸುವ ಬೇರೆ ಕಾದಂಬರಿಗಳೊಡನೆ ಕಾರಂತರ ಕಾದಂಬರಿಯನ್ನು ಹೋಲಿಸುವುದು ಸಾಧ್ಯವಿಲ್ಲ. ಸಾಧುವೂ ಅಲ್ಲ. "ಮನುಷ್ಯ ಬರಿಯ ಪಶುವಲ್ಲವಷ್ಟೆ! ಆತ ಮನೋದೇಹಿ. ಈ ಎರಡರ ಸಂಯೋಗ ಯಾವ ಯಾವ ರೀತಿಗಳಲ್ಲೆಲ್ಲ ಪ್ರಕಟಗೊಳ್ಳಬಲ್ಲದು?" ಈ ಪ್ರಶ್ನೆಯ ಕಾರಂತರನ್ನು ಯಾವತ್ತೂ ಕಾಡಿದೆ.

ಕಾರಂತರ ಬಹುತೇಕ ಕಾದಂಬರಿ ಕೆಲವು ಅಂಶಗಳು ಥಟ್ಟನೆ ನಮ್ಮ ಗಮನಕ್ಕೆ ಬರುತ್ತವೆ. ಅದು ಅವರ ತಾತ್ವಿಕ ನಂಬಿಕೆಯೂ ಹೌದು.

1. ಹೇಳುವುದು ಒಂದು – ಮಾಡುವುದು ಇನ್ನೊಂದು ಎಂಬುದನ್ನು ಕಾರಂತರು ಗೌರವಿಸುವುದಿಲ್ಲ.
2. ಜೀವನವೆನ್ನುವುದು ಸುಖಸಂಪತ್ತಿಗೆಯಲ್ಲ.
3. ಜೀವನದಲ್ಲಿ ಅನುಭವವೂ ಮುಖ್ಯ.
4. ಸೋಗಿನ ಮನುಷ್ಯರ ಬಗ್ಗೆ ಕಾರಂತರಿಗೆ ಗೌರವವೇ ಇಲ್ಲ.
5. ಜೀವನದಲ್ಲಿ ಕಷ್ಟ–ಸುಖ ಎರಡೂ ಬರುತ್ತದೆ. ಅದನ್ನು ಸ್ವೀಕರಿಸಲೇಬೇಕು.
6. ಒದಗಿ ಬಂದ ಬದುಕನ್ನು ಸ್ವೀಕರಿಸಬೇಕು.
7. ಮನುಷ್ಯರಾಗಿ ಹುಟ್ಟಿದ ಮೇಲೆ ನಮ್ಮ ಜೀವನಕ್ಕೆ ಒಂದು ಅರ್ಥ ಇದ್ದೇ ಇರುತ್ತದೆ.
8. ಮನುಷ್ಯನ ಅಸ್ತಿತ್ವಕ್ಕೆ ಒಂದು ಅರ್ಥವಿದೆ. ಅದನ್ನು ಮರೆಯಬಾರದು.
9. ಮನುಷ್ಯನಿಗೆ ಎಲ್ಲಾ ಥರದ ಅನುಭವವೂ ಆಗುತ್ತದೆ.
10. ಮನುಷ್ಯರು ಅಂದ ಮೇಲೆ ಎಲ್ಲಾ ಥರದವರು ಇರುತ್ತಾರೆ.

'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಈ ಕುರಿತ ಪ್ರಬುದ್ಧ ಶೋಧನೆಯಿದೆ. "ಕಾರಂತರ ಜೀವನದೃಷ್ಟಿಗೆ, ಅವರು ಗಾಂಧೀವಾದದತ್ತ ತೋರಿಸಿದ ತಿರಸ್ಕಾರ ಸಹಜವಾದದ್ದೇ ಆಗಿದೆ. ಬದುಕನ್ನು ಆಳವಾಗಿ ಮತ್ತು ಸಮಗ್ರವಾಗಿ ನೋಡುವ ಕಾರಂತರಿಗೆ ಹಿಂದೂ ಪರಂಪರೆ ಕೂಡಾ ವರ್ತಮಾನದ ನಮ್ಮ ಬದುಕನ್ನು ಕೆಡಿಸುತ್ತಿರುವುದೂ ಗೋಚರಿಸುತ್ತದೆ. ಪರಂಪರೆ ರೂಪಿಸಿದ ಗುಣಸ್ವಭಾವಗಳಿಂದ ನಮ್ಮ ಹೆಣ್ಣು ಗಂಡಿನ ಸಂಬಂಧ ವಿಷಮವಾಗುತ್ತಿರುವುದನ್ನೂ, ನಮ್ಮ ಕುಟುಂಬ ವ್ಯವಸ್ಥೆ ಹದಗೆಡುತ್ತಿರುವುದನ್ನೂ, ಸುತ್ತಲಿನ ಜಗತ್ತಿನ ಚೆಲುವು, ಅದರ ಅಸಂಖ್ಯ ವಿಸ್ಮಯಗಳು, ರಹಸ್ಯಗಳು ಇವುಗಳಿಗೆ ಕುರುಡಾಗಿ ನಮ್ಮ ಬದುಕೇ

ಜಡ್ಡು ಬಿದ್ದಿರುವುದನ್ನೂ, ಪಂಚೇಂದ್ರಿಯಗಳು ಇದ್ದೂ ಇಲ್ಲದಂತೆ ವರ್ತಿಸುವ ನಮ್ಮ ಸ್ವಭಾವದ ಜಡತ್ವ ಮತ್ತು ಅಪ್ರಾಮಾಣಿಕತೆಯನ್ನೂ ಕುರಿತು ಕಾರಂತರು ತಮ್ಮ ಕಾದಂಬರಿಗಳಲ್ಲಿ ಇತರ ಬರಹಗಳಲ್ಲಿ ಹೇಳುತ್ತಲೇ ಬಂದಿದ್ದಾರೆ. ತಮ್ಮ ಆವರಣದಿಂದ ಹೊರಬರಲಾರದ ಸಾಮಾನ್ಯ ಜನ ಯೋಚನೆಯ ಮಟ್ಟದಲ್ಲಿ ಒಪ್ಪಿಕೊಂಡ ತಿರಸ್ಕಾರಜನ್ಯವಾದ ವಿರಕ್ತಿಯ ಮೌಲ್ಯಗಳು ಮತ್ತು ಬದುಕಿನಲ್ಲಿ ವಿರಕ್ತಿಯ ಹಠವನ್ನು ಕಾಯ್ದುಕೊಳ್ಳಲಾರದ ದುರ್ಬಲತೆ–ಈ ದ್ವಂದ್ವ ಬದುಕನ್ನು ಹೇಗೆ ವಿಕೃತಗೊಳಿಸಬಹುದು ಎಂಬುದನ್ನು ಕಾರಂತರು ತಮ್ಮ ಅನೇಕ ಕಾದಂಬರಿಗಳಲ್ಲಿ ಚಿತ್ರಿಸುತ್ತಾರೆ. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ನಾಯಕಿ ಮಂಜುಳೆ ವೇಶ್ಯೆಯಾಗಿ ಹಲವು ಗಂಡಸರ ಸ್ನೇಹ ಹೊಂದಿದ್ದರೂ ಮೈಮನಗಳ ಸಫಲ ಸಂಬಂಧ ಆಕೆಗೆ ಕೂಡಾ ಸಾಧಿಸುವುದಿಲ್ಲ. ವೇಶ್ಯೆಯಾದರೂ ಇದೇ ಸಂಸ್ಕೃತಿಯ ಆವರಣದಲ್ಲಿಯೇ ಇರುವವಳು. ವಿಶ್ವಾಮಿತ್ರ ಮೇನಕೆಯರ, ಮೋಹಿನಿ, ಹಸ್ತಿನಿ, ಚಿತ್ತಿನಿ, ಪದ್ಮಿನಿಯರ, ಕೃಷ್ಣಲೀಲೆಯ ಪಟಗಳನ್ನು ಮಲಗುವ ಕೋಣೆಯಲ್ಲಿ ಇಟ್ಟು, ಮಂಜುಳೆಯೊಡನೆ ಪಶುಕಾಮದ ದೈಹಿಕ ಸಂಬಂಧ ಹೊಂದುವ ಕಂ.ವಾ.ಪೈ, ಮನಸ್ಸನ್ನು ರಮಿಸಿದರೂ ಮೈಗೆ ತೃಪ್ತಿಕೊಡಲಾರದ ಉಳ್ಳೂರರು, ಯಕ್ಷಗಾನದ ರಂಗಸ್ಥಳದಲ್ಲಿ ಕಣ್ಸೆಳೆದರೂ ಬಟ್ಟೆ ಕಳಚಿದಾಗ ಬರೀ ಎಲುಬಿನ ಹಂದರವಾದ ಅರ್ಥಧಾರಿ ಶೀನ–ಯಾರೂ ಮಂಜುಳೆಯ ಮೈಮನಸ್ಸುಗಳ ಬೇಡಿಕೆಯನ್ನು ಈಡೇರಿಸಲಾರರು. ಕಾದಂಬರಿಯಲ್ಲಿ ಮಂಜುಳೆಯ ಮೈಮನಗಳೆರಡನ್ನೂ ಕೊಡಬಲ್ಲ ವ್ಯಕ್ತಿ ಲಕ್ಷ್ಮಣತೀರ್ಥ ಮಾತ್ರ. ಆದರೆ ಲಕ್ಷ್ಮತೀರ್ಥರು ಸನ್ಯಾಸವನ್ನು ಸ್ವೀಕರಿಸಿದವರು! ಮಂಜುಳೆಯ ಮೈಮನಸ್ಸುಗಳು ಒಂದಾಗುವಾಗ, ಲಕ್ಷ್ಮಣತೀರ್ಥರ ಮೈಮನಗಳ ಮಾತ್ರ ಬೇರೆ ಬೇರೆ ಆಗಿಯೇ ಇರುತ್ತವೆ! ಮೇಲೆ ಕೊಟ್ಟ ವಾಕ್ಯಗಳ ವಿವರಗಳು – ಶೀನನ ಯಕ್ಷಗಾನದ ಅರ್ಥ, ಅಡಿಗಳ ಮನೆಯಲ್ಲಿ ಕೇಳಿದ ಕಾವ್ಯದ ವಿವರಣೆ, ಕನಯ್ಯನನ್ನು ಆರಾಧಿಸುವ ಸಂಗೀತದ ಚೇಸು ಇವೆಲ್ಲವೂ ಹಿಂದೂ ಸಂಸ್ಕೃತಿ ರೂಪಿಸಿದ ಬದುಕಿನ ವಿವರಗಳು. ದೇಹ ಮನಸ್ಸುಗಳೆರಡನ್ನೂ ತಣಿಸಬಲ್ಲ ಸಫಲ ಪ್ರೇಮ ಹುಡುಕುವ ಮಂಜುಳೆಗೆ ಇವುಗಳಲ್ಲಿ ಕಾಣಿಸುವುದು ಬರಿಯ ತೊಗಟ್ಟೆ! ಆಕೆ ಹಾಡಿನಲ್ಲಿ ಆರಾಧಿಸುವ ಮೃದು ಹೃದಯಿ ಸುಂದರಾಂಗ ಕನಯ್ಯ ಬದುಕಿನಲ್ಲಿ ಮಾತ್ರ ಕಾಣಿಸುವುದಿಲ್ಲ. ಕಾದಂಬರಿಯಲ್ಲಿ ಮಂಜುಳೆಯ ಬದಕಿಗೆ ಸಂವಾದಿಯಾಗಿ ಬರುವ ವಿಪ್ರೋತ್ತಮ ರಾಮಪ್ಪ ಅಡಿಗಳ ಸಾಂಸಾರಿಕ ಜೀವನ, ಅವರಿಗೆ ಮಕ್ಕಳಿವೆ ಎನ್ನುವ ಅರ್ಥದಲ್ಲಿ ಮಾತ್ರ ಗೊಡ್ಡಲ್ಲ. ಅವರದ್ದು ಏನೂ ಚೆಲುವು ಪ್ರೀತಿಗಳಿಲ್ಲದ ರೂಢಿಯ ದಾಂಪತ್ಯ ಜೀವನ! (ಪುಟ

152, 153). ಅದೂ ತೊಗೆಟೆಯೇ." ಎಂದು ಜಿ.ರಾಜಶೇಖರ್ ಹೇಳುತ್ತಾರೆ. (ಸಾಕ್ಷಿ–38–39, ಏಪ್ರಿಲ್ 1978.) ಇಷ್ಟು ಜಟಿಲವಾದ, ಕ್ಲಿಷ್ಟವಾದ ಸಮಸ್ಯೆಯನ್ನು ಗರತಿಯಲ್ಲದವಳ ಮುಖದಿಂದ ಚಿತ್ರಿಸಿರುವುದು ತಾಂತ್ರಿಕ ಅನುಕೂಲತೆಯ ದೃಷ್ಟಿಯಿಂದ ಎನ್ನಿಸುತ್ತದೆ. ಈ ಕಾದಂಬರಿಯು ಮತ್ತೊಂದು ದೃಷ್ಟಿಯಿಂದ ಬಹಳ ಮುಖ್ಯವಾದುದು. ಇದರಲ್ಲಿ ಬರುವ ಆತ್ಮಚರಿತ್ರೆ ಈ ದೃಷ್ಟಿಯಿಂದಲೂ ಮುಖ್ಯವಾಗಿದೆ. ಸಾಂಪ್ರದಾಯಿಕ ದಾಂಪತ್ಯಜೀವನದ ಮೌಲ್ಯಗಳ ಚೌಕಟ್ಟು ಬಿಗಿಯಾದುದರಿಂದ ಅದನ್ನು ಮುರಿದು ಅವುಗಳ ಮೇರೆಯನ್ನು ದಾಟಿ, ಹೆಣ್ಣಾಗಲಿ, ಗಂಡಾಗಲಿ ತನ್ನ ಸ್ವಂತಿಕೆಯನ್ನು ಕಂಡುಕೊಳ್ಳುವ ಸಲುವಾಗಿ ಹೊಸ ಮೌಲ್ಯಗಳನ್ನು ಸೃಷ್ಟಿಸಿಕೊಳ್ಳುವುದು ನಮ್ಮ ಸಮಾಜದಲ್ಲಿ ವಿರಳ. ತೀವ್ರ ಆಘಾತವನ್ನು ಓದುಗರಿಗೆ ಕೊಡುವ ಬಂಡಾಯಕೋರರ ಪಾತ್ರಚಿತ್ರಣ ಕಾರಂತರಲ್ಲಿ ಅಪರೂಪ. ಅವರ ಕೆಲವು ಕಾದಂಬರಿಗಳಲ್ಲಿ ವಿರಸ ದಾಂಪತ್ಯದ ಚಿತ್ರ ಇರುವುದು ದಿಟ. ವೇಶ್ಯೆಯ ಜೀವನದಲ್ಲಿರುವ, ಸಂಪ್ರದಾಯಸ್ಥ ಗೃಹಿಣಿಯ ಜೀವನದಲ್ಲಿ ಇಲ್ಲದಿರುವ, ಆಯ್ಕೆಯ ಸ್ವಾತಂತ್ರ್ಯ, ಲೈಂಗಿಕ ಸ್ವಾತಂತ್ರ್ಯ ಈ ಜಟಿಲಸಮಸ್ಯೆಯನ್ನು ನಿಸ್ಸಂಕೋಚವಾಗಿ, ನಿರ್ಭೀತಿಯಿಂದ ಪರಿಶೀಲಿಸಲು ಸಾಧ್ಯವೆನ್ನಿಸುವುದರಿಂದ "ವಾಸ್ತವ ಸತ್ಯಕ್ಕೇ ಆತುಕೊಳ್ಳುವ" ಕಾರಂತರು ಸೂಳೆಯನ್ನು ಮುಖ್ಯ ಪಾತ್ರವನ್ನಾಗಿ, ಕೇಂದ್ರಪ್ರಜ್ಞೆಯಾಗಿ ಆರಿಸಿಕೊಂಡಿರಬಹುದು. ಈ ವಿಧಾನದಿಂದ ಮಂಜುಳೆಯ ಸುಖ ದುಃಖಗಳ ಸಂವೇದನೆಯನ್ನು ತೀಕ್ಷ್ಣಗೊಳಿಸಲು ಕಾದಂಬರಿಕಾರರಿಗೆ ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ಕಾದಂಬರಿಕಾರರಿಗೂ ಈ ಸಮಸ್ಯೆಯನ್ನು ತನ್ಮಯತೆಗೆ ಒಳಗಾಗದೆ ವಸ್ತುನಿಷ್ಠವಾಗಿ ವಿಶ್ಲೇಷಿಸುವುದೂ ಸಾಧ್ಯವಾಗಿದೆ. ಆದ್ದರಿಂದ ಮಂಜುಳೆಯನ್ನು ಕಥಾನಾಯಕಿಯನ್ನಾಗಿಸಿರುವುದು ತಂತ್ರದ ದೃಷ್ಟಿಯಿಂದ ಅವರು ಸಾಧಿಸಿದ ಯಶಸ್ಸೆಂದೇ ಹೇಳಬಹುದು. ಇದನ್ನು ಜಿ.ರಾಜಶೇಖರ್ ಅವರು ಗುರುತಿಸಿದ್ದಾರೆ. (ಸಾಕ್ಷಿ–33, ಪುಟ.102–103, ಜನವರಿ, 1977) 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಗಂಡುಹೆಣ್ಣಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಿದೆ. ಗಂಡು–ಹೆಣ್ಣಿನ ಸಂಬಂಧದ ಮೂಲವನ್ನು ತಳಮಟ್ಟ ಶೋಧಿಸಿಬಿಡುವ ಸಾಹಸವನ್ನು ಇಲ್ಲಿ ಕಾಣುತ್ತೇವೆ. ಈ ಕಾದಂಬರಿಯ ಪ್ರಧಾನ ಅಂಶವಾದ ಮಂಜುಳೆಯ ವ್ಯಕ್ತಿ ವಿಶಿಷ್ಟ ಸಂವೇದನೆಗಳನ್ನೂ, ಅವಳನ್ನೂ ಮೀರಿದ ಲೈಂಗಿಕ ಸಂಬಂಧಗಳ ಒಂದು ಸಾಂಸ್ಕೃತಿಕ ಇತಿಹಾಸ ಎನ್ನಬಹುದಾದಷ್ಟು ವಿಸ್ತಾರವಾದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹಿಡಿಯುವ ಕಾರಂತರು ಕಾದಂಬರಿಗೆ ಮನೋವೈಜ್ಞಾನಿಕ ಆಳಗಳನ್ನೂ, ವಿಸ್ತಾರಗಳನ್ನೂ ಏಕಕಾಲದಲ್ಲಿ ಸಾಧ್ಯ ಮಾಡುತ್ತಿದ್ದಾರೆ ಎನಿಸುತ್ತದೆ.

ಜೀವನದಲ್ಲಿ ಅನೇಕ ವೈರುಧ್ಯಗಳಿವೆ. ಕಾರಂತರಿಗೆ ಅದು ಮುಖ್ಯ. ಎಲ್ಲರಿಗೂ ಪರಿಚಿತವಾದ ಮರಳಿ ಮಣ್ಣಿಗೆ ಕಾದಂಬರಿಯನ್ನು ಕುರಿತು ಹೇಳಬಹುದು:

ಮೊದಲ ತಲೆಮಾರಿಗೆ ರಾಮೈತಾಳರ ಕಥನ. ಅವರ ಎರಡನೆಯ ಮದುವೆಯ ಪ್ರಸಂಗದಿಂದ ಕಾದಂಬರಿಯು ಶುರುವಾಗುತ್ತದೆ. ನೆವನ ಒಂದೇ – ಮೊದಲ ಹೆಂಡತಿಯಿಂದ ಮಕ್ಕಳಾಗಲಿಲ್ಲ. ಗಂಡು ಮಕ್ಕಳು ಹುಟ್ಟದೇ ಹೋದರೆ – ನಾಳೆ ದಿನ ತನ್ನ ತಿಥಿಯನ್ನು ಮಾಡುವವರು ಯಾರು ಇಲ್ಲ. ಎರಡನೆಯದು – ರಚ್ಚನ ತಲೆಮಾರು ಲಚ್ಚ ಅವಿವೇಕಿ. ಮೂರನೆಯದು – ರಾಮನ ತಲೆಮಾರು.

ಈ ಮೂರು ತಲೆಮಾರಿನ ಕಾಲ, ಅವಕಾಶ ವ್ಯಾಪ್ತಿಯು ಬಹಳ ವಿಸ್ತಾರವಾದ್ದು. ಇದರಲ್ಲಿ ಅನೇಕ ಏರುಪೇರು ಆಗಿ ಹೋಗಿವೆ. ಕಾರಂತರು ಅದನ್ನು ಹೇಳುತ್ತಾರೆ.

ಶಿವರಾಮ ಕಾರಂತರು ಒಂದು ಕಡೆಗೆ ಹೀಗೆ ಹೇಳುತ್ತಾರೆ:

“ಆರನೆಯ ದಶಕದಲ್ಲಿ ನಾನು ಬರೆದದ್ದು ಹೆಚ್ಚಾಯಿತೇ ಎನ್ನುವಷ್ಟು ಎಂದರೆ ವರ್ಷಕ್ಕೊಂದರಂತೆ ಕಾದಂಬರಿಗಳನ್ನು ಬರೆದಿದ್ದೇನೆ. ಅವುಗಳಲ್ಲಿ ಕೇವಲ ಒಂದೆರಡನ್ನು ಕುರಿತು ಇಲ್ಲಿ ಹೇಳಬಹುದು. ನಮ್ಮ ಜೀವನವನ್ನು ಕಾಡುತ್ತ ಬಂದಿರುವ ಪ್ರಶ್ನೆಗಳಲ್ಲಿ ಗಂಡು–ಹೆಣ್ಣಿನ ಸಮಸ್ಯೆ ಎಂಬುದು ಬಲು ದೊಡ್ಡದು; ಬಲು ಜಟಿಲ. ಅದು ಹೊಟ್ಟೆಪಾಡಿನ ಸಮಸ್ಯೆಗಿಂತ ಅದ್ಭುತ ಆಕಾರದ್ದು. ಅದನ್ನು ಕುರಿತು ಮೊದಲಿನಿಂದಲೂ ಎಚ್ಚರಿಕೆಯಿಂದ ಬರೆದವನು ನಾನು. ವಾಚಕರ ಚಪಲವನ್ನು ಬೆಳೆಯಿಸುವ ಕೆಲಸಕ್ಕೆ ಎಂದೂ ಹೋಗಿಲ್ಲ. ಗಂಡು ಹೆಣ್ಣಿನ ಶೃಂಗಾರ ಪ್ರವೃತ್ತಿಯಲ್ಲಿ ನಿಸರ್ಗದ ಉದ್ದೇಶವೇನು? ಅದರ ಹಿಡಿತ ಎಷ್ಟು? ಅದು ಮನೋದೈಹಿಕ ಪ್ರವೃತ್ತಿಯಾದುದರಿಂದ, ಮಾನವರಲ್ಲಿ ಅದು ಎಷ್ಟೆಲ್ಲ ಮುಖಗಳನ್ನು ತಾಳಿದೆ? ಅದರಲ್ಲಿ ಯಾವ ಅಂಶ ಜಿಗುಪ್ಸೆ ತರಬಹುದು; ಯಾವುದು ಅಮಲು ಬರಿಸಬಹುದು; ಯಾವುದು ಬದುಕಿನ ಸೊಗಸನ್ನು ಹೆಚ್ಚಿಸಬಹುದು–ಎಂಬುದನ್ನು ಬಿಂಬಿಸುವ ಸಲುವಾಗಿಯೇ ‘ಮೈಮನಗಳ ಸುಳಿಯಲ್ಲಿ’ ಎಂಬ ಕಾದಂಬರಿಯನ್ನು ಬರೆದೆ. ಅದರಲ್ಲಿ ಒಂದೇ ಹೆಣ್ಣು ಮೇಲೆ ಹೇಳಿದ ವಿವಿಧ ಪ್ರತಿಕ್ರಿಯೆಗಳಿಗೆ, ಯಾವೆಲ್ಲ ರೀತಿಯಲ್ಲಿ ಮಿಡಿಯಿತು – ಎಂಬುದನ್ನು ಚಿತ್ರಿಸಿದೆ. ತೀರ ಕೊನೆಗೆ ಸಾರ್ಥಕ ದಾಂಪತ್ಯದ ತೀರ್ಮಾನವಾಗಿ ಪ್ರತ್ಯಕ್ಷ ಜೀವನದಲ್ಲಿ ಕಂಡ, ಅಸ್ಪೃಶ್ಯ ಬಳಗಕ್ಕೆ ಸೇರಿದ, ಇಬ್ಬರು ದಂಪತಿಗಳನ್ನು ತಂದು ನಿಲ್ಲಿಸಿದೆ.” (ಹುಚ್ಚು ಮನಸ್ಸಿನ ಹತ್ತು ಮುಖಗಳು, ಪುಟ 324–325, 1991.) ಆದರೆ ಈ ಕಾದಂಬರಿಯಲ್ಲಿ

ಲೈಂಗಿಕತೆಯ ವಿಶ್ಲೇಷಣೆ ಪ್ರಮುಖವಾಗಿ ಕಂಡುಬಂದರೂ ಕೃತಿಯ ಒಟ್ಟಾರೆಯಾದ ಅರ್ಥ ವಿನ್ಯಾಸವನ್ನು ನಾವು ಬೇರೆಯೇ ಆಗಿ ಗ್ರಹಿಸಬೇಕೆಂದು ತೋರುತ್ತದೆ. ಅದೆಂದರೆ, ಈ ಕೃತಿಯಲ್ಲಿ ಲೈಂಗಿಕತೆ ಒಂದು ಮಾಧ್ಯಮ ಮತ್ತು ಆ ಮಾಧ್ಯಮದ ಮೂಲಕ ಒಂದು ಶತಮಾನದ ಅವಧಿಯಲ್ಲಿ ಭಾರತೀಯ ಸಮಾಜದಲ್ಲಾದ ಬದಲಾವಣೆಯ ವಿವಿಧ ಸ್ತರಗಳನ್ನು ಕೃತಿಕಾರರು ಈ ಕೃತಿಯಲ್ಲಿ ಅತ್ಯಂತ ಸೂಕ್ಷ್ಮವಾಗಿ ದಾಖಲಿಸಿದ್ದಾರೆ. ಇದು ನನಗೆ ಬಹು ಮುಖ್ಯ ವಿಷಯವೆಂದು ಕಾಣುತ್ತದೆ. ಅನೇಕ ತಲೆಮಾರುಗಳ ಬದುಕನ್ನು ಸಾಂದ್ರ ವಿವರಗಳ ಮೂಲಕ ಸಾಮಾಜಿಕ ಇತಿಹಾಸಕಾರನಂತೆ ದಾಖಲಿಸುವ ಕಾರಂತರ ಪ್ರವೃತ್ತಿ ಹಾಗೂ ಸಾಮರ್ಥ್ಯ ಅವರ ಅನೇಕ ಪ್ರಮುಖ ಕಾದಂಬರಿಗಳಲ್ಲಿ ಕಂಡುಬರುತ್ತವೆ. ನನ್ನ ವಾದವೇನೆಂದರೆ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯನ್ನು ಕೂಡ 'ಚೋಮನದುಡಿ" 'ಮರಳಿ ಮಣ್ಣಿಗೆ', "ಕುಡಿಯರ ಕೂಸು" ಇತ್ಯಾದಿ ಕಾದಂಬರಿಗಳ ಸಾಲಿನಲ್ಲಿ ನೋಡಬೇಕು; ಮತ್ತು ಹಾಗೆ ನೋಡಿದಾಗ ಆ ಕೃತಿಯ ಅರ್ಥವಂತಿಕೆ ಹೆಚ್ಚು ಗಾಢವಾಗುತ್ತದೆ ಅವುಗಳಲ್ಲಿಯೂ ಅಂತರಂಗ ಮತ್ತು ಬಹಿರಂಗಗಳ ವ್ಯಾಪಾರಗಳು ಭಿನ್ನವಾಗಿದೆ.

ಮರಳಿ ಮಣ್ಣಿಗೆ ಕಾದಂಬರಿಯ ಉದ್ದೇಶವು ಒಂದು ಕುಟುಂಬದ ಕಥನ. ರಾಮೈತಾಳ ಲಚ್ಚ-ರಾಮ ಮೂವರು ತಂದೆ-ಮಗ-ಮೊಮ್ಮಗ, ಸರಸೋತಿ, ಪಾರೋತಿ, ನಾಗವೇಣಿ ಹೆಂಗಸರು. ಕುಡಿಯರ ಕೂಸು ಕಾದಂಬರಿಯ ರೀತಿ ರಿವಾಜು ಬೇರೆ. ಚೋಮನ ದುಡಿಯಲ್ಲಿ ಬರುವ ಜಾತಿಯ ಜೀವನಕ್ರಮ ಭಿನ್ನ. ಮರಳಿ ಮಣ್ಣಿಗೆ, ಕುಡಿಯರ ಕೂಸು, ಚೋಮನ ದುಡಿಯ ಕಾದಂಬರಿಗಳು ಉದಾಹರಣೆಗಳಾಗಿವೆ.

ಇದರ ಜೊತೆಯಲ್ಲಿ ಮತ್ತೊಂದು ಸಮಸ್ಯೆಯನ್ನು ಗಮನಿಸಬೇಕು. ಆಧುನಿಕತೆಯು ನಮಗೆ ಬೇರೆ ಬೇರೆ ವಿಚಾರಗಳನ್ನು ಹೇಳುತ್ತವೆ. ಆಧುನಿಕ ಮನೋಸ್ಥಿತಿಯು ಬದಲಾಗುತ್ತದೆ ಮತ್ತು ಅದರಲ್ಲಿಯೇ ನಮಗೆ ಸಮಸ್ಯೆಗಳು ಇವೆ. ಆಧುನಿಕತೆಯು ವಿಶ್ವಾತ್ಮಕತೆ ಮತ್ತು ಚಿಂತೆಗಳನ್ನು ಒಂದಕ್ಕೊಂದು ಎದುರುಬದಿರು ಇದ್ದವು. ಇದನ್ನು ಹೀಗೆ ಹೇಳಬಹುದು ಯುರೋಪಿಯನ್ ಆಧುನಿಕತೆಯು ಒಂದು ಛಿದ್ರತೆಯನ್ನು ಹೇಳಿತು. ಅದು ಲೋಕವನ್ನು ಮರೆತು ತನ್ನದೇ ಆದ ಒಂದು ಆಶಯವನ್ನು ಹೇಳಹೊರಟಿತು. ಲೋಕ ಮತ್ತು ನಿರ್ದಿಷ್ಟ ಎನ್ನುವುದು ನಮಗೆ ಬೇರೆ ಬೇರೆ ಆಯಾಮವನ್ನು ಹೇಳುತ್ತವೆ. ಲೋಕದ ದೃಷ್ಟಿಯು ಒಂದು ಬಗೆಯದು ಆದರೆ ಸ್ವಂತವನ್ನು ನೋಡಿಕೊಳ್ಳುವ ಕ್ರಮವು ಮತ್ತೊಂದು

ಬಗೆಯದು. ನಿರ್ದಿಷ್ಟ ಮತ್ತು ಅನಿರ್ದಿಷ್ಟವೆಂದು ಕೆಲವರು ಹೇಳುತ್ತಾರೆ. ಹಾಗೆ ನೋಡಿದರೆ ಇಡೀ ಜಗತ್ತಿಗೆ ಒಂದು ನಿಯಮವು ಇದೆ ಎಂದು ಹೇಳುವವರು ಸ್ಥಳವನ್ನು ಒಂದು ಕ್ರಮದಲ್ಲಿ ನೋಡುತ್ತಾರೆ. ಆದರೆ ಸ್ಥಳ ಮತ್ತು ಲೋಕವು ಬೇರೆ ಎಂದು ಹೇಳುವವರು ಅದನ್ನು ಬೇರೆ ಬೇರೆ ಪರಿಧಿಯಲ್ಲಿ ಇಡುತ್ತಾರೆ. ಇಡೀ ಜಗತ್ತನ್ನು ನಾವು ತುಂಡು ಮಾಡಿದರೆ ಅದು ಏನಾಗುತ್ತದೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆಯು ಹೌದು. ಕಲ್ಲಂಗಡಿ ಹಣ್ಣನ್ನು ನಾವು ತುಂಡು ಮಾಡಿದ ಹಾಗೆ ದೇಶಗಳು ಭೂಪಟವನ್ನು ತುಂಡು ಮಾಡಿವೆ. ಅದು ಬೇರೆ ಪ್ರಶ್ನೆ. ಆದರೆ ನಾವು ನಿಜವಾದ ಅರ್ಥದಲ್ಲಿ ಜಾತ್ಯಾತೀತರು. ಆದರೆ ನಮಗೆ ಬೇರೆ ವಿಷಯಗಳೂ ಹೆಚ್ಚು ಮುಖ್ಯವಾಗುತ್ತವೆ. ಇದು ಶುರುವಾಗಿದ್ದು ಗ್ರೀಕ್‌ನ ಪೊಲೀಸ್ ಸ್ಟೇಟ್ ಎನ್ನುವ ಕಲ್ಪನೆಯಿಂದ ಎನ್ನುವುದು ನಮ್ಮ ಅರಿವಿಗೆ ಬರಬೇಕಾದದ್ದು ಅಗತ್ಯವಾಗಿದೆ. ಗ್ರೀಕ್ ಸೌಂದರ್ಯಶಾಸ್ತ್ರವು ನಮಗೆ ಬೇರೆ ಬೇರೆ ತಿಳುವಳಿಕೆಯನ್ನು ಕೊಟ್ಟಿದೆ. ಕ್ರಿಶ್ಚಿಯಾನಿಟಿಯು ಕೂಡಾ ನಮಗೆ ವಿಶ್ವದ ತಿಳುವಳಿಕೆಯನ್ನು ಕೊಡುತ್ತದೆ. ಆದರೆ ವಿಶೇಷವೆಂದರೆ ಲೋಕವನ್ನು ಗ್ರಹಿಸಲಿಕ್ಕೆ ನಮಗೆ ಪುರಾಣಗಳು ಮತ್ತು ತರ್ಕಶಾಸ್ತ್ರವು ಸಹಾಯವನ್ನು ಮಾಡಿದೆ. ಪುರಾಣಗಳೂ ನಮಗೆ ಕತೆಯನ್ನು ಹೇಳುತ್ತವೆ. ತರ್ಕಶಾಸ್ತವು ಹೀಗೆ ಇರುತ್ತದೆ ಎನ್ನುವ ನಿಯುಮುವನ್ನು ಹೇಳುತ್ತದೆ. ಇದರಲ್ಲಿ ಕೆಲವನ್ನು ಹೆಗೆಲ್ ತೆಗೆದುಕೊಂಡಿದ್ದಾನೆ. ಗ್ರೀಕ್‌ನಲ್ಲಿ ಭೌತಶಾಸ್ತ್ರ ಮತ್ತು ತರ್ಕಶಾಸ್ತ್ರವು ಅತ್ಯಂತ ಮಹತ್ವದ ಕೊಡುಗೆಯನ್ನು ಕೊಟ್ಟಿದೆ. ಅದು ಅಲ್ಲದೆ ಅದು ನಾಗರಿಕ ಪ್ರಭುತ್ವದ ಪ್ರಸ್ತಾವನೆಯನ್ನು ನಮ್ಮ ಮುಂದೆ ಇಡುತ್ತದೆ. ಅರಿಸ್ಟಾಟಲ್ ಜ್ಞಾನ ಮತ್ತು ಪ್ರಯೋಗ ಎರಡನ್ನೂ ಹೇಳುತ್ತಾನೆ. ಮಧ್ಯಯುಗ ಕ್ರೈಸ್ತಶಾಸ್ತ್ರಕ್ಕೆ ಗ್ರೀಕ್‌ನ ಕೊಡುಗೆಯು ಇದೆ. ಆದರೆ ಗಣಿತ, ಆದಿಭೌತಶಾಸ್ತ್ರ, ಭೌತಶಾಸ್ತ್ರಗಳು ಜಗತ್ತಿಗೆ ಕೊಡುಗೆಯನ್ನು ಕೊಟ್ಟಿವೆ. ಇರಲಿ ಅದು ಬೇರೆ ಮಾತು. ಚರಿತ್ರೆ ಮತ್ತು ಅದರ ಅಧ್ಯಯನಕ್ಕೆ ಅದು ಮಹತ್ವದ ಕೊಡುಗೆಯನ್ನು ಕೊಟ್ಟಿರುವುದು ನಿಜ. ಆದರೆ ಗ್ರೀಕ್ ತತ್ವಶಾಸ್ತ್ರವು ನಮಗೆ ಒಂದು ತಿಳುವಳಿಕೆಯನ್ನು ಕೊಟ್ಟರೆ ಕ್ರಿಶ್ಚಿಯಾನಿಟಿಯು ನಮಗೆ ಬೇರೆ ತಿಳಿವಳಿಕೆಯನ್ನು ಕೊಡುತ್ತದೆ. ಅದು ವಿಶ್ವವನ್ನು ನೋಡುವ ಕ್ರಮವು ಬೇರೆಯಾಗಿದೆ. ಗ್ರೀಕ್‌ನ ಪುರಾಣರೂಪಿ ಜಗತ್ತಿನ ಕಲ್ಪನೆಯನ್ನು ಕ್ರಿಶ್ಚಿಯಾನಿಟಿಯು ಬೇರೆ ಥರ ನೋಡಿ ಅದರ ಮೂಲಕ ಅದು ಪೇಗನ್ ವಾದವನ್ನು ಮುಂದೆ ತಂದಿತು. ಆಲೋಚನೆ ಮತ್ತು ಆಲೋಚನೆರಾಹಿತ್ಯ ಎನ್ನುವುದನ್ನು ಅದು ಹೇಳಿತು. ಮೂರ್ತಿಪೂಜೆ ಎನ್ನುವುದು ಮುಖ್ಯವಾಗಿ ಒಂದು ಕಲ್ಪನೆಯನ್ನು ನಮ್ಮ ಮುಂದೆ ಇಡುತ್ತದೆ. ಆದರೆ ನಾವು ಇಲ್ಲಿ ದೇವರು, ಮೂರ್ತಿ ಪೂಜೆ, ವೈಚಾರಿಕತೆ ಮತ್ತು ಅವೈಚಾರಿಕತೆ

ಮುಂತಾದ ಪ್ರಶ್ನೆಗಳು ಮುಂದೆ ಬಂದವು. ಯಾವುದು ನಮ್ಮ ಜ್ಞಾನಕ್ಕೆ ಸಿಕ್ಕುವುದಿಲ್ಲವೋ ಅದನ್ನು ಕತ್ತಲೆಯ ಯುಗ ಎಂದು ಹೇಳಲಾಯಿತು. ಆದ್ದರಿಂದ ಅವರ ದೃಷ್ಟಿಕೋನವು ಚರಿತ್ರೆಯ ಮಟ್ಟಿಗೆ ಬೇರೆ ಬೇರೆಯಾಗಿತ್ತು.

ಕಾರಂತರೂ ಒಂದು ಅರ್ಥದಲ್ಲಿ ನಮ್ಮ ಸಮಾಜದ ಚರಿತ್ರೆ ಬರೆಯುತ್ತಿದ್ದಾರೆ. ಕಾರಂತರ ಮಂಡನೆಗಳು ತುಂಬಾ ಭಿನ್ನವಾಧವು. ಅವರು ಕಾದಂಬರಿ ಕ್ಷೇತ್ರದಲ್ಲಿ ಮಹತ್ವದ ದಾರಿಯನ್ನು ಹಾಕಿಕೊಟ್ಟರು. ಅನುಭವವು ಅವರ ಬರಹಗಳ ಮಾನದಂಡವಾಗಿದೆ. ಅದರ ಮೂಲಕ ಜನ ಜೀವನವನ್ನು ಕಟ್ಟಿಕೊಡುತ್ತಿದ್ದಾರೆ. ಕೆಲವು ಮಹತ್ವದ ಪ್ರಶ್ನೆಗಳನ್ನು ಅವರು ಎತ್ತಿಕೊಳ್ಳುವುದು ಇದೇ ಕಾರಣಕ್ಕೆ. ನಮ್ಮ ಜೀವನದ ನಿಜವಾದ ಉದ್ದೇಶವೇನು? ನಾವು ಯಾಕಾಗಿ ಹೀಗೆ ಬದುಕುತ್ತಿದ್ದೇವೆ? ನಾವು ಯಾಕೆ ಹೀಗಿದ್ದೇವೆ? ಸಾಮಾಜಿಕ ಜೀವನದಲ್ಲಿ ಅತ್ಯಂತ ಕೆಳಸ್ತರದಲ್ಲಿ ಬದುಕುವ ಚೋಮನ ಕುಟುಂಬ ಒಬ್ಬೊಬ್ಬರು ಒಂದೊಂದು ದಾರಿಯನ್ನು ಹುಡುಕುತ್ತಾರೆ. ಗುರುವನದೇ ಒಂದು ದಾರಿಯಾದರೆ ಚೋಮನದೇ ಮತ್ತೊಂದು. ಇವರ ನಡುವೆ ಬೆಳ್ಳಿಯೂ ಜೀವನದ ಒಂದು ತತ್ವಜ್ಞಾನವನ್ನು ಕಂಡುಕೊಂಡಿದ್ದಾಳೆ. ಹೊಲೆಯರಾಗಿ ಹುಟ್ಟಿದ ಮೇಲೆ ಜಮೀನಿಗಾಗಿ ಆಸೆ ಪಡುವುದು ತಪ್ಪು. ನಮ್ಮ ಹಣೆಯ ಮೇಲೆ ಅದನ್ನೇ ಬರೆದಿದ್ದಾರೆ. ದೇವರು ಎಂಬ ನಿಲುವಿಗೆ ಬಂದಿದೆ.

ಒಂದು ಪುರಾಣದಿಂದ ಚರಿತ್ರೆಗೆ ಬಂದ ವಿಚಾರ. ಮತ್ತೊಂದು ಪಲ್ಲಟವಾಗಿದ್ದು ವಿಚಾರವಾದದಿಂದ. ಇನ್ನೊಂದು ನಂಬಿಕೆ ಮತ್ತು ಅಪನಂಬಿಕೆಗಳ ತೊಯ್ದಾಟದಿಂದ. ಕ್ರಿಶ್ಚಿಯಾನಿಟಿಯು ಕೆಲವು ನಂಬಿಕೆಯನ್ನು ಹೇಳಿತ್ತು. ಆಧುನಿಕ ಪೂರ್ವ ಸಂಗತಿಗಳು ಚರಿತ್ರೆಯನ್ನು ನೋಡಿದ ಕ್ರಮಕ್ಕೂ ಆಧುನಿಕತೆಯು ಚರಿತ್ರೆಯನ್ನು ನೋಡಿದ ಕ್ರಮಕ್ಕೂ ವ್ಯತ್ಯಾಸವು ಇದೆ. ಹಾಗೆ ನೋಡಿದರೆ ಆಧುನಿಕತಾವಾದ ಮತ್ತು ವಿಶ್ವಾತ್ಮಕತೆಯ ನಡುವೆ ಕೆಲವು ಸಂಘರ್ಷಗಳು ಇವೆ. ಯಾವುದನ್ನು ಆಧುನಿಕತೆ ಎಂದು ಹೇಳುವುದು ಮತ್ತು ಯಾವುದನ್ನು ಆಧುನಿಕತೆಯೆಂದು ಕರೆಯುವುದು ಎನ್ನುವುದೇ ಸಮಸ್ಯಾತ್ಮಕವೂ ಆಗಿತ್ತು. ಒಂದು ಜಾತಿಯನ್ನು ಅಥವಾ ಜನಾಂಗವನ್ನು ಒಪ್ಪಿಕೊಂಡು ನಾವು ಹೇಗೆ ವಿಶ್ವಾತ್ಮಕವಾಗಲು ಸಾಧ್ಯ ಎನ್ನುವ ಪ್ರಶ್ನೆಯು ಅನೇಕ ಚಿಂತಕರನ್ನು ಕಾಡಿದ್ದು ಸತ್ಯವಾಗಿದೆ. ಒಂದು ಸಮಾಜದಲ್ಲಿ ಹೇಗೆ ಸಾವಯವ ಸಂಬಂಧಗಳಿವೆ ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆ. ರಷ್ಯಾದ ಜನರು ಯೂರೋಪಿನ ಜನರಂತೆ ಇಲ್ಲ ಎನ್ನುವುದು ಯಾರಿಗಾದರೂ ತಿಳಿಯುತ್ತದೆ. ಆಧುನಿಕ ಸಮಾಜವನ್ನು ನೋಡುವಾಗ ನಾವು ಪುನರುಜ್ಜೀವನ ಚಿಂತನೆಯು ಯಾವುದೇ ಪ್ರಭಾವವನ್ನು ಬೀರಿಲ್ಲವೆಂದು ಹೇಳುವುದು

ಕಷ್ಟ. ಹಾಗೆ ನೋಡಿದರೆ ಈ ಜಗತ್ತಿನಲ್ಲಿ ಏನೆಲ್ಲಾ ಬದಲಾವಣೆಯು ಆಗುತ್ತದೆಯೋ ಅದರ ದೇಶ ಮತ್ತು ಅದರ ಗಡಿಯನ್ನು ದಾಟುತ್ತದೆ. ಯಾವುದೇ ದೇಶದಲ್ಲಿ ಸಾವಯವ ಸಂಬಂಧವೆನ್ನುವುದು ಹೇಗೆ ಇರುತ್ತದೆ ಮತ್ತು ಅದರ ಚಾರಿತ್ರಿಕ ಕಾರಣಗಳು ಏನು ಎನ್ನುವುದನ್ನೂ ನೋಡಬೇಕಾಗುತ್ತದೆ. ರಷ್ಯಾ ಝಾರ್ ಆಳಿತವನ್ನು ನೋಡಿ ರೋಸಿ ಹೋಗಿ ಕ್ರಾಂತಿಕಾರಕವಾದ ಹೆಜ್ಜೆಯನ್ನು ಇಟ್ಟುಕೊಂಡಿತು. ಅದು ಬದಲಾವಣೆಯನ್ನು ಹೇಳುತ್ತದೆ. ಆದರೆ ಅದೇ ಹೊತ್ತಿಗೆ ಸರಿಯಾಗಿ ಅದು ಆಧುನಿಕ ವಿಜ್ಞಾನವನ್ನು ತೆಗೆದುಕೊಂಡಿದೆ. ಆಧುನಿಕ ಅರ್ಥಶಾಸ್ತ್ರವನ್ನು ಹೇಳಿತು. ಸಮಾನತೆಯನ್ನು ಪ್ರತಿಪಾದಿಸಿತು. ಸಂಪ್ರದಾಯ ಮತ್ತು ಆಧುನಿಕತೆಗೆ ಒಂದು ಸಮತಲ ಎನ್ನುವುದು ಇಲ್ಲ. ಹಾಗೆ ನೋಡಿದರೆ ಆಧುನಿಕ ವಿಶ್ವಾತ್ಮಕತೆಗೆ ಬೇರೆ ಬೇರೆ ಆಯಾಮವೂ ಇದೆ. ಬಂಡವಾಳವಾದ ಮತ್ತು ಅದರ ತಾಂತ್ರಿಕತೆ ಹೇಗೆ ಸಮಾಜವನ್ನು ಪಲ್ಲಟ ಮಾಡಿತು ಎನ್ನುವುದು ಇಲ್ಲಿ ಗಮನಾರ್ಹ. ಇದನ್ನು ವಸಾಹತು ದೇಶಗಳ ಹಿನ್ನಲೆಯಲ್ಲಿಯೂ ನೋಡಬೇಕಾಗುತ್ತದೆ. ಇದನ್ನು ದೀಪೇಶ್ ಚಕ್ರವರ್ತಿಯವರೂ ಹೇಳುತ್ತಾರೆ. ಅವರ ಒಂದು ವಾದವು ಅತ್ಯಂತ ಮುಖ್ಯವಾದದ್ದು. ಚಾರಿತ್ರಿಕವಾದ ಅನೇಕ ಸಂಗತಿಗಳು ಲೋಕವನ್ನು ಒಳಗೊಳ್ಳುತ್ತವೆ. ಈ ಹಿನ್ನೆಲೆಯಿಂದ ಕಾರಂತರ ನಿಲುವನ್ನು ನಾವು ನೋಡಬೇಕು:

ಸಮಾಜದಲ್ಲಿ ಎರಡು ರೀತಿಯ ಮೌಲ್ಯಗಳು ಇರಲು ಸಾಧ್ಯ. ಒಂದು ನಮ್ಮ ಜೀವನವನ್ನು ನಾವೇ ಕಟ್ಟಿಕೊಳ್ಳಬೇಕೆಂದು ಬಯಸುವವರದು. ಇನ್ನೊಂದು ಬೇರೆಯವರ ಆಶ್ರಯದಲ್ಲಿದ್ದು ಏನು ಬೇಕಿದ್ದರೂ ಮಾಡಬಹುದು ಎಂಬ ನಿಲುವು ಇರುವವರದು. ಕೆಲವನ್ನು ಕ್ರಿಯಾಶೀಲವಾದ ಜೀವನ ಮೌಲ್ಯವೆಂದು ನಂಬುತ್ತೇವೆ ಮತ್ತು ಕ್ರಿಯಾಶೀಲವಲ್ಲದ ಮೌಲ್ಯ. ಕ್ರಿಯಾಶೀಲವಾದ ಜೀವನ ಮೌಲ್ಯವನ್ನು ನಾವು ಕಾರಂತರಲ್ಲಿ ಬೇರೆ ಬೇರೆ ಥರ ಕಾಣುತ್ತೇವೆ. ಜಾರುವ ದಾರಿಯಲ್ಲಿ ಕಾದಂಬರಿಯಲ್ಲಿ ಬರುವ ಶಿವಪ್ಪ ಕ್ರಿಯಾಶೀಲತೆಗೆ ಒಂದು ಸಂಕೇತ ಆದರೆ ಉಕ್ಕಿದ ನೊರೆ ಕಾದಂಬರಿಯ ಮೋನಪ್ಪನನ್ನು ಎಲ್ಲಿ ನಿಲ್ಲಿಸುವುದು? ಗೂಂಡಾ ಒಬ್ಬ ಮರುದಿನವೇ ದೇಶಭಕ್ತ ಕಾರಣಿಯಾಗಿ ಬಿಡುತ್ತಾನೆ. ಕಾರಂತ ಹಿಡಿಯದ ದಾರಿ ಅವರಿಗೆ ಸ್ವಾತಂತ್ರ್ಯದ ಅನಂತರ ರಾಜಕಾರಣ ಹಳಿತಪ್ಪಿದೆಯೆಂದು ಅನಿಸಿದೆ. ಗೊಂಡಾರಣ್ಯ ಕಾದಂಬರಿಯು ಅದರ ಫಲಶ್ರುತಿಯಾಗಿದೆ.

ಚರಿತ್ರೆ ಮತ್ತು ಅದರ ವಿಕಾಸವನ್ನು ನಾವು ಮರೆಯಲು ಆಗುವುದಿಲ್ಲ. ಇದರಲ್ಲಿ ನಾವು ವಸಾಹತು ಮತ್ತು ವಸಾಹೋತ್ತರ ಎಂದು ವರ್ಗೀಕರಿಸುವುದು ಅತ್ಯಂತ ಕಷ್ಟ. ಕೆಲವು ಲಕ್ಷಣಗಳು ಇಡೀ ಜಗತ್ತಿಗೆ ಅನ್ವಯವಾಗುತ್ತದೆ. ನಾವು

ಕೆಲವನ್ನು ಬರೀ ಯುರೋಪ್ ಎಂದು ಮತ್ತೆ ಕೆಲವನ್ನು ಬರೀ ವಸಾಹತು ದೇಶಗಳು ಎಂದು ವರ್ಗೀಕರಿಸಲು ಬರುವುದಿಲ್ಲ. ಮಾರ್ಕ್ಸ್‌ವಾದವು ಹೇಗೆ ಇದೆಲ್ಲಾ ನಡೆದಿದೆ ಎಂದೂ ನೋಡುತ್ತದೆ. ಅದಲ್ಲದೆ ವಸಾಹತು ದೇಶಗಳಲ್ಲಿ ಹೇಗೆ ಸಣ್ಣ ರೈತರು ಕೂಡಾ ವಸಾಹತು ಆಡಳಿತದ ವಿರುದ್ಧ ಹೋರಾಟವನ್ನು ಮಾಡಿದರು. ರಾಜಕೀಯವಾಗಿಯೂ ಭಾರತದಲ್ಲೂ ಯುರೋಪ್ ತನ್ನ ಚಹರೆಯನ್ನು ರೂಪಿಸಿತು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ದೀಪೇಶ್ ಚಕ್ರವರ್ತಿಯವರು ಭಾರತ ಮತ್ತು ಅದರ ರಾಜಕೀಯ ಪಲ್ಲಟವನ್ನು ಅತ್ಯಂತ ಸೀಮಿತವಾಗಿ ನೋಡಿಲ್ಲ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಸಂಪ್ರದಾಯ ಮತ್ತು ಆಧುನಿಕತೆಯನ್ನು ಒಂದು ಅರ್ಥದಲ್ಲಿ ಅತ್ಯಂತ ವಿಶಿಷ್ಟವಾದ ಒಂದು ಹೊಂದಾಣಿಕೆ ಎನ್ನುವುದು ನಮಗೆ ಮುಖ್ಯ. ರಾಜಕೀಯವಾದ ಆಧುನಿಕತೆ ಮತ್ತು ಸಂಪ್ರದಾಯವು ಹೇಗೆ ಜೊತೆಗೆ ಹೋಗುತ್ತವೆ ಎನ್ನುವುದು ಅವರ ವಿಶ್ಲೇಷಣೆಯಲ್ಲಿ ಇದೆ. ಆದರೆ ಒಂದು ವಿಚಿತ್ರವಾದ ಸಹಯೋಗವು ಹೇಗೆ ಕೆಲಸವನ್ನು ಮಾಡಿದೆ ಎಂದು ಅವರು ವಾದಿಸುತ್ತಾರೆ. ಆದರೆ ಇಲ್ಲಿ ಅವರು ಇದನ್ನು ವಿಶ್ಲೇಷಣೆ ಮಾಡುವಾಗ ಬಂಡವಾಳವಾದ ಅಥವಾ ಆಧುನಿಕ ರಾಜಕಾರಣವು ಕೆಲಸವನ್ನು ಮಾಡಿದ ರೀತಿಯನ್ನು ಹೇಳುತ್ತಾರೆ. ಆಧುನಿಕ ರಾಜಕಾರಣವು ಹೇಗೆಲ್ಲಾ ಕೆಲಸವನ್ನು ಮಾಡುತ್ತದೆ ಎನ್ನುವುದು ಅವರಿಗೆ ಗೊತ್ತು. ಅವರ ಪ್ರಕಾರ ಜಾಗತೀಕರಣದ ಪರಿಸ್ಥಿತಿಯಲ್ಲಿಯೂ ಆಧುನಿಕತೆ ಮತ್ತು ಸಂಪ್ರದಾಯಗಳು ಒಟ್ಟಿಗೆ ಇವೆ. ಅವರ ವಾದವನ್ನು ಮತ್ತೊಂದು ಥರ ಹೇಳಬಹುದು. ಇಲ್ಲಿ ಮತ್ತೆ ಮತ್ತೆ ಬೇರೆ ಬೇರೆ ಯಜಮಾನಿಕೆಗಳು ಇವೆ. ಹಾಗೆ ನೋಡಿದರೆ ಆಧುನಿಕ ಭಾರತದಲ್ಲಿ ಈವತ್ತು ಬೂರ್ಜ್ವಾ ಯಜಮಾನಿಕೆ ಬೇರೆ ಬೇರೆ ರೂಪದಲ್ಲಿ ಇದೆ. ಎಲ್ಲಾ ಸಂಪ್ರದಾಯಗಳ ಜೊತೆಗೆ ನಾವು ಬದುಕುತ್ತಿದ್ದೇವೆ. ನಿತ್ಯದಲ್ಲಿ ನಮಗೆ ಬೇರೆ ಬೇರೆ ಆಚರಣೆಗಳು ಇವೆ. ದೀಪೇಶ್ ಇನ್ನೊಂದು ವಿಚಾರವನ್ನು ಹೇಳುತ್ತಾರೆ: ಭಾರತದಲ್ಲಿ ಈವತ್ತು ನಮಗೆ ಇದರ ಜೊತೆಗೆ ಡಿಜಿಟಲ್ ಆಧುನಿಕತೆಯು ಇದೆ. ಜಾಗತಿಕತೆಯು ನಮಗೆ ಪ್ರಭಾವವನ್ನು ಬೀರಿದ್ದು ನಿಜ. ಅದು ಹೇಳುವ ವಿಶ್ವಾತ್ಮಕತೆಯನ್ನು ಮತ್ತೊಂದು ರೂಪದಲ್ಲಿ ಜನರು ಒಪ್ಪುತ್ತಾರೆ. ಒಂದು ಪರ್ಯಾಯವಾದ ಆಧುನಿಕತೆಯು ಇಲ್ಲಿದೆ. ಆದರೆ ಮತ್ತೊಂದು ಕಡೆಯಿಂದ ದೇಸಿ ಎನ್ನಬಹುದಾದ ಜೀವನವೂ ಇಲ್ಲಿ ಇರುವುದರಿಂದ ಇದನ್ನು ನಾವು ಬೇರೆ ಥರಹವೇ ನೋಡಬೇಕು ನಿಜ. ಆದರೆ ಇಲ್ಲಿಗೆ ಮಾರ್ಕ್ಸ್‌ವಾದವೇ ಅನ್ವಯವಾಗುದಿಲ್ಲವೆಂದು ಹೇಳುವುದು ಹೇಗೆ? ಜೀವನಕ್ರಮ ಮತ್ತು ಆಧುನಿಕತೆಗೆ ಹೇಗೆ ಬೇರೆ ಬೇರೆ ಆಯಾಮಗಳು ಇವೆ

ಎನ್ನುವುದು ನಮಗೆ ಮುಖ್ಯ. ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ನಮಗೆ ದ್ವಂದ್ವಾತ್ಮಕ ಭೌತವಾದವು ಉಪಯೋಗಕ್ಕೆ ಬರುವುದೇ ಇಲ್ಲವೆಂದು ಹೇಳಲು ಆಗುವುದಿಲ್ಲ. ಭಾರತದ ಆಧುನಿಕ ಜೀವನವು ಹೇಗೆ ಇದೆ ಮತ್ತು ಅದು ಯಾವುದರಿಂದ ಪ್ರಭಾವಿತವಾಗಿದೆ ಎಂದು ನೋಡಲು ನಮಗೆ ಮಾರ್ಕ್ಸ್‌ವಾದದಲ್ಲಿ ಪರಿಕರವು ಇದೆ. ಇದನ್ನು ಹೇಳುವುದಕ್ಕೆ ನಮಗೆ ಪಶ್ಚಿಮದ ನಿರೂಪಣೆಯು ಮಾತ್ರವೇ ಸಾಕು ಎಂದೂ ಭಾವಿಸಬೇಕಾಗಿಲ್ಲ. ವಾಸ್ತವವಾಗಿ ಇಲ್ಲಿ ದೀಪೇಶ್ ಚಕ್ರವರ್ತಿಯವರು ಭಾರತದ ಚರಿತ್ರೆಯನ್ನು ನೋಡುವಾಗ ಅವರು ಚರಿತ್ರೆ 1 ಮತ್ತು ಚರಿತ್ರೆ 2 ಎಂದು ವರ್ಗೀಕರಿಸುತ್ತಾರೆ. ಚರಿತ್ರೆ 1ರಲ್ಲಿ ಬಂಡವಾಳವಾದ ಮತ್ತು ಅದರ ಪರಿಣಾಮವನ್ನು ನಾವು ನೋಡಬಹುದು. ಆದರೆ ಚರಿತ್ರೆ 2ರಲ್ಲಿ ಆಧುನಿಕ ಜೀವನ ಮತ್ತು ಬಂಡವಾಳವಾದದ ಪರಿಣಾಮವನ್ನು ನಾವು ಗಮನಿಸಬೇಕಾಗುತ್ತದೆ. ಚರಿತ್ರೆ 1 ಎನ್ನುವುದು ಮೂಲಭೂತವಾಗಿ ಹೇಳುವ ಜೀವನಕ್ರಮವು ನಮಗೆ ವಿಶ್ವಾತ್ಮಕತೆಯನ್ನು ಹೇಳುತ್ತದೆ. ಪುನರುಜ್ಜೀವನ ಮತ್ತು ಅದರ ಚಹರೆಯನ್ನು ಅದು ನಿರೂಪಿಸುತ್ತದೆ. ಆದರೆ ಪುನರುಜ್ಜೀವನ ಚಳುವಳಿಯನ್ನು ಅದು ತನಗೆ ಬೇಕಾದಂತೆ ನಿರ್ವಚನ ಮಾಡಿದೆ ಎನ್ನುವುದೂ ಅತ್ಯಂತ ಸ್ಪಷ್ಟ. ಚರಿತ್ರೆ 2 ನಿಜವಾದ ಅರ್ಥದಲ್ಲಿ ನಮ್ಮ ಜೀವನದ ನಿಜವಾದ ಸ್ವರೂಪವನ್ನು ಹೇಳುತ್ತದೆ. ಆದರೆ ಚರಿತ್ರೆ 1 ಚರಿತ್ರೆ 2ರ ಮೇಲೆ ಪ್ರಭಾವವನ್ನು ಬೀರುತ್ತದೆ. ಹಾಗೆ ನೋಡಿದರೆ ಬಂಡವಾಳವಾದ ಎನ್ನುವುದು ಒಂದು ಚಾರಿತ್ರಿಕವಾದ ಪ್ರಕ್ರಿಯೆ. ಆದರೆ ಅದರ ನಿರ್ದಿಷ್ಟವಾದ ರೂಪವು ಹೀಗೆಯೇ ಇದೆ ಮತ್ತು ಬಂಡವಾಳವಾದವು ಒಂದು ಕಡೆಗೆ ಮಾತ್ರವೇ ಸೀಮಿತ ಎಂದು ಹೇಳಲು ಬರುವುದಿಲ್ಲ. ಬಂಡವಾಳವಾದ ಎನ್ನುವುದು ಸ್ಥಳ ಮತ್ತು ಕಾಲದ ಮೇಲೆ ಪರಿಣಾಮವನ್ನು ಬೀರುತ್ತದೆ. ಬಂಡವಾಳವಾದ ಅಥವಾ ಜಾಗತೀಕರಣ ಎನ್ನುವುದು ಮುಖ್ಯವಾಗಿ ಆಯಾ ಸ್ಥಳವನ್ನು ಆಧರಿಸಿಕೊಂಡು ಬೇರೆಯಾಗುತ್ತದೆ. ಆದ್ದರಿಂದಲೇ ನಾವು ಈವತ್ತು ಇದನ್ನು ನೋಡುವಾಗ ಹೇಗೆ ಇವು ನಡೆಯುತ್ತವೆ ಎಂದೂ ನೋಡಬೇಕಾಗುತ್ತದೆ. (ನೋಡಿ: ದೀಪೇಶ್ ಚಕ್ರವರ್ತಿ ಪ್ರವಿಂ ಶಿಲ್ಯೆಸಿಂಗ್ ಯೂರೋಪ್, ಪುಟ.6, 65, 70) ಆದರೆ ಇದರಲ್ಲಿ ವ್ಯತ್ಯಾಸವನ್ನು ಅವರು ಮಾಡುತ್ತಿದ್ದಾರೆ ಎನ್ನುವುದು ಖಚಿತ. ಯೂರೋಪ್ ಹೇಗೆ ತನ್ನ ಅಧಿಕಾರವನ್ನು ಯಾವ ರೀತಿಯಲ್ಲಿ ಬಳಸಿಕೊಂಡಿತು ಎನ್ನುವುದೂ ಅವರಲ್ಲಿ ಬರುತ್ತದೆ. ಅವರು ಹೇಳುವ ಪ್ರಕಾರ ಆಧುನಿಕ ರಾಜಕಾರಣ ಮತ್ತು ಅದರ ಹುಟ್ಟು ವಸಾಹತು ಕಾಲದಲ್ಲಿ ಆಯಿತು. ಪ್ರಭುತ್ವವು ತನ್ನ ಹೊಸದಾದ ರೂಪವನ್ನು ಪಡೆಯಿತು. ಹೊಸ ಅಧಿಕಾರಶಾಹಿಯು ಚಾಲ್ತಿಗೆ ಬಂತು. ಬಂಡವಾಳವಾದಿ ಕಂಪೆನಿಗಳು ಪ್ರಾರಂಭವಾದವು. ಇದರ

ಪರಿಣಾಮವು ಇಲ್ಲಿಯ ಬುದ್ಧಿಜೀವಿಗಳ ಮೇಲೂ ಆಯಿತು. ಆದರೆ ಜಗತ್ತಿನ ಯಾವ ಮೂಲೆಗೆ ಹೋದರೂ ಆಗಿನ ಕೆಲವು ಪರಿಕಲ್ಪನೆಗಳನ್ನು ಒರಸಿ ಹಾಕುವುದು ಸಾಧ್ಯವೇ ಇಲ್ಲ.

ಕಾರಂತರಿಗೆ ಬಂಡವಾಳ ವಾದದ ಬಗ್ಗೆ ಯಾವ ತಕರಾರೂ ಇಲ್ಲ. ಅವರಿಗೆ ಕಮ್ಯೂನಿಸಂ ಕಂಡರಾಗುವುದಿಲ್ಲ ಎಂಬುದು ಅಷ್ಟೇ ಸತ್ಯ. ಹಾಗೆಂದು ಕಾರಂತರು ಬರೆದಿರುವುದು ಕಳಪೆಯೆಂದು ಯಾವ ಕಾರಣಕ್ಕೂ ಭಾವಿಸಲಾಗುವುದಿಲ್ಲ.

ಯೂರೋಪಿನ ಕೆಲವು ತಿಳುವಳಿಕೆಗಳು ಮತ್ತು ಅದರ ಥಿಯಾಲಜಿಗಳು ಬೇರೆ ಬೇರೆ ಪರಿಣಾಮವನ್ನು ಬೀರಿದೆ ಎಂದು ಅವರು ಹೇಳುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಕೊಪ್ಪ, ತೀರ್ಥಹಳ್ಳಿಗೆ ಪಾದ್ರಿಗಳು ಬಂದುದು ಸುಳ್ಳಲ್ಲ. ಅದರ ಪ್ರಭಾವವು ನಮ್ಮ ಕುವೆಂಪು ಚಿಂತನೆಯ ಮೇಲೂ ಆಗಿರುವುದು ಸತ್ಯ. ಇದರ ಮತ್ತೊಂದು ಮುಖವನ್ನು ಕೂಡಾ ನಾವು ನೋಡಬೇಕಾಗಿದೆ. ಇಲ್ಲಿ ದೇವರುಗಳು ಮತ್ತು ದೇವಾಲಯಗಳು ನಾಶವಾಗಲಿಲ್ಲ. ಭೂತಗಳು ಮತ್ತು ಪೂಜಾರಿಗಳು ಈವತ್ತಿಗೂ ಇದ್ದಾರೆ. ಅವರು ಇರುವುದು ಸಾಮಾಜಿಕ ಸತ್ಯವೂ ಹೌದು. ಅದರ ಜೊತೆಗೆ ಈವತ್ತು ಕೂಡಾ ಬಹಿಷ್ಕಾರಗಳು ನಡೆಯುತ್ತವೆ. ದೇವರು ಭಾರತದಲ್ಲಿ ಸತ್ತಿಲ್ಲ ಎನ್ನುವುದೂ ನಿಜ. ಹಾಗೆ ನೋಡಿದರೆ ದೇವರು ಸತ್ತ ಜಾಗವು ಕಾಣಿಸುವುದೇ ಇಲ್ಲ. ಎಲ್ಲಾ ಕಡೆಗೆ ದೇವರು, ಅವನ ಏಜೆಂಟರು ಮತ್ತು ಭೂತಗಳು, ಆರಾಧನೆಗಳು, ಪಿಶಾಚಿಗಳು ಇವೆ. ಉಳಿದವರನ್ನು ಬಿಟ್ಟು ಹೇಳುವುದಿದ್ದರೆ ಈವತ್ತು ನಮಗೆ ದೇವರು ಇಲ್ಲದ ಜಾಗವೂ ಸಿಗುತ್ತಿಲ್ಲ. ಮನುಷ್ಯನ ಪ್ರಶ್ನೆಗಳು ದೇವರ ಕೃಪೆ ಮತ್ತು ಅದೃಷ್ಟದ ಪ್ರಶ್ನೆಯೂ ಆಗಿದೆ. ಈವತ್ತು ದೇವರದ್ದೇ ನಿಜವಾದ ಒಂದು ಕಾರುಬಾರು. ಅವನ ಹೆಸರಿನಲ್ಲಿ ಸುಮಾರು ನಡೆಯುತ್ತದೆ.

ಮತ್ತೆ ನಾವು ಕುಡಿಯರ ಕೂಸು ಕಾದಂಬರಿಯ ಜಾತ್ರೆ, ಮರಳಿ ಮಣ್ಣಿಗೆ ಕಾದಂಬರಿಯ ಮಹಲಿಂಗೇಶ್ವರನ ಜಾತ್ರೆ ಕಾದಂಬರಿಯ ಪ್ರಸಂಗಗಳನ್ನು ನೆನಪಿಸಿಕೊಳ್ಳಬಹುದು.

ಚಕ್ರವರ್ತಿಯವರು ಮತ್ತೊಂದು ಅಂಶವನ್ನು ಹೇಳುತ್ತಾರೆ; ಈವತ್ತು ಭಾರತದಲ್ಲಿ ಯಾವುದೇ ಕಚೇರಿಗೆ ಹೋದರೂ ಅಲ್ಲಿ ವಿಜ್ಞಾನಿಗಳು. ಕಂಪ್ಯೂಟರ್ ಕಾರ್ಯವನ್ನು ಮಾಡುವವರು ಸ್ಥಳೀಯ ದೇವರ ಪೋಟೋವನ್ನು ಪೂಜೆ ಮಾಡುತ್ತಾರೆ. ದೇವರಿಗೆ ಹೂ ಇಡುತ್ತಾರೆ. ಕಂಪ್ಯೂಟರ್ ಮೂಲಕ ಜಗತ್ತನ್ನು ಸಂಪರ್ಕ ಮಾಡಲು ಅವರಿಗೆ ಸಾಧ್ಯವಾಗುತ್ತದೆ. ಅದರಲ್ಲಿ ಕಾಲ ಮತ್ತು ದೇಶಗಳ

ಹಂಗು ಅವರಿಗೆ ಇಲ್ಲ. ಎರಡರ ಅಸ್ತಿತ್ವವು ಅವರಿಗೆ ಕಷ್ಟವಾಗುವುದೂ ಇಲ್ಲ. ಆಧುನಿಕತೆ ಮತ್ತು ಅದರ ವಿಶ್ವಾತ್ಮಕತೆಯು ಒಂದು ಕಡೆಗೆ ಇರುತ್ತದೆ ಮತ್ತೊಂದು ಕಡೆಗೆ ಅವರು ಸ್ಥಳೀಯ ದೇವರನ್ನು ಪೂಜೆ ಮಾಡುತ್ತಾರೆ. ಆದ್ದರಿಂದ ಸುಲಭವಾಗಿ ನಾವು ಭಾರತೀಯ ಆಧುನಿಕತೆಯನ್ನು ನೋಡಲು ಸಾಧ್ಯವಾಗುವುದಿಲ್ಲ. ಅದು ಸತ್ಯವೂ ಹೌದು. ಭಾರತದಲ್ಲಿ ನಾವು ಆಧುನಿಕೋತ್ತರವಾದವನ್ನು ನೋಡುವಾಗಲೂ ಇದನ್ನು ಹೇಳಬೇಕಾಗುತ್ತದೆ. ವಸಾಹತು ದೇಶಗಳಲ್ಲಿ ನಾವು ಇದನ್ನು ಅಂಗೀಕರಿಸಬೇಕಾಗುತ್ತದೆ. ಆಧುನಿಕತೆಯು ಸಂಪೂರ್ಣವಾಗಿ ಆಧುನಿಕೋತ್ತರವಾದವು ಹುಟ್ಟಿಲ್ಲ. ಅದರ ಬದಲು ಇಲ್ಲಿ ಆಧುನಿಕತೆ, ಸಂಪ್ರದಾಯ, ವಿಶ್ವಾತ್ಮಕತೆಯು ಜೊತೆಯಲ್ಲಿಯೇ ಚಲನೆಯನ್ನು ಪಡೆದುಕೊಂಡಿದೆ. ಜಾತ್ಯಾತೀತವಾದ ಆಧುನಿಕತೆಯು ಇಲ್ಲಿದೆ. ಅದರ ಜೊತೆಗೆ ಯಾವುದೇ ಮುಲಾಜುಗಳು ಇಲ್ಲದೆ ಇಲ್ಲಿ ಬಹುಸಂಸ್ಕೃತಿ ಮತ್ತು ಅದರ ಸ್ವರೂಪಗಳೂ ಇವೆ. ಬಹುಸಂಸ್ಕೃತಿಯೆಂದು ಭಾರತದಲ್ಲಿ ಹೇಳುವಾಗ ನಾವು ಜಾಗತಿಕವಾದ ಸಂಗತಿಯನ್ನು ಮರೆಯುವುದು ಸಾಧ್ಯವೂ ಇಲ್ಲ. ಇದರಿಂದಲೇ ಇಲ್ಲಿ ಎಲ್ಲಾ ಪರಂಪರೆಗಳು ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿವೆ. ಆದರೆ ಅವುಗಳ ಮಾಧ್ಯಮಗಳು ಬದಲಾಗಿವೆ ಎನ್ನುವುದನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ನೂರು ದೇವರುಗಳನ್ನು ನೂಕಲು ಸಾದ್ಯವಾಗದೇ ಹೋಗುವುದಕ್ಕೂ ಇದೇ ಕಾರಣವು ಆಗಿದೆ. ಆದ್ದರಿಂದ ಇಲ್ಲಿ ಯಾವುದನ್ನು ಹೆಚ್ಚು ಅಥೆಂಟಿಕ್ ಆಗಿದೆ ಎಂದು ಹೇಳುವುದು ಕಷ್ಟ. ಜೀವನ ಮತ್ತು ಅದರ ಶೈಲಿಯು ಇಲ್ಲಿ ಭಿನ್ನವಾಗುತ್ತದೆ. ಸಂಪ್ರದಾಯ ಮತ್ತು ಅದರ ಕುರಿತಾದ ನಿಲುವು ಇಲ್ಲಿ ಸೂರ್ಯ ಸ್ಪಷ್ಟ. ಕೆಲವು ಆಚರಣೆಗಳು ಇಲ್ಲಿ ಸಹಜವಾಗಿದೆ. ಅದನ್ನು ಜನರು ಒಪ್ಪಿಕೊಂಡಿದ್ದಾರೆ. ಅದರ ಜೊತೆಗೆ ಇಲ್ಲಿ ಜಾಗತೀಕರಣವೂ ಆಗಿದೆ. ಆಚರಣೆಗಳು ಒಂದು ಕ್ರಿಯೆಯನ್ನು ಹೇಳುತ್ತದೆ. ಅದರಲ್ಲಿ ಅನೇಕ ಅಂಶಗಳೂ ಇವೆ. ಬಿಡಿಯಾದ ಅನೇಕ ಅಂಶಗಳು ಜೊತೆಗೆ ಇವೆ. ಆದರೆ ಇದನ್ನು ಮಾತ್ರವೇ ನಾವು ನೋಡಲು ಬರುವುದೂ ಇಲ್ಲ. ಯಾಕೆಂದರೆ ಎರಡರ ಸಂಮಿಶ್ರವಾದ ರೂಪವು ಎಲ್ಲಾ ಕಡೆಗೆ ಅಸ್ತಿತ್ವದಲ್ಲಿ ಇದೆ ಎಂದು ದೀಪೇಶ್ ಚಕ್ರವರ್ತಿಯವರು ಅಭಿಪ್ರಾಯ ಪಡುತ್ತಾರೆ, ಆದರೆ ಅದರ ಜೊತೆಗೆ ಅವರು ಅಭಿವೃದ್ಧಿ ಎನ್ನುವ ಕಲ್ಪನೆಯು ಹೇಗೆ ಉಂಟಾಯಿತು ಎಂದು ಹೇಳುತ್ತಾರೆ. ಮೊದಲು ಯೂರೋಪಿನಲ್ಲಿ ಅನಂತರ ಅದು ಉಳಿದ ದೇಶಗಳ ಮೇಲೆ ಯಾವ ಪ್ರಭಾವವನ್ನು ಬೀರಿತು ಎನ್ನುವುದು ಅವರ ಚರ್ಚೆಯ ಕೇಂದ್ರ. (ಅದೇ, ಪುಟ.7) ಬಂಡವಾಳವಾದ ಮತ್ತು ಅದರ ಪರಿಣಾಮವನ್ನು ಭಾರತವು ಎದುರಿಸಲೇಬೇಕಾಗಿತ್ತು. ಜಗತ್ತು ತನ್ನ ಚರಿತ್ರೆಯ ಪಲ್ಲಟದಲ್ಲಿ ಒಂದು ದೇಶವನ್ನು ಬಿಡುವುದು ಮತ್ತು ಇನ್ನೊಂದು ದೇಶವನ್ನು

ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಎನ್ನುವುದೇ ಇರುವುದೂ ಇಲ್ಲ. ಬಂಡವಾಳವಾದವು ಇರುವುದು ಮತ್ತು ಅದರ ಅಸ್ತಿತ್ವವು ಕಾಣಿಸುವುದು ಬೇರೆ ಬೇರೆ ಥರಹ ಎನ್ನುವುದೂ ನಮಗೆ ಗೊತ್ತಿರಬೇಕಾಗುತ್ತದೆ. ಬಂಡವಾಳವಾದ ಎನ್ನುವುದು ನಮಗೆ ಕಾಣಿಸಿದ್ದು ಏನೇ ಇದ್ದರೂ ಅದಕ್ಕೆ ಒಂದು ಸಮಗ್ರವಾದ ದೃಷ್ಟಿಕೋನವೂ ಇರುತ್ತದೆ. ಅದು ತನ್ನ ಹಿಂದಿನ ಚರಿತ್ರೆಯನ್ನು ಸ್ವಲ್ಪ ಬದಲು ಮಾಡುತ್ತದೆ. ತನಗೆ ಬೇಕಾದ ಕಾರ್ಯಕ್ರಮವನ್ನು ರೂಪಿಸುತ್ತದೆ. ಜಿಜೆಕ್ ಪರಿಕಲ್ಪನಾತ್ಮಕ ಆದರ್ಶ ಮತ್ತು ಕಲ್ಪಿತವಾದ ಆದರ್ಶವನ್ನು ಬೇರೆ ಮಾಡುತ್ತಾನೆ. ಆದರ್ಶ ಮತ್ತು ಅದರ ರಚನೆಯಿಂದ ಆದರ್ಶ ವಿಜ್ಞಾನವು ಹುಟ್ಟುತ್ತದೆ. ಬಂಡವಾಳವಾದ ಮತ್ತು ಅದರ ತರ್ಕವನ್ನು ನಾವು ಈ ದೃಷ್ಟಿಯಿಂದ ಬೇರೆ ಥರ ಗ್ರಹಿಸಬೇಕು ಎಂದು ಮಾರ್ಕ್ಸ್ ಹೇಳುತ್ತಾನೆ. ನಮ್ಮ ನಿರ್ದಿಷ್ಟವಾದ ಜೀವನಕ್ರಮದಿಂದ ಬಂಡವಾಳವಾದವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವೆಂದು ಅವನ ವಾದವಾಗಿದೆ. ಆದರೆ ಅಮೂರ್ತವಾದ ಕಾರ್ಮಿಕರು ಮತ್ತು ಅವರ ಅಸ್ತಿತ್ವವನ್ನು ಪ್ರಯೋಗದ ಮೂಲಕವೇ ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅಮೂರ್ತವಾದದ್ದು ಕೌಶಲದಿಂದ ಮೂರ್ತ ರೂಪಕ್ಕೆ ಬರುತ್ತದೆ. ಅಂದರೆ ಅದರ ಸ್ವರೂಪವನ್ನು ನಾವು ನಿರ್ದಿಷ್ಟವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕಾರ್ಮಿಕರು ಆಗುವುದು ಅಂದರೆ ನಾವು ನಮ್ಮ ಶಕ್ತಿಯನ್ನು ಮಾತ್ರವೇ ಬಳಸುವುದು ಅಲ್ಲ. ಅದರಲ್ಲಿ ನಮ್ಮ ಜೀವನಕ್ರಮವು ಇರುತ್ತದೆ. ದೇಹ ಮತ್ತು ಅದರ ದುಡಿಮೆಗೆ ನಿಜವಾದ ಅರ್ಥವೂ ಇರುತ್ತದೆ. ಅಮೂರ್ತವಾದ ಕಾರ್ಮಿಕರು ಮತ್ತು ಅವರ ಅಸ್ತಿತ್ವವನ್ನು ಮಾರ್ಕ್ಸ್ ಕೇವಲ ಸರಳವಾದ ಒಂದು ವಿಧಾನದ ಮೂಲಕ ಹೇಳುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಶಕ್ತಿಯು ಬೇರೆ ಥರ ವ್ಯಕ್ತವಾಗುತ್ತದೆ. ಅದು ಸಮಾಜದ ಸಂಬಂಧವನ್ನು ಹೇಳುತ್ತದೆ. ವ್ಯಕ್ತಿ ಮತ್ತು ಅವನ ಕೌಶಲ್ಯವು ಹೇಗೆ ವ್ಯಕ್ತವಾಗುತ್ತದೆ ಎನ್ನುವುದರಿಂದ ಅದರ ಮೌಲ್ಯವು ನಿರ್ಧಾರವಾಗುತ್ತದೆ. ವಾಸ್ತವವಾಗಿ ಭಾರತದಲ್ಲಿ ಕಂಪೆನಿಗಳು ತಮ್ಮ ಅಗತ್ಯಕ್ಕಾಗಿ ಭಾರತದ ಕಾರ್ಮಿಕರನ್ನು ಬಳಸಿಕೊಂಡರು. ಅದನ್ನು ಕಾರ್ಮಿಕರು ಮತ್ತು ಅವರ ಶಕ್ತಿ ಎಂದೇ ಪರಿಗಣಿಸಬೇಕಾಗುತ್ತದೆ. ಇವತ್ತು ಭಾರತದಲ್ಲಿ ಕಾರ್ಮಿಕರು ದೇವರನ್ನು ನಂಬುವುದು ಮತ್ತು ಅಂತರರಾಷ್ಟ್ರೀಯ ಕಂಪೆನಿಗಾಗಿ ದುಡಿಯುವುದು ಜೊತೆಗೆ ನಡೆಯುತ್ತದೆ. ಯೂರೋಪಿನ ಆಧುನಿಕತೆಯು ನಮ್ಮನ್ನು ಆವರಿಸಿಕೊಂಡಿದ್ದು ಸತ್ಯ. ಅದೇ ರೀತಿಯಲ್ಲಿ ಈವತ್ತು ನಾವು ನಮ್ಮ ಶಕ್ತಿಯನ್ನು ಬೇರೆ ಬೇರೆ ಕಂಪೆನಿಗಳಿಗೆ ಕೊಡುತ್ತೇವೆ. ಇದರ ಮೂಲಕ ನಮಗೆ ಜೀವನ ಮತ್ತು ಅದರ ಸ್ವರೂಪವೂ ಅರ್ಥವಾಗುತ್ತದೆ. ಜಾಗತೀಕರಣವು ಜೀವನಕ್ರಮವನ್ನು ಬದಲಿಸುತ್ತಿರುವುದು ನಿಜ. ಜಾಗತೀಕರಣ ಮತ್ತು ಅದರ ಸ್ವರೂಪವು ಅತ್ಯಂತ

ಸಂಕೀರ್ಣವಾಗಿದೆ. ನಾವು ಭಾವಿಸುವುದಕ್ಕಿಂತ ಹೆಚ್ಚು ಜೋರಾಗಿ ಕೆಲಸವನ್ನು ಮಾಡಿದೆ. ಅದು ನಮ್ಮ ಬೇರೆ ಬೇರೆ ಭಾವನೆಗಳನ್ನು ಹುಟ್ಟುಹಾಕಿದೆ. ಅದರ ವಿಶ್ವಾತ್ಮಕ ಸ್ವರೂಪವೂ ಬೇರೆಯಾಗಿದೆ. ಅದರ ಜೊತೆಗೆ ಅದು ನಮ್ಮಲ್ಲಿ ಬೇರೆ ಬೇರೆ ಅಂತರವನ್ನು ಸೃಷ್ಟಿ ಮಾಡುತ್ತದೆ. ಕೆಲವು ವಿಷಯಗಳಲ್ಲಿ ಅದು ಸೋಲು ಕಂಡಿದೆ. ಸಂಸ್ಕೃತಿ ಮತ್ತು ಅದರ ಅನನ್ಯತೆಯು ಹೋಗುತ್ತದೆ. ಜಗತ್ತು ಅದರ ಚರಿತ್ರೆಯು ಪಲ್ಲಟವು ಆಗುತ್ತಿರುವುದರಿಂದ ಅದರ ಸ್ವರೂಪವು ಭಿನ್ನವಾಗುತ್ತದೆ. ಮಾನವೀಯವಾದ ಒಂದು ಚರಿತ್ರೆಯು ವ್ಯತ್ಯಾಸವಾಗುತ್ತದೆ. ಅದರಲ್ಲಿ ಒಂದು ಭೇದವು ಕಾಣಿಸುತ್ತದೆ. ವ್ಯಕ್ತಿತ್ವದ ಮೇಲೆ ಅತ್ಯಂತ ಗಾಢವಾದ ಪ್ರಭಾವವನ್ನು ಬೀರುತ್ತದೆ. ಅನೇಕವು ಸಂಸ್ಕೃತಿ ಮತ್ತು ಅದರ ಮಿತಿಯನ್ನು ದಾಟುತ್ತವೆ. ಯಾವುದನ್ನು ಆಧುನಿಕ ಅನನ್ಯತೆ ಎಂದು ಹೇಳುತ್ತೇವೆಯೋ ಅದರ ಸ್ವರೂಪವು ಬೇರೆಯಾಗುತ್ತದೆ.

ಕುಟುಂಬ

ಜೀವನ ಮತ್ತು ಸಾಹಿತ್ಯ

1820 ರಿಂದ 1870ರವರೆಗಿನ ಕಾಲಾವಧಿಯು ಸಾಮಾಜಿಕ ಪುನರುಜ್ಜೀವನದ ಕಾಲಘಟ್ಟ. ಈ ಕಾಲಘಟ್ಟವನ್ನು ವಸಾಹತುಶಾಹಿ ಯುಗದ ಪುನರುಜ್ಜೀವನ ಕಾಲಘಟ್ಟವೆಂದೂ ಕರೆಯಬಹುದು. ಇದರಿಂದ ಭಾರತೀಯ ಸಂಪ್ರದಾಯ; ಸಾಂಪ್ರದಾಯಿಕ ಸಮಾಜ; ರಾಜಕೀಯ ಚಿಂತನೆಗಳ ಬಗೆಗಿನ ದೃಷ್ಟಿಕೋನಗಳು ಬದಲಾದವು. ಹೀಗೆ ಬದಲಾದ್ದರಿಂದಲೇ ಭಾರತೀಯ ಸಮಾಜದ ತಾರತಮ್ಯ ಧೋರಣೆಯ ಚಿಂತನೆಗಳ ಬಗ್ಗೆ ಒಂದು ರೀತಿಯ ಚಿಕಿತ್ಸಕ ದೃಷ್ಟಿಯು ಬಂತು. ಒಂದು ರೀತಿಯಿಂದ ಕಾರಂತರು ಜಾತಿಯ ಚರಿತ್ರೆಯನ್ನು ಈ ಕಾದಂಬರಿಯಲ್ಲಿ ಹೇಳಿದಂತಾಗಿದೆ.

ಸಾಮಾಜಿಕ ಪುನರುಜ್ಜೀವನದ ಬಗೆಗೆ ಮಾತಾಡುವಾಗ ನಾವು ಅದರ ಎರಡು – ಮೂರು ಹಂತಗಳನ್ನು ಗಮನಿಸಬೇಕು.

ವಸಾಹತುಶಾಹಿ ಅನುಭವದ ಕುರಿತು ಕೆಲವು ಮಾತುಗಳನ್ನು ನಾವು ಇಲ್ಲಿ ಹೇಳುವುದು ಅಗತ್ಯ. ವಸಾಹತುಶಾಹಿ ಅನುಭವವು ಹೊಸ ಸಂಸ್ಕೃತಿಯನ್ನು ಹುಟ್ಟು ಹಾಡಿತು. ಅದರ ಜೊತೆಗೆ ಹಳೆಯ ಪರಂಪರೆ ಮತ್ತು ಹೊಸ ಪರಂಪರೆಗಳ ನಡುವೆ ಒಂದು ಸಂಧಾನವು ಸಾಧ್ಯವಾಯಿತು. ಪರಂಪರಿಕವಾದ ಪದ್ಧತಿ ಮತ್ತು ಹೊಸ ಪದ್ಧತಿಗಳ ನಡುವೆ ಒಂದು ಸಹಯೋಗವು ಸಾಧ್ಯವಾಯಿತು. ವಸಾಹತುಶಾಹಿಯು ಸಾಮಾಜಿಕ ಪಲ್ಲಟವನ್ನು ಉಂಟು ಮಾಡಿತು. ಅದರ ಜೊತೆಗೆ ಹೊಸ ಮಾದರಿಯ ಜ್ಞಾನ ಭಾರತೀಯ ಸಮಾಜವನ್ನು ಹೊಸರೂಪಕ್ಕೆ ಕಾರಣವಾಯಿತು. ಇದನ್ನು ನಿರ್ದಿಷ್ಟವಾಗಿ ಹೇಳಬೇಕೆಂದರೆ 'ಹೊಸ ಜ್ಞಾನ ಪರಂಪರೆಯ ಸೃಷ್ಟಿಯೆಂದು ಬರ್ನಾಡ್ ಕೋನ್ ಎಂದು

ಹೇಳುತ್ತಾರೆ. ಇದು ಹೊಸ ವೈಚಾರಿಕತೆಯ ಉದಯವೂ ಹೌದು. (ಬರ್ನಾರ್ಡ್ ಕೋನ್, 1986, ಎನ್. ಅಂಥ್ರಾಪಲಾಜಿಸ್ಟ್ ಎಮಂಗ್‌ದ ಹಿಸ್ಟ್ರಿಯರನ್ ಅಂಡ್ ಅದರ್ ಎಸ್ಸೇಸ್.)

ಒಂದು: ನವ ವಿದ್ಯಾವಂತ; ಆಧುನಿಕತಾವಾದಿ ದೃಷ್ಟಿಕೋನವು ಸಾಂಪ್ರದಾಯಿಕ ಜೀವನ ಕ್ರಮ ಹಾಗೂ ಭಾರತೀಯ ಸಂಪ್ರದಾಯಗಳ ಕುರಿತಂತೆ ತಳೆದ ಅಭಿಪ್ರಾಯಗಳು. ಈ ಮಾದರಿಯ ಚಿಂತನೆಯ ಕ್ರಮ ಬ್ರಿಟೀಷ್ ಮಾದರಿಯ ಶಿಕ್ಷಣವಾಗಲೀ; ಅದರ ಜೊತೆಗಿನ ಬಂಡವಾಳವಾದಿ ಹಿತಾಸಕ್ತಿಯಾಗಲೀ ಮುಖ್ಯವಾಗಲಿಲ್ಲ. ಇದರ – ಕೊಂಚ ನಯಗೊಳಿಸಿದ ಚಿಂತನೆಯೇ ವಸ್ತುನಿಷ್ಠತೆ, ವೈಜ್ಞಾನಿಕ, ಧರ್ಮನಿರಪೇಕ್ಷತೆ ಮುಂತಾದ ಹೆಸರುಗಳಿಂದ ಚಾಲ್ತಿಗೆ ಬಂದವು. ವಿಜ್ಞಾನ ಜಾತಿಯಾಧಾರಿತವಲ್ಲ.

ಎರಡನೆಯದು: ವ್ಯಕ್ತಿವಾದಿ ಚಿಂತನೆಗಳ ಹಂತ. ವಾಸ್ತವವಾಗಿ ಇದಕ್ಕೆ ಚಾರಿತ್ರಿಕ ದಾಖಲೆಗಳು ಸಿಗಲಾರದು. ಆದರೆ ಯಾವುದನ್ನೂ ಚಿಂತಿಸದ ಒಂದು ಮಧ್ಯಮ; ಏಕಾಂತವಾದಿ ವರ್ಗ.

ಮೂರನೆಯದು, ವಸಾಹತು ಅನುಭವಕ್ಕೆ ತೀವ್ರ ಪ್ರತಿರೋಧವೊಡ್ಡಿದ, ರಾಷ್ಟ್ರೀಯವಾದಿ ಸಂಸ್ಕೃತಿಯ ಹುಡುಕಾಟದ ಹಂತ. ರಾಷ್ಟ್ರೀಯವಾದ ಜಾತಿ ಕೇಂದ್ರಿತವಲ್ಲ.

ಈ ಮಾದರಿಗಳಲ್ಲಿ ಸಿಗದಿರುವ ಒಂದು ಜನಸಾಮಾನ್ಯ ವರ್ಗವಿತ್ತು. ಯಾವುದನ್ನು ಯೂರೋಪಿನ ಚಿಂತಕರು – ಭಾರತೀಯ ಸಂಪ್ರದಾಯ ತುಂಬಾ ಕ್ರೂರವಾದುದು ಎಂದು ತಿಳಿದಿತ್ತೋ ಅಂಥ ಸಂಪ್ರದಾಯಗಳ ಜೊತೆಗೆ ಇದ್ದ ವರ್ಗವದು. ಈ ವರ್ಗ ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕೆಲವು ಸಂಪ್ರದಾಯ; ನಂಬಿಕೆ; ಮುಂತಾದವುಗಳ ನಂಬಿಕೊಂಡಿತ್ತು. ಮಹಿಳೆಯನ್ನು ರಾಷ್ಟ್ರೀಯವಾದವಾಗಲೀ; ಯೂರೋಪಿನ ಚಿಂತನೆಯಾಗಲೀ ನೋಡಿದ ಕ್ರಮಕ್ಕಿಂತ ಬೇರೊಂದು ಮಾದರಿಯೂ ಇದೆ ಎನ್ನುವುದನ್ನು ಮಂಡಿಸುವುದರ ಮುಖಾಂತರ ಮಹಿಳೆಯ ಅನನ್ಯತೆಯನ್ನು ಲೇಖಕರು ಮಂಡಿಸಿರುವುದು ಒಂದು ನಿದರ್ಶನ ಮಾತ್ರ. ಮರಳಿ ಮಣ್ಣಿಗೆಯಲ್ಲಿ ಬರುವ ಸರಸೋತಿಯಾಗಲೀ; ನಾಗವೇಣಿಯಾಗಲೀ; ಚೋಮನ ದುಡಿ ಕಾದಂಬರಿಯ ಬೆಳ್ಳಿಯಾಗಲಿ ಇದಕ್ಕೆ ಉದಾಹರಣೆಗಳು. ಸರಸೋತಿ ಒಬ್ಬಳು ಆದರ್ಶ ಸೀತಾಮಾತೆಯ ಅಥವಾ ಭಾರತಾಂಬೆಯ ಮಾದರಿಯಲ್ಲ. ಅವಳು ಜನಸಾಮಾನ್ಯ ವರ್ಗಕ್ಕೆ ಸೇರಿದವಳು, ವಿಧವೆ. ಸಿಟ್ಟು ಬಂದರೆ ಅಣ್ಣನೊಂದಿಗೆ ಜಗಳವಾಡಬಲ್ಲವಳು. ಮತ್ತು ಅಣ್ಣನ ಮನೆ ಬಿಟ್ಟು

ಹೊರಟು ಹೋಗುವವಳು. ಏನಿದ್ದರೂ ಸರಸೋತಿಯ ಮೇಲೆ ರಾಷ್ಟ್ರೀಯತೆಯೋ ಆಧುನಿಕತೆಯೋ ಪ್ರಭಾವ ಬೀರಿದೆಯೆಂದು ಹುಡುಕಲು ಕೂಡಾ ಒಂದು ಸಾಕ್ಷಿಯಿಲ್ಲ. ಇಂಥದ್ದೊಂದು ಮಾದರಿಯ ಜನರು ಕೂಡಾ ಸಂಪ್ರದಾಯ ನಂಬಿದ್ದರು. ಅವರು ನಿರೀಶ್ವರ ವಾದಿಗಳಲ್ಲ. ಸಾಮಾನ್ಯ ಮನುಷ್ಯರಾಗಿದ್ದರು. ಯೂರೋಪ್ ಮೂಲದ ಚಿಂತನೆಯು ಹೇಳುವ ಕ್ರೂರ ಮೌಲ್ಯ ಈ ಮಾದರಿಯ ಜನವರ್ಗದಲ್ಲಿ ಇರಲಿಲ್ಲ. ಹಾಗೆಯೇ ಕ್ರಿಶ್ಚಿಯನ್ ನೈತಿಕತೆಯ ಮುಖಾಂತರ; ಬಂಡವಾಳವಾದಿ ವ್ಯವಸ್ಥೆಯ ವಿರುದ್ಧ ಬಂದ ಉದಾರವಾದಿ ಮಾನವತಾವಾದವೂ ಇಂಥ ಕಡೆ ಅನ್ವಯವಾಗುವುದಿಲ್ಲ. ನಾಗವೇಣಿ; ಸರಸೋತಿ; ಪಾರೋತಿ; ಐತಾಳರು; ಚೋಮ; ಬೆಳ್ಳಿ ಮುಂತಾದವರು ಬದುಕುವುದು; ದುಃಖಿಸುವುದು; ಜಗಳವಾಡುವುದು; ಸಿಟ್ಟುಗೊಳ್ಳುವುದು– ಎಲ್ಲವೂ ಅವರವರ ಭಾವ ಹಾಗೂ ಸಂವೇದನೆಯ ಭಾಗವಾಗಿ. ಇಂಥವರ ಮೇಲೆ ವಿಜ್ಞಾನ ವಸ್ತುನಿಷ್ಠತೆ – ಇತ್ಯಾದಿ ಯಾವುದೂ ಪ್ರಭಾವ ಬೀರಿಲ್ಲ. ದೊಡ್ಡ ದೊಡ್ಡ ರಾಜಕೀಯ ಪರಿಭಾಷೆಗಳು ಚಾಲ್ತಿಯಲ್ಲಿದ್ದಾಗ ಕಾರಂತರು ಮರಳಿ ಮಣ್ಣಿಗೆಯೆಂಥಾ ಕಾದಂಬರಿಯಲ್ಲಿ ತರುವ ಸರಸೋತಿ – ಪಾರೋತಿಯಂಥವರು ಬೇರೆಯದನ್ನು ಮಂಡಿಸುವುದನ್ನು ನೋಡುವುದೇ ಕುತೂಹಲದಾಯಕ. ಎಲ್ಲರಿಗೂ ಸ್ವಾತಂತ್ರ್ಯವಿಲ್ಲವೆಂಬುದನ್ನು ಇದು ಸೂಚಿಸುತ್ತದೆ. ಉದಾ ಮರಳಿ ಮಣ್ಣಿಗೆ ಕಾದಂಬರಿ

ಕನ್ನಡದಲ್ಲಿ ಕಾರಂತರ; ಕುವೆಂಪು ಅವರ ಕಾದಂಬರಿಗಳನ್ನು ಮಾಮೂಲಿಯಾಗಿ ವಾಸ್ತವತಾವಾದಿ ಕಾದಂಬರಿಗಳೆಂದು ಗುರುತಿಸುತ್ತೇವೆ. ಕಾರಂತರ ಕಾದಂಬರಿಗಳ ಸ್ವರೂಪವನ್ನು ವಿವರಿಸುವುದಕ್ಕೆ ಮಾತ್ರ ಈ ಪದವನ್ನು ಬಳಸುತ್ತಿದ್ದೇನೆ. ಕಾದಂಬರಿಗಳಲ್ಲಿ ಜನಪ್ರಿಯ, ಪೌರಾಣಿಕ; ಭ್ರಮಾತ್ಮಕ ಇತ್ಯಾದಿಗಳನ್ನು ಕೇವಲ ವಿವರಣೆಗಾಗಿ ಮಾತ್ರವೇ ಬಳಸುತ್ತಿದ್ದೇವೆ. ಇದಕ್ಕೆ ತುಂಬಾ ವಿಶೇಷವಾದ ಅರ್ಥವೇನೂ ಇಲ್ಲ. ಹಾಗೆ ನೋಡುವುದಿದ್ದರೆ ಈ ರೀತಿಯ ವಿವರಣೆಗಳು ಕಾದಂಬರಿಯ ವಸ್ತು ಮತ್ತು ಅದು ಮಂಡನೆಯಾಗುವ ಕ್ರಮವನ್ನು ಮಾತ್ರವೇ ಹೇಳುತ್ತವೆ. ಇಲ್ಲಿ ಮತ್ತೊಂದು ಅಂಶವನ್ನು ಸೂಚಿಸಬಹುದು:

ಕಾರಂತರ ಬಹುತೇಕ ಕಾದಂಬರಿಗಳ ಪ್ರಮುಖ ವಸ್ತು ಒಂದು ವರ್ಗದ ಜೀವನ ಕ್ರಮದ ಪಲ್ಲಟವನ್ನು ಸೂಚಿಸುವುದು. ಹಾಗೂ ಬಹಿರ್ಮುಖವೆಂದು ಯಾವುದನ್ನು ನಾವು ಕರೆಯುತ್ತೇವೋ ಅದರ ಪರಿವರ್ತನೆಗಳನ್ನು ದಾಖಲಿಸುವುದು. ಕಾರಂತರ ಕಾದಂಬರಿಗಳಲ್ಲಿ ಬರುವ ಬಹಿರಂಗದ ಪಲ್ಲಟ ಮತ್ತು ಅದು ಅಂತರಂಗದ ಮೇಲೆ ಬೀರುವ ಪ್ರಭಾವ ಮುಖ್ಯ." (ಕೇಶವಶರ್ಮ.ಕೆ. ಬಹುಮುಖಿ)

ಕಾರಂತರ ಕಾದಂಬರಿಗಳಲ್ಲಿ ಪ್ರಾಯಶಃ ಬೇರೆಯಾಗುವ ಕಾದಂಬರಿಗಳೆಂದರೆ ಮೂಕಜ್ಜಿಯ ಕನಸುಗಳು ಮತ್ತು ಮೈಮನಗಳ ಸುಳಿಯಲ್ಲಿ ಮಾತ್ರ. ಈ ಎರಡು ಕಾದಂಬರಿಗಳು ಮಾತ್ರ ಮನಸ್ಸನ್ನು ಕೇಂದ್ರವಾಗಿರಿಸಿಕೊಂಡಿವೆ. ಆದುದರಿಂದ ಈ ಎರಡು ಕಾದಂಬರಿಗಳನ್ನು ನಾವು ಮನಶ್ಶಾಸ್ತ್ರೀಯ ಕಾದಂಬರಿಗಳು ಎಂದು ಕರೆಯಬಹುದು. ಉಳಿದ ಹೆಚ್ಚಿನ ಕಾದಂಬರಿಗಳಲ್ಲಿ ವ್ಯಕ್ತಿ ಮತ್ತು ಸಾಮಾಜದ ನಡುವಣ ಸಂಬಂಧವೇ ಮುಖ್ಯವಾಗಿದೆ. "ಕನ್ನಡದ್ದೇ ಆದ ಕಾದಂಬರಿಯ ಪ್ರಕಾರವೊಂದು ರೂಪುಗೊಳ್ತಾ ಇದೆ. ಅದು ಕಾರಂತರ ಮುಖಾಂತರವೇ ರೂಪುಗೊಳ್ತಾ ಇದೆ. ಇನ್ಯಾವುದೋ ಭಾಷೆಯ, ಕಾದಂಬರಿಯ ಪ್ರಕಾರವನ್ನು ಗಮನದಲ್ಲಿಟ್ಟುಕೊಂಡು ಅದರ ಮಾನದಂಡದಲ್ಲಿ ನೋಡೋಕಾಗೋದಿಲ್ಲ. ಕನ್ನಡ ಕಾದಂಬರಿಕಾರ ಏಕಕಾಲದಲ್ಲಿ ಸಾಹಿತಿ, ಸಮಾಜ ವಿಜ್ಞಾನಿ, ಮಾನವ ಶಾಸ್ತ್ರ ಜ್ಞ, ಮನೋವಿಜ್ಞಾನಿ ಎಲ್ಲ ಆಗಿರ್ತಾನೆ. ಇಷ್ಟೆಲ್ಲವನ್ನು ಏಕಕಾಲದಲ್ಲಿ ಮಾಡಬೇಕಾದ ಹೊಣೆಗಾರಿಕೆ, ನವೋದಯದ ಎಲ್ಲ ಬರಹಗಾರರಿಗೋ ಇತ್ತು. ಅದರಲ್ಲೂ ಅತ್ಯಂತ ವಾಸ್ತವವಾದಿಯಾಗಿದ್ದ ಕಾರಂತರಿಗಂತೂ ತೀರಾ ಅನಿವಾರ್ಯವಾದ ಸಂದರ್ಭ ಆಯ್ತು". (ಕೆ.ವಿ. ನಾರಾಯಣ) (ಸಂ. ಟಿ.ಪಿ.ಅಶೋಕ) (ಶಿವರಾಮಕಾರಂತ ಕಾದಂಬರಿ ಕಣ್ಣಲ್ಲಿ ಕಾರಂತ)

ಕಾರಂತರ ಕಾದಂಬರಿಗಳು ಒಂದು ಅರ್ಥದಲ್ಲಿ ಸಾಮಾಜಿಕ ರಚನೆಗಳಾಗಿವೆ. ಹಿಗಾಗಿ ಅವರ ಕಾದಂಬರಿಗಳಲ್ಲಿ ತಳೆಯುವ ನೈತಿಕತೆ ನಿಲುವು ಮತ್ತು ಸಾತ್ವಿಕ ಸಿಟ್ಟು ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದೆ. ಅದು ಕಾರಂತರ ಒಲವು ಎಂದು ಮಾತ್ರ ನಾವು ಗುರುತಿಸಲು ಬರುವುದಿಲ್ಲ. ಕಾರಂತರಲ್ಲಿ ವ್ಯಕ್ತಿಯ ನೈತಿಕ ನಿಲುವು ಮತ್ತು ಸಾಮಾಜಿಕ ನೈತಿಕ ನಿಲುವುಗಳಿಗೆ ವ್ಯತ್ಯಾಸವಿದೆ. ಇವುಗಳ ನಡುವಣ ಸಂಘರ್ಷವನ್ನು ಕಾರಂತರು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಕಾರಂತರು ಕಾದಂಬರಿ ವ್ಯಕ್ತಿ ಸರ್ವತಂತ್ರ ಸ್ವತಂತ್ರನಲ್ಲ. ಅವನು ಅವನ ನಿರ್ಧಾರ ಮತ್ತು ಆಶಯಗಳಲ್ಲಿ ಒಂದು ನಿರ್ದಿಷ್ಟ ಮನೋಭಾವ ತಳೆಯಬಲ್ಲನಾದರೂ ಅವನ ನಿರ್ಧಾರಗಳನ್ನು ತಡೆಹಿಡಿಯುವುದು ಸಮಾಜವೇ. ವ್ಯಕ್ತಿಗೆ ಸ್ಥಾನಮಾನವಿದೆ. ಅವನಿಗೆ ಕುಟುಂಬವಿದೆ. ಕುಟುಂಬ ಸಮಾಜದಲ್ಲಿದೆ. ಇವುಗಳ ನಡುವಿನ ಸಂಘರ್ಷಗಳು ಕಾರಂತರಿಗೆ ಮುಖ್ಯ. ಬದಲಾಗುತ್ತಿರುವ ವ್ಯಕ್ತಿ ; ಅವನ ಮೌಲ್ಯ ; ಉಪಯೋಗಕ್ಕೆ ಬರುವ ನೈತಿಕ ಮೌಲ್ಯ ಮತ್ತು ಬಾರದಿರುವ ನೈತಿಕ ಮೌಲ್ಯಗಳು ಕಾರಂತರ ಮಟ್ಟಿಗೆ ಮುಖ್ಯ. ಹೀಗಾಗಿ ಕಾರಂತರ ಕಾದಂಬರಿಗಳಲ್ಲಿ ಬರುವ ಮನುಷ್ಯರಿಗೆ ಒಂದು ಪ್ರಾದೇಶಿಕ ಆವರಣ; ಅವರ ಸಾಮಾಜಿಕ ಸಂದರ್ಭವಿದೆ. ಈ ಕಾರಣದಿಂದ

ಸರಸ್ಪೋತಿಯನ್ನು; ಚೋಮನನ್ನು; ಕೆಂಚನನ್ನು ಮತ್ತು ಚೋಮನ ನೈತಿಕ ನಿಲುವುಗಳು ಬೆಳ್ಳಿಯ ನೈತಿಕ ನಿಲುವು ಆಗುವುದು ಸಾಧ್ಯವಿಲ್ಲ. ಚೋಮನ ಸಂಘರ್ಷ; ಸರಸ್ಪೋತಿ–ಪಾರೋತಿ–ನಾಗವೇಣಿಯವರ ಸಂಘರ್ಷಗಳು ಬೇರೆ ಬೇರೆ. ಇವರನ್ನೆಲ್ಲಾ ಸಾಮಾಜಿಕ ವ್ಯವಸ್ಥೆಯು ಹಿಡಿದು ನಿಲ್ಲಿಸುತ್ತದೆ.

ಗಾಂಧಿಯವರ ಪ್ರಕಾರ ಹರಿಜನ ಕಾರ್ಯ ಒಂದು ಧಾರ್ಮಿಕ ಕಾರ್ಯ ಹಾಗೂ ಆಂದೋಲನ ಅಸ್ಪೃಶ್ಯತೆಯು ಒಂದು ಪಾಪ (ಮಹಾತ್ಮ. 1976. ಪು.321–23. ಸಂ.3). ಅಸ್ಪೃಶ್ಯತೆಯನ್ನು ಮೈಲಿಗೆಯೆಂದು ತಿಳಿಯಲಾಗಿತ್ತು. ಗಾಂಧಿ ಅದನ್ನು ತೊಡೆದು ಹಾಕಲು ಯತ್ನಿಸಿದರು. ಈ ಕುರಿತು ಕಾರಂತರು ಹುಚ್ಚು ಮನಸ್ಸಿನ ಹತ್ತು ಮುಖದಲ್ಲಿ ವಿವರಿಸಿದ್ದಾರೆ (1998. ಪು.129–136). ಇದರಲ್ಲಿ ಕಾರಂತರು ಹೊಲೆಯರ ಜೀವನ ಸ್ಥಿತಿಯೇನಿತ್ತು ಎಂದು ವಿವರಿಸುವುದರೊಂದಿಗೆ ತಾವು ಸೇಂದಿ ವಿರುದ್ಧ ಪ್ರಚಾರ ನಡೆಸಿದ್ದನ್ನು ಹೇಳುತ್ತಾರೆ. ಮರಳಿ ಮಣ್ಣಿಗೆಯಲ್ಲಿ ರಾಮನೂ ಸಾರಾಯಿ ವಿರುದ್ಧ ಪ್ರಚಾರ ನಡೆಸುತ್ತಾನೆ. ಇಲ್ಲಿ ಹೊಲೆಯರು ಮತ್ತು ಬ್ರಾಹ್ಮಣರ ಸಮಸ್ಯೆಯನ್ನು ಕಾರಂತರು ಸವಿವರವಾಗಿ ವಿವರಿಸಿದ್ದಾರೆ.

ಗಾಂಧೀಜಿಯವರು ಹರಿಜನದಲ್ಲಿ ಬರೆದ ಸಾಲುಗಳು ಹೀಗಿವೆ: ಪಾನ ನಿರೋಧದ ಕೂಗು, ಯಾವಾಗಲೂ ಒಂದು ಪ್ಯಾಷನ್ನಾಗಿದೆ. 1920 ರಲ್ಲಿ ಅದು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದ ಒಂದು ಭಾಗವಾಯಿತು. (ಮಹಾತ್ಮ, ಸಂ.4, 1981, ಪು.267). ಆದರೆ ಮತಾಂತರದ ಪ್ರಶ್ನೆಯು ಇದಕ್ಕಿಂತ ಬೇರೆಯಾಗಿತ್ತು. ಮತಾಂತರದ ಮೂಲಕವೇ ಭಾರತೀಯರ ಜಾತಿ ಪದ್ಧತಿಯನ್ನು ನಾಶಪಡಿಸಿ ಏಕಧರ್ಮವನ್ನು ಸ್ಥಾಪಿಸಬಹುದು. ಹಾಗೂ ಮತಾಂತರದಿಂದ ಭಾರತೀಯರಿಗೆ ಸಾಮಾಜಿಕ–ಆರ್ಥಿಕ ಜವಾಬ್ದಾರಿ ಬರಬಹುದೆಂದು ಆಗಿನ ಮಿಶನರಿಗಳು ನಂಬಿದ್ದವು. ನಾಗವೇಣಿ ಈ ವ್ಯಂಗ್ಯದ ಮಾತು ಗಮನಾರ್ಹ. ಸತ್ತ ಮೇಲೆ ಸ್ವರ್ಗ ಎನ್ನುವ ಪರಿಕಲ್ಪನೆ ಹಾಗೂ ಲಚ್ಚ ತನ್ನ ತಂದೆಗೆ ಪಿಂಡ ಪ್ರಧಾನ ಮಾಡಿಲ್ಲ ಎನ್ನುವುದನ್ನು ಇದು ಸಂಕೇತಿಸುತ್ತದೆ. ಬ್ರಾಹ್ಮಣ ಪರಂಪರೆಗೆ ಸಂಸ್ಕೃತದ ಧಾರ್ಮಿಕ – ಪಠ್ಯಗಳ ಪ್ರಭಾವವಿದೆ. ಬ್ರಾಹ್ಮಣದು ಪಿತ್ರಾರ್ಜಿತ ಆಸ್ತಿ – ವರ್ಗಾವಣೆ ಪರಂಪರೆ. ರಾಮೈತಾಳರು– ನಾಗವೇಣಿಗೆ ವಿಲ್ಲು ಬರೆಯುವಾಗ ತನ್ನ ಸ್ವಯಾರ್ಜಿತ ಆಸ್ತಿಯನ್ನು ಮಾತ್ರ ಬರೆಯುತ್ತೇನೆ ಎನ್ನುತ್ತಾರೆ. ಸಂಸ್ಕೃತ ಧಾರ್ಮಿಕ ಪರಂಪರೆಯ ದೆಸೆಯಿಂದ ಸತ್ತ ಮೇಲೆ ಸ್ವರ್ಗ ದೊರೆಯಬೇಕಾದರೆ ಮಗ ಪಿಂಡ ಪ್ರದಾನ ಮಾಡಬೇಕು. ಈ ಅಂಶಕ್ಕೂ ರಾಮೈತಾಳರು ಎರಡನೆಯ ಮದುವೆಗೆ ಕೊಡುವ ಸಮರ್ಥನೆಯನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬಹುದು. ಈ ಸಮಸ್ಯೆ ಚೋಮನಿಗಿಲ್ಲ. ಅವನಿಗೆ ಮುಂದೆ

ತನ್ನ ಮಕ್ಕಳು ಪಿಂಡ ಪ್ರಧಾನ ಮಾಡುತ್ತಾರೆಯೇ ಎನ್ನುವ ಸಮಸ್ಯೆ ಉದ್ಭವಿಸುವುದಿಲ್ಲ. ಇಲ್ಲಿಯ ಮಡಿ–ಮೈಲಿಗೆಯ ಪ್ರಶ್ನೆಯು ಭಿನ್ನವಾಗಿದೆ.

ವಸಾಹತುಶಾಹಿ ಅನುಭವದಲ್ಲಿ ಬಂದ ವೈಜ್ಞಾನಿಕ ತಿಳುವಳಿಕೆಯು ಕನ್ನಡದಲ್ಲಿಯೂ ಸುಧಾರಣೆಯನ್ನು ತರುವಲ್ಲಿ ಯಶಸ್ಸನ್ನು ಪಡೆಯಿತು ಎಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಆದರೆ ಅದರೊಂದಿಗಿನ ವಿಜ್ಞಾನದ ಬೆಳವಣಿಗೆಯು, ತಂತ್ರಜ್ಞಾನದ ಅರಿವು ಸ್ಥಳೀಯ ಸಂಸ್ಕೃತಿಯ ಮೇಲೆ ಬರುವ ಪ್ರಭಾವದ ಬಗೆಗಿನ ಆತಂಕವನ್ನು ಕನ್ನಡದ ಬರಹಗಾರರು ಕೆಲವು ಸಂದರ್ಭದಲ್ಲಿ ಅನುಮಾನದಲ್ಲಿಯೂ ನೋಡಿದರು. ವಸಾಹತುಶಾಹಿ ಆಳ್ವಿಕೆಯ ಫಲವಾಗಿ ಬಂದ ಆಧುನಿಕ ಇಂಗ್ಲೀಷ್ ಶಿಕ್ಷಣ ಪದ್ಧತಿಯು ರಾಜಕೀಯ ಪ್ರಜ್ಞೆಯನ್ನು ಮೂಡಿಸುವುದರ ಬಗೆಗೆ ಭಿನ್ನಾಭಿಪ್ರಾಯವಿಲ್ಲ. ಆಧುನಿಕತೆಯ ಪ್ರವೇಶದ ಸಂದರ್ಭದಲ್ಲಿ ಈ ರೀತಿಯ ಶಿಕ್ಷಣ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಬೇಕೆ ಬೇಡವೆ ಎಂಬ ಆತಂಕವು ಕಾರಂತರ ಕಾದಂಬರಿಯೊಂದರಲ್ಲಿ ಹೀಗೆ ಬರುತ್ತದೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಬ್ರಾಹ್ಮಣ ಐತಾಳರಿಗೂ – ಐಗಳಿಗೂ ನಡೆಯುವ ಮಾತುಕತೆ ಇದು.

"ಸರಕಾರಿ ಶಾಲೆಗೆ ಇಂಥ ಲೆಕ್ಕವೇನು ವಿಜಯದಶಮಿ ಅವರಿಗೆ ಇಲ್ಲವೆ?" ಸರಕಾರಕ್ಕೆ ಯಾವ ವಾರ ಯಾವ ತಿಥಿಯಾದರೂ ಮಕ್ಕಳು ಅಲ್ಲಿಗೆ ಬರಬಹುದು. 'ಏನು ನಿಮ್ಮ ಮಾಣಿಯನ್ನು ಅಲ್ಲಿಗೆ ಕಳುಹಿಸುವ ಯೋಚನೆಯೊ? ಅಲ್ಲಿ ಎಲ್ಲಾ ಸಕ್ಕೋಟು ಒಂದು ಗಾಣಿಗರ ಮಕ್ಕಳೂ, ಬ್ರಾಹ್ಮಣರ ಮಕ್ಕಳೂ ಸಾಲಾ ಸಾಲು ಬೆಂಚು ಮೇಲೆ ಒಟ್ಟಿಗೆ ಒರಗಿರುತ್ತವೆ'. (ಮರಳಿ ಮಣ್ಣಿಗೆ, ಪು.138).

"ಹೌದೇನು ಐಗಳೆ ಹಾಗೂ ಉಂಟೆ? ಈ ನಮ್ಮ ಮಾಣಿ ಅಲ್ಲಿಗೆ ಹೋದದ್ದಾದರೆ ವೈದಿಕರ ಮಕ್ಕಳೂ ಗಾಣಿಗರು ಒಂದೇ ಪಂಕ್ತಿಯೇ" ಸರಕಾರಿ ಲೆಕ್ಕವೇ ಹಾಗೆ. ನನ್ನ ಮಠದಲ್ಲಿ ನಾನು ಬ್ರಾಹ್ಮಣರನ್ನು ಬಿಟ್ಟು ಇನ್ನೊಂದು ಹುಳುವನ್ನು ಬರಲಿಕ್ಕೆ ಬಿಡಲಿಕ್ಕಿಲ್ಲ. "ಐಗಳೇ ನಮ್ಮ ಗಂಡುಗಳಿಗೆ ಒಂದು ಎರಡು ಪ್ರಸಂಗ ಕಲಿಸಿ ಎಂದು ನಮ್ಮ ಆಚೆ ಬೈಲಿನ ನಾಗಪ್ಪ ಸೆಟ್ಟರು ಹೇಳಿ ಕಳಿಸಿದರು. ಹೇಳುವವರು ಹೇಳಿಕೊಳ್ಳಲಿ, ನಾನು ಯಾವಾವ ಜಾತಿಯವರಿಗೆ ಪಾಠ ಹೇಳಲಾರೆ ಎಂದು ಬಿಟ್ಟೆ." (ಮರಳಿ ಮಣ್ಣಿಗೆ, ಪು.138).

"ಸರಕಾರಕ್ಕೆ ಅಂಥ ಯಾವ ರಿವಾಜು ಇಲ್ಲವೇನು?" "ಸರಕಾರದವರು ಇದೇ ರೀತಿ ಇನ್ನು ಹತ್ತು ವರ್ಷ ನಡೆಸಿದ್ದಾದರೆ, ನಾಳೆ ನೇಗಿಲು ನೊಗ ಹಿಡಿಯಲು ಕೆಳಗಿನವರು ಯಾರ‍್ಯಾರೂ ಬರಲಾರರು. ಆಮೇಲೆ ಬ್ರಾಹ್ಮಣರೇ ಹೂಡಲಿಕ್ಕೆ

ಹೊರಟರಾಯಿತು" (ಮರಳಿ ಮಣ್ಣಿಗೆ, ಪು.138). ಮೇಲೆ ಉಲ್ಲೇಖಿತವಾದ ಭಾಗದಲ್ಲಿ ಸೂಚಿತವಾದಂತೆ ಬ್ರಾಹ್ಮಣ ಜನಾಂಗವು ಜಮೀನನ ಕೆಲಸ ಮಾಡಲು ನಾಳೆಯ ದಿನ ಒಕ್ಕಲು ಮಕ್ಕಳು ಸಿಕ್ಕಲಾರರು ಎನ್ನುವ ಆತಂಕಕ್ಕೆ ಗುರಿಯಾಗಿತು. ಹಾಗೆಯೇ ಜಾತಿಯ ಪಾವಿತ್ರ್ಯವು ಆಧುನಿಕ ಶಿಕ್ಷಣದಿಂದ ಕಳಂಕಿತವಾಗುತ್ತದೆ ಎನ್ನುವ ಅನುಮಾನವೂ ಬ್ರಾಹ್ಮಣ ಸಮೂಹಕ್ಕೆ ಇತ್ತು. ಕಾರಂತರು ಇದನ್ನು ವಿವರಿಸುತ್ತಾರೆ.

ಆಗಿನ ಕನ್ನಡ ಸಾಹಿತ್ಯದಲ್ಲಿ ಹೀಗೆ ಸಂಸ್ಕೃತಿಯ ಕಡೆಗೆ ಮರಳುವ ಪ್ರಕ್ರಿಯೆಯಿದೆ. ಮನುಷ್ಯನ ವೈಯಕ್ತಿಕ ನಂಬಿಕೆಗಳು, ಹಳೆಯ ಸಾಂಸ್ಕೃತಿಕ ಮಾದರಿಗಳ ಹುಡುಕಾಟ, ಗ್ರಾಮ ಸಮಾಜದ ಬದಲಾವಣೆಯ ಪರಿಕಲ್ಪನೆಗಳ ಮೂಲಕವೂ ರಾಷ್ಟ್ರೀಯತೆಯನ್ನು ಕಾಣುವ ಪ್ರಯತ್ನವನ್ನು ಮಾಡಲಾಗಿದೆ. ರಾಷ್ಟ್ರೀಯತೆಯ ಕಲ್ಪನೆಯೇ ಮನುಷ್ಯನ ಹೃದಯದಲ್ಲಿ ಸ್ಥಾಪಿತವಾಗುವ ಒಂದು ಭಾವನಾತ್ಮಕ ಪ್ರಕ್ರಿಯೆಯಾಗಿರುವುದರಿಂದ ನವೋದಯವು ಅದನ್ನು ಹಿಡಿಯುವ ಪ್ರಯತ್ನ ಮಾಡಿದೆ. ರಾಷ್ಟ್ರೀಯ ಪರವಾದ ನಿಲುವು ಪು.ತಿ.ನ. ರಂಥವರಿಗೆ ಹಳೆಯ ಪುರಾಣಗಳನ್ನು ಭಿನ್ನವಾಗಿ ಗ್ರಹಿಸುವಂತೆ ಮಾಡಿದೆ. ಬ್ರಿಟೀಷ್ ರಾಜಸತ್ತೆಯ ವಿರುದ್ಧ ಬಂದಿರುವ ನಿಲುವು ಇದು. ಪು.ತಿ.ನ. ಅವರಿಗೆ ಕೃಷ್ಣನೇ ದೊಡ್ಡ ಶಕ್ತಿಯಾಗಿ ಕಾಣುತ್ತಾನೆ. ಹಿಂದೂ ಧರ್ಮದಲ್ಲಿನ ಕೆಲವು ಸೂಚನೆಗಳನ್ನು ಸಾಂಕೇತಿಕವಾಗಿ ಕಾಣುವ ಯತ್ನವಾಗಿಯೂ ಈ ರೀತಿಯ ಜಾಡು ಇರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಕಾರಂತರಲ್ಲಿ ಈ ಥರದ ಹುಡುಕಾಟವಿಲ್ಲದಿರುವುದು ಕುತೂಹಲದ ಸಂಗತಿ. ಕಾರಂತರ ಕಾದಂಬರಿಗಳು ಹೀಗಾಗಿಯೇ ವಸಾಹತು ಕಾಲಕ್ಕೆ ನೀಡಿದ ಮಹಾನ್ ಪ್ರತಿಕ್ರಿಯೆಗಳಾಗಿವೆ. ಅವರ ಕಾದಂಬರಿಗಳ ಕೇಂದ್ರ ನೆಲೆಗಳಾದ ಪ್ರಾದೇಶಿಕತೆ; ಕುಟುಂಬ; ಜಾತಿ ಎಲ್ಲವೂ ಬದಲಾಗುತ್ತವೆ. ಜಾತಿ; ಧರ್ಮ; ಕುಟುಂಬ – ಎಲ್ಲವೂ ಪರಿವರ್ತನೆಗೊಳ್ಳುತ್ತವೆ. ಈ ಪರಿವರ್ತನೆಗಳನ್ನು ಹೇಳುವುದು ಮಾತ್ರ ಉದ್ದೇಶವಾಗಿದೆ. ಕನ್ನಡದಲ್ಲಿ ಆಧುನಿಕ ಕಾದಂಬರಿಗಳು ಹುಟ್ಟುವಾಗ ಅವು ಆಧರಿಸಿಕೊಂಡ ತಾತ್ವಿಕ ನೆಲೆಗಳು ಏನಿವೆ – ಅವು ಕಾರಂತರ ಕಾದಂಬರಿಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಕಾದಂಬರಿಯ ವ್ಯಾಖ್ಯೆಗೆ ನಾವು ವಿಶ್ವಾತ್ಮಕವಾದಗಳನ್ನು ಆಶ್ರಯಿಸಿದರೂ ವಸಾಹತು ಕಾಲದ ಕಾದಂಬರಿಗಳ ಆಂತರಿಕ ತಾತ್ವಿಕತೆಗೆ ಬೇರೆ ಮುಖಗಳೂ ಇವೆ. ಅವು ಕಾರಂತರ ಬರಹಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕಾದಂಬರಿ ಪ್ರಕಾರಕ್ಕೆ ವಿಶೇಷ ಘನತೆಯನ್ನು ತಂದುಕೊಟ್ಟವರಲ್ಲಿ ಕಾರಂತರೂ ಒಬ್ಬರು. ಕಾದಂಬರಿಯೇ ಅವರಿಗೆ ಸಮಾಜಕ್ಕೆ ಪ್ರವೇಶಿಸುವ ಬಾಗಿಲು. ಅದುವೇ ಅವರಿಗೆ

ವಸಾಹತು ಕಾಲದ ಸ್ಥಿತ್ಯಂತರ ಬಗ್ಗೆ ಪ್ರತಿಕ್ರಿಯಿಸಲು ತೋರು ಗಂಬ. ಆಧುನಿಕತೆ; ಶಿಕ್ಷಣ; ರಾಜಕಾರಣ; ಪ್ರಾದೇಶಿಕತೆ; ಜೀವನ – ಇವು ಯಾವುವೂ ಕಾರಂತರಿಗೆ ಬೇರೆ ಬೇರೆಯಾದ ಭಾಗಗಳಲ್ಲ. ಮತ್ತು 'ಸುಂದರ ಜೀವನ', ಸುಂದರ ಭಾವನೆಗಳನ್ನು ಹೇಳುವುದು ಕಾರಂತರ ಕಾದಂಬರಿಗಳ ಉದ್ದೇಶವಲ್ಲ.

ವಸಾಹತುಶಾಹಿ ರಾಷ್ಟ್ರಗಳಲ್ಲಿ ಪ್ರಭುತ್ವದ ವ್ಯಾಖ್ಯಾನದಿಂದಲೇ ರಾಷ್ಟ್ರೀಯತೆಯ ವ್ಯಾಖ್ಯಾನವು ಪ್ರಾರಂಭವಾಗಿದೆ. ಈ ಅರ್ಥದಲ್ಲಿ ವಸಾಹತುಶಾಹಿ ಅನುಭವವು ರಾಷ್ಟ್ರೀಯತೆ ಮತ್ತು ಪ್ರಭುತ್ವವನ್ನು ನಿರ್ದಿಷ್ಟವಾದ ಅರ್ಥದಲ್ಲಿ ಕಾಣಲು ಪ್ರಯತ್ನಿಸಿದೆ. ಪ್ರಭುತ್ವವೆಂದರೆ ವಸಾಹತುಶಾಹಿ ಸಂಸ್ಕೃತಿಯೆಂತಲೂ, ರಾಷ್ಟ್ರೀಯತೆಯನ್ನು ದೇಶೀಯತೆಯ ಅನನ್ಯತೆಯೆಂತಲೂ ಪರಿಭಾವಿಸಿಕೊಂಡ ಈ ಅರ್ಥ ಪ್ರಕ್ರಿಯೆಗಳು ಒಂದು ನಿರ್ದಿಷ್ಟ ಮಾದರಿಯ ಹುಡುಕಾಟದ ಕೊಡುಗೆಯಾಗಿದೆ. ಪ್ರಭುತ್ವದ ಪ್ರಶ್ನೆಯು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಕೊಡುತ್ತಿರುತ್ತದೆ. ರಾಜಸತ್ತೆಯ ಪ್ರಭುತ್ವದಲ್ಲಿ ರಾಜನೇ ಅಂತಿಮ ಸ್ವರೂಪನಾಗಿದ್ದು, ಅವನನ್ನೆ ಪ್ರತ್ಯಕ್ಷ ದೇವರೆಂದು ಪರಿಭಾವಿಸಲಾಗುತ್ತದೆ. ಈ ರೀತಿಯ ಪರಿಕಲ್ಪನೆಗಳಲ್ಲಿ ರಾಜ್ಯದ ಒಡೆಯನಾದ ರಾಜನು ರಾಜ್ಯದ ನಿಯಮವನ್ನು ತನಗೆ ಬೇಕಾದಂತೆ ರೂಪಿಸುತ್ತಾನೆ. ಆದರೆ ಪ್ರಭುತ್ವದ ಕಲ್ಪನೆಯನ್ನು ಪ್ರಜಾಪ್ರಭುತ್ವದ ಮಾದರಿಯೊಳಗೆ ಸಾಮಾನ್ಯ ಪ್ರಜೆಯು ಪ್ರಭುವಾಗಬಲ್ಲ. ಈ ಅರ್ಥದಲ್ಲಿ ಪ್ರಭುತ್ವವು ಪ್ರಜೆಗಳ ಪ್ರತಿನಿಧಿಯ ಹಸ್ತದಲಿರ್ಲುತ್ತದೆ. ಪ್ರಭುತ್ವವನ್ನು ಇನ್ನೊಂದು ರೀತಿಯಿಂದಲೂ ವ್ಯಾಖ್ಯಾನಿಸಲು ಸಾಧ್ಯ. ಅದರ ಪ್ರಕಾರ ವಂಶಾಡಳಿತ ಪ್ರಭು ಸಂಹಿತೆಯದ್ದು ಒಂದು ವಂಶಕ್ಕೆ ಮೀಸಲಾಗಿದ್ದು ಅಧಿಕಾರವು ಒಬ್ಬನ ಕೈಯಲ್ಲಿರುತ್ತದೆ.

ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕೌಟುಂಬಿಕ ರಾಜಕಾರಣದ ಎರಡು ಮುಖಗಳಿವೆ: ಒಂದನೆಯದಾಗಿ ರಾಮೈತಾಳರ ವಿರುದ್ಧ ನಿಲ್ಲುವ ಸರಸೋತಿ; ಪಾರೋತಿಯರ ಪ್ರಪಂಚ. ರಾಮೈತಾಳರಿಗೆ ಜಮೀನಿನ ವಿಷಯ ಗೊತ್ತಿಲ್ಲ. ಅವರಿಗೆ ಗೊತ್ತಿರುವುದು ಪೌರೋಹಿತ್ಯ ಒಂದು ಮಾತ್ರ. ಅವರ ವಿರುದ್ಧವಾಗಿ ಭೂಮಿಯನ್ನು ಬಗ್ಗಿಸುವುದು; ಅದಕ್ಕೆ ಬೇಕಾದ್ದನ್ನು ಒದಗಿಸುವುದು ತಿಳಿದಿರುವುದು ಸರಸೋತಿ; ಪಾರೋತಿಯಂಥವರಿಗೆ ಮಾತ್ರ. ಕೌಟುಂಬಿಕ ರಾಜಕಾರಣದಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ ಪ್ರಕ್ರಿಯೆಗಳು ಬೇರೆಯಾಗುತ್ತವೆ. ಮೇಲು ನೋಟಕ್ಕೆ ಪುರುಷನೇ ಕುಟುಂಬವನ್ನು ಆಳುತ್ತಾನೆಂದು ನಾವು ಭಾವಿಸಿದರೂ ಅಂತರಾಳದಲ್ಲಿ ಸ್ತ್ರೀಯ ಅಧಿಕಾರಕ್ಕೆ ಬೇರೆ ಬೇರೆ ಚಹರೆಗಳಿವೆ. ಇದು ಒಂದು ಮುಖವಾದರೆ ಪ್ರಭುತ್ವದ ಬೇರೆ ಮುಖಗಳೂ ಕಾರಂತರ ಕಾದಂಬರಿಗಳಲ್ಲಿ ವ್ಯಕ್ತಗೊಂಡಿವೆ. ಕಾರಂತರ

ಬಹುತೇಕ ಕಾದಂಬರಿಗಳಲ್ಲಿ ವ್ಯಕ್ತವಾಗುವುದು ಪ್ರಾದೇಶಿಕ ರಾಜಕಾರಣದ ವಿಭಿನ್ನ ರೂಪಗಳು. ಪ್ರಾದೇಶಿಕ ರಾಜಕಾರಣದಲ್ಲಿ ಬೇರೆ ಬೇರೆ ನಮೂನೆಗಳಿವೆ. ಅದು ರಾಷ್ಟ್ರರಾಜಕಾರಣಕ್ಕಿಂತ ಭಿನ್ನವಾದುದು.

ಈ ಎಲ್ಲಾ ಸಂಗತಿಯಲ್ಲಿಯೂ ಕಂಡು ಬರುವ ಒಂದು ಪ್ರಾತಿನಿಧಿಕ ಅಂಶವೆಂದರೆ ಪ್ರಭುತ್ವ ಬೇರೆ ಬೇರೆ ಅಧಿಕಾರಕ್ಕೆ ಸಂವಾದಿಯಾದದ್ದು. ಈ ಕಾರಣದಿಂದ ಪ್ರಭುತ್ವವನ್ನು ಆಳುವವನ ಮತ್ತು ಆಳಿಸಿಕೊಳ್ಳುವವನ ನಡುವಣ ಸಂಬಂಧದ ವ್ಯಾಖ್ಯಾನವೆಂದು ಕರೆಯಲು ಸಾಧ್ಯ.

ವಾಸ್ತವವಾಗಿ ಬರಹಗಳಲ್ಲಿ ಬರುವ ಸಮಸ್ಯೆಯು ಒಂದಲ್ಲ ಒಂದು ರೀತಿಯಲ್ಲಿ ವಿಶ್ವಾತ್ಮಕವೂ ಆಗಿರುತ್ತದೆ. ಕಾದಂಬರಿಯಲ್ಲಿ ಯಾವುದನ್ನು ಮುಖ್ಯವಾದ ಆಶಯವನ್ನಾಗಿ ಮಾಡಲಾಗಿದೆ ಎನ್ನುವುದು ಮಾತ್ರವೇ ನಮ್ಮ ಮುಂದಿರುವ ಪ್ರಶ್ನೆ. ಕಾದಂಬರಿಯಲ್ಲಿ ತಾತ್ವಿಕತೆಯನ್ನು ಮುಂದೆ ತರಲಾಗಿದೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ನಿಜವಾದ ಮಾನವೀಯತೆ ಮತ್ತು ಅದರ ಚಹರೆಗಳು ಮುಖ್ಯವಾಗಿದೆ. ನೀತಿ ಮತ್ತು ಅದರ ಸ್ವರೂಪವು ಬರಹದಲ್ಲಿ ಅಗತ್ಯಕ್ಕೆ ತಕ್ಕ ಹಾಗೆ ಮಾತ್ರವೇ ಬರುತ್ತದೆ. ಅನೀತಿಯನ್ನು ಕೂಡಾ ಲೇಖಕನು ತನಗೆ ಅರ್ಥವಾಗುವ ರೀತಿಯಲ್ಲಿ ನಿರೂಪಿಸುತ್ತಾನೆ. ಆದರೆ ಗಮನಿಸಬೇಕಾದ ಅಂಶವೆಂದರೆ ವಿಮರ್ಶೆಯು ಕೂಡಾ ನೈತಿಕವಾಗಿಯೇ ಸರಿಯಿರಬೇಕಾಗುತ್ತದೆ. ಅದಕ್ಕೆ ಒಂದು ತಳಹದಿಯು ಬೇಕಾಗುತ್ತದೆ. ಈ ಅರ್ಥದಲ್ಲಿ ವಿಮರ್ಶೆಯು ಕೂಡಾ ಒಂದು ಸಂವಾದ. ಅದರಲ್ಲಿಯೂ ಒಂದು ಕಾರಣವು ಇರಬೇಕಾಗುತ್ತದೆ. ಆದ್ದರಿಂದ ಇಲ್ಲಿ ನೋಡಬೇಕಾದ ಅಂಶವೆಂದರೆ ಅನೇಕವು ನಮಗೆ ಬಹಳ ಮುಖ್ಯವಾಗುತ್ತದೆ. ವಾಸ್ತವವು ಅತ್ಯಂತ ಶಕ್ತಿಯುತವಾದುದು. ಅದರಲ್ಲಿ ಒಂದು ಸನ್ನಿವೇಶವೂ ಅತ್ಯಂತ ಮುಖ್ಯವಾಗುತ್ತದೆ. ಸಾಹಿತ್ಯ ಮತ್ತು ಅದರ ಕೆಲಸವು ಜನರೊಂದಿಗೆ ಸಂವಾದವನ್ನು ಮಾಡುವುದು ಮಾತ್ರ. ಈ ಅರ್ಥದಲ್ಲಿ ಸಾಹಿತ್ಯ ಮತ್ತು ಅದರ ಚರ್ಚೆಯು ಕೆಲವು ಪರಿಕಲ್ಪನೆಯನ್ನು ಹೊಂದಿರುತ್ತವೆ. ಅವುಗಳು ಕೆಲವು ರಚನೆಗಳನ್ನು ಮಾತ್ರವೇ ನೋಡುತ್ತವೆ. ಸಾಹಿತ್ಯ ವಿಮರ್ಶೆಯಲ್ಲಿ ಲೇಖಕ ಮತ್ತು ಅವನ ನಿಲುವುಗಳು ಬಹಳ ಮುಖ್ಯವಾಗುತ್ತದೆಯೇ ಎಂದು ಕೇಳುವವರು ಬಹಳ ಜನರು ಇದ್ದಾರೆ. ಲೇಖಕ ಮತ್ತು ವಿಮರ್ಶಕರ ನಡುವಣ ಸಂವಾದವೂ ಮುಖ್ಯವಾಗುತ್ತದೆ. ರಚನೆಗಳು ಕೆಲವು ಉಪಯೋಗವನ್ನು ಕೊಡುತ್ತವೆ. ವಿಮರ್ಶೆಯೆಂದರೆ ಅದರ ಲೇಖಕ ಮತ್ತು ವಿಮರ್ಶಕರ ನಡುವೆ ನಡೆಯುವ ಸ್ಪರ್ಧೆಯು ಅಲ್ಲ. ಕಾಲಮಾನ ಮತ್ತು ಆಶಯಗಳಿಗೂ ಒಂದು ಸಂಬಂಧವಿದೆ ಎಂದು ಭಾವಿಸಬೇಕಾಗುತ್ತದೆ.

ಕೃತಿಯು ನೀಡುವ ಸೂಚನೆಗಳು ಮತ್ತು ಅದರ ಚಹರೆಗಳು ಬಹಳ ಮುಖ್ಯ. ಅದರ ಜೊತೆಗೆ ಸಂಜ್ಞೆ ಮತ್ತು ಅದರ ಅರ್ಥವೂ ಸಾಹಿತ್ಯದಲ್ಲಿ ಬಹಳ ಮುಖ್ಯವಾಗುತ್ತದೆ. ಏಕಾಕಿತನ ಮತ್ತು ಅದರ ಸ್ವರೂಪವನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ಏಕಾಕಿತನವು ಒಂದು ಸಮಸ್ಯೆ. ಅದನ್ನು ಅನುಭವಿಸಿಕೊಳ್ಳುವುದು ಅತ್ಯಂತ ಕಷ್ಟ. ಹಾಗೆಂದು ಏಕಾಕಿತನವನ್ನು ಯಾರಾದರೂ ತಮಗೆ ಬೇಕಾಗಿದೆ ಎಂದು ಆಯ್ಕೆ ಮಾಡುವುದಿಲ್ಲ. ಅದರಲ್ಲಿ ಬರೀ ವೈಯಕ್ತಿಕ ಆಯ್ಕೆ ಮತ್ತು ಅದರ ಪರಿಣಾಮವು ಇಲ್ಲ. ಅದು ಘಟಿಸಿದೆ. ಹಾಗೆಯೇ ಜೀವನದ ಎಲ್ಲಾ ಅಂಶಗಳು ಕೃತಿಯಲ್ಲಿ ಬರುತ್ತದೆ ಎಂದು ಹೇಳಲು ಆಗುವುದಿಲ್ಲ. ಆದರೆ ಕೃತಿಯ ಮೂಲಕ ಜೀವನವನ್ನು ಅರ್ಥ ಮಾಡಲು ಸಾಧ್ಯವಾಗುತ್ತದೆ. ವಾಸ್ತವವಾಗಿ ಪಠ್ಯ ಎನ್ನುವುದು ಮೂಲಭೂತವಾಗಿ ನಮ್ಮ ಅನುಭವ ಮತ್ತು ಜೀವನವನ್ನು ಅರ್ಥ ಮಾಡಿಕೊಳ್ಳಲು ಇರುವ ಅಂಶ. ಜೀವನ ಮತ್ತು ಅದರ ಸಾಧ್ಯತೆಯನ್ನು ನಾವು ಬರಹದಲ್ಲಿ ಹುಡುಕುತ್ತೇವೆ. ಜೀವನವನ್ನು ಮತ್ತು ಅದರ ಸ್ವರೂಪವನ್ನು ನಾವು ಬರೀ ಸಾಹಿತ್ಯದಲ್ಲಿ ಮಾತ್ರವೇ ನೋಡುತ್ತೇವೆ ಎಂದು ಇದರ ಅರ್ಥವಲ್ಲ. ಲೇಖಕನು ತನಗೆ ಕಂಡದ್ದನ್ನು ಹೇಳುತ್ತಾನೆ. ಆದರೆ ಬರಹವನ್ನು ನಾವು ಸ್ವಂತದ ಚಿತ್ರವೆಂದು ಹೇಳಬೇಕಾದ ಅಗತ್ಯವು ಇಲ್ಲ. ನಮ್ಮ ಮನೋಸ್ಥಿತಿಗೆ ಮತ್ತು ಮನೋಭಾವಕ್ಕೆ ಸರಿಯಾಗುವಂತೆ ನಾವು ಬರೆಯುತ್ತೇವೆ. ಬರಹವು ಈ ದೃಷ್ಟಿಯಲ್ಲಿ ನಮ್ಮ ಅಗತ್ಯ. ಅದು ಒಂದು ಬಗೆಯಲ್ಲಿ ನಮ್ಮ ಚಟುವಟಿಕೆ.

ಬರವಣಿಗೆಯಲ್ಲಿ ನಾವು ಬೇರೆ ಬೇರೆ ಸೂಚನೆಗಳನ್ನು ಬಳಸುತ್ತೇವೆ. ಹಾಗೆ ನೋಡುವುದಿದ್ದರೆ ಸಾಹಿತ್ಯವೇ ಆಗಲಿ, ಇತರ ಬರಹಗಳೇ ಆಗಲಿ ಅವುಗಳು ಒಂದು ರೀತಿಯಲ್ಲಿ ಒಂದು ಸೂಚನೆಗಳು. ಯಾವುದೇ ಸೂಚನೆಗಳು ಮತ್ತು ಅವುಗಳ ಕೆಲಸವು ಒಂದು ಬಗೆಯಲ್ಲಿ ಇರುತ್ತವೆ. ಅವುಗಳಿಗೆ ಸಾಮಾಜಿಕ ಅಸ್ತಿತ್ವವು ಇರುತ್ತದೆ. ವಾಸ್ತವವಾಗಿ ಒಬ್ಬ ಲೇಖಕನು ಅನೇಕವನ್ನು ಬರೆಯುತ್ತಾನೆ ಎಂದಾದರೆ ಅವನ ಬರಹವೆಲ್ಲವೂ ಒಂದೇ ರೀತಿಯಲ್ಲಿ ಇರುತ್ತದೆ ಎಂದು ಅರ್ಥವಲ್ಲ. ಅವನು ಬೇರೆ ಬೇರೆ ಸಂವೇದನೆಯನ್ನು ಒಳಗೊಂಡಿರುತ್ತಾನೆ ಎಂದು ಮಾತ್ರವೇ ಅರ್ಥ. ಬರಹವೂ ಒಂದು ಬಗೆಯಲ್ಲಿ ಸುಖವೂ ಆಗುತ್ತದೆ. ಅದರೆ ಅದರಲ್ಲಿ ಅವನು ಮನಸ್ಸು ಮತ್ತು ಅದರ ಬಿಡುಗಡೆಯ ಅನುಭವವನ್ನು ಪಡೆಯುತ್ತಾನೆ. "ಸರಸಮ್ಮನನ್ನು ನಿಜವಾದ ವ್ಯಕ್ತಿಯನ್ನಾಗಿ ಮಾಡಿದ ನಿದರ್ಶನ ರಾಜಪುತಾನದಲ್ಲಿ ಇದೇ ವರ್ಷ ನಡೆದುವರಿಂದ, ನಾವು ಆಶ್ಚರ್ಯಪಡದಂತಾಗಿದೆ. ಪತಿಯ ಬಗ್ಗೆ ಗಂಡಸರು ಹೆಂಗಸರ ಮೇಲೆ ಹೊರಿಸಿದ ಭಾವಾವೇಶಗಳ ಹೊರೆ ಯಾವ

ಭೀಕರ ರೂಪವನ್ನು ತಾಳೀತು ಎಂಬುದರ ನಿದರ್ಶನ ರಾಜಪುತಾನದ ರೂಪ ಕನ್ನಾರಳ ಸತಿ ಧ್ವಂಸ ಕಥಾನಕ ತಿಳಿಸುವುದಿಲ್ಲವೇ?

ಪುರುಷ ಪ್ರಾಧಾನ ಸಮಾಜದಲ್ಲಿ "ಜೀವನದ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀಯ ಮನಸ್ಸು ಮತ್ತು ಶರೀರಗಳೆರಡೂ ತನ್ನ ಸೊತ್ತು; ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ" ಎಂಬ ಭಾವನೆ ಜಗತ್ತಿನ ಹಲವು ದೇಶ ಮತ್ತು ಮತಗಳು ಸಾರುತ್ತ ಬಂದಿವೆ. ಪ್ರಾಣಿಜೀವನ ಪರಿಶೀಲಕರು ಇಂಥ ಕಲ್ಪನೆ ಎಷ್ಟು ಅಸಾಧು ಎಂದು ನಮಗೆ ಸುಲಭದಲ್ಲಿ ತಿಳಿಸಿಯಾರು, ಆಧುನಿಕ ಮನಃಶಾಸ್ತ್ರಜ್ಞರು ಅವನ್ನು ವಿವರಿಸಬಲ್ಲರು. ಆದರೆ ಯಾರ ಸಂಸ್ಕೃತಿಯೇ ಆಗಲಿ, ತನ್ನ ಜನಗಳ ಮೇಲೆ ವಿಧಿಸಿದ ವರ್ತನೆಗಳ ಬೆನ್ನಿಗೆ ಪಾಪ-ಪುಣ್ಯ, ನ್ಯಾಯ-ನೀತಿ, ಸ್ವರ್ಗ-ನರಕಗಳ ನಂಬಿಕೆಗಳನ್ನು ಬೆಸೆಯುತ್ತ ಬಂದಿರುವುದರಿಂದ, ಅದರಿಂದಾಗಿ ಅಸಂಖ್ಯರು ಮನೋದಾಸ್ಯದಿಂದ ಬಂಧಿತರಾಗಿರುವುದರಿಂದ ತಮ್ಮ ನಾಡಿನ ಪರಂಪರೆ ಸಾರುತ್ತಿರುವ 'ನೀತಿ'ಗಳನ್ನು ಪ್ರಶ್ನಿಸುವ ಧೈರ್ಯವನ್ನು ನಮ್ಮವರು ತಳೆದಿಲ್ಲ; ಆ ಸಾಹಸಕ್ಕೆ ಹೋಗಿಲ್ಲ. ಅಲ್ಲದೆ ಈ ಮನುಷ್ಯ ವರ್ಗವೇ ಸಾಕಷ್ಟು ಕಪಟ ಜೀವನ ನಡೆಯಿಸುತ್ತಿರುವ ಒಂದು ಜಾತಿಯಾಗಿದೆ. ಅದು ಪರರ ವಿಚಾರದಲ್ಲಿ ಯಾವೆಲ್ಲ ನಿಯತ್ತು, ಶಿಕ್ಷೆ, ದೋಷಾರೋಪಣೆ ಮಾಡಲು ಸಿದ್ಧವೋ, ತನ್ನ ವಿಷಯ ಬಂದಾಗ, ತನ್ನನ್ನು ತಾನು ತೂಗಬೇಕಾಗಿ ಬಂದಾಗ, ತನ್ನ ನಡೆನುಡಿಗಳನ್ನು ತಾನು ಪ್ರಶ್ನಿಸಲೇಬೇಕಾದಾಗ ಆ ಬಗ್ಗೆ ಸಂಕೋಚವೇ ಇಲ್ಲದಂತೆ ವರ್ತಿಸುತ್ತದೆ.

ಅಂಥ ಮನಸ್ಸಿನ ಗಂಡಸು ಮತ್ತು ಹೆಂಗಸರ ನಡುವಣ ದಾಂಪತ್ಯದ ಚಂಚಲ ಸಂಬಂಧಗಳನ್ನು ಕುರಿತು ಈ ಕಾದಂಬರಿ ಚಿತ್ರಿಸಲು ಹೊರಟಿದೆ.

1-4-1988 (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ; ಸರಸಮ್ಮನ ಸಮಾಧಿ ಕಾದಂಬರಿ ; ಮುನ್ನುಡಿ ಭಾಗ)

ಕಾರಂತರ ಕಾದಂಬರಿಗಳು ಹೇಳುವ ತಲ್ಲಣಗಳು ಭಿನ್ನವಾಗುತ್ತದೆ. ಅಂದರೆ ಅದರ ಅರ್ಥವು ಭಿನ್ನವಾಗುತ್ತದೆ. ಕಾರಂತರು ಬದಲಾಗುತ್ತಿರುವ ವೈಚಾರಿಕ ಆಕೃತಿಯನ್ನು ಹೇಳುತ್ತಾರೆ. ವಾಸ್ತವವಾಗಿ ಯಾವುದನ್ನು ನಾವು ಈವತ್ತು ವಸಾಹತು ಆದ ಸ್ಥಿತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ಈಗ ವ್ಯಾಖ್ಯಾನಿಸುವುದು ಅತ್ಯಂತ ಕಷ್ಟವಾಗಿದೆ. ವಸಾಹತು ಎನ್ನುವುದು ಬೇರೆ ಬೇರೆ ರೀತಿಯ ಸಂಕಥನಗಳು ಆಗುತ್ತವೆ. ಅದು ಬೇರೆ ವಿಚಾರ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ವಿಚಾರಗಳು ಇವೆ. ಅದನ್ನು ಹೀಗೆ ಹೇಳಬಹುದು- ಒಂದು ಪುಸ್ತಕವು ಪ್ರಕಟವಾದರೆ

ಅದರ ನೂರಾರು ಪ್ರತಿಗಳು ಯಾರಿಗೋ ತಲುಪುತ್ತವೆ. ಮತ್ತು ಅವು ಒಂದು ಸಂಸ್ಕೃತಿಯನ್ನು ಹುಟ್ಟುಹಾಕುತ್ತವೆ. ಸಿನಿಮಾ ಕೂಡಾ ಜನರ ಮೇಲೆ ಪ್ರಭಾವವನ್ನು ಬೀರುತ್ತದೆ. ಅದರ ಪರಿಣಾಮವು ಒಂದು ಬಗೆಯದು ಅಲ್ಲ. ಅದರಲ್ಲಿ ಬೇರೆ ಸಂಗತಿಗಳೂ ಜೊತೆಗೆ ಸೇರುತ್ತವೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಯಾವುದೇ ಪುಸ್ತಕಗಳು ಮತ್ತು ಅವುಗಳ ಕುರಿತಾದ ಪ್ರತಿಕ್ರಿಯೆಗಳು ಮೂಲಭೂತವಾಗಿ ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ್ದೂ ಆಗಿದೆ. ಅದು ಅಗತ್ಯವೂ ಆಗುತ್ತದೆ. ಪುಸ್ತಕಗಳು ಮತ್ತು ಅವುಗಳ ಕುರಿತಾದ ಪ್ರತಿಕ್ರಿಯೆಗಳು ಹಾಗೂ ಅದರ ಅನುವಾದಗಳು ಮುಖ್ಯವಾದ ಸೂಚನೆಯನ್ನು ಕೊಡುತ್ತದೆ. ಅನುವಾದಗಳು ಮೂಲವನ್ನು ಅನುಕರಿಸುತ್ತವೆ. ಅನುಕರಣೆ ಎನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅನುಕರಣೆ ಎನ್ನುವುದು ಅತ್ಯಂತ ಸಾಮಾನ್ಯವಾದ ಪದದ ಹಾಗೆ ಕಾಣಿಸುತ್ತದೆ. ಆದರೆ ವಾಸ್ತವವಾಗಿ ಅನುಕರಣೆಯನ್ನು ಮಾಡುವ ಮಗುವು ಕೂಡಾ ಅನೇಕವನ್ನು ಕಲಿಯುತ್ತದೆ. ಈ ಅರ್ಥದಲ್ಲಿ ಇದಕ್ಕೆ ಹೆಚ್ಚು ಮಹತ್ವವು ಇದೆ. ಅನುಕರಣೆಯ ಮೂಲಕ ಮಗುವು ಹೆಚ್ಚು ಕಲಿಯುತ್ತದೆ. ಬರಹವೂ ಹೊರಗೆ ಇರುವುದನ್ನು ಅನುಕರಿಸುತ್ತದೆ. ಅದರ ಅಗತ್ಯವೇ ಅದು. ಅನುಕರಣೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ಆದರೆ ಅದರಲ್ಲಿ ಕೆಲವು ಆಯ್ಕೆಗಳು ಇರುತ್ತವೆ. ಬರಹವೇ ಉದ್ದೇಶ ಪೂರ್ವಕವಾದ ಒಂದು ಚಟುವಟಿಕೆಯೂ ಆಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಬರಹವು ಒಂದು ಕಾರಣದಿಂದ ಹುಟ್ಟಿರುತ್ತದೆ. ಆದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ವೈಯಕ್ತಿಕ ಆಯ್ಕೆಗಳು ಹೆಚ್ಚು ಮುಖ್ಯವಾಗುತ್ತದೆ. ಬರಹವು ನಮ್ಮ ಆಸಕ್ತಿಯನ್ನು ಹೇಳುತ್ತದೆ. ಬರೆಯುವುದು ವೈಯಕ್ತಿಕವಾದ ನಿಲುವು ಹೌದು. ಅದರಲ್ಲಿ ನಾವು ಯಾವುದನ್ನು ಹೇಳಬೇಕೆಂದುಕೊಂಡಿದ್ದೇವೆಯೋ ಅದರ ನಿಲುವು ಬಹಳ ಮುಖ್ಯವಾಗುತ್ತದೆ. ಬರಹವು ಒಂದು ಸನ್ನಿವೇಶ ಮತ್ತು ಅದರ ಸಂಗತಿಯನ್ನು ಹೇಳುತ್ತದೆ. ಬರಹವು ವ್ಯಕ್ತಿಯ ಕಾರಣವನ್ನು ಹೇಳುತ್ತದೆ. ಮತ್ತು ಅದರಲ್ಲಿ ಖಾಸಗಿಯಾದ ನೆಲೆಯೂ ಇರುತ್ತದೆ. ಅದರಲ್ಲಿ ಗುರಿಯೂ ಬಹಳ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ಅಗತ್ಯಗಳ ಬಹಳ ಪ್ರಶ್ನೆಯು ಅತ್ಯಂತ ಮುಖ್ಯವಾಗುತ್ತದೆ. ಅದರಲ್ಲಿ ಬಹಳ ಮುಖ್ಯವಾಗುವ ಸಂಗತಿಯೆಂದರೆ ವ್ಯಕ್ತಿಯ ಅಭಿರುಚಿಯು ಮುಖ್ಯವಾಗುತ್ತದೆ. ನಾವು ನೋಡಬೇಕಾದ ಅಂಶವೆಂದರೆ ಯಾವುದು ಅವನನ್ನು ಬರೆಯುವ ಹಾಗೆ ಮಾಡುತ್ತದೆ ಎನ್ನುವುದು ಮಾತ್ರವೇ. "ಬದುಕು ಬೆಳೆಯುವುದೂ, ಮನಸ್ಸು ವಿಸ್ತರಿಸುವುದೂ ನಮ್ಮ ಆವರಣದಲ್ಲಿ ಕಾಣಿಸುವ ವಿಸ್ಮಯಗಳ, ಅದ್ಭುತಗಳ ಪ್ರಚೋದನೆಯಿಂದ. ನಿಸರ್ಗದೊಡನೆ ನಲಿದಾಡುತ್ತ ತನಗೆ ಹೊಸದೆನಿಸುವ, ಆಕರ್ಷಕವಾಗಿ ಕಾಣಿಸುವ ಪ್ರತಿ ವಸ್ತುವನ್ನೂ,

ವಿದ್ಯಮಾನಗಳನ್ನೂ ಶೈಶವ ಮತ್ತು ಬಾಲ್ಯಗಳಲ್ಲಿ ನಾವು ಕುತೂಹಲದಿಂದಲೇ ನೋಡುತ್ತೇವೆ. ಅನೇಕ ವಿಷಯಗಳಲ್ಲಿ ಏನು? ಹೇಗೆ? ಏಕೆ? ಎಂಬ ಪ್ರಶ್ನೆಗಳು ನಮ್ಮಲ್ಲಿ ಆಗಾಗ ಮೊಳಗಿದರೂ, ನಮ್ಮ ಹಿರಿಯರನ್ನು ಪ್ರಶ್ನಿಸಿದ್ದಾದರೆ ಅಂಥ ಪ್ರಶ್ನೆಗಳಿಗೆ ಉತ್ತರ ದೊರೆಯುವುದಿಲ್ಲ. (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ; ಸ್ಮೃತಿಪಟಲದಿಂದ ಆತ್ಮ ಕಥನ ; ನಿಸರ್ಗ ಮತ್ತು ನಾನು ; ಪು.ಸಂ.27)" ಕಾರಂತರ ಈ ಮಾತು ಸತ್ಯ.

ವ್ಯಕ್ತಿ, ಚರಿತ್ರೆ, ನೀತಿ, ರಾಜಕಾರಣ, ಸೌಂದರ್ಯಶಾಸ್ತ್ರಗಳು ಜೊತೆಗೆ ಹೋಗುತ್ತವೆ. ಇದರ ಜೊತೆಗೆ ಅವರು ಜೀವನ ಮತ್ತು ಅದರ ಮೌಲ್ಯಗಳನ್ನು ಹೇಳುತ್ತವೆ. ಒಂದು ಆದರ್ಶವೂ ಇದೆ. ಅದು ನಮಗೆ ಅನೇಕ ತಿಳುವಳಿಕೆಯನ್ನು ಕೊಟ್ಟಿವೆ. ಇಲ್ಲಿ ಚರಿತ್ರೆಯ ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಚರಿತ್ರೆಯು ಆಗಿದೆ ಮತ್ತು ಅದರಲ್ಲಿ ಅನೇಕ ಘಟನೆಗಳು ಸಂಭವಿಸಿವೆ. ಆದರೆ ಅದನ್ನು ನಾವು ಕೇವಲ ನಮ್ಮ ಪ್ರಮೇಯದ ಮೂಲಕವೇ ನೋಡಲು ಬರುವುದು ಇಲ್ಲ. ಅದು ಹೇಳಿಕೆಯು ಆಗಿಲ್ಲ. ಆದ್ದರಿಂದ ಅದನ್ನು ಕೇವಲ ಪ್ರಮೇಯದ ಮೂಲಕವೇ ಹೇಳುವುದು ಅಸಾಧ್ಯ. ನಮ್ಮ ವರ್ತಮಾನದ ಜ್ಞಾನವು ಮಾತ್ರವೇ ಸಾಕಾಗುವುದು ಇಲ್ಲ. ಅದರಲ್ಲಿ ಭಿನ್ನತೆಗಳು ಇರುವುದು ಮೂಲಭೂತವಾಗಿ ನಮ್ಮ ತಾತ್ವಿಕತೆಯದು. ಆದರೆ ಇಲ್ಲಿ ಉದ್ಭವಿಸುವ ಕೆಲವು ವಿಚಾರಗಳನ್ನು ಹೇಳುವುದು ಒಳ್ಳೆಯದು. ಜಾಗತಿಕ ಚರಿತ್ರೆ ಮತ್ತು ಅದರ ಪರಿಣಾಮಗಳು ಎಲ್ಲಾ ಕಡೆಗೆ ಆಗುತ್ತದೆ. ಆದರೆ ಇಲ್ಲಿ ಮತ್ತೆ ಮತ್ತೆ ನಾವು ಕೆಲವು ಸಂಗತಿಗಳನ್ನು ನೋಡಬೇಕಾಗುತ್ತದೆ. ಆದರೆ ಇಲ್ಲಿ ಜಾಗತಿಕತೆ ಮತ್ತು ಅದರ ವೈರುದ್ಧ್ಯಗಳು ಸಾಮಾನ್ಯವಾದ ಬಗೆಯದು ಅಲ್ಲ. ಅದರಲ್ಲಿ ಬೇರೆ ಬೇರೆ ರೂಪಗಳು ಇರುತ್ತವೆ. ಆದರೆ ನಾವು ಇದನ್ನು ಒಂದು ರೂಪವೆಂದು ಮಾತ್ರವೇ ಬಗೆದರೆ ಕಷ್ಟವಾಗುತ್ತದೆ. ವಾಸ್ತವವಾಗಿ ಯಾವುದನ್ನೇ ನೋಡಿದರೂ ಅದನ್ನು ಸಂವಾದಿಯೆಂದು ಹೇಳುವ ಅಭ್ಯಾಸವು ಇತ್ತೀಚೆಗೆ ಹೆಚ್ಚಾಗಿದೆ. ಆಧುನಿಕತೆಯನ್ನು ಹೊಗಳುವವರ ಸಮಸ್ಯೆಗಳು ಕೂಡಾ ಹೆಚ್ಚಾಗಿದೆ. ವಾಸ್ತವವಾಗಿ ನಾವು ಈವತ್ತು ಚರಿತ್ರೆಯೆಂದು ಹೇಳುತ್ತಾ ಒಂದು ಮಿಥ್ಯೆಯನ್ನು ಮಾತ್ರವೇ ಸಂಭ್ರಮಿಸುತ್ತಿದ್ದೇವೆ. ಅದರ ಅರ್ಥವೂ ಭಿನ್ನವಾಗಿದೆ. ಹಾಗೂ ಪ್ರಾಚೀನ ಮತ್ತು ಮಧ್ಯಕಾಲೀನ, ಆಧುನಿಕವೆಂದು ಕರೆಯುವಾಗ ನಾವು ಬೇರೆ ಬೇರೆ ಪರಿಕರವನ್ನು ಬಳಸಿಕೊಂಡಿದ್ದೇವೆ. ಆಧುನಿಕವೆಂದರೆ ಪುನರುಜ್ಜೀವನ ಮತ್ತು ಅದರ ಪರಿಣಾಮಗಳನ್ನು ಮಾತ್ರವೇ ಹೇಳುತ್ತೇವೆ. ಅಂದರೆ ಆಧುನಿಕವೆನ್ನುವುದಕ್ಕೆ ನಮ್ಮಲ್ಲಿ ಪರಿಕರವು ಯಾವುದು

ಬದಲಾಗಿದೆಯೋ ಅದು ಮಾತ್ರವೇ ನಮಗೆ ಮುಖ್ಯವಾಗಬೇಕಾಯಿತು. ಮಧ್ಯಯುಗೀನ ಕಾಲದಲ್ಲಿ ನಾಗರಿಕತೆ ಮತ್ತು ಅದರ ತಾಂತ್ರಿಕತೆಯು ಹೆಚ್ಚು ಮುಖ್ಯವಾಯಿತು. ವಾಸ್ತವವಾಗಿ ಮಧ್ಯಯುಗೀನ ಕಾಲದಲ್ಲಿ ತಾಂತ್ರಿಕತೆಯು ಹೆಚ್ಚು ಮುಖ್ಯವಾಯಿತು. ಚರಿತ್ರೆಯ ವರ್ಗೀಕರಣದಲ್ಲಿ ಪರಿಕಲ್ಪನೆಗಳು ಹೆಚ್ಚು ಕೆಲಸವನ್ನು ಮಾಡಿವೆ. ಕ್ರಿಸ್ತ ಪೂರ್ವ ಮತ್ತು ಕ್ರಿಸ್ತಶಕವೆಂದು ಹೇಳುವಾಗ ನಮಗೆ ಕ್ರಿಸ್ತ ಮತ್ತು ಅವನ ಹುಟ್ಟು ಮಾತ್ರವೇ ಮುಖ್ಯವಾಯಿತು. ಈ ಮಾನದಂಡವನ್ನು ವಾಸ್ತವವಾಗಿ ಪಾದ್ರಿಗಳು ಮಾಡಿದರು. ಅದೇ ರೀತಿಯಲ್ಲಿ ರೋಮನ್ ಪ್ರಭುತ್ವ ಎಂದು ಕರೆಯುವಾಗ ರಾಜಪ್ರಭುತ್ವವು ಮಾತ್ರವೇ ನಮಗೆ ಮುಖ್ಯವಾಯಿತು. ರಾಜಪ್ರಭುತ್ವ ಮತ್ತು ಅದರ ಅಧಿಕಾರವು ಮಾತ್ರವೇ ಈ ಗಣನೆಗೆ ಕಾರಣವೂ ಆಯಿತು. ಇವುಗಳಲ್ಲಿ ಯಾವುದು ಮೂಲಭೂತವಾಗಿ ನಮಗೆ ಅತ್ಯಂತ ಮುಖ್ಯವಾಯಿತು ಎಂದರೆ ಯಾವುದು ನಮ್ಮ ಎದುರಿನಲ್ಲಿ ಹಾಜರಾಗಿದೆಯೋ ಅದನ್ನು ಮಾತ್ರವೇ ಪರಿಗಣಿಸಲಾಯಿತು. ಆಧುನಿಕ ಮತ್ತು ಪ್ರಾಚೀನವೆಂದು ಹೇಳುವಾಗ ನಮಗೆ ಯಾವುದು ಮಾನದಂಡವಾಗಿದೆ ಎನ್ನುವುದು ಅಷ್ಟೇ ಮುಖ್ಯ. ಹಾಗೆ ನೋಡುವುದಿದ್ದರೆ ಯಾವುದೇ ವರ್ಗೀಕರಣಗಳು ತನ್ನದೇ ಆದ ತಾತ್ವಿಕತೆಯನ್ನು ಕಟ್ಟಿಕೊಂಡಿರುತ್ತವೆ. ಅದರ ಆಧಾರದ ಮೇಲೆ ಪ್ರತಿವಾದವನ್ನು ಹುಟ್ಟು ಹಾಕುತ್ತವೆ. ಆಧುನಿಕ ಮತ್ತು ಮಧ್ಯಕಾಲೀನ ಎಂದು ಕರೆಯುವಾಗ ರಾಜಕೀಯವಾದ ಪರಿಭಾಷೆಯೂ ಬಂದಿದೆ. ಈವತ್ತು ಯಾವುದನ್ನು ವೈಜ್ಞಾನಿಕ ಮತ್ತು ವಸ್ತುನಿಷ್ಠವಾದ ಪಂಥಗಳು ಎಂದು ಹೇಳುತ್ತೇವೆಯೋ ಅದು ಕೂಡಾ ನಿರ್ದಿಷ್ಟವಾದ ತಾತ್ವಿಕತೆಯನ್ನು ಹೊಂದಿದೆ. ಈಗಿನ ವೈಜ್ಞಾನಿಕತೆ ಎನ್ನುವುದು ಮೂಲಭೂತವಾಗಿ ರಾಚನಿಕತೆಯನ್ನು ಹೇಳುತ್ತದೆ. ಅದರಲ್ಲಿ ರಾಚನಿಕತೆಯ ಏಕತೆಯ ಪ್ರಶ್ನೆಯೂ ಬಂದಿದೆ. ಆಫ್ರಿಕ, ಯುರೋಪ್, ಏಷ್ಯಾ, ಅಮೇರಿಕ ಮುಂತಾದ ಪ್ರಶ್ನೆಗಳು ಬಂದಾಗ ನಾವು ಅದರ ರಾಚನಿಕವಾದ ಗುಣವನ್ನು ಮಾತ್ರವೇ ಹೇಳುತ್ತೇವೆ. ಅದು ತೊಡಕಿನದೂ ಹೌದು. ಆಫ್ರಿಕಾ ಚರಿತ್ರೆ, ಭಾರತದ ಚರಿತ್ರೆ ಮುಂತಾದ ವರ್ಗೀಕರಣಗಳು ಕೆಲವು ಸೀಮಾರೇಖೆಯನ್ನು ಹೇಳುತ್ತವೆ. ಅದರಲ್ಲಿ ಗಡಿಗಳು ಮಾತ್ರವೇ ಮುಖ್ಯವಾಗುತ್ತವೆ. ಭಾರತದ ಜನರು, ಅಮೇರಿಕಾದ ಜನರು, ರಷ್ಯಾದ ಜನರು ಮುಂತಾದ ವರ್ಗೀಕರಣಗಳು ಮೂಲಭೂತವಾಗಿ ಈ ಸೀಮೆಯನ್ನು ಹೇಗೆ ವಿವರಿಸುತ್ತಿವೆ ಎನ್ನುವುದೂ ಅಷ್ಟೇ ಸತ್ಯ. ಆದರೆ ಅದು ದೇಹದ ಪ್ರಜ್ಞೆಯಲ್ಲ. ವ್ಯಕ್ತಿ ಮತ್ತು ಅವನ ದೇಹದ ಪ್ರಶ್ನೆಯು ಮೂಲಭೂತವಾಗಿ ಜೀವಶಾಸ್ತ್ರದ ಪ್ರಶ್ನೆ ಅಷ್ಟೇ. ಜೀವಶಾಸ್ತ್ರವು ಮನುಷ್ಯ ಮತ್ತು ಅವನ ಹಿಂದೆ ಏನೇನು ವಿಕಾಸವಾಗಿದೆಯೋ

ಅದನ್ನು ಹೇಳುತ್ತದೆ. ಆದರೆ ಮನುಷ್ಯ ಮತ್ತು ಅವನ ಬುದ್ಧಿವಂತಿಕೆಯು ಕೂಡಾ ಬೆಳೆದು ಬಂದಿದೆ. ಅದರಲ್ಲಿ ವ್ಯಕ್ತಿತ್ವ ಮತ್ತು ಅವನ ಚರಿತ್ರೆಯು ಬಂದಿದೆ. ಅವನು ಚರಿತ್ರೆಯನ್ನು ರೂಪಿಸಿದ್ದಾನೆ. ಅವನಿಗೆ ಅದರ ಅಗತ್ಯವೂ ಆಗಿದೆ. ಅದರ ಮೂಲಕವೇ ಅವನು ಅನೇಕವನ್ನು ಸಾಧಿಸಿದ್ದಾನೆ.

ನಮ್ಮ ನಡವಳಿಕೆಗೂ ನಮ್ಮ ಭಾವನೆಗಳಿಗೂ ಸಂಬಂಧವಿದೆ. ಅದನ್ನು ಹೀಗೆ ಕ್ರೋಢೀಕರಿಸಬಹುದು:

1. ಸಮಾಜ
2. ಕುಟುಂಬ
3. ಜಾತಿ
4. ಆರ್ಥಿಕ ಪರಿಸ್ಥಿತಿ
5. ಚಾರಿತ್ರಿಕ ಸನ್ನಿವೇಶಗಳು

ಇದು ಕಾದಂಬರಿಯಲ್ಲಿ ವ್ಯಕ್ತವಾಗುವಾಗ ಲೇಖಕನ ಭಾವನೆಗಳು ಮತ್ತು ಅವನ ಹಿಂದಿನ ಚಾರಿತ್ರಿಕ ಸಾಮಾಜಿಕ ಸನ್ನಿವೇಶಗಳು ಬಹಳ ಮುಖ್ಯವಾಗುತ್ತವೆ. ಇದನ್ನು ಕಾರಂತರ ಕಾದಂಬರಿಗಳ ಮುನ್ನುಡಿಯ ಆಧಾರದಲ್ಲಿಯೂ ಗುರುತಿಸಬಹುದು.

ಚರಿತ್ರೆಯು ಬೇರೆ ಬೇರೆ ರೂಪಗಳ ಮೂಲಕವೇ ಬೆಳೆದು ಬಂದಿದೆ. ಸಮಾಜದಲ್ಲಿ ಒಂದು ವಿಶಿಷ್ಟತೆಯು ಇದೆ. ಅದರಲ್ಲಿ ಆದರ್ಶವೂ ಇದೆ. ನೈತಿಕತೆ ಮತ್ತು ಅದರ ಸ್ವರೂಪವೂ ಬೆಳೆದು ಬಂದಿದೆ. ನೀತಿ ಮತ್ತು ಅದರ ಪರಿಣಾಮಗಳಿಗೆ ಬೇರೆ ಬೇರೆ ಆಯಾಮವೂ ಇರುವುದರಿಂದ ಅದು ಚರಿತ್ರೆಯ ಒಳಗೆ ಬರುತ್ತದೆ. ನೀತಿ ಮತ್ತು ಅದರ ಸಾಧ್ಯತೆಗಳು ವಾಸ್ತವವಾಗಿ ಒಂದು ಸಮಾಜದಲ್ಲಿ ವಿಶಿಷ್ಟವಾದ ಕೆಲಸವನ್ನು ಮಾಡುತ್ತದೆ. ಅದರಲ್ಲಿ ಕೆಲವು ನಿಯಮವು ಇರುತ್ತದೆ. ನೀತಿಯು ವಾಸ್ತವವಾಗಿ ಕೆಲವನ್ನು ಹೇಳುತ್ತದೆ. ಅದರಲ್ಲಿ ಅಂತಸ್ಥವಾದ ನಿಯಮವೂ ಇರುತ್ತದೆ. ಅದರಲ್ಲಿ ಕಟ್ಟುಕಟ್ಟಳೆಗಳೂ ಇರುತ್ತವೆ. ವಾಸ್ತವವಾಗಿ ಯಾವುದೇ ಸಂಗತಿಯು ಕೆಲಸವನ್ನು ಮಾಡುವುದು ಆಯಾ ಸನ್ನಿವೇಶವನ್ನು ಆಧರಿಸಿಕೊಂಡು ಎನ್ನುವುದು ಇಲ್ಲಿ ಮುಖ್ಯವಾದ ಸಂಗತಿಯೂ ಹೌದು. ವ್ಯಕ್ತಿ ಮತ್ತು ನಡತೆಯನ್ನು ಅದು ಹೇಳುತ್ತದೆ. ಅದರಲ್ಲಿ ಬರುವ ಸಂಗತಿಗಳು ಆಯಾ ಕಾಲಕ್ಕೆ ಬೇರೆಯೂ ಆಗಬಹುದು. ಆದರೆ ಅದರ ಅಗತ್ಯವನ್ನು ಸಮಾಜವು ಇಷ್ಟಪಡುತ್ತದೆ. ಜೀವನ ಮತ್ತು ಅದರ ಧೋರಣೆಯನ್ನು ಕೂಡಾ ಅದು ಹೇಳುತ್ತದೆ. ಮೌಲ್ಯ ಮತ್ತು ಅದರ ಪರಿಣಾಮವನ್ನು ಸಮಾಜದ ಮೇಲೆ ಕಾಣುತ್ತೇವೆ. ಅದರಲ್ಲಿ ನಿರ್ದಿಷ್ಟವಾದ

ಉದ್ದೇಶವೂ ಇರುತ್ತದೆ. ಈ ಉದ್ದೇಶವನ್ನು ನಾವು ನಡೆ ಮತ್ತು ನುಡಿಗಳಲ್ಲಿ ಕಾಣುತ್ತೇವೆ. ಹೀಗಾಗಿ ಸಮಾಜದಲ್ಲಿ ಇರುವ ಅನೇಕ ಆದರ್ಶಗಳನ್ನು ನಾವು ಒಂದು ಚರಿತ್ರೆಯ ಮೂಲಕವೂ ಕಾಣಲು ಸಾಧ್ಯವಾಗುತ್ತದೆ. ನೀತಿ ಮತ್ತು ಅದರ ವಾಸ್ತವವಾದವು ಬೇರೆಯೂ ಹೌದು. ಅದರಲ್ಲಿ ನೀತಿಯನ್ನು ಒಂದು ಸಮಾಜ ಮತ್ತು ಅದರ ವಿಸ್ತರಣೆಯಲ್ಲಿಯೂ ಕಾಣಬಹುದು. ಇದನ್ನೇ ಅನೇಕ ಬುದ್ಧಿಜೀವಿಗಳು ನಮಗೆ ಬೇರೆ ರೀತಿಯಲ್ಲಿ ಹೇಳುತ್ತಾರೆ. ಅವರ ಪ್ರಕಾರ ಅದು ಬೇರೆಯಾಗುತ್ತದೆ. ನಮ್ಮ ಅನೇಕ ಆದರ್ಶವಾದಿಗಳು ಚರಿತ್ರೆಯನ್ನು ಬುದ್ಧಿಜೀವಿಗಳಿಗೆ ಅನುಗುಣವಾಗಿಯೂ ನೋಡುವುದು ಸತ್ಯ. ಆದರೆ ಆದರ್ಶವಾದಿಗಳು ಚರಿತ್ರೆಯನ್ನು ವೈಭವೀಕರಿಸುವುದೂ ಅಷ್ಟೇ ನಿಜವಾಗಿದೆ. ಅದರಲ್ಲಿ ವೈಭವೀಕರಣವು ಇದೆ. ಆದರೆ ನಿಜವು ಕಡಿಮೆಯಿರುತ್ತದೆ. ಭೌತಿಕವಾದಿ ವಿವರಣೆಯು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಅದು ಉತ್ಪಾದನೆಯನ್ನು ಮತ್ತು ಅದರ ಪರಿಣಾಮವನ್ನು ನೋಡುತ್ತದೆ.

ಯಾವುದು ನಿಜವಾಗಿಯೂ ಚರಿತ್ರೆಯಲ್ಲಿ ನಡೆಯುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ನಿಜವಾದ ಚರಿತ್ರೆಯು ವಾಸ್ತವವಾಗಿ ಭಿನ್ನವಾದ ನೆಲೆಯನ್ನು ಹೇಳುತ್ತದೆ. ಯಾವುದು ನಿಜವಾದ ಚರಿತ್ರೆಯು ಆಗಿದೆಯೋ ಅದರ ಸ್ವರೂಪವು ಜನರ ಮೇಲೆ ಬೇರೆ ಬೇರೆ ಪರಿಣಾಮವನ್ನು ಬೀರುತ್ತದೆ. ಚರಿತ್ರೆಯು ಸುಮ್ಮನೆ ನಡೆಯುವುದೂ ಇಲ್ಲ. ಅದು ಆಕಸ್ಮಿಕವಾದ ಒಂದು ಘಟನೆಯು ಅಲ್ಲ. ಅದರಲ್ಲಿ ಬೇರೆ ನೆಲೆಗಳು ಇರುತ್ತವೆ. ಬದಲಾವಣೆಯು ಬೇರೆ ಬೇರೆ ಸಂಸ್ಥೆಗಳು ಬೆಳೆಯುವ ಕ್ರಮದಲ್ಲಿಯೂ ಕಾಣಬಹುದು. ಸಂಸ್ಥೆಗಳು ನಿಧಾನವಾಗಿ ಬದಲಾಗುತ್ತವೆ. ಯಾವುದೇ ದೇಶದಲ್ಲಿ ಉದಾರವಾದಿಗಳು ಚರಿತ್ರೆಯನ್ನು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಅದರಲ್ಲಿ ಕಾರ್ಯ ಮತ್ತು ಕಾರಣಗಳ ಸಂಬಂಧವನ್ನು ನೋಡುವ ಕ್ರಮವು ಬೇರೆಯಾಗುತ್ತದೆ. ಅವರು ಕಾರಣವನ್ನು ನೋಡಲು ಹೋಗುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ಈ ಅರ್ಥದಲ್ಲಿ ಸಮಾಜ ಮತ್ತು ಅದರ ಚರಿತ್ರೆಯಲ್ಲಿ ಆರ್ಥಿಕತೆಯು ಅತ್ಯಂತ ಮಹತ್ವದ್ದೂ ಹೌದು. ಮನುಷ್ಯ ಮತ್ತು ಅವನ ವರ್ತನೆಗೆ ಅನುಸಾರವಾಗಿಯೇ ಸಮಾಜವು ಬದಲಾಗುತ್ತದೆ. ಭೌತಿಕವಾದ ಚರಿತ್ರೆಯು ಜೀವನವನ್ನು ರೂಪಿಸುತ್ತದೆ. ಆದ್ದರಿಂದ ವ್ಯಕ್ತಿ ಮತ್ತು ಅವನ ಮನೋಸ್ಥಿತಿಯನ್ನು ನಾವು ಪ್ರತ್ಯೇಕವಾಗಿಯೂ ನೋಡಲು ಬರುವುದು ಇಲ್ಲ. ವ್ಯಕ್ತಿಯು ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿಯು ಮಾತ್ರವೇ ಆಗಿರುತ್ತಾನೆ. ಅವನ ಮನೋಸ್ಥಿತಿ ಮತ್ತು ಅವನ ಜೀವನವು ಸಮಾಜದ ಭಾಗವೇ ಆಗಿರುತ್ತದೆ.

ನಾವು ಯಾವ ಕಡೆಗೆ ಚಲಿಸುತ್ತೇವೆ ಮತ್ತು ನಮ್ಮ ಗುರಿಯು ಯಾವುದು ಎನ್ನುವುದು ಮುಖ್ಯವಾದ ಅಂಶ. ಈ ದೃಷ್ಟಿಯಿಂದ ನಾವು ನಮ್ಮ ಅಗತ್ಯಕ್ಕಾಗಿ ಕೆಲಸವನ್ನು ಮಾಡುತ್ತೇವೆ. ವ್ಯಕ್ತಿ ಮತ್ತು ಅವನ ಭಾವನೆಗಳು ಸಮಾಜದಿಂದ ಹುಟ್ಟುತ್ತದೆ. ಅದರ ಅಗತ್ಯವಿರುತ್ತದೆ. ಆದ್ದರಿಂದ ಯಾವುದೇ ಬೌದ್ಧಿಕವಾದ ಒತ್ತಡವನ್ನು ನಾವು ನಿರಾಕರಿಸಲು ಬರುವುದು ಇಲ್ಲ.

ಬುದ್ಧಿಜೀವಿಗಳು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಚರಿತ್ರೆಯು ಒಂದು ಅಂತರ್ ಪ್ರವಾಹವೂ ಆಗಿದೆ. ಅದರಲ್ಲಿ ಬೇರೆ ಬೇರೆ ಅರ್ಥವೂ ಇರುತ್ತದೆ. ಅದು ನಮ್ಮ ಪ್ರಾಚೀನತೆಯನ್ನು ಹೇಳುತ್ತದೆ. ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಂಬಂಧಗಳು ಇರುತ್ತವೆ. ಮತ್ತು ಆ ಸಂಬಂಧವನ್ನು ನಾವು ಆರ್ಥಿಕತೆಯಲ್ಲಿ, ಕಾನೂನಿನಲ್ಲಿ, ಕಲೆಯಲ್ಲಿ, ಧರ್ಮದಲ್ಲಿ, ತತ್ವಜ್ಞಾನದಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಕಾಣುತ್ತೇವೆ. ಚರಿತ್ರೆಯು ಒಂದು ದೃಷ್ಟಿಯಿಂದ ನಮ್ಮ ಅಭಿವ್ಯಕ್ತಿಯೂ ಆಗುತ್ತದೆ. ಅದರಲ್ಲಿ ಭಿನ್ನತೆಗಳು ಇವೆ. ಜೀವನ ಮತ್ತು ಚರಿತ್ರೆಯು ಜೊತೆಗೆ ಸಾಗುತ್ತವೆ. ನಾವು ಯಾವುದರ ಕುರಿತು ಹೇಳುತ್ತೇವೆಯೋ ಅದು ಕೂಡಾ ಚರಿತ್ರೆಯ ಭಾಗವೇ ಆಗಿರುತ್ತದೆ. ಅದರಲ್ಲಿ ಅರ್ಥವಂತಿಕೆಯು ಇರುತ್ತದೆ ಎನ್ನುವುದನ್ನು ಮರೆಯಲು ಬರುವುದು ಇಲ್ಲ. ಚಾರಿತ್ರಿಕ ಸಂಕೀರ್ಣತೆಯು ನಮ್ಮನ್ನು ಬೇರೆ ಬೇರೆ ವಿಧವಾಗಿಯೂ ರೂಪಿಸುತ್ತದೆ. ಚರಿತ್ರೆ ಎನ್ನುವುದು ಮೂಲಭೂತವಾಗಿ ಜೀವನದ ಕಥನವೂ ಹೌದು. ಸಮಕಾಲೀನವಾದ ಸಮಾಜವೂ ಚರಿತ್ರೆಯಿಂದ ಪ್ರೇರಣೆಯನ್ನು ಪಡೆಯುತ್ತದೆ. ಅದು ಅದರ ಅಗತ್ಯವಾಗಿದೆ. ಅದೇ ರೀತಿಯಲ್ಲಿ ಪ್ರಭುತ್ವಕ್ಕೂ, ಸಮಾಜಕ್ಕೂ ಒಂದು ಸಂಬಂಧವಿದೆ. ಅದರಲ್ಲಿ ಕೆಲವು ಒತ್ತಡಗಳು ಕೆಲಸವನ್ನು ಮಾಡುತ್ತವೆ. ಅಂತರ್ರಾಷ್ಟ್ರೀಯವಾದ ಸಂಗತಿಗಳು ಅತ್ಯಂತ ಪ್ರಭಾವಶಾಲಿ. ಅದರಲ್ಲಿ ಅನೇಕವು ಒಂದು ದೇಶ ಮತ್ತು ಒಂದು ಗಡಿಯೆಂದು ನಿಲ್ಲುವುದು ಇಲ್ಲ. ಅಂತರ್‌ರಾಷ್ಟ್ರೀಯ ಸಂಗತಿಗಳು ವರ್ಗಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ಆರ್ಥಿಕವಾದ ಪರಿಸ್ಥಿತಿಗಳು ಕೂಡಾ ವರ್ತಮಾನದ ಮೇಲೆ ಪ್ರಭಾವವನ್ನು ಬೀರುತ್ತದೆ. ರಾಜಕೀಯತೆಯು ಕೂಡಾ ಕೆಲವು ಹೊಂದಾಣಿಕೆಯನ್ನು ಮಾಡುತ್ತವೆ. ಒಂದು ಸಮಾಜವೆಂದರೆ ಅದರಲ್ಲಿ ಒಂದು ಒಕ್ಕೂಟವೂ ಇರುತ್ತದೆ ಎನ್ನುವುದನ್ನು ಮರೆಯಲು ಬರುವುದು ಇಲ್ಲ. ಇದಕ್ಕೆ ಪೂರಕವಾಗಿ ಹೇಳುವುದಿದ್ದರೆ ಮಹಾಯುದ್ಧವು ಒಂದು ಕಾಲದಲ್ಲಿ ಇಡೀ ಜಗತ್ತನ್ನು ಪ್ರಭಾವಿಸಿತು. ಅದು ತಕ್ಷಣದ ಪ್ರಭಾವವನ್ನು ಬೀರಿತು. ಆದರೆ ಈವತ್ತು ಅದು ನೆನಪೂ ಆಗಿದೆ. ಮತ್ತು ಅದರ ಪರಿಣಾಮವೂ ಅತ್ಯಂತ ಘೋರವಾದ್ದರಿಂದ ಅದರ ನೆನಪು ನಮಗೆ ಮರೆಯಲು ಸಾಧ್ಯವೂ

ಆಗಲಿಲ್ಲ. ಉತ್ಪಾದನೆ ಮತ್ತು ಅದರ ರೂಪಗಳು ಕೂಡಾ ಮಹತ್ವದ ಪ್ರಭಾವವನ್ನು ಬೀರುತ್ತದೆ. ಆದರೆ ಈ ಪ್ರಭಾವವನ್ನು ನಾವು ಈವತ್ತು ಬರೀ ಒಂದು ಪ್ರತಿಕ್ರಿಯೆ ಎಂದು ಭಾವಿಸಬಾರದು. ಅಂದರೆ ಯಾರೂ ಒಬ್ಬರೂ ಉತ್ಪಾದನೆ ಮತ್ತು ಅದರ ಪರಿಣಾಮಗಳನ್ನು ತಕ್ಷಣವೇ ಎದುರಿಸುವುದು ಇಲ್ಲ. ಹಾಗೆ ನೋಡುವುದಿದ್ದರೆ ಶಾಲೆ, ಕಾಲೇಜು, ಆಚರಣೆಗಳು, ಧರ್ಮ ಮುಂತಾದವು ಒಟ್ಟಿಗೆ ಒಂದೇ ಕ್ಷಣದಲ್ಲಿ ಬದಲಾಗುವುದು ಇಲ್ಲ. ಅವುಗಳು ನಿಧಾನವಾಗಿಯೇ ಪರಿವರ್ತನೆಯನ್ನು ಹೊಂದುತ್ತವೆ. ಮತ್ತು ಕೆಲವು ಸಾಂಸ್ಕೃತಿಕ ಸಮಸ್ಯೆಗಳು ಒಂದು ನಿಮಿಷದಲ್ಲಿ ಬದಲಾಗುವುದು ಸಾಧ್ಯವಿಲ್ಲ. ಆದರೆ ಅವುಗಳು ಕೆಲವು ಸೂಚನೆಗಳನ್ನು ಕೊಡುತ್ತವೆ. ನಮ್ಮ ಜೀವನಕ್ರಮದ ಮೇಲೆ ಕೆಲವು ರೀತಿಯ ಸಾಂಸ್ಕೃತಿಕ ರೂಪಗಳು ಕೆಲಸವನ್ನು ಮಾಡುತ್ತವೆ. ನಮ್ಮ ನಡತೆ ಮತ್ತು ನಮ್ಮ ಗುಣಗಳು ಸಾಂಸ್ಕೃತಿಕ ರೂಪವನ್ನು ಆಧರಿಸಿಕೊಂಡಿದೆ ಎನ್ನುವುದು ಅಷ್ಟೇ ನಿಜ. ಆದರೆ ಸಂಪ್ರದಾಯಸ್ಥರು ಕೆಲವು ಚೌಕಟ್ಟಿನಲ್ಲಿ ಬದುಕುತ್ತಾರೆ. ಚರಿತ್ರೆ ಮತ್ತು ಅದರ ನಿರ್ಧಾರಾತ್ಮಕವಾದ ಕ್ರಮಗಳು ಅದರ ಮೇಲೆ ಪ್ರಭಾವವನ್ನು ಬೀರಿದರು ಅಂತಿಮವಾಗಿ ನಮಗೆ ಹೆಚ್ಚು ಮುಖ್ಯವಾಗುವುದು ಆರ್ಥಿಕತೆಯೇ. ಆದ್ದರಿಂದ ಅದರ ಅರ್ಥಗಳು ಬೇರೆ ಬೇರೆಯಾಗುತ್ತವೆ. ಆರ್ಥಿಕತೆಯು ವಾಸ್ತವವಾಗಿ ಒಂದು ಸಾಧ್ಯತೆಯೂ ಆಗಿರುತ್ತದೆ. ಅಭಿವೃದ್ಧಿ ಹೊಂದಿದ ದೇಶದಲ್ಲಿ ಚರಿತ್ರೆಯು ಒಂದು ರೀತಿಯಲ್ಲಿ ಇರುತ್ತದೆ. ಅನಭಿವೃದ್ಧಿ ಹೊಂದಿದ ದೇಶಗಳ ಕಥನವು ಮತ್ತೊಂದು ರೀತಿಯಲ್ಲಿ ಇರುತ್ತದೆ. ಚರಿತ್ರೆ ಮತ್ತು ಅದರ ಅರಿವು ಎನ್ನುವುದು ಅತ್ಯಂತ ಮಹತ್ವದ್ದು. ಅದರ ಜ್ಞಾನವು ಅಂದರೆ ದೇಶ ಮತ್ತು ಅದರ ಜ್ಞಾನ ರೂಪಗಳು ಬೇರೆ ಬೇರೆ ಕೆಲಸವನ್ನು ಮಾಡುತ್ತವೆ. ಇದಕ್ಕೆ ಸ್ವಪ್ನದ ಹೊಳೆಯೇ ಸಾಕ್ಷಿಯಾಗಿದೆ.

ಜ್ಞಾನ ಮತ್ತು ಅದರ ಸಾಮಾಜಿಕ ಸಂಬಂಧಗಳು ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ್ದೂ ಆಗಿರುವುದೂ ನಿಜ. ಹಾಗೆ ನೋಡುವುದಿದ್ದರೆ ಯಾವುದೇ ಸಮಾಜವು ಒಂದು ವರ್ಗೀಕರಣದ ಮೇಲೆ ನಿಂತಿರುತ್ತವೆ. ಯಾವುದನ್ನು ನಾವು ಈವತ್ತು ವರ್ಗೀಕರಣವೆಂದು ಹೇಳುತ್ತೇವೆಯೋ ಅದರ ರೂಪಗಳಿಗೆ ಬೇರೆ ಆಯಾಮವೂ ಇದೆ. ಅದರಲ್ಲಿ ಜಾತಿ ಇತ್ಯಾದಿಗಳು ಸೇರಿಕೊಂಡಿವೆ. ಆದರೆ ವರ್ಗೀಕರಣಕ್ಕೆ ಕೆಲವು ಚಲನೆಗಳೂ ಇರುತ್ತವೆ. ಪ್ರಭುತ್ವ ಮತ್ತು ಅದರ ಶಕ್ತಿಯು ನಮಗೆ ಕೆಲವನ್ನು ಹೇಳುತ್ತವೆ. ಆದರೆ ವಾಸ್ತವವಾಗಿ ಬುದ್ಧಿಜೀವಿಗಳು ಇರುವ ಪ್ರಭುತ್ವವನ್ನು ಬೆಂಬಲಿಸಿದರೆ ಅದರ ಅಪಾಯವು ಮತ್ತಷ್ಟು ಹೆಚ್ಚಾಗುತ್ತದೆ. ಒಂದು ರೂಪವು ಏನು ಅಸ್ತಿತ್ವದಲ್ಲಿ ಇರುತ್ತದೆಯೋ ಅದನ್ನು ಮುರಿದು ಮತ್ತೊಂದು

ರೂಪವು ಹುಟ್ಟುತ್ತದೆ. ಅದರಲ್ಲಿ ಇದು ಮುಖ್ಯವಾಗುತ್ತದೆ. ಮನುಷ್ಯ ಮತ್ತು ಅವನ ನಂಬಿಕೆಗಳು ಹಾಗೂ ಅವನ ನೈತಿಕತೆಯು ಒಂದು ದೃಷ್ಟಿಯಿಂದ ಕೆಲಸವನ್ನು ಮಾಡುತ್ತವೆ. ವ್ಯಕ್ತಿ ಮತ್ತು ಅವನ ನಂಬಿಕೆಗಳು ಸಮಾಜದ ಮೇಲೆ ಪರಿಣಾಮವನ್ನು ಬೀರುತ್ತದೆ. ಆದರೆ ಇವು ಯಾವುದೂ ಸ್ಥಿರವಾದ ಒಂದು ಸಂಗತಿಯು ಅಲ್ಲ. ಅದರಲ್ಲಿ ಚಲನೆಯು ಇರುತ್ತದೆ. ಹಾಗೆ ನೋಡಿದರೆ ಅಧಿಕಾರ ಮತ್ತು ಅದರ ಸಂಬಂಧಗಳು ಒಂದು ರೀತಿಯಲ್ಲಿ ಇರುತ್ತವೆ. ಅದರ ಜೊತೆಗೆ ಮನುಷ್ಯನು ಯಾವ ರೀತಿಯಲ್ಲಿ ವ್ಯವಹರಿಸುತ್ತಾನೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಪ್ರಭುತ್ವವು ತನಗೆ ಬೇಕಾದ್ದನ್ನು ಮಾತ್ರವೇ ರೂಪಿಸುತ್ತದೆ. ಅದರ ಅಗತ್ಯವೇ ಬೇರೆ. ವಾಸ್ತವವಾಗಿ ಯಾವುದೇ ಬದಲಾವಣೆಯು ಸುಮ್ಮನೆ ಉಂಟಾಗುವುದೇ ಇಲ್ಲ. ಪುನರುಜ್ಜೀವನದ ಅನಂತರ ಮನೋಸ್ಥಿತಿಯು ಬದಲಾಯಿತು. ಅದರಲ್ಲಿ ಜೀವನ ಮತ್ತು ಅದರ ಕುರಿತಾಗಿ ತಳೆದಿರುವ ನಿಲುವು ಬೇರೆಯಾಯಿತು. ವರ್ಗ ಮತ್ತು ಅದರ ಹಿಂದೆ ಇರುವ ಸಂಬಂಧಗಳು ಕೂಡಾ ಪುನರ್ ವ್ಯಾಖ್ಯೆಗೆ ಗುರಿಯಾದವು. ವರ್ಗಕ್ಕೂ ಮನೋಸ್ಥಿತಿಗೂ ಒಂದು ಸಂಬಂಧವಿದೆ. ಅದನ್ನು ನಾವು ಅದರ ಪ್ರಕ್ರಿಯೆಯಲ್ಲಿ ನೋಡಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಮನೋಸ್ಥಿತಿಯು ವ್ಯಕ್ತವಾಗುವುದು ನಮ್ಮ ಸಾಮಾಜಿಕ ಚಟುವಟಿಕೆಯಲ್ಲಿಯೇ ಎನ್ನುವುದನ್ನು ಮರೆಯಲು ಆಗುವುದು ಇಲ್ಲ. ಅದರಲ್ಲಿ ಸಮಾಜ ಮತ್ತು ಅದರ ಅರಿವು ಹೆಚ್ಚು ಮುಖ್ಯವಾಗಿದೆ. ಆದರೆ ಯಾವುದು ಸಾಮಾಜಿಕ ಮತ್ತು ಯಾವುದು ಸಾಮಾಜಿಕವಲ್ಲ ಎನ್ನುವುದನ್ನು ನಾವು ಆಯಾ ಸನ್ನಿವೇಶ ಮತ್ತು ಅದರ ಗ್ರಹಿಕೆಯಲ್ಲಿ ನೋಡಬೇಕಾಗುತ್ತದೆ. ವಾಸ್ತವವಾಗಿ ಇಲ್ಲಿ ಮತ್ತೊಂದು ಸಂಗತಿಯೂ ಇದೆ. ಅದು ಜೀವನದ ದೃಷ್ಟಿಕೋನವನ್ನು ಹೇಳುತ್ತದೆ. ಅದರಲ್ಲಿ ಜೀವನ ಮತ್ತು ಅದರ ಸಾಧ್ಯತೆಗಳು ಬೇರೆಯಾಗುತ್ತವೆ. ಅದು ಜೀವನವೂ ಆಗಿದೆ. ಮನುಷ್ಯ ಮತ್ತು ಅವನ ಸಂಬಂಧಗಳನ್ನು ನಾವು ಈವತ್ತು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆ. ಸಮಾಜವು ನಮಗೆ ಬೇರೆ ಬೇರೆ ನಿಲುವುಗಳನ್ನು ಹೇಳಿಕೊಡುತ್ತದೆ. ಆದರೆ ಯಾವುದು ನಿಜವಾಗಿಯೂ ವಾಸ್ತವವೆಂದು ಅನಿಸುತ್ತದೆಯೋ ಅದು ಮಾತ್ರವೇ ಆಗಿರುವುದೂ ಇಲ್ಲ. ಅದರ ಹಿಂದೆ ಕೆಲವು ತರ್ಕಗಳು ಇರುತ್ತವೆ. ನಮ್ಮ ಸದ್ಯದ ಸ್ಥಿತಿಯು ಯಾಕೆ ಹೀಗಿದೆ ಎಂದು ಕೇಳಿದರೆ ಮಾತ್ರವೇ ನಮಗೆ ಕೆಲವು ಉತ್ತರಗಳು ದೊರೆಯುತ್ತವೆ. ಕುಟುಂಬ, ಶಾಲೆ, ಚರ್ಚ್ ಮತ್ತು ಸಮಾಜವು ನಮ್ಮನ್ನು ಬೇರೆ ರೀತಿಯಲ್ಲಿ ತರಬೇತಿಗೊಳಿಸುತ್ತವೆ. ಇವುಗಳ ಕಾನೂನಿಗೂ ನಮಗೂ ಒಂದು ಸಂಬಂಧವಿದೆ. ಹಾಗೆ ನೋಡುವುದಿದ್ದರೆ ಲೈಂಗಿಕ ಸಂಬಂಧವು ನಮ್ಮ ಮನಸ್ಸನ್ನು ರೂಪಿಸುತ್ತದೆ. "ಕತೆ, ಕಾದಂಬರಿಗಳನ್ನು

ಓದಿ ರೂಢಿಯಾದವರಿಗೆ ಅದಕ್ಕೊಬ್ಬ ನಾಯಕ ಬೇಕೇ ಬೇಕು. ಎನಿಸುವುದು ಸಹಜ, ಆ ನಾಯಕನಿಂದಾಗಿ ಕತೆಗೆ ಬೆಡಗು ಬರುತ್ತದೆ: ಆತ ಕತೆಯ ಪಾಲಿನ ಒಬ್ಬ ಪ್ರಧಾನ ವ್ಯಕ್ತಿಯೋ, ವೀರನೋ ಆಗಿ ಕಾಣಿಸಬಹುದು ಎನ್ನುವುದರಿಂದ. ಈ ಕಾದಂಬರಿಯಲ್ಲಿ ಬರುವ ವ್ಯಕ್ತಿಗಳೋ, ವಿಷಯವೋ ಕೇವಲ ಕಟ್ಟುಕತೆಯಲ್ಲ ಎಂಬ ಭಾವನೆಯು ಓದುಗರಿಗೆ ಬರುವ ಸಲುವಾಗಿದೆ. ಇಲ್ಲಿನ ಗಣೇಶ ಹೆಗ್ಗಡೆಯನ್ನು ಅದರ ನಾಯಕ ಎಂದು ತಿಳಿಯಬಹುದು. ಓದುಗರು ಇಂಥ ಕತೆಯನ್ನು ಕಟ್ಟುಕತೆ ಎಂದು ತಿಳಿಯುವುದರಿಂದ ಬರುವ ನಷ್ಟವೇನಿಲ್ಲ. ನಮ್ಮ ಜನರು ಸುಳ್ಳನ್ನು ನಂಬುವಷ್ಟು ಸತ್ಯವನ್ನು ನಂಬುವುದಿಲ್ಲ. ತಾವು ನಂಬಿದ್ದೆಂಬುದನ್ನು ಸತ್ಯ ಎಂದು ತಿಳಿದುಕೊಳ್ಳುವ ಜಗತ್ತಿನಲ್ಲಿ, ಅದಕ್ಕೆ ವಿರುದ್ಧವಾಗಿ ಕಾಣಿಸುವುದೆಲ್ಲವೂ ಅಪಥ್ಯವಾಗುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ಗಣೇಶ ಹೆಗ್ಗಡೆ ತನ್ನ ಮಿತ್ರರಿಗೆ ಅಪಥ್ಯವಾಗಿ ಕಾಣಿಸುವ ಪ್ರಸಂಗ ಬಂದರೆ ಆಶ್ಚರ್ಯವಿಲ್ಲ. ಯಾವುದೇ ಕತೆಗೆ ರಂಜನೆಯ ಸೋಗನ್ನೋ, ಅಲಂಕಾರವನ್ನೋ ತೊಡಿಸಿದ ಮಾತ್ರಕ್ಕೆ ನಿಜವಾದ ಸತ್ಯ ಸುಳ್ಳಾಗುವುದೂ ಇಲ್ಲ: ಇಲ್ಲದ ವಸ್ತು ಸತ್ಯವಾಗುವುದೂ ಇಲ್ಲ. ಸುಳ್ಳು ಮತ್ತು ಸತ್ಯಗಳೆಂಬುವು ಜನರ ನಂಬಿಕೆಯ ಪ್ರಮಾಣವನ್ನು ಹೊಂದಿರುವಂತಿದೆ. ಜನರು ನಂಬದೆ ಹೋದರೆ ಅದು ಅಸತ್ಯ: ನಂಬಿದರೆ ಅದು ಸತ್ಯ ಎನ್ನುವುದು ಸಮಾಜದ ರೀತಿ.

ಈ ಕತೆಯ ನಾಯಕನು ಪರಶುರಾಮ ಕ್ಷೇತ್ರದ ಕಡಲ ಕರಾವಳಿಯ ನೀಳವಾದ ಸೆರಗಿನ ಒಂದು ಹಳ್ಳಿಯಲ್ಲಿ ಹುಟ್ಟಿದವನು. ಅವನ ಬದುಕಿನ ಮೇಲೆ ಎಂಥೆಲ್ಲ ಪ್ರಭಾವಗಳು ಬಿದ್ದುವು. ಎಂಬುದನ್ನು ನೀವು ಮುಂದೆ ಓದುವಿರಾದರೂ, ಅವನ ಜನ್ಮಸ್ಥಳದ ಮೇಲೆ ಪರಶುರಾಮ ಕ್ಷೇತ್ರದ ಇಬ್ಬಿಬ್ಬರು ಈಶ್ವರರ ಅನುಗ್ರಹವೂ ಬಿದ್ದಿರಲೇಬೇಕು. ಆ ಜನ್ಮಸ್ಥಳದ ತುಸುವೇ ದಕ್ಷಿಣದಲ್ಲಿ ಒಂದು ಗುಡ್ಡದ ಸೆರಗಿದೆ. ಅದರ ಬುಡದಲ್ಲಿ ಧಾರೇಶ್ವರ ಎಂಬ ಕ್ಷೇತ್ರವಿದೆ. ಅದಕ್ಕಿಂತ ನಾಲ್ಕಾರು ಹರದಾರಿ ಉತ್ತರದಲ್ಲಿ ಕಡಲ ತೀರದಲ್ಲಿ, ಅಖಿಲ ಭಾರತ ಪ್ರಸಿದ್ಧಿಯ ಗೋಕರ್ಣವಿದೆ. ಅಲ್ಲಿನ ಮಹಾಬಲೇಶ್ವರನ ಕೀರ್ತಿಗೆ ಅಳವೇ ಇಲ್ಲ. ಇನ್ನೂ ಒಂದೆರಡು ಅಂಥ ಕ್ಷೇತ್ರಗಳು ಸಮೀಪದಲ್ಲೇ ಇವೆ. ಈಚಿನ ಐತಿಹಾಸಿಕ ಯುಗದಲ್ಲಿ ಗಣೇಶ ಹೆಗ್ಗಡೆ ಹುಟ್ಟಿದ ಹಳ್ಳಿ ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಒಂದು ತುಣುಕು. ಆ ಜಿಲ್ಲೆಯ ಹೆಸರೇ ಹೇಳುವಂತೆ ಇನ್ನೊಂದು ಅಂಥ ಜಿಲ್ಲೆ ಇರಬೇಕು: ಅದು ದಕ್ಷಿಣ ಕನ್ನಡ. ಮೊದಲು ಒಂದಾಗಿದ್ದ ಕನ್ನಡ ಜಿಲ್ಲೆಯನ್ನು ಬ್ರಿಟಿಷರು ಎರಡಾಗಿ ತುಂಡರಿಸಿ, ಉತ್ತರದ ತುಣುಕನ್ನು ಮುಂಬಯಿ ಸಂಸ್ಥಾನಕ್ಕೆ ಕೊಟ್ಟರು: ದಕ್ಷಿಣದ ತುಣುಕನ್ನು

ಮದ್ರಾಸು ಸಂಸ್ಥಾನಕ್ಕೆ ದಾನ ಮಾಡಿದರು. ಈ ಅಪಚಾರದ ಬೆನ್ನಿಗೆ ಕಾಲಕ್ರಮದಲ್ಲಿ ಇತರ ಸಾಂಸ್ಕೃತಿಕ ಅಪಚಾರಗಳೂ ನಡೆದುವು. ಅಂಥ ಅಪಚಾರ ಸರಕಾರದಿಂದಲೂ ನಡೆಯಿತು. ಊರ ಜನರಿಂದಲೂ ನಡೆಯಿತು. ಉದಾಹರಣೆಗೆ-ಕನ್ನಡ ಜಿಲ್ಲೆಯ ಉತ್ತರದ ತುಂಡು ಪ್ರತ್ಯೇಕಗೊಂಡ ಮೇಲೆ ಆ ಜಿಲ್ಲೆಯಲ್ಲೇ ಹುಟ್ಟಿದವರ ಪಾಲಿಗೆ ಆ ಜಿಲ್ಲೆಯ ಹೆಸರೇ ಬೇರೆಯಾಯಿತು. ಆ ಜಿಲ್ಲೆಯ ಎರಡು ಹಳೆಗಾಲದ ಪತ್ರಿಕೆಗಳು ಜಿಲ್ಲೆಯ ಹೆಸರಿಗೊಂದು ವೈಶಿಷ್ಟ್ಯ ಬರಲಿ ಎಂದು ಯೋಚಿಸಿ, ಕನ್ನಡ ಎಂಬುದರ ಬದಲು 'ಕಾನಡ' ಮಾಡಿದರು. ಅಂಥ ಒಂದು ಪತ್ರಿಕೆ 'ಕಾನಡಾ ಧುರೀಣ'; ಇನ್ನೊಂದು 'ಕಾನಡಾ ವೃತ್ತ'. ಇವು 'ಕನ್ನಡ' ವನ್ನು ಮೆರೆಸುವ ಬದಲು ಮರೆಸಿದುವು. ಇಂಥ ಸ್ವಭಾವಗುಣಗಳಿಂದಾಗಿ ನಮ್ಮ ಗಣೇಶ ಹೆಗ್ಗಡೆ ಹುಟ್ಟಿದ ತಾವಿಗೆ ವಿಚಿತ್ರವಾದ ಒಂದು ಹೆಸರೂ ಬಂದಿತ್ತು. ಆ ಹೆಸರನ್ನು ಕೇಳಿದರೆ ನಿಮಗೆ ನಗು ಬರುವುದು ಸಹಜ; 'ಹಂದಿಗೋಣ' ಎಂಬುದು ಆ ಊರಿನ ಹೆಸರು." {ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ-22, ಕಣ್ಣಿದ್ದೂ ಕಾಣರು, ಕಾದಂಬರಿ-21, ಪು.ಸಂ.7-8}

ವಸಾಹತು ಕಾಲದಿಂದ ನಮ್ಮಲ್ಲಿ ರಾಷ್ಟ್ರ ಮತ್ತು ಪ್ರದೇಶದ ಬಗ್ಗೆ ಹೆಚ್ಚು ಆಸಕ್ತಿಯು ಬೆಳೆಯಿತು. ಪ್ರದೇಶದ ಅಭಿವೃದ್ಧಿ ರಾಷ್ಟ್ರದ ಅಭಿವೃದ್ಧಿ ಎನ್ನುವುದು ಹೆಚ್ಚು ಜನಪ್ರಿಯವಾಯಿತು. ರಾಷ್ಟ್ರ ಎಂದರೆ ಅದು ರಾಜಕೀಯ ಏಕತೆಯ ಪ್ರಶ್ನೆ. ಪ್ರದೇಶವು ಆ ರೀತಿಯಲ್ಲಿ ಇಲ್ಲ. ಕಾರಂತರು ಅತ್ಯಂತ ಹೆಚ್ಚು ಹೇಳುವುದು ಪ್ರದೇಶದ ಬಗ್ಗೆ. ಅದರ ಕಾಳಜಿಯು ಅವರಲ್ಲಿ ಎದ್ದು ಕಾಣುತ್ತದೆ. ಆದರೆ ಸಾಮಾನ್ಯ ಮತ್ತು ಮಧ್ಯಮವರ್ಗದ ಜನರ ನಂಬಿಕೆಯನ್ನು ವಸಹಾತು ಅಧಿಕಾರವು ಛಿದ್ರ ಮಾಡಲು ಯತ್ನವನ್ನು ಮಾಡಿತು. ರಾಷ್ಟ್ರದ ಬಗ್ಗೆ ಹೆಚ್ಚು ಕ್ರಿಯಾಶೀಲರಾದವರು ಬುಡಕಟ್ಟು ಮತ್ತು ಅಲೆಮಾರಿಗಳ ಬಗ್ಗೆ ಹೆಚ್ಚು ಯೋಚನೆಯನ್ನು ಮಾಡಲಿಲ್ಲ. ಅಷ್ಟೇ ಅಲ್ಲ ವಸಹಾತು ಕಾಲದಲ್ಲಿ ಯುರೋಪಿನ ಕೇಂದ್ರವು ತನ್ನ ಹೆಚ್ಚುಗಾರಿಕೆಯನ್ನು ಹೇಳಿದರೆ ಭಾರತದಲ್ಲಿ ಕೆಳಜಾತಿಯವರು ಮತ್ತು ಬುಡಕಟ್ಟು ಜನರು ಅದರ ಬಗ್ಗೆ ಯೋಚನೆಯನ್ನು ಮಾಡಲಿಲ್ಲ. ಆದರೂ ನಮ್ಮ ಮೇಲೆ ಪಶ್ಚಿಮದ ಚಿಂತನೆಗಳು ಹೆಚ್ಚು ಪ್ರಭಾವವನ್ನು ಬೀರಿದವು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದ ಗ್ರೇಟ್ ಯುರೋಪ್ ಎನ್ನುವ ಕಲ್ಪನೆಯು ಹೆಚ್ಚು ಚಾಲ್ತಿಗೆ ಬಂದಿತು. 1492ರ ವರೆಗೆ ಬ್ರಿಟೀಷ್ ಜಗತ್ತು ಮಾಮೂಲಿಯಾಗಿತ್ತು ಆದರೆ ಅದರ ಅನಂತರ ಅದರ ವ್ಯಾಪಾರವು ಹೆಚ್ಚು ಅಭಿವೃದ್ಧಿಯನ್ನು ಕಂಡದ್ದು ಸತ್ಯ. ಬ್ರಿಟೀಷರ ಚರಿತ್ರೆಯ ಕಲ್ಪನೆಯು ಬೇರೆ. ಭಾರತದವರ ಕಲ್ಪನೆಯು ಬೇರೆ. ಭಾರತದಲ್ಲಿ ಯುಗ ಎನ್ನುವ

ಕಲ್ಪನೆಯು ಹೇಗೆ ಇತ್ತು ಎಂದು ಸುಮಿತ್ ಸರ್ಕಾರ್ ವಿವರಿಸುತ್ತಾರೆ, ನಾವು ನಾಲ್ಕು ಯುಗಗಗಳನ್ನು ಮಾಡಿದೆವು. ಅದರಲ್ಲಿ ಕೊನೆಯದು ಕಲಿಯುಗ. ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಬ್ರಿಟೀಷ್‌ರ ಕಾಲದ ಕಲ್ಪನೆ ಮತ್ತು ಅವರ ದೇವರ ಕಲ್ಪನೆಯನ್ನು ಮಾತ್ರವೇ ಹೇಳಿಕೊಡುತ್ತಿದ್ದರು. (ಜೆ.ಎಂ. ಬ್ಲಂಟ್, ಪೋಸ್ಟ ಕಲೋನಿಯಲಿಸಂ, ಪುಟ.1694) ನಮ್ಮ, ಪ್ರದೇಶ ಮತ್ತು ಅದರ ಸಂಸ್ಕೃತಿಯ ಕಲ್ಪನೆಯು ಬೇರೆ. ಆದರೆ ಬ್ರಿಟೀಶ್ ಆಡಳಿತಗಾರರಿಗೆ ಪ್ರಾದೇಶಿಕ ಸಂಸ್ಕೃತಿ ಮತ್ತು ಅದರ ವೈವಿಧ್ಯ ಅಷ್ಟು ಹಿಡಿಸಲಿಲ್ಲ ಬ್ರಿಟೀಷರು ಯಾವುದನ್ನು ಕೇಡು ಎಂದು ಹೇಳಿದರೋ ಅದನ್ನು ಭಾತರದಲ್ಲಿ ಅನೇಕರು ಕಲ್ಪಿಸಿಕೊಂಡರು. ನಾವು ಇರುವ ಸಂಸ್ಕೃತಿ ಅತ್ಯಂತ ಕೇಡಿನದು ಮತ್ತು ಅದು ಜನರ ಒಳಿತಿಗೆ ಇಲ್ಲ ಎಂದು ತಿಳಿದ ಅನೇಕರು ಮತಾಂತರ ಹೊಂದಿದರು. ಜಾತ್ಯಾತೀತ ಆಗುವುದು ಅಂದರೆ ನಾವು ಬ್ರಿಟೀಶರ ಚಿಂತನೆಗಳನ್ನು ಅನುಸರಿಸುವುದು ಎಂದು ಭಾವಿಸಿದರು. ನಮ್ಮ ಸ್ಥಳ ಮತ್ತು ಅವಕಾಶಗಳ ಕಲ್ಪನೆಗಳು ಬದಲಾದವು. ಅದರ ನಡುವೆ ಯುರೋಪಿನವರು ವಸಾಹತು ಜನರಿಗೆ ಯಾವುದೇ ಚರಿತ್ರೆಯ ಕಲ್ಪನೆಯು ಇಲ್ಲ ಎಂದು ಹೇಳಿದರು. (ಅದೇ) ಅದಕ್ಕೆ ಬೇಕಾದ ಪಠ್ಯ ಪುಸ್ತಕಗಳನ್ನು ಮತ್ತು ಬೋಧನೆಯ ವಿಧಾನವನ್ನು ಅವರೇ ರೂಪಿಸಿದರು. ಶಿಕ್ಷಣವು ಸಂಸ್ಕೃತಿ ಮತ್ತು ಸಮಾಜವನ್ನು ಹೊಸ ರೀತಿಯಲ್ಲಿ ನೋಡಲು ಕಲಿಸಿತು. ಭಾರತದಲ್ಲಿ ಆಧುನಿಕ ಸಮಾಜವೊಂದು ರೂಪುಗೊಳ್ಳುತ್ತಿದೆ. ನಾವು ಅದನ್ನು ಯೋಚನೆ ಮಾಡಬೇಕು ಎಂದು ಭಾರತೀಯ ಬುದ್ಧಿಜೀವಿಗಳು ಯೋಚನೆಯನ್ನು ಮಾಡಿದರು ಎನ್ನುವುದಕ್ಕೆ ನಮ್ಮಲ್ಲಿ ಅನೇಕ ವಿಧವಾದ ದಾಖಲೆಗಳು ಇವೆ. ಅದರಲ್ಲಿ ಸಾಹಿತ್ಯದ ರೂಪವೂ ಒಂದು ಕಾರಂತರು ಈ ವೇಳೆಯಲ್ಲಿ ಬರೆಯತೊಡಗಿದ್ದರು. ಆದ್ದರಿಂದ ಕಾರಂತರು ಕೊಡುವ ಪ್ರಾದೇಶಿಕತೆಯ ವಿವರಣೆಗೆ ಅತ್ಯಂತ ಮಹತ್ವವಿದೆ. ಅದು ವಸಾಹತು ನಿರೂಪಣೆಗಿಂತ ಬೇರೆಯಾಗಿದೆ ಎಂದು ಅನಿಸುತ್ತದೆ ಮೇಲೆ ಉಲ್ಲೇಖ ಮಾಡಿದ ಭಾಗವು ಇದನ್ನು ಹೇಳುತ್ತದೆ. ಪ್ರಾದೇಶಿಕತೆಯ ಹೆಸರು ಹೇಗೆ ಪಲ್ಲಟವಾಗುತ್ತದೆ ಮತ್ತು ಅದನ್ನು ಅನ್ಯವು ನೋಡುವ ಕ್ರಮವು ಹೇಗಿದೆ ಎಂದು ಇಲ್ಲಿ ಅವರು ವಿವರಿಸುತ್ತಾರೆ. ಶಿಕ್ಷಣದಲ್ಲಿ ಶುದ್ಧ ವಿಜ್ಞಾನ ಮತ್ತು ಜಿಯಾಗ್ರಾಫಿಯಂಥ ವಿಷಯುಗಳನ್ನು ಅವರು ಬೋಧಿಸತೊಡಗಿದರು. ಇದೂ ಪರಿವರ್ತನೆಗೆ ಬಾಹ್ಯವಾದ ಒಂದು ಕಾರಣ. ಅದರ ಜೊತೆಗೆ ತಂತ್ರಜ್ಞಾನವೂ ಯುರೋಪಿನವರಲ್ಲಿ ಇದ್ದುದರಿಂದ ಅವರು ತಾವು ಉಳಿದವರಿಗಿಂತ ಹೆಚ್ಚು ಶ್ರೇಷ್ಟರು ಎಂದು ಭಾವಿಸುವಂತೆ ಆಯಿತು. ಕೈಗಾರಿಕಾ ಕ್ರಾಂತಿಯಿಂದ ನಾವು ಉಳಿದವರಿಗಿಂತ ಭಿನ್ನ ಎಂದು ಅವರೇ ಹೇಳುತ್ತಿದ್ದರು. ಯುರೋಪ್ ಹೆಚ್ಚು ಆಧುನಿಕ, ಅದು ಚಲನಶೀಲ. ಆದರೆ

ವಸಾಹತು ದೇಶಗಳು ಮಾತ್ರ ಜಡತ್ವದಿಂದ ಹೊರಗೆ ಬಂದಿಲ್ಲ. ಆದ್ದರಿಂದ ಅವರು ಆಳಿಸಿಕೊಳ್ಳುವುದಕ್ಕೆ ಸರಿ ಎಂದು ಯುರೋಪಿನವರು ಭಾವಿಸದರು. ಅವರಿಗೆ ಯಾವ ಚರಿತ್ರೆಯೂ ಇಲ್ಲ. ಅದು ಎಷ್ಟು ಮುಂದೆ ಹೋಗಿತ್ತು ಎಂದರೆ ಯುರೋಪಿನವರನ್ನು ಹೊರತುಪಡಿಸಿಕೊಂಡು ಉಳಿದವರು ನಿಜವಾಗಿಯೂ ಯಾವುದೇ ರೀತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಲಾರರು ಎನ್ನುವ ಕಲ್ಪನೆಯು ಅವರಿಗೆ ಇತ್ತು. ಅದಕ್ಕೆ ಒಂದು ಪ್ರತಿಕ್ರಿಯೆಯನ್ನು ಕಾರಂತರು ಹೀಗೆ ಕೊಡುತ್ತಾರೆ

'ಮನುಷ್ಯನಿಗೆ ಮತ್ತೇನಿಲ್ಲದೆ ಹೋದರೂ ಬಾಯಿಯಾದರೂ ಚೆನ್ನಾಗಿರಬೇಕು ಎನ್ನುತ್ತಾರೆ. 'ಬಾಯಿಯಿದ್ದ ಮಗ ಬದುಕಿಯಾನು' ಎಂಬ ಗಾದೆ ಹುಟ್ಟಿದ್ದು ಹಾಗೆ. ಮಾತನ್ನು ಕಲಿತ ಮನುಷ್ಯ ತನ್ನ ಸುತ್ತಮುತ್ತಣ ಜಗತ್ತನ್ನು ಒಲಿಸಲು ಕಲಿತುದು ಬಾಯಿಯಿಂದಲೇ! ಅದನ್ನು ಗೆಲ್ಲಲು, ಗೆದ್ದು ಆಳಲು ಕಲಿತದ್ದೂ ಬಾಯಿಯಿಂದಲೇ. ಅವರವರ ಬಾಯಿಯ ಯೋಗ್ಯತೆಯ ಮೇಲೆ ಜನ ಉಳಿಯುತ್ತಾರೆ; ಆಳುತ್ತಾರೆ; ಅಳಿಯುತ್ತಾರೆ. ಬದುಕುವ ಪ್ರಾಪ್ತಿ ಎಲ್ಲ ಜೀವಿಗಳಿಗೂ ಇದೆ: ಆದರೆ, ಆಳುವ ಯೋಗ್ಯತೆ ಎಲ್ಲರಲ್ಲೂ ಇರಲಾರದು: ಅಳಿಯುವ ವಿಧಿ ಯಾರಿಗೂ ತಪ್ಪಿದ್ದಲ್ಲ. ಈ ಮಾತು ವ್ಯಕ್ತಿಗೂ, ಯಾವತ್ತು ಜೀವ ಜಗತ್ತಿಗೂ ಅನ್ವಯಿಸುತ್ತದೆ; ಊರಿಗೂ ಅನ್ವಯಿಸುತ್ತದೆ: ಒಂದೊಂದು ದೇಶಕ್ಕೂ ಅನ್ವಯಿಸುತ್ತದೆ.

ಬಾಯಿಯ ಬಲದಿಂದಲೇ ಬದುಕಬಲ್ಲ ಜನರನ್ನು ನಾವು ನಮ್ಮ ಸುತ್ತಲೂ ಆಗಾಗ ಕಾಣುತ್ತಿರುತ್ತೇವೆ. ಅಂಥ ನಾವು, ಅನೇಕರ ಬಾಯಿ ಮಾತುಗಳಿಗೆ ಮರುಳಾಗಿ, ವಂಚನೆಗೊಂಡು, ಅನಂತರ ಅಳುತ್ತೇವೆ. ಆದರೂ, ನೂರಾರು ಜನರು ತಮ್ಮ ಬಾಯಿಯ ಚಮತ್ಕಾರದಿಂದಲೋ, ಬಡಿವಾರದಿಂದಲೋ, ವಾಗ್ದಾರದಿಂದಲೋ ಜೀವನವನ್ನು ಸಾಗಿಸುತ್ತಾರೆ. ಎಲ್ಲಿ ಬಾಯಿ ತೆರೆಯಬೇಕು, ಎಲ್ಲಿ ತೆರೆಯಲೇ ಬಾರದು: ಒಮ್ಮೆ ತೆರೆಯುವುದಾದರೂ ಎಷ್ಟು ಮತ್ತು ಹೇಗೆ ಎಂಬುದನ್ನು ಅಂಥವರು ಕಲಿತಿರುತ್ತಾರೆ. ಈ ವಿದ್ಯೆ ತಂತಮ್ಮ ಜೀವನವನ್ನು ಸಾಗಿಸಲು ಮಾತೇ ಸಂಪರ್ಕ ಸಾಧನವಾದಂಥ ಮನುಷ್ಯರ ಪಾಲಿಗೆ ಅನಿವಾರ್ಯವಷ್ಟೆ!

ಹಾಗಿದ್ದ ಮೇಲೆ ಮಾತು ತೀರ ಮುಖ್ಯ, ಅದರ ಪ್ರಯೋಜನ ಬಹಳ ಎಂದಾದ ಮೇಲೆ, ಅದಕ್ಕೂ, ಮನಸ್ಸಿಗೂ ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆ ಬಂದೇ ಬರುತ್ತದೆ! ಆ ಸಂಬಂಧ ಎಂಥದು, ಹೇಗಿರಬೇಕು ಎಂಬುದನ್ನು ಯಾರಾದರೂ ತಮ್ಮ ಮನಸ್ಸನ್ನು ಬಾಯಿಯ ಮೂಲಕ ತೋಡಿಕೊಂಡ ಬಳಿಕವೇ ಕಲಿಯಬೇಕಾಗುತ್ತದೆ. ಆ ಅವಧಿಯಲ್ಲಿ ಬಾಯಿ ತೆರೆದು ಮನಸ್ಸನ್ನು ಬಿಚ್ಚಿ ಹೇಳಿದ ಮನುಷ್ಯ ದವಡೆ ಪೆಟ್ಟಿಗೆ ಗುರಿಯಾಗಲೂ ಬಹುದು, ಬೆನ್ನು ಚಪ್ಪರಿಕೆಗೆ

ಗುರಿಯಾಗಲೂಬಹುದು. ನಮ್ಮ ಮಾತನ್ನು ಕೇಳಿದವರ ವರ್ತನೆಯ ಮೇಲಿಂದ ನಾವು ಬಾಯಿಯ, ಅಂದರೆ ಬಾಯಿ ಮಾತಿನ, ಇತಿಮಿತಿಗಳನ್ನು ಕಲಿಯಲೇ ಬೇಕಾಗುತ್ತದೆ". {ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ–22; ಅಂಟಿದ ಅಪರಂಜಿ; ಕಾದಂಬರಿ–21; ಪು.ಸಂ.309}

ಕುಟುಂಬ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಗಂಡ ಮತ್ತು ಹೆಂಡತಿಯ ಸಂಬಂಧವು ಒಪ್ಪಿತವಾಗಿದ್ದು ಅದರ ವ್ಯಾಪ್ತಿಯು ಒಂದು ರೀತಿಯಲ್ಲಿ ಇರುತ್ತದೆ. ಆದರೆ ಇದನ್ನು ಮೀರಿದರೆ ಅದರ ಸ್ವರೂಪವು ಭಿನ್ನವಾಗುತ್ತದೆ. ಕುಟುಂಬ ಮತ್ತು ಅದರ ಸಂಬಂಧವನ್ನು ನಾವು ಆರ್ಥಿಕತೆಯ ಮೂಲಕವೇ ನೋಡಬೇಕಾಗುತ್ತದೆ. ಸಹಜ ಲೈಂಗಿಕ ಸಂಬಂಧ ಮತ್ತೊಂದು ಬಗೆಯದು. ಪರಸ್ಪರ ಸ್ನೇಹ ಎನ್ನುವುದು ಇನ್ನೊಂದು ರೀತಿಯದು. ಸಂಸ್ಕೃತಿ ಮತ್ತು ಅದರ ಪರಿಣಾಮವು ಇನ್ನೊಂದು ಬಗೆಯದು. ಅದು ಬೇರೆ ಬೇರೆ ಮಾದರಿಯ ಸ್ನೇಹವನ್ನು ಹೇಳುತ್ತವೆ. ನಮ್ಮನ್ನು ಸಂಸ್ಕೃತಿಯು ಕೆಲವು ರೀತಿಯಲ್ಲಿ ನಿಗದಿ ಮಾಡುತ್ತೇವೆ. ಇದನ್ನು ಸಮಾಜ ಮತ್ತು ಅದರ ಸದಸ್ಯರು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಬದುಕುತ್ತಾರೆ. ಯಾವುದು ನಮಗೆ ನಿಜವಾದ ಸಂಬಂಧ ಮತ್ತು ಯಾವುದು ಹುಸಿಯಾದ ಸಂಬಂಧವೆಂಬ ಅರಿವು ನಮಗೆ ಇರಬೇಕಾಗುತ್ತದೆ. ಕೆಲವು ಅಭಿವ್ಯಕ್ತಿಗಳು ಹುಸಿಯಾಗಿರುತ್ತವೆ. ಆದ್ದರಿಂದ ಸಮಾಜ ಮತ್ತು ಸಂಸ್ಕೃತಿಯ ನಡುವೆ ಇರುವ ಆಂತರಿಕ ಸಂಬಂಧವನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಯಾವುದೇ ಸಮಾಜಕ್ಕೂ ನಿಜವಾದ ಕೆಲವು ಅಗತ್ಯದ ಅಂಶಗಳು ಇರುತ್ತವೆ. ಉದಾಹರಣೆಗೆ ನಮ್ಮ ಕೃಷಿ ಪದ್ಧತಿಗೂ ನಮ್ಮ ಜೀವನಕ್ಕೂ ಒಂದು ಸಂಬಂಧವಿದೆ. ಕೃಷಿಯೇ ನಮಗೆ ಕೆಲವು ಜ್ಞಾನವನ್ನು ಕೊಡುತ್ತದೆ. ಒಂದು ಕೃಷಿಕೇಂದ್ರಿತ ಸಮಾಜಕ್ಕೆ ಅದರದೇ ಆದ ಒಂದು ಜ್ಞಾನವೂ ಇದೆ. ಕೃಷಿ ಮತ್ತು ಅದರ ವ್ಯವಹಾರವು ಒಂದು ಬಗೆಯದು. ಅದರಲ್ಲಿ ಇಡೀ ಜೀವನವೂ ಇರುತ್ತದೆ. ಅದರ ಜ್ಞಾನವನ್ನು ಶಾಲೆಯಲ್ಲಿ ಕಲಿಯಲು ಆಗುವುದೇ ಇಲ್ಲ. ಕೃಷಿ ಮತ್ತು ಅದರ ಜ್ಞಾನವನ್ನು ಇತರ ಜ್ಞಾನದ ಜೊತೆಗೆ ಹೋಲಿಸಲು ಬರುವುದು ಇಲ್ಲ. ವಾಸ್ತವವಾಗಿ ಯಾವುದನ್ನು ಸಮಾಜ ಮತ್ತು ಅದರ ಸಂಗತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಸಂಕೀರ್ಣವೂ ಹೌದು. ಅದರ ಸಂಬಂಧವನ್ನು ಕೃಷಿಯು ಹೇಳುವುದು ಒಂದು ರೀತಿಯಲ್ಲಿ ರೈತರು ತಮಗೆ ಬೇಕಾದ ಸಂಬಂಧವನ್ನು ನಿರ್ವಹಿಸುತ್ತಾರೆ. ತಮ್ಮ ಜ್ಞಾನವನ್ನು ಹಂಚಿಕೊಳ್ಳುತ್ತಾರೆ. ಕೃಷಿ ಮತ್ತು ಅದರ ಸಂಬಂಧವನ್ನು ಆಯಾ ದೇಶದ ಪರಿಸ್ಥಿತಿಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅಂದರೆ ಮಣ್ಣು ಮತ್ತು ಅದರ ಜೊತೆಗಿನ

ಸಂಬಂಧವು ಜೀವನವನ್ನು ರೂಪಿಸುತ್ತದೆ. ಕೃಷಿ ಮತ್ತು ಅದರ ಸನ್ನಿವೇಶಗಳು ನಮಗೆ ಬೇರೆ ಬೇರೆ ಹಾದಿಯನ್ನು ತೋರಿಸುತ್ತದೆ. ಚಿಗುರಿದ ಕನಸು ಕಾದಂಬರಿಯ ಈ ಕೆಳಗಿನ ಸಾಲುಗಳು ಉಲ್ಲೇಖನೀಯ. ಚಿಗುರಿದ ಕಾದಂಬರಿಯು ಉದಾಹರಣೆಯಾಗಿದೆ.

ಬಂಡವಾಳವಾದವು ಮತ್ತೊಂದು ಬಗೆಯದು. ಅದರಲ್ಲಿ ಬರುವ ಸಂಬಂಧವನ್ನು ಇತ್ಯಾತ್ಮಕವಾಗಿಯೇ ಹೇಳಲು ಬರುವುದು ಇಲ್ಲ. ಸಹಕಾರ ಮತ್ತು ಸ್ಪರ್ಧೆಯು ಒಂದು ರೀತಿಯಲ್ಲಿ ಇರುತ್ತದೆ. ನಮ್ಮ ಹಿರಿಯರು ನಮಗೆ ಕೃಷಿಯನ್ನು ಹೇಳಿಕೊಟ್ಟರು. ಅದರ ಮೂಲಕವೇ ನಮಗೆ ಬೇರೆಯದಾದ ಶಕ್ತಿಯನ್ನು ಒದಗಿಸಿದರು. ಕೃಷಿಯೂ ಒಂದು ರೀತಿಯ ಮನೋಸ್ಥಿತಿ. ಅದು ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತದೆ. ಇನ್ನೊಂದು ರೀತಿಯನ್ನು ಇಲ್ಲಿ ಹೇಳಬೇಕು– ಅದು ನಮ್ಮ ಹಿರೀಕರನ್ನು ನಾವು ನೋಡುವ ಕ್ರಮ. ಅದರಲ್ಲಿ ಗತಿಸಿದ ನಮ್ಮ ಹಿರೀಕರನ್ನು ನಾವು ಆರಾಧಿಸುತ್ತೇವೆ. ಅದು ಒಂದು ರೀತಿಯಿಂದ ಧಾರ್ಮಿಕವಾದ ಸಂಗತಿಯೂ ಹೌದು. ನಮಗೆ ನೀತಿಯನ್ನು ಮತ್ತು ನಮಗೆ ನಡವಳಿಕೆಯನ್ನು ನಮ್ಮ ಹಿರೀಕರು ಮತ್ತು ನಮ್ಮ ಅಜ್ಜ ಅಜ್ಜಿಯರು ಹೇಳಿಕೊಟ್ಟರು. ಕೆಲವು ವಿಧಿ ನಿಷೇಧಗಳನ್ನು ಅವರು ನಮಗೆ ತಿಳಿಸಿದರು. ಜಾತಿ ಮತ್ತು ಧರ್ಮ ಎನ್ನುವುದು ಹೀಗೆಯೂ ಬೆಳೆದು ನಂಬಿಕೆಯಾಗಿ ಬಂದಿದೆ. ಅದರ ಹಿಂದೆ ಕೆಲವು ಆಲೋಚನೆಗಳು ಇರುತ್ತದೆ. ಜಾತಿಯು ಒಂದು ಸಾಂಸ್ಕೃತಿಕವಾದ ರೂಪ. ಅದು ಜೀವನವನ್ನು ಹೇಳುತ್ತದೆ. ಜಾತಿಯು ಒಂದು ಬಗೆಯಲ್ಲಿ ಜೀವನವನ್ನು ಆವರಿಸಿಕೊಳ್ಳುತ್ತದೆ. ಅದರ ಅಗತ್ಯಗಳೇ ಬೇರೆಯಾಗಿರುತ್ತದೆ. ಜಾತಿಗೂ ಭಾರತೀಯ ಅರ್ಥಶಾಸ್ತ್ರಕ್ಕೂ ಒಂದು ಸಂಬಂಧವು ಕಲ್ಪಿತವಾಗಿದೆ. ಜಾತಿಗೆ ಭಾರತೀಯ ಚರಿತ್ರೆಯಲ್ಲಿ ಒಂದು ಮಹತ್ವದ ಪಾತ್ರವೂ ಇದೆ. ಅದೇ ರೀತಿಯಲ್ಲಿ ಅದರ ನಿಯಮಗಳು ಬೇರೆಯಾಗಿವೆ. ಧರ್ಮವು ಒಂದು ಬಗೆಯಲ್ಲಿ ಕೆಲವು ಆಲೋಚನೆಗಳನ್ನು ಹೇಳುತ್ತವೆ. ಹಾಗೆ ನೋಡಿದರೆ ಅದರ ನಿಯಮವು ಮೂಲಭೂತವಾಗಿಯೇ ಬೇರೆಯಾಗಿರುತ್ತದೆ. ಧರ್ಮವು ಒಂದು ರಚನೆಗಳು ಹೌದು. ಅದು ನಮ್ಮನ್ನು ಒಂದು ದಾರಿಯಲ್ಲಿ ಕರೆದುಕೊಂಡು ಹೋಗುತ್ತದೆ. ಆದರೆ ಅದು ಹೇಳುವ ಮನುಷ್ಯ ಮತ್ತು ಅವನ ಅಸ್ತಿತ್ವವು ಒಂದು ಬಗೆಯಲ್ಲಿ ಇರುತ್ತದೆ. ಮನುಷ್ಯನೆಂದು ಕರೆಯುವಾಗ ಯಾವುದನ್ನು ಮನುಷ್ಯತ್ವ ಎಂದು ಹೇಳುತ್ತೇವೆ ಎನ್ನುವುದು ಮಾತ್ರವೇ ಇಲ್ಲಿ ಮುಖ್ಯವಾಗುತ್ತದೆ. ಸಮಾಜದಲ್ಲಿ ಕೆಲವಕ್ಕೆ ಸ್ಥಿರವಾದ ರೂಪವಿದ್ದು ಅದು ಬದಲಾಗುವುದಿಲ್ಲ. ಆದರೆ ಮನುಷ್ಯ

ಮತ್ತು ಅವನ ಕಾಳಜಿಗಳಿಗೆ ಬೇರೆ ಆಯಾಮವಿರುತ್ತದೆ. ಯಾವುದು ನಮಗೆ ಯಜಮಾನಿಕೆಯನ್ನು ಹೇಳುತ್ತದೆ ಮತ್ತು ಅದರ ಪರಿಣಾಮವನ್ನು ಮಾತ್ರವೇ ನೋಡಬೇಕಾಗುತ್ತದೆ.

ಚರಿತ್ರೆಯಲ್ಲಿ ಕೆಲವು ಒತ್ತಡಗಳು ಇದ್ದು ಅದು ಯಾವುದು ಮತ್ತು ಯಾಕೆ ಅದು ಹಾಗಿದೆ ಎಂದು ನೋಡಬೇಕು. ವಾಸ್ತವವಾಗಿ ಯಾವುದೇ ಬರಹಗಳಿಗೆ ಒಂದು ಆಯಾಮವು ಇರುತ್ತದೆ. ಅದು ಅದನ್ನು ಅದೇ ಪ್ರಸ್ತುತ ಮಾಡುತ್ತದೆ. ಚರಿತ್ರೆಯ ಅಧ್ಯಯನವೆಂದರೆ ಅದರಲ್ಲಿ ಕೆಲವನ್ನು ಮಾತ್ರವೇ ಪ್ರತ್ಯೇಕ ಮಾಡುವುದಲ್ಲ. ಈ ದೃಷ್ಟಿಯಿಂದ ಚರಿತ್ರೆಯಲ್ಲಿ ಯಾವುದು ಮಹತ್ವದ ಪಾತ್ರವನ್ನು ವಹಿಸುತ್ತದೆ ಮತ್ತು ಅದರಲ್ಲಿ ನಿರ್ಣಾಯಕವಾಗುತ್ತದೆ ಹಾಗೂ ಅದರ ಸಾರಂಶವು ಯಾವುದು ಎನ್ನುವುದೂ ಮಹತ್ವದ ಅಂಶವಾಗಿದೆ. ಚರಿತ್ರೆಯಲ್ಲಿ ಯಾವುದನ್ನು ಹಾಜರು ಮಾಡಲಾಗುತ್ತದೆ ಎನ್ನುವುದು ಮಹತ್ವದ ಅಂಶ. ಹಾಗೆ ನೋಡುವುದಿದ್ದರೆ ನಮ್ಮ ಹಿಂದಿನ ಸಮಾಜದಲ್ಲಿ ಕೆಲವರು ಮಾತ್ರವೇ ಬಲಿಷ್ಟರಾಗಿದ್ದರು. ಅವರೇ ಸಮಾಜವನ್ನು ಮತ್ತು ಅದರ ಆಗು ಹೋಗುಗಳನ್ನು ನಿರ್ಧರಿಸುತ್ತಿದ್ದರು. ಮನುಷ್ಯ ಮತ್ತು ಅವನ ಭೌತಿಕ ಅಸ್ತಿತ್ವವನ್ನು ಯಾವುದು ನಿರ್ಧರಿಸುತ್ತದೆ ಎನ್ನುವುದು ಮಹತ್ವದ ಭಾಗವೂ ಆಗಿದೆ. ಮನುಷ್ಯನು ಒಂದೇ ರೀತಿಯಲ್ಲಿ ಇರಲಿಲ್ಲ. ಮತ್ತು ಇರುವುದು ಇಲ್ಲ. ಅವನು ಬದಲಾಗುತ್ತಾನೆ ಅಷ್ಟೇ ಅಲ್ಲ. ಮನುಷ್ಯನು ಸಾಮಾಜಿಕವಾಗಿಯೂ ಆಗಿದ್ದಾನೆ. ಮತ್ತು ಅವನು ಪರಿಸರವನ್ನು ತನಗೆ ಬೇಕಾದ ರೀತಿಯಲ್ಲಿ ಬದಲು ಮಾಡಿಕೊಂಡಿದ್ದಾನೆ. ಹೀಗಾಗಿ ಚರಿತ್ರೆ ಮತ್ತು ಅದರ ಸ್ವರೂಪವನ್ನು ಈ ಕಾರಣದಿಂದ ಬೇರೆ ಮಾಡಿಕೊಂಡು ನೋಡಬೇಕಾಗುತ್ತದೆ. ಚರಿತ್ರೆಯು ಬದಲಾಗುತ್ತಾ ಹೋದಂತೆ ಮನುಷ್ಯ ಮತ್ತು ಅವನ ಸ್ವಭಾವವು ಬದಲಾಗುತ್ತದೆ. ಆದ್ದರಿಂದ ವ್ಯಕ್ತಿಯನ್ನು ಚರಿತ್ರೆಯಿಂದ ಬೇರೆ ಮಾಡಿಕೊಂಡು ನೋಡಲು ಬರುವುದು ಅಸಾಧ್ಯವಾಗುತ್ತದೆ. ವಾಸ್ತವವಾಗಿ ಚರಿತ್ರೆ ಮತ್ತು ಅದರ ಹಿಂದಣ ಅಧಿಕಾರಕ್ಕೆ ಒಂದು ಸಂಬಂಧವಿದೆ. ಆದ್ದರಿಂದ ಅನೇಕರು ಚರಿತ್ರೆಯ ಅಧ್ಯಯನವನ್ನು ಮಾಡುವಾಗ ಅಧಿಕಾರವನ್ನು ಕೇಂದ್ರ ಮಾಡುತ್ತಾರೆ. ಚರಿತ್ರೆಯಲ್ಲಿ ಯಾವುದು ಹೆಚ್ಚು ಅಧಿಕೃತವಾಗಿ ಮತ್ತು ಯಾವುದು ಪ್ರಧಾನ ಮತ್ತು ಯಾವುದು ಅಧೀನವಾಗಿದೆ ಎನ್ನುವುದು ಅಧ್ಯಯನ ಯೋಗ್ಯ. ಯಾವುದೇ ಸಮಾಜಕ್ಕೆ ಪ್ರಾಯೋಗಿಕವಾದ ಸಮಸ್ಯೆಯು ಇರುತ್ತದೆ. ಚಾರಿತ್ರಿಕವಾದ ಚಹರೆಗಳು ಇರುತ್ತವೆ.

ವಾಸ್ತವವಾಗಿ ಅಧಿಕಾರವೆನ್ನುವುದೂ ಚರಿತ್ರೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದರದೇ ಆದ ಚಹರೆಯನ್ನು ರೂಪಿಸುತ್ತದೆ. ಈ ಚಹರೆಯನ್ನು

ಮಾತ್ರವೇ ನಂಬಿ ನಾವು ಚರಿತ್ರೆಯನ್ನು ನೋಡಲು ಬರುವುದು ಇಲ್ಲ. ಅಧಿಕಾರವನ್ನು ವಹಿಸುವವರು ನಿರ್ದಿಷ್ಟವಾದ ಸಾಮಾಜಿಕ ಸಂಬಂಧವನ್ನು ರೂಪಿಸುತ್ತಾರೆ. ಅದು ಸಮಸ್ಯೆಯೂ ಆಗಿರುತ್ತದೆ. ಸಮಾಜ ಮತ್ತು ಅದರೊಂದಿಗೆ ಇರುವ ಸಂಬಂಧವನ್ನು ನಾವು ಇತ್ಯಾತ್ಮಕವಾಗಿಯೂ ನೋಡಬೇಕಾಗುತ್ತದೆ. ಮತ್ತು ಅದನ್ನು ನೋಡಬೇಕಾದ ಮತ್ತು ಗ್ರಹಿಸಬೇಕಾದ ಅಗತ್ಯಗಳು ಬೇರೆಯಿರುತ್ತವೆ. ಬೆಂಜಮಿನ್ ಅನೇಕವನ್ನು ಹೇಳಿದ್ದಾನೆ. ಅವನಲ್ಲಿ ಇದು ಅತ್ಯಂತ ಮುಖ್ಯವಾದ ಪ್ರಶ್ನೆ. ಭಾಷೆ ಮತ್ತು ಅದರ ಹಿಂದೆ ಇರುವ ರಾಜಕಾರಣವನ್ನು ಅವನು ಪ್ರಸ್ತಾವಿಸುತ್ತಾನೆ. ಆದರೆ ಸಾಹಿತ್ಯ ಮತ್ತು ಅದರ ಸಿದ್ಧಾಂತಗಳಿಗೂ; ನೀತಿ ಮತ್ತು ಅದರ ಸಾರಕ್ಕೂ ವ್ಯತ್ಯಾಸವಿದೆ. ಅದನ್ನು ಹೀಗೆ ಹೇಳಬಹುದು: ನೀತಿಶಾಸ್ತ್ರವು ವಾಸ್ತವವಾಗಿ ಕೆಲವು ಮೌಲ್ಯವನ್ನು ಹೇಳುತ್ತದೆ. ಅದನ್ನು ಸಾಹಿತ್ಯದ ಕುರಿತು ಹೇಳುವ ಸಂದರ್ಭದಲ್ಲಿ ಅಳವಡಿಸಬೇಕೆ ಅಥವಾ ಬೇಡವೇ ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗುತ್ತದೆ. ಸಾಹಿತ್ಯ ಮತ್ತು ಅದರ ಸಿದ್ಧಾಂತವನ್ನು ಈವತ್ತು ನಾವು ಇತ್ಯಾತ್ಮಕವಾಗಿಯೂ ಹೇಗೆ ನೋಡಬೇಕು ಮತ್ತು ಅದನ್ನು ಹೇಗೆ ಗ್ರಹಿಸಬೇಕು ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗುತ್ತದೆ. ಸಾಹಿತ್ಯ ಮತ್ತು ಅದರ ಸಿದ್ಧಾಂತವನ್ನು ನಾವು ನೋಡುವುದು ಮತ್ತು ಅದನ್ನು ಗ್ರಹಿಸುವುದು ನಿಜವಾಗಿಯೂ ಹೇಗೆ ಎನ್ನುವುದು ಮೂಲಭೂತವಾದ ಸಮಸ್ಯೆ. ಸಾಹಿತ್ಯ ಮತ್ತು ಅದರ ಪ್ರಶ್ನೆಯನ್ನು ನಾವು ಈವತ್ತು ನೋಡುವುದು ನೀತಿಶಾಸ್ತ್ರದ ಪ್ರಶ್ನೆಯು ಆಗುವುದು ಇಲ್ಲ. ಅಷ್ಟೇ ಅಲ್ಲ ಸಾಹಿತ್ಯ ಮತ್ತು ಅದರ ನಿಲುವು ಬರೀ ನೀತಿ ಮತ್ತು ಅದರ ಸಾಧ್ಯತೆಯನ್ನು ಹೇಳುವುದು ಇಲ್ಲ. ಸಾಮಾನ್ಯವಾದ ಜನರಿಗೆ ನೀತಿಶಾಸ್ತ್ರವು ಕೆಲವನ್ನು ಹೇಳುತ್ತದೆ. ಅದನ್ನು ಹೇಗೆ ಅನುಷ್ಠಾನಕ್ಕೆ ತರಬೇಕು ಎಂದು ವಿಧಿಸುತ್ತದೆ. ಸಾಮಾನ್ಯರು ಹೇಳುವ ನೀತಿಯು ಒಂದು ಬಗೆಯದು ಆಗಿತ್ತು. ಅದನ್ನು ತರಗತಿಯ ನೀತಿಯೆಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಸಾಮಾನ್ಯರು ಮತ್ತು ಅವರ ಮಾತುಕತೆಗಳು ಒಂದು ರೀತಿಯಲ್ಲಿ ಇರುತ್ತದೆ. ಅದರಲ್ಲಿ ಬರುವ ಸಂಕಥನವು ಒಂದು ಮಾದರಿಯಲ್ಲಿ ಇರುತ್ತದೆ. ಆದರೆ ಅದೇ ಮಾದರಿಯನ್ನು ತರಗತಿಯಲ್ಲಿ ಹೇಳುವುದಿಲ್ಲ. ಉದಾಹರಣೆಗೆ ನಿತ್ಯದ ಮಾತು ಕತೆ.

"ಅಂತಹ ಅಂತರಕ್ಕೆ ಕಾರಣವೇನು? ಅವರು ಅಷ್ಟೆಲ್ಲ ಬದಲಾದದ್ದು ಹೇಗೆ? ಎಂಬುದರ ರಹಸ್ಯ ಹುಡುಕುತ್ತಿದ್ದಾನೆ ಗಣೇಶ, ಶಾಲೆಯ ದಾಖಲೆಯಲ್ಲಿ ಆತ ಕೆ. ಗಣೇಶ ಹೆಗ್ಗಡೆ. 'ಕೆ' ಅಂದರೆ ಕಾಸರಕನ ಮನೆ. ಅವನ ಮೇಲು ಹೆಸರು: ಅಥವಾ ಅಡ್ಡ ಹೆಸರು ಹೆಗ್ಗಡೆ. ಅವನ ಸಹಪಾಠಿ ಭವಾನಿ ಶಂಕರ

ಹೇಳುತ್ತಾನೆ "ನೋಡು, ನಾನು ಮುಂಬಯಿಗೆ ಹೋದಮೇಲೆ ನನ್ನ ಹೆಸರನ್ನು ಹೇಳಿ ಕರೆದರೆ, ನೀನೇ ಕರೆ ಅಥವಾ ಇನ್ನೊಬ್ಬರೇ ಕರೆಯಲಿ, ತಲೆ ಎತ್ತಲಿಕ್ಕೇ ಇಲ್ಲ" ಎಂದು.

"ಯಾಕೋ!"

"ನೋಡು, ಅದು ಮುಂಬಯಿ: ಬೆಪ್ಪು ತಕ್ಕಡಿಗಳ ಹಾಗೆ ಹೆಸರಿಟ್ಟುಕೊಳ್ಳುವ ಸ್ಥಳವಲ್ಲ. ಅಲ್ಲಿ ಠಿಕಾಯಿಸಲು ಹೆಸರು ಭರ್ಜರಿಯಾಗಿರಬೇಕು. ಅದು ಜನರ ಕಿವಿಗೆ ಹೊಸತಾಗಿ ಕೇಳಿಸಬೇಕು. ನನ್ನ ಅಜ್ಜನ ಹೆಸರು ಮಂಕಿ ಶಾಂತಪ್ಪಯ್ಯ ಎಂದಿತ್ತು. ಹೆಸರಿನ ಜತೆಯಲ್ಲಿ ಅಪ್ಪ ಮತ್ತು ಅಯ್ಯ ಸೇರಿಸಿ ಅದರ ಮರ್ಯಾದೆಯೇ ಹೋಯಿತು. ಹಾಗಾಗಿ, ನನ್ನ ತಂದೆ ಎಮ್. ನಾರಾಯಣ ರಾವ್ ಎಂದು ಬದಲಾಯಿಸಿಕೊಂಡರು. ನಮ್ಮೂರಿನ ಒಂದು ಹಿಂಡು ಮಂದಿ, ಮುಂಬಯಿಗೆ ಹೋದವರೆಲ್ಲರೂ, ರಾವುಹಿಡಿದ ಹಾಗೆ ಮಾಡಿದರೆ ಅವರನ್ನು ಗುರುತಿಸುವುದು ಹೇಗೆ ಸಾಧ್ಯ?" {ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ಸಂಪುಟ–22; ಅಂಟಿದ ಅಪರಂಜಿ–21; ಪು.ಸಂ–19}

ವಾಸ್ತವವಾಗಿ ಯಾವುದೇ ಸಮಾಜ ಮತ್ತು ಅದರ ವರ್ಗಗಳಿಗೆ ನಿರ್ದಿಷ್ಟವಾದ ಆಯಾಮವು ಇರುತ್ತದೆ. ಸಾಹಿತ್ಯ ಮತ್ತು ಅದರ ಸಾಧ್ಯತೆಯು ಈ ದೃಷ್ಟಿಯಿಂದ ಬೇರೆಯೂ ಆಗುತ್ತದೆ. ಅಂದರೆ ಸಾಹಿತ್ಯವನ್ನು ನೋಡುವುದು ಮತ್ತು ಗ್ರಹಿಸುವುದು ಬರೀ ಒಂದು ನೀತಿಶಾಸ್ತ್ರದ ಪುರಾಣವೆಂದು ಭಾವಿಸಬೇಕಾದ ಯಾವ ಅಗತ್ಯವೂ ಇಲ್ಲ. ನೀತಿಗೆ ಕೆಲವು ನಿಯಮವು ಇರುತ್ತದೆ. ನೀತಿ ಮತ್ತು ಅದರ ಗ್ರಹಿಕೆಯು ಇರುವುದು ಒಂದು ರೀತಿಯಲ್ಲಿ.

ಸಾಹಿತ್ಯದಲ್ಲಿ ಸಂಕೇತ ಮತ್ತು ಅದರ ನಿಲುವುಗಳು ಬೇರೆಯಾಗುತ್ತವೆ. ಭಾಷಾಶಾಸ್ತ್ರ ಮತ್ತು ಅದರ ವ್ಯವಸ್ಥೆಯು ಇರುವುದು ಒಂದು ರೀತಿಯಲ್ಲಿ. ಸಂಕೇತವನ್ನು ನೋಡುವುದು ಮತ್ತು ಗ್ರಹಿಸುವುದು ಮತ್ತೊಂದು ರೀತಿಯಲ್ಲಿ. ಅನೇಕ ಶೈಕ್ಷಣಿಕ ಸಂಸ್ಥೆಗಳು ನಿಜವಾದ ಸೈದ್ಧಾಂತಿಕವಾದ ಸಮಸ್ಯೆಯನ್ನು ಎದುರಿಸುವುದು ಇಲ್ಲ. ಸಂಘರ್ಷಾತ್ಮಕವಾದ ಸಾರ್ವಜನಿಕವಾದ ನಿಲುವನ್ನು ಅದು ವಿವರಿಸಲು ಹೋಗುವುದು ಇಲ್ಲ. ವಾಸ್ತವವಾಗಿ ಅನೇಕರು ಯಾವುದೇ ಬದ್ಧತೆಯು ಅಗತ್ಯವೇ ಇಲ್ಲವೆಂದು ಅನೇಕರು ಹೇಳುತ್ತಾರೆ. ಆದರೆ ನಿಜವಾಗಿಯೂ ಸಮಸ್ಯೆಯು ಬೇರೆಯಿದೆ. ತರಗತಿ ಮತ್ತು ಅದರ ಸ್ವರೂಪವನ್ನು ನಾವು ನೋಡುವುದು ಮತ್ತು ಅದನ್ನು ಗ್ರಹಿಸುವುದು ಒಂದು ರೀತಿಯಲ್ಲಿ. ಅದರಲ್ಲಿ ಬುದ್ಧಿವಂತಿಕೆ ಮತ್ತು ತರಬೇತಿಯ ಪ್ರಶ್ನೆಯು ಬರುತ್ತದೆ. ಒಬ್ಬ ಮೆಕಾನಿಕ್ ಮತ್ತೊಬ್ಬ ಮೆಕಾನಿಕ್‌ಗೆ

ಹೇಳುವುದು ಕೆಲವು ಅಂಶಗಳನ್ನು ಮಾತ್ರವೇ. ಅದನ್ನು ಆಧರಿಸಿಕೊಂಡು ಮತ್ತೊಬ್ಬ ವಾಹನವನ್ನು ರಿಪೇರಿ ಮಾಡುತ್ತಾನೆ. ಇದರಲ್ಲಿ ಸೂಚನೆಗಳು ಮಾತ್ರವೇ ಇರುತ್ತವೆ. ಈ ಸೂಚನೆಗಳು ಇಲ್ಲಿ ಕೆಲಸವನ್ನು ಮಾಡುತ್ತವೆ. ಒಬ್ಬ ತಜ್ಞ ಮತ್ತೊಬ್ಬ ತಜ್ಞನಿಗೆ ಕೆಲವನ್ನು ಮಾತ್ರವೇ ವಿವರಿಸುತ್ತಾನೆ. ಅದು ಅಷ್ಟೇ ಆಗಿರುತ್ತದೆ. ಹಾಗೆ ನೋಡುವುದಿದ್ದರೆ ಅನೇಕ ಸಂಗತಿಗಳು ವಿಶ್ವಾತ್ಮಕವಾಗಿರುತ್ತವೆ. ಮತ್ತು ಅದರಲ್ಲಿ ಜೀವನ ಮತ್ತು ಅದರ ಸತ್ಯಗಳು ಇರುತ್ತವೆ. ಯಾವಾಗ ನಾವು ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲವೋ ಸಮಸ್ಯೆಯು ಉಂಟಾಗುತ್ತದೆ. ವಾಸ್ತವವಾಗಿ ಇದನ್ನು ನೋಡುವಾಗ ತರಗತಿಗಳು ನೀತಿಯನ್ನು ವಿವರಿಸುವ ಜಾಗಗಳು ಅಲ್ಲವೆನ್ನುವುದು ಸ್ಪಷ್ಟವಾಗುತ್ತವೆ. ಇಲ್ಲಿ ಮತ್ತೆ ಕೆಲವು ಸೂಕ್ಷ್ಮವಾದ ಅಂಶಗಳು ಇರುತ್ತವೆ. ಜೀವನ ಮತ್ತು ಅದರ ಸತ್ಯಗಳು ವಾಸ್ತವವಾಗಿ ಬೇರೆ ಇರುತ್ತವೆ. ಅದನ್ನು ನೋಡುವುದು ಮತ್ತು ಗ್ರಹಿಸುವುದು ಅತ್ಯಂತ ಮುಖ್ಯವಾಗುತ್ತದೆ. ತತ್ವಜ್ಞಾನವು ಹೇಳುವ ಅನೇಕ ವಿಚಾರಗಳು ಜೀವನ ಮತ್ತು ಅದರ ಸತ್ಯವನ್ನು ನಿರೂಪಿಸುತ್ತವೆ. ಅದಕ್ಕೆ ಸೈದ್ಧಾಂತಿಕತೆಯು ಇರುತ್ತದೆ. ಯಾವುದನ್ನು ಈವತ್ತು ಜಗತ್ತು ಎಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ನಾವು ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಅದರಲ್ಲಿ ಜೀವನವನ್ನು ಗ್ರಹಿಸುವ ವಿಧಾನವೂ ಇರುತ್ತದೆ. ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ನಾವು ಮುಕ್ತವೆಂದು ಮತ್ತು ಅದರಲ್ಲಿ ಬರೀ ಸ್ವಾತಂತ್ರ್ಯದ ಪ್ರಶ್ನೆಯು ಇದೆ ಎಂದು ಹೇಳಬೇಕಾದ ಅಗತ್ಯವಿಲ್ಲ. ಅದನ್ನು ಸರ್ವತಂತ್ರ ಸ್ವತಂತ್ರವೆಂದು ಹೇಳಬೇಕಾದ ಅಗತ್ಯವಿಲ್ಲ. ಆದರೆ ಯಾವುದೇ ಸೈದ್ಧಾಂತಿಕತೆಗೆ ಅದರದೇ ಆದ ಆಯಾಮವು ಇರುತ್ತದೆ.

ಕಾರಂತರು ಏನಿದೆಯೋ ಅದನ್ನು ನಮ್ಮ ಮುಂದೆ ಇಡುತ್ತಾರೆ. ಅದರಾಚೆಗೆ ಏನೂ ಹೇಳಲು ಹೋಗುವುದಿಲ್ಲ. ಅವರ ಅಳಿದ ಮೇಲೆ ಕಾದಂಬರಿಯಯು ಅತ್ಯಂತ ಮುಖ್ಯವಾದ ಕಾದಂಬರಿಗಳಲ್ಲಿ ಒಂದು. (ಅಳಿದ ಮೇಲೆ ಲೇಖಕರ ಮಾತು ಗಮನಿಸಬಹುದು.

ತಾತ್ವಿಕತೆಗೆ ಒಂದು ತಾಂತ್ರಿಕತೆ ತಳಹದಿಯು ಇರುತ್ತದೆ. ಸಾರ್ವಜನಿಕ ಮತ್ತು ವಿಶ್ವಾತ್ಮಕವಾದ ನೆಲೆಗಳು ಇರುತ್ತವೆ. ಸಿದ್ಧಾಂತ ಮತ್ತು ಅದರ ಅನ್ವಯದ ಸಾಧ್ಯತೆಯು ಇರುತ್ತದೆ. ಸಿದ್ಧಾಂತ ಮತ್ತು ಅದರ ಸಾಧ್ಯತೆಯನ್ನು ಈ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ. ಆದರೆ ಶೈಕ್ಷಣಿಕ ವಲಯದಲ್ಲಿ ಯಾವುದು ನಿರ್ದಿಷ್ಟವಾಗಿದೆ ಮತ್ತು ಯಾವುದು ನಿಜವಾಗಿಯೂ ಅಗತ್ಯವಿದೆ ಮುಂತಾದ ಚರ್ಚೆಗಳು ಇದ್ದೇ ಇರುತ್ತವೆ. ಅಂದರೆ ಸಾಹಿತ್ಯ ಮತ್ತು ಅದರ ದೃಷ್ಟಿಕೋನವನ್ನು

ಈವತ್ತು ಸಮಾಜಕ್ಕೆ ಅಣಿಗೊಳಿಸಬೇಕಾದ ಅಗತ್ಯವೂ ನಮಗಿದೆ. ಆದ್ದರಿಂದ ಲೇಖಕನಿಗೆ ಈವತ್ತು ಒಂದು ನಿರ್ದಿಷ್ಟವಾದ ತಳಹದಿಯು ಇರಬೇಕಾಗುತ್ತದೆ. ಜೀವನ ಮತ್ತು ಸಾಹಿತ್ಯವನ್ನು ನೋಡುವ ಕ್ರಮವನ್ನು ನಾವು ಹೇಗೆ ನಿರ್ಧಾರ ಮಾಡಬೇಕು ಮತ್ತು ಅದನ್ನು ಗ್ರಹಿಸುವುದು ಹಾಗೂ ಅದನ್ನು ಸ್ವೀಕರಿಸುವುದು; ಅದಕ್ಕೆ ಪ್ರತಿಕ್ರಿಯಿಸುವುದು ಯಾವ ರೀತಿಯಲ್ಲಿ ಎನ್ನುವುದು ಮೂಲಭೂತವಾದ ಪ್ರಶ್ನೆ. ಗಣಿತಶಾಸ್ತ್ರ ಮತ್ತು ನಿಸರ್ಗ ವಿಜ್ಞಾನವು ಇಂದು ಬೇರೆ ಬೇರೆಯಾಗಿದೆ ಎಂದು ಹೇಳಲು ಬರುವುದು ಇಲ್ಲ. ಅದರಲ್ಲಿ ಕೆಲವು ತರ್ಕಗಳು ಇರುತ್ತವೆ. ಮತ್ತು ಅದರಲ್ಲಿ ಒಂದು ಜಾಗದ ಗಣಿತ ಮತ್ತೊಂದು ಜಾಗದ ಗಣಿತ ಎಂದು ಹೇಳಲು ಸಾಧ್ಯವೇ ಇಲ್ಲ. ಆದರೆ ಸಾಹಿತ್ಯ ಮತ್ತು ಅದರ ಪರಿಣಾಮವನ್ನು ಶಾಲೆ ಮತ್ತು ಕಾಲೇಜುಗಳಲ್ಲಿ ಕಲಿಸುವುದು ಮತ್ತು ಅದನ್ನು ರೂಪಿಸುವುದು ಒಂದು ವಿಧಾನದಲ್ಲಿ ಮಾತ್ರವೇ ಆಗಿದೆ.

ಶಾಲೆ ಮತ್ತು ಕಾಲೇಜುಗಳಲ್ಲಿ ಅಧ್ಯಾಪಕರು ಸಾಹಿತ್ಯವನ್ನು ಅದರ ಉಪಯೋಗವನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದು ಸೀಮಿತವಾಗಿಯೇ. ಸಾಹಿತ್ಯವನ್ನು ಕಲಿಸಲು ಅಧ್ಯಾಪಕರು ಕೆಲವು ಸೀಮಿತವಾದ ರೇಖೆಗಳನ್ನು ಮಾತ್ರವೇ ರೂಪಿಸಿಕೊಳ್ಳುತ್ತಾರೆ. ಜ್ಞಾನ ಮತ್ತು ಅದರ ಉತ್ಪಾದನೆಗೆ ತರಗತಿಯಲ್ಲಿ ಕೆಲವು ಸೀಮಿತವಾದ ರೇಖೆಗಳು ಮಾತ್ರವೇ ಇರುತ್ತವೆ. ಅಧ್ಯಾಪಕರು ಕೆಲವು ಸೀಮಿತವಾದ ವಿಷಯಗಳನ್ನು ಕುರಿತು ಪ್ರಬಂಧವನ್ನು ಬರೆಯಲು ಹೇಳುತ್ತಾರೆ. ಅದರ ಮೂಲಕವೇ ವಿದ್ಯಾರ್ಥಿಗಳನ್ನು ತರಬೇತಿ ಮಾಡುತ್ತಾರೆ. ಅಧ್ಯಾಪಕರಿಗೆ ಕೆಲವು ಪಠ್ಯ ಪುಸ್ತಕಗಳು ಬೇಕಾಗುತ್ತವೆ. ಅದನ್ನು ಇಟ್ಟುಕೊಂಡು ಅವರು ಮಾತಾಡುತ್ತಾರೆ. ಅವರಿಗೆ ಅದು ಮುಖ್ಯ. ಜ್ಞಾನವೆಂದರೆ ಅದು ಪಠ್ಯವನ್ನು ಕುರಿತು ಹೇಳುವ ವಿಷಯಗಳು ಮಾತ್ರವೇ ಆಗುತ್ತವೆ ಎಂದು ಗೊತ್ತಿರಬೇಕು. ತರಗತಿಗಳು ವಾಸ್ತವವಾಗಿ ಕೆಲವು ವಿಷಯಗಳನ್ನು ಮಾತ್ರವೇ ಹೇಳುತ್ತವೆ. ಅದರ ಉದ್ದೇಶವೂ ಅತ್ಯಂತ ಸೀಮಿತವಾದ ಒಂದು ಪ್ರಕ್ರಿಯೆ. ಅದರಲ್ಲಿ ಇರುವ ವಿಷಯಗಳೂ ಸೀಮಿತ. ಆದರೆ ವಿಷಯವು ಅಷ್ಟು ಸುಲಭವೂ ಆಗಿಲ್ಲ. ಕೃತಿ ಮತ್ತು ಅದರ ನಿರೂಪಣೆಯು ಮಾತ್ರವೇ ತರಗತಿಗಳಲ್ಲಿ ಪ್ರಧಾನವಾದ ಅಂಶವೂ ಆಗಿರುತ್ತದೆ. ಅದರಲ್ಲಿ ಬೇರೆ ವಿಷಯಗಳನ್ನು ಅನೇಕರು ವಿವರಿಸಲು ಹೋಗುವುದೂ ಇಲ್ಲ. ಅದರಲ್ಲಿ ಅವರಿಗೆ ಹೆಚ್ಚು ಮುಖ್ಯವಾಗುವುದು ಆಯಾ ಸಂದರ್ಭದ ವಿವರಣೆಯು ಮಾತ್ರ. ಸಿಲೆಬಸ್ ಮಾತ್ರವೇ ನಮಗೆ ಮುಖ್ಯವಾಗುತ್ತವೆ ಮತ್ತು ಅದನ್ನು ಹೊರತುಪಡಿಸಿಕೊಂಡು ಯಾವುದನ್ನು ಹೇಳಬೇಕಾದ ಅಗತ್ಯವೇ ಇಲ್ಲವೆಂದು ಅವರು ಭಾವಿಸುತ್ತಾರೆ. ಸಾಹಿತ್ಯವನ್ನು

ಓದುವುದು ಮತ್ತು ಕಲಿಸುವುದು ಅಂದರೆ ಅದರಲ್ಲಿ ಬರೀ ನಿರ್ದಿಷ್ಟವಾದ ಒಂದು ಸಂಕಥನವು ಮಾತ್ರವೇ ಇದೆ ಎಂದು ಹೇಳುತ್ತಾರೆ. ಸಾಹಿತ್ಯದ ಕುರಿತು ಮಾತಾಡುವುದು ಅಂದರೆ ಆಕಾಶದ ಕೆಳಗಿನ ಎಲ್ಲವನ್ನು ನಾವು ಮಾತಾಡುವುದು ಎಂದು ಮಾತ್ರವೇ ಎಂದು ಅನೇಕರು ಭಾವಿಸುತ್ತಾರೆ. ಆದರೆ ಗಣಿತ ಮತ್ತು ಅದರ ಶಾಸ್ತ್ರವು ಬೇರೆಯಾಗಿದೆ. ಅದನ್ನು ದೇಶ ಮತ್ತು ಅದರ ಗಡಿಯ ಮೂಲಕವೇ ನಾವು ಗುರುತಿಸುವುದು ಸರಿಯಾದ ಕ್ರಮವಲ್ಲ. ಗಣಿತಶಾಸ್ತ್ರ ಮತ್ತು ಅದರ ಸ್ವರೂಪವು ಬೇರೆಯಾಗಿದೆ. ಅದನ್ನು ಸೀಮಿತವಾಗಿ ನೋಡಲು ಬರುವುದು ಇಲ್ಲ. ಆದರೆ ಸಾಹಿತ್ಯವನ್ನು ಓದುವುದು ಮತ್ತು ಬರೆಯುವುದು ಒಂದು ಕ್ರಮ. ಅದರಲ್ಲಿ ಕಲಿಕೆಯನ್ನು ನಾವು ಗಣಿತದ ರೀತಿಯಲ್ಲಿ ಮಾಡಲು ಬರುವುದು ಇಲ್ಲ. ಮೇಷ್ಟ್ರುಗಳು ಸಾಹಿತ್ಯವನ್ನು ಓದುವುದು ಮತ್ತು ಬರೆಯುವುದು ಹಾಗೂ ಗ್ರಹಿಸುವುದು ಒಂದು ಕ್ರಮದಲ್ಲಿ ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬಹುದು. ಸಂಪ್ರಬಂಧವನ್ನು ಬರೆಯಲು ಹೇಳುವುದು ಮತ್ತು ಅದನ್ನು ತಿದ್ದುವುದು ಮಾತ್ರವೇ ನಮ್ಮ ಕೆಲಸವೆಂದು ಅನೇಕರು ಭಾವಿಸಿದಂತೆ ಕಾಣುತ್ತದೆ. ಅನೇಕರು ಸಾಹಿತ್ಯವನ್ನು ಓದಲು ಮತ್ತು ಗ್ರಹಿಸಲು ಬೇಕಾದ ಅರಿವನ್ನು ನೋಡುವುದು ಬೇರೆ ರೀತಿಯಲ್ಲಿ ನೋಡಲು ಹೋಗುವುದಿಲ್ಲ.

ಸಾಹಿತ್ಯವನ್ನು ಕುರಿತು ಮಾತಾಡುವುದು ಅಂದರೆ ಸಾಹಿತ್ಯವನ್ನು ವೈಭವೀಕರಿಸುವುದೂ ಅಲ್ಲ. ಅದರಲ್ಲಿ ವ್ಯತ್ಯಾಸವಿದೆ. ಅದರಲ್ಲಿ ಭಿನ್ನತೆಗಳು ಇವೆ. ಸಾಹಿತ್ಯದಲ್ಲಿ ಅನೇಕರು ಸ್ವಂತಿಕೆ ಮತ್ತು ಅದರ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಸಾಹಿತ್ಯ ಮತ್ತು ಅದರ ಸಂಕಥನವೆಂದರೆ ಅದನ್ನು ನಾವು ಒಂದು ಆಧ್ಯಾತ್ಮಿಕವಾದ ಸಂವಾದವೆಂದು ಭಾವಿಸಬೇಕಾದ ಅಗತ್ಯವಿಲ್ಲ. ರಚನೆ ಮತ್ತು ಅದರ ರೂಪ ಹಾಗೂ ಸಂಕೇತಗಳನ್ನು ನಾವು ಈವತ್ತು ಹೇಗೆ ನೋಡಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ವಾಸ್ತವವಾಗಿ ಯಾವತ್ತೂ ನಾವು ಇದರ ಅರಿವನ್ನು ಹೊಂದುವುದು ಅತ್ಯಂತ ಅಗತ್ಯವಾಗಿದೆ. ಬರೀ ಸಾಹಿತ್ಯ ಮತ್ತು ಅದರ ಸಂಕಥನಗಳನ್ನು ನಾವು ಸೀಮಿತವಾದ ಒಂದು ಸಂಗತಿಯೆನ್ನುವಂತೆ ನೋಡುತ್ತೇವೆ. ಸಾಹಿತ್ಯ ಮತ್ತು ಅದರ ಸ್ವರೂಪವನ್ನು ನಾವು ಈವತ್ತು ನೋಡುವಾಗ ಅದರ ಅರಿವನ್ನು ನಾವು ಹೇಗೆ ಮಾಡಿಕೊಳ್ಳಬೇಕು ಎನ್ನುವುದು ಮುಖ್ಯವಾದ ಸಮಸ್ಯೆ. ಸಾಹಿತ್ಯವನ್ನು ಅದರ ಅನನ್ಯತೆಯ ಕಾರಣದಿಂದ ಮಾತ್ರವೇ ನಾವು ಹೇಳಲು ಬರುವುದು ಇಲ್ಲ. ಸಾಹಿತ್ಯ ಮತ್ತು ಅದರ ಅನನ್ಯತೆಯು ಒಂದು ರೀತಿಯಲ್ಲಿ ಇರುತ್ತದೆ. ಅದನ್ನು ನೋಡುವುದು ಮತ್ತು ಗ್ರಹಿಸುವುದು ಒಂದು ಕ್ರಮದಲ್ಲಿ. ಹಾಗೆಂದು ಅದರಲ್ಲಿ ಅನನ್ಯತೆಯು ಇದೆ ಎಂದು ಭಾವಿಸಬೇಕಾದ

ಅಗತ್ಯವಿಲ್ಲ. ಅದು ರೂಪುಗೊಂಡದ್ದು ಒಂದು ಹಿನ್ನೆಲೆಯಿಂದ. ಸಾಹಿತ್ಯ ಮತ್ತು ಅದರ ಸಂಯೋಜನೆಯು ಮಾತ್ರವೇ ನಮಗೆ ಅತ್ಯಂತ ಮುಖ್ಯವಾದದ್ದು ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಲೇಖಕ ಮತ್ತು ಅವನ ಕೊಡುಗೆಯನ್ನು ಮಾತ್ರವೇ ನೋಡುವುದು ಮಾತ್ರವೇ ಸಾಕಾಗುವುದು ಇಲ್ಲ. ಅದರಲ್ಲಿ ಅವನ ತಾತ್ವಿಕತೆಯ ಪ್ರಶ್ನೆಯು ಯಾವುದು ಎನ್ನುವುದು ಬಹಳ ಮುಖ್ಯ. ಲೇಖಕ ಮತ್ತು ಅವನ ಕೊಡುಗೆಯು ಯಾವ ಮಟ್ಟದ್ದು ಎಂದು ಹೇಳುವಾಗ ಅವನ ತಾತ್ವಿಕತೆಯು ಅತ್ಯಂತ ಮಹತ್ವದ್ದು. ಲೇಖಕ ಮತ್ತು ಅವನ ನಿಲುವು ಒಂದು ಕಾಲದಲ್ಲಿ ಒಂದು ರೀತಿಯಲ್ಲಿ ಇರುತ್ತದೆ. ಮತ್ತೊಂದು ಕಾಲದಲ್ಲಿ ಮತ್ತೊಂದು ರೀತಿಯಲ್ಲಿ ಇರುತ್ತದೆ. ಆದರೆ ಇದನ್ನು ನೋಡುವಾಗ ನಾವು ತಾತ್ವಿಕತೆಯನ್ನು ಮರೆಯಲು ಆಗುವುದು ಇಲ್ಲ.

ಸಿದ್ಧಾಂತವು ನಮಗೆ ಕೆಲವು ವಿಷಯಗಳಲ್ಲಿ ಒಂದು ತೋರು ದೀಪವೂ ಹೌದು. ಅದರಲ್ಲಿ ಅನೇಕ ಅಂಶಗಳು ಇವೆ. ಅದನ್ನು ನಾವು ಗ್ರಹಿಸಬೇಕಾದ ಅಗತ್ಯವೂ ಇದೆ. ಯಾವುದೇ ಸಿದ್ಧಾಂತದಲ್ಲಿ ಒಂದು ನಿಲುವು ಎನ್ನುವುದು ಬಹಳ ಮುಖ್ಯ. ಅದರಲ್ಲಿ ನಿಲುವು ಇಲ್ಲದೇ ಹೋದರೆ ಅದನ್ನು ಸ್ವೀಕರಿಸುವುದು ಅತ್ಯಂತ ಕಷ್ಟವೂ ಆಗಿರುತ್ತದೆ ಕಾರಂತರ ಕಾದಂಬರಿಯಲ್ಲಿ ಬರುವ ಒಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸಬಹುದು.

"ಇನ್ನೆಷ್ಟೋ ಬಾರಿ ಆ ಹುಡುಗಿ, ತನ್ನ ಗಂಡನೊಡನೆ ತನ್ನ ಅತ್ತೆಯು ತನ್ನನ್ನು ಮುದ್ದಾಗಿ ನಡೆಸಿಕೊಂಡ ರೀತಿಯನ್ನು ಬಣ್ಣಿಸಿ ಹೇಳುವುದುಂಟು. "ಅವರೂ ಹೆಚ್ಚಿಗೆ ಮಾತನಾಡುವವರಲ್ಲ: ನನ್ನ ಕೈಯನ್ನು ಹಿಡಿದಾರು, ಕವುಳು ಸವರಿಯಾರು, ಹೆಚ್ಚೆಂದರೆ 'ಕಮಲು, ನೀನು ನನ್ನ ಮಗನ ಮನಸ್ಸನ್ನು ನೋಯಿಸಬೇಡ' ಎಂದು ನಿಮ್ಮನ್ನು ನೆನೆದು ಹೇಳಿಯಾರು. ನನಗಷ್ಟೇ ಸಾಕಪ್ಪ, ಅವರ ಆಶೀರ್ವಾದ ಒಂದಿದ್ದರೆ ಸಾಕು ನನಗೆ."

"ಹಾಗಾದರೆ ಮಲಗಿಕೋ: ಒಂದು ಗಡದ್ದು ನಿದ್ದೆ ಮಾಡು. ನನಗೂ ದಣಿವಾಗಿದೆ: ನಾನೂ ಮಲಗಿಕೊಳ್ಳುತ್ತೇನೆ. ಹಾಳು ಬಾವಿಗೆ ಹರಕು ಹಗ್ಗ–ಅಂತ ಗಾದೆ. ನನ್ನಷ್ಟೇ ವೈನಾದ ಹೆಂಡತಿ ನೀನು!" ಎಂದು ನಕ್ಕು, ಆತ ಮಲಗಿಕೊಂಡ. ಕಮಲುವಿಗೆ ಮಾತ್ರ ನಿದ್ದೆ ಬರಲಿಲ್ಲ. ಮನೆಗೆ ಬಂದು ಹೋಗುತ್ತಿದ್ದ ಹಿರಿಯಾಕೆ ಮೀನಾಕ್ಷಿ ಅವಳ ಕಿವಿಯ ಮೇಲೆ ಏನೇನೋ ಸುದ್ದಿಗಳನ್ನು ತಂದು ಕೆಡವಿ ಹೋಗಿದ್ದಳು. ಹಾಗಾಗಿ–ತುಸು ಹೊತ್ತಿನ ಬಳಿಕ, ಗಂಡನ ಹಸ್ತವನ್ನು ಎತ್ತಿಕೊಂಡು "ನಿಮಗೆ ನಿದ್ದೆ ಬಂತೇ?" ಎಂದು ಕೇಳಿದಳು.

"ಇಲ್ಲ. ಯಾಕೆ?"

"ಏನೇನೋ ಕೇಳಿದೆ. ನನ್ನ ಕಿವಿಯ ಮೇಲೆ ಬಿದ್ದಂಥ ಸುದ್ದಿ. ನಿಮಗೆ ಹೇಳದೆ ಇರಬಾರದು– ಅಂತ ಕಾಣಿಸುತ್ತದೆ."

ಆತ ಉದಾಸೀನವಾಗಿ "ಎಂಥ ಸುದ್ದಿ ಅದು? ಸುದ್ದಿ ಕೇಳಿದರೆ ಅಲ್ಲಿಂದಲ್ಲಿಗೇ ಬಿಡಬೇಕು" ಎಂದ.

"ಯಾರು ಯಾರದ್ದೂ ಸುದ್ದಿಯಾದರೆ ಹಾಗೆ ಮಾಡುವುದು ಸಮ."

"ಮತ್ತೆ? ನಿನ್ನ ಸುದ್ದಿಯೇ?"

"ಅಲ್ಲ"

"ನನ್ನ ಸುದ್ದಿಯೇ?"

"ಅಲ್ಲ"

"ಹಾಗಾದರೆ ಮಲಗಿಕೋ ಮಹಾರಾಯಿತಿ" ಎಂದ ಆತ.

{ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ಸಂಪುಟ–18; ಧರ್ಮರಾಯನ ಸಂಸಾರ– ಕಾದಂಬರಿ–17; ಪು.ಸಂ149–150} ಒಂದು ಮಾತುಕತೆಯು ಇದು. ಆದರೆ ಇದರಲ್ಲಿ ಒಂದು ಚಿತ್ರವು ಇದೆ. ಓದುಗರು ಇದನ್ನು ಬೇಗನೆ ಗ್ರಹಿಸಬಲ್ಲರು.

ಆಧ್ಯಾತ್ಮಿಕತೆ ಎಂಬ ಭ್ರಾಂತಿ

ಯಾವುದನ್ನು ಆಧುನಿಕ ಜಗತ್ತು ಕಾರಣವೆಂದು ಹೇಳುತ್ತದೆಯೋ ಅದರ ರೂಪವು ಅತ್ಯಂತ ವಿಶಿಷ್ಟವಾಗಿದೆ. ಅದರ ಪ್ರಭಾವವು ಅನೇಕ ಸಂಶೋಧನೆಗೆ ಕಾರಣವೂ ಆಗಿದೆ. ಕಾಂಟ್ ಮತ್ತು ಅವನ ಸಿದ್ಧಾಂತವು ಸಾಹಿತ್ಯ ಮತ್ತು ಸಂಸ್ಕೃತಿಯ ಸಿದ್ಧಾಂತದ ಮೇಲೆಯೂ ಪ್ರಭಾವವನ್ನು ಬೀರಿದೆ. ಅವನು ಕಾರಣವನ್ನು ಮತ್ತು ಅದರ ಸೈದ್ಧಾಂತಿಕ ಸ್ವರೂಪವನ್ನು ಹೇಳುವಾಗ ನೀತಿಯು ಏನನ್ನು ಹೇಳಿದೆ ಎಂದೂ ವಿಚಾರವನ್ನು ಮಾಡುತ್ತಾನೆ. ಅವನು ಪುನರುಜ್ಜೀವನವನ್ನು ವಿಮರ್ಶೆಯ ಯುಗವೆಂದು ಕರೆಯುತ್ತಾನೆ. ಫುಕೋ ಒಂದು ಸಂದರ್ಭದಲ್ಲಿ ಅಪ್ರಭುದ್ಧತೆ ಮತ್ತು ಪುನರುಜ್ಜೀವನವನ್ನು ವಿವರಿಸುವಾಗ ಕಾರಣ ಎನ್ನುವುದು ಮನುಷ್ಯರನ್ನು ಏನು ಮಾಡಿತು ಎಂದು ಹೇಳುತ್ತಾನೆ. ಅವನ ಪ್ರಕಾರ ಕಾರಣವು ಹೇಗೆ ನಿಷೇಧಾತ್ಮಕವಾಗಿತ್ತು ಎಂದೂ ವಿವರಿಸುತ್ತಾನೆ. ಅದು ಒಂದು ದೃಷ್ಟಿಯಿಂದ ನಮಗೆ ಬೇರೆ ಅರ್ಥವನ್ನು ಕೊಟ್ಟಿದೆ ನಿಜ. ಆದರೆ ಅದನ್ನು ಅತ್ಯಂತ ಹೆಚ್ಚು ಪ್ರಭುತ್ವವು ಬಳಸಿಕೊಂಡಿತ್ತು ಎನ್ನುವುದು ಫುಕೋನ ವಾದ. ಆಲೋಚನೆ ಮತ್ತು ಕ್ರಿಯೆ, ಸ್ವಾತಂತ್ರ್ಯ ಮತ್ತು ಜವಬ್ದಾರಿಗಳ ನಡುವೆ ಸಂಬಂಧವೂ ಇದೆ. ಕಾಂಟ್ ಮಾತ್ರ ಪುನರುಜ್ಜೀವನ ಎನ್ನುವುದು ವಿಶಿಷ್ಟವಾದ ಪ್ರಕ್ರಿಯೆ ಎಂದು ಹೇಳುತ್ತಾನೆ. ಅವನು ಕಾರಣವನ್ನು ಹೇಳುವಾಗ ಮತ್ತು ಪುನರುಜ್ಜೀವನವನ್ನು ವಿವರಿಸುವಾಗ ಅದರಲ್ಲಿ ಸಮೂಹ ಮತ್ತು ವ್ಯಕ್ತಿಗಳು ಭಾಗವಹಿಸಿದರು ಎಂದು ಹೇಳುತ್ತಾನೆ. ವ್ಯಕ್ತಿ ಮತ್ತು ಅವನ ಆಲೋಚನೆ ಹಾಗೂ ಅವನ ಸ್ವತಂತ್ರವಾದ ಗ್ರಹಿಕೆ ಹಾಗೂ ವಿಶ್ವಾತ್ಮಕವಾದ ಪ್ರಕ್ರಿಯೆಗೆ ಸಂಬಂಧವಿದೆ. ಈ ದೃಷ್ಟಿಯಿಂದ ಫುಕೋನ ವಾದವು ಸ್ವಲ್ಪ ಅಸ್ಪಷ್ಟತೆಯನ್ನು ಹೊಂದಿದೆ ಎಂದು ಹೇಳುತ್ತಾರೆ. (ಕತ್ರಿನಾ ಡೆಲಿಗಿಯೊರ್ಗಿ 2005 ಕಾಂಟ್ ಆಂಡ್ ದ ಕಲ್ಚರ್ ಆಫ್

ಎನ್‌ಲೈಟನ್‌ಮೆಂಟ್, ಪುಟ.58, ಸ್ಟೇಟ್ ಯುನಿರ್ವಸಿಟಿ ಆಫ್ ನ್ಯೂಯರ್ಕ) ಆದರೆ ಅದರಲ್ಲಿ ವ್ಯಕ್ತಿಗಳು ಮತ್ತು ಸಮೂಹಗಳು ಭಾಗವಹಿಸಿದ್ದನ್ನು ಫುಕೋ ಗಮನಿಸಲು ಹೋಗಿಲ್ಲ. ಪುನರುಜ್ಜೀವನದಲ್ಲಿ ಇಡೀ ಮನುಕುಲವೇ ಭಾಗವಹಿಸಿದೆ. ಫುಕೋ ಪುನರುಜ್ಜೀವನವು ಹೇಗೆ ಹೊಸ ಮನುಷ್ಯರನ್ನು ರೂಪಿಸಿದೆ ಎಂದು ಕೇಳುತ್ತಾನೆ. ಅದರಲ್ಲಿ ಅವನ ಪ್ರಶ್ನೆಗೆ ಹೆಚ್ಚು ಮಹತ್ವವಿದೆ. ಅವನು ಅದನ್ನು ಮುಂದುವರಿಸಿ ಸಮೂಹವು ಈ ಪ್ರಕ್ರಿಯೆಯಲ್ಲಿ ಹೇಗೆ ಭಾಗವಹಿಸಿದೆ ಎಂದೂ ಕೇಳುತ್ತಾನೆ. ಅಂದರೆ ಕಾರಣವು ಮಾತ್ರವೇ ಮುಖ್ಯವಾಗಿತ್ತೇ ಅಥವಾ ಬೇರೆ ಅಂಶಗಳು ಅದರಲ್ಲಿ ಇವೆಯೇ? ಕಾಂಟ್ ಹೇಳುವ ನಿಲುವನ್ನು ಫುಕೋ ಒಂದು ಅರ್ಥದಲ್ಲಿ ನಿರಾಕರಿಸಿದ್ದೂ ಅಷ್ಟೇ ನಿಜ. ಅದನ್ನು ಅಂದರೆ ಕಾಂಟ್ ಹೇಳುವ ನಿಲುವು ಒಂದು ಅರ್ಥದಲ್ಲಿ ಚರಿತ್ರೆಯ ಒಂದು ಆಂಶಿಕವಾದ ಸತ್ಯವೆಂದು ಭಾವಿಸುತ್ತಾನೆ. ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾದ ಪಲ್ಲಟಗಳು ಯಾವ ರೀತಿಯಲ್ಲಿ ಜರುಗಿದವು ಎಂದು ಕೇಳುತ್ತಾನೆ (ಅದೇ; ಪುಟ.59)

ಪುನರುಜ್ಜೀವನವು ಹೇಗೆ ವ್ಯಕ್ತಿ ಮತ್ತು ಅವನ ಸ್ವತಂತ್ರವಾದ ಆಲೋಚನೆಗೆ ಕಾರಣವಾದ್ದು ನಿಜ. ಪುನರುಜ್ಜೀವನವು ನಮಗೆ ಬೇರೆ ಆಯಾಮವನ್ನು ದೊರಕಿಸಿಕೊಟ್ಟಿರುವುದು ನಿಜ. ಅದು ನಮಗೆ ಹೊಸಜ್ಞಾನವನ್ನು ಕೊಟ್ಟಿತು ಎಂದು ಹೇಳುವಾಗಲೂ ಅದನ್ನು ನಾವು ದ್ವಂದ್ವಾತ್ಮಕವಾಗಿಯೂ ನೋಡಬೇಕಾಗುತ್ತದೆ. ಕಾಂಟ್ ಕಾರಣವನ್ನು ಹೇಳುವಾಗ ಅದನ್ನು ಒಂದು ಶುದ್ಧವಾದ ಪರಿಕಲ್ಪನೆ ಎನ್ನುವ ಥರ ಯೋಚನೆಯನ್ನು ಮಾಡುತ್ತಾನೆ. ಅವನಲ್ಲಿ ಶುದ್ಧವಾದ ಕಾರಣಗಳು ಮತ್ತು ಅದರ ಅರ್ಥಗಳು ಬೇರೆಯಾಗಿವೆ. ಆದರೆ ಅವನು ಕ್ರಿಟಿಕ್ ಆಫ್ ಪ್ಯೂರ್ ರೀಸನ್ ಎಂದು ಹೇಳುವುದು ಈ ಕಾರಣಕ್ಕೆ. ಆದರೆ ಯುರೋಪ್ ಮತ್ತು ಅದರ ಪುನರುಜ್ಜೀವನಕ್ಕೆ ಬೇರೆ ಅರ್ಥಗಳೂ ಇವೆ. ಅದೇ ವಸಾಹತು ಮತ್ತು ಇತರ ದೇಶಗಳಲ್ಲಿ ಪುನರುಜ್ಜೀವನ ಎನ್ನುವುದಕ್ಕೆ ಇನ್ನೊಂದು ಅರ್ಥವೂ ಇದೆ. ಅವುಗಳ ಸನ್ನಿವೇಶಗಳು ಬೇರೆ. ಅದನ್ನು ನಾವು ಬಹಳ ಎಚ್ಚರದಿಂದ ಬಿಡಿಸಬೇಕಾಗುತ್ತದೆ. ಹಾಗೆ ನೋಡಿದರೆ ಆಗ ವಿಮರ್ಶೆ, ಕಾರಣ, ಸ್ವಾತಂತ್ರ್ಯ ಮತ್ತು ಸಂಸ್ಕೃತಿಯೆನ್ನುವುದಕ್ಕೆ ಬೇರೆ ಬೇರೆ ಅರ್ಥಗಳು ಬಂದವು. ಯುರೋಪಿನ ಪುನರುಜ್ಜೀವನವು ಬೇರೆ ಥರ ಇದೆ. ಅದರಲ್ಲಿ ಸಮಾಜ ಮತ್ತು ಅದರ ಒತ್ತಡಗಳ ಪ್ರಶ್ನೆಗಳು ಇವೆ. ಅಷ್ಟೇ ಅಲ್ಲ ಆಗ ಅಲ್ಲಿ ಸಂಸ್ಕೃತಿ ಮತ್ತು ಕಾರಣಗಳನ್ನು ಜೊತೆಗೆ ತರಲಾಯಿತು. ಅಡರ್ನೊ ಮತ್ತು ಹೊರ್ಕೈಮಾರ್ ಅದನ್ನು ಒಂದು ಬಿಡುಗಡೆ ಎನ್ನುವ ಅರ್ಥದಲ್ಲಿಯೂ ನೋಡುತ್ತಾರೆ. ಫುಕೋ ಅದನ್ನು ಹೇಳುವಾಗ (ಡಿಸಿಪ್ಲಿನ್

ಅಂಡ್ ಪನಿಶ್) ಅದನ್ನು ಬುದ್ಧಿಜೀವಿಗಳ ಹಿನ್ನೆಲೆಯಲ್ಲಿ ನೋಡುತ್ತಾನೆ. ಅಡರ್ನೊ ಮತ್ತು ಹೊರ್ಕೆಮಾರ್ ಅದನ್ನು ಹೇಳುವಾಗ ಅದರಲ್ಲಿ ಸಾಮಾಜಿಕ ಸ್ವಾತಂತ್ರ್ಯ ಮತ್ತು ಪುನರುಜ್ಜೀವನ ಎನ್ನುವುದನ್ನು ಬೇರೆ ಮಾಡಲು ಆಗುವುದಿಲ್ಲವೆಂದು ಹೇಳುತ್ತಾರೆ. ಅವರು ಆಗಿನ ಸ್ಥಿತಿಯನ್ನು ಹೇಳುವಾಗ ಅದನ್ನು ಹೆಚ್ಚು ವಿವರವಾಗಿ ವಿಶ್ಲೇಷಣೆ ಮಾಡಬೇಕು ಎಂದು ಹೇಳುತ್ತಾರೆ. ಅವರ ತಾತ್ವಿಕವಾದ ಜಿಜ್ಞಾಸೆಯೆಂದರೆ ಅದು ಕೆಲವರಿಗೆ ಹೆಚ್ಚು ಉಪಯುಕ್ತವಾಗಿತ್ತು. ಆದ್ದರಿಂದಲೇ ಅನೇಕರು ಅದರ ಲಾಭವನ್ನು ಪಡೆದರು. ಆದ್ದರಿಂದ ಅದು ಚರಿತ್ರೆಯಲ್ಲಿ ಮಹತ್ವದ ಪ್ರಜ್ಞೆಯನ್ನು ರೂಪಿಸಿತು. ಅದರ ಜತೆಗೆ ಅದು ಹೊಸದಾದ ಬಾರ್ಬೆರಿಕ್ ಸನ್ನಿವೇಶಕ್ಕೂ ಕಾರಣವಾಯಿತು ಎಂದು ಹೇಳುತ್ತಾರೆ. ಅಡರ್ನೊ ಮತ್ತು ಹೊರ್ಕೆಮಾರ್ ಬರೆದ ಅತ್ಯಂತ ಮಹತ್ವದ ಕೃತಿಯೂ ಇದು. (ಅಡರ್ನೊ ಮತ್ತು ಹೊರ್ಕೆಮಾರ್ - ಡಯಲಿಕ್ಟ್ ಆಫ್ ಎನ್ಲೈಟನ್‌ಮೆಂಟ್) ಅವರು ಮತ್ತೊಂದು ಮಾತನ್ನು ಹೇಳುತ್ತಾರೆ. ಅದು ವಿಶ್ವಾತ್ಮಕವಾದ ಒಂದು ಲಕ್ಷಣವನ್ನು ಹೊಂದಿತ್ತು. ಆದ್ದರಿಂದ ಅದನ್ನು ಅತ್ಯಂತ ಸುಲಭವಾಗಿ ತಳ್ಳಿಹಾಕಲು ಬರುವುದೂ ಇಲ್ಲ. ವೆಬರ್ ಇದನ್ನು ಹೇಳುವಾಗ ಪುನರುಜ್ಜೀವನ ಎನ್ನುವುದು ಒಂದು ಕಬ್ಬಿಣದ ಪಂಜರ ಎಂದು ಹೇಳುತ್ತಾನೆ. ಅದರ ಜೊತೆಗೆ ಅವನು ಮತ್ತೊಂದು ಅಂಶವನ್ನು ಹೇಳುತ್ತಾನೆ. ಪುನರುಜ್ಜೀವನ ಎನ್ನುವುದು ಹೇಗೆ ಹೊಸದಾದ ಅಧಿಕಾರದ ಕೇಂದ್ರವನ್ನು ನಿರ್ಮಿಸಿತು ಎನ್ನುವುದು ಅವನ ನಿಲವು. ಅಡರ್ನೊ ಮತ್ತು ಹೊರ್ಕೆಮಾರ್ ಒಂದು ಮಾತನ್ನು ಹೇಳುತ್ತಾರೆ; ಆಗ ವಿರಾಮ ಎನ್ನುವುದು ಕೂಡಾ ಹೆಚ್ಚು ಚಾಲ್ತಿಗೆ ಬಂದಿತು.

ಅದು ನಿಜವಾದ ಅರ್ಥದಲ್ಲಿ ವಿರಾಮದ ಕಾಲವು ಆಗಿರಲಿಲ್ಲ. ಯಜಮಾನಿಕೆ ಎನ್ನುವುದು ಹೇಗೆ ಮತ್ತೆ ಮತ್ತೆ ಬೇರೆ ಬೇರೆ ರೂಪದಲ್ಲಿ ಬಂತು ಎನ್ನುವುದನ್ನು ಅವರು ವಿವರವಾಗಿ ಚರ್ಚೆ ಮಾಡುತ್ತಾರೆ. ಅದರಲ್ಲಿ ಅವರು ಹೇಳುವುದು: ಯಜಮಾನಿಕೆ ಎನ್ನುವುದು ಬರೀ ನಿಸರ್ಗದ ಮೇಲೆ ಮಾತ್ರವೇ ಆಗಿರಲಿಲ್ಲ. ಅದು ಅನ್ಯರ ಮೇಲೆಯೂ ಯಜಮಾನಿಕೆಯು ಆಗಿತ್ತು. ಹಾಗೆಂದು ಅವರು ಚಾರಿತ್ರಿಕವಾದ ಪ್ರಸ್ತುತತೆಯನ್ನು ಅಲ್ಲಗಳೆಯುತ್ತಾರೆ ಎನ್ನಲಾಗುವುದಿಲ್ಲ. ಅದರಲ್ಲಿ ಒಂದು ಬಿಡುಗಡೆಯ ಆಶಯವೂ ಇತ್ತು ಎಂದು ಅವರು ಪ್ರತಿಪಾದಿಸುತ್ತಾರೆ. ಅದಕ್ಕೆ ಒಂದು ಸಾಮಾಜಿಕವಾದ ಪ್ರಸ್ತುತತೆಯು ಇದೆ ಎಂದು ಅವರ ಅಭಿಪ್ರಾಯ. ಕಾಂಟ್ ಹೇಳುವ ಕಾರಣ ಎನ್ನುವುದು ಕೊನೆಯದಾಗಿ ಸ್ವಾತಂತ್ರ್ಯವನ್ನು ಹೇಳುತ್ತದೆ. ಅದರ ಜೊತೆಗೆ ಅದು ಮನುಷ್ಯರ ಸಮಾಜವನ್ನು ಹೇಳುತ್ತದೆ. ಆದರೆ ಫುಕೋ ಅದನ್ನು ಬೇರೆ ಅರ್ಥದಲ್ಲಿ ನೋಡುತ್ತಾನೆ. ಅವನು ನ್ಯಾಯ ಮತ್ತು ಮನುಷ್ಯತ್ವ

ಎನ್ನುವುದು ಹೇಗೆ ಚಾಲ್ತಿಗೆ ಬಂತು ಎಂದು ಚರ್ಚೆ ಮಾಡುತ್ತಾನೆ. ಆಧುನಿಕ ಯುಗವು ಹೇಗೆ ಹಿಂಸೆ ಮತ್ತು ಅಧಿಕಾರ ಮತ್ತು ಅದರ ಅರ್ಥವು ಹೇಗೆ ಬೇರೆಯಾಯಿತು ಎಂದು ಹೇಳುವುದು ಮಾತ್ರವೇ ಅಲ್ಲ, ಅವನು ಆಧುನಿಕ ಯುಗದ ಶಿಕ್ಷೆಯ ರೂಪಗಳು ಹೇಗೆ ಬೇರೆಯಾದವು ಎಂದೂ ಹೇಳುತ್ತಾನೆ. ಆದರೆ ಚರಿತ್ರೆಯ ಮಹಾನ್ ನಿರೂಪಣೆಯನ್ನು ಅವನು ನಿರಾಕರಿಸುತ್ತಾನೆ. ಅವನ ಚರ್ಚೆಯಲ್ಲಿ ಶಾಶ್ವತವಲ್ಲದ ನಂಬಿಕೆಗಳು ಹೇಗೆ ಚಾಲ್ತಿಗೆ ಬಂದವು ಎನ್ನುವುದೂ ಇದೆ. ಯಾವುದನ್ನು ನಾವು ನ್ಯಾಯ ಎಂದು ಹೇಳುತ್ತೇವೆಯೋ ಅದರ ರೂಪಗಳು ಹೇಗೆ ಬದಲಾದವು ಎನ್ನುವುದೂ ಅವನಿಗೆ ಮುಖ್ಯವಾಗುತ್ತದೆ. ಅಧಿಕಾರ ಮತ್ತು ಯಂತ್ರಗಳು ಹೇಗೆ ಒಂದು ಮೈತ್ರಿಯನ್ನು ಸಾಧಿಸುತ್ತವೆ ಎಂದು ಅವನು ತನ್ನ 'ಬರ್ತ್ ಆಫ್ ಪ್ರಿಸನ್' ಕೃತಿಯಲ್ಲಿ ಹೇಳುತ್ತಾನೆ. ಕುತೂಹಲಕಾರಿಯಾದ ಒಂದು ಸಂಗತಿಯನ್ನು ಅವನು ಹೇಳುತ್ತಾನೆ: ಹೇಗೆ ನ್ಯಾಯ ಮತ್ತು ಅಧಿಕಾರವು ಹಿಂಸೆಯನ್ನು ಮತ್ತು ಅನೈತಿಕತೆಯನ್ನು ನ್ಯಾಯವಾಗಿ ಪರಿವರ್ತನೆ ಮಾಡುತ್ತದೆ ಎನ್ನುವುದು ಅವನ ಗ್ರಹಿಕೆಯ ಅತ್ಯಂತ ಮಹತ್ವದ ಸಾರವೂ ಆಗಿದೆ. ಶಿಸ್ತು ಮತ್ತು ಅಧಿಕಾರವು ಹೇಗೆ ಆಧುನಿಕ ಸಮಾಜದಲ್ಲಿ ಒಂದು ಮಾನದಂಡವೂ ಆಯಿತು ಎಂದು ಫುಕೋ ವಿವರಿಸುತ್ತಾನೆ. ಅವನೇ ಹೇಳಿದ ಮತ್ತೊಂದು ಪರಿಕಲ್ಪನೆಯೆಂದರೆ ದಂಡನಾತ್ಮಕವಾದ ಕಾರಣಗಳು (ಪುನಿಟೇಟಿವ್ ರೀಸನ್) ಅಧಿಕಾರವು ಒಂದು ಹಂತದಲ್ಲಿ ಹೆಚ್ಚು ಆದರ್ಶೀಕರಣಕ್ಕೆ ಗುರಿಯಾಗುತ್ತದೆ. ಅಂದರೆ ಅಧಿಕಾರವನ್ನು ಜನರು ಒಂದು ಆದರ್ಶವೆಂದು ಭಾವಿಸುತ್ತಾರೆ. (ಫುಕೋ – ಡಿಸಿಪ್ಲಿನ್ ಅಂಡ್ ಪನಿಶ್) ಅದರ ಜೊತೆಗೆ ಜ್ಞಾನ ಮತ್ತು ಶಿಸ್ತು ಎನ್ನುವುದು ಒಟ್ಟಿಗೆ ಹೋಗುತ್ತವೆ. ಅಧಿಕಾರದಲ್ಲಿ ವಸ್ತು ಮತ್ತು ಪರಿಣಾಮ ಎನ್ನುವುದು ಮಾನದಂಡ. ಆದರೆ ಒಂದು ಹಂತದಲ್ಲಿ ಫುಕೋ ಸ್ವಯಂ ವಿಮರ್ಶೆ ಅದರ ಕಾರಣಗಳನ್ನು ಒಪ್ಪುತ್ತಾನೆ. ಈ ವಿಷಯದಲ್ಲಿ ಅವನು ಕಾಂಟ್ ವಾದಕ್ಕೆ ಕೃತಜ್ಞನೂ ಆಗಿದ್ದಾನೆ. (ಬ್ಯಾಕ್ ಟು ಕಾಂಟ್). ಕಾರಂತರ ಕಾದಂಬರಿಗಳ ಮುಖೇನ ಮತ್ತೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಬಹುದು. ಕಾರಂತರ 'ನಿರ್ಭಾಗ್ಯ ಜನ್ಮ' ಮೊದಲ ಸಾಮಾಜಿಕ ಕಾದಂಬರಿ (1925). ಈ ಕಾದಂಬರಿಯಲ್ಲಿ ಎರಡು ಮುಖ್ಯ ರಾಜಕೀಯ ಪ್ರಶ್ನೆಗಳಿವೆ : ಒಂದು ಮಹಾತ್ಮ ಗಾಂಧಿಯವರಿಂದ ಪ್ರೇರಿತವಾದ ರಾಟೆ ಮತ್ತು ನೂಲಿನ ಸಂಗತಿ. ಎರಡನೆಯದಾಗಿ ಪತಿತ ಸ್ತ್ರೀಯರ ಉದ್ಧಾರ. ಈ ಕಾದಂಬರಿಯಲ್ಲಿ ಬರುವ 'ಆನಂದ'ನು ಈ ರೀತಿಯಲ್ಲಿ ಹೇಳುತ್ತಾನೆ :

"ಅದನ್ನೇ ಹೇಳಲಿರುವೆನು, ಸಾವಕಾಶ ಮಾಡು. ರಾಟಿಯೆಂದರೇನೆಂಬುದು ಗೊತ್ತಿದೆಯಷ್ಟೆ? ಮೊದಲು ನಮ್ಮ ದೇಶದಲ್ಲಿ ಅಂತಹ ರಾಟಿಗಳಿಂದಲೇ ನೂಲುತೆಗೆಯುತ್ತಿದ್ದರು. ಬಹುಸೊಗಸಾದ ನೂಲನ್ನು ಆ ನೂಲಿನಿಂದ ತಯಾರಾದ ಬಟ್ಟೆಗಳು ವಿಲಾಯತಿಯ ತನಕವೂ ಹೋಗುತ್ತಿದ್ದವು. ಇಂದು ಆ ಕೈಗಾರಿಕೆಯು ನಾಶವಾಗಿ ನಾವು ಪರದೇಶೀಯ ಬಟ್ಟೆಯನ್ನು ಕೊಂಡುಕೊಳ್ಳುತ್ತಿರುವೆವು ಇದರಿಂದ ನಮ್ಮ ದೇಶದ ದುಡ್ಡು ಹೊರಕ್ಕೆ ಹೋಗಿ ನಾವು ಬಡ ಬಗ್ಗರಿಗೆ ಕೆಲಸ ವಿಲ್ಲದಂತಾಗಿ ಅವರು ಹೊಟ್ಟೆಗೆ ಗತಿಯಿಲ್ಲದೆ ಸಾಯುತ್ತಿರುವರು. ಪುನಃ ನಾವು ನೂಲನ್ನು ಆರಂಭಿಸಬೇಕೆಂದೂ ಹಾಗೆ ಮಾಡಿದರೆ ನಮ್ಮ ಬಡ ಬಗ್ಗರನ್ನು ಸಾವಿನಿಂದ ಉಳಿಸಿದಷ್ಟು ಪುಣ್ಯ ಬರುವುದೆಂದೂ ಅವರು ಸಾರುತ್ತಿರುವರು" (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ. ಸಂ.2. ಕಾದಂಬರಿ–1, 2001. ಪು.196).

ಎರಡನೆಯದು ವೇಶ್ಯೆಯರ ಉದ್ಧಾರ (ಅದೇ, ಪು.198). ಈ ಎರಡೂ ಸಂಗತಿಗಳು ಆಗಿನ ರಾಷ್ಟ್ರೀಯ ಚಳುವಳಿಯು ರೂಪಿಸಿದ ವಿಚಾರಗಳೇ ಆಗಿವೆ. ಕುಟುಂಬವೊಂದು ಒಡೆಯುವುದನ್ನು ಕಾರಂತರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಆದರೆ ಅಂತಸ್ಥವಾಗಿರುವುದು ಕುಟುಂಬದ ಛಿದ್ರೀಕರಣ. ಆಗ ಕಾರಂತರಿಗೆ ಗಾಂಧೀವಾದದ ಪ್ರಭಾವವಿತ್ತು. ಕಾರಂತರು ಈ ಕಾದಂಬರಿಯಲ್ಲಿ ಪ್ರಸ್ತಾಪಿಸುವ ವಿಷಯಗಳು ಚಾರಿತ್ರಿಕ ಸಂಗತಿಗಳೂ ಕೂಡಾ ಹೌದು. ರಾಜಕೀಯ ಚರಿತ್ರೆಯ ಒಂದು ಮುಖವು ಈ ಕಾದಂಬರಿಯ ಒಡಲಲ್ಲಿ ಇದೆ. ಚರಿತ್ರೆಯು ಕಾದಂಬರಿಯ ನಿರೂಪಣೆಯ ಭಾಗವಾಗಿದೆ. ಒಂದು ಘಟನೆಯು ಚಾರಿತ್ರಿಕವಾಗಿ ನಡೆದರೆ ಅದನ್ನು ಚರಿತ್ರೆಯೆಂದು ಕರೆಯುತ್ತೇವೆ. ಚರಿತ್ರೆಗೂ ಒಂದು ನಿರೂಪಣೆಯಿರುತ್ತದೆ. ಚರಿತ್ರೆಯು ಅನೇಕ ಸಂದರ್ಭಗಳಲ್ಲಿ ಸರಳವಾದ ನಿರೂಪಣೆಯಾದರೂ ಅದು ಕತೆಯಂತೆಯೇ ಇರುತ್ತದೆ. ಕತೆ : ಕಾದಂಬರಿಗಳು ಕೂಡಾ ನಿರೂಪಣೆಯೇ. ಚರಿತ್ರೆಯೆನ್ನುವುದು ಸತ್ಯದ ಕತೆಯಾದರೆ, ಕತೆಯು ಹೇಳುವ ಸತ್ಯ ನಿರೂಪಣೆಯ ಒಳಗೆ ಹುದುಗಿರುತ್ತದೆ. ಚರಿತ್ರೆಯ ನಿರೂಪಣೆಯ ರಚನೆಗೂ, ಕತೆಯು ಹೇಳುವ ನಿರೂಪಣೆಗೂ ಭಿನ್ನತೆಯಿದೆ. ಅಷ್ಟೆ ವ್ಯತ್ಯಾಸ!. ಕಾರಂತರ ಹೆಚ್ಚಿನ ಕಾದಂಬರಿಗಳು ಬೇರೆ ಬೇರೆ ಚಾರಿತ್ರಿಕ ನಿರೂಪಣೆಯ ಭಾಗಗಳು. ಕಾರಂತರ ಮನಸ್ಸು ಕೂಡಾ ವಸಾಹತುಶಾಹಿ ಚರಿತ್ರೆಯಿಂದ ಪ್ರೇರಿತವಾದುದು. ಅವರ ಆಲೋಚನೆಯ ಕ್ರಮ ನಿರ್ದಿಷ್ಟ ಕಾಲಕ್ಕೆ ಸಂಬಂಧಿಸಿದ್ದು. ಮೊದಮೊದಲಿನ ಕಾದಂಬರಿಗಳ ಗಂಭೀರ ಜೀವನ ದೃಷ್ಟಿಯೇ ಅನಂತರದ ಕಾದಂಬರಿಗಳಲ್ಲಿ ಅಂದರೆ ವಸಾಹತೋತ್ತರ ಸಂದರ್ಭದ ಸಾಮಾಜಿಕ ವಿಶ್ಲೇಷಣೆಗಳಲ್ಲಿ ಕಾರಂತರು ವಿಡಂಬನಾತ್ಮಕ ನಿಲುವು

ತಳೆಯುವುದಕ್ಕೆ ಕಾರಣವಾಗಿದೆ. ಗೊಂಡಾರಣ್ಯ (1954), ಜಗದೋದ್ಧಾರ... ನಾ (1960), ಉಕ್ಕಿದ ನೊರೆ (1970), ಮೂಜನ್ಮ (1974), ನಾವು ಕಟ್ಟಿದ ಸ್ವರ್ಗ (1980). ಈ ಮಾದರಿಯ ಕಾದಂಬರಿಗಳಲ್ಲಿ ಬರುವ ವ್ಯಂಗ್ಯಕ್ಕೂ ಕಾರಂತರ ನಿಲುವು : ಆಲೋಚನೆ ಕ್ರಮದ ಬದ್ಧತೆಗೂ ಒಂದು ಸಂಬಂಧವಿದೆ 19. ಕಾರಂತರ ಕಾದಂಬರಿಗಳು (ಅವು ವಾಸ್ತವದ ಹತ್ತಿರವಿರುವುದರಿಂದ) ವಸಾಹತುಶಾಹಿ ಚರಿತ್ರೆ; ವಸಾಹತೋತ್ತರ ಚರಿತ್ರೆ ; ಜಮೀನುದಾರಿ ಪದ್ಧತಿಯ ಸಾಮಾಜಿಕ ಜೀವನದ ಚರಿತ್ರೆ : ಎರಡನೆಯ ಮಹಾಯುದ್ಧ ಮತ್ತು ಭಾರತೀಯ ಸಮಾಜ ಜೀವನದ ಮೇಲೆ ಅದರ ಪರಿಣಾಮ ಮುಂತಾದವುಗಳನ್ನು ವಿವರಿಸುತ್ತವೆ. ಕುತೂಹಲದ ಸಂಗತಿಯೆಂದರೆ ಕಾರಂತರು ಕಾದಂಬರಿಗಳಲ್ಲಿ ಕಾರ್ಯ–ಕಾರಣ ಸಂಬಂಧವನ್ನು ವಿವರಿಸುತ್ತಾರೆ. ಕಾರಣಗಳ ಹುಡುಕಾಟ ಕಾರಂತರ ಕಾದಂಬರಿಗಳ ಗುಟ್ಟು. ಪಶ್ಚಿಮದ ಪುನರುಜ್ಜೀವನ ಕಾಲಘಟ್ಟದ ಚಿಂತನೆಗೂ ಈ ತರಹದ ವಿಚಾರಧಾರೆಗೂ ಇರುವ ಸಂಬಂಧವನ್ನು ಗಮನಿಸಬೇಕು.

ವಸಾಹತು ಕಾಲದ ಚರಿತ್ರೆಯು ಅತ್ಯಂತ ಸಂಕೀರ್ಣವಾದುದು. ಹಾಗೆಯೇ ರಾಷ್ಟ್ರೀಯತೆಯನ್ನು ಹುಟ್ಟುಹಾಕಿದ ಚರಿತ್ರೆಯಲ್ಲಿ ಬೇರೆ ಬೇರೆ ಮಾದರಿಯ ಕೌಶಲಗಳಿವೆ. ಬೇರೆ ಬೇರೆ ತಾತ್ವಿಕತೆಗಳಿವೆ. ಹಾಗೂ ವಸಾಹತುಶಾಹಿ ಸಂದರ್ಭದ ಚರಿತ್ರೆಗೆ ಭಾರತೀಯ ಚಿಂತನೆಯ ಕ್ರಮಗಳು ತೋರಿಸಿದ ಪ್ರತಿಕ್ರಿಯೆಗಳು ಕೂಡಾ ಬೇರೆ ಬೇರೆ. ಹೀಗಾಗಿ ರಾಷ್ಟ್ರೀಯತೆಯ ಸಮಸ್ಯೆಯೆನ್ನುವುದು ಒಂದೇ ಬಾಗಿಲಲ್ಲಿ ಹೊರಬಂದ ಪ್ರಕ್ರಿಯೆಗಳು ಎಂದು ಕರೆಯುವುದು ಕಷ್ಟ. ಬರಹಗಳು ಆ ಕಾಲದ ಸಾಂಸ್ಕೃತಿಕ ಪ್ರತಿಕ್ರಿಯೆಗಳಾದರೆ ರಾಜಕೀಯ ಚಟುವಟಿಕೆಗಳು ಬೇರೊಂದು ಪ್ರತಿಕ್ರಿಯೆಗಳು. ಬರಹವೆನ್ನುವುದು – ಅದು ಯಾವುದೇ ರೂಪದಲ್ಲಿರಲಿ ಅದಕ್ಕೆ ಆ ಸಂದರ್ಭದ ಮಹತ್ವಗಳು ಬೇರೆ. ವಸಾಹತು ಕಾಲದ ಕಾದಂಬರಿಗಳು ಈ ಅರ್ಥದಲ್ಲಿ ಲೌಕಿಕದ ಪುರಾಣಗಳೆಂದರೂ ಸರಿಯಾಗುತ್ತದೆ. ಕಾರಂತರ ದೇವದೂತರು ಮತ್ತು "ಮೂಕಜ್ಜಿಯ ಕನಸುಗಳು" ವಿನಂಥ ಕೃತಿಗಳನ್ನು ಹೊರತುಪಡಿಸಿದರೆ ಉಳಿದ ಹೆಚ್ಚಿನ ಕಾದಂಬರಿಗಳು ಆಗಮಿಕದ ಮಾದರಿಯವು ಅಲ್ಲ. ಕಾರಂತರ ಕೆಲವು ಕಾದಂಬರಿಗಳಲ್ಲಿ ಸಾಂಸ್ಕೃತಿಕ ಆಶಾವಾದವಿದೆ. ಭವಿಷ್ಯದ ಕುತೂಹಲವಿದೆ. ಮತ್ತು ಕೆಲವು ಕಾದಂಬರಿಗಳು ಜೀವನದ ಇತ್ಯಾತ್ಮಕವಾದ ಸುಖಾಂತದ ಭರವಸೆಗಳಿವೆ.

ವಸಾಹತುಕಾಲದ ಚರಿತ್ರೆಯೇ ಹೊಸ ಯುಗದ ಮಹತ್ವದ ಸಂಕೇತವಾಗಿದೆ. ಇದರಿಂದಾಗಿ ಹೊಸಯುಗದ ಚರಿತ್ರೆಯ ಒಂದು ಮುಖ ಸಾಂಸ್ಕೃತಿಕ ಪಲ್ಲಟ.

ಈ ಪಲ್ಲಟದಲ್ಲಿ ಸುಶಿಕ್ಷಿತವರ್ಗದ ಆಶಾವಾದವಿದೆ. ವಸಾಹತುಯುಗದ ಆಧುನಿಕ; ಶಿಕ್ಷಣ ; ಸಂವಹನ ಮಾಧ್ಯಮಗಳು ; ರಾಷ್ಟ್ರೀಯ ಚಳುವಳಿ ; ಹಳೆಯ ರಾಜಕೀಯ ಪರಂಪರೆಗಳ ನಾಶ ; ನಾಗರಿಕತೆಯ ಉದಯ – ಇವುಗಳ ಬಳುವಳಿಯು ಸಾಮಾನ್ಯವಾದುದಲ್ಲ. ವಸಾಹತು ಕಾಲವೇ ಆಗ 'ಕಾಲ'ದ ಪರಿಕಲ್ಪನೆಯನ್ನು ಬದಲಾಯಿಸಿತು. ಹೊಸ ಯುಗದ ಈ ತರಹದ ಸಂವೇದನೆಯನ್ನು ; ಅದು ಮಾಡುತ್ತಿರುವ ಅದಲು ಬದಲಾದ ಕ್ರಮವನ್ನು ಬುದ್ಧಿಜೀವಿಗಳು ಮತ್ತು ರಾಜಕೀಯ ಚಿಂತಕರು ಬೇರೆ ಮಾದರಿಗಳಲ್ಲಿ ಅಭಿವ್ಯಕ್ತಿಸುವ ಪ್ರಯತ್ನವನ್ನು ಮಾಡಿದರು. ಜನರ ಮತ್ತು ಸಮಾಜದ ಅನುಭವ ಲೋಕವನ್ನು ಲೇಖಕರು ಬರಹ ಮೂಲಕ ಅನಾವರಣ ಮಾಡಿದರು. ಹೀಗಾಗಿ ಕಾರಂತರ : ಕುವೆಂಪು ಅವರ ಕಾದಂಬರಿಗಳು ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಕ್ರಮವಾಗಿವೆ. ಆಯಾ ಕಾಲದ ಸಾಮಾಜಿಕ ಅನುಭವವನ್ನು ಅವರು ವಿವರಿಸುತ್ತಾರೆ. ಮತ್ತು ಅದು ಪ್ರಾತಿನಿಧೀಕರಣದ ಪ್ರಕ್ರಿಯೆಗೆ ಗುರಿಯಾಗಿದೆ. ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ಕಾರಂತರು ಹೀಗೆ ಹೇಳುತ್ತಾರೆ ಅವರು ಸಂಚರಿಸುತ್ತಿದ್ದ ನಾಡು, ಸಂಚರಿಸುತ್ತಿದ್ದ ಸಮಯವಾದ ಬೇಸಗೆಯಷ್ಟೇ ದಯಾಶೂನ್ಯವಾಗಿತ್ತು. ಹಗಲು ನೆಲದ ಮೇಲೆ ಕಾಲು ಇರಿಸುವುದಕ್ಕಿಲ್ಲ. ತುಂಬ ಉರಿಬಿಸಿಲು. ಮೇಲೆ, ಬಾನಲ್ಲಿ ತೂಗುಯ್ಯಾಲೆಗಳಂತೆ ತೂರಾಡುವ ಬೆಳ್ಳುಗಿಲುಗಳು. ದಿನವೆಲ್ಲಾ ಬೆವರಿನಲ್ಲಿ ಸ್ನಾನ. ರಾತ್ರಿಯೋ! ಅದೂ ಹಗಲಿನಂತೆಯೇ; ಬಿಸಿಲ ಜಳವಿಲ್ಲದಿದ್ದರೂ ಗಾಳಿಯ ಸುಳಿದಾಟವಿಲ್ಲದೆ ಸೆಕೆ, ಸೆಕೆ, ಸೆಕೆ ಎಂಬ ಒಂದೇ ರಾಗ. ಯಾವತ್ತು ಜೀವಿಗಳು ಹವೆಯ ತಾಪದಿಂದ ಬೆಂದಿದ್ದುವು. ನೀರಡಿಕೆಯಿಂದ, ದಣಿವಿನಿಂದ, 'ಎಂದು ಮಳೆಯು ಬಂದೀತು; ಈ ನೆಲ ಎಂದು ಹಸುರನ್ನು ಕಂಡೀತು' ಎಂಬ ಹಾತೊರೆಯುವಿಕೆಯೇ: ಹೊಲದಲ್ಲಿ ಬಿತ್ತಿದ ಬತ್ತದ ಬೀಜಗಳು ಹಾಯೆಂದು ದಣಿದು, ನೀರಡಿಸಿ ಬಿದ್ದಿದ್ದುವು. ಈಗಾಗಲೇ ಮೊಳೆತ ಕೆಲವೊಂದು ಅಗೆಗಳ ಹಸುರು ಕಂದಿ ಹೋಗಿತ್ತು. ಈ ಬೇಸಗೆಯಲ್ಲಿ ಗಿಡಗಳಿಗೂ ದಣಿವು; ಅವುಗಳ ಆಸರೆ ಹೊಂದಿದ ಹಸು ಹಕ್ಕಿಗಳಿಗೂ ದಣಿವೇ! ಹಗಲಿನ ಬೇಗೆಗೆ ಮರದ ಆ ದೂರದಿಂದ, ಈ ದೂರದಿಂದ, ಕೋಗಿಲೆಗಳ ನಿರಾಶೆಯ ಕುಹೂರವ. ಕಾಡು ಪಾರಿವಾಳ ತನ್ನ ಬಾರದ ಇನಿಯನಿಗಾಗಿ ದಿನವೆಲ್ಲಾ ಕುಟುರು ಕೂಗುತ್ತಿದೆ. ಪಕ್ಷಿ ರಾಜ್ಯದ ಸವಿ ಗಾನದ ಸೊಲ್ಲು ಅಡಗಿದೆ. ಈಗಷ್ಟೆ ವಸಂತ ಋತು ಮುಗಿದಿದೆ. ಆದರೆ ಕವಿಗಳು ಹಾಡಿದ ಜೀವನದ ತುಂಬು ಚೇತನ ಕಾಣಿಸುತ್ತಲಿಲ್ಲ. ದಣಿದ ಹಕ್ಕಿಗಳ ಸೊಲ್ಲಿನಿಂದ ಬನದ ಯೌವನವನ್ನು ಊಹಿಸಬೇಕಷ್ಟೆ. "ಇಷ್ಟೆಲ್ಲಾ ನಿರಾಶೆಯ ಬೇಗುದಿ. ಆದರೆ ನಾಡಿನ ಜನ ತಮ್ಮ

ಹಳ್ಳಿಗಳಲ್ಲಿ, ಕಾಡು ಹಾದಿಗಳಲ್ಲಿ ಸುಡುತ್ತಿರುವ ಬೀದಿಗಳಲ್ಲಿ, ಮದುವೆ ದಿಬ್ಬಣಗಳನ್ನು ಹೊರಡಿಸಿ, ಕಾಲವನ್ನು ಮೂದಲಿಸುತ್ತಿದ್ದಾರೆ. ಜನ ದಾರಿಯುದ್ದಕ್ಕೂ ಅರವಟ್ಟಿಗೆಯ ನೀರಿಂದ ತಣಿದು, ಯಾರದೋ ಮದುವೆಯ ಸಲುವಾಗಿ ತಾವು ಪೆಂಪುಗೊಂಡು ಸಾಗುತ್ತಿದ್ದಾರೆ. ಗೀತಬಾಹಿರವಾದ ಹಳ್ಳಿಗರ ವಾದ್ಯ ಅವರನ್ನು ಹಿಂಬಾಲಿಸುತ್ತಿದೆ. ಏಕೆ ಈ ಅವಸರ? ನಾಳಿನ ಮಳೆಗಾಲದ ಭೀತಿಯಿಂದ. ಬೇಸಾಯದ ಕೆಲಸವಿದೆ. ಹಾಗೆಂದು ಆ ಸಮಯದ ಈ ಉರಿ ಬಿಸಿಲಿನಲ್ಲಿ, ನಾಳಿನ ಕಾಮದ ಕರೆಗೆ ಇಂದೇ ಹೊರಟಿದ್ದಾರೆ ಮದುವಣಿಗರಾಗಿ! ಮದುವಣಿಗ, ಮದುವಣಿಗಿತ್ತಿಯರ ಸಡಗರಕ್ಕೆ ಕಡಿಮೆ ಇಲ್ಲದಂತೆ, ತಮ್ಮ ಒನವು, ವಯ್ಯಾರಗಳನ್ನು ಮೆರೆಯಿಸಲು ಹೊರಟ ಅಣ್ಣತಮ್ಮಂದಿರು, ಅತ್ತಿಗೆ ನಾದಿನಿಯರು, ಅತ್ತೆ ಸೊಸೆಯರು, ನಂಟರಿಷ್ಟರು; ಇವರ ಸಂಖ್ಯೆಯೂ ಧಾರಾಳವಾಗಿದೆ. ಅಂಥ ನೂರಾರು ಸಂಭ್ರಮಗಳಲ್ಲಿ ನಾವು ಪರಿಚಯ ಮಾಡಿಕೊಳ್ಳಬೇಕಾದುದು ಕುಂದಾಪುರದಿಂದ ಹೊರಟ ಒಂದು ದಿಬ್ಬಣವನ್ನು ಪಯಣ ಐದು ಹರದಾರಿಯ ಹಾಲಾಡಿ ಎಂಬ ಗ್ರಾಮಕ್ಕೆ: ಹೆಣ್ಣಿನ ಮನೆ ಇರುವುದು ಅಲ್ಲಿ ಹಾಲಾಡಿಯ ಸಂಕಪ್ಪಯ್ಯನವರ ಹಿರಿಯ ಮಗಳಾದ ಕಮಲಾಕ್ಷಿಯನ್ನು ಕುಂದಾಪುರದ ರಾಮಪ್ಪಯ್ಯನವರ ಎರಡನೆಯ ಮಗ, ಅಲ್ಲ ದ್ವಿತೀಯ ಪುತ್ರ, ಅನಂತರಾಮನಿಗೆ ತರುವುದೆಂದು ನಿಶ್ಚಯವಾಗಿದೆ. ಸರಿ, ಲಗ್ನಪತ್ರಿಕೆಯಲ್ಲಿ ಅಚ್ಚು ಹಾಕಿದಂತೆ 'ದೇವತಾನುಗ್ರಹದಿಂದ' ಆ ಲಗ್ನ ಇಂದು ಸಂಜೆ ಗೋಧೂಳಿಯಲ್ಲಿ ಸಮಾವೇಶವಾಗಬೇಕು. ಹೆಣ್ಣಿನ ಕಡೆಯವರಿಗೇನೋ ಕುಳಿತಲ್ಲಿಂದ ದರ್ಬಾರು ನಡೆಸಿದರಾಯಿತು. ಗಂಡಿನ ಮನೆಯವರು ಹಾಗೆ ಮಾಡಬಂದೀತೇ? ದೇವತಾನುಗ್ರಹದಿಂದ ನಿಶ್ಚಯವಾದ ಲಗ್ನಕ್ಕೆ, ಸಂಜೆಗೆ ಮುಂಚಿತವಾಗಿ ಸೇರಲು, ಹೊತ್ತು ನೆತ್ತಿಗೇರುವ ತುಸು ಮೊದಲೇ ಅವರು 'ಸಕುಟುಂಬ ಸಪರಿವಾರ ಸಮೇತರಾಗಿ' ಹೊರಟರು. ಮನೆಯಲ್ಲಿ ಸಮಾವರ್ತನೆ ಮುಗಿಸಿ, ಎಲ್ಲರಿಗೂ ಔತಣ ಬಡಿಸಿ, ದೊರೆತ ನಾಲ್ಕು ಬಂಡಿಗಳಲ್ಲಿ ಮದುವಣಿಗನನ್ನು, ಎಳೆಯರನ್ನು ತುಂಬಿಸಿ. ಉಳಿದವರನ್ನು ಅವರವರ ಕಾಲ ಮೇಲೆ ಹೊರಳಿಸಿ ಹೊರಟಿದ್ದಾರೆ. ಮದುವೆಯನ್ನು ಪ್ರೇರಿಸಿದ ಆ ದೇವರೇ ಉರಿಬಿಸಿಲನ್ನು ಅನುಗ್ರಹಿಸಿದ್ದಾನೆ. ಆರು, ಮೂರು ಒಂಬತ್ತು ಮೈಲು ಸಾಗಿ, ದಿಬ್ಬಣದ ಯಜಮಾನರು ತಮ್ಮ ಕಾಲ್ಬಲವನ್ನು ನಡೆಯಿಸಿಕೊಂಡು, ಹುಣಿಸೆಮಕ್ಕಿಯ ಸಾಲುಮರಗಳ ನೆರಳಲ್ಲಿ ಕುಳಿತಾಗ ಮೂರು ತಾಸು ಸರಿದಿತ್ತು. ಕಾಲಿಗೆ ಜೋಡುಳ್ಳವರ ಗತಿಯೇನೋ ಸರಿಯೆ; ಅದಿಲ್ಲದವರ ಹಿಮ್ಮಡಿಗಳು ಕಾದ ರೊಟ್ಟಿಯಂತೆ ಉಬ್ಬಿವೆ. ಅಲ್ಲಿ, ಅಲ್ಲಿ ನೆರಳಿಂದ ನೆರಳಿಗೆ, ಧೂಳು ಇಲ್ಲದ ಗಟ್ಟಿ ನೆಲಕ್ಕೆ, ಜಿಗಿಜಿಗಿದೇ ಪಯಣ ಬಂದಿದ್ದರು. ಎಷ್ಟು ಬಿಸಿಲನ್ನು ಉಲ್ಲಂಘಿಸಿ ನಡೆದರೂ

ಮೇಲಿನ ಉರಿಗೆ, ಕೊಡೆಗಳು ಸಹಾಯವಾಗಲಿಲ್ಲ." {ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ಸಂಪುಟ–5; ಔದಾರ್ಯದ ಉರುಳಲ್ಲಿ; ಕಾದಂಬರಿ–4; ಪು.ಸಂ.3–4} ಚರಿತ್ರೆಯ ಹೊಸ ಸಂದರ್ಭದಲ್ಲಿ ಮಧ್ಯಮವರ್ಗದ ಲೇಖಕರು ಆಗ ತಾನೇ ಹೊಸದಾಗಿ ಅರಿವಿಗೆ ಬಂದ ಮತ್ತು ಅವರು ನಿರ್ವಚಿಸಬೇಕಾದ ಸಂಗತಿಗಳ ಕುರಿತು ಬರಹಗಳ ದಾರಿಯಲ್ಲಿ ಆಗಬೇಕಿತ್ತು. ಕನ್ನಡದ ಉದಾಹರಣೆಯನ್ನೇ ತೆಗೆದುಕೊಂಡು ಹೇಳುವುದುದಾದರೆ ನಮ್ಮ ಆ ಕಾಲದ ಲೇಖಕರು ಬೇರೆ ಬೇರೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು. ಕನ್ನಡ ನಾಡಿನ ಪುನರುಜ್ಜೀವನ ; ಚರಿತ್ರೆ ; ತತ್ವಜ್ಞಾನ ; ಸಾಮಾಜಿಕ ವಿವರಣೆ; ರಾಜಕೀಯ ಚಳುವಳಿಗಳಲ್ಲಿ ಸಕ್ರಿಯವಾದ ಪಾತ್ರ – ಹೀಗೆ ಲೇಖಕರು ಬೇರೆ ಬೇರೆ ಹಾದಿಗಳಲ್ಲಿ ಏಕಕಾಲಕ್ಕೆ ನಡೆಯುತ್ತಿದ್ದರು. ಬೇಂದ್ರೆ; ಕಾರಂತ ; ಕುವೆಂಪು; ಗೊರೂರು ; ಆಲೂರು ವೆಂಕಟರಾಯರು ; ಪೈ – ಮುಂತಾದ ಎಲ್ಲಾ ಲೇಖಕರೂ ವ್ಯಕ್ತಿತ್ವವನ್ನು ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅವರಿಗೆ ಅದು ಚಾರಿತ್ರಿಕ ಅನಿವಾರ್ಯತೆ ಕೂಡಾ. ರಾಜಕೀಯ ಮತ್ತು ತತ್ವಜ್ಞಾನ ; ರಾಜಕಾರಣ ಮತ್ತು ನಾಡಿನ ಪರಿಸ್ಥಿತಿ ; ನಾಡಿನ ಆದರ್ಶ ಮತ್ತು ಚಟುವಟಿಕೆ – ಹೀಗೆ ಪ್ರಭೇದಗಳಿಲ್ಲದೆ ಬರಹಗಾರರು ಬರಹಗಳನ್ನು ಮತ್ತು ಚಳುವಳಿಯನ್ನು ಒಂದು ಅಂಗುಲದಲ್ಲಿ ನೋಡಿದ ಪ್ರಯತ್ನ ಬಹಳ ಮುಖ್ಯವಾದುದು. ಚಾರಿತ್ರಿಕವಾಗಿಯೂ ಈ ಲೇಖಕರು ಬರಹಗಳನ್ನು ಕೂಡಾ ರಾಜಕೀಯ ಚಟುವಟಿಕೆಯ ಅಂತಸ್ಥ ಪ್ರಣಾಲಿಯನ್ನು ಇಟ್ಟುಕೊಂಡಿದ್ದರೆ ? ಲೇಖಕರು ಈ ರೀತಿಯೇ ವಸಾಹತು ಅನುಭವಕ್ಕೆ ಪ್ರತಿಕ್ರಿಯಿಸಬೇಕಿತ್ತು.

ಈಗ ಸಾಹಿತ್ಯದಲ್ಲಿ 'ಕಾಲ' ಮತ್ತು 'ವಸ್ತು', 'ಅವಕಾಶ'ಗಳನ್ನು ಬಳಸುತ್ತಿದ್ದೇವೆ. ಈ ಕಲ್ಪನೆಯಂತೂ 'ಕಾದಂಬರಿ' ರೂಪದ ವಿವರಣೆಗೆ ತುಂಬಾ ಸಹಾಯ ಕೂಡಾ ಮಾಡುತ್ತಿದೆ. ಕಾದಂಬರಿಯೊಳಗಿನ ವಸ್ತು ; ಕಾಲ ; ಅದು ತುಂಬಿಕೊಳ್ಳುವ ಅವಕಾಶಗಳನ್ನು ವೈಜ್ಞಾನಿಕವಾಗಿ ವಿವರಿಸುವ ಪ್ರಯತ್ನವಿದೆ. ಆದರೆ, ವಸಾಹತುಶಾಹಿ ಅನುಭವದೊಳಗೆ ಬರೆಯತೊಡಗಿದ ಕಾದಂಬರಿಕಾರರು 'ಕಾಲ'ವನ್ನು ಗುರುತಿಸುವ ಕ್ರಮವನ್ನು ಎರಡು ರೀತಿಯಲ್ಲಿ ಮಂಡಿಸಿದ್ದಾರೆ :

ಒಂದು: ಋತುಮಾನಕ್ಕೆ ಅನುಸಾರವಾಗಿ ರೂಪುಗೊಂಡಿರುವ ಕಾಲದ ಕಲ್ಪನೆ. ಉದಾ: ಮರಳಿಮಣ್ಣಿಗೆ ಮತ್ತು ಅದರಲ್ಲಿ ಬರುವ ಋತುಮಾನದ ವಿವರ.

ಇನ್ನೊಂದು ತಾರ್ಕಿಕ ಕಾಲ, ಇದನ್ನು ಚರಿತ್ರೆಯೆಂದರೂ ಸರಿಯಾಗುತ್ತದೆ. ಕಾರಂತರ ಎಲ್ಲಾ ಕಾದಂಬರಿಗಳ ಜೀವನಕ್ರಮವನ್ನು ಹಿಂಡಿ ಒಟ್ಟು ಸೇರಿಸಿದರೆ

ದೊರೆಯುವುದು ಆಗಿನ ಸಂದರ್ಭದ ವೈಚಾರಿಕತೆಯ ಜೊತೆಗಿನ ಸಾಂಸ್ಕೃತಿಕ ಚರಿತ್ರೆಯ ಸಂವಾದ. ಕಾರಂತರು ಎಲ್ಲಾ ಕಾದಂಬರಿಗಳ ಮುಖೇನ ಸಾಮಾಜಿಕ – ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುತ್ತಾರೆ. ಕಾರಂತರ ಹೆಚ್ಚಿನ ಕಾದಂಬರಿಗಳು ವಿವರಣಾತ್ಮಕ ಮತ್ತು ಸೈದ್ಧಾಂತಿಕ ಮಂಡನೆಯಷ್ಟೇ ಕಾರಂತರಿಗೆ ಮುಖ್ಯವಲ್ಲ. ಕಾರಂತರ ಕಾದಂಬರಿಗಳಲ್ಲಿ ಕೇವಲ ಒಂದು ಘಟನೆ ; ಕೇವಲ ಒಂದೇ ವಸ್ತು ಅನ್ನುವುದು ಮುಖ್ಯವಲ್ಲ. ಈ ಕಾರಣದಿಂದ ಅವರ ಕಾದಂಬರಿಗಳು ಭಾರತೀಯ ಸಮಾಜದ ಕೆಲವು ಭಾಗಗಳ ಕೆಲವು ಜನಾಂಗಗಳ ಅಂತಸ್ಥ ಚಾರಿತ್ರಿಕ ಸಂಕಥನಗಳಾಗಿವೆ. ಮತ್ತು ಅವರ ಕಾದಂಬರಿಗಳು ಒಂದೇ ತಾತ್ವಿಕತೆಯ ರೂಪಾಂತರಗಳು ಎಂದು ಕರೆಯುವುದು ಕಷ್ಟ.

ಕಾರಂತರ ಬಹುತೇಕ ಕಾದಂಬರಿಗಳಲ್ಲಿ ಬರುವ ವಿಷಯವೊಂದಿದೆ : ಅದು ಭೂಮಿ. ಮನುಷ್ಯ ಭೂಮಿಯನ್ನು ತನಗೆ ಬೇಕಾದಂತೆ ಪರಿವರ್ತನೆ ಮಾಡಿ ಅದರಲ್ಲಿ ಅವನು ಬೆಳೆ ತೆಗೆಯುವುದು ; ಭೂಮಿಯ ಸಂರಕ್ಷಣೆಯ ಉಪಾಯ ಬೇರೆ ಬೇರೆ ಕಾದಂಬರಿಗಳಲ್ಲಿ ನಿರೂಪಿತವಾಗಿದೆ. ನಿಸರ್ಗ ಮತ್ತು ಭೂಮಿಯನ್ನು ಕಾರಂತರು ಆರಾಧನೆಯ ದೃಷ್ಟಿಯಲ್ಲಿ ನೋಡುವುದಿಲ್ಲ. 'ಕುಡಿಯರ ಕೂಸು', 'ಬೆಟ್ಟದ ಜೀವ', 'ಚೋಮನ ದುಡಿ', 'ಚಿಗುರಿದ ಕನಸು' – ಹೀಗೆ ಬೇರೆ ಬೇರೆ ಕಾದಂಬರಿಗಳಲ್ಲಿ ನಿರೂಪಿತವಾಗಿದೆ. ನಿಸರ್ಗ ಮತ್ತು ಭೂಮಿಯನ್ನು ನೋಡುವಾಗ ಕಾರಂತರು ರೊಮ್ಯಾಂಟಿಕರಂತೆ ಮಾತಾಡುವುದಿಲ್ಲ. ಮನುಷ್ಯನ ಬದುಕು ಮತ್ತು ಭೂಮಿಗೆ ದ್ವಂದ್ವಾತ್ಮಕ ಸಂಬಂಧವನ್ನು ಕಾರಂತರ ಕಾದಂಬರಿಗಳು ಹೇಳುವುದು ಕೇವಲ ಆಕಸ್ಮಿಕವಲ್ಲ. ಅದು ಜೀವನ ಕ್ರಮದ ಪಲ್ಲಟದಲ್ಲಿ ಹೇಗೆ ಭಾಗಿಯಾಗುತ್ತವೆ ಎಂಬ ದೃಷ್ಟಾಂತಗಳು ಕೂಡಾ ಹೌದು.

ಕಾರಂತರ ಕಾದಂಬರಿಗಳು ವಸಾಹತುಶಾಹಿ ಅನುಭವದ ಬಗ್ಗೆ ಸಂಪೂರ್ಣ ತೃಪ್ತಿಯನ್ನಾಗಲೀ, ಸಂಪೂರ್ಣ ಅತೃಪ್ತಿಯನ್ನಾಗಲೀ ಎರಡನ್ನೂ ವ್ಯಕ್ತಪಡಿಸುವುದಿಲ್ಲ.

"ಇಂಗ್ಲೀಷನ್ನು ಬಹಿಷ್ಕರಿಸಿದಲ್ಲಿ, ನಮ್ಮ ಬುದ್ಧಿದಾರಿದ್ರ್ಯ ಹೆಚ್ಚಾದೀತು ಎಂಬ ಭಯವಾಗುತ್ತದೆ " (ಕಾರಂತ, ಪು.26) "ವಿಜ್ಞಾನ ಕ್ಷೇತ್ರದ ವಿವಿಧ ಅನ್ವೇಷಣೆಗಳು ಇಂಥ ಅನೇಕ ಭ್ರಮೆಗಳನ್ನು ಹೋಗಲಾಡಿಸಿವೆ. ಅದರಿಂದ, ಅನೇಕ ಪೌರಾಣಿಕ, ನೈತಿಕ ಕಲ್ಪನೆಗಳೂ ಬದಲಾಗಬೇಕಾಯಿತು. ಹೀಗಿರುತ್ತ, ಜೀವನದ ಸಮಸ್ಯೆಗಳನ್ನು ತಿಳಿಯಬೇಕೆಂಬ ಹಂಬಲವುಳ್ಳ ಸಾಹಿತಿ, ತತ್ಸಂಬಂಧವಾದ ವಿಷಯಗಳ ಮೇಲೆ ಬೆಳಕನ್ನು ಕಡೆಯಬಲ್ಲ ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಮೇಲೆ ಕುರುಡಾಗಬಾರದು" (ಮಾಲಿನಿ ಮಲ್ಯ, ಸಂ.1999, ಪು.38).

ಕಾರಂತರಿಗೆ ವಿಜ್ಞಾನ ಪ್ರಗತಿಪರವಾದ : ಅಂಧಶ್ರದ್ಧೆಯನ್ನು ನಿರಾಕರಿಸುವ ಸಂಗತಿಯಾಗಿದೆ. ಆದರೆ ಮನುಷ್ಯ ಲೋಕದ ಅನುಭವವನ್ನು ವಿವರಿಸುವಾಗ ಅವರಿಗೆ ವಿಜ್ಞಾನ ಮಾತ್ರವೇ ಮುಖ್ಯವಾಗುವುದಿಲ್ಲ. ಹೀಗಾಗಿ ಕಾರಂತರಲ್ಲಿ ವಿಜ್ಞಾನದ ಭಾಷೆ ಮತ್ತು ಅದರ ಪರಿಕರವು ಹೇಗೆ ಮುಖ್ಯವಾಗಿದೆಯೋ ಹಾಗೆಯೇ ಸಾಮಾನ್ಯ ಜೀವನದ ವಿವರಣೆಯೂ ಮುಖ್ಯವಾಗಿದೆ. ಸಾಮಾನ್ಯ ಮನುಷ್ಯರು ಕಾರಂತರ ಕಾದಂಬರಿಗಳಲ್ಲಿ ಧರ್ಮಮುಖಿಗಳು.

ಕಾರಂತರ ಕಾದಂಬರಿಗಳಲ್ಲಿರುವ ಪ್ರಾದೇಶಿಕತೆ ; ಜಾತಿ ; ಅವರ ಸಂಪ್ರದಾಯಗಳು ಕಥನಾತ್ಮಕ ನೆನಪುಗಳು. ಅದಕ್ಕೆ ಚಾರಿತ್ರಿಕ ಸಾಕ್ಷ್ಯಗಳು ಬೇಕಿಲ್ಲ. ಮತ್ತು ಒಬ್ಬ ಲೇಖಕ ಈ ತರಹ ಬರೆಯುತ್ತಾನೆಂದರೆ ಅದು ನಿರ್ವಸಹಾತೀಕರಣದ ಪ್ರಕ್ರಿಯೆಯೇ ಆಗಿರುತ್ತದೆ. ಕಾರಂತರಿಗೆ ಜಾತಿಯಲ್ಲಿ ಮತ್ತು ಧರ್ಮದಲ್ಲಿ ನಂಬಿಕೆಯಿಲ್ಲವಾದರೂ ಅವರ ಕಾದಂಬರಿಗಳಲ್ಲಿ ಬರುವ ಸಾಮಾನ್ಯ ಮನುಷ್ಯರಿಗೆ ಆ ನಂಬಿಕೆಗಳಿವೆ . ಕಾರಂತರು ತಮ್ಮ ಕಾದಂಬರಿಗಳಲ್ಲಿ ತಮ್ಮ ದೃಷ್ಟಿಕೋನವನ್ನೇ ಪ್ರಧಾನವಾಗಿ ಇರಿಸಿಕೊಂಡಿದ್ದರೆ ಲೇಖಕನೇ ಕಾದಂಬರಿಗಳಲ್ಲಿ ವಿಜೃಂಭಿಸಿ, ಕಾದಂಬರಿಗಳ ಕಥನದ ಧ್ವನಿಯು ಕುಂಠಿತವಾಗಿ ಬಿಡುತ್ತಿತ್ತು. ಕಾರಂತರ ಕಾದಂಬರಿಗಳಲ್ಲಿ ಮೂರು ಮಾದರಿಯ ರಾಜಕಾರಣದ ನೆಲೆಗಳಿವೆ :

ಒಂದು : ಹಳ್ಳಿ ಮತ್ತು ಪ್ರಾದೇಶಿಕತೆಯ ವಿಶಿಷ್ಟ ಲಕ್ಷಣವುಳ್ಳ ರಾಜಕಾರಣ ಇದರಲ್ಲಿ ಗಂಡು–ಹೆಣ್ಣಿನ ಸಂಬಂಧಗಳ ನಡುವೆ ಉಂಟಾಗುವ ಘರ್ಷಣೆಗಳು ಸೇರಿಕೊಂಡಿವೆ. ಹಾಗೆಯೇ ಇದರಲ್ಲಿ ಯಜಮಾನಿಕೆಯ ವಿವರಗಳು ಬೇರೆ ರೀತಿಯವು. ಈ ಸಂಬಂಧಗಳು ಬೇರೆ ಬೇರೆ ಕಾರಣಗಳಿಂದ ಬದಲಾಗುತ್ತವೆ. ಉದಾ : 'ಮರಳಿ ಮಣ್ಣಿಗೆ'ಯ **ಮೊದಲ ಭಾಗ :** ಚೋಮನ ದುಡಿ, ಕುಡಿಯರ ಕೂಸು ಇತ್ಯಾದಿ. **ಎರಡು:** ವಸಾಹತುಶಾಹಿ ರಾಜಕಾರಣ. ಇದರಲ್ಲಿ ಚರ್ಚ್ ಮಿಶನರಿಗಳು ; ರಾಷ್ಟ್ರೀಯ ಹೋರಾಟ : ಹೊಸದಾಗಿ ಪ್ರಾರಂಭವಾದ ಸ್ಕೂಲ್‌ಗಳು: ಇತ್ಯಾದಿಗಳು ಸೇರಿಕೊಂಡಿವೆ. 'ಬೆಟ್ಟದ ಜೀವ', 'ಔದಾರ್ಯದ ಉರುಳಲ್ಲಿ', 'ಜಾರುವ ದಾರಿಯಲ್ಲಿ' ಇತ್ಯಾದಿ. **ಮೂರು:** ವಸಾಹತೋತ್ತರ ರಾಜಕಾರಣ ಗೊಂಡಾರಣ್ಯ, ಉಕ್ಕಿದ ನೊರೆ, ಇತ್ಯಾದಿ.

ಕಾರಂತರ ಕಾದಂಬರಿಗಳಲ್ಲಿ ಬರುವ ಸಾಮಾಜಿಕರಲ್ಲಿಯೂ ಎರಡು ವಿಧ : ಮೌಲ್ಯರಹಿತ ಮನುಷ್ಯರು ಮತ್ತು ಮೌಲ್ಯಸಹಿತ ಮನುಷ್ಯರು, ಮೌಲ್ಯರಹಿತ ಮನುಷ್ಯರು ದಿನಂದಿನದ ವಾಸ್ತವದಲ್ಲಿ ಬದುಕುತ್ತಾರೆ. ಅವರಿಗೆ ಬದುಕುವುದು

ಕಷ್ಟವಾದರೂ ಅವರಿಗೆ ಬೇರೆ ಆಸಕ್ತಿಗಳಲ್ಲ, ಆದರ್ಶಗಳಿಲ್ಲ. ಅಸ್ತಿತ್ವವಾದಿಗಳಂತೆ ಹೇಳುವುದಿದ್ದರೆ ಈ ಮಾದರಿಯ ಮನುಷ್ಯರು ಸ್ವ ಅನನ್ಯತೆಯ ಅರ್ಥವನ್ನು ಕಂಡುಕೊಂಡವರಲ್ಲ. 'ಚೋಮನ ದುಡಿ'ಯ 'ಬೆಳ್ಳಿ', 'ಮರಳಿ ಮಣ್ಣಿಗೆ' ಕಾದಂಬರಿಯ ಸರಸೋತಿ ; ಪಾರೋತಿ ಮುಂತಾದವರು ಈ ರೀತಿಯಲ್ಲಿ ಬದುಕನ್ನು ಸಾಗಿಸುವವರು. ಇನ್ನೊಂದು ಬಗೆಯವರು ಮೌಲ್ಯಸಹಿತ ಮನುಷ್ಯರು. ಸ್ವ ಅನನ್ಯತೆಯ ಅರ್ಥವನ್ನು ಕಂಡುಕೊಂಡವರು. ಹಳ್ಳಿಯಾಗಲಿ ; ನಗರವಾಗಲಿ – ಇವರ ಜೀವನ ಕ್ರಮವು ಸಾಮುದಾಯಿಕವಲ್ಲ. 'ಜಾರುವ ದಾರಿಯಲ್ಲಿ' ಕಾದಂಬರಿಯ 'ಶಿವಪ್ಪ' ಸಮೀಕ್ಷೆ ಕಾದಂಬರಿಯ ಶ್ರೀನಿವಾಸ... ಈ ಮಾದರಿಯವರು. ಮೌಲ್ಯಸಹಿತ ಮನುಷ್ಯರ ಜೀವನ ಕ್ರಮದ ಅಭಿವ್ಯಕ್ತಿಯು ಅವರ ಕೆಲಸ ಕಾರ್ಯಗಳಲ್ಲಿ ವ್ಯಕ್ತವಾಗುತ್ತದೆ ಎಂಬುದು ಗಮನಾರ್ಹ.

ಕಾರಂತರ ಎಲ್ಲಾ ಕಾದಂಬರಿಗಳು ವಿವರಣೆಯ ಮೂಲಕ ಸಾಗುವುದರಿಂದ ಅದಕ್ಕೆ ಮತ್ತೆ ಯಾವುದೇ ನ್ಯಾಯ ಸಮ್ಮತಿಯನ್ನು ಅವರು ಕೋರುವುದಿಲ್ಲ. ಯಾರು ಜೀವನದ ಮೌಲ್ಯದ ಬಗ್ಗೆ ಕ್ರಿಯಾತ್ಮಕವಾಗಿ ವರ್ತಿಸುತ್ತಾರೋ ಅವರೆಲ್ಲಾ ತಮ್ಮ ಆದರ್ಶಕ್ಕಾಗಿ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮತ್ತು ಅಲ್ಲಿ ಸಂಘರ್ಷವಂತೂ ಇದ್ದೇ ಇರುತ್ತದೆ.

ನಮಗೆ ಅತ್ಯಂತ ಒಳ್ಳೆಯ ಬುದ್ಧಿ ಮತ್ತು ವಿವೇಕವು ಇದ್ದರೆ ನಾವು ಈ ಜಗತ್ತಿನಲ್ಲಿ ಎಲ್ಲಿಯೇ ಇರಲಿ ನಾವು ಅತ್ಯಂತ ಸರಿಯಾದ ತೀರ್ಮಾನವನ್ನು ಮಾಡಬಲ್ಲೆವು ಎನ್ನುವುದು ಕಾಂಟನ ತಿಳುವಳಿಕೆ. ಅಧಿಕಾರ, ಸಂಪತ್ತು, ಮತ್ತು ಗೌರವ ಎನ್ನುವುದು ಮುಖ್ಯವಾಗಿ ಸಾಮಾಜಿಕ ಅವಶ್ಯಕತೆ ಎಂದೂ ಅದನ್ನು ಒಂದು ಅಗತ್ಯವೆಂದು ಅವನು ತಿಳಿಯುತ್ತಾನೆ. ಪ್ಲೇಟೋ ಹೇಳುವ ಒಂದು ಮಾತು ಇಲ್ಲಿ ಉಲ್ಲೇಖನೀಯ: ಅವನು ಹೇಳುತ್ತಾನೆ – "ಧೈರ್ಯ ಮತ್ತು ಸ್ವನಿಯಂತ್ರಣ ಎರಡೂ ಅತ್ಯಂತ ಪ್ರಾಚೀನವಾದದ್ದು. ಅದು ಹೆಚ್ಚು ಮುಖ್ಯವಾದದ್ದು ಕೂಡಾ ಆಗಿದೆ. ಇದರ ಜೊತೆಗೆ ನಮಗೆ ವಿವೇಕ, ನ್ಯಾಯ ಮತ್ತು ಕೆಲವೊಮ್ಮೆ ಕರುಣೆಯು ಹೆಚ್ಚು ಪ್ರಧಾನವಾಗುತ್ತದೆ. ಹಾಗೆ ನೋಡಿದರೆ ನಮಗೆ ಕಾರಣ ಎನ್ನುವುದು ಅತ್ಯಂತ ಪ್ರಧಾನವಾದ ಒಂದು ಅಂಶವೆಂದು ಪ್ರಾಚೀನವಾದ ಒಂದು ಸಂಗತಿಯೂ ಹೌದು. ಯಾವುದನ್ನು ನಾವು ಅತ್ಯುತ್ತಮವಾದ ಗುಣವೆಂದು ಹೇಳುತ್ತೇವೆಯೋ ಅದನ್ನು ನಾವು ನಮ್ಮ ಜೀವನದಲ್ಲಿ ಕಟ್ಟುವುದು ಮಾತ್ರವೇ ಆಗಿರುತ್ತದೆ. ಆದರೆ ನಮ್ಮ ಬಯಕೆಗಳೇ ಇಮ್ಮಡಿಯಾಗುತ್ತವೆ. ಅದರ ಕಾರಣಗಳೂ ಬೇರೆಯಾಗುತ್ತದೆ.

ಆದರೆ ಕಾಂಟ್ ಕೆಲವು ವಿಚಾರಗಳಲ್ಲಿ ಆಧ್ಯಾತ್ಮಿಕವನ್ನು ಒಪ್ಪುತ್ತಾನೆ. ಹಾಗಿದ್ದೂ ಅವನು ಕಾರಣವನ್ನು ಅತ್ಯಂತ ಮಹತ್ವದ್ದು ಎಂದು ಭಾವಿಸಿದ್ದರಿಂದ ಅವನು ಅದನ್ನು ನಮ್ಮ ಜೀವನದ ಅತ್ಯಂತ ಪ್ರಮುಖವಾದ ಒಂದು ನಿರ್ಣಯ ಎಂದು ಹೇಳುತ್ತಾನೆ. ಜ್ಞಾನದ ಮೂಲವು ಕೂಡಾ ಕಾರಣವೇ ಆಗಿದೆ. ಆದರೆ ಪುನರುಜ್ಜೀವನದ ಅನಂತರ ಜೀವನ ಮತ್ತು ಅದರ ಆಶಯಗಳು ಹೇಗೆ ವ್ಯತ್ಯಾಸವಾಯಿತು ಎನ್ನುವುದನ್ನು ಅನೇಕರು ಚರ್ಚೆ ಮಾಡಿದ್ದಾರೆ. ಇದರ ಜೊತೆಗೆ ರಾಜಕಾರಣದಲ್ಲಿ ನಿರಂಕುಶ ಪ್ರಭುತ್ವ ಎನ್ನುವುದು ಚಾಲ್ತಿಗೆ ಬಂತು. ಇಲ್ಲಿ ಮತ್ತೊಂದು ವಿಚಾರವನ್ನು ನಾವು ಹೇಳಬೇಕು. ಪುನರುಜ್ಜೀವನವು ಹೇಗೆ ಅನೇಕ ರೀತಿಯು ಪ್ರಭುತ್ವವನ್ನು ರಾಜಕಾರಣದಲ್ಲಿ ಹುಟ್ಟು ಹಾಕಿದರು ಎನ್ನುವುದನ್ನು ಅಡರ್ನೊ, ಲೆವಿನಸ್ ಮುಂತಾದವರು ಚರ್ಚೆಯನ್ನು ಮಾಡಿದರು. ಅದು ಹೇಗೆ ನಿಜವಾದ ಒಂದು ಅಪರಾಧವಾಯಿತು ಎಂದೂ ವಿವರಿಸಿದ್ದಾರೆ. ಅದರ ಜೊತೆಗೆ ಅನೇಕ ತತ್ವಜ್ಞಾನಿಗಳು ಏಕತೆಯನ್ನು ಕುರಿತು ಹೇಳಿದ್ದಾರೆ. ಜಿಜೆಕ್ ಅತ್ಯಂತ ತಮಾಷೆಯ ಧ್ವನಿಯಲ್ಲಿ ತಾತ್ವಿಕ ಪೊಲೀಸರು ಮತ್ತು ರಾಜಕೀಯ ಪೊಲೀಸರು ಎಂದು ಹೇಳುತ್ತಾನೆ. ವಾಸ್ತವವಾಗಿ ಪೊಪ್ಪರ್, ಅಡರ್ನೊ ಮತ್ತು ಲೆವಿನಸ್ ಪುನರುಜ್ಜೀವನ ಕಾಲಘಟ್ಟ ಮತ್ತು ಕಾರಣಗಳು ಹೇಗೆ ಜೊತೆಗೆ ಹೋಗಿವೆ ಎಂದು ವಿಶೇಷವಾದ ಚರ್ಚೆಯನ್ನು ಮಾಡಿದ್ದಾರೆ. ಪೊಪ್ಪರ್ ವಿಜ್ಞಾನ ಮತ್ತು ಅದರ ಸ್ವರೂಪವನ್ನು ಹೇಳಿಕೊಳ್ಳುವಾಗ ಕೆಲವು ಮೂಲಭೂತವಾದ ಚರ್ಚೆಯನ್ನು ಮಾಡುತ್ತಾನೆ. ಆದರೆ ಅವನು ಒಂದು ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತಾನೆ. ಯಾವುದನ್ನು ನಾವು ಸಂಪ್ರದಾಯ ಎಂದು ಹೇಳುತ್ತೇವೆಯೋ ಅದರ ಮೇಲೆ ನಾವು ಅವಲಂಬಿತರು ಆಗಿದ್ದೇವೆ. ಅದರ ಮೇಲೆ ಅವಲಂಬನೆಯಾಗಲು ಒಂದು ನಿರ್ದಿಷ್ಟವಾದ ಕಾರಣವು ಇದೆ ಎಂದು ಹೇಳಲು ಬರುವುದಿಲ್ಲ. ಅವನು ಮೊದಲು ಕಾಂಟ್ ವಾದವನ್ನು ಹೆಚ್ಚು ಗಮನಿಸಿದ್ದಾನೆ ಎನ್ನುವುದು ಸ್ಪಷ್ಟ. ವಿಜ್ಞಾನಕ್ಕೆ ಒಂದು ತಾರ್ಕಿಕತೆಯು ಇದೆ ಎನ್ನುವುದು ಅವನ ವಾದ. ಅವನದೇ ಆದ ಮಾತಿನಲ್ಲಿ ಹೇಳಬೇಕೆಂದರೆ ಜ್ಞಾನದ ತಾರ್ಕಿಕತೆಯು ಮುಖ್ಯವಾಗುತ್ತದೆ. ಆದರೆ ಅವನು ಅನುಭವ ಮತ್ತು ಅದರ ಮೂಲಕ ಅರ್ಥ ಮಾಡಿಕೊಳ್ಳುವ ಕ್ರಮವನ್ನು ವಿಶ್ಲೇಷಣೆ ಮಾಡುತ್ತಾನೆ ಹಾಗೆ ನೋಡಿದರೆ ಯಾವುದು ವಸ್ತುನಿಷ್ಟ ಮತ್ತು ಯಾವುದು ವಿಷಯನಿಷ್ಟ ಎಂದು ವಿವರಿಸಿಕೊಳ್ಳುವುದು ಅತ್ಯಂತ ಕಷ್ಟ, ಅವನು ಅದುವೆ ತತ್ವಜ್ಞಾನದಲ್ಲಿ ಅತ್ಯಂತ ಹೆಚ್ಚು ಭಾರವಾಗಿದೆ ಎಂದು ಹೇಳುತ್ತಾನೆ. ಕಾಂಟ್ ವಿಷಯನಿಷ್ಟ ಎನ್ನುವುದನ್ನು ನಮ್ಮ ಭಾವನೆಗಳಿಗೆ ಅನ್ವಯವನ್ನು ಮಾಡಿದ್ದಾನೆ. ಯಾವುದು

ಕಾಂಟ್‌ನಲ್ಲಿ ವಸ್ತುನಿಷ್ಠವಾಗಿದೆಯೋ ಅದರ ರೂಪವು ನಿರ್ಧಾರವಾಗುವುದು ನಮ್ಮ ಭಾವನೆಗಳ ಮೂಲಕವೇ. (ಪೊಪ್ಪರ್ ದಿ ಲಾಜಿಕ್ ಆಫ್ ಸೈಂಟಿಫಿಕ್ ಡಿಸ್ಕವರಿ, 1992, ಪುಟ.23, ರೂತ್ಲೆಜ್ ಪಬ್ಲಿಕೇಶನ್ಸ್) ಅವನು ಮತ್ತೊಂದು ಕಡೆಗೆ ಬೇರೆ ವಿಚಾರಗಳನ್ನು ಪ್ರಶ್ನೆ ಮಾಡುತ್ತಾನೆ. ಅವನ ಪ್ರಕಾರ ನಿರಂಕುಶ ಪ್ರಭುತ್ವ ಮತ್ತು ಆದರ ನ್ಯಾಯದ ಕಲ್ಪನೆಯನ್ನು ಹೇಳುತ್ತಾನೆ. ಗ್ರೀಕ್ ಸಿಟಿ ಸ್ಟೇಟ್ ಕಲ್ಪನೆಯು ಹೇಗೆ ಹೊಸದಾದ ಕಾನೂನನ್ನು ಜಾರಿಗೆ ತಂದಿತ್ತು ಎನ್ನುವುದನ್ನು ನೋಡಬೇಕಾಗುತ್ತದೆ. ಪ್ಲೇಟೋನಲ್ಲಿ ನ್ಯಾಯ ಮತ್ತು ಅದರ ಕಲ್ಪನೆಯು ಹೆಚ್ಚು ಭಿನ್ನವಾಗಿದೆ. ನ್ಯಾಯ ಮತ್ತು ಅದರ ಪರಿಕಲ್ಪನೆಯು ಸಮಾನವಾದ ಒಂದು ಆಶಯವೂ ಆಗಿದೆ. ಅದರ ಜೊತೆಗೆ ಹೇಗೆ ನೀತಿ ಮತ್ತು ಕಾನೂನು ಜತೆಗೆ ಬಂದಿತು ಎನ್ನುವುದನ್ನೂ ಪೊಪ್ಪರ್ ವಿವರಿಸುತ್ತಾನೆ (ಪೊಪ್ಪರ್ ದ ಓಪನ್ ಸೊಸೈಟಿ ಅಂಡ್ ಇಟ್ಸ್ ಎನಿಮಿಸ್, ಸಂ.1 ಜಾರ್ಜ್ ರೂತ್ಲೆಜ್ ಅಂಡ್ ಸನ್ಸ್ ಪುಟ.99) ಹಾಗೆ ಈ ಜಗತ್ತು ಎನ್ನುವುದು ಬರೀ ವಸ್ತುಗಳನ್ನು ಮಾತ್ರ ಸಂಕೇತಿಸುವುದಿಲ್ಲ. ಅದು ಅನೇಕ ಘಟನೆಗಳನ್ನು ಕೂಡಾ ಸೇರಿಸಿಕೊಂಡಿದೆ. ಆದ್ದರಿಂದಲೇ ಹೆರಾಕ್ಲಿಟಸ್ ಸಮಾಜ ಮತ್ತು ಅದರ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಒಡ್ಡುತ್ತಾನೆ. (ಅದೇ, ಪುಟ.18) ಆದರೆ ಯಾರು ಚರಿತ್ರೆಯನ್ನು ನಿರಾಕರಿಸುತ್ತಿದ್ದಾರೆಯೋ ಅವರು ಪ್ರಭುತ್ವ ಮತ್ತು ಅದರ ಬೆಳವಣಿಗೆಯನ್ನು ಗಮನಿಸಲು ಹೋಗುವುದಿಲ್ಲ. ಇಲ್ಲಿ ಮನುಷ್ಯ ಮತ್ತು ಅವನ ಘನತೆಯನ್ನು ನೋಡಬೇಕಾಗುತ್ತದೆ, ವಿವೇಕ ಎನ್ನುವುದು ಮನುಷ್ಯನಿಗೆ ಸಹಜವಾಗಿ ಬಂದಿದೆಯೇ ಅಥವಾ ಅದನ್ನು ಅವನ ಮೇಲೆ ಹೇರಲಾಗಿದೆಯೇ ಎಂದೂ ನೋಡಬೇಕು. ಮನುಷ್ಯ ಮತ್ತು ಅವನ ವಿವೇಕಕ್ಕೆ ಒಂದು ರೂಪವನ್ನು ನಾವು ಕೊಟ್ಟಿದ್ದೇವೆ. ಅದರ ಅರ್ಥವು ಬೇರೆ. ಅದನ್ನು ಬೇರೆ ಬೇರೆ ರೀತಿಯಲ್ಲಿ ನಿರೂಪಿಸಲಾಗಿದೆ, ಸತ್ಯ ಮತ್ತು ವಿವೇಕವನ್ನು ಅನೇಕರು ಜೊತೆಗೆ ಸೇರಿಸುತ್ತಾರೆ. ಆದರೆ ವಿವೇಕವು ನಮಗೆ ಒಂದು ಮಾನದಂಡವು ಆಗುವುದು ಹೇಗೆ ಎನ್ನುವುದು ಪ್ರಶ್ನೆ. ಇದನ್ನು ಹೀಗೆ ಹೇಳಬಹುದು: ಭಾರತದಲ್ಲಿ ಹಿಂದೂ ಮೂಲಭೂತವಾದಿಗಳನ್ನು ಒಪ್ಪುವುದೇ ಅಥವಾ ಮುಸ್ಲಿಂ ಮೂಲಭೂತವಾದಿಗಳನ್ನು ಒಪ್ಪುವುದೇ ಎನ್ನುವುದು ಬರೀ ಒಂದು ಆಯ್ಕೆಯು ಆಗಿರುವುದಿಲ್ಲ. ಅದನ್ನು ಅತ್ಯಂತ ವಿವೇಕಿಯಾದವನು ನಿರಾಕರಿಸುತ್ತಾನೆ. ಅವನ ಪ್ರಕಾರ ಎರಡೂ ಅತ್ಯಂತ ಅಪಾಯಕಾರಿಯಾಗಿದೆ. ಆದರೆ ಹಿಂದೂ ಮೂಲಭೂತವಾದವನ್ನು ಮತ್ತು ಮುಸ್ಲಿಂ ಮೂಲಭೂತವಾದವನ್ನು ವಿವೇಕಿಯು ನಿರಾಕರಿಸುವುದು ಮಾತ್ರವೇ ಅಲ್ಲ. ಅದರ ಮೂಲಕ ಅವನು

ಒಂದು ನಿರ್ದಿಷ್ಟವಾದ ಆಯ್ಕೆಯನ್ನು ಮಾಡುತ್ತಾನೆ. ನಾವು ಯಾವುದನ್ನು ವಿವೇಕ ಎಂದು ಹೇಳುತ್ತೇವೆಯೋ ಅದನ್ನು ರೂಪನಿಷ್ಟರು ಅದರ ಒಳಗೆ ಮಾತ್ರವೇ ಉತ್ತರವನ್ನು ಕಂಡುಕೊಳ್ಳುತ್ತಾರೆ. ಆದರೆ ಎಲ್ಲರೂ ಆ ರೀತಿ ಮಾಡಲು ಸಾಧ್ಯವೇ ಇಲ್ಲ. ವಿವೇಕವನ್ನು ನಾವು ಚರಿತ್ರೆಯ ಮೂಲಕವೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಒಂದು ಪ್ರಶ್ನೆಯು ಬಂದಿರುವುದು ನಿಜ ಪ್ರಭುತ್ವವನ್ನು ಯಾರು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು: ಉದಾರವಾದಿಗಳೇ ಅಥವಾ ವ್ಯಕ್ತಿವಾದಿಗಳೇ? ಆದ್ದರಿಂದಲೇ ನಿರಂಕುಶ ಎನ್ನುವುದು ವ್ಯಕ್ತಿಯನ್ನು ಕೇಂದ್ರ ಮಾಡಿಕೊಂಡಿತು. ಕುಡಿಯರ ಕೂಸು ಕರಿಯನ ಕೃಷಿ ಉದಾಹರಣೆಯಾಗಿದೆ.

ಇಲ್ಲಿ ಮತ್ತೊಂದು ವಿಚಾರವನ್ನು ಹೇಳಬೇಕು: ಧರ್ಮ ಮತ್ತು ಅದರ ಸೇವೆಗಾಗಿ ಪವಿತ್ರವಾದ ಬಲಿದಾನ ಎನ್ನುವುದು ಇತ್ತಿಚೇಗೆ ಹೆಚ್ಚು ಚಾಲ್ತಿಗೆ ಬರುತ್ತಿದೆ. ಬಲಿದಾನ ಎನ್ನುವುದು ಮನೋಸ್ಥಿತಿಯನ್ನು ಹೇಳುತ್ತದೆ. ಅದು ಒಂದು ಅಮಲು. ಆದರೆ ಇದನ್ನು ಟೆರಿಈಗಲ್ಟನ್ ಪವಿತ್ರವಾದ ಭಯೋತ್ಪಾದನೆ ಎಂದು ಹೇಳುತ್ತಾನೆ. ಆದರೆ ಅದು ಸತ್ಯ. ಹಾಗೆಂದು ಅದನ್ನು ನಾವು ಒಪ್ಪಿಕೊಳ್ಳಲು ಆಗುವುದೂ ಇಲ್ಲ. ಅದು ವಿನಾಶವನ್ನು ಸೂಚಿಸುತ್ತದೆ. ಆದ್ದರಿಂದ ಅದಕ್ಕಿಂತ ಹೆಚ್ಚು ದೂರದಲ್ಲಿ ನಾವು ಇರಬೇಕಾಗುತ್ತದೆ. ಸಂಪ್ರದಾಯವಾದಿಗಳು ಹೇಗೆ ಒಂದು ವ್ಯವಸ್ಥಿತವಾದ ಸಂಚನ್ನು ಹೂಡುತ್ತಾರೆ ಎನ್ನುವುದಕ್ಕೆ ಇದು ಒಂದು ನಿದರ್ಶನವೂ ಆಗಿದೆ. ಆದರೆ ಇಲ್ಲಿ ಆಧುನಿಕೋತ್ತರವಾದವು ಧರ್ಮವನ್ನು ಹೇಗೆ ಖಾಲಿಯಾದ ಜಾಗದಲ್ಲಿ ಇರಿಸುತ್ತದೆ ಎಂದು ನೆನಪು ಮಾಡಿಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಎಡ್ಮಂಡ್ ಬರ್ಕೆಯು ಫ್ರೆಂಚ್ ಕ್ರಾಂತಿಯು ಹೇಗೆ ಹೊಸದಾದ ಬುದ್ಧಿಜೀವಿಗಳ ವರ್ಗವನ್ನು ಸೃಷ್ಟಿಸಿತು ಎಂದು ಹೇಳುತ್ತಾನೆ. ಫ್ರೆಂಚ್ ಕ್ರಾಂತಿಯನ್ನು ಅವನು ವಿಮರ್ಶಾತ್ಮಕವಾಗಿ ನೋಡುತ್ತಾನೆ. ಸರಕಾರಕ್ಕೆ ಒಂದು ಮಾನವೀಯವಾದ ಹೃದಯವು ಇರಬೇಕೆಂದು ಅವನು ಹೇಳುತ್ತಾನೆ. ಅದರ ಜೊತೆಗೆ ಅವನು ತಾನು ಯಾವುದೇ ಪ್ರೊಫೆಸರ್ ಜೊತೆಗೆ ಇರಲು ಬಯಸುವುದಿಲ್ಲ, ಅದರ ಬದಲು ತಾನು ರೈತರ ಜೊತೆಗೆ ಇರಲು ಬಯಸುತ್ತೇನೆ ಎಂದು ಹೇಳುತ್ತಾನೆ. ತನಗೆ ಔಷಧಿಯನ್ನು ಅಥವಾ ಆಹಾರವನ್ನು ಕುರಿತು ವಿವರಿಸಲು ಆಸಕ್ತಿಯು ಇಲ್ಲವೆಂದು ಅವನು ಭಾವಿಸುತ್ತಾನೆ. ಯಾವುದೇ ಸಂಗತಿಗಳು ನಿಧಾನವಾಗಿ ಬೆಳವಣಿಗೆಯನ್ನು ಸಾಧಿಸಬೇಕೇ ಹೊರತು ಇದ್ದಕ್ಕಿದ್ದಂತೆ ಕ್ರಾಂತಿಯಾಗುವುದು ಅಷ್ಟು ಉಪಯುಕ್ತವಲ್ಲ. ಅದರ ಜತೆಗೆ ಖಾಸಗಿ ಆಸ್ತಿಯು ಇರುವುದರಿಂದ ಯಾವುದೇ ತೊಂದರೆ ಇಲ್ಲ. ಒಂದು ದೃಷ್ಟಿಯಿಂದ ಅವನು ಉದಾರವಾದಿಯ ಥರ ಯೋಚನೆಯನ್ನು ಮಾಡುತ್ತಾನೆ. ಫ್ರೆಂಚ್

ಕ್ರಾಂತಿಯು ತನಗೆ ಆಶ್ಚರ್ಯವನ್ನು ಉಂಟು ಮಾಡಿದೆ ಎಂದು ಹೇಳುತ್ತಾನೆ. ಆದರೆ ಮತ್ತೊಂದು ಕಡೆಯಿಂದ ಅದು ತನಗೆ ಟ್ರಾಜಿಕ್, ಕಾಮಿಕ್ ದೃಶ್ಯದಂತೆ ಭಾಸವಾಗುತ್ತದೆ. ಅದು ಅತ್ಯಂತ ಮಿಶ್ರವಾದ ಒಂದು ಮನೋಭಾವವನ್ನು ಉಂಟು ಮಾಡುತ್ತದೆ. ಅದರಲ್ಲಿ ಅಳು ಮತ್ತು ನಗು ಜತೆಗೆ ಇದೆ. ಸ್ವಾರ್ಥವನ್ನು ಅದು ಕೇಂದ್ರವಾಗಿರಿಸಿಕೊಂಡಿದೆ. ಇದರ ಜತೆಗೆ ಕೆಲವು ಅವಿವೇಕದ ಸಂಗತಿಗಳು ನಡೆದಿವೆ ಎನ್ನುವುದು ಅತ್ಯಂತ ಸ್ಪಷ್ಟ. ಅನೇಕ ಪುರಾತನರನ್ನು ಅದು ಮರೆಯುವಂತೆ ಮಾಡಿತು. ನಾವು ಅಭಿವೃದ್ಧಿಯನ್ನು ಸಾಧಿಸುವುದು ಅಂದರೆ ನಾವು ಸಂಪೂರ್ಣವಾಗಿ ಹೊಸತಾಗಬೇಕು. ಕೈಗಾರಿಕೆಯ ಅಭಿವೃದ್ಧಿ ಎಂದರೆ ಅದು ಸ್ವಯಂಸಂಪೂರ್ಣವಾಗಬೇಕಾಗುತ್ತದೆ. ಆದರೆ ಇದನ್ನು ವಿವರಿಸುವಾಗ ಅವನು ವಿನಯ ಎನ್ನುವುದು ಹೇಗೆ ಅಗತ್ಯವಾಗುತ್ತದೆ ಎಂದೂ ಹೇಳುತ್ತಾನೆ. ಯಾವುದೇ ಅಪದಾರಿಯಲ್ಲಿ ಹೋದರೆ ಯಾವುದೇ ಪ್ರಯೋಜನವು ಇಲ್ಲ. ಅಡ್ಡದಾರಿಯು ಯಾವತ್ತೂ ನಮ್ಮನ್ನು ಹೆಚ್ಚು ಉದ್ಧಾರ ಮಾಡುವುದಿಲ್ಲ ಎನ್ನುವುದು ಅವನ ಖಚಿತವಾದ ಒಂದು ನಿಲುವು. ಹಾಗೆ ನೋಡಿದರೆ ಸಮಾಜ ಎನ್ನುವುದು ಒಂದು ಬಗೆಯ ಒಪ್ಪಂದ ಮಾತ್ರವೇ. ಅವನದೇ ಮಾತನ್ನು ಹೇಳಬೇಕೆಂದರೆ ನಾವು ಬದುಕುತ್ತಿರುವುದು ಒಂದು ಬಗೆಯ ಪಾಲುದಾರಿಕೆಯಲ್ಲಿ. (ಪಾರ್ಟನರ್ಶಿಪ್) (ಎಡ್ಮಂಡ್ ಬರ್ಕ್, 1790, ರಿಪ್ಲಕ್ಷನ್ ಆನ್ ದಿ ರೆವ್ಯೂಲಶನ್ ಇನ್ ಫ್ರಾನ್ಸ್ – ಜನಾಥನ್ ಬೆನೆಟ್, 2017) ನಮಗಾಗಿ ಸರಕಾರ, ನಮಗಾಗಿ ಆಳುವವರು, ಮತ್ತು ಯಾರು ಅತ್ಯಂತ ಹೆಚ್ಚು ದುರ್ನಡತೆಯನ್ನು ಹೊಂದಿದ್ದಾರೆಯೋ ಅವರನ್ನು ಅಮಾನತ್ ಮಾಡಿ ಎಂದೂ ಹೇಳುತ್ತಾನೆ. ಈ ಅರ್ಥದಲ್ಲಿ ಅವನು ನೀತಿಯನ್ನು ಹೆಚ್ಚು ಸಾರುತ್ತಾನೆ. ಏಕತೆ, ಶಾಂತಿ ಮತ್ತು ರಾಷ್ಟ್ರದ ಸಂಗತಿಗಳು ಅವನಲ್ಲಿ ಮುಖ್ಯವಾಗಿ ಕಾಣಿಸುತ್ತವೆ. ನಂಬಿಕೆ, ನ್ಯಾಯ ಮತ್ತು ಕಾರಣಗಳನ್ನು ಅವನು ಅವಲಂಬಿಸಿದ್ದು ಕಂಡುಬರುತ್ತದೆ. ರಾಜ ಮತ್ತು ಅವನ ಆಧ್ಯಾತ್ಮಿಕವಾದ ಒಂದು ಗುಣವನ್ನು ಅವನು ಪ್ರಸ್ತಾವಿಸಿದ್ದಾನೆ. ಹಾಗೆಂದು ಅವನು ಕೆಟ್ಟ ರಾಜನನ್ನು ಒಪ್ಪುವುದಿಲ್ಲ. ವ್ಯಕ್ತಿತ್ವ ಮತ್ತು ಅದರ ಘನತೆಯನ್ನು ಒಪ್ಪುವುದು ಮಾತ್ರವೇ ಅಲ್ಲ, ಧಾರ್ಮಿಕವಾದ ಶ್ರೇಷ್ಠತೆಯನ್ನು ಅವನು ಅಗತ್ಯವೆಂದು ಹೇಳುತ್ತಾನೆ. ಕಾನೂನು ಹೇಗೆ ಶೋಷಣೆಯನ್ನು ಮಾಡುತ್ತದೆ ಎನ್ನುವುದೂ ಅವನಿಗೆ ತಿಳಿದಿದೆ. ಆಧುನಿಕ ಯುಗದ ಕಾರಣವಾದವು ಹಿಂದಿನ ಐತಿಹ್ಯಗಳನ್ನು ಮರುಪರಿಶೀಲನೆಯು ಅಗತ್ಯವೆಂದು ಭಾವಿಸುತ್ತದೆ. ಆದರೆ ಶುದ್ಧವಾದ ಕಾರಣಗಳ ಪ್ರಶ್ನೆಯು ಹೇಗೆ ಮುಖ್ಯವಾಗುತ್ತದೆ.

ಕಾರಂತರ ಕಾದಂಬರಿಗಳ ಎಲ್ಲಾ ವಿವರಣೆಗಳನ್ನು ಇಲ್ಲಿ ಮಂಡಿಸುವುದು ಕಷ್ಟ. ಆದರೆ ಕೆಲವನ್ನು ಉಲ್ಲೇಖಿಸಬಹುದು:

1. ಮರಳಿ ಮಣ್ಣಿಗೆಯಲ್ಲಿ ರಾಮನ ಆದರ್ಶಕ್ಕೆ ಕಾರಣವಿದೆ. ಅದು ಸ್ವಾತಂತ್ರ್ಯ ಹೋರಾಟ.
2. ಅಳಿದ ಮೇಲೆ ಕಥನದ ವಸ್ತುವೇ ನಮಗೆ ಒಂದು ಕಾರಣವನ್ನು ಹೇಳುತ್ತದೆ. ಸತ್ತವನು ಸತ್ತ ಅದರ ಅನಂತರವೇನು ಎಂಬುದನ್ನು ವಿವರಿಸುವುದು ಕಾರಂತರ ಉದ್ದೇಶ.
3. ಸರಸಮ್ಮನ ಸಮಾಧಿ ಕಾದಂಬರಿಗೆ ವಿಶಿಷ್ಟತೆಯು ಮನುಷ್ಯರ ನಂಬಿಕೆಯ ಕಾರಣದಿಂದ.
4. ರಾಷ್ಟ್ರೀಯತೆಯ ಆದರ್ಶವೇ ರಾಧಾಕೃಷ್ಣನ ಜೀವನ ವೃತ್ತಾಂತವನ್ನು ನಿರ್ವಹಿಸುತ್ತದೆ. (ಔದಾರ್ಯದ ಉರುಳಲ್ಲಿ.)

ಸುಪ್ತವಾದ ಪ್ರಜ್ಞೆಯ ಪ್ರಶ್ನೆ

ಈಗ ಮನುಷ್ಯರು ಅವರ ಸುಪ್ತವಾದ ಪ್ರಜ್ಞೆಯನ್ನು ಕುರಿತು ಅನೇಕರು ಹೇಳುತ್ತಾರೆ. ಯಾವುದನ್ನು ನಾವು ಸುಪ್ತವಾದ ಪ್ರಜ್ಞೆ ಎಂದು ಹೇಳುತ್ತೇವೆಯೋ ಅದು ತನ್ನ ಅಸ್ತಿತ್ವವನ್ನು ವಿಭಿನ್ನವಾಗಿ ತೋರಿಸುತ್ತದೆ. ಫ್ರಾಯ್ಡ್ ಇದನ್ನು ಬರೆದ ಮೇಲೆ ಈ ವಿಚಾರವು ಹೆಚ್ಚು ಪ್ರಚಾರವನ್ನು ಕಂಡಿತು. ಚರಿತ್ರೆಯಲ್ಲಿ ಈ ವಿಚಾರವು ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಇದರ ಮತ್ತೊಂದು ಅಂಶವನ್ನು ನಾವು ಇತಿಹಾಸದ ಅಧ್ಯಯನದಲ್ಲಿ ಕಾಣಲು ಸಾಧ್ಯವೂ ಇದೆ. ಆದರೆ ಪ್ರಾಣಿ ಮತ್ತು ಮನುಷ್ಯರ ನಡುವೆ ಒಂದು ಭಿನ್ನತೆಯು ಇದೆ ಎಂದು ಹೇಳುವಾಗ ನೀತಿಯನ್ನು ಒಂದು ಮಾನದಂಡವನ್ನಾಗಿ ಮಾಡಲಾಯಿತು. ಪ್ರಾಣಿಗಳಿಗೆ ನೀತಿಯು ಇಲ್ಲ, ಆದರೆ ಮನುಷ್ಯರಿಗೆ ನೀತಿಯು ಇದೆ ಎಂದು ಪ್ರಚಾರ ಮಾಡಿದ್ದರಿಂದ ಅದರಲ್ಲಿ ಒಂದು ನಿರೂಪಣೆಯು ಬಂದಿತು. ಅದರ ಅನಂತರ ಬಂದ ಅತ್ಯಂತ ಮಹತ್ವದ ಪ್ರಶ್ನೆಯೆಂದರೆ ಮನುಷ್ಯ ಮತ್ತು ಪ್ರಾಣಿಗಳು ಹೇಗೆ ಭಿನ್ನವಾಗುತ್ತವೆ? ಇದನ್ನು ಪ್ರಾಣಿಗಳು ಮತ್ತು ಅವುಗಳ ವರ್ತನೆಯನ್ನು ಮನುಷ್ಯನು ಹೇಗೆ ಬೇರೆ ಮಾಡಿಕೊಂಡರು ಎನ್ನುವುದನ್ನು ಜೀವ ವಿಜ್ಞಾನವು ವಿವರಿಸಲು ಯತ್ನವನ್ನು ಮಾಡಿತು. ಅನ್ಯ ಎನ್ನುವುದನ್ನು ಗುರುತಿಸುವುದು ಮುಖ್ಯವಾಯಿತು. ವಾಸ್ತವವಾಗಿ ಅನಂತರ ಬಂದ ಅನೇಕ ವಿದ್ವಾಂಸರು ಇದನ್ನು ಪ್ರಶ್ನೆ ಮಾಡಿದರು. ಅದರಲ್ಲಿ ಹೆನ್ರಿ ಏಫ್. ಎಲ್ಲೆನ್ ಬರ್ಗರ್ ಕೂಡಾ ಒಬ್ಬರು. ಚರಿತ್ರೆಯು ಕೂಡಾ ಅನೇಕವನ್ನು ಹೇಳುತ್ತದೆ ಆದರೆ ಅದರ ನಿಯಂತ್ರಣವು ನಮಗೆ ಬೇಗನೆ ತಿಳಿಯುವುದು ಇಲ್ಲ. ಯಾವುದು ಕಾಂಟ್ ಕ್ರಿಟಿಕ್ ಆಫ್ ಪ್ಯೂರ್ ರೀಸನ್ ಎಂದು ಹೇಳುತ್ತಾನೆಯೋ ಅದರ ಚರ್ಚೆಯು ಮತ್ತೆ ಬಂದಿತು. ಅದರ ಮತ್ತೊಂದು ರೂಪವು ಮನಃಶಾಸ್ತ್ರದಲ್ಲಿಯೂ ಬಂದಿತು. ಇದರ ಪರಿಣಾಮವನ್ನು ಅಭಿವ್ಯಕ್ತಿ

ಮತ್ತು ಮನೋವೈಜ್ಞಾನಿಕವಾದ ಸಮಸ್ಯೆಗೆ ಅನ್ವಯ ಮಾಡಲಾಯಿತು. ಪ್ರಜ್ಞೆ ಮತ್ತು ಅದರ ಆಳದಲ್ಲಿ ಏನಿದೆಯೋ ಅದನ್ನು ವ್ಯಕ್ತ ಮಾಡಲು ಸಾಧ್ಯವಾಗುತ್ತದೆ. ಅದನ್ನೇ ಹೆಚ್ಚು ಪ್ರಸಿದ್ಧಿಗೆ ತರಲು ಯತ್ನವನ್ನು ಮಾಡಲಾಯಿತು. ಮನುಷ್ಯ ಮತ್ತು ಅವನ ಗುಟ್ಟುಗಳನ್ನು ಸುಪ್ತವಾದ ಪ್ರಜ್ಞೆಯು ಒಳಗೊಂಡಿರುತ್ತದೆ ಅದನ್ನು ನಮ್ಮ ಭಾವನೆಗಳು ಬೇರೆ ಬೇರೆ ಥರ ಹೇಳುತ್ತವೆ ಎಂದು ತಿಳಿಯಿತು. ಪ್ರಮೇಯಗಳು ಮುಂದೆ ಬಂತು. ಆದರೂ ಒಂದು ಮಾತನ್ನು ನಾವು ಇಲ್ಲಿ ನೆನಪಿಟ್ಟುಕೊಳ್ಳಬೇಕು. ಪುನರುಜ್ಜೀವನ ಎನ್ನುವುದು ಮನುಷ್ಯರ ಅನೇಕ ವಿಚಾರಗಳನ್ನು ಅನೇಕ ವರ್ಷಗಳ ತನಕ ತಡೆಹಿಡಿದು ನಿಲ್ಲಿಸಿದ್ದು ಸತ್ಯವಾಗಿದೆ. ಅಹಮಿಕೆ ಎನ್ನುವುದೂ ಒಂದು ಅರ್ಥದಲ್ಲಿ ಒತ್ತಡಕ್ಕೆ ಸಿಕ್ಕಿದ್ದು ನಿಜ. ಅದು ನಂಬಿಕೆಯನ್ನು ಪ್ರಶ್ನೆ ಮಾಡಿದ್ದರಿಂದ ಅನೇಕರು ತಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಕಷ್ಟ ಈ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡುವಾಗ ಅದರ ಸಾಧ್ಯತೆಯನ್ನು ವಿವರಿಸಲು ಯತ್ನವನ್ನು ಮಾಡಲಾಯಿತು. ಫ್ರಾಯ್ಡನ ವಾದವನ್ನು ಹೇಳುವುದಿದ್ದರೆ ಇಲ್ಲಿ ಜನರು ಮತ್ತು ಅವರ ಮನೋಲೋಕವನ್ನು ಹೇಳಿಕೊಳ್ಳುವುದು ಅಂದರೆ ಮನುಷ್ಯನ ಸಾಧ್ಯತೆಯನ್ನು ಗುರುತಿಸುವುದು. ಅದಕ್ಕೆ ಒಂದು ಮೆಥಡ್ ಎನ್ನುವುದು ಬಂದಿರುವುದೂ ನಿಜ. ಯಾವುದು ನಮ್ಮ ಅನುಭವಕ್ಕೆ ಮತ್ತು ಹೊರಜಗತ್ತಿಗೆ ಸಂಬಂಧಪಟ್ಟಿದೆಯೋ ಅದನ್ನು ಮಾತ್ರವೇ ನೋಡುವುದು ಸರಿಯಾದ ಕ್ರಮವು ಅಲ್ಲ. ಅದರಲ್ಲಿ ಕಾರಣವೂ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು. ಆಧುನಿಕ ಜ್ಞಾನ ಮತ್ತು ಮನೋಸ್ಥಿತಿಗಳ ಸಂಬಂಧವನ್ನು ಮಾತ್ರವೇ ಇಲ್ಲಿ ಮುಖ್ಯವಾಯಿತು. ಮನುಷ್ಯ ಮತ್ತು ಅವನ ಸುಪ್ತವಾದ ಪ್ರಜ್ಞೆಯು ಬೇರೆ ಥರ ಚರ್ಚೆಗೆ ಗುರಿಯಾಯಿತು. ಹಿಪ್ನೋಟಿಕ್ ಎನ್ನುವುದು ಹೇಗೆ ಇದರ ಮೊದಲ ರೂಪವು ಆಯಿತು. ಅದರ ಪರಿಣಾಮವಾಗಿ ಮನಸ್ಸು ಮತ್ತು ಅದರ ವ್ಯವಹಾರವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಇದನ್ನು ಅನಂತರ ಅಧ್ಯಯನ ಮಾಡಿದವರು ಗ್ರಾಮರ್ ಆಫ್ ಫೀಲಿಂಗ್ ಎಂದೂ ಕರೆದರು. ಅಂದರೆ ಭಾವನೆಗಳ ವ್ಯಾಕರಣ ಎಂದು ಅರ್ಥ. ಮೂಕಜ್ಜಿಯ ಕನಸುಗಳು ಕಾದಂಬರಿಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವು ದ್ವಂದ್ವಾತ್ಮಕವಾಗಿದೆ. ಆದರೆ ಅದರ ಕುರಿತು ನಾವು ಮತ್ತೆ ಕೆಲವು ಅಂಶಗಳನ್ನು ಯೋಚಿಸಬೇಕಾದ ಅಗತ್ಯವೂ ಇದೆ. ಅಂದರೆ ಯಾವುದೇ ವಿಷಯಗಳು ತನ್ನಿಂದ ತಾನೇ ಉಂಟಾಗುವುದೂ ಇಲ್ಲ. ಆದರೆ ವಾಸ್ತವತೆಯೆ ನಮಗೆ ಬಲವನ್ನು ಕಲಿಸುತ್ತದೆ. ಅಂದರೆ ವಾಸ್ತವವು ಬರೀ ಸಾಹಿತ್ಯಕ್ಕೆ ಮಾತ್ರವೇ ಸೀಮಿತವಾದ ಚಟುವಟಿಕೆ

ಎಂದೂ ಭಾವಿಸಬೇಕಾದ ಅಗತ್ಯವಿಲ್ಲ. ಆದರೆ ಯಾವುದೇ ಬದಲಾವಣೆ ಮತ್ತು ಅದರ ಸಾಧ್ಯತೆಗಳಿಗೂ ವಿವಿಧ ಆಯಾಮಗಳೂ ಇರುತ್ತವೆ. ಕಾರಂತರನ್ನು ಓದುವಾಗ ಅವರು ಯಾಕೆ ಕಾದಂಬರಿಯನ್ನು ಬರೆದರು ಮತ್ತು ಆ ರೀತಿಯಲ್ಲಿ ಹೇಗೆ ಪ್ರತಿಕ್ರಿಯೆಯನ್ನು ನೀಡಿದರು ಎಂದೂ ನೋಡಬೇಕಾಗುತ್ತದೆ. ಅಂದರೆ ಇದರಲ್ಲಿ ಅಭಿವ್ಯಕ್ತಿ ಮತ್ತು ಅದರ ಸ್ವರೂಪವೂ ಇದೆ. ಕಾರಂತರು ಕಾದಂಬರಿಯನ್ನು ಬಳಸಿಕೊಂಡ ವಿಧಾನವೂ ಅತ್ಯಂತ ಮಹತ್ವದ್ದು. ಅವರು ಕಾದಂಬರಿಯನ್ನು ಒಂದು ವಾಹಕವಾಗಿ ಬಳಸಿಕೊಂಡರು. ಕಾರಂತರಿಗೆ ಅತ್ಯಂತ ಮಹತ್ವದ್ದಾಗಿ ಕಂಡದ್ದು ಈ ಮಾಧ್ಯಮ. ಅಂದರೆ ಇದು ಆ ಕಾಲಕ್ಕೆ ಅಗತ್ಯವೂ ಆಗಿತ್ತು. ಅವರ ಬರಹ ಮತ್ತು ಅದರ ಅಗತ್ಯವನ್ನು ನಾವು ಈ ದೃಷ್ಟಿಯಿಂದ ಕಾಲದ ಅಗತ್ಯವೆಂದು ಹೇಳಿದರೂ ಅದರ ಹಿಂದೆ ಚಾರಿತ್ರಿಕವಾದ ಒತ್ತಡವೂ ಇದೆ ಎಂಬುದನ್ನು ಮರೆಯಬಾರದು. ಗೋಲ್ಡ್‌ಮನ್ ಈ ಮಾದರಿಗಳನ್ನು ಕಾಲ ಮತ್ತು ಸ್ಥಳವನ್ನು ಆಧರಿಸಿಕೊಂಡು ನೋಡಬೇಕಾಗುತ್ತದೆ ಎಂದು ಹೇಳಿದ್ದು ಇಲ್ಲಿ ಉಲ್ಲೇಖನೀಯವಾಗಿದೆ. ಅಭಿವ್ಯಕ್ತಿ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ಕಾಲದ ಚಹರೆಯನ್ನು ಭಿನ್ನವಾಗಿಯೂ ನೋಡುತ್ತದೆ. ವಸಾಹತುಕಾಲದಲ್ಲಿ ಕಾದಂಬರಿಯ ಓದು ಎನ್ನುವುದೂ ಕೂಡಾ ಭಿನ್ನವಾದ ಅಗತ್ಯವಾಗಿತ್ತು. ಅದು ಹೊಸ ನಮೂನೆಯ ಓದು. ನಂಬಿದವರ ನಾಕ ನರಕ ಇದಕ್ಕೆ ಉದಾಹರಣೆಯಾಗಿದೆ.

ಬರಹಗಾರನಿಗೂ ಅದರ ಗುಣಗಳಿಗೂ ಸಂಬಂಧವಿದೆ. ಅದನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದು ಕೂಡಾ ಅತ್ಯಂತ ಅಗತ್ಯವಾಗಿದೆ. ಶೈಲಿಗೂ ಲೇಖಕನ ಮನೋಸ್ಥಿತಿಗೂ ಒಂದು ಸಂಬಂಧವಿದೆ. ಕೆಲವು ಸಂಗತಿಗಳಿವೆ. ಅದನ್ನು ನಾವು ಗ್ರಹಿಸುತ್ತೇವೆ. ಅದು ಸಂವೇದನೆಯ ಭಾಗ. ಮಾತು, ಬರಹ, ಧ್ವನಿ, ಕಲ್ಪನೆಗಳು ಸಂವೇದನೆಯ ಭಾಗವೂ ಆಗಿದೆ. ಮಾತು ಮತ್ತು ಬರಹವೂ ಕೂಡಾ ನಮ್ಮ ಭಾಗವೇ ಆಗಿದೆ. ನಾವು ಯಾವ ಸಂದರ್ಭದಲ್ಲಿ ನಿಂತು ಮಾತಾಡುತ್ತೇವೆ ಎನ್ನುವುದೂ ಬಹಳ ಮುಖ್ಯ. ನಾವು ಬರೆಯುವಾಗ ಕೆಲವನ್ನು ಆಯ್ಕೆ ಮಾಡುತ್ತೇವೆ. ಮತ್ತು ನಮಗೆ ಬೇಕಾದಂತೆ ಅದನ್ನು ಪರಿವರ್ತನೆ ಮಾಡುತ್ತೇವೆ. ಈ ಪರಿವರ್ತನೆಗಳಿಗೆ ಒಂದು ಉದ್ದೇಶವೂ ಇದೆ. ಆಯ್ಕೆ ಮತ್ತು ಅದರ ಪರಿವರ್ತನೆಯನ್ನು ನಾವು ಬೇಕಾ ಬಿಟ್ಟಿಯಾದ ಸಂಗತಿಯೆಂದು ಭಾವಿಸಬೇಕಾದ ಅಗತ್ಯವಿಲ್ಲ. ಕಾರಂತರು ಬರೆದ ಕುಡಿಯರ ಕೂಸು ಕಾದಂಬರಿಗೂ ಅವರ ಆಲೋಚನೆಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಬೇಕಾಗಿಲ್ಲ. ಅದನ್ನು ಅವರು ಉದ್ದೇಶ ಪೂರ್ವಕವಾಗಿ ಬರೆದಿದ್ದಾರೆ.

ಅನ್ವಯಿಕತೆಯು ಯಾವುದನ್ನು ಹಿಡಿದಿಡುತ್ತದೆ ಎನ್ನುವುದು ಮಾತ್ರವೇ ಮುಖ್ಯವಲ್ಲ. ಕೃತಿಯನ್ನು ನೋಡಲು ನಾವು ನಮಗೆ ಇರುವ ಜ್ಞಾನವನ್ನು ಅವಲಂಬಿಸುತ್ತದೆ. ಸಾಮಾನ್ಯವಾದ ನಮ್ಮ ಜ್ಞಾನವು ಕೃತಿಯನ್ನು ಓದಲು ಸಹಾಯವನ್ನು ಮಾಡುತ್ತದೆ. ಸಾಮಾನ್ಯವಾದ ನಮ್ಮ ಭಾಷೆಯು ಒಂದು ರೂಪವನ್ನು ನಮಗೆ ಕಟ್ಟಿಕೊಡುತ್ತದೆ. ಒಂದು ರೂಪವಾಗಿ ಅದು ಪರಿವರ್ತನೆಯಾಗುತ್ತದೆ. ಕೃತಿಕಾರ ಮತ್ತು ವಿಮರ್ಶಕರ ನಡುವೆ ಒಂದು ಸಂಬಂಧವು ಇರುತ್ತದೆ. ಮತ್ತು ಅದನ್ನು ನಾವು ದ್ವಂದ್ವಾತ್ಮಕವಾಗಿ ನೋಡಬೇಕಾಗುತ್ತದೆ. ಕೃತಿಯನ್ನು ವಿಮರ್ಶೆ ಮಾಡುವುದೂ ಕೂಡಾ ಒಂದು ಕ್ರಿಯೆ. ಕೃತಿಯನ್ನು ಓದುವುದು ಮತ್ತು ಅದರ ಕುರಿತಾದ ಒಂದು ಅನ್ವಯವನ್ನು ಮಾಡುವುದು ಎಂದರೆ ಅದು ಮುಕ್ತಾಯವೇ ಇಲ್ಲದ ಚಟುವಟಿಕೆಯೂ ಆಗಿದೆ. ನವ್ಯ ವಿಮರ್ಶೆಯು ವಾಸ್ತವವಾಗಿ ಕೆಲವೊಂದು ಸಂದರ್ಭದಲ್ಲಿ ವಿವರಣಾತ್ಮಕವೂ ಆಗಿರುತ್ತದೆ. ಮತ್ತು ಅದು ಏಕಪಕ್ಷೀಯವಾದ ನಿಲುವನ್ನು ಹೊಂದಿರುತ್ತದೆ. ಅದು ಭಾಷೆಯನ್ನು ಗುರುತಿಸುತ್ತರದೆ. ಫ್ರೆಂಚ್ ಭಾಷೆಯ ಅನೇಕ ನಿಲುವುಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದು ಲೇಖಕ ಮತ್ತು ಸಾಹಿತ್ಯ ವಿಮರ್ಶೆಯನ್ನು ಒಂದು ರೂಪವಾಗಿ ನೋಡಲು ಯತ್ನವನ್ನು ಮಾಡುತ್ತದೆ. ವಾಸ್ತವವಾಗಿ ಮನುಷ್ಯ ಮತ್ತು ಅವನ ನಿಲುವನ್ನು ನೋಡಬೇಕಾದ ಅಗತ್ಯವೂ ಇದೆ. ಅಂದರೆ ಮನುಷ್ಯನು ಕೆಲವು ಕಲ್ಪನೆಯನ್ನು ಕಟ್ಟುತ್ತಾನೆ. ಅದು ವಾಸ್ತವ. ಆದ್ದರಿಂದ ವ್ಯಕ್ತಿ ಮತ್ತು ಅವನ ಚಟುವಟಿಕೆಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಮನುಷ್ಯನು ತನ್ನ ಕಲ್ಪನೆಯನ್ನು ಒಂದು ನಿರ್ದಿಷ್ಟವಾದ ಕಾರಣಕ್ಕೆ ಕಟ್ಟುತ್ತಾನೆ. ಅದು ಅವನ ವ್ಯಕ್ತಿತ್ವದ ಪ್ರದರ್ಶನವೂ ಹೌದು. ವ್ಯಕ್ತಿತ್ವಕ್ಕೆ ಚಾರಿತ್ರಿಕವಾದ ಒಂದು ಅಸ್ತಿತ್ವವು ಇರುತ್ತದೆ. ಸಾಹಿತ್ಯ ಮತ್ತು ಅದರ ಕೆಲಸವನ್ನು ಅವಾಸ್ತವ ಎಂದೂ ಹೇಳಬೇಕಾದ ಅಗತ್ಯವಿಲ್ಲ. ಆದರೆ ಇಲ್ಲಿ ಮತ್ತೆ ನೋಡಬೇಕಾದ ಅಂಶಗಳೂ ಇವೆ. ಸಾಹಿತ್ಯವು ಮನಸ್ಸನ್ನು ಹೇಳುತ್ತದೆ. ಯಾವುದನ್ನು ನಾವು ಕೇಳಿದ್ದೇವೆ, ನೋಡಿದ್ದೇವೆ ಮತ್ತು ಆಸ್ವಾದಿಸಿದ್ದೇವೆ ಅದನ್ನು ಮಾತ್ರವೇ ಹೇಳುತ್ತೇವೆ. ಮತ್ತು ಅದರ ಅರ್ಥವೂ ವ್ಯತ್ಯಾಸವಾಗುತ್ತಾ ಬಂದಿದೆ. ನೋಟ ಮತ್ತು ಮನಸ್ಸು ಮಹತ್ವದ ಪಾತ್ರವನ್ನು ವಹಿಸುತ್ತದೆ. ಫುಕೋ ಆಲೋಚನೆ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುತ್ತಾನೆ. ಅವನು ಜ್ಞಾನ ಮತ್ತು ಅದರ ರೂಪವನ್ನು ಹೇಳುವಾಗ ಅದರ ಪ್ರಾಕ್ತನ ರೂಪವನ್ನು ಹೇಳುತ್ತಾನೆ. ಜ್ಞಾನವೂ ಹೀಗೆ ಬೇರೆ ಬೇರೆ ವಿಧದಲ್ಲಿ ಕಟ್ಟಲಾಗಿದೆ. ಲೇಖಕ ಮತ್ತು ಅವನ ಪ್ರಜ್ಞೆಯನ್ನು ಅನೇಕವು ನಿರ್ಧರಿಸುತ್ತವೆ. ಮತ್ತು ಅದಕ್ಕೆ ಅತ್ಯಂತ ಮಹತ್ವದ ಜಾಗವೂ ಇದೆ. ನಮ್ಮ ಸಾಮಾಜಿಕ ಜ್ಞಾನ ಮತ್ತು ಅದರ ರೂಪಗಳು ತುಂಬಾ ಮಹತ್ವದ್ದೂ

ಆಗಿದೆ. ಈ ದೃಷ್ಟಿಯಿಂದ ವ್ಯಕ್ತಿ ಮತ್ತು ಅವನ ಬರಹ ಹಾಗೂ ಅದನ್ನು ಗ್ರಹಿಸುವ ವಿಮರ್ಶಕನು ಒಂದು ಸಮಾನವಾದ ಪಾತಳಿಯಲ್ಲಿ ನಡೆಯಬೇಕಾಗುತ್ತದೆ. ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆಯು ಒಂದು ಕಡೆಗೆ ಸಂಧಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಅರ್ಥಶಾಸ್ತ್ರ, ರಾಜಕಾರಣ, ಸಮಾಜಶಾಸ್ತ್ರ ಮುಂತಾದವುಗಳೂ ಹೆಚ್ಚು ಸ್ಪಷ್ಟವಾಗಿರುತ್ತವೆ. ಪ್ರತಿಯೊಂದು ಆಲೋಚನೆಯ ಕ್ರಮವೂ ಕೂಡಾ ಚರಿತ್ರೆಯ ಬೇರನ್ನು ಹೊಂದಿರುತ್ತವೆ. ಫುಕೋ ಆಲೋಚನೆ ಮತ್ತು ಅದರ ಗ್ರಹಿಕೆಗೆ ಒಂದು ದೊಡ್ಡ ಇತಿಹಾಸವೂ ಇದೆ. ಯಾವುದೇ ಆಲೋಚನೆಯು ಸುಮ್ಮನೆ ಉಂಟಾಗಿರುವುದೂ ಇಲ್ಲ ಎಂದು ಹೇಳುತ್ತಾನೆ.

ತತ್ವಜ್ಞಾನಕ್ಕೂ ಒಂದು ಪ್ರಾಕ್ತನ ರೂಪವಿರುತ್ತದೆ. ಆದರೆ ಸಾಹಿತ್ಯಕ್ಕೆ ಬಂದರೆ ಸ್ವಂತಿಕೆಯ ಪ್ರಶ್ನೆಯು ಹೆಚ್ಚು ಸೂಕ್ಷ್ಮವಾಗುತ್ತದೆ. ಮತ್ತು ಸ್ವಂತಿಕೆಯ ಪ್ರಶ್ನೆಯು ಸ್ವಲ್ಪಮಟ್ಟಿಗೆ ಅನುಮಾನವನ್ನು ಉಂಟು ಮಾಡುತ್ತದೆ. ಸಾಹಿತ್ಯವು ಒಂದು ನಿಯಮವನ್ನು ಒಳಗೊಂಡಿರುವುದರಿಂದ ಅದರ ಸ್ವರೂಪವನ್ನು ಅದು ಯಾವಾಗ ರಚಿತವಾಗಿದೆ ಎಂದೂ ಗ್ರಹಸಬೇಕಾಗುತ್ತದೆ. ಓದಿನ ಮಹತ್ವ ಮತ್ತು ಅದರ ಚಾರಿತ್ರಿಕತೆಯು ಈ ಕಾರಣದಿಂದ ಒಂದು ನಿಲುವನ್ನು ಹೊಂದುವುದೂ ಅಗತ್ಯವಾಗುತ್ತದೆ. ಸ್ವಂತಿಕೆಯು ಓದಿನಲ್ಲಿ, ಮೌಲ್ಯಮಾಪನದಲ್ಲಿ, ಬರಹದಲ್ಲಿ ಕಾಣಿಸುತ್ತದೆ. ಮತ್ತು ಅದರಲ್ಲಿ ಸಮಾಜ ಮತ್ತು ಮನಸ್ಸಿನ ಲೋಕವೂ ಇದೆ. ಕೃತಿಯ ಆಶಯವೆನ್ನುವುದು ಈ ದೃಷ್ಟಿಯಂದ ಭಾವನೆಯಿಂದ ಹೊರತು ರಚಿತವಾಗುವುದೂ ಇಲ್ಲ. ನಾವು ಸ್ವಂತಿಕೆ ಮತ್ತು ಅದರ ವಿಸ್ತರಣೆಯನ್ನು ಬಯಸುತ್ತೇವೆ. ಆದರೆ ಈ ವಿಸ್ತರಣೆಯು ಯಾವ ರೂಪದಲ್ಲಿದೆ ಮತ್ತು ಅದರಲ್ಲಿ ನಾವು ಹೇಗೆ ಹೇಳುತ್ತೇವೆ ಎನ್ನುವುದೂ ಬಹಳ ಮುಖ್ಯ. ಸಾಹಿತ್ಯವು ಹೆಚ್ಚು ಖಚಿತವಾದರೆ ಅದರಲ್ಲಿ ಅನುಮಾನಕ್ಕೆ ಅವಕಾಶವು ಇಲ್ಲ. ಆದರೆ ಅದು ಹೆಚ್ಚು ಅಸ್ಪಷ್ಟವಾಗಿದ್ದರೆ ಅದರ ಅನ್ವಯವು ಬೇರೆಯಾಗುತ್ತದೆ. ಮತ್ತು ಅನ್ವಯವೇ ಮುಂಚೂಣಿಗೆ ಬಂದು ಹಲವು ಅರ್ಥವನ್ನು ಸೃಷ್ಟಿಸುತ್ತದೆ. ರಚನೆ ಮತ್ತು ಅದರ ಸ್ವರೂಪದಲ್ಲಿ ಲೇಖಕನು ವಹಿಸುವ ಪಾತ್ರವನ್ನು ಲುಕಾಕ್ಸ್ ಹೇಳುತ್ತಾನೆ. ವ್ಯಕ್ತಿಯ ನಿಲುವು ಈ ದೃಷ್ಟಿಯಿಂದ ಸಂವಾದಿಯಾಗಿಯೂ ಇರುತ್ತದೆ ಎಂದು ಅವನ ವಾದವಾಗಿದೆ. ಆದರೆ ಬರಹಗಾರ ಮತ್ತು ಬರಹವು ನಿಶ್ಚಿತವಾಗಿ ಸಮಸ್ಯಾತ್ಮಕವಲ್ಲ... ಸಾವಯವ ಸಂಬಂಧ ಮತ್ತು ಕೃತಿಗಳನ್ನು ಲುಕಾಕ್ಸ್ ಹೇಳುತ್ತಾನೆ. ಈ ಎರಡೂ ಸಂಗತಿಗಳನ್ನು ನಾವು ಗಮನಿಸಬೇಕಾಗುತ್ತದೆ. ಲೇಖಕ ಮತ್ತು ಅವನ ಮನೋಸ್ಥಿತಿಯು ಲೇಖಕನ ಮನೋಸ್ಥಿತಿಯು ಪೂರಕವಾಗಿ ಕೆಲಸವನ್ನು ಮಾಡಿದರೆ

ಅದರ ಅರ್ಥವು ಬೇರೆಯಾಗುತ್ತದೆ. ಲೇಖಕನು ಹೇಳುವುದು ಮತ್ತು ಅದನ್ನು ಓದುಗ ಸ್ವೀಕರಿಸುವುದು ವಿಶಿಷ್ಟವಾದ ಪ್ರಕ್ರಿಯೆಗಳು ಆಗಿವೆ. ಕೃತಿಗೆ ಒಂದು ಚಾರಿತ್ರಿಕ ಅಸ್ತಿತ್ವವು ಇದೆ ಎಂದು ಲುಕಾಕ್ಸ್ ಹೇಳುತ್ತಾನೆ. ಅವನು ಚರಿತ್ರೆ, ಕೃತಿಯ ವ್ಯಂಗ್ಯ ಮತ್ತು ಅದರ ಕಥಾನಕಗಳನ್ನು ಬಹಳ ಮುಖ್ಯವೆಂದು ಭಾವಿಸುತ್ತಾನೆ. ಅಮೇರಿಕಾದ ನವ್ಯ ವಿಮರ್ಶೆಯು ಅತ್ಯಂತ ಹೆಚ್ಚು ವ್ಯಂಗ್ಯ ಮತ್ತು ಅದರ ಪರಿಣಾಮವನ್ನು ವಿವರಿಸಿತು. ಅದರ ಉದ್ದೇಶವು ಬೇರೆಯಾಗಿದೆ. ಅದರ ನಿಲುವು ಬೇರೆಯಾಗಿದೆ. ಅದು ಪಠ್ಯವನ್ನು ಪ್ರಧಾನವೆಂದು ಹೇಳುತ್ತದೆ. ಅದರಲ್ಲಿ ಕೃತಿಯೇ ಹೆಚ್ಚು ಮುಖ್ಯ. ಆದರೆ ಬರವಣಿಗೆ ನಮ್ಮ ಸ್ವಂತಿಕೆಯನ್ನು ಹೇಗೆ ಹೇಳುತ್ತದೆ ಎಂದು ಅದು ನೋಡಲು ಹೋಗುವುದಿಲ್ಲ.

ತದರೋವ್ ಒಂದು ಸಂದರ್ಭದಲ್ಲಿ ಆಂತರಿಕ ವಿಮರ್ಶೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತಾನೆ. ಅವನ ಪ್ರಕಾರ ಆಂತರಿಕ ವಿಮರ್ಶೆಯೆಂದರೆ ಅದು ಒಂದು ಹಂತದಲ್ಲಿ ವಿವರಣೆಯನ್ನು ಮಾತ್ರವೇ ಮಾಡುತ್ತದೆ. ಸಾಹಿತ್ಯವನ್ನು ಹೇಗೆ ಸಂಯೋಜನೆ ಮಾಡಲಾಗುತ್ತದೆ ಎಂದು ಮಾತ್ರವೇ ಅದಕ್ಕೆ ಅತ್ಯಂತ ಮುಖ್ಯ. ಸಾಹಿತ್ಯವನ್ನು ಸಾಹಿತ್ಯದ ಕಾರಣಕ್ಕಾಗಿ ಮಾತ್ರವೇ ನೋಡುತ್ತದೆ. ಆಂತರಿಕ ಎನ್ನುವುದೇ ಅದಕ್ಕೆ ಒಂದು ಕೇಂದ್ರ. ಅದರಾಚೆಗೆ ಅದು ಹೋಗುವುದೂ ಇಲ್ಲ. ಆಂತರಿಕ ವಿಮರ್ಶೆಯಲ್ಲಿ ಪದ ಪದವನ್ನು ನೋಡುತ್ತಾರೆ. ಕೃತಿಯು ತನ್ನನ್ನು ತಾನೇ ವ್ಯಾಖ್ಯಾನಿಸುತ್ತದೆ ಎಂದು ನಂಬುತ್ತಾರೆ. ಕೃತಿಯು ತನ್ನನ್ನು ತಾನೇ ಗುರುತಿಸಿಕೊಳ್ಳುತ್ತದೆ ಎಂದೂ ಭಾವಿಸುತ್ತಾರೆ. ಪಠ್ಯ ಮತ್ತು ಅದರ ಅನನ್ಯತೆಯು ಅದಕ್ಕೆ ಬಹಳ ಮುಖ್ಯ. ತದರೋವ್ ಮೂಲಭೂತವಾಗಿ ಅನ್ವಯವನ್ನು ಹೆಚ್ಚು ನಂಬುತ್ತಾನೆ. ಅವನು ಓದನ್ನು ನಿರಾಕರಿಸುತ್ತಿಲ್ಲ. ಅವನ ಪ್ರಕಾರ ಓದಿಗೆ ಅದರದೇ ಆದ ಒಂದು ಮಹತ್ವವಿದೆ. ಆದರೆ ಕೆಲವರು ತಮಗೆ ಬೇಕಾದಂತೆ ಮಾತ್ರವೇ ವಿಮರ್ಶಾತ್ಮಕ ನಿಲುವನ್ನು ಹೊಂದಿರುತ್ತಾರೆ. ಅದು ಅಪಾಯವೆಂದು ಅವನ ತಿಳುವಳಿಕೆಯು ಆಗಿದೆ. ತಮಗೆ ಬೇಕಾದ್ದನ್ನು ಒಪ್ಪುವುದು ಮತ್ತು ತಮಗೆ ಬೇಡವಾದ್ದನ್ನು ನಿರಾಕರಿಸುವುದು ಅಷ್ಟು ಆರೋಗ್ಯಕಾರಿಯಾದ ಪ್ರವೃತ್ತಿಯು ಅಲ್ಲ. ಪಠ್ಯವನ್ನು ಬರೀ ವೀಕ್ಷಕ ವಿವರಣೆಯ ಥರ ಮಾಡುವುದೂ ಅಷ್ಟು ಉಪಯುಕ್ತವಲ್ಲ.

ಕಾರಂತರು ನಿಸರ್ಗದ ಸಮಾಜವನ್ನು ನೋಡವುದೂ ಇದೇ ಕಾರಣದಿಂದ. ನಿಸರ್ಗದ ಸಮಾಜಶಾಸ್ತ್ರವೆಂದು ಯಾವುದನ್ನಾದರೂ ಕರೆಯುವುದಿದ್ದರೆ ಅದು ಕಾರಂತರ ಕಾದಂಬರಿಗಳನ್ನೆ ಎಂದು ಕಾಣುತ್ತದೆ.

ಕಾರಂತರ ಕಾದಂಬರಿಗಳಲ್ಲಿ ಮತ್ತೆ ಕೆಲವು ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ. ಅವರಲ್ಲಿ ನಿಸರ್ಗವು ಆಂತರಿಕವಾದ ಒಂದು ಶಕ್ತಿಯೂ ಆಗುತ್ತದೆ. ವ್ಯಕ್ತಿಯು ನಿಸರ್ಗವನ್ನು ಅರ್ಥ ಮಾಡಿಕೊಳ್ಳುವ ಕ್ರಮಗಳು ಕಾರಂತರಲ್ಲಿ ಬೇರೆಯಾಗುತ್ತವೆ. ವಾಸ್ತವವಾಗಿ ಕಾರಂತರು ನಿಸರ್ಗವನ್ನು ನೋಡುವುದು ವೀಕ್ಷಕನ ರೀತಿಯಲ್ಲಿಯೇ ಎನ್ನುವುದೂ ಇಲ್ಲಿ ಗಮನಾರ್ಹವಾಗಿದೆ. ಮತ್ತು ಅದನ್ನು ವ್ಯಕ್ತಿಯು ಹೇಗೆ ಕಾಣುತ್ತಾನೆ ಎನ್ನುವುದೇ ಕಾರಂತರಿಗೆ ಹೆಚ್ಚು ಮುಖ್ಯ. ಅವರ ಬೆಟ್ಟದ ಜೀವ ಕಾದಂಬರಿಯಲ್ಲಿ ಅತ್ಯಂತ ಸಮೃದ್ಧವಾದ ಒಂದು ನಿಸರ್ಗವು ಇದೆ. ಅದರೊಂದಿಗೆ ಮನುಷ್ಯನ ಭಾವನೆಗಳೂ ಇವೆ. ಕೃಷಿಗಾಗಿ ವ್ಯಕ್ತಿಯು ನಿಸರ್ಗವನ್ನು ತನಗೆ ಬೇಕಾದ ರೀತಿಯಲ್ಲಿ ಪರಿವರ್ತಿಸುತ್ತಾನೆ. ಪರಿವರ್ತನೆಯು ಉದ್ದೇಶಿತವೂ ಹೌದು. ಅದರಲ್ಲಿ ಕಾರಣವಿದೆ. ಹಾಗೆ ನೋಡುವುದಿದ್ದರೆ ಯಾವುದೇ ಕಾರಣವೂ ಇಲ್ಲದೆ ವ್ಯಕ್ತಿಯು ಯಾವುದೇ ಹೊಸರಚನೆಯನ್ನು ಮಾಡಲಾರ. ನಿಸರ್ಗ ಮತ್ತು ವಾಸ್ತವ, ನಿಸರ್ಗ ಮತ್ತು ವ್ಯಕ್ತಿಗಳ ನಡುವೆ ಅನೇಕ ದ್ವಂದ್ವಗಳಿವೆ. ಆದರೆ ನಿಸರ್ಗವನ್ನು ಬರಹದ ವ್ಯಂಗ್ಯಕ್ಕಾಗಿಯೇ ಅವರು ಬಳಸಿಲ್ಲ. ಆದರೆ ನವ್ಯದಲ್ಲಿ ಯಾವುದು ವ್ಯಂಗ್ಯವೆಂದು ಅನಿಸಿತೋ ಅದರ ಅರ್ಥವು ವಿಶಾಲವೂ ಆಯಿತು.

ಲೇಖಕನು ಸಮಾಜವನ್ನು ಹೊರತುಪಡಿಸಿಕೊಂಡು ಯಾವುದನ್ನು ನೋಡಲು ಸಾಧ್ಯವೂ ಆಗುವುದಿಲ್ಲ. ಅದರಲ್ಲಿ ವ್ಯಕ್ತಿತ್ವ ಮತ್ತು ಸಮಾಜವು ಜೊತೆಗೆ ಇರುತ್ತದೆ. ಅದನ್ನು ಮೀರಲು ಆಗುವುದೂ ಇಲ್ಲ. ಆದ್ದರಿಂದಲೇ ನಮ್ಮ ಆಲೋಚನೆಯೆನ್ನುವುದು ಮೂಲಭೂತವಾಗಿ ಸಮಾಜದ ಒಂದು ಅಂಗ ಮಾತ್ರವೇ ಆಗಿರುತ್ತದೆ. ಮತ್ತು ಆಲೋಚನೆಯನ್ನು ನಾವು ಬೇರೆ ಮಾಡಲು ಬರುವುದೂ ಇಲ್ಲ. ಕಾರಂತರ ಬರಹದ ನಿಜವಾದ ಚಹರೆಯು ಇರುವುದು ಅವರ ಕಾದಂಬರಿಗಳಲ್ಲಿ. ಆದ್ರೆ ಅದನ್ನು ನಾವು ಒಂದು ದೃಷ್ಟಿಯಿಂದ ಆ ಕಾಲದ ಹಿನ್ನೆಲೆಯಿಂದಲೂ ನೋಡಬೇಕಾಗುತ್ತದೆ. ನಮ್ಮ ಈಗಿನ ಪ್ರಶ್ನೆಗಳು ಆಗ ಕಾರಂತರಿಗೆ ಇದ್ದಿರಲಿಲ್ಲ. ಮತ್ತು ಈ ಮಾತು ತೇಜಸ್ವಿಯವರಿಗೂ ಅನ್ವಯವಾಗುತ್ತದೆ. ಮತ್ತು ಅದನ್ನು ನಾವು ಯಾರಿಗೂ ಅನ್ವಯವನ್ನು ಮಾಡಲು ಸಾಧ್ಯ. ವಿಷಯ ಮತ್ತು ಅದರ ಪರಿಜ್ಞಾನ ಮತ್ತು ವಸ್ತುವಿನ ಅಗತ್ಯವೇ ನಮಗೆ ಬೇರೆ ಬೇರೆ ಆಲೋಚನೆಗಳನ್ನು ಹೇಳಿಕೊಡುತ್ತವೆ ಎಂದು ಹೆಗೆಲ್ ಹೇಳುತ್ತಾನೆ. ಆದರೆ ಯಾವುದೇ ಲೇಖಕನು ತನಗೆ ಬೇಕಾದ ಸಮಾಜವನ್ನು ನೋಡುತ್ತಾನೆ. ಮತ್ತು ತನಗೆ ಯಾವುದು ದಕ್ಕಿದೆಯೋ ಆದನ್ನು ಮಾತ್ರವೇ ನಿರೂಪಿಸುತ್ತಾನೆ. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಇವೆ. ಸಮಾಜ ಮತ್ತು ಅದರ ವರ್ಗಗಳು ಹಾಗೂ ಗುಂಪುಗಳು ಕೆಲವನ್ನು ನಿಯಂತ್ರಿಸುತ್ತವೆ.

ತುಂಬಾ ಸರ್ತಿ ನಾವು ನಮಗೆ ಬೇಕಾದ್ದನ್ನು ನಮಗೆ ಬೇಕಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತೇವೆ. ಅದು ಸಮಸ್ಯೆಯೂ ಆಗುತ್ತದೆ. ನಮಗೆ ಇರುವ ಸಮಸ್ಯೆಯೂ ಬೇರೆ ರೀತಿಯಲ್ಲಿದೆ. ಅಂದರೆ ಅದನ್ನು ಹೀಗೆ ಹೇಳಬಹುದು: ಯಾವುದನ್ನು ನಾವು ಈವತ್ತು ಸಾಹಿತ್ಯವೆಂದು ಹೇಳುತ್ತೇವೆಯೋ ಅದು ಇದ್ದಕಿದ್ದಂತೆಯೇ ಹುಟ್ಟಿಲ್ಲ. ಅದು ಸಂವಹನದ ಒಂದು ಮಾದರಿಯೂ ಆಗಿದೆ. ಅದರಲ್ಲಿ ನಾವು ಹೇಳಬೇಕಾದ ಅನೇಕ ಸಂಗತಿಗಳು ಸೇರಿಕೊಂಡಿರುತ್ತವೆ.

ಬರೆಯುವುದು ಅಂದರೆ ಅದು ನಮ್ಮ ಉದ್ದೇಶವನ್ನು ಒಳಗೊಂಡಿರುತ್ತವೆ. ಆ ಉದ್ದೇಶವು ನಮಗೆ ಹೆಚ್ಚು ಮುಖ್ಯವೂ ಹೌದು. ಬರಹ ಮತ್ತು ಅದರ ಹಿಂದೆ ಇರುವ ಲೇಖಕರು ಇದನ್ನು ಹೊರತುಪಡಿಸಿಕೊಂಡು ಇರುವುದೂ ಅಸಾಧ್ಯವೂ ಹೌದು. ಅಂದರೆ ಬರಹವನ್ನು ಲೇಖಕನು ಒಂದು ಸನ್ನಿವೇಶದಲ್ಲಿ ನಿಂತುಕೊಂಡು ಮಾಡುತ್ತಾನೆ. ಅವನಿಗೆ ಅದು ಅಗತ್ಯವೂ ಆಗಿರುತ್ತದೆ. ವಾಸ್ತವವಾಗಿ ಯಾವುದೇ ನಮ್ಮ ಬರಹವು ಒಂದು ಸನ್ನಿವೇಶವನ್ನು ಹೇಳುತ್ತದೆ. ಲೇಖಕನು ಯಾವುದೇ ಕಾಲವನ್ನು ಮತ್ತು ಸ್ಥಳವನ್ನು ಹೊಂದುವುದು ಅನಿವಾರ್ಯವೂ ಹೌದು. ತೇಜಸ್ವಿಯವರು ಬರೆದ ಸನ್ನಿವೇಶ ಮತ್ತು ಅವರು ಬರೆದ ಸ್ಥಳವು ನಮಗೆ ಹೆಚ್ಚು ಮುಖ್ಯ. ಅಂದರೆ ನಾವು ಅವರನ್ನು ನಿರ್ದಿಷ್ಟವಾದ ಒಂದು ಸಮಾಜದ ರಚನೆಯೊಳಗೆ ನೋಡಬೇಕಾಗುತ್ತದೆ. ಸಾಹಿತ್ಯ ಮತ್ತು ಇತರ ಕಲೆಗಳು ನಿರ್ದಿಷ್ಟವಾದ ಒಂದು ಸಂದರ್ಭವನ್ನು ಹೇಳುತ್ತದೆ. ನಮ್ಮ ಆಲೋಚನೆ ಮತ್ತು ಅದರ ಸನ್ನಿವೇಶವು ಎಷ್ಟು ಮುಖ್ಯವೆಂದರೆ ಅದನ್ನು ಬಿಟ್ಟು ನಾವು ಯಾವುದನ್ನು ಮಾಡಲಾರೆವು. ನಮ್ಮ ಆಲೋಚನೆಯು ನಮ್ಮ ನಡತೆಯನ್ನು ವಿವರಿಸುತ್ತದೆ. ಅಂದರೆ ಆಲೋಚನೆಯೆನ್ನುವುದು ಮೂಲಭೂತವಾಗಿ ಒಂದು ಶೂನ್ಯವೂ ಅಲ್ಲ. ಸಾಹಿತ್ಯ ಮತ್ತು ಸಮಾಜ ಹಾಗೂ ಸಾಹಿತ್ಯದ ವಸ್ತು ಮತ್ತು ಅದರ ಶೈಲಿಗಳಿಗೆ ಇರುವ ಸಂಬಂಧವನ್ನು ಲುಕಾಕ್ಸ್ ಹೇಳುತ್ತಾನೆ. ಒಂದು ಜನ ಸಮೂಹದ ನಡುವೆಯೇ ಸಾಹಿತ್ಯವು ರೂಪು ತಳೆಯುತ್ತದೆ ಎಂದು ಅವನ ಅಭಿಪ್ರಾಯವಾಗಿದೆ. ನಾವು ಹೇಗೆ ವರ್ತಿಸಬೇಕು ಮತ್ತು ಹೇಗೆ ವ್ಯವಹರಿಸಬೇಕು ಮತ್ತು ಯಾವುದನ್ನು ಮಾತಾಡಬೇಕು ಯಾವುದನ್ನು ಹೇಳಬಾರದು ಮತ್ತು ಹೇಗೆ ಹೇಳಬೇಕು ಎನ್ನುವುದನ್ನು ಕೂಡಾ ಸಮಾಜವೇ ನಿರ್ಧರಿಸುತ್ತದೆ. ಅದು ಅದರ ಅಗತ್ಯವೂ ಆಗಿರುತ್ತದೆ.

ಕಾರಂತರು ಕೂಡಾ ಈ ತರಹದ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಬಹುತೇಕ ಕಾದಂಬರಿಗಳಲ್ಲಿ ಬರುವ ನೈತಿಕ ಪ್ರಶ್ನೆಗಳು ಸಮಾಜವನ್ನು ಹೇಳುತ್ತವೆ. ಅವರು ಯಾವುದನ್ನು ಬರೆದರೋ ಅದನ್ನು ಸಮಾಜದಿಂದ ಬೇರೆ ಮಾಡಿ ನೋಡಲು

ಬರುವುದೂ ಇಲ್ಲ. ಅಂದರೆ ಅನುಭವದೊಂದಿಗೆ ಲೇಖಕರು ಸಮನ್ವಯವನ್ನು ಮಾಡುತ್ತಾರೆ. ಅದು ಅವರಿಗೆ ಅಗತ್ಯವೂ ಆಗಿರುತ್ತದೆ. ಲೇಖಕರ ರಚನೆಯು ಅವರ ಮನೋಸ್ಥಿತಿಯನ್ನು ಹೇಳುತ್ತದೆ. ನಮ್ಮ ಪ್ರಜ್ಞೆಯನ್ನು, ನಮ್ಮ ಸಾಮಾನ್ಯವಾದ ಜ್ಞಾನವನ್ನು ಸಮಾಜವು ನಿರ್ಧರಿಸುತ್ತದೆ. ಮತ್ತು ಅದು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅಂದರೆ ಅದರಲ್ಲಿ ನಮ್ಮ ಜೀವನ ಮತ್ತು ಅದರ ಸ್ವರೂಪವೂ ಬಹಳ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ನಡತೆಯನ್ನು ವ್ಯಕ್ತಿಯೇ ನಿರ್ಧರಿಸುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಪ್ರಶ್ನೆಗಳನ್ನು ಒಂದು ಸಮಾಜವು ತನಗೆ ಬೇಕಾದ ರೀತಿಯಲ್ಲಿ ನಿರೂಪಿಸುತ್ತದೆ. ಅದು ಅಗತ್ಯವೂ ಆಗಿರುತ್ತದೆ. ವ್ಯಕ್ತಿ ಮತ್ತು ಅವನ ಜೀವನವನ್ನು ನಿರ್ಧರಿಸುವುದೂ ಕೂಡಾ ಸಮಾಜವೇ ಆಗಿರುತ್ತದೆ. ವ್ಯಕ್ತಿ ಮತ್ತು ಅವನ ನಡತೆಯನ್ನು ವ್ಯಕ್ತಿಯೇ ನಿರ್ಧರಿಸುವುದೂ ಇಲ್ಲ. ಅವನ ಸ್ವಭಾವವನ್ನು ಸಮಾಜವು ನಿಯಂತ್ರಿಸುತ್ತದೆ. ಆದ್ದರಿಂದ ಅವನು ರಚಿಸಿದ ಸಾಹಿತ್ಯವೂ ಕೂಡಾ ಸಮಾಜವನ್ನು ಹೇಳುತ್ತದೆ. ಅದರಲ್ಲಿ ಬಹಳ ಮಟ್ಟಿಗೆ ಕೆಲವು ಸಂಗತಿಗಳು ಸೇರಿಕೊಳ್ಳುತ್ತವೆ. ಸಾಹಿತ್ಯವೂ ಈ ದೃಷ್ಟಿಯಿಂದ ಒಂದು ರಚನೆ ಮತ್ತು ಅದರಲ್ಲಿ ಅವನ ಕೌಶಲವು ವ್ಯಕ್ತವಾಗುತ್ತದೆ. ಮತ್ತು ಅದರಲ್ಲಿ ಅವನ ಸ್ವಭಾವವೂ ಪ್ರವೇಶವನ್ನು ಪಡೆಯುತ್ತವೆ. ಸಮಾಜದ ಅನೇಕ ಲಕ್ಷಣಗಳು ಸಾಹಿತ್ಯದಲ್ಲಿ ವ್ಯಕ್ತವಾಗುತ್ತವೆ. ನಮ್ಮ ಅನುಭವ ಮತ್ತು ನಮ್ಮ ಪ್ರಜ್ಞೆಯನ್ನು ನಿರಾಕರಿಸಿಕೊಂಡು ಸಾಹಿತ್ಯವು ಇರುವುದು ಸಾಧ್ಯವೇ ಇಲ್ಲ. ಆದರೆ ಸಮಾಜವು ಸಾಹಿತ್ಯದಲ್ಲಿ ಬರುವ ಕ್ರಮವು ಮಾತ್ರವೇ ಬೇರೆ. ಅವನು ಹೇಗೆ ಗ್ರಹಿಸುತ್ತಾನೆ ಮತ್ತು ಹೇಗೆ ಅದನ್ನು ನೋಡುತ್ತಾನೆ ಎನ್ನುವುದೇ ಮೂಲಭೂತವಾದ ಪ್ರಶ್ನೆಯೂ ಆಗಿದೆ. ನಮ್ಮ ಅನುಭವ ಮತ್ತು ನಮ್ಮ ಪ್ರತಿಕ್ರಿಯೆಯನ್ನು ನಮ್ಮ ಬರಹಗಳು ಹೇಳುತ್ತವೆ. ಅದು ನಮಗೆ ಅತ್ಯಂತ ಅಗತ್ಯವಾದ ಒಂದು ಸಂಗತಿಯೂ ಹೌದು. ಅಂದರೆ ಸಾಹಿತ್ಯವೆನ್ನವುದು ಬರೀ ಶೂನ್ಯವನ್ನು ಹೇಳುವುದಿಲ್ಲ. ಅದರಲ್ಲಿ ಸಮಾಜ ಮತ್ತು ಅದರ ಚಲನೆಯೂ ವ್ಯಕ್ತವಾಗುತ್ತವೆ. ಸಾಹಿತ್ಯಕ್ಕೆ ಒಂದು ರಾಚನಿಕವಾದ ಗುಣವೂ ಇರುತ್ತದೆ. ಪ್ರಜ್ಞೆಗೂ ನಾವು ಯಾವ ಗುಂಪುಗಳಲ್ಲಿ ವಾಸ ಮಾಡುತ್ತೇವೆಯೋ ಅದಕ್ಕೂ ಸಂಬಂಧವು ಇರುತ್ತದೆ. ನಮ್ಮ ಅನುಭವವನ್ನು ಮತ್ತು ವಿಶ್ವಾತ್ಮಕತೆಯನ್ನು ನಿರ್ದಿಷ್ಟವಾಗಿಯೇ ನೋಡುತ್ತೇವೆ. ಸಾಹಿತ್ಯ ಮತ್ತು ಅದರ ರಾಚನಿಕತೆಯು ಈ ದೃಷ್ಟಿಯಿಂದ ಬಹಳ ಮುಖ್ಯವಾಗಿರುತ್ತದೆ. ಮನಸ್ಸು ಮತ್ತು ಅದರ ಕ್ರಿಯಾಶೀಲತೆಯ ಭಾಗವಾಗಿಯೇ ಸಾಹಿತ್ಯವು ಹುಟ್ಟುತ್ತದೆ. ಸಾಹಿತ್ಯದಲ್ಲಿ ಯಾವುದನ್ನು ಬರೆಯಬೇಕು ಮತ್ತು ಯಾವುದನ್ನು ಬರೆಯಬಾರದು

ಎನ್ನುವುದರ ನಿರ್ಧಾರವನ್ನು ನಾವು ತೆಗೆದುಕೊಳ್ಳುತ್ತೇವೆ. ಅದು ನಮ್ಮ ಆಯ್ಕೆಯೂ ಆಗಿರುತ್ತದೆ. ಸಾಹಿತ್ಯದಲ್ಲಿ ಹೇಳುವ ಅಂಶಕ್ಕಿಂತಲೂ ಬೇರೆಯಾದ ಅನೇಕ ಅಂಶಗಳು ಸಾಹಿತ್ಯದಲ್ಲಿ ಇರುತ್ತವೆ. ಮತ್ತು ಅದು ಲಯವನ್ನು ಸೂಚಿಸುತ್ತದೆ. ಪ್ರತೀಕವನ್ನು ಹೇಳುತ್ತದೆ. ಮತ್ತು ಅದರ ನಡುವೆ ಒಂದು ಅಂತರವೂ ಇರುತ್ತದೆ. ಮನುಷ್ಯ ಮತ್ತು ಅವನ ನಡವಳಿಕೆಗಳೇ ಮೂಲಭೂತವಾಗಿ ಒಂದು ಪ್ರಜ್ಞೆಯನ್ನು ಹೇಳುತ್ತವೆ. ಅವುಗಳು ಸಾಂಕೇತಿಕವೂ ಆಗಿರುತ್ತವೆ. ಕಾರಂತರು ಇಟ್ಟುಕೊಂಡ ಸಾಮಾಜಿಕ ಸಂಬಂಧವು ಒಂದು ಬಗೆಯದು.

ವಸಾಹತು ಕಾಲದ ಚರಿತ್ರೆಯನ್ನು ಕಾರಂತರು ಹೇಳುತ್ತಾರೆ. ಅವರಿಬ್ಬರೂ ಅಂತ ಅಲ್ಲ, ಅನೇಕ ಲೇಖಕರು ಬರೆಯಲು ಬಾರದ ಜನರ ಕಥನವನ್ನು ಹೇಳುತ್ತಾರೆ. ಅದುವೇ ನಮಗೆ ಮುಖ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಸಾಮಾಜಿಕ ಚರಿತ್ರೆಕಾರರು ಹೇಳಿದ ಕ್ರಮಕ್ಕೂ ನಮಗೆ ಈ ಲೇಖಕರು ಹೇಳಿರುವ ಕ್ರಮಕ್ಕೂ ವ್ಯತ್ಯಾಸವಿದೆ. ಚರಿತ್ರೆಯೂ ಕೂಡಾ ನಮಗೆ ಅರ್ಥ ಮಾಡಿಕೊಳ್ಳಬೇಕಾದ ಸಂಗತಿಯೂ ಹೌದು ಎನ್ನುವುದನ್ನು ಇಂಥಾ ಲೇಖಕರು ಸೂಚಿಸುತ್ತಾರೆ. ಆದರೆ ಇಂಥಾ ಸಂಗತಿಗಳಲ್ಲಿ ಲೇಖಕರ ಅನ್ವಯವೂ ಇದೆ ಎನ್ನುವುದನ್ನು ಮರೆಯಬಾರದು. ಚರಿತ್ರೆಯೊಂದಿಗೆ ವಿವಿಧ ಲೇಖಕರು ವಿವಿಧ ರೀತಿಯಲ್ಲಿ ಸಂವಾದವನ್ನು ಮಾಡುತ್ತಾರೆ.

ರಚನೆಯೇ ವಾಸ್ತವವಾಗಿ ಪ್ರಯೋಗವನ್ನು ಸೂಚಿಸುತ್ತದೆ. ಆದರೆ ಪ್ರಯೋಗವು ಮೂಲಭೂತವಾಗಿ ವಿಜ್ಞಾನವನ್ನು ಮಾಡುವ ಪ್ರಯೋಗವಲ್ಲ. ಸಮಾಜ ವಿಜ್ಞಾನಿಗೆ ಕೆಲವು ಅಗತ್ಯಗಳೂ ಇರುತ್ತವೆ. ಅದೇ ರೀತಿಯಲ್ಲಿ ಲೇಖಕನಿಗೆ ಕೂಡಾ. ಹಾಗೆ ನೋಡುವುದಿದ್ದರೆ ಯಾವುದೇ ರಚನೆಗೆ ಪೂರ್ವ ಪ್ರಮೇಯಗಳು ಇರುತ್ತವೆ. ಮತ್ತು ಅದಕ್ಕೆ ಸೈದ್ಧಾಂತಿಕತೆಯೂ ಇರುತ್ತದೆ. ಅದಕ್ಕೆ ಕೆಲವು ಮೌಲ್ಯಗಳೂ ಇರುತ್ತವೆ. ಸಾಹಿತ್ಯವು ಯಾವುದೇ ಕೆಲಸವನ್ನು ಮಾಡದೇ ಹೋಗಿದ್ದರೆ ಅದಕ್ಕೆ ಯಾವುದೇ ಅರ್ಥವೂ ಇರುತ್ತಿರಲಿಲ್ಲ. ಎರಡು ಸಂಗತಿಗಳು ಸಾಹಿತ್ಯದಲ್ಲಿ ನಡೆಯುತ್ತವೆ. ಒಂದು ರಚನೆ ಮತ್ತೊಂದು ನಿರಚನೆ. ಮತ್ತು ರಚನೆಗಳಲ್ಲಿ ಎರಡು ಪ್ರಕ್ರಿಯೆಯು ಇರುತ್ತದೆ. ಸ್ವೀಕೃತಿ ಮತ್ತು ಸಹಯೋಗ. ಈ ಕಾರಣದಿಂದಲೇ ರಚನೆಯು ವಾಸ್ತವವಾಗಿ ಸೃಜಶೀಲವೂ ಆಗುತ್ತದೆ. ಅದು ಚರಿತ್ರೆಯ ಅಗತ್ಯವೂ ಹೌದು. ನಾವು ಹಿಂದಿನ ರಚನೆಗಳನ್ನು ನಿರಾಕರಿಸಿಕೊಂಡು ಮತ್ತೊಂದು ರಚನೆಯನ್ನು ಮಾಡುತ್ತೇವೆ, ಮಾಡುವುದು ಎನ್ನುವುದೇ ಇಲ್ಲಿ ಮುಖ್ಯವಾದ ಸಂಗತಿಯೂ ಹೌದು. ರಚನೆ ಮತ್ತು ಆಲೋಚನೆಗೆ ಒಂದು ಸಂಬಂಧವೂ ಇದೆ. ಸಂವೇದನೆ ಮತ್ತು ರಚನೆಗೂ ಈ ದೃಷ್ಟಿಯಿಂದ ಮಹತ್ವದ ಕೊಂಡಿಗಳೂ

ಇರುತ್ತವೆ. ರಚನೆಯು ನಮ್ಮ ಅಗತ್ಯವೂ ಆಗಿರುವುದರಿಂದ ನಾವು ಬೇರೆ ಬೇರೆ ರಚನೆಯನ್ನು ಮಾಡುತ್ತೇವೆ. ಈ ದೃಷ್ಟಿಯಿಂದ ಕಲೆಯೂ ಕೂಡಾ ನಮ್ಮ ವರ್ತನೆಗೆ ಮತ್ತು ನಮ್ಮ ಅಭಿವ್ಯಕ್ತಿಗೆ ಸಂಬಂಧಪಟ್ಟದ್ದೂ ಆಗಿರುತ್ತದೆ. ಅದು ನಮ್ಮ ಅಗತ್ಯವೂ ಆಗಿರುವುದು ಮಾತ್ರವೇ ಅಲ್ಲ ಅದರಲ್ಲಿ ನಾವು ನಮ್ಮ ಅನುಭವ ಮತ್ತು ನಮ್ಮ ಮನಸ್ಸಿನ ಸಂಗತಿಗಳನ್ನು ಹೇಳುತ್ತೇವೆ. ನಮ್ಮ ವಾಸ್ತವವದ ನಿಜವಾದ ಸ್ವರೂಪವನ್ನು ಅದರಲ್ಲಿ ಹೇಳುವುದೂ ಸತ್ಯ. ಆದರೆ ವಾಸ್ತವವನ್ನು ನಾವು ಹೇಗೆ ನೋಡುತ್ತೇವೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ನಮಗೆ ಯಾವ ವಾಸ್ತವವು ಗೊತ್ತಿದೆಯೋ ಅದು ಮಾತ್ರವೇ ಮುಖ್ಯವಾದರೆ ಅದರ ಅರ್ಥವು ಬೇರೆಯಾಗುತ್ತದೆ. ವಾಸ್ತವವೂ ಕೂಡಾ ರಚಿತವಾಗಿದೆ. ಮತ್ತು ಅದೂ ಕೂಡಾ ಆಗಾಗ ಬದಲಾಗಿದೆ. ನಮ್ಮ ಮನೋಸ್ಥಿತಿ ಮತ್ತು ಅದರ ಪರಿಣಾಮವನ್ನು ನಾವು ನಮ್ಮ ರಚನೆಯಲ್ಲಿ ಕಾಣುತ್ತೇವೆ. ಅದು ನಮ್ಮ ಮನಸ್ಸಿನ ಬಿಂಬವೂ ಹೌದು. ಸಮೀಕ್ಷೆ ಕಾದಂಬರಿಯ ಕೆಲವು ಉಲ್ಲೇಖಗಳು ಈ ದೃಷ್ಟಿಯಿಮದ ಅತ್ಯಂತ ಮುಖ್ಯವಾಗಿದೆ.

ಜೀವನದಲ್ಲಿ ಘಟಿಸುವ ಸಂಗತಿಗೂ ಜೀವನದ ಮೌಲ್ಯಕ್ಕೂ ನೇರವಾದ ಸಂಬಂಧವು ಇದೆಯೆಂದೂ ತಿಳಿಯಬಾರದು. ಅದು ಬದಲಾಗುತ್ತದೆ. ಮತ್ತು ಬದಲಾಗುವಾಗ ಅದರ ಕಾರಣವೂ ಬೇರೆ ಇರುವುದಕ್ಕೆ ಸಾಧ್ಯ. ಜೀವನ ಮತ್ತು ಅದರ ಹಿಂದೆ ಇರುವ ಜೀವನದ ಮೌಲ್ಯಗಳು ಬೇರೆ ಬೇರೆ ಕಾರಣಕ್ಕೆ ಬದಲಾಗುತ್ತವೆ. ನಾವು ಯಾವುದನ್ನು ನೋಡುತ್ತೇವೆ ಮತ್ತು ಅದನ್ನು ಹೇಗೆ ಗ್ರಹಿಸುತ್ತೇವೆ ಹಾಗೂ ಅದರ ಹಿಂದೆ ಯಾವ ಸಮಾಜವು ಇದೆ, ಅದನ್ನು ಯಾವುದು ನಿಯಂತ್ರಿಸಿದೆ ಎನ್ನುವುದೂ ಅಷ್ಟೇ ಮುಖ್ಯ. ಸಮಾಜವನ್ನು ನಾವು ಹೇಗೆ ನೋಡುತ್ತೇವೆ ಮತ್ತು ಅದರಂತೆ ನಾವು ಬರೆಯುವುದೂ ಅಷ್ಟೇ ನಿಜ. ಆದರೆ ಯಾವುದು ಮುಖ್ಯ ಮತ್ತು ಯಾವುದು ಅಮುಖ್ಯವೆಂದು ಹೇಳಲು ನಮಗೆ ನಮ್ಮದೇ ಆದ ತಾತ್ವಿಕತೆಯು ಬಹಳ ಮುಖ್ಯವಾಗುತ್ತದೆ. ಅದು ಅಗತ್ಯವೂ ಹೌದು. ವಾಸ್ತವವಾಗಿ ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಸೂರನೂ ರಾಮನೂ ಬೇರೆ ಬೇರೆ ರೀತಿಯ ಕೆಲಸವನ್ನು ಮಾಡುತ್ತಾರೆ. ಆದರೆ ಅವರ ಕೆಲಸವನ್ನು ನೋಡಲು ಅವರ ಚರಿತ್ರೆಯನ್ನು ಗಮನಿಸಬೇಕಾಗುತ್ತದೆ. ಅದು ಅಗತ್ಯವೂ ಆಗುತ್ತದೆ. ಸೂರನು ಬದಲಾದ ಸನ್ನಿವೇಶದಲ್ಲಿ ಕೆಲಸವನ್ನು ಮಾಡುತ್ತಾನೆ. ಅದು ಅಗತ್ಯವೂ ಆಗುತ್ತದೆ. ರಾಮನೂ ಬದಲಾದ ಸನ್ನಿವೇಶದಲ್ಲಿ ಇದ್ದಾನೆ. ಅವರ ಸಂಬಂಧವು ಈ ದೃಷ್ಟಿಯಿಂದ ಹೊಸ ಸನ್ನಿವೇಶವನ್ನು ಹೇಳುತ್ತದೆ. ಸೂರನು ಆಧುನಿಕ ಯುಗಕ್ಕೆ ಸಂಬಂಧಪಟ್ಟಿದ್ದಾನೆ. ಅವನ ಸ್ವಭಾವವು ಕೂಡಾ ಬೇರೆ ಮಾದರಿಯದು. ಆದರೆ ವಿಷಯವು ಅಷ್ಟು

ಸರಳವಿಲ್ಲ. ಅದು ಬದಲಾಗುತ್ತದೆ ಅಂದರೆ ಅದರ ಹಿಂದೆ ಚರಿತ್ರೆಯು ಬದಲಾಗುತ್ತದೆ ಎಂದು ಮಾತ್ರವೇ ಅರ್ಥ. ಕುಮಾರವ್ಯಾಸನು ಬರೆಯುವ ಕಾಲಕ್ಕೆ ಸೂರನಂಥವರು ಇದ್ದಿಲ್ಲವೆಂದು ಹೇಳಬೇಕಾಗಿಯೂ ಇಲ್ಲ. ಆಗಲೂ ಅನೇಕ ಸೂರ, ಅನೇಕ ರೀತಿಯ ಐತಾಳರು ಇದ್ದರು. ಆದರೆ ಅದರಲ್ಲಿ ವ್ಯಕ್ತವಾದ ಪ್ರಾತಿನಿಧಿಕವಾದ ಸ್ವರೂಪವು ಮಾತ್ರ ಬೇರೆ ವಿಧವಾದ್ದು. ಬ್ರಿಟೀಷರು ಬಂದ ಮೇಲೆ ನಮ್ಮ ವಿವರಣೆಗಳು ಬದಲಾದವು. ನಮ್ಮ ಜೀವನ ಮತ್ತು ಅದರ ಧೋರಣೆಗಳೂ ವ್ಯತ್ಯಾಸವಾದವು. ಸಮಾಜವನ್ನು ನೋಡುವ ಮತ್ತು ಗ್ರಹಿಸುವ ಕ್ರಮದಲ್ಲಿಯೂ ವ್ಯತ್ಯಾಸವಾದವು. ಕೆಲವು ಚಾರಿತ್ರಿಕವಾದ ಚಟುವಟಿಕೆಗಳು ನಡೆದವು. ಅದನ್ನು ಸುಲ್ತಾನ್ ಟಿಪ್ಪುವಿನ ಚಟುವಟಿಕೆಯಲ್ಲಿ ಕಾಣಬಹುದು. ಹಾಗೆ ನೋಡುವುದಿದ್ದರೆ ನಮಗೆ ತುಘಲಕ್ ನಾಟಕದ ತುಘಲಕ್ ಬಹಳ ಇಷ್ಟವಾಗುತ್ತಾನೆ. ಅವನ ಕನಸುಗಳು ಚೆನ್ನಾಗಿವೆ ಎಂದು ಅನಿಸುತ್ತವೆ. ಕುಡಿಯರ ಕೂಸು ಕಾದಂಬರಿಯಲ್ಲಿ ಉಳುಮೆ ಮತ್ತು ಬೇಸಾಯವು ನಮಗೆ ಹೊಸ ಸಂಗತಿಗಳನ್ನು ಹೇಳುತ್ತವೆ. ಮತ್ತು ರೈತರ ಕಷ್ಟವು ಯಾವ ಬಗೆಯವು ಎಂದು ಅಥೆಂಟಿಕ್ ಆಗಿಯೇ ವಿವರಿಸುತ್ತವೆ. ಕುಡಿಯರು ನಿಜವಾಗಿಯೂ ಬಂಡವಾಳಶಾಹಿಗಳು ಅಲ್ಲವೆನ್ನುವುದನ್ನು ಇಲ್ಲಿ ಮನಗಾಣಬೇಕಾಗುತ್ತದೆ. ಅವರ ಕೆಲಸ ಮತ್ತು ಅವರ ಜೀವನವು ಸುಖವಾದ ಸಂಗತಿಯೂ ಅಲ್ಲ. ಕುಡಿಯರು ಮತ್ತು ಅವರ ಚಟುವಟಿಕೆಯು ಒಂದು ಬಗೆಯದಾಗಿದೆ. ಅವರ ಜೀವನ ಮತ್ತು ಸಂಸ್ಕೃತಿಯ ಸ್ವರೂಪವು ಒಂದು ಬಗೆಯಲ್ಲಿದೆ. ಅವರ ಜೀವನ ವಿಧಾನದಿಂದ ಅವರ ಅವರ ಭೌತಿಕ ಅಸ್ತಿತ್ವವನ್ನು ಬೇರೆ ಮಾಡಲು ಬರುವುದೂ ಇಲ್ಲ. ಕಾಡಿನ ಅನೇಕ ಸಂಗತಿಗಳು ಅವರನ್ನು ರೂಪಿಸಿವೆ. ಸಂಸ್ಕೃತಿ ಮತ್ತು ಅದರ ಅಸ್ತಿತ್ವವನ್ನು ಅವರು ನೋಡುವುದು ಚೋಮನ ದುಡಿಯ ಚೋಮನಂತೆ ಅಲ್ಲವೆನ್ನವುದು ಸ್ಪಷ್ಟವಾಗುತ್ತದೆ. ಕುಡಿಯರು ಅನೇಕ ವಿಷಯಗಳಲ್ಲಿ ಸ್ವತಂತ್ರರೂ ಹೌದು. ಅವರಿಗೆ ಪರಕೀಯರೆಂದರೆ ತಿರಿಮಲಭಟ್ಟ ಮತ್ತು ಕಿರಿಸ್ತಾನರು. ಅವರಲ್ಲಿ ತಾರತಮ್ಯಗಳು ಇವೆ. ಅವರು ಬದಲಾಗುತ್ತಾರೆ. ಅವರಿಗೆ ಬೇರೆ ಬೇರೆ ರೀತಿಯ ಅಸಿತ್ವವು ಇದೆ. ಗಿಡ್ಡಿ ಮತ್ತು ಅವಳ ಸಮಸ್ಯೆಯು ಒಂದು ಥರ. ಕೆಂಚ ಮತ್ತು ಅವನ ಸಮಸ್ಯೆಯು ಒಂದು ಥರ. ಹೀಗಾಗಿಯೇ ಅವರಿಗೆ ಭಿನ್ನವಾದ ಸಮಸ್ಯೆಗಳು ಇರುತ್ತವೆ. ಕಿರಿಮಲೆಯರು ಮತ್ತು ಹಿರಿಮಲೆಯವರು ಬೇರೆ ವರ್ಗಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ಆ ತರಹದ ವ್ಯತ್ಯಾಸವೂ ಇದೆ. ಮತ್ತು ಅದರಲ್ಲಿ ತಾರತಮ್ಯಗಳೂ ಇವೆ. ಅವರಿ ಜೀವನ ಮತ್ತು ರಕ್ಷಣೆಗೆ ಹರಕೆಯನ್ನು ಹೇಳುವುದು ಕಲ್ಕುಡ ಮೊದಲಾದ ದೈವಗಳಿಗೆ. ಅವರ ನಡೆ ಮತ್ತು

ನುಡಿಯನ್ನು ನಿಯಂತ್ರಿಸಿಕೊಂಡು ಅವರಿಗೆ ನಿಯಮವನ್ನು ಹೇರುವುದು ಗುರಿಕಾರರು ಮಾತ್ರವೇ. ಅಂದರೆ ಇದರಲ್ಲಿ ವ್ಯತ್ಯಾಸಗಳೂ ಇವೆ.

ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ಅದನ್ನು ನೋಡಬೇಕಾಗುತ್ತದೆ. ಲೇಖಕನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಸ್ವತ್ತು ಮಾತ್ರವೇ ಅಲ್ಲ ಅದರಲ್ಲಿ ಸಮಾಜದ ಅಂಶಗಳೂ ಸೇರುತ್ತವೆ. ಆದರೆ ಆಧುನಿಕತೆಯು ವ್ಯಕ್ತಿಯನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ಕ್ರಮದಲ್ಲಿ. ಮತ್ತು ವ್ಯಕ್ತಿಯನ್ನು ಹೇಳುವ ಕ್ರಮವು ಬೇರೆಯಾಗಿದೆ. ಅವನನ್ನು ಅತ್ಯಂತ ಮಹತ್ವದ ಭಾಗವೆಂದು ಹೇಳುವುದು ಮುಖ್ಯವಾಗುತ್ತದೆ. ಅಂದರೆ ವ್ಯಕ್ತಿಯನ್ನು ಒಂದು ಘಟಕವೆಂದು ಹೇಳುವುದರಿಂದ ಅದನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಲೇಖಕ ಮತ್ತು ಅವನ ಗ್ರಹಿಕೆಯು ಯಾವ ರೂಪದಲ್ಲಿ ಇರುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಬಹಳ ಮುಖ್ಯವಾಗುತ್ತದೆ. ವ್ಯಕ್ತಿಯನ್ನು ಬರೀ ಒಂದು ನೆಲೆಯಲ್ಲಿ ಮಾತ್ರವೇ ನೋಡುವುದು ಮತ್ತು ಅದೇ ರೀತಿಯಲ್ಲಿ ಗ್ರಹಿಸುವುದು ಸರಿಯಾದ ಕ್ರಮವು ಅಲ್ಲ. ಅದನ್ನು ಮತ್ತೆ ಭಿನ್ನವಾಗಿಯೂ ನೋಡಬೇಕಾಗುತ್ತದೆ. ಲೇಖಕ ಮತ್ತು ಅವನ ಜೀವನವೂ ಹೇಗೆ ಒಂದು ಕೃತಿಯಲ್ಲಿ ಪಾತ್ರವನ್ನು ವಹಿಸುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎಂದು ನೋಡಬೇಕಾಗುತ್ತದೆ. ಇಲ್ಲಿ ಲೇಖಕ ಮತ್ತು ಅವನ ಜೀವನ ಹಾಗೂ ಅವನ ಯೋಚನೆಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದರಲ್ಲಿ ಎರಡು ಮಾತು ಇಲ್ಲ. ಅದು ಜೀವನ ಮತ್ತು ಅವನ ಅನುಭವ ಮತ್ತು ಯೋಚನೆಯನ್ನು ಹೇಳುತ್ತದೆ. ಅದರಲ್ಲಿ ಅವನ ವ್ಯಕ್ತಿತ್ವವನ್ನು ಭಿನ್ನವಾಗಿಯೂ ಹೇಳುತ್ತದೆ. ಬರಹವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಕ್ರಿಯೆಯು ಆಗಿದೆ. ಯಾಕೆ ಬರೆಯುಲು ನಮಗೆ ಶಕ್ತಿಯು ಇರುತ್ತದೆ ಅಥವಾ ಯಾಕೆ ನಮಗೆ ಓದುವ ಮತ್ತು ಕಲ್ಪಿಸುವ ಶಕ್ತಿಯು ಇರುತ್ತದೆ ಎಂದು ಯೋಚಿಸಬೇಕಾಗುತ್ತದೆ. ಬರಹ ಮತ್ತು ಅದರ ಸನ್ನಿವೇಶವು ಬರೀ ಆಕಸ್ಮಿಕವಾದ ಚಟುವಟಿಕೆಯು ಅಲ್ಲ. ಅದರಲ್ಲಿ ಭಿನ್ನತೆ ಇದೆ. ಲೇಖಕ ಮತ್ತು ಅವನ ಟಿಪ್ಪಣಿಯೂ ಒಂದು ಹಂತದಲ್ಲಿ ಸಹಾಯವನ್ನು ಮಾಡುವುದು ಸಾಧ್ಯ. ಪದಗಳು, ಅದರ ಜೋಡಣೆ, ಅದರ ಅಕ್ಷರದ ಸ್ವರೂಪ, ಅದರ ವಿಶಿಷ್ಟವಾದ ಅರ್ಥ, ಸಂಯೋಜನೆ ವಿಶಿಷ್ಟವಾದ ಪರಿಣಾಮವನ್ನು ಬೀರುತ್ತದೆ ಎಂದು ಫಾಸ್ಕಲ್ ಹೇಳುತ್ತಾನೆ.

ಪದಗಳು ಕೂಡಾ ಸಂಕಥನವನ್ನು ಹೇಳುತ್ತದೆ. ಮತ್ತು ಅದರಲ್ಲಿ ವಿವಿಧ ರೀತಿಯ ಸಂಬಂಧ ಮತ್ತು ಅದರ ಚಹರೆಗಳೂ ಇರುತ್ತವೆ. ಹಾಗೆ ನೋಡುವುದಿದ್ದರೆ

ವ್ಯಕ್ತಿ ಮತ್ತು ಅವನ ಸ್ವಭಾವವು ಅವನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ನಿರ್ದಿಷ್ಟವಾದ ಸನ್ನಿವೇಶ ಮತ್ತು ಸಂದರ್ಭಗಳು ವ್ಯಕ್ತಿಯ ನಡೆಯನ್ನು ನಿರ್ಧರಿಸುತ್ತದೆ. ಅದು ಕೆಲವು ಬಗೆಯ ಚಟುವಟಿಕೆಯನ್ನು ರೂಪಿಸುತ್ತದೆ. ದುರಂತ ನಾಟಕಗಳಲ್ಲಿ ವ್ಯಕ್ತಿ ಮತ್ತು ಅವನ ದುರಂತವು ಮಾತ್ರವೇ ಮುಖ್ಯವಾಗುತ್ತದೆ. ಮತ್ತು ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತದೆ. ವ್ಯಕ್ತಿಯು ದುರಂತವು ಅತ್ಯಂತ ಮುಖ್ಯವಾಗುತ್ತದೆ. ವ್ಯಕ್ತಿಯು ಅದರಲ್ಲಿ ಮುಖ್ಯ. ದುರಂತ ಎನ್ನುವುದು ಮೂಲಭೂತವಾಗಿ ಕೆಲವು ಪ್ರಮೇಯಗಳನ್ನು ಇಟ್ಟು ಕೊಂಡಿವೆ. ಮತ್ತು ಅದರಲ್ಲಿ ಸ್ವಲ್ಪ ಮಟ್ಟಿಗೆ ಆಧ್ಯಾತ್ಮಿಕತೆಯು ಸೇರಿದೆ. ಅದನ್ನು ಈ ದೃಷ್ಟಿಯಿಂದ ಬೇರೆಯಾಗಿಯೂ ನೋಡಬೇಕಾಗುತ್ತದೆ. ಅದು ವ್ಯಕ್ತಿ ಮತ್ತು ಸ್ವಭಾವವನ್ನು ಮಾತ್ರವೇ ಕೇಂದ್ರ ಮಾಡಿಕೊಂಡಿದೆ. ಮಧ್ಯಯಗದ ಅನೇಕ ನಂಬಿಕೆಗಳನ್ನು ಆಧುನಿಕ ಯಗವು ಬದಲು ಮಾಡಿದೆ. ಮತ್ತು ಅದರ ಸ್ವರೂಪಗಳಲ್ಲಿ ವ್ಯತ್ಯಾಸವೂ ಇದೆ. ಆಧುನಿಕ ಯುಗದ ಮನುಷ್ಯನು ಈಗ ತನ್ನ ವ್ಯಾಖ್ಯೆಗಳನ್ನು ಬದಲು ಮಾಡಿದ್ದಾನೆ. ಅವನ ಚಹರೆಗಳು ಬದಲಾಗಿವೆ. ಈ ದೃಷ್ಟಿಯಿಂದ ಆಧುನಿಕರದ್ದು ಬೇರೆ ದೃಷ್ಟಿಕೋನ, ಅದರಲ್ಲಿಯೂ ರೊಮಾಂಟಿಕರು ಜೀವನ ಮತ್ತು ಅದರ ಆದರ್ಶಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗಿದೆ. ಅದರಲ್ಲಿ ತಾರತಮ್ಯಗಳೂ ಇವೆ. ವ್ಯಕ್ತಿ ಮತ್ತು ಅವನ ಆದರ್ಶಗಳು ಬದಲಾದಾಗ ಅದರ ಸ್ವರೂಪದಲ್ಲಿ ವ್ಯತ್ಯಾಸವೂ ಆಗುತ್ತದೆ. ವಾಸ್ತವವವಾಗಿ ಲೋಕವನ್ನು ರೊಮಾಂಟಿಕರು ಲೋಕವನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ರೀತಿಯಿಂದಲೂ ಹೌದು. ವ್ಯಕ್ತಿಯನ್ನು ನೋಡುವುದು ಮತ್ತು ಅವನನ್ನು ಒಂದು ಕೇಂದ್ರಕ್ಕೆ ತರುವುದು ಇಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ರೀತಿಯು ಅದರಲ್ಲಿ ಬದಲಾಗುತ್ತದೆ. ವ್ಯಕ್ತಿಯನ್ನು ಉದಾರತೆಯಿಂದ ನೋಡಲಾಗುತ್ತದೆ. ಮತ್ತು ಅವನ ಆದರ್ಶಗಳನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತದೆ. ಆದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯನ್ನು ನಾವು ಯಾವ ರೀತಿಯಲ್ಲಿ ನೋಡುತ್ತೇವೆ ಮತ್ತು ಗ್ರಹಿಸುತ್ತೇವೆ ಎನ್ನುವುದು ಬಹಳ ಮುಖ್ಯ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಅದು ವ್ಯಕ್ತಿಯನ್ನು ವ್ಯಾಖ್ಯಾನಿಸುವ ಕ್ರಮವನ್ನು ಅವಲಂಬಿಸಿದೆ. ಅದರಲ್ಲಿ ಬಹಳ ಮುಖ್ಯವಾದ್ದು ವ್ಯಕ್ತಿಯನ್ನು ಗುರುತಿಸುವ ಕ್ರಮ. ವ್ಯಕ್ತಿಯನ್ನು ಬರೀ ಒಂದು ಘಟಕವೆಂದು ಗುರುತಿಸಿದರೆ ಅದರ ಸಾಧ್ಯತೆಯು ಬೇರೆಯಾಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಆಧುನಿಕತೆಯು ವ್ಯಕ್ತಿಯನ್ನು ಬರೀ ಒಂದು ಧರ್ಮದ ಪಾಲನೆಯನ್ನು ಮಾಡುವವನು ಎಂದು ಹೇಳುವುದೇ ಇಲ್ಲ. ಅದರಲ್ಲಿ ಅದರ

ವ್ಯಾಖ್ಯೆಯು ಬೇರೆಯಾಗುತ್ತದೆ. ಮೈಮನಗಳ ಸುಳಿಯಲ್ಲಿ ಕಾದಂಬರಿಯ ಲೇಖಕರ ಮಾತು ಗಮನಾರ್ಹ

ಅನೇಕ ಸರ್ತಿ ಲೇಖಕ ಮತ್ತು ಅವನ ನಂಬಿಕೆಯನ್ನು ನೋಡಬೇಕಾಗುತ್ತದೆ. ಲೇಖಕ ಮತ್ತು ಅವನ ಸಾಧ್ಯತೆಗಳು ರೂಪುಗೊಳ್ಳುವುದು ಮತ್ತು ಅದು ವಿಸ್ತಾರವಾಗುವುದು ನಿಜವಾದ ಒಂದು ಸಾಮಾಜಿಕವಾದ ಸ್ಥಿತಿಯಿಂದ. ವ್ಯಕ್ತಿ ಮತ್ತು ಅವನ ಮೌಲ್ಯಗಳು ಒಂದು ಸಾಧಾರಣವಾದ ಸ್ಥಿತಿಯು ಅಲ್ಲವಾಗಿದೆ. ಅದರಲ್ಲಿ ಅನೇಕ ಅಂಶಗಳು ಸೇರಿಕೊಳ್ಳುತ್ತವೆ. ಆದರೆ ನಮಗೆ ಹೆಚ್ಚು ಅವಕಾಶವನ್ನು ಕೊಡುವುದು ಸಾಹಿತ್ಯದಲ್ಲಿ ವಾಸ್ತವತೆಯು ಮಾತ್ರವೇ ಆಗಿದೆ. ಅದನ್ನು ನಾವು ನೋಡಲು ಹೆಚ್ಚು ಕಷ್ಟ ಪಡಬೇಕಾಗಿಲ್ಲ. ಅದರಲ್ಲಿ ನೇರವಾದ ನಿಲುವು ಇರುತ್ತದೆ. ಆದರೆ ಉಳಿದ ಪ್ರಕಾರಗಳು ನಮಗೆ ವಕ್ರತೆಯನ್ನು ಹೇಳುತ್ತವೆ. ವಕ್ರತೆಯು ನಮಗೆ ಕೊಡುವ ಅನುಭವಗಳು ಬೇರೆ. ಆದರೆ ಅದನ್ನು ಸಮಾಜ ಮತ್ತು ಅನ್ಯವಾದ ನಿಲುವು ಎಂದು ಭಾವಿಸಬಾರದು. ಮನುಷ್ಯ ಮತ್ತು ಅವನ ಆಗತ್ಯಗಳು ಯಾವಾಗಲೂ ಬೇರೆಯಾಗಿರುತ್ತದೆ. ಆದರೆ ಅದನ್ನು ಸಮಾಜದಿಂದ ಬೇರೆ ಎಂದು ತಿಳಿಯಬಾರದು. ವಾಸ್ತವವನ್ನು ಇಟ್ಟುಕೊಂಡು ನಾವು ವಾಸ್ತವವಾದವನ್ನು ನೋಡಬೇಕಾಗುತ್ತದೆ. ವಾಸ್ತವವಾದ ಮತ್ತು ಅದರ ನಿಲುವನ್ನು ನಾವು ವಿಮರ್ಶೆಯಲ್ಲಿ ವಿವರಿಸಲು ಸಾಧ್ಯ. ಅದರ ಬೇರು ಸಮಾಜದಲ್ಲಿ ಇದೆ. ಅದಕ್ಕೂ ಚರಿತ್ರೆಯ ಆಗು ಹೋಗುಗಳಿಗೂ ನೇರವಾದ ಸಂಬಂಧವಿದೆ. ಕಾರಂತರ ಚೋಮನದುಡಿ ಮತ್ತು ಅದರ ನಿಲುವನ್ನು ನಾವು ಆ ಕಾಲದ ಅಗತ್ಯ ಮತ್ತು ಆ ಕಾಲದ ಪ್ರಶ್ನೆಯಾಗಿಯೂ ನೋಡಬೇಕಾಗುತ್ತದೆ.

ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವು ದ್ವಂದ್ವಾತ್ಮಕವಾಗಿದೆ. ಆದರೆ ಅದರ ಕುರಿತು ನಾವು ಮತ್ತೆ ಕೆಲವು ಅಂಶಗಳನ್ನು ಯೋಚಿಸಬೇಕಾದ ಅಗತ್ಯವೂ ಇದೆ. ಅಂದರೆ ಯಾವುದೇ ವಿಷಯಗಳು ತನ್ನಿಂದ ತಾನೇ ಉಂಟಾಗುವುದೂ ಇಲ್ಲ. ಆದರೆ ವಾಸ್ತವತೆಯೆ ನಮಗೆ ಬಲವನ್ನು ಕಲಿಸುತ್ತದೆ. ಅಂದರೆ ವಾಸ್ತವವು ಬರೀ ಸಾಹಿತ್ಯಕ್ಕೆ ಮಾತ್ರವೇ ಸೀಮಿತವಾದ ಚಟುವಟಿಕೆ ಎಂದೂ ಭಾವಿಸಬೇಕಾದ ಅಗತ್ಯವಿಲ್ಲ. ಆದರೆ ಯಾವುದೇ ಬದಲಾವಣೆ ಮತ್ತು ಅದರ ಸಾಧ್ಯತೆಗಳಿಗೂ ವಿವಿಧ ಆಯಾಮಗಳೂ ಇರುತ್ತವೆ. ಕಾರಂತರನ್ನು ಓದುವಾಗ ಅವರು ಯಾಕೆ ಕಾದಂಬರಿಯನ್ನು ಬರೆದರು ಮತ್ತು ಆ ರೀತಿಯಲ್ಲಿ ಹೇಗೆ ಪ್ರತಿಕ್ರಿಯೆಯನ್ನು ನೀಡಿದರು ಎಂದೂ ನೋಡಬೇಕಾಗುತ್ತದೆ. ಅಂದರೆ ಇದರಲ್ಲಿ ಅಭಿವ್ಯಕ್ತಿ ಮತ್ತು ಅದರ ಸ್ವರೂಪವೂ ಇದೆ. ಕಾರಂತರು ಕಾದಂಬರಿಯನ್ನು

ಬಳಸಿಕೊಂಡ ವಿಧಾನವೂ ಅತ್ಯಂತ ಮಹತ್ವದ್ದು. ಅವರು ಕಾದಂಬರಿಯನ್ನು ಒಂದು ವಾಹಕವಾಗಿ ಬಳಸಿಕೊಂಡರು. ಕಾರಂತರಿಗೆ ಅತ್ಯಂತ ಮಹತ್ವದ್ದಾಗಿ ಕಂಡದ್ದು ಈ ಮಾಧ್ಯಮ. ಅಂದರೆ ಇದು ಆ ಕಾಲಕ್ಕೆ ಅಗತ್ಯವೂ ಆಗಿತ್ತು. ಅವರ ಬರಹ ಮತ್ತು ಅದರ ಅಗತ್ಯವನ್ನು ನಾವು ಈ ದೃಷ್ಟಿಯಿಂದ ಕಾಲದ ಅಗತ್ಯವೆಂದು ಹೇಳಿದರೂ ಅದರ ಹಿಂದೆ ಚಾರಿತ್ರಿಕವಾದ ಒತ್ತಡವೂ ಇದೆ ಎಂಬುದನ್ನು ಮರೆಯಬಾರದು. ಗೋಲ್ಡ್‌ಮನ್ ಈ ಮಾದರಿಗಳನ್ನು ಕಾಲ ಮತ್ತು ಸ್ಥಳವನ್ನು ಆಧರಿಸಿಕೊಂಡು ನೋಡಬೇಕಾಗುತ್ತದೆ ಎಂದು ಹೇಳಿದ್ದು ಇಲ್ಲಿ ಉಲ್ಲೇಖನೀಯವಾಗಿದೆ. ಅಭಿವ್ಯಕ್ತಿ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ಕಾಲದ ಚಹರೆಯನ್ನು ಭಿನ್ನವಾಗಿಯೂ ನೋಡುತ್ತದೆ. ವಸಾಹತುಕಾಲದಲ್ಲಿ ಕಾದಂಬರಿಯ ಓದು ಎನ್ನುವುದೂ ಕೂಡಾ ಭಿನ್ನವಾದ ಅಗತ್ಯವಾಗಿತ್ತು. ಅದು ಹೊಸ ನಮೂನೆಯ ಓದು. ಕಾದಂಬರಿ ಮತ್ತು ಅದರ ಓದು ಸಾಮಾನ್ಯವರ್ಗಕ್ಕೆ ಹೆಚ್ಚು ಪ್ರಿಯವೆಂದು ಅನಿಸಿತು. ಯಾರೂ ಕಾದಂಬರಿಯನ್ನು ಓದದೇ ಹೋಗಿದ್ದರೆ ಕಾದಂಬರಿ ಎನ್ನುವ ಪ್ರಕಾರವೇ ಹುಟ್ಟುತ್ತಿರಲಿಲ್ಲ. ಅಭಿವ್ಯಕ್ತಿ ಮತ್ತು ಅದರ ಹಿಂದೆ ಇರುವ ಲೇಖಕನ ಮನೋಭಾವವು ಬೇರೆ ಬೇರೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಮತ್ತು ಅದರಲ್ಲಿ ಲೇಖಕನೂ ಭಾಗವಹಿಸುತ್ತಾನೆ. ಅದು ದ್ವಂದ್ವಾತ್ಮಕವಾದ ಅಗತ್ಯವೂ ಆಗಿರುತ್ತದೆ.

ಕಾರಂತರ ಕಾದಂಬರಿಗಳಲ್ಲಿ ಮತ್ತೆ ಕೆಲವು ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ. ಅವರಲ್ಲಿ ನಿಸರ್ಗವು ಆಂತರಿಕವಾದ ಒಂದು ಶಕ್ತಿಯೂ ಆಗುತ್ತದೆ. ವ್ಯಕ್ತಿಯು ನಿಸರ್ಗವನ್ನು ಅರ್ಥ ಮಾಡಿಕೊಳ್ಳುವ ಕ್ರಮಗಳು ಕಾರಂತರಲ್ಲಿ ಬೇರೆಯಾಗುತ್ತವೆ. ವಾಸ್ತವವಾಗಿ ಕಾರಂತರು ನಿಸರ್ಗವನ್ನು ನೋಡುವುದು ವೀಕ್ಷಕನ ರೀತಿಯಲ್ಲಿಯೇ ಎನ್ನುವುದೂ ಇಲ್ಲಿ ಗಮನಾರ್ಹವಾಗಿದೆ. ಮತ್ತು ಅದನ್ನು ವ್ಯಕ್ತಿಯು ಹೇಗೆ ಕಾಣುತ್ತಾನೆ ಎನ್ನುವುದೇ ಕಾರಂತರಿಗೆ ಹೆಚ್ಚು ಮುಖ್ಯ. ಅವರ ಬೆಟ್ಟದ ಜೀವ ಕಾದಂಬರಿಯಲ್ಲಿ ಅತ್ಯಂತ ಸಮೃದ್ಧವಾದ ಒಂದು ನಿಸರ್ಗವು ಇದೆ. ಅದರೊಂದಿಗೆ ಮನುಷ್ಯನ ಭಾವನೆಗಳೂ ಇವೆ. ಕೃಷಿಗಾಗಿ ವ್ಯಕ್ತಿಯು ನಿಸರ್ಗವನ್ನು ತನಗೆ ಬೇಕಾದ ರೀತಿಯಲ್ಲಿ ಪರಿವರ್ತಿಸುತ್ತಾನೆ. ಪರಿವರ್ತನೆಯು ಉದ್ದೇಶಿತವೂ ಹೌದು. ಅದರಲ್ಲಿ ಕಾರಣವಿದೆ. ಹಾಗೆ ನೋಡುವುದಿದ್ದರೆ ಯಾವುದೇ ಕಾರಣವೂ ಇಲ್ಲದೆ ವ್ಯಕ್ತಿಯು ಯಾವುದೇ ಹೊಸರಚನೆಯನ್ನು ಮಾಡಲಾರ. ನಿಸರ್ಗ ಮತ್ತು ವಾಸ್ತವ, ನಿಸರ್ಗ ಮತ್ತು ವ್ಯಕ್ತಿಗಳ ನಡುವೆ ಅನೇಕ ದ್ವಂದ್ವಗಳಿವೆ. ಆದರೆ ನಿಸರ್ಗವನ್ನು ಬರಹದ ವ್ಯಂಗ್ಯಕ್ಕಾಗಿಯೇ ಅವರು ಬಳಸಿಲ್ಲ.

ಈ ದೃಷ್ಟಿಯಿಂದ ಬರಹವೂ ಕೆಲಸದ ವರ್ಗೀಕರಣವನ್ನು ಹೇಳುತ್ತದೆ. ಅದರಲ್ಲಿ ಸಮಗ್ರತೆಯು ಇರುತ್ತದೆ. ಮನಸ್ಸು ಮತ್ತು ಅದರ ಸ್ವರೂಪವನ್ನು ಅದು ಹೇಳುತ್ತದೆ. ಮತ್ತೆ ಒಂದು ಅಂಶವನ್ನು ಇಲ್ಲಿ ಹೇಳಬೇಕಾಗುತ್ತದೆ. ಬರಹವು ಸಮಾಜವನ್ನು ನೋಡುವುದು ಬರಹದ ಮೂಲಕ. ಸಾಮಾಜಿಕ ಜೀವನ ಮತ್ತು ಅದರ ದೃಷ್ಟಿಕೋನವು ಬರಹದಲ್ಲಿ ಒಂದು ರೀತಿಯಲ್ಲಿ ವ್ಯಕ್ತವಾಗುತ್ತವೆ. ಆದರೆ ಯಾವುದನ್ನು ಆಧುನಿಕ ಕಾಲವು ಸಮಾಜವೆಂದರೆ ಅದು ಕೆಲವರಿಗೆ ಮಾತ್ರವೇ. ಸಮಾಜವು ಸಾಹಿತ್ಯವನ್ನು ತನಗೆ ಬೇಕಾದ ನಿರ್ವಚನದೊಂದಿಗೆ ಗ್ರಹಿಸುವ ಪ್ರಯತ್ನವನ್ನು ಮಾಡುತ್ತದೆ. ಸಾಹಿತ್ಯದ ಕೆಲಸವು ಸಮಾಜಕ್ಕೆ ಉಪಯುಕ್ತವಾದರೆ ಉಳಿಯುತ್ತದೆ. ಆ ಕೆಲಸಕ್ಕೂ ಸಾಮಾಜಿಕ ಗುಂಪುಗಳಿಗೂ ಸಂಬಂಧವಿದೆ. ನಮ್ಮ ಸಮಾಜದಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಸಾಹಿತ್ಯವೇ ಹೇಳುತ್ತದೆ. ಮತ್ತು ಒಂದು ಗುಂಪು ಸಾಹಿತ್ಯವನ್ನು ಸ್ವೀಕರಿಸುವುದು ನಿಜ. ನಮ್ಮ ಅವಶ್ಯಕತೆಯು ನಿರ್ದಿಷ್ಟವಾದ ಬೌದ್ಧಿಕ ವರ್ಗವನ್ನು ಸೃಷ್ಟಿಸುತ್ತದೆ. ನಮಗೆ ಅಗತ್ಯವಿಲ್ಲವೆಂದಾದರೆ, ನಾವು ದೇವನೂರು ಮಹಾದೇವರನ್ನು ಓದುತ್ತಿರಲಿಲ್ಲ. ಅರವಿಂದ ಮಾಲಗತ್ತಿಯವರ ಸಾಹಿತ್ಯದ ಅವಶ್ಯಕತೆಯೂ ಇರಲಿಲ್ಲ. ಆದರೆ ಸಾಹಿತ್ಯದಲ್ಲಿಯೂ ವಿಶ್ವಾತ್ಮಕತೆಯೆನ್ನುವುದು ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತದೆ. ದೇಸಾಯಿಯವರ ಬರವಣಿಗೆಯಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿತ್ವದ ಧೋರಣೆಯು ವಿಶ್ವಾತ್ಮಕವೂ ಹೌದು. ಹಾಗೇ ನೋಡುವುದಿದ್ದರೆ ಬರಹ ನಮ್ಮ ಅಗತ್ಯಗಳಲ್ಲಿ ಒಂದು. ಬರಹದಲ್ಲಿ ನಿರ್ದಿಷ್ಟ ಪ್ರವೇಶ ಮತ್ತು ಅಂತ್ಯ ಇರಬೇಕಾಗುತ್ತದೆ. ಕಾರಂತರು ಯಾವುದನ್ನು ಕಂಡಿದ್ದಾರೆಯೋ ಅದನ್ನು ನಾವು ಕಂಡಿಲ್ಲ. ಅವರ ಗ್ರಹಿಕೆ ಮತ್ತು ನಮ್ಮ ಗ್ರಹಿಕೆ ಪರಸ್ಪರ ಸಂಧಿಸಿದಾಗ ಬರಹ ಅರ್ಥಪೂರ್ಣವಾಗುತ್ತದೆ. ಗ್ರಹಿಕೆಗಳ ನಡುವಣ ಸಂಘರ್ಷವು ಬರಹದ ಮಟ್ಟಿಗೆ ಮುಖ್ಯವಾಗಿದೆ. ಕಾರಂತರ ಕಾದಂಬರಿಗಳಿಗೆ ಇರುವ ಸಾಮಾಜಿಕ ಹಾಗೂ ತಾತ್ವಿಕ ದರ್ಶನಗಳು ನಮಗೆ ಅನೇಕ ಸಾಧ್ಯತೆಗಳನ್ನು ತೆರೆಯುತ್ತವೆ. ಕಾದಂಬರಿಯ ಅಗತ್ಯವಿಲ್ಲದಿದ್ದರೆ ನಾವು ಅದನ್ನು ಓದುತ್ತಿರಲಿಲ್ಲ. ಕಾದಂಬರಿಯ ರಚನೆ ಕನ್ನಡದಲ್ಲಿ ಒಂದು ಹೊಸ ಬಗೆಯ ಚಟುವಟಿಕೆಯೇ ಆಗಿತ್ತು. ಕಾರಂತರ ಬರವಣಿಗೆಯ ಆಯ್ಕೆ ಮತ್ತು ಓದುಗರಾದ ನಮ್ಮ ಆಯ್ಕೆ ಸಾಹಿತ್ಯದ ಅಗತ್ಯ ಮಾತ್ರವೇ ಅಲ್ಲ. ಅದು ಸಾಂಸ್ಕೃತಿಕ ಆಯ್ಕೆಯೂ ಹೌದು. ಹಾಗೆಂದು ರಚನೆಯು ಯಾವತ್ತು ಬರೀ ಬುದ್ಧಿಜೀವಿಗಳ ಚಟುವಟಿಕೆಯೆಂದು ಭಾವಿಸಬಾರದು. ಅದು ನಡೆಯತ್ತದೆ. ಮತ್ತು ಎಲ್ಲರೂ ರಚಿಸುತ್ತಾರೆ. ಅದರ ಹಿಂದೆ ಒಂದು ಸಮಾಜ ನಿರ್ದಿಷ್ಟವಾದ ಜ್ಞಾನವೂ ಇರುತ್ತದೆ. ಅದರಲ್ಲಿ ವ್ಯಕ್ತವಾಗುವುದು ಬರೀ ಕೆಲವರ ಜ್ಞಾನ ಮಾತ್ರವೇ ಎಂದೂ ಭಾವಿಸಬಾರದು. ಮನುಷ್ಯ ಮತ್ತು

ಅವನ ಜ್ಞಾನದ ಆಧಾರದ ಮೇಲೆಯೇ ಅನೇಕವು ನಡೆಯುತ್ತದೆ. ಅದು ಸಮಾಜದ ವಾಸ್ತವವಾಗಿದೆ. ಮನುಷ್ಯನ ಆಂತರಿಕವಾದ ಅನೇಕ ಜ್ಞಾನವು ಬೇರೆ ಬೇರೆ ಸಂಗತಿಗಳಿಂದ ಆವೃತವಾಗಿರುತ್ತದೆ. ಆದ್ದರಿಂದ ಅದರ ಸ್ವರೂಪವೂ ಬೇರೆಯಾಗುತ್ತದೆ.

ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಸಂಗತಿಯನ್ನು ಇಲ್ಲಿ ದಾಖಲಿಸಬಹುದು. ಜೋರು ಮಳೆಯು ಬಂದರೆ ಮಳೆಗಾಲವನ್ನು ಕಳೆಯುವುದು ಹೇಗೆ ಎನ್ನುವ ಪ್ರಶ್ನೆಯು ಸರಸೋತಿ ಮತ್ತು ಪಾರೋತಿಯರಿಗೆ ಬರುತ್ತದೆ. ಅವರ ಮಾತುಕತೆಯಲ್ಲಿ ಬರುವ ಮುಖ್ಯವಾದ ಅಂಶವೆಂದರೆ ಶೂದ್ರರು ಮೀನು ತಿಂದಾರು ಆದರೆ ನಾವು ಅದನ್ನು ತಿನ್ನಲಿಕೆ ಆದೀತೆ? ಇಡೀ ಕಾದಂಬರಿಯನ್ನು ಓದಿದರೆ ಇದು ಅತ್ಯಂತ ಸಣ್ಣದಾದ ಸಂಗತಿಯೂ ಹೌದು. ಹಾಗೆಂದು ಇದನ್ನು ಸತ್ಯವೇ ಅಲ್ಲವೆಂದು ಹೇಳಲು ಬರುವುದಿಲ್ಲ ಒಂದು ಕಾದಂಬರಿಯಲ್ಲಿ ಹೇಗೆ ಅತ್ಯಂತ ಸಣ್ಣದಾದ ಸಂಗತಿಯೂ ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತದೆ ಎನ್ನುವುದಕ್ಕೆ ಇದು ಸಾಕ್ಷಿಯೂ ಆಗಿದೆ. ಅದು ನಿರ್ದಿಷ್ಟವಾದ ಜ್ಞಾನ ಮತ್ತು ನಡೆ ನುಡಿಯನ್ನು ಹೇಳುತ್ತದೆ. ಅನೇಕರಿಗೆ ಈ ಭಾಗವು ಅತ್ಯಂತ ಮಹತ್ವದ್ದು ಅಲ್ಲವೆಂದು ಅನಿಸಬಹುದು. ಆದರೆ ಇದರಲ್ಲಿ ಸಮಾಜದ ಆಚಾರ ವಿಚಾರದ ಪ್ರಶ್ನೆಯು ಬರುತ್ತದೆ. ನಾವು ಯಾವ ಅಧ್ಯಯನ ಕ್ರಮವನ್ನು ಇಟ್ಟುಕೊಳ್ಳುತ್ತೇವೆಯೋ ಆದರ ಸ್ವರೂಪವನ್ನು ಇದು ಸೂಚಿಸುತ್ತದೆ. ಸಾಮಾಜಿಕವಾದ ಸಂಗತಿಗಳಲ್ಲಿ ಆಹಾರದ ಪ್ರಶ್ನೆಯು ಇದೆ. ಮತ್ತು ಅದರಲ್ಲಿ ವಿಧಿನಿಷೇಧಗಳೂ ಇವೆ. ನಾವು ಯಾವ ಅಧ್ಯಯನದ ಕ್ರಮವನ್ನು ಇಟ್ಟುಕೊಳ್ಳುತ್ತೇವೆಯೋ ಅದರ ಆಧಾರದ ಮೇಲೆ ನಾವು ಕೆಲವು ನಿರ್ಣಯಕ್ಕೆ ಬರುತ್ತೇವೆ. ಹಾಗೆ ನೋಡಿದರೆ ರಚನೆ ಮತ್ತು ಅದರ ಕ್ರಿಯೆಯು ವೈಜ್ಞಾನಿಕವೂ ಆಗಿದೆ. ಯಾವುದನ್ನು ಈವತ್ತು ರಚನೆಯೆಂದು ಹೇಳಿ ಅದನ್ನು ಉಳಿದ ವಿಷಯಕ್ಕೆ ಸಂಬಂಧವೇ ಇಲ್ಲವೆಂದು ಪ್ರತಿಪಾದಿಸುತ್ತೇವೆಯೋ ಆದು ಹಾಗೆ ಇರುವುದೇ ಇಲ್ಲ. ಅದು ಜೀವನವನ್ನು ತಿಳಿಸುತ್ತದೆ. ಅದರಲ್ಲಿ ಕ್ರಿಯೆ ಇರುತ್ತದೆ. ಮತ್ತು ಅದರಲ್ಲಿ ಮತ್ತೆ ಮತ್ತೆ ಬೇರೆ ಅಂಶಗಳ ಜೊತೆಗಿನ ಸಂಬಂಧವೂ ಇರುತ್ತದೆ. ರಚನೆ ಮತ್ತು ಅದರ ಕ್ರಿಯೆಗೆ ಸಂಬಂಧವಿದೆ. ಕಾರಂತರ ಕುಡಿಯರ ಕೂಸು, ಸ್ವಪ್ನದ ಹೊಳೆ ಕಾದಂಬರಿಗಳನ್ನು ಓದಿದರೆ ಬೇಟೆ, ಕೃಷಿ ಮುಂತಾದವುಗಳು ಹೇಗೆ ಒಂದು ಜೀವನದ ಕಲಾತ್ಮಕವಾದ ಕ್ರಿಯೆಯು ಆಗಿದೆ ಎಂದು ತಿಳಿಯುತ್ತದೆ. ವಾಸ್ತವವಾಗಿ ಕಾರಂತರಲ್ಲಿ ಜೀವನ ಮತ್ತು ಅದರ ಶ್ರದ್ಧೆಯ ಪ್ರಶ್ನೆಯು ಅತ್ಯಂತ ಮಹತ್ವದ್ದೂ ಆಗಿದೆ. ಅದು ಮನುಷ್ಯರ ನಡವಳಿಕೆಯನ್ನು

ಹೇಳುತ್ತದೆ. ಮತ್ತು ಅದರಲ್ಲಿ ಬೇರೆ ಬೇರೆ ಗುಂಪುಗಳ ಪ್ರಶ್ನೆಯೂ ಬರುತ್ತದೆ. ಅಂದರೆ ಕಾರಂತರ ಚೋಮನ ದುಡಿ ಕಾದಂಬರಿಯಲ್ಲಿ ಬರುವ ಗುಂಪು ಒಂದು ಬಗೆಯದು. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಗುಂಪು ಮತ್ತೊಂದು ಬಗೆಯದು. ಈ ಗುಂಪುಗಳಲ್ಲಿ ನಮ್ಮ ವರ್ತನೆಯ ಅಂಶಗಳೂ ಸೇರಿಕೊಂಡಿವೆ. ಚರಿತ್ರೆಯು ಹೇಗೆ ಬದಲಾಗುತ್ತವೆ ಎನ್ನುವುದರ ಚಿತ್ರಣವೂ ಇದೆ. ಜೀವನ ಮತ್ತು ಅದರ ಅಸ್ತಿತ್ವಕ್ಕಾಗಿ ಮನುಷ್ಯರು ನಡೆಸುವ ವಿವಿಧ ಬಗೆಯ ಹೋರಾಟಗಳ ವಿವರಣೆಯು ಅದರಲ್ಲಿದೆ. ಆದರೆ ಕಾರಂತರ ಕಾದಂಬರಿಗಳಲ್ಲಿ ಬರುವ ಸಮುದಾಯದ ಅರ್ಥವು ಭಿನ್ನವಾದ ವಿವರಣೆಯನ್ನು ಕೊಡುತ್ತವೆ. ಆದರೆ ಹಳ್ಳ ಬಂತು ಹಳ್ಳ ಕಾದಂಬರಿಯಲ್ಲಿ ಬರುವ ಜೀವನ ಮತ್ತು ಅದರ ಹೋರಾಟವು ಬೇರೆ ರೀತಿಯದೂ ಆಗಿದೆ. ಅದೇ ಬಗೆಯ ಹೋರಾಟವನ್ನು ನಾವು ಸ್ವಪ್ನಸಾರಸ್ವತದಲ್ಲಿ ನೋಡುವುದು ಸಾಧ್ಯವೆ ಇಲ್ಲ. ಸ್ವಪ್ನ ಸಾರಸ್ವತದಲ್ಲಿ ಮತಾಂತರ ಮತ್ತು ಅದರ ವಿರುದ್ಧ ನಡೆಯುವ ಸಂಘರ್ಷದ ವಿವರಣೆಗಳೂ ಇವೆ. ಮನುಷ್ಯ ಮತ್ತು ಅವನ ವಿಶ್ವಾತ್ಮಕತೆಯ ಪ್ರಶ್ನೆಯು ಹೇಗೆ ಬದಲಾಗುತ್ತದೆ ಎನ್ನುವುದು ವಸಾಹತು ಮತ್ತು ವಸಾಹತೋತ್ತರಕಾಲದ ಕಾದಂಬರಿಗಳು ನಮಗೆ ಹೇಳುತ್ತವೆ. ಸಾವಿರಾರು ಜನರ ಸಾವಿರಾರು ಕ್ರಿಯೆಗಳು ಸಮಾಜವನ್ನು ರೂಪಿಸಿವೆ. ಎಷ್ಟೋ ಜನರ ಮನಸ್ಸುಗಳು ನಿರ್ದಿಷ್ಟವಾದ ಚರಿತ್ರೆಯನ್ನು ಕಟ್ಟಿವೆ. ಎಷ್ಟೋ ಸರ್ತಿ ಒಂದು ಗುಂಪಿನ ಜನರು ಒಂದೇ ರೀತಿಯಲ್ಲಿ ಯಾಕೆ ಯೋಚಿಸುತ್ತಾರೆ ಎಂದರೆ ಅವರಿಗೆ ಸಮಾನವಾದ ಕೆಲವು ಆಸಕ್ತಿಗಳು ಇರುತ್ತವೆ. ಕೆಲವು ಸಂದರ್ಭದಲ್ಲಿ ಗುಂಪು ಮತ್ತು ಅವರ ಯೋಚನೆಯ ಕ್ರಮವನ್ನು ನಾವು ಬೇರೆ ಮಾಡಲು ಬರುವುದೂ ಇಲ್ಲ. ಸಮುದಾಯ ಮತ್ತು ಅದರ ಚಟುವಟಿಕೆಗೆ ಕೆಲವು ರೀತಿಯಲ್ಲಿ ಬೌದ್ಧಿಕವಾದ ಚಟುವಟಿಕೆಯೂ ಇರುತ್ತದೆ. ಅದರಲ್ಲಿ ಸಾಹಿತ್ಯವೂ ಒಂದು. ವ್ಯಕ್ತಿಗಳು ಮತ್ತು ಅವರ ನಡವಳಿಕೆಗಳು ಇತ್ಯಾತ್ಮಕವಾದ ಸಂಯೋಜನೆಯನ್ನು ಮಾಡುತ್ತವೆ. ಸಮಾನವಾದ ಕೆಲವು ಅಂಶಗಳನ್ನು ರೂಪಿಸುತ್ತವೆ. ಸಮಾಜ ಮತ್ತು ಅದರ ಚಟುವಟಿಕೆಯನ್ನು ರೂಪಿಸುವಾಗ ಅದು ಯಾವುದನ್ನು ಹೇಳುತ್ತದೆ ಮತ್ತು ಅದನ್ನು ಅದು ಹೇಗೆ ಗ್ರಹಿಸುತ್ತದೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ಅನೇಕ ಸಂದರ್ಭದಲ್ಲಿ ಹಳೆಯ ರಚನೆಗಳನ್ನು ಒಡೆದುಕೊಂಡು ಹೊಸರಚನೆಗಳು ಹುಟ್ಟುತ್ತವೆ. ಅರ್ಥಹೀನವಾದ ಕ್ರಿಯೆಗಳು ಮತ್ತು ಅದರ ರಚನೆಗಳನ್ನು ಹೊಸರಚನೆಗಳು ನಿರಾಕರಿಸುತ್ತವೆ. ಹೊಸತನ್ನು ಸ್ವೀಕರಿಸುವಾಗ ಅದರಲ್ಲಿ ಹೊಸ ಸನ್ನಿವೇಶವೂ ರಚನೆಯಾಗುತ್ತದೆ. ಸಮಾಜವು ಬದಲಾಗುತ್ತಾ ಹೋದಂತೆ ನಮ್ಮ

ಆಲೋಚನೆ ಮತ್ತು ನಡತೆಗಳು ಬದಲಾಗುತ್ತವೆ. ನಮ್ಮ ಪ್ರಗತಿಪರ ಆಲೋಚನೆಗಳೂ ವ್ಯತ್ಯಾಸವಾಗುತ್ತವೆ. ಒಂದು ಕಾಲದ ಪ್ರಗತಿಯ ಕುರಿತಾದ ಚಿಂತನೆಗಳು ಮತ್ತು ಕಾಲಕ್ಕೆ ಬರುವಾಗ ಹಳೆಯದರಂತೆ ಭಾಸವಾಗುತ್ತದೆ. ಯಾವುದೇ ರಚನೆ ಮತ್ತು ಅದರ ಕ್ರಿಯೆಗಳು ಶಾಶ್ವತವೆಂದು ಭಾವಿಸಬೇಕಾಗಿಯೂ ಇಲ್ಲ. ನಮ್ಮ ಕ್ರಿಯಾತ್ಮಕವಾದ ಒಂದು ಚಟುವಟಿಕೆಯು ಸಮೂಹದೊಂದಿಗೆ ನಿರ್ಣಾಯಕವಾದ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಸಮಾಜ ಮತ್ತು ಲೇಖಕರ ನಡುವೆ ದ್ವಂದ್ವಾತ್ಮಕವಾದ ಸಂಬಂಧವಿದೆ. ಮತ್ತು ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ಸಮಾಜದಿಂದ ತೆಗೆದುಕೊಳ್ಳುವುದು ಮತ್ತು ಅದರಿಂದ ಪ್ರೇರಣೆಯನ್ನು ಪಡೆಯುವುದು ಹಾಗೂ ಮತ್ತೆ ಸಮಾಜಕ್ಕೆ ಕೊಡುವುದು ಅತ್ಯಂತ ಅಗತ್ಯವಾದ ಒಂದು ಚಟುವಟಿಕೆಯೂ ಆಗಿದೆ. ವ್ಯಕ್ತಿ ಮತ್ತು ಮತ್ತು ಅವನ ಸ್ವಭಾವ ಹಾಗೂ ಅವನ ಅನುಭವವು ನಿಜವಾಗಿಯೂ ಶಕ್ತಿಶಾಲಿಯೂ ಆಗುತ್ತದೆ.

ವ್ಯಕ್ತಿಯ ಅನುಭವಕ್ಕೆ ಸಂಕೀರ್ಣತೆಯು ಇದೆ. ಆದರೆ ಯಾವುದನ್ನು ಸಮಾಜ ಮತ್ತು ಅದರ ಚರಿತ್ರೆಯೆನ್ನುವುದು ಬದಲಾಗುತ್ತದೆ. ಮತ್ತು ಅದು ಬದಲಾಗುವಾಗ ಅದರ ಆದ್ಯತೆಗಳು ಬದಲಾಗುತ್ತವೆ. ವಾಸ್ತವವಾಗಿ ನಮ್ಮ ಗ್ರಹಿಕೆಗಳು ಬದಲಾಗಲು ಬೇರೆ ಬೇರೆ ಕಾರಣಗಳೂ ಇರುತ್ತವೆ. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಸೂರನಿಗೆ ಅವನದೇ ಆಗಿರುವ ಅನನ್ಯತೆಯು ಇದೆ. ಅವನು ಉದಾರನೂ ಹೌದು. ಅವನ ವ್ಯಕ್ತಿತ್ವಕ್ಕೆ ನಿರ್ದಿಷ್ಟವಾದ ಅರ್ಥವೂ ಇದೆ. ಅವನನ್ನು ಒಂದು ಚರಿತ್ರೆಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅವನ ಜೀವನವು ಕೆಲವು ದೃಷ್ಟಿಯಿಂದ ಮಹತ್ವದ್ದೂ ಹೌದು. ಆದರೆ ಅವನ ಸಾಮಾಜಿಕ ಚರಿತ್ರೆಯು ಐತಾಳರ ಚರಿತ್ರೆಗಿಂತ ಬೇರೆಯೂ ಹೌದು. ಹಾಗೆ ನೋಡುವುದಿದ್ದರೆ ಯಾವುದೇ ಜೀವಿಯ ಅರ್ಥ ಪೂರ್ಣತೆಯು ಮತ್ತು ಅರ್ಥ ಹೀನತೆಯು ನಿರ್ಧಾರವಾಗುವುದು ಸನ್ನಿವೇಶದಿಂದ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸೂರನ ಸಮಸ್ಯೆಯೇ ಬೇರೆ. ರಾಮೈತಾಳರ ಸಮಸ್ಯೆಯೇ ಬೇರೆ. ಅವರು ಒಬ್ಬರ ಹಾಗೆ ಮತ್ತೊಬ್ಬರು ಇಲ್ಲ. ಅವರ ಜೀವನವು ಪಲ್ಲಟವಾಗುತ್ತದೆ. ಅವರ ಆಲೋಚನೆಯೂ ಬದಲಾಗುತ್ತದೆ. ಅವರ ಪರಿಸರವೂ ಬೇರೆ ಬೇರೆ ಕಾರಣಗಳಿಂದ ಬದಲಾಗುತ್ತದೆ. ಜೀವನ ಮತ್ತು ಅದರ ಸಾಧ್ಯತೆಯೂ ಅವರ ಮಟ್ಟಿಗೆ ಬೇರೆಯೂ ಹೌದು. ಮನುಷ್ಯ ಮತ್ತು ಅವರ ಜೀವನ ಕ್ರಮದ ಮೇಲೆ ಅನೇಕ ಪ್ರಭಾವಗಳು ಇರುತ್ತವೆ. ಅದನ್ನು ಸುಲಭವಾಗಿ ತಳ್ಳಿ ಹಾಕಲು ಬರುವುದೂ ಇಲ್ಲ. ಮತ್ತು ಅದರ ಪರಿಣಾಮಗಳು ಬೇರೆ ರೀತಿಯಲ್ಲಿಯೂ ಇರುತ್ತದೆ. ಆದರೆ ನಮಗೆ ಸಾಹಿತ್ಯವನ್ನು ಸಮಾಜವನ್ನು

ನೋಡುವಾಗ ಕೆಲವು ಮಿತಿಗಳು ಇರುತ್ತವೆ. ಅದನ್ನು ಮೊದಲು ನಾವು ಬಗೆ ಹರಿಸಿಕೊಳ್ಳಬೇಕಾಗುತ್ತದೆ. ಅಂದರೆ ಸಾಹಿತ್ಯವನ್ನು ಅದರ ಸಾಲುಗಳು ಮತ್ತು ಅದರಲ್ಲಿ ಬಳಕೆಯಾದ ಪದಗಳ ಹಿನ್ನೆಲೆಯಲ್ಲಿ ಮಾತ್ರವೇ ಗ್ರಹಿಸುವಾಗ ಅದರಲ್ಲಿ ಕೆಲವು ಮಿತಿಗಳು ಬರುತ್ತವೆ. ವಾಸ್ತವವಾಗಿ ಕಾವ್ಯವೆಂದರೆ ಅದು ಬರೀ ಸಾಲುಗಳು ಮಾತ್ರವೇ ಆಗಿಲ್ಲ. ಅದರ ಸ್ವರೂಪವು ನಿರ್ಧಾರವಾಗುವುದು ಅದರ ತಾತ್ವಿಕವಾದ ನೆಲೆಯಲ್ಲಿಯೂ ಹೌದು. ಆದ್ದರಿಂದ ಸಮಾಜದ ಬಿಂಬಗಳಾದ ಮನುಷ್ಯರ ಚಿತ್ರಣವು ಯಾವ ಬಗೆಯಲ್ಲಿ ಇರುತ್ತದೆ ಎನ್ನುವುದೂ ಮುಖ್ಯವಾದ ಪ್ರಶ್ನೆಯೇ ಆಗಿದೆ.

ಮನುಷ್ಯ ಮತ್ತು ಅವರ ಜೀವನದ ಸ್ವರೂಪವು ಅನೇಕ ಸರ್ತಿ ಪುರಾಣಗಳು ಅಲ್ಲ. ಮನುಷ್ಯ ಮತ್ತು ಅವರ ಜೀವನವು ಪಲ್ಲಟವಾಗುವುದು ಮತ್ತು ಅದರಿಂದ ಉಂಟಾಗುವ ಪರಿವರ್ತನೆಗಳು ಒಂದು ಮಾದರಿಯಲ್ಲಿ ಇರುವುದೂ ಇಲ್ಲ. ಅದು ಬದಲಾಗುತ್ತದೆ. ಬದಲಾದಾಗ ಪರಿಸರವೂ ಬದಲಾಗುತ್ತದೆ. ಮತ್ತು ಪರಿಸರವು ಬದಲಾದಾಗ ಅದರ ಮೂಲಕ ಜೀವನವೂ ಬದಲಾಗುತ್ತದೆ. ಈ ಸಂಬಂಧವು ಅತ್ಯಂತ ಸಂಕೀರ್ಣವೂ ಆಗಿರುತ್ತದೆ. ಇದನ್ನೇ ದ್ವಂದ್ವಾತ್ಮಕವೆಂದು ಹೇಳುತ್ತಾರೆ. ಮನುಷ್ಯ ಮತ್ತು ಸಮಾಜದ ಸಂಬಂಧವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬರುತ್ತವೆ. ಯಾವುದನ್ನು ಜೀವನದ ಸಮಸ್ಯೆಯೆಂದು ಹೇಳುತ್ತೇವೆಯೋ ಅದನ್ನು ನಾವು ಮಾತ್ರವೇ ಮಾಡಿಕೊಳ್ಳುವುದೂ ಇಲ್ಲ. ಅದು ಬೇರೆ ಬೇರೆ ಕಾರಣಗಳಿಂದ ಬದಲಾಗುತ್ತದೆ. ಆದ್ದರಿಂದ ನಾವು ಯಾವುದನ್ನು ಈಗ ನೋಡುತ್ತಿದ್ದೆವೆಯೊ ಆದು ಮಾತ್ರವೇ ಮುಖ್ಯವಾಗುವುದೂ ಇಲ್ಲ. ವ್ಯಕ್ತಿವಾದಿಗಳು ಜೀವನವನ್ನು ನೋಡುವ ಕ್ರಮಗಳು ಬೇರೆಯಾಗಿರುತ್ತವೆ. ಅವರು ವ್ಯಕ್ತಿಯನ್ನು ಮಾತ್ರವೇ ಜವಾಬ್ದಾರರನ್ನಾಗಿ ಮಾಡುತ್ತಾರೆ. ವಿಷಯವು ಅಷ್ಟು ಸರಿಯಾಗಿಲ್ಲ. ವ್ಯಕ್ತಿ ಮತ್ತು ಅವನ ಜೀವನದ ದೃಷ್ಟಿಕೋನಕ್ಕೂ ಸಮಾಜಕ್ಕೂ ಒಂದು ಸಂಬಂಧವಿದೆ. ಯಾವುದು ಘಟಿಸಿದೆಯೋ ಅದನ್ನು ಮಾತ್ರವೇ ನೋಡಿಕೊಂಡು ನಾವು ಮೌಲ್ಯಮಾಪನವನ್ನು ಮಾಡಲು ಬರುವುದಿಲ್ಲ. ಜೀವನದಲ್ಲಿ ಘಟಿಸುವ ಸಂಗತಿಗೂ ಜೀವನದ ಮೌಲ್ಯಕ್ಕೂ ನೇರವಾದ ಸಂಬಂಧವು ಇದೆಯೆಂದೂ ತಿಳಿಯಬಾರದು. ಅದು ಬದಲಾಗುತ್ತದೆ. ಮತ್ತು ಬದಲಾಗುವಾಗ ಅದರ ಕಾರಣವೂ ಬೇರೆ ಇರುವುದಕ್ಕೆ ಸಾಧ್ಯ. ಔದಾರ್ಯದ ಉರುಳಲ್ಲಿ ಕಾದಂಬರಿಯನ್ನು ಮತ್ತು ಗೊಂಡಾರಣ್ಯವನ್ನು ಗಮನಿಸಬಹುದು. ಒಂದು ಸ್ವಾತಂತ್ರ್ಯ ಹೋರಾಟದ ಬಗ್ಗೆ ಹೇಳುತ್ತದೆ. ಮತ್ತೊಂದು ಸ್ವಾತಂತ್ರ್ಯದ ಅನಂತರದ ಜೀವನ ಸ್ಥಿತಿಯನ್ನು ವಿವರಿಸುತ್ತದೆ.

ಸಂಸ್ಕಾರ ಕಾದಂಬರಿಯಲ್ಲಿ ಗುರಿಕಾರರು ಮತ್ತು ಕಲ್ಕುಡರು ಮುಖ್ಯವಲ್ಲ. ಅದರಲ್ಲಿ ಹೆಚ್ಚು ಮುಖ್ಯ ಜಾತಿ ಮತ್ತು ಅದರ ಹಿಂದಿನ ಗೋತ್ರಗಳು ಹಾಗೂ ಮಠ. ಕಾರಂತರ ಕಾದಂಬರಿಗಳಲ್ಲಿ ಬರುವ ತತ್ವಜ್ಞಾನವನ್ನು ನಾವು ಕಾದಂಬರಿಯ ನಡುಗೆಯಲ್ಲಿಯೇ ನೋಡಬೇಕಾಗುತ್ತದೆ. ತತ್ವಜ್ಞಾನವನ್ನು ಕಾದಂಬರಿಗಳು ನೋಡುವುದು ಮತ್ತು ಗ್ರಹಿಸುವುದು ಮುಖ್ಯವಾಗಿ ಸಾರ ರೂಪದಲ್ಲಿಯೇ ಎನ್ನುವುದು ಇಲ್ಲಿ ಉಲ್ಲೇಖನೀಯ. ಸಮಾಜ, ಚರಿತ್ರೆ, ಆರ್ಥಿಕತೆ, ಸಾಂಸ್ಕೃತಿಕ ಸಂಗತಿಗಳು ಮತ್ತು ಸಾಹಿತ್ಯದ ನಿಲುವುಗಳು ಜೊತೆಗೆ ಹೋಗುತ್ತವೆ. ಅಂದರೆ ಅದರಲ್ಲಿ ಅನೇಕ ಸಂಗತಿಗಳು ಜೊತೆಗೆ ಹೋಗುವುದರಿಂದ ಅವುಗಳನ್ನು ಬೇರೆ ಮಾಡಿಕೊಂಡು ನೋಡಲು ಬರುವುದೂ ಇಲ್ಲ. ವಸ್ತು ಮತ್ತು ಅದರ ಕುರಿತಾದ ತಪ್ಪು ತೀರ್ಮಾನಗಳು ನಮಗೆ ತಪ್ಪು ಫಲಿತಾಂಶವನ್ನು ಕೊಡುತ್ತವೆ. ಆದ್ದರಿಂದ ಘಟನೆ ಮತ್ತು ಅದರ ಕುರಿತಾದ ತಪ್ಪು ತೀರ್ಮಾನವು ತಪ್ಪು ಫಲಿತಾಂಶವನ್ನು ಹೇಳುವುದು ಮಾತ್ರವೇ ಅಲ್ಲ ಅದರ ಮೂಲಕ ನಾವು ಸಂದೇಶವನ್ನು ಹೇಳುತ್ತೇವೆ. ಒಂದು ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ನಮಗೆ ಮನೋವಿಜ್ಞಾನ ಮತ್ತು ಸಮಾಜ ವಿಜ್ಞಾನವು ನೆರವಿಗೆ ಬರುತ್ತವೆ.

ವಿಜ್ಞಾನಕ್ಕೂ ನಮ್ಮ ಬಳಕೆಯ ಸಮಾಜ ವಿಜ್ಞಾನಕ್ಕೂ ಈ ದೃಷ್ಟಿಯಿಂದ ದ್ವಂದ್ವಾತ್ಮಕತೆಯು ಇರುತ್ತದೆ. ಅವುಗಳ ನಡುವೆ ಕೆಲವು ಸಮಾನವಾದ ಅಂಶಗಳೂ ಇರುತ್ತವೆ. ಫ್ರಾಯ್ಡ್ ಚರಿತ್ರೆ ಮತ್ತು ಸಮಾಜಶಾಸ್ತ್ರವನ್ನು ಹಾಗೂ ಧರ್ಮವನ್ನು ನೋಡುತ್ತಾನೆ. ಅದರ ಜೊತೆಗೆ ಅನೇಕ ಸಂಗತಿಗಳು ಇರುತ್ತವೆ ಎಂದು ಅವನ ಭಾವನೆಯೂ ಆಗಿದೆ. ಸಮಾಜ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಬೇರೆ ಮಾಡಬೇಕಾಗುತ್ತದೆ. ಅವನಲ್ಲಿ ವ್ಯಕ್ತಿಗೂ ಸಮಾಜಕ್ಕೂ ಚರಿತ್ರೆಗೂ ವಿವಿಧ ರೀತಿಯ ಸಂಬಂಧವು ಇರುತ್ತದೆ. ಸಮಾಜದ ಅನೇಕ ವಿಧಿನಿಷೇಧಗಳು ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತವೆ. ಅಂದರೆ ವ್ಯಕ್ತಿಯನ್ನು ಅನೇಕ ಸಂದರ್ಭದಲ್ಲಿ ಇವುಗಳೇ ನಿಯಂತ್ರಣವನ್ನು ಮಾಡುತ್ತವೆ. ವ್ಯಕ್ತಿ ಮತ್ತು ಅವನ ಬಯಕೆಗಳು ಒಂದು ರೀತಿಯಲ್ಲಿ ಇರುತ್ತವೆ. ಮತ್ತು ಅದರಲ್ಲಿ ವಿಶಿಷ್ಟತೆಯು ಮುಖ್ಯ. ವ್ಯಕ್ತಿ ಮತ್ತು ಅವನ ನಡೆ ನುಡಿಯು ಒಂದು ಬಗೆಯಲ್ಲಿ ಇರುತ್ತವೆ. ಮತ್ತು ಸಮಾಜ ಚಾರಿತ್ರಿಕ ನಡೆ-ನುಡಿಗಳು ಮತ್ತೊಂದು ರೀತಿಯಲ್ಲಿ ಇರುತ್ತವೆ. ಸಾಮೂಹಿಕ ನಡೆ ಮತ್ತು ನುಡಿಗಳು ಸಾಹಿತ್ಯದಲ್ಲಿ ಕೆಲವು ಆಯ್ಕೆಯನ್ನು ಮಾಡುವಂತೆ ಮಾಡುತ್ತವೆ. ವ್ಯಕ್ತಿ ಮತ್ತು ಅವನ ಬಯಕೆಗಳನ್ನು ನಾವು ಅವನ ಲಿಬಿಡೋ ಪ್ರವೃತ್ತಿಯಿಂದ ನೋಡಬೇಕಾಗುತ್ತದೆ ಅವನಲ್ಲಿ ಅಂದರೆ ಫ್ರಾಯ್ಡನಲ್ಲಿ ನಮಗೆ ಅನೇಕ ವಿವರಣೆಗಳು ದೊರೆಯುತ್ತವೆ. ಮತ್ತು ಅವನು ಅನೇಕವನ್ನು. ವಿವರಣಾತ್ಮಕವಾಗಿ ಮತ್ತು

ವಿಶ್ಲೇಷಣಾತ್ಮಕವಾಗಿಯೂ ನೋಡುತ್ತಾನೆ. ಕನಸು ಮತ್ತು ಅದರ ರಚನೆಯನ್ನು ಅವನು ವಿಶಿಷ್ಟವಾಗಿಯೂ ನೋಡುತ್ತಾನೆ. ಅದರಲ್ಲಿ ಅವನು ಹೆಚ್ಚು ಸಂದರ್ಭವನ್ನು ಗಮನಿಸುತ್ತಾನೆ. ಅದರ ಹಿಂದೆ ಇರುವ ಸಂವೇದನೆಯು ಅವನಿಗೆ ಬಹಳ ಮುಖ್ಯವಾಗುತ್ತದೆ. ಅವನ ಪ್ರಕಾರ ಲಿಬಿಡೋ ಅನ್ನುವುದು ಮೂಲಭೂತವಾಗಿ ಸ್ವಾಯತ್ತವಲ್ಲ. ಅದು ಸಂಸ್ಕೃತಿಯನ್ನು ಹೇಳುತ್ತದೆ. ಮತ್ತು ಅದರಲ್ಲಿ ಸಾಮಾಜಿಕ ಜೀವನದ ಅರ್ಥವೂ ಇರುತ್ತದೆ. ಈ ದೃಷ್ಟಿಯಿಂದ ಮನೋವೈಜ್ಞಾನಿಕ ವಿಮರ್ಶೆಯು ನಮಗೆ ಅನೇಕವನ್ನು ಸೂಚಿಸುತ್ತದೆ. ಅದು ಕೆಲಸವನ್ನು ಸಂಪೂರ್ಣವಾಗಿಯೂ ಗಮನಿಸುತ್ತದೆ. ಯಾವುದೇ ಪರಿಶೀಲನೆಗೆ ವಿವರಣೆಯು ಬೇಕಾಗುತ್ತದೆ. ವಾಸ್ತವ ಮತ್ತು ಅದರ ಅಧ್ಯಯನವೆಂದರೆ ವ್ಯಕ್ತಿ ಮತ್ತು ಅವನ ಕ್ರಿಯೆ ಮತ್ತು ಅವನ ಹಿಂದೆ ಇರುವ ಸಮಾಜದ ಪರಿಶೀಲನೆಯೂ ಹೌದು.

ವಾಸ್ತವದ ಅಧ್ಯಯನವು ಈ ದೃಷ್ಟಿಯಿಂದ ಬೇರೆ ಬೇರೆ ಅನ್ವಯಿಕತೆಯನ್ನು ಹೇಳುತ್ತದೆ. ವಾಸ್ತವ ಮತ್ತು ಅದರ ಕ್ರಿಯೆಗಳಲ್ಲಿ ಈ ದೃಷ್ಟಿಯಿಂದ ಭಿನ್ನವಾದ ಒಂದು ಸಂಗತಿಯನ್ನು ಹೇಳುತ್ತದೆ. ನಾವು ರಚನೆಯನ್ನು ಮಾಡುತ್ತೇವೆ ಎಂದರೆ ಅದರ ಹಿಂದೆ ಕ್ರಿಯೆಯೂ ಇದೆ ಎಂದೇ ಅರ್ಥವಾಗುತ್ತದೆ. ರಚನೆಯು ಒಂದು ಬಗೆಯಲ್ಲಿ ನಿರ್ದಿಷ್ಟವಾದ ಚಟುವಟಿಕೆಯೂ ಹೌದು. ಯಾವುದೇ ಜ್ಞಾನವು ಇಲ್ಲದೆ ಯಾವುದೆ ಕ್ರಿಯೆಯು ಅಸಾಧ್ಯ. ಮತ್ತು ನಾವು ನಮಗೆ ಬೇಕಾದ ರಚನೆಗಳನ್ನು ಮಾಡುತ್ತೇವೆ. ಸಮಾಜವು ಈ ರೀತಿಯ ಅನೇಕ ಕ್ರಿಯೆಗಳನ್ನು ಹೊಂದಿರುತ್ತವೆ. ಅನುಭವದ ಮೂಲಕ ಜ್ಞಾನವನ್ನು ಕಾರಂತರು ಹೇಳುತ್ತಾರೆ

"ಇಷ್ಟರಲ್ಲಿ, ಉತ್ಸವದ ಕಾರ್ಯಕ್ರಮ ತೊಡಗಿತು. ರಾಷ್ಟ್ರಗೀತೆಯನ್ನು ಹಾಡಿದರು. ಹಿಂದೀಯರ ಒಕ್ಕೊರಳ ಗೀತೆ ಒಂದು ಕ್ಷಣಕ್ಕೆ ಆ ಆವರಣವನ್ನು ತುಂಬಿಕೊಂಡು, ಗಂಭೀರತೆಯನ್ನು ಉಂಟುಮಾಡಿತು. ಮೊದಲೇ ನಿಶ್ಚಯವಾದಂತೆ, ಲಂಡನ್ ವಿಶ್ವವಿದ್ಯಾಲಯದ ಇಂಡಾಲಜಿ ಪ್ರಾಧ್ಯಾಪಕರೊಬ್ಬರು ಅಧ್ಯಕ್ಷರಾಗಿ ಕುಳಿತರು. ಹತ್ತೆಂಟು ಜನಗಳಿಗೆ ಆ ದಿನ ತಮ್ಮ ಸಂತೋಷವನ್ನು ತೋಡಿಕೊಳ್ಳುವ ಹಂಬಲವಾಗಿತ್ತು. ಹಾಗೆ ಭಾಷಣ ಮಾಡಿದವರಲ್ಲಿ ನವೀನ ಚಟರ್ಜಿಯೂ ಒಬ್ಬ. ಬಂಗಾಳ ವಿಭಜನೆಯ ಕಾಲದಿಂದ ಅಂದಿನ ತನಕ ನಡೆದ ಸ್ವಾತಂತ್ರ್ಯ ಹೋರಾಟದ ಸ್ಥೂಲ ಚಿತ್ರವನ್ನು ಅವನು ಕೊಟ್ಟ. ಅಧ್ಯಕ್ಷರ ಕಣ್ಣು ಸನ್ನೆಯ ಆಮಂತ್ರಣದಿಂದ ಅಲ್ಲಿದ್ದ ಎಮಿಲಿಯೂ ನಾಲ್ಕು ಮಾತು ಆಡುವುದಕ್ಕೆ ಬಂದು ನಿಂತಳು. "ಇದು ನನ್ನ ಜೀವನದಲ್ಲಿ ಅತ್ಯಂತ ಪ್ರಿಯವಾದ ದಿನ. ಇಂತಹ ದಿನ ಬಂದೀತು, ಬರಬೇಕು ಎಂದು ಬಯಸಿದವಳು ನಾನು. ಎರಡು ಮಹಾ ಜನಾಂಗಗಳಲ್ಲಿ ಬೆಳೆದು ಬಂದಿದ್ದ

ವೈಮನಸ್ಸು ನಾಶವಾಗಿ, ಪೌರ್ವಾತ್ಯ, ಪಾಶ್ಚಾತ್ಯ ದೇಶಗಳೊಳಗೆ ಸೌಹಾರ್ದ ಬೆಳೆಯುವುದಕ್ಕೆ ತಕ್ಕುದಾದ ಒಂದು ಹೊಸ ಯುಗವೇ ಇಂದು ಕಾಲಿರಿಸಿದೆ. ಭಾರತದ ಮೇಲಿನ ಪ್ರಭುತ್ವವನ್ನು ಬಿಟ್ಟುಕೊಟ್ಟ ಬ್ರಿಟನಿಗೂ ಇದರಿಂದ ಕೀರ್ತಿಯಿದೆ, ತನ್ನ ದೇಶದ ಸೂತ್ರಗಳನ್ನು ತಾನು ನಡೆಯಿಸಿಕೊಂಡು ಹೋಗಬಹುದಾದ ಭಾಗ್ಯ ಗಳಿಸಿದ ಭಾರತಕ್ಕೂ ಇದರಿಂದ ಶ್ರೇಯಸ್ಸಿದೆ" ಎಂದು ಮೊದಲಾಗಿ ಒಳ್ಳೆಯ ಮಾತುಗಳನ್ನಾಡಿದಳು. {ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ–10; ಒಡಹುಟ್ಟಿದವರು; ಕಾದಂಬರಿ–09; ಪು.ಸಂ.254}

ಬಂಡವಾಳದ ರಚನೆಯು ವ್ಯಕ್ತಿಗಳನ್ನು ನೋಡುವುದು ಮತ್ತು ಗ್ರಹಿಸುವುದು ಒಂದು ರೀತಿಯಲ್ಲಿ. ಕೆಲವು ನಿಯಮಗಳು ಮತ್ತೆ ಮತ್ತೆ ಯಾಕೆ ಬರುತ್ತವೆ ಎಂದರೆ ಅದರಲ್ಲಿ ಕೆಲವು ಸಾರ ರೂಪಗಳು ಇರುತ್ತವೆ. ರಚನೆ ಮತ್ತು ನಿರಚನೆಯು ಸಹಜವಾಗಿಯೂ ನಡೆಯುತ್ತದೆ. ಒಂದು ರಚನೆಯು ಮತ್ತೊಂದು ರಚನೆಗೆ ಕಾರಣವೂ ಆಗುತ್ತದೆ. ಆದ್ದರಿಂದ ರಚನೆ ಮತ್ತು ಅದರ ವ್ಯತ್ಯಾಸಗಳೂ ಅಧ್ಯಯನ ಯೋಗ್ಯವಾಗಿವೆ. ರಚನೆಗಳನ್ನು ಸಮಾಜವು ಬದಲಿಸುತ್ತದೆ. ಮತ್ತು ತನಗೆ ಬೇಕಾದ ರಚನೆಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಅದು ಪರಿವರ್ತನೆಯನ್ನು ಮಾಡುತ್ತದೆ. ವಾಸ್ತವವಾಗಿ ಅನೇಕ ರಚನೆಗಳು ತಾತ್ಕಾಲಿಕವಾದ ವಿಷಯವನ್ನು ಹೊಂದಿರುತ್ತದೆ. ಅನೇಕ ರಚನೆಗಳು ಪರಿವರ್ತನೆ ಮತ್ತು ಮುಂದುವರಿಕೆಯನ್ನು ಬೇರೆ ಬೇರೆ ವಿಧದಲ್ಲಿ ಮಾಡುತ್ತವೆ. ಅದರ ಹಿಂದೆ ಸಂವೇದನೆ ಮತ್ತು ಆಲೋಚನೆಗಳು ಇರುತ್ತವೆ. ಅನೇಕರು ಆಧುನಿಕ ರಚನೆಗಳನ್ನು ಓದುವಾಗ ಅದರ ಉದ್ದೇಶವನ್ನು ಗ್ರಹಿಸುವುದೇ ಇಲ್ಲ. ಹಾಗೆ ನೋಡುವುದಿದ್ದರೆ ಭಾಷೆ ಮತ್ತು ಅದರ ರಚನೆಗಳೇ ವಿಶ್ವಾತ್ಮಕವೂ ಆಗುತ್ತದೆ. ರಚನೆಗೆ ಇರುವ ಚಾರಿತ್ರಿಕತೆಯೂ ಈ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತದೆ. ರಚನೆಯೂ ಕೆಲವು ಮಾದರಿಯ ಸಂವಹನವನ್ನು ಹೇಳುತ್ತವೆ. ಮತ್ತು ಅನೇಕ ರಚನೆಗಳಿಗೆ ವೈಜ್ಞಾನಿಕವಾದ ಅಂಶಗಳೂ ಇರುತ್ತವೆ. ಅದರೆ ಅದರ ಸ್ವರೂಪದಲ್ಲಿಯೇ ಅನೇಕ ಅಂಶಗಳು ಇರುತ್ತವೆ. ಕೃತಿಯೊಂದರ ವಿವರಣೆಯನ್ನು ಮಾಡುವುದು ಎಂದರೆ ಅದರ ರಚನೆಯನ್ನು ಮಾತ್ರವೇ ನೋಡುವುದು ಅಲ್ಲ. ಅದರ ಆಶಯವನ್ನು ನಾವು ಗಮನಿಸಬೇಕಾಗುತ್ತದೆ. ಇಲ್ಲಿ ಮಹಾಕಾವ್ಯ ಮತ್ತು ಅದರ ರಚನೆಯನ್ನು ನೋಡಬೇಕು. ಅದು ವಿಸ್ತಾರವಾಗಿರುತ್ತದೆ. ಮತ್ತು ಅದು ಕಾದಂಬರಿಗಿಂತ ಬೇರೆಯೂ ಆಗಿರುತ್ತದೆ. ನಮ್ಮ ಕೆಲಸ ಮತ್ತು ಅದರ ಸ್ವರೂಪವನ್ನು ನಿರ್ಧರಿಸಿಕೊಳ್ಳುವಾಗ ರಚನೆಯ ಭಿನ್ನತೆಯೂ ಬಹಳ ಮುಖ್ಯವಾದ ಸಂಗತಿಯೂ ಆಗುತ್ತದೆ. ಆದರೆ ಕಾಂಟ್ ಮತ್ತು ಅವನ ಕೆಲಸವನ್ನು

ನೋಡಲು ನಮಗೆ ಅವನ ಲಾಂಡ್ರಿಬಿಲ್ ಉಪಯೋಗಕ್ಕೆ ಬರುತ್ತದೆ ಎಂದು ಅರ್ಥವೂ ಅಲ್ಲ. ನಮಗೆ ಎದುರಾಗಿರುವ ವಾಸ್ತವ ಮತ್ತು ಅದರ ಕುರಿತಾದ ಚಿಂತನೆಗಳು ಮಾಡುವುದಕ್ಕೆ ರಚನೆಯ ಅರಿವು ಇರಬೇಕಾಗುತ್ತದೆ. ವಾಸ್ತವವಾದ ರಚನೆಯೂ ಅದನ್ನು ಹೇಗೆ ಅರ್ಥ ಮಾಡುತ್ತೇವೆ ಎನ್ನುವುದನ್ನು ಸೂಚಿಸುತ್ತದೆ. ಮಗ ಪಡೆದ ಮನ ಕಾದಂಬರಿಯ ಮುಖ್ಯ ಆಶಯವು ಕಲಾವಿದರ ಜೀವನ ವೃತ್ತಾಂತವನ್ನು ಆಧರಿಸಿದೆ.

ಬರಹ ಮತ್ತು ಅದರ ಸಾಮಾಜಿಕತೆಯನ್ನು ಕುರಿತು ಮಾತಾಡುವವರು ಇದನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವೂ ಇದೆ. ಸಂಶೋಧಕನೂ ಇದನ್ನು ಗ್ರಹಿಸಬೇಕಾಗುತ್ತದೆ. ವಾಸ್ತವವಾಗಿ ತನ್ನ ಮನೋಸ್ಥಿತಿಗೆ ಅನುಗುಣವಾಗಿ ನಾವು ಅನೇಕವನ್ನು ನೋಡುತ್ತೇವೆ. ನಮ್ಮ ಗ್ರಹಿಕೆ ಮತ್ತು ನಮ್ಮ ಮನೋಸ್ಥಿತಿಗೆ ಕೆಲವು ರೀತಿಯ ಸಂಬಂಧಗಳೂ ಇರುತ್ತವೆ. ನಮಗೆ ಸಮಾಜ ಮತ್ತು ಅದರ ಪರಿಜ್ಞಾನವು ಇದ್ದಾಗ ನಾವು ಕೃತಿಯನ್ನು ನೋಡು ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತವೆ. ನಮಗೆ ಅತ್ಯಂತ ಅಗತ್ಯವಾಗಿ ಬೇಕಾಗಿರುವುದು ನಮ್ಮ ಸಮಾಜ ಮತ್ತು ಅದರ ಚರಿತ್ರೆಯ ಅರಿವು. ಈ ಅರ್ಥದಲ್ಲಿ ನಾವು ಸಮಾಜವನ್ನು ವೈಜ್ಞಾನಿಕವಾಗಿಯೂ ನೋಡಬೇಕಾಗುತ್ತದೆ. ಮತ್ತು ಅದರಲ್ಲಿ ನಾವು ಭಾವುಕತೆಯನ್ನು ಮಿಶ್ರ ಮಾಡಲು ಬರುವುದೂ ಇಲ್ಲ. ನಮ್ಮ ಮನೋಸ್ಥಿತಿ ಮತ್ತು ಅದರ ವರ್ಗವೂ ನಮಗೆ ಮುಖ್ಯವಾಗುತ್ತದೆ. ಸಾಮಾಜಿಕ ಜ್ಞಾನ ಮತ್ತು ಅದರ ಸ್ವರೂಪವು ನಮಗೆ ಅತ್ಯಂತ ಅಗತ್ಯವೂ ಆಗುತ್ತದೆ. ನಾವು ನಮ್ಮ ಸಾಮಾಜಿಕ ಜ್ಞಾನವನ್ನು ಮಾತ್ರವೇ ಸರಿಯಾಗಿಯೂ ಗ್ರಹಿಸಬೇಕಾಗುತ್ತದೆ. ಆಲೋಚನೆ ಮತ್ತು ಸಾಹಿತ್ಯಕ್ಕೆ ಸಂಬಂಧವಿರುವುದನ್ನು ನಾವು ಗಮನಿಸಲೇಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಚರಿತ್ರೆ ಮತ್ತು ಸಮಾಜದಿಂದ ಬಂದಿದೆ. ಸಾಮಾಜಿಕ ಜೀವನವು ಒಂದು ಬಗೆಯ ಪ್ರಜ್ಞೆಯನ್ನು ಕೊಡುತ್ತದೆ. ವ್ಯಕ್ತಿಯ ಪ್ರಜ್ಞೆಯು ಮತ್ತೊಂದು ಬಗೆಯದು. ವ್ಯಕ್ತಿಯೆಂದರೆ ಅವನು ಸಾಮಾಜಿಕ ರೂಪದ ಸಾರವೂ ಹೌದು. ಸಮಾಜದ ಅನೇಕ ಚಟುವಟಿಕೆಗಳು ನಮ್ಮನ್ನು ರೂಪಿಸುತ್ತವೆ. ಮತ್ತು ಅದರ ಜೊತೆಗೆ ನಾವು ನಮ್ಮ ಪ್ರಜ್ಞೆಯನ್ನು ರೂಪಿಸಿಕೊಂಡು ಇರುತ್ತೇವೆ. ಸಾಮಾಜಿಕತೆಯು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದೂ ಹೌದು. ಸಮಾಜ ಮತ್ತು ವ್ಯಕ್ತಿಯ ನಡುವೆ ಒಂದು ಬಗೆಯ ಸಮತೋಲನವೂ ಇರಬೇಕಾಗುತ್ತದೆ. ಆದ್ದರಿಂದ ವ್ಯಕ್ತಿಯ ಮನೋಸ್ಥಿತಿಯು ಅತ್ಯಂತ ಸಂಕೀರ್ಣವೂ ಆಗಿರುತ್ತದೆ. ಈ ಕಾದಂಬರಿಗೊಂದು ಪ್ರಸ್ತಾವನೆ ಅವಶ್ಯವೇ-ಎಂದು ಕೇಳಿದರೆ, ಬಾಳಿನ ಒಂದು ನಿಗೂಢವಾದ ಸಮಸ್ಯೆಗೆ

ಪ್ರಸ್ತಾವನೆ ಬರೆಯುವ ಪ್ರಯತ್ನ–ಅನ್ನಬೇಕಾಗಿದೆ. ಇದೇ ವಿಷಯದಲ್ಲಿ ಕಳೆದ ವರ್ಷ ಒಂದು ಕಾದಂಬರಿ ಬರೆಯುವ ಪ್ರಯತ್ನ ನಡೆಸಿದೆ. ನಾಲ್ಕು ಅಧ್ಯಾಯಗಳನ್ನು ಬರೆದು ಮೂಲೆಗೆ ಹಾಕಿದೆ – ಅದು ತನ್ನಂತೆ ಗಿಡವಾಗಿ ಬೆಳೆದು ಹೂತಳೆಯಲಿಲ್ಲ ಎಂಬುದರಿಂದ. ಈ ಬಾರಿ ಆ ನೆನಪಿಂದಲೇ ಬರೆದೆ. ಬರೆದುದರಿಂದ ಸಮಾಧಾನವಾಗಿದೆ. ಕತೆ ಒಬ್ಬಳು ವಾರಾಂಗನೆಯ ಸುತ್ತುವರಿಯುವಂಥದು. ಹಿಂದೆ 'ಸೂಳೆಯ ಸಂಸಾರ' ಎಂಬ ಕಾದಂಬರಿಯನ್ನು ಕುರಿತು ಬಾಳನ್ನು ಸಮಾಜ ಸುಧಾಕರನ ದೃಷ್ಟಿಯಿಂದ ಬರೆದುದುಂಟು. ಅದರ ಎರಡನೆಯ ಆವೃತ್ತಿಗೆ 'ಕನ್ಯಾಬಲಿ' ಯೆಂದು ಹೆಸರಿಸಿದ್ದುಂಟು–ಪ್ರಕಾಶಕರು ಮೊದಲು ಕೊಟ್ಟ ಹೆಸರಿಗೆ ಅಂಜಿದರೆಂದು.

ಅನಂತರ ಗಂಡು, ಹೆಣ್ಣಿನ ನಿಕಟವರ್ತಿ ಬಾಳನ್ನು ವಿವೇಚಿಸಿ ಇನ್ನೇನೋ ಒಂದು ಕಾದಂಬರಿಯನ್ನು ಬರೆದ ನೆನಪಿದೆ. ಆದರೂ ತಿರುಗಿ ಅದೇ ವಿಷಯವನ್ನು ಗಂಡು–ಹೆಣ್ಣುಗಳ ಮೈಮನಗಳ ಸಂಬಂಧದ ಚೆಲುವು, ಅಸಹ್ಯಗಳನ್ನು – ಇಲ್ಲಿ ಮಂಜುಳೆಯೆಂಬ ಒಬ್ಬಳು 'ಗರತಿ'ಯಲ್ಲದವಳ ಬಾಳಿನ ಮುಖದಿಂದ ಚಿತ್ರಿಸಲು ಪ್ರಯತ್ನಿಸಿದ್ದೇನೆ. ವಿಷಯ ದೇಹಚರೆಗೆ ಸಂಬಂಧಿಸಿದಾಗ ಓದುಗರ ಕುತೂಹಲ ಸ್ವಾಭಾವಿಕವಾಗಿಯೇ ಕೆರಳುತ್ತದೆ. ನಿಸರ್ಗದತ್ತ ಪ್ರೇರಣೆಯನ್ನು ಸಾವಿರದಲ್ಲಿ ಒಬ್ಬ ಕಳಚಿಕೊಂಡು ಸುಖಿಯಾಗಿರಬಲ್ಲನೋ ಏನೋ! ಆತ ಸುಖಿಯಾದಾನು– ಎಂದೂ ನನಗೆ ಇಂದು ಅನಿಸುತ್ತಲಿಲ್ಲ. ಆ ಮಟ್ಟಿಗೆ ಮನುಷ್ಯನೂ ಒಬ್ಬ ಪ್ರಾಣಿಯೇ. ಅವನಲ್ಲಿರುವ ಹೆಣ್ಣು, ಗಂಡು ಪ್ರವೃತ್ತಿಗಳು ಅವನಿಗಾಗಿಲ್ಲ. ಕುಲ ಪರಂಪರೆಯನ್ನು ಮುಂದುವರಿಸುವ ನಿಸರ್ಗದ ಇಚ್ಛೆಗೆ ಅದು ಸೇರಿದ್ದು. ಅದರ ಒತ್ತಡವನ್ನು ಅಳೆಯುವುದು ಕಠಿಣ: ಅದನ್ನು ಹೀಯಾಳಿಸುವವರಿಗೂ ನಿಲುಕದ ಶಕ್ತಿ ಅದರದು.

ಆದರೆ ಮನುಷ್ಯ ಬರಿಯ ಪಶುವಲ್ಲವಷ್ಟೆ! ಆತ ಮನೋದೇಹಿ, ಈ ಎರಡರ ಸಂಯೋಗ ಯಾವೆಲ್ಲ ರೀತಿಗಳಲ್ಲಿ ಪ್ರಕಟಗೊಳ್ಳಬಹುದು? ಸಾವಿರಾರು ಅಲ್ಲ ಕೋಟಿಗಟ್ಟಲೆ ದೇಹ, ಮನಸ್ಸುಗಳ ವ್ಯಾಪಾರಗಳು, ಲೀಲೆಗಳು ಉತ್ತರಿಸುತ್ತಿರುವ, ಉತ್ತರಿಸಬೇಕಾದ ಪ್ರಶ್ನೆಗಳವು. ಅಂಥ 'ಕೋಟಿ'ಯಲ್ಲಿ ಸೇರಿದವನು ನನ್ನಂಥ ಒಬ್ಬ ವ್ಯಕ್ತಿ. ನನ್ನನ್ನು ನಾನು ತಿಳಿದದ್ದರಿಂದ ಅನ್ಯ ಮನೋದೇಹಿಗಳ ವ್ಯಾಪಾರ ತಿಳಿಯಿತು ಎಂಬ ದುಡುಕು ನನಗಿಲ್ಲ.

ಎಳೆಯನಾಗಿದ್ದಾಗ–ನನ್ನ ಸಮಾಜದ ಕೆಲಕೆಲವರು ನಡೆಯಿಸಿದ ಬದುಕನ್ನು ಕುರಿತು ಕೇಳಿದ್ದ. ಅದಕ್ಕೆ ಸಂಬಂಧಿಸಿದವರನ್ನು ಕಂಡಿದ್ದೆ. ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಆ ಕಾಲಕ್ಕೆ ಇಲ್ಲದ್ದರಿಂದ ಸೂಳೆಯರ ಕುಲವನ್ನು ತಾತ್ಸಾರದಿಂದಲೂ ಕಂಡಿದ್ದೆ.

ಮುಂದೊಂದು ಕಾಲದಲ್ಲಿ, ಜನನಿಂದನೆಗೆ ಗುರಿಯಾದ ಆ ಕುಲದ ಹುಡುಗನೊಬ್ಬನ ಗುರುತಾಗಿ, ಸಮಾಜದ ಕೊಳೆಯನ್ನು ತೊಳೆಯಲು ಸಾಧ್ಯವಾದ ಪ್ರಯತ್ನ ಮಾಡಿದೆ. ಆಗ ಅದೇ ಕುಲದ ಎಳೆಯರನ್ನು ಕಂಡೆ; ಅವರ ಹಿರಿಯರನ್ನೂ ಕಂಡೆ: ಮದುವೆಗೆ ಹಂಬಲಿಸಿದವರನ್ನು ಕಂಡೆ. ತಮ್ಮನ್ನಿಸಿರಿಕೊಂಡವರನ್ನು ಕೈಹಿಡಿದ ಹೆಂಡಿರಿಗಿಂತಲೂ ಹೆಚ್ಚಾಗಿ ನಡೆಯಿಸುತ್ತ ಬಾಳಿದವರನ್ನೂ ಕಂಡೆ.

ಒಂದು ಮನೆಯ ಕೊಳೆಯನ್ನು ತೊಳೆಯುವೆನೆಂದು ಹೊರಟಾಗ ಅಲ್ಲಿದ್ದ ಐದಾರು ಬಾಲಕಿಯರು ಗೃಹಿಣಿಯರಾದರು. ಅವರ ತಾಯಿಯನ್ನಿರಿಸಿಕೊಂಡ ಸದ್ಗೃಹಸ್ಥನ ಸ್ವಂತ ಮಗಳು ಬೇರೆಯೇ ಹಾದಿಯನ್ನು ಹಿಡಿದಳು! ನನ್ನನ್ನು ಚಕಿತಗೊಳಿಸಿತು ಈ ಅನುಭವ.

ಅನುಭವ ಹೆಚ್ಚಿ, ಸಾಮಾಜಿಕ ನೆರೆಕರೆಯನ್ನು ಕಂಡು ಬೆಳೆದಷ್ಟು–ಗಂಡು ಹೆಣ್ಣಿನ ಪ್ರಶ್ನೆಯನ್ನು ಒಂದೇ ಅಳತೆಗೋಲಿಂದ ಅಳೆಯಲು ಬರಲಾರದು ಎನಿಸಿತು. ನನ್ನ ವಿಸ್ತಾರ ಓದು, ದೇಶ ದೇಶಗಳ, ಕಾಲ ಕಾಲಗಳ, ಸಮಾಜ, ಸಮೂಹಗಳನ್ನು ಕುರಿತು ಓದಿ ತಿಳಿದ ಇತಿಹಾಸವೂ ಅದನ್ನೇ ಒತ್ತಿ ಹೇಳಿತು.

ಕನ್ನಡಕವನ್ನು ಹಣೆಯ ಮೇಲೇರಿಸಿ. ಮೂಗಿನ ಕೆಳಗಿರುವ ತನ್ನನ್ನು ಮರೆತು, ಈ ಪ್ರಶ್ನೆಯನ್ನು ನೋಡುವವನಿಗೆ ಅದರ ತಳ ಕಾಣಸಿಗದು ಅನಿಸಿತು!

ಅಂಥ ನೋಟದ, ನನ್ನ ಪಾಲಿನ ಸಾಕಷ್ಟು ನಿರೀಕ್ಷಣೆಯ ಒಂದು ಫಲವೇ ಈ ಕಾದಂಬರಿ, (ಮೈಮನಗಳ ಸುಳಿಯಲ್ಲಿ, ಪ್ರಥಮ ಮುದ್ರಣ–1970, ಪ್ರ : ಪುತ್ತೂರು, ಹರ್ಷ ಮುದ್ರಣ, ಪ್ರಕಟಣಾಲಯ. ಮೊದಲ ಮಾತು ಪುತ್ತೂರು, ದ.ಕ. 02–9–0520)

ವ್ಯಕ್ತಿಯು ಅನ್ಯರಿಗೆ ಅನೇಕವನ್ನು ಹೇಳುತ್ತಾನೆ. ಅನೇಕರಿಂದ ಕಲಿಯುತ್ತಾನೆ. ಮತ್ತು ಬೆಳೆಯುತ್ತಾನೆ. ಅವನಿಗೆ ಅದು ಅಗತ್ಯವೂ ಆಗಿರುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಈ ದೃಷ್ಟಿಯಲ್ಲಿ ಸ್ವಯಂಸಂಪೂರ್ಣವಲ್ಲ. ಅದು ಸಂವಾದಿಯಾದುದು ಹೌದು. ಜ್ಞಾನಕ್ಕೂ ನಮ್ಮ ಪ್ರಜ್ಞೆಗೂ ಒಂದು ಸಂಬಂಧವಿದೆ. ಸಮಾಜವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ನಾವು ಸಮಾಜವನ್ನು ಜ್ಞಾನದ ಮೂಲಕ ಅರಿಯುವುದೂ ಹೌದು. ಆದ್ದರಿಂದ ವ್ಯಕ್ತಿ ಮತ್ತು ಅವನ ತಿಳುವಳಿಕೆಯು ಅತ್ಯಂತ ಮಹತ್ವದ್ದೂ ಹೌದು. ಘಟನೆ ಮತ್ತು ಅದರ ಮೌಲ್ಯಕ್ಕೆ ಸಂಬಂಧವು ಇರುವುದರಿಂದ ನಾವು ಅನೇಕವನ್ನು ಈ ಮೂಲಕವೇ ಗ್ರಹಿಸಬೇಕಾಗುತ್ತದೆ. ಭೌತಿಕ ಮತ್ತು ಬೌದ್ಧಿಕ ಸಂಗತಿಗಳು ನಮಗೆ ಮತ್ತು ನಮ್ಮ ಪ್ರಜ್ಞೆಗೆ ಹೊಸ

ಆಯಾಮವನ್ನು ಕೊಡುತ್ತದೆ. ನಾವು ಪ್ರತಿಪಾದಿಸುವ ಮೌಲ್ಯಕ್ಕೂ ಸಾಮಾಜಿಕ ವಾಸ್ತವವಕ್ಕೂ ಸಂಬಂಧವಿದೆ. ಅದರಲ್ಲಿ ಮೌಲ್ಯ, ತೀರ್ಮಾನ, ತಾತ್ವಿಕತೆಗಳು ಸೇರಿಕೊಂಡಿರುತ್ತವೆ. ಒಂದು ಅಧ್ಯಯನಕ್ಕೆ ಇರುವ ಒಳ ಮತ್ತು ಹೊರ ಅಧ್ಯಯನ ಕ್ರಮವನ್ನು ಈ ದೃಷ್ಟಿಯಲ್ಲಿ ನಾವು ಬೇರೆ ಮಾಡಿಕೊಂಡು ನೋಡಬೇಕಾಗುತ್ತದೆ. ಅಧ್ಯಯನಕ್ಕೂ ವಾಸ್ತವವಕ್ಕೂ ಈ ಅರ್ಥದಲ್ಲಿ ಸರಿಯಾದ ಸಂಬಂಧವೂ ಇದೆ. ಅದು ಸಮೂಹವೂ ಹೌದು ವ್ಯಕ್ತಿ ಕೇಂದ್ರಿತವೂ ಹೌದು. ವಿಷಯ ಮತ್ತು ಪರಿಸರಕ್ಕೂ ಈ ದೃಷ್ಟಿಯಿಂದ ಸಂಬಂಧವಿದೆ. ಅದನ್ನು ನಾವು ನೋಡಬೇಕಾಗುತ್ತದೆ. ಆದರೆ ಇಲ್ಲಿ ಮತ್ತೆ ಕೆಲವು ಸೂಕ್ಷ್ಮವಾದ ಪ್ರಶ್ನೆಗಳೂ ಇವೆ. ಮನೋರಚನೆಗೂ ವಿಶ್ವಾತ್ಮಕತೆಗೂ ಒಂದು ಸಂಬಂಧವಿದೆ. ಯಾವುದೇ ಲೋಕ ದೃಷ್ಟಿಯನ್ನು ನಾವು ಈವತ್ತು ವ್ಯಕ್ತಿಯನ್ನು ಆಧರಿಸಿಕೊಂಡು ಮಾಡುವುದು ಕಷ್ಟದಾಯಕವಾಗಿದೆ. ಅಂದರೆ ವ್ಯಕ್ತಿಯ ಮನೋಸ್ಥಿತಿಯೂ ರಚನೆಯೇ ಆಗಿದೆ. ಅದಕ್ಕೆ ಕೆಲವು ನಿಯಮಗಳು ಇರುತ್ತವೆ. ನಿಯಮವನ್ನು ಈವತ್ತು ನಾವು ವಿರೋಧಿಸುವ ಸ್ಥಿತಿಯಲ್ಲಿ ಇಲ್ಲ. ನಿಯಮವನ್ನು ನಾವು ಮಾಡಿಕೊಂಡಿದ್ದೇವೆ. ಅದು ನಮ್ಮ ಅಗತ್ಯವೂ ಆಗಿರುವುದು ನಿಜ. ಸಿದ್ಧಾಂತವೂ ಯಾಕೆ ಮಹತ್ವದ್ದು ಆಗಿದೆಯೆಂದರೆ ಈ ಕಾರಣಕ್ಕೆ. ಅದು ಲೋಕವನ್ನು ನೋಡಲು ಒಂದು ಬುನಾದಿಯನ್ನು ಹಾಕುತ್ತದೆ. ಸಿದ್ಧಾಂತವು ಮತ್ತೊಂದನ್ನು ರೂಪಿಸುತ್ತದೆ. ಅದು ಮೌಲ್ಯವನ್ನು ಹೇಳುತ್ತದೆ. ಮತ್ತು ಅದರಲ್ಲಿ ಲೋಕವನ್ನು ಕಾಣಲು ಬೇಕಾದ ಒಂದು ನಿಲುವೂ ಇರುತ್ತದೆ. ಆದರೆ ಸೃಜನಶೀಲತೆಯು ನಮಗೆ ಮತ್ತೆ ಕೆಲವು ಅಂಶಗಳನ್ನು ಪ್ರತಿಪಾದಿಸುತ್ತವೆ. ಸೃಜನಶೀಲತೆಯೂ ನಮಗೆ ಜೀವನ ಮತ್ತು ಅದರ ಕುರಿತಾದ ವಿಶಿಷ್ಟವಾದ ಧೋರಣೆಯನ್ನು ಹೇಳುತ್ತದೆ. ಆದರೆ ಸಮೂಹ ಜೀವನದ ಪ್ರಜ್ಞೆಯು ನಮಗೆ ಅನೇಕವನ್ನು ತೋರಿಸಿಕೊಡುತ್ತದೆ. ಸಮೂಹ ಪ್ರಜ್ಞೆಯು ನಮಗೆ ನಿರ್ದಿಷ್ಟವಾದ ನೋಟವನ್ನು ಹೇಳುತ್ತದೆ. ಸಮಾಜ ಮತ್ತು ಅದರ ತಿಳುವಳಿಕೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಮುನ್ನುಡಿ

ಜನತೆಯಲ್ಲಿ ದೇವರನ್ನು ಕುರಿತಾದ ನಂಬುಗೆ ಬಹುಕಾಲದಿಂದ ಬಂದದ್ದು. ಅವನದೇ ಸೃಷ್ಟಿ ಅವನನ್ನು ತಿಳಿಯುವುದಕ್ಕೆ ಅಡ್ಡಬರುತ್ತದೆ ಎಂಬ ಸಿದ್ಧಾಂತ, ಅನಂತರ ಮೂಡಿತು. ಅಲ್ಲಿಂದ, ಪ್ರಪಂಚದ ಮೇಲಿನ ವೈರಾಗ್ಯವೇ ದೇವರನ್ನು ಕಾಣುವ ಏಕಮಾತ್ರ ಹಾದಿಯೆಂದು, ಹಲವರು ತಿಳಿದರು. ಅಂಥ ಜನರಲ್ಲಿ ಹಲವರು, ಪ್ರಾಪಂಚಿಕವಾದ ಯಾವುದಾದರೊಂದು ನಿರಾಶೆಗೆ ಗುರಿಯಾಗಿ, ಜಗತ್ತಿಗೆ ತಮ್ಮ ಕರ್ತವ್ಯವೇನಿಲ್ಲವೆಂದು ತಿಳಿದು ದೇವರನ್ನು ಅರಸಿ ಹೋಗುವುದೂ ಉಂಟು. ಅಂಥವರು ತಮ್ಮ ಮನಸ್ಸಿಗೆ ಒಪ್ಪುವ ದೇವರನ್ನೇ ಕಂಡಾರು. ಅವರ

ಅನ್ವೇಷಣೆ ಪ್ರಾಮಾಣಿಕವಾಗಿದ್ದರೂ, ಅಂಥವರು ತಿರುಗಿ ಯಾವುದೇ ಸೋಗಿನಲ್ಲಿ ಪ್ರಪಂಚವನ್ನು ಸೇರಿದರೂ, ಲೌಕಿಕರಿಗಿಂತ ಹೆಚ್ಚಿನ ಭೋಗಿಗಳಾಗಿ ಬಿಡುತ್ತಾರೆ. ಬಿಟ್ಟುಹೋದ ಸಂಸಾರಕ್ಕೇ, ಬೇರೆ ಹೆಸರಿರಿಸಿ ಪ್ರಾಪಂಚಿಕ ವಾಸನೆಗಳನ್ನು ಅನುಭವಿಸುತ್ತಾರೆ. ಇಂತಹ ಆತ್ಮವಂಚನೆ ನಮ್ಮ ದೇಶದಲ್ಲಿ ಬಹುಕಾಲದಿಂದಲೂ ನಡೆದು ಬಂದಿದೆ.

ಮೊದಲು ಇದ್ದ ಬಾಳಿನ ಕಹಿ, ಸಿಹಿಗಳನ್ನೆಲ್ಲ ಉಂಡು, ಅನುಭವಿಸುವುದನ್ನೆಲ್ಲ ಅನುಭವಿಸಿ, ತಮ್ಮ ದೈವತ್ವದ ಕಲ್ಪನೆಯನ್ನು ಸುತ್ತಲಿನ ಪ್ರಪಂಚಕ್ಕೂ ಹರಡಿ, ಅದೂ ದೇವರೇ ಎಂಬುದನ್ನು ನಂಬಿ ನಡೆಯುವ ಜನ, ಪ್ರಾಪಂಚಿಕರೆನಿಸಿದರೂ ವೈರಾಗ್ಯದ ಸೋಗು ಹಾಕುವವರಿಗಿಂತ ನೂರು ಮಡಿ ಮೇಲೆಂದು ನನಗನಿಸುತ್ತದೆ. ಇಲ್ಲಿ ಅಂಥ ಎರಡು ಜೀವಿಗಳ ಚಿತ್ರವನ್ನು ಕೊಡಲು ಯತ್ನಿಸಿದ್ದೇನೆ. ದೇವರ ದಾಸರಾಗಲು ಹೋಗಿ ತಾವೇ ದೇವರೆಂದು ನಟಿಸತೊಡಗುವ ಜನಕ್ಕೂ, ಮಾಯಿಯಂತಹ ಪ್ರಾಮಾಣಿಕ ಭಕ್ತಳಿಗೂ ಇರುವ ತಾರತಮ್ಯ ಬಹಳ. ಒಬ್ಬರ ತತ್ವಜ್ಞಾನ ತನ್ನ ಸುತ್ತಣ ಜಗತ್ತಿನ ವಂಚನೆ; ಇನ್ನೊಬ್ಬರದು ತನ್ನ ಮತ್ತು ಜಗತ್ತಿನ ಸುಖಸಾಧನೆ. ಇವರಿಬ್ಬರಲ್ಲಿ ಯಾರು ಶ್ರೇಷ್ಠರೆಂಬುದು ಸ್ವಯಂ ವ್ಯಕ್ತ.

(ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸನ್ಯಾಸಿಯ ಬದುಕು ಕಾದಂಬರಿ, ಮುನ್ನುಡಿ ಭಾಗ)

ಲೋಕದೃಷ್ಟಿ ಮತ್ತು ಅದರ ಪರಿಣಾಮಗಳು ನಮಗೆ ಪ್ರಭಾವವನ್ನು ಬೀರುವುದೂ ಅಷ್ಟೇ ನಿಜ. ನಾವು ಈ ದೃಷ್ಟಿಕೋನವನ್ನು ನಿಯಂತ್ರಿಸಬೇಕಾದ ಯಾವ ಅಗತ್ಯವೂ ಇಲ್ಲ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವೇ ನಮಗೆ ಬಹಳ ಮುಖ್ಯ. ಆದರೆ ಲೋಕ ದೃಷ್ಟಿಯೆಂದರೆ ಅದು ಆತಾತ್ವಿಕವಾದ ಸಂಗತಿಯೂ ಅಲ್ಲ. ಅದರ ಹಿಂದೆ ಚರಿತ್ರೆ ಮತ್ತು ಅದು ಬೆಳೆದು ಬಂದ ವಿವಿಧ ಕ್ರಮಗಳೂ ಇವೆ. ಕೆಲವು ಸರ್ತಿ ನಾವು ಸಾಮಾನ್ಯವಾದ ಸಂಗತಿಗಳನ್ನು ನೋಡಬೇಕಾಗುತ್ತದೆ. ಅದು ಉದ್ದೇಶಿತವೂ ಹೌದು. ವಿಶಿಷ್ಟವೂ ಹೌದು. ಕೆಲವು ಸಮಾಜ ಮತ್ತು ಅದರ ಸಂಘರ್ಷವನ್ನು ಹೇಳುತ್ತವೆ. ಸಾಮಾಜಿಕ ವರ್ಗ ಮತ್ತು ಲೋಕ ಗ್ರಹಿಕೆಗೆ ಸಂಬಂಧವೂ ಇದೆ. ಕೆಲವು ಸಮಾಜ ಮತ್ತು ಅದರ ಅರಿವನ್ನು ಹೇಳುತ್ತವೆ. ಕೆಲವು ಸಾಮಾಜಿಕ ಘಟನೆಗಳು ಬೌದ್ಧಿಕವಾದ ಚಟುವಟಿಕೆಗೆ ಕಾರಣವೂ ಆಗುತ್ತದೆ. ನಿಸರ್ಗ ಮತ್ತು ಮನುಷ್ಯರ ನಡುವೆ ಇರುವ ಸಮತೋಲನವು ಭಿನ್ನವಾಗಿದೆ. ಮತ್ತು ಅದರ ಅರ್ಥವೂ ಬೇರೆಯಾಗಿದೆ. ನಮ್ಮ ಮಾನಸಿಕ ರಚನೆಗೂ ಬಾಹ್ಯಕ್ಕೂ ಒಂದು ಸಂಬಂಧವಿದೆ.

ಸಮಾಜಕ್ಕೂ ಭೌತಿಕತೆಗೂ ಸಂಬಂಧವಿದೆ, ಆದ್ದರಿಂದ ಅವುಗಳನ್ನು ನಾವು ನಿರ್ದಿಷ್ಟವಾಗಿಯೇ ಗ್ರಹಿಸಬೇಕಾಗುತ್ತದೆ. ಬಾಹ್ಯವು ನಮಗೆ ಪ್ರಭಾವವನ್ನು ಬೀರುತ್ತದೆ. ಉತ್ಪಾದನೆ ಮತ್ತು ಉತ್ಪಾದನೆಯ ಶಕ್ತಿಗಳ ನಡುವಣ ಸಂಬಂಧವನ್ನು ಈ ದೃಷ್ಟಿಯಿಂದಲೇ ಮಾರ್ಕ್ಸವಾದಿಗಳು ವಿವರಿಸುತ್ತಾರೆ. ಸಾಮಾಜಿಕ ಜೀವನ, ಭೌತಿಕ ಅಗತ್ಯಗಳು ಮತ್ತು ಒತ್ತಡಗಳು ಬೇರೆ ಬೇರೆ ಪ್ರಭಾವವನ್ನು ಬೀರುತ್ತವೆ. ಸಾಮಾಜಿಕತೆ ಮತ್ತು ಬರಹದ ನಡುವೆ ಕೆಲವು ರೀತಿಯಲ್ಲಿ ಸಂಬಂಧವು ಇರಬೇಕಾಗುತ್ತದೆ ಎಂದು ಮಾರ್ಕ್ಸವಾದಿಗಳು ಈ ಕಾರಣಕ್ಕೆ ನಂಬುತ್ತಾರೆ. ಅನೇಕ ಸಂದರ್ಭದಲ್ಲಿ ನಮಗೆ ವಿವರಣೆಗಳೂ ಅಗತ್ಯವಾಗುವುದು ಈ ಕಾರಣಕ್ಕೆ. ಹಳೆಯ ರಚನೆಗಳು ಹೊಸ ರಚನೆಯನ್ನು ಮಾಡುವುದೂ ಇದೇ ದೃಷ್ಟಿಯಲ್ಲಿ. ಹಳೆಯ ಅನೇಕ ಅಂಶಗಳು ಹೊಸರಚನೆಯಲ್ಲಿ ಸೇರುತ್ತವೆ. ಮತ್ತು ಹೊಸದಾದ ಅವಕಾಶವನ್ನು ಮಾಡುತ್ತವೆ. ಇದರಿಂದ ಹೊಸದಾದ ದಿಕ್ಪಲ್ಲಟವು ಆಗುತ್ತದೆ. ಚರಿತ್ರೆಯ ಅರಿವು ಈ ಕಾರಣಕ್ಕೆ ಬೇಕಾಗುತ್ತವೆ. ಅದು ಹಿನ್ನೆಲೆಯನ್ನು ಹೇಳುತ್ತದೆ. ಚರಿತ್ರೆಯ ಹಾಜರಾತಿಗೂ ಅದರ ಸಾರಕ್ಕೂ ಈ ಕಾರಣದಿಂದ ಸಂಬಂಧವಿದೆ. ಚರಿತ್ರೆಯೆಂದರೆ ಗತವನ್ನು ನಿರೂಪಿಸುವ ಒಂದು ಕತೆಯಲ್ಲ. ಅದರಲ್ಲಿಯೂ ತಾತ್ವಿಕತೆಯ ಅಗತ್ಯವೂ ಇರುತ್ತದೆ. ಅದೂ ಒಂದು ಸಹಯೋಗವನ್ನು ಹೇಳಬೇಕಾಗುತ್ತದೆ. ವಾಸ್ತವವಾಗಿ ಚರಿತ್ರೆಯ ಅಧ್ಯಯನದಲ್ಲಿ ನಾವು ಆಗಾಗ ಬಳಸುವ ಪದಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದರಲ್ಲಿ ನಿರಂಕುಶ ಪ್ರಭುತ್ವ, ಪ್ರಜಾಸತ್ತಾತ್ಮಕ, ಆಡಳಿತಶಾಹಿ ಮುಂತಾದ ಪದಗಳು ಬರುವುದು ಬರೀ ಒಂದು ವಿವರಣೆಯನ್ನು ಮಾತ್ರವೇ ಕೊಡುವುದೂ ಇಲ್ಲ. ಅದು ಅದನ್ನು ಬೇರೆ ರೀತಿಯಲ್ಲಿಯೂ ವಿವರಿಸುತ್ತದೆ. ಅವುಗಳು ಸಮಾಜದ ರಚನೆಗಳೂ ಆಗಿವೆ. ಆದರೆ ಸಾಮಾಜಿಕ ಚರಿತ್ರೆಯಲ್ಲಿ ಸಮಾಜದ ಏಳುಬೀಳುಗಳೂ ಬಹಳ ಮುಖ್ಯವಾಗುತ್ತವೆ. ಯಾವುದನ್ನು ಸಮಾಜದ ಅಂಶಗಳು ಎಂದು ಹೇಳುತ್ತೇವೆಯೋ ಅದು ಗಾಢವಾದ ಪ್ರಭಾವವನ್ನು ಬೀರುತ್ತವೆ. ಸಾಮಾಜಿಕವಾದ ಅನೇಕ ಘಟನೆಗಳು ನಮ್ಮನ್ನು ವ್ಯಾಪಕವಾಗಿಯೇ ಆವರಿಸಿಕೊಳ್ಳುತ್ತವೆ ಆದ್ದರಿಂದಲೇ ಸಾಮಾಜಿಕ ಸತ್ಯವು ಅತ್ಯಂತ ಮುಖ್ಯವಾದ್ದೂ ಹೌದು. ನಾವು ಈಗ ನೋಡಬೇಕಾದ್ದು ವಿಧಿನಿಷೇಧಗಳು ಯಾಕೆ ಮಹತ್ವದ ಪಾತ್ರವನ್ನು ವಹಿಸುತ್ತವೆ ಎನ್ನುವುದೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ಅದಕ್ಕೂ ಸಮಾಜದಲ್ಲಿ ಒಂದು ಪಾತ್ರವು ಇದೆ. ಅವಕ್ಕೂ ಒಂದು ಸಮಾಜದಲ್ಲಿ ಸ್ಥಾನಮಾನವು ಕಲ್ಪಿತವಾಗಿದೆ. ಸಮಾಜ ಮತ್ತು ಅದರ ಸಮಸ್ಯೆಗಳನ್ನು ಈ ದೃಷ್ಟಿಯಿಂದ ನಾವು ಬೇರೆ ದೃಷ್ಟಿಕೋನದಲ್ಲಿ ನೋಡಬೇಕಾಗುತ್ತದೆ.

ಸಮಾಜ ಮತ್ತು ಅದರ ಸಂಬಂಧಗಳನ್ನು ನಾವು ಈ ದೃಷ್ಟಿಯಿಂದ ಭಾವುಕವಾಗಿ ನೋಡಬೇಕಾದ ಅಗತ್ಯವಿಲ್ಲ. ರೈತರು. ಅಧಿಕಾರ ಶಾಹಿ ಮತ್ತು ಕಾರ್ಮಿಕರು ಎನ್ನುವುದೇ ಮನುಷ್ಯನ ಸತ್ಯಗಳಲ್ಲಿ ಒಂದಾಗಿದೆ. ಆದರೆ ನಾವು ಅನೇಕರು ರೈತರನ್ನು, ಕಾರ್ಮಿಕರು ಮುಂತಾದ ಸತ್ಯಗಳನ್ನು ನೋಡಲು ಹೋಗುವುದೂ ಇಲ್ಲ. ಅದನ್ನು ಗಮನಕ್ಕೆ ತರದೆ ಬೇರೆ ಯಾವುದನ್ನೋ ಹೇಳುತ್ತಾರೆ. ಅವುಗಳು ನಮ್ಮ ರಾಜಕೀಯವಾದ ಸತ್ಯಗಳೂ ಹೌದು. ಈ ರೀತಿಯ ರಾಜಕೀಯವಾದ ಪ್ರಜ್ಞೆಯು ನಮಗೆ ಅತ್ಯಂತ ಅಗತ್ಯವೂ ಆಗಿದೆ. ರಾಜಕೀಯವು ನಮಗೆ ಅನೇಕ ನಿಯಂತ್ರಣವನ್ನು ಹೇರುತ್ತದೆ. ಆದ್ದರಿಂದ ನಾವು ಅದನ್ನು ಬಿಟ್ಟು ಮಾತಾಡಲು ಬರುವುದೇ ಇಲ್ಲ. ರಾಜಕಾರಣವೇ ಅನೇಕ ಸಂದರ್ಭದಲ್ಲಿ ನಮ್ಮ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ. ಇವುಗಳು ಸಾಂಸ್ಕೃತಿಕವಾದ ಕ್ರಿಯೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ದೃಷ್ಟಿಯಿಂದ ಸಂಸ್ಕೃತಿ ಮತ್ತು ಅದರ ಕ್ರಿಯೆಯು ಭಿನ್ನವಾಗುತ್ತದೆ. ಕೆಲವು ಸರ್ತಿ ಬೇರೆ ಬೇರೆ ಗುಂಪುಗಳು ಬೇರೆ ಅರ್ಥಗಳನ್ನು ಹೇಳುತ್ತವೆ. ಅವುಗಳು ಜೀವನವನ್ನು ನಿಯಂತ್ರಿಸುತ್ತವೆ. ಆದರೆ ಕೆಲವು ಸಂಗತಿಗಳು ನಿರ್ದಿಷ್ಟವಾದ ಮೌಲ್ಯವನ್ನು ಸೂಚಿಸುತ್ತವೆ. ಮತ್ತೆ ಕೆಲವು ಯಾವುದೇ ಮೌಲ್ಯವನ್ನು ಹೇಳುವುದೂ ಇಲ್ಲ. ಕೆಲವು ಸಂಗತಿಗಳು ಜಗತ್ತಿಗೆ ಅನ್ವಯವಾಗುತ್ತವೆ, ಮತ್ತು ಕೆಲವು ಸ್ಥಳೀಯ ಮಟ್ಟದಲ್ಲಿ ಮಾತ್ರವೇ ಇರುತ್ತವೆ. ಈ ಸಂಗತಿಗಳು ಲೇಖಕನ ಮೇಲೆ ಪ್ರಭಾವವನ್ನು ಬೀರುತ್ತವೆ. ವಿಶ್ವಾತ್ಮಕತೆಯು ಲೇಖಕನ ಪ್ರಜ್ಞೆಯ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರುತ್ತದೆ. ಮತ್ತು ಯಾವುದು ವರ್ಗವಾಗಿದೆಯೋ ಅದರ ಪ್ರಭಾವವು ಬರಹವನ್ನು ರೂಪಿಸುತ್ತದೆ. ಹಾಗೆ ನೋಡುವುದಿದ್ದರೆ ಯಾವುದು ನಮಗೆ ಮುಖ್ಯ ಮತ್ತು ಯಾವುದು ನಮಗೆ ಅಮುಖ್ಯವೆಂದು ತೀರ್ಮಾನವನ್ನು ಮಾಡಿಕೊಳ್ಳುವುದು ನಮ್ಮ ಪ್ರಜ್ಞೆಯ ಆಧಾರದ ಮೇಲೆಯೇ. ಸಾಮಾಜಿಕ ಜೀವನ ಮತ್ತು ಅದರ ಪರಿಣಾಮಗಳು ಭಿನ್ನವಾಗಿ ರೂಪು ತಳೆಯುತ್ತದೆ. ಅದರ ಹಿಂದೆ ವಿವಿಧ ಸ್ವರೂಪಗಳೂ ಇರುತ್ತವೆ. ಸಾಮಾಜಿಕ ಅಭ್ಯಾಸಗಳು ನಮ್ಮನ್ನು ನಿರ್ದೇಶಿಸುತ್ತವೆ. ನಮ್ಮ ಒಟ್ಟಾರೆಯಾದ ಸಂಗತಿಗಳನ್ನು ನಮ್ಮ ಒಟ್ಟಾದ ಜೀವನ ಮತ್ತು ಅದರ ಸಂಗತಿಗಳು ಹೇಳುತ್ತವೆ. ಕಾಲ ಮತ್ತು ಆವಶ್ಯಕತೆಗಳೇ ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾದ ಸಂಗತಿಯೂ ಆಗಿದೆ. ಸಮಾಜ ಮತ್ತು ಅದರ ರಚನೆಗಳು ನಮ್ಮ ಬರಹವನ್ನು ಹೇಳುತ್ತವೆ. ಮತ್ತು ಅದರಲ್ಲಿ ವ್ಯತ್ಯಾಸಗಳೂ ಇರುತ್ತವೆ. ರಚನೆಯೇ ಅನೇಕ ಕಾರಣಗಳಿಂದ ಸಾಂಕೇತಿಕವೂ ಆಗುತ್ತದೆ. ಅವುಗಳು ನಿರ್ದಿಷ್ಟವಾದ ಸತ್ಯವನ್ನು ಮಾತ್ರವೇ ಹೇಳುತ್ತದೆ ಎಂದು

ಅರ್ಥವಲ್ಲ. ಯಾಕೆಂದರೆ ಕಲಾವಿದನು ಕೆಲವನ್ನು ಆಯ್ಕೆ ಮಾಡುತ್ತಾನೆ ಮತ್ತು ಕೆಲವನ್ನು ಬದಲಿಸುತ್ತಾನೆ.

ಸಂಸ್ಕೃತಿಯ ಚರ್ಚೆಗೆ ಈ ಅರ್ಥದಲ್ಲಿ ಸಾಂಕೇತಿಕತೆಯೂ ಇರುತ್ತದೆ. ನಾವು ನೋಡಬೇಕಾದ್ದು ಲೇಖಕ ಮತ್ತು ಅವನ ಮನೋಸ್ಥಿತಿಯನ್ನು ಮಾತ್ರವೇ. ಚರಿತ್ರೆಯ ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುತ್ತವೆ. ಮನಸ್ಸು ಮತ್ತು ನಡತೆಗೆ ಈ ದೃಷ್ಟಿಯಿಂದ ಸಂಬಂಧವೂ ಇದೆ. ಆದ್ದರಿಂದ ವ್ಯಕ್ತಿ ಮತ್ತು ಅವನ ನಡತೆಗೂ ಸಾಹಿತ್ಯಕ್ಕೂ ನೇರವಾದ ಸಂಬಂಧವೂ ಇದೆ. ಸಾಹಿತ್ಯ ಮತ್ತು ಅದರ ಚರ್ಚೆಯು ಈ ದೃಷ್ಟಿಯಿಂದ ಲೇಖಕ ಮತ್ತು ಅವನ ಮನೋಸ್ಥಿತಿಯನ್ನು ಆಧರಿಸಿಕೊಳ್ಳುವುದೂ ಅಗತ್ಯ. ಸಾಹಿತ್ಯವನ್ನು ಸಮಾಜವು ನಿರೂಪಿಸಿಕೊಳ್ಳುವುದು ಮತ್ತು ಅದರ ಅರ್ಥವನ್ನು ಹೇಳುವುದು ಅತ್ಯಂತ ಸಹಜವೂ ಆಗಿದೆ. ಸಾಹಿತ್ಯ ಮತ್ತು ಅದರ ರಚನೆಯು ಸಮಾಜದಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ಲೇಖಕನ ಪ್ರಜ್ಞೆಯನ್ನು ಸಮಾಜದ ಪ್ರಜ್ಞೆಯ ಭಾಗವಾಗಿಯೂ ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಲೇಖಕನಿಗೆ ಕೊಡಲಾದ ಒಂದು ಸನ್ನಿವೇಶವೂ ಇರುತ್ತದೆ. ಮತ್ತು ಸಾಮಾಜಿಕ ರಚನೆಗಳು ಭಾಷಿಕ ರಚನೆಗಳನ್ನು ನಿಯಂತ್ರಿಸುತ್ತವೆ. ಭಾಷೆಯು ಸಮಾಜದಲ್ಲಿ ಸಂವಹನದ ಮುಖ್ಯವಾದ ಭಾಗವೂ ಆಗಿರುತ್ತದೆ. ಲೇಖಕನಿಗೂ ಭಾಷೆಯು ಸಂವಹನದ ಭಾಗವೇ ಆಗಿದೆ. ಮತ್ತು ಲೇಖಕನು ತನ್ನದೇ ಆದಕಾರಣವನ್ನು ಹೊಂದಿದ್ದಾನೆ. ತನ್ನ ಅಗತ್ಯವನ್ನು ಭಾಷೆಯಲ್ಲಿ ಹೇಳುತ್ತಾನೆ. ಅವನ ಆಲೋಚನೆಯು ಮಾತ್ರವೇ ಬರಹದ ಚಟುವಟಿಕೆಯಲ್ಲಿ ವ್ಯಕ್ತವಾಗುತ್ತವೆ. ಬರಹವೂ ಒಂದು ದೃಷ್ಟಿಯಲ್ಲಿ ರಚನೆಯೇ ಆಗುತ್ತದೆ. ಆ ರಚನೆಯು ಅತ್ಯಂತ ಅಗತ್ಯವೂ ಆಗುತ್ತದೆ. ಬರಹ ಮತ್ತು ಅದರ ರಚನೆಯು ಸಮಾಜ ಮತ್ತು ಅದರ ರಚನೆಯ ಭಾಗವೂ ಆಗುತ್ತದೆ. ಅದರಲ್ಲಿ ವ್ಯತ್ಯಾಸಗಳು ಇರುವುದು ಲೇಖಕ ಮತ್ತು ಅವನ ಆಲೋಚನೆಯನ್ನು ಸೂಚಿಸುವುದಕ್ಕಾಗಿಯೂ ಹೌದು. ಲೇಖಕನು ಯಾವುದನ್ನು ಅಯ್ಕೆ ಮಾಡುತ್ತಾನೆ ಅದು ಅವನ ಆಲೋಚನೆ ಮತ್ತು ಮನೋಸ್ಥಿತಿಯ ದ್ಯೋತಕವೂ ಆಗಿರುತ್ತದೆ. ಪುನರುಜ್ಜೀವನ ಕಾಲದ ಅನಂತರ ವ್ಯಕ್ತಿ ಮತ್ತು ಅವನ ವ್ಯಾಖ್ಯೆಯು ಬದಲಾಯಿತು. ವ್ಯಕ್ತಿಯು 'ನಾನು' ಮತ್ತು ಸಂಸ್ಕೃತಿಯನ್ನು ನೋಡುವ ಕ್ರಮಗಳು ಬದಲಾದವು. ವ್ಯಕ್ತಿ ಮತ್ತು ಅವನ ದೇಹವನ್ನು ಗ್ರಹಿಸುವ ಚಿಂತನೆಗಳೂ ಬೇರೆಯಾದವು. ವಾಸ್ತವವವಾಗಿ ನಾನು ಎನ್ನುವುದು ಆತ್ಮರತಿಯ ಭಾಗವೂ ಹೌದು. ನಾನು ಎನ್ನುವುದು ಮೂಲಭೂತವಾಗಿ ಮತ್ತೆ ಕೆಲವು ಅಂಶಗಳನ್ನು

ಹೇಳುತ್ತವೆ. ಅದು ದೇಹ ಮತ್ತು ಮನಸ್ಸಿನ ಪ್ರಶ್ನೆಯೂ ಆಗಿದೆ. ನಾನು ಎನ್ನುವ ಕಲ್ಪನೆಯು ಸಾಂಸ್ಕೃತಿಕವಾಗಿ ರಚಿತವಾಗಿರುತ್ತದೆ. ಅದು ವ್ಯಕ್ತಿಯ ಪ್ರಜ್ಞೆಯನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ನಡವಳಿಕೆಯು ಮಾತ್ರವೇ ಪ್ರಧಾನವೂ ಆಗುತ್ತದೆ. ವ್ಯಕ್ತಿ ಅವನ ಲಿಬಿಡೋ, ಅವನ ಆಲೋಚನೆ ಹಾಗೂ ಅವನ ಸ್ವಹಿತಾಸಕ್ತಿಯು ಕಾಣಿಸುತ್ತದೆ. ವ್ಯಕ್ತಿ ಎನ್ನುವ ಕಲ್ಪನೆಯೇ ಮಿತಿಗಳೂ ಇರುತ್ತವೆ. ವ್ಯಕ್ತಿಯ ಬಯಕೆಯನ್ನು ಸಮಾಜವು ಹತ್ತಿಕ್ಕುವುದು ನಿಜ. ವ್ಯಕ್ತಿಯು ಮುಕ್ತಾಯವಾಗುವುದು ಸಮಾಜದಲ್ಲಿ ಮಾತ್ರವೇ. ಅವನ ಸಾವು ಅವನ ಅಸ್ತಿತ್ವವನ್ನು ಮುಕ್ತಾಯ ಮಾಡುತ್ತದೆ. ಲಿಬಿಡೋ ಮತ್ತು ಬರಹಕ್ಕೆ ಕೆಲವು ರೀತಿಯ ಸಂಬಂಧವಿದೆ. 'ನಾನು' ಅಂದರೆ ನಿಸರ್ಗದ ಮೇಲೆ ಯಜಮಾನಿಕೆಯನ್ನು ಸಾಧಿಸುವುದೂ ಹೌದು. ಸಂವಹನ ಮತ್ತು ಭಾಷೆಯ ಮೇಲೆಯೂ ನಾನು ಎನ್ನುವ ಕಲ್ಪನೆಯು ಪ್ರಭಾವವನ್ನು ಬೀರುತ್ತದೆ. ಸಮಾಜ ಮತ್ತು ನಡವಳಿಕೆಯೂ ಪರಸ್ಪರ ಸಂಘರ್ಷವನ್ನು ಸೃಷ್ಟಿಸುತ್ತದೆ. ನಾನು ಮತ್ತು ನನ್ನ ಬರಹ ಎನ್ನುವುದು ಮೂಲಭೂತವಾಗಿ ನಿರ್ದಿಷ್ಟವಾದ ಮತ್ತು ಸ್ವಂತಿಕೆಯ ಪ್ರಶ್ನೆಯನ್ನು ಎತ್ತುತ್ತದೆ. ನಾನು ನನ್ನ ಬಯಕೆಯನ್ನು ನನ್ನ ಬರಹದಲ್ಲಿ ವ್ಯಕ್ತ ಮಾಡುತ್ತೇನೆ. ಲಿಬಿಡಿನಲ್ ಬಯಕೆಯು ಬರಹದಲ್ಲಿ ವ್ಯಕ್ತವಾಗುತ್ತವೆ. ಸಾಮಾಜಿಕ ಜೀವನ ಮತ್ತು ನಾನು ಎನ್ನುವುದು ಬೇರೆ ಬೇರೆ ಪ್ರಯೋಗಗಳಿಗೆ ಕಾರಣವೂ ಆಗುತ್ತದೆ. ಬರೆಯುವುದು ಅಂದರೆ ನಮ್ಮನ್ನು ವ್ಯಕ್ತ ಮಾಡುವುದೂ ಅಷ್ಟೇ ಸತ್ಯ. ಆದರೆ ಬರೆಯುವುದು ವ್ಯಕ್ತಿಯನ್ನು ತೃಪ್ತಿಗೊಳಿಸುತ್ತದೆ. ಕಲ್ಪಿತ ಸಂಗತಿ ಮತ್ತು ಅದರ ಪರಿಣಾಮವನ್ನು ಈ ದೃಷ್ಟಿಯಿಂದ ನಾವು ಭಿನ್ನವಾಗಿ ಗ್ರಹಿಸಬೇಕಾಗುತ್ತದೆ. ಕಲ್ಪಿತವಾದ ಸುಖವೂ ಬರಹದಲ್ಲಿ ಕಾಣಿಸುತ್ತದೆ. ಮಾನಸಿಕವಾದ ರಚನೆಗಳು ಬರಹದ ರಚನೆಗಳಿಗೆ ಕಾರಣವೂ ಆಗುತ್ತವೆ. ಮತ್ತು ಅದರಲ್ಲಿ ನೆಮ್ಮದಿಯೂ ದೊರೆಯುತ್ತದೆ. ಮತ್ತು ಅದು ವ್ಯಕ್ತಿಯನ್ನು ನಿರ್ದಿಷ್ಟವಾಗಿ ಬಿಡುಗಡೆ ಮಾಡುತ್ತದೆ. ಸುತ್ತಲಿನ ಜಗತ್ತನ್ನು ನೋಡಿಕೊಂಡೇ ವ್ಯಕ್ತಿಯು ಬರೆಯುತ್ತಾನೆ. ನಿತ್ಯದ ಜೀವನಕ್ಕೆ ಉದಾಹರಣೆಯು ಇದು

ಚನ್ನಕ್ಕನಿಗೆ ವಯಸ್ಸು ಸರಿದಂತೆ ಊರಿಗೆ ಬಂದಿರುವ ಅವಧಿ ಹೆಚ್ಚಾಯಿತು. ಅವಳ ವ್ಯವಹಾರದ ಭಾರವನ್ನು ವೆಂಕ ಹೊರತೊಡಗಿದ. ಅದು ಅವಳ ಮುಂಬಯಿಯ ಪ್ರಿಯ ಸಾಯುವ ಮುನ್ನ ಬಿಟ್ಟುಹೋದ ಸಂಪತ್ತಿಗೆ ಸಂಬಂಧಿಸಿದ ವ್ಯವಹಾರ, ಅಂತು, ಅವಳು ಮುಂಬಯಿಯಲ್ಲಿ ಕಷ್ಟಪಡದೆಯೇ ಶ್ರೀಮಂತಳಾದುದು ನಿಜ. ಆದರೆ, ಅಗ್ಗಕ್ಕೆ ಬಂದ ಮಳೆನೀರೆಂದು ತಿಳಿದು ಆ ಹಣವನ್ನು ಅವಳು ವ್ಯಯಿಸಿದವಳಲ್ಲ. ತನ್ನ ಸೋದರಿಯೊಬ್ಬಳ ಮಕ್ಕಳನ್ನು ಬೆಳೆಯಿಸಿ, ವಿದ್ಯಾಭ್ಯಾಸ

ಕೊಡಿಸಿದ್ದೊಂದು ಅವಳ ಔದಾರ್ಯ. ಆದರೆ ಮುಂಬಯಿ ನಗರವನ್ನು ಸೇರಿ, ವಿದ್ಯಾವಂತರಾದ ಅದೇ ಮಕ್ಕಳು, ಪ್ರಾಯ ಬಂದ ಬಳಿಕ ತಿರುಗಿ ದೊಡ್ಡಮ್ಮನನ್ನು ಕಾಣಲು ಹಂಬಲಿಸಲಿಲ್ಲ. ತಮ್ಮ ತಾಯಿಯನ್ನು ಕರೆದುಕೊಂಡು ಅವರು ದೂರವಾದರು. ಇನ್ನೂ ಒಬ್ಬಿಬ್ಬರು ಕುಟುಂಬಸ್ಥರು–ಅವಳು ಜಾತಿಗೆಟ್ಟವಳಲ್ಲವೇ–ಎಂದು ತಮ್ಮ ಊರವರು ಅನ್ನುವಂತೆ, ತಾವು ಅಂದರೂ, ಅವಳಲ್ಲಿಗೆ ಹೋಗಿ ಬರುವುದನ್ನು ನಿಲ್ಲಿಸಿಲ್ಲ. ಅವಳ ಸಹಾಯ, ದಾನ, ಕನಿಕರ ಅವರ ನಿತ್ಯ ಜೀವನಕ್ಕೆ ಬೇಕೇ ಬೇಕಾಗಿತ್ತು.

{ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ–17, ಉಕ್ಕಿದ ನೊರೆ, ಕಾದಂಬರಿ–16, ಪು.ಸಂ.174}

ಸಮಾಜ ಮತ್ತು ಅದರ ಅರಿವೂ ಅವನಿಗೆ ಹೆಚ್ಚು ಮುಖ್ಯ. ಬರಹವು ವ್ಯಕ್ತಿಯ ಆಲೋಚನೆಯ ಕ್ರಮವನ್ನು ಹೇಳುತ್ತದೆ. ಪ್ರಾಂಕ್ ಫ್ರಾರ್ಟ್ ಸ್ಕೂಲ್ ಚರಿತ್ರೆಯನ್ನು ನೋಡುವಾಗ ಇದನ್ನೂ ಗಮನಕ್ಕೆ ತಂದಿತ್ತು. ವ್ಯಕ್ತಿ ಮತ್ತು ಅವನ ನಡವಳಿಕೆಯು ಬರೀ ಅವನೊಬ್ಬನ್ನು ಮಾತ್ರವೇ ಸೂಚಿಸುವುದೂ ಇಲ್ಲ. ಅದು ಸಮಾಜ, ಆರ್ಥಿಕತೆ ಮುಂತಾದವುಗಳನ್ನು ಹೇಳುತ್ತವೆ. ವ್ಯಕ್ತಿಯು ಅತೃಪ್ತನಾದರೆ ಮತ್ತು ಖಿನ್ನತೆಗೆ ಒಳಗಾದರೆ ಅವನ ವ್ಯಕ್ತಿತ್ವ ಮತ್ತು ಅವನ ಸಮಾಜವೆರಡೂ ನಮ್ಮ ಗಮನಕ್ಕೆ ಬರಬೇಕಾಗುತ್ತದೆ. ಎಷ್ಟೋ ಸರ್ತಿ ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಸಮಾಜವು ತಿದ್ದುತ್ತದೆ. ವ್ಯಕ್ತಿ ಮತ್ತು ಅವನ ಪ್ರಶ್ನೆಯನ್ನು ಸಮಾಜವು ನೋಡುವ ಕ್ರಮವೂ ಬೇರೆಯಾಗಿದೆ. ಆದ್ದರಿಂದ ಅವನ ಬರಹಕ್ಕೂ ಅವನ ನಡವಳಿಕೆಗೂ ಸಂಬಂಧವಿದೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಬಂಡವಾಳವಾದವು ನೋಡುವ ಕ್ರಮವು ಭಿನ್ನವಾಗುತ್ತದೆ. ಅಂದರೆ ಅದು ಕೆಲವನ್ನು ಹೇರುತ್ತದೆ. ಸಮಾಜ ಮತ್ತು ಆದರ ತಾರತಮ್ಯಗಳು ಕೂಡಾ ಬರಹವನ್ನು ನಿರ್ದೇಶಿಸುತ್ತವೆ. ತಂತ್ರಜ್ಞಾನವು ಮುಂಚೂಣಿಯಲ್ಲಿ ಇರುವ ಸಮಾಜದಲ್ಲಿ ವ್ಯಕ್ತಿ ಮತ್ತು ಅವನ ನಡವಳಿಕೆಗಳು ಒಂದು ರೀತಿಯಲ್ಲಿ ಇರುತ್ತವೆ. ಯಾವುದೇ ಸಮಾಜವು ವಿಕಾಸವಾಗುತ್ತಾ ಬಂದಂತೆ ವ್ಯಕ್ತಿಯ ನಡವಳಿಕೆಯಲ್ಲಿ ವ್ಯತ್ಯಾಸವು ಕಾಣುತ್ತದೆ. ಕ್ರಿಯೆಗಳಲ್ಲಿ ವ್ಯತ್ಯಾಸವಾಗುತ್ತದೆ. ಆದರೆ ಯಾವುದೇ ಕ್ರಿಯೆಯು ನಿರ್ದಿಷ್ಟವಾದ ಉದ್ದೇಶವನ್ನು ಹೊಂದಿರುತ್ತವೆ. ಜನರು ಮತ್ತು ಅವರ ಶಕ್ತಿಯು ಸಮಾಜದಲ್ಲಿ ಬೇರೆ ಬೇರೆ ರೀತಿಯ ನಿರ್ವಹಣೆಯನ್ನು ಮಾಡುತ್ತವೆ. ಮತ್ತು ಜನರ ಶಕ್ತಿಯೇ ಸಮಾಜದಲ್ಲಿ ಕೆಲವು ಗುಣಾತ್ಮಕವಾದ ಪರಿವರ್ತನೆಯನ್ನು ತರುತ್ತವೆ. ಯಾವುದನ್ನು ನಾವು ಲೋಕ ಗ್ರಹಿಕೆ ಎಂದು ಹೇಳುತ್ತೇವೆಯೋ

ಅದು ಏಕತ್ರವೂ ಆಗಿರುತ್ತದೆ. ಅದರಲ್ಲಿ ಲೋಕ ಸಂವಾದವೂ ಇರುತ್ತದೆ. ಮತ್ತು ಅದರಲ್ಲಿ ನಿರ್ದಿಷ್ಟ ಬಗೆಯ ತತ್ವಜ್ಞಾನವೂ ಇರುತ್ತದೆ.

ಆಲೋಚನೆಗಳನ್ನು ಅವುಗಳೇ ನಿಯಂತ್ರಿಸುತ್ತವೆ. ಮತ್ತು ಅದರಲ್ಲಿ ಜೀವನ ಮತ್ತು ಅದರದೇ ಆದ ದೃಷ್ಟಿಕೋನಗಳೂ ಇರುತ್ತವೆ. ಅಂದರೆ ಅವುಗಳ ವ್ಯಕ್ತ ರೂಪವು ಒಂದು ಬಗೆಯದೂ ಆಗಿರುತ್ತವೆ. ನಮ್ಮ ಆಲೋಚನೆ ಮತ್ತು ಅದರ ಸ್ವರೂಪವನ್ನು ಲೋಕ ದೃಷ್ಟಿಯು ಹೇಳುತ್ತದೆ. ಎದುರು ಇರುವ ವಾಸ್ತವ ಮತ್ತು ಅದರ ಗ್ರಹಿಕೆಗೆ ನಮಗೆ ಲೋಕದ ಗ್ರಹಿಕೆಯೂ ಬೇಕಾಗುತ್ತದೆ. ವಾಸ್ತವ ಮತ್ತು ವಿಶ್ವಾತ್ಮಕತೆಗಳ ನಡುವೆ ದ್ವಂದ್ವಾತ್ಮಕತೆಯೂ ಇರುತ್ತದೆ. ಆದರೆ ಯಾವಾಗ ನಾವು ಪ್ರಗತಿಪರವಾದ ಚಿಂತನೆಯನ್ನು ಹೊಂದಿರುತ್ತೇವೆಯೋ ಆಗ ನಮ್ಮ ಆಲೋಚನೆಯೂ ಕೂಡಾ ಹೆಚ್ಚು ಮಾನವೀಯವಾಗಿರುತ್ತದೆ. ಆದರೆ ನಮಗೆ ಗೊತ್ತಿರಬೇಕಾದ ಅಂಶವೆಂದರೆ ಯಾವುದನ್ನು ನಾವು ಈವತ್ತು ತತ್ವಜ್ಞಾನವೆಂದು ಹೇಳುತ್ತೇವೆಯೋ ಅದು ಮೂಲಭೂತವಾಗಿ ವಿಶ್ವಾತ್ಮಕತೆ ಮತ್ತು ಅದರ ಅಂಶಗಳನ್ನು ಹೇಳುತ್ತವೆ. ಆದರೆ ತತ್ವಜ್ಞಾನ ಮತ್ತು ಅದರ ಗ್ರಹಿಕೆಯು ನಮಗೆ ಅತ್ಯಂತ ಅಗತ್ಯವಾಗಿದೆ. ಬಾಹ್ಯ ಮತ್ತು ಅದನ್ನು ನೋಡಲು ನಾವು ಅನುಸರಿಸುವ ವಿಧಾನವೂ ಅತ್ಯಂತ ಅಗತ್ಯವಾಗಿದೆ. ಬರಹವು ನಮಗೆ ಲೋಕ ಗ್ರಹಿಕೆಗೆ ಸಹಾಯವನ್ನು ಮಾಡುತ್ತದೆ. ಅದರಲ್ಲಿ ಚರಿತ್ರೆ ಮತ್ತು ಅದರ ನಡೆಗಳೂ ಇರುತ್ತವೆ. ಸಮಾಜ ಮತ್ತು ಅದರ ಗುಂಪು ನಮಗೆ ನಿರ್ದಿಷ್ಟವಾದ ಚಹರೆಯನ್ನು ಹೇಳುತ್ತವೆ. ನಾವು ಒಂದು ತತ್ವಜ್ಞಾನದ ಒಳಗೆ ಬದುಕುವುದು ಅತ್ಯಂತ ಅನಿವಾರ್ಯವೂ ಹೌದು. ಚರಿತ್ರೆ ಮತ್ತು ಲೋಕದೃಷ್ಟಿಯು ನಮಗೆ ಅತ್ಯಂತ ಅಗತ್ಯವಾಗುತ್ತದೆ. ಆದರೆ ಅದಕ್ಕೂ ಕೆಲವು ಮಿತಿಗಳು ಇರುತ್ತವೆ ಎನ್ನುವುದನ್ನು ಮರೆಯಬಾರದು. ವಾಸ್ತವವು ಅದರ ಸಾಧ್ಯತೆಯು ಭಿನ್ನವಾಗುತ್ತದೆ. ಈಗಿನ ನಮ್ಮ ಸಮಾಜ ಅದರ ವರ್ತಮಾನವು ಭಿನ್ನವಗುತ್ತದೆ. ಫ್ರಾಯ್ಡ್ ನಡತೆ ಮತ್ತು ಅದರ ಲಿಬಿಡಿನಲ್ ಸ್ವಭಾವವು ಬರಹವನ್ನು ನಿರ್ಧರಿಸುತ್ತದೆ. ಅದು ಸಾಂಸ್ಕೃತಿಕ ಸೃಜನಶೀಲತೆಗೆ ಕಾರಣವೂ ಆಗುತ್ತದೆ. ಅದು ಪ್ರಜ್ಞೆಗೆ ಸಂಬಂಧಪಟ್ಟದ್ದು. ಜೀವನ ಮತ್ತು ಅದರ ಸಾಧ್ಯತೆಯನ್ನು ನಿರ್ಧರಿಸುವುದು ನಿಜವಾಗಿಯೂ ಪ್ರಜ್ಞೆಯೇ. ಅನೇಕ ರಚನೆಗಳು ಅನೇಕ ವಸ್ತುಗಳನ್ನು ಉತ್ಪಾದಿಸುತ್ತವೆ ಎಂದು ಗ್ರೇಮಾಸ್ ಹೇಳುತ್ತಾನೆ. ಭಾಷೆ ಮತ್ತು ಅದರ ರಚನೆಗಳು, ಚರಿತ್ರೆ ಮತ್ತು ಅದರ ರಚನೆಗಳು, ನಡತೆ ಮತ್ತು ಅದರ ಸ್ವರೂಪಗಳು ನಿರ್ದಿಷ್ಟವಾಗಿಯೇ ನಿರ್ಧಾರವಾಗುತ್ತವೆ. ಭಾವನೆಗಳು ಮತ್ತು ರಚನೆಗಳು ಜೊತೆಗೆ ಇರುತ್ತವೆ. ಅಲ್ತೂಸರ್ ಸಮಾಜ

ಮತ್ತು ಅದರ ರಚನೆಯನ್ನು ಅದರ ಉತ್ಪಾದನೆಯ ಹಿನ್ನೆಲೆಯಲ್ಲಿ ನೋಡುತ್ತಾನೆ. ಮನುಷ್ಯ ಮತ್ತು ಅವನ ವರ್ತನೆಯೂ ಒಂದು ದೃಷ್ಟಿಯಲ್ಲಿ ರಚನೆಯೇ ಆಗಿದೆ. ಅದು ಮನಸ್ಸನ್ನು ಹೇಳುತ್ತದೆ.

ಕಳಂಜಿಮಲೆಯ ಮಗ್ಗುಲಲ್ಲಿ, ಅವರ ಗೆಳೆಯರ ತುಣುಕು ಜಾಗವಿತ್ತು. ಕಳಂಜಿಮೂಲೆ ಎಂದು ಅದಕ್ಕೆ ಹೆಸರು. ಸ್ಥಳ ಪ್ರಶಸ್ತವಾಗಿರಲಿಲ್ಲ. ಹೆಸರಿಗೆ ಐವತ್ತು ಅಡಿಕೆ ಮರಗಳಿರುವ ತೋಟ, ಮೂರು ಮುಡಿ ಗದ್ದೆಯಿತ್ತು. ಅಲ್ಲಿ ಕುಳಿತ ಒಕ್ಕಲು ಧನಿಗೆ ಸಮನಾಗಿ ಗೇಣಿಕೊಡುತ್ತಿರಲಿಲ್ಲ. ಅಲ್ಲಿಗೆ ಇವರನ್ನು.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಬಿ. ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.107}

ಕೃಷಿ ಕುಟುಂಬ

'ಯಾರಿಗೆ ಬೇಕು-ಭೂಮಿ, ಮನೆ ? ನಾಳೆ ಯಾವುದಾದರೊಂದು ಪ್ರೇತಕ್ಕೆ ಅದನ್ನು ಕೊಟ್ಟು ಓಡಲಿಕ್ಕೇನು?'

'ಮತ್ತೇನು ಮಾಡುತ್ತೀ ನೀನು? ನಿನ್ನ ಹಾಗೆ ನಾನೂ ಆಗಿದ್ದೇನೆ. ಮಾವನ ಮನೆಯಲ್ಲಿಯಾವ ಕೆಲಸವೂ ಇಲ್ಲ. ಅಡ್ಡಗದ್ದೆಗೆ ಹೋಗಲು ಧೈರ್ಯವೂ ಇಲ್ಲ, ಮನಸೂ ಇಲ್ಲ. ತಾಯನ್ನು ಬಿಟ್ಟಿರುವುದಕ್ಕೆ ಮನಸ್ಸೇ ಬರುವುದಿಲ್ಲ. ಅಪ್ಪ ಸಿಟ್ಟಾಗಿ ನನಗೆ ಒಂದು ಚೂರೂ ಆಸ್ತಿ ಕೊಡುವುದಿಲ್ಲ ಎಂದಿದ್ದಾರೆ; ಹೆದರಿಸಿದ್ದಾರೆ. ಹೋಗಲಿ, ಆ ಮಾತು. ಎಲ್ಲಾದರೂ ಬದುಕಿಯೇನು. ಆದರೆ ಊರಿನಲ್ಲೇ ಇರುವುದಕ್ಕೆ ಬೇಸರ. ನಿನಗೂ ಹಾಗೆಯೇ. ಹಾಗಿದ್ದರೆ, ನಾವಿಬ್ಬರೂ ಮೈಸೂರಿಗೋ, ಬೆಂಗಳೂರಿಗೋ ಎಲ್ಲಿಗಾದರೂ ಓಡಿಹೋಗುವ, ಸುಮ್ಮನೆ ಋಣದ ಅನ್ನ ತಿಂದು ತಿರುಗಬಾರದು.'

ಅಂಥ ಯಾವ ಮಾತಿಗೂ ಹಾಂ, ಹೂಂ, ಆಡದವನು ಲಕ್ಷ್ಮಣ. ಒಂದು ತಿಂಗಳ ಕಾಲ ಹೀಗೆಯೇ ಕಳೆಯಿತು. ಸೋಮನಾಥಯ್ಯನವರಿಂದ ಎರಡು ಮುಡಿ ಅಕ್ಕಿಗಳನ್ನು ಎರವಾಗಿ ತಂದು, ಹಿರಣ್ಯನ ಸಂಸಾರ ಕಂಗಾಲು ಜೀವನವನ್ನು ನಡೆಯಿಸಿತು. ಅಷ್ಟರಲ್ಲೇ ಒಂದು ದಿನ ಸೋಮನಾಥಯ್ಯನವರು ಅಲ್ಲಿಗೆ ಜಾಗದ ವಿಚಾರ ಮಾತನಾಡಲು ಬಂದರು. ಲಕ್ಷಣ, ಬಾ ಹೋಗುವ; ನೀನೂ ನಿನ್ನ ಅಮ್ಮನೂ ಜತೆಗೆ ಬನ್ನಿ. ಅಲ್ಲಿಂದ ಎರಡು ಮೈಲು ದೂರ ಕೂಡ ಇಲ್ಲ: ಕಳಂಜಿಮಲೆಯ ನಡುಪಿಗೇನೇ ಇದೆ ಒಂದು ಜಾಗ, ಅದಕ್ಕಿಂತ ಒಳ್ಳೆಯದು ಎಲ್ಲಿಯೂ ಸಿಗಲಿಲ್ಲ. ಇದ್ದುದರಲ್ಲಿ ಒಳ್ಳೆಯದೆಂದು ಆರಿಸಿದ್ದೇನೆ. ರೂಢಿಮಾಡಿಕೊಂಡರೆ ಒಂದು ಸಾವಿರ

ಸಸಿಗಳ ತನಕ ಅಡಿಕೆ ನಡಬಹುದು. ಧಾರಾಳವಾಗಿ ನೀರಿದೆ. ಈಗ ಹೋಗಿ ಅಲ್ಲಿ ಕುಳಿತರೆ, ಒಂದೆರಡು ವರ್ಷಗಳಿದ್ದು ಕಷ್ಟಮಾಡಿ, ನಿಮಗೆ ಸಮಾಧಾನವಾದ ಮೇಲೆ, ಮೂಲಗೇಣಿಗೆ ಅದನ್ನು ಮಾಡಿಕೊಳ್ಳಬಹುದು' ಎಂದರೆ, ಲಕ್ಷ್ಮಣನ ಬಾಯಿಂದ ಒಂದೇ ಒಂದು ಮಾತು ಬರಲಿಲ್ಲ.

ವೆಂಕಮ್ಮನೂ, ಅವಳ ತಂಗಿಯೂ ಸೋಮನಾಥಯ್ಯನವರ ಹಿಂದೆ, ಜಾಗ ನೋಡುವುದಕ್ಕೆ ಹೊರಟರು. ಲಕ್ಷ್ಮಣ 'ನೀವು ನೋಡಿ ಬಂದರೆ ಸಾಕು' ಎಂದು ತಲೆತಪ್ಪಿಸಿಕೊಂಡು ಬಂದ. ಹಿರಣ್ಯನನ್ನು 'ಬಾ' ಎಂದು ಕರೆದರೂ ಆತ ಬರಲು ಒಪ್ಪಲಿಲ್ಲ. ತನ್ನ ತಂಗಿಯರು, ತನ್ನ ಆಶ್ರಯವನ್ನು ಕಳೆದುಕೊಂಡು, ಬೇರೆ ಜೀವನವನ್ನು ನಡೆಯಿಸಬೇಕಾದ ಪ್ರಸಂಗವನ್ನು ಕಂಡು ಅವನಿಗೆ ದುಃಖ ಉಕ್ಕಿ ಬಂದಿತ್ತು. 'ಅಪ್ಪನೂ ಹೋದ, ಅವಳ ಗಂಡನೂ ಹೋದ ಮೇಲೆ–ಅಣ್ಣನಾಗಿ ನಾನು ಬದುಕಿದ್ದಕ್ಕೆ ಇವರಿಗೂ ಇವರ ಮಕ್ಕಳಿಗೂ ಗಂಜಿಯ ತಿಳಿಯನ್ನಾದರೂ ಕೊಟ್ಟು ಬದುಕಿಸುತ್ತೇನೆಂದು ಭರವಸೆ ಕೊಟ್ಟು, ಮನೆಗೆ ಕರೆದುಕೊಂಡು ಬಂದಿದ್ದೇನೆ. ಅಷ್ಟೊಂದು ಯೋಗ್ಯತೆ ನನ್ನಲ್ಲಿ ಉಳಿಯದೆ ಹೋಗಬೇಕೇ' ಎಂದು ದುಃಖ ಉಕ್ಕಿಬಂದು ಅಳತೊಡಗಿದ.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ–55–56}

ದ್ವೇಷ ಮತ್ತು ಭೂಮಿ

ಸುಬ್ರಾಯರು, ಮೈಮೇಲೆ ಬಿದ್ದು ಆ ಭೂಮಿಯನ್ನು ಕೊಳ್ಳಬೇಕಾದ ಪ್ರಸಂಗವಿರಲಿಲ್ಲ. ಆ ಭೂಮಿಯಿಂದ ದೊರೆಯುವ ವರಮಾನಕ್ಕೆ ಕೊಟ್ಟ ಬೆಲೆ ಹೆಚ್ಚೆಂದು ಎಲ್ಲರೂ ಹೇಳುತ್ತಾರೆ; ಅವರೂ ತಿಳಿದಿದ್ದಾರೆ. ಭಾವನ ಮೇಲಿನ ದ್ವೇಷ ಸಾಧಿಸುವ ಒಂದೇ ಉದ್ದೇಶ ಅವರದ್ದು. ಅದನ್ನು ಸಾಧಿಸಿದ ದಿನವಾವುದು? ಹಿರಣ್ಯ ತೀರಿಕೊಂಡ ದಿನವೇ ರಿಜಿಸ್ತ್ರಿ ನಡೆಯಿತು.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.59}

ಭೂಮಿ

ಅಲ್ಲಿಗೆ ಹೊರಡುವ ಮುಂಚೆ ಕಳಂಜಿಮೂಲೆಗೆ ಹೋಗಿ, ವೆಂಕಮ್ಮನನ್ನು ನೋಡಿ ಬರಬೇಕಾದದ್ದು ನ್ಯಾಯವೆನಿಸಿತು. ವೆಂಕಮ್ಮ–ತನ್ನ ಮಗಳ ಭಾಗ್ಯ ತಿರುಗಿಬಿಟ್ಟಿದೆ; ತಾವೆಲ್ಲ ಅನುಭವಿಸುವುದಕ್ಕೇ ಹುಟ್ಟಿದವರು.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.142}

ದಾನ

ಯಾರನ್ನು ದೂರಿಯೂ ಫಲವಿಲ್ಲ–ಎಂದು "ನಾನು ಒಂದು ಆಸೆಯಿಂದ ಬಂದಿದ್ದೇನೆ. ಬಿಡಾರದ ಸಾಮಾನನ್ನು ಇರ್ದೆಗೆ ಸಾಗಿಸಿಯಾಯಿತು. ನಿನಗೂ ಹೇಳಲಿಲ್ಲ. ಇರ್ದೆ ಎಂದ ಕೂಡಲೇ ಮಕ್ಕಳ ಮನೆಗೆ ಹೋಗುತ್ತೇನೆಂದು ತಿಳಿಯಬೇಡ. ಆ ಆಸೆ ಮಾಡಿದ್ದು ವ್ಯರ್ಥವಾಯಿತು. ನಮ್ಮ ಸುದೈವಕ್ಕೆ ಬೆಟ್ಟಂಪಾಡಿ ವಾಸುದೇವಯ್ಯ ಮೂರು ಮುಡಿ ಗದ್ದೆ ಬಿಟ್ಟುಕೊಟ್ಟಿದ್ದಾರೆ. ನಾಲ್ಕು ಸುತ್ತಲೂ ಗುಡ್ಡ ಇದೆ; ಜಾಗ ವೈನಾಗಿದೆ. ಗೇರು, ಹಲಸು ಬೆಳೆದೀತು. ಕುಮುಕಿಯಲ್ಲಿ ಹುರುಳಿ, ಉದ್ದು ಬಿತ್ತಬಹುದು. ಹಾಗೆ ಅವನೇ ನನ್ನ ಮಕ್ಕಳು ಬೇಸಾಯ ಮಾಡಿಸಿಕೊಡುತ್ತಾವೆ. ನೀವು ಹೆಂಗಸರು, ನಿಮ್ಮ ಕೈಯಿಂದ ಏನಾದೀತು' ಎಂದು ಹೇಳಿದ್ದಾನೆ. ಅವನೆಂದುದು ನಿಜ. ಎಷ್ಟೆಂದರೂ ನಿನ್ನ ಮಗಳಾಗಲೀ, ನಾನಾಗಲೀ ಬೇಸಾಯದ ಮುಖ ಕಂಡವರಲ್ಲ. ವಾಸುದೇವಯ್ಯನ ಮಕ್ಕಳನ್ನು ಕರೆದು, ಅದನ್ನು ಮಾಡಿಸಿಕೊಡು, ಇದನ್ನು ಮಾಡಿಸಿಕೊಡು ಎಂದು ಬೇಡುವುದು ನನಗೆ ಇಷ್ಟವಿಲ್ಲ. ಆತ ಮೂಲಗೇಣಿಗೆ ಇಷ್ಟು ಭೂಮಿ ಕೊಟ್ಟದ್ದೇ ದೊಡ್ಡದು. ನೀನು ನಿನ್ನ ಶಿವನನ್ನು ಕಳುಹಿಸುವಿಯಾದರೆ ಕರೆದುಕೊಂಡು ಹೋಗಬೇಕೆಂದು ಬಂದಿದ್ದೇನೆ' ಎಂದಳು.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ–143}

ಕೃಷಿ

ಮೂಡೋಡಿಯ ಎಡಬಲಗಳಲ್ಲೆಲ್ಲ ಅಬ್ಬಿಗಳು; ಪಡವಣಕ್ಕೆ ಹೊಸ ಯೌವನದಿಂದ ಹರಿಯುವ ಹೊಳೆ; ಮೂಡಣಕ್ಕೆ ಬೆಟ್ಟದ ಹಸುರು ಗೋಡೆ. ಅದೊಂದು ಪರ್ಯಾಯ ದ್ವೀಪ ಅಥವಾ ಲಾವಣ್ಯದ ಸೆರೆಮನೆಯೆಂದರೂ ಸಲ್ಲುತ್ತದೆ. ಹಳ್ಳವನ್ನು ದಾಟಿ ಆಚೀಚೆ ಹೋಗುವುದು ಕಷ್ಟ. ಶಂಕರನಾಗಲೀ, ಅವನ ಆಳುಗಳಾಗಲೀ ತೀರ ಅವಶ್ಯವಿದ್ದಾಗ ಮಾತ್ರ ತಾವು ಕಟ್ಟಿದ ಬೀಳಲಿನ ಸೇತುವೆಯನ್ನು ದಾಟಿ ಆಚೀಚೆ ಹೋಗುತ್ತಿದ್ದರು. ದಿನ ನಿತ್ಯ ಶಂಕರ ಮಳೆ ನೀರನ್ನು ಅಳೆಯುತ್ತಾನೆ. ಮೊದಲನೆಯ ಎರಡು ತಿಂಗಳಲ್ಲೇ 150 ಇಂಚು ಮೀರಿತು ಮಳೆ. ದೇಹಲಿಯಲ್ಲಿ ಅಂಥ ಮಳೆಗಾಲವನ್ನೆಂದಾದರೂ ಕಂಡಾನೆಯೇ? ಮೂಡೋಡಿಯ ಒಂದೇ ದಿನದ ಮಳೆ ದೇಹಲಿಯ ವರ್ಷದ ಮಳೆಯಾಗುವುದುಂಟು.

ಎಂಥ ಜಡಿಮಳೆಯಾದರೇನು? ಬಂಗಾಡಿಯ ಜನರು ಕಂಬಳಿಯನ್ನೂ, ತೆಂಗಿನ ಗರಿಗಳ ಗೊರಬನ್ನೂ ತೊಟ್ಟುಕೊಂಡು ದಿನವೆಲ್ಲ ಕೆಲಸಕ್ಕಾಗಿ ಓಡಾಡುತ್ತಿದ್ದಾರೆ. ಯಾವತ್ತು ಕೆಲಸವೂ ಮಳೆಯ ಆರ್ಭಟೆಯಲ್ಲೆ. ಹಿಂದಣ ವರ್ಷ ಬಂದಾಗ ಆ ಊರಲ್ಲಿ ಮಳೆ ಹೆಚ್ಚು ಎಂಬ ಅನುಭವ ಅವನಿಗಾಗಿತ್ತು. ಆದರೆ ಅದೆಂಥ ಮಳೆಯೆಂದು ಅರಿತದ್ದು ಈಗ ಮಾತ್ರ.

ಅವನೂ ಆ ಮಳೆಯಲ್ಲಿ ದುಡಿಯತೊಡಗಿದ, ಆಳುಗಳೂ ಓಡಾಡುತ್ತಿದ್ದಾರೆ. ಮುತ್ತಯ್ಯಗೌಡನೂ ಮಳೆಯಲ್ಲೇ ನೆನೆದು ಅಲೆದಾಡುತ್ತಿದ್ದಾನೆ. ಎಳೆಯ ಕುಕ್ಕಪ್ಪನೂ ಆ ಮಳೆಯಲ್ಲಿ ಎಮ್ಮೆ, ಕೋಣಗಳನ್ನು ಮೇವಿಗೆ ಅಟ್ಟಿ, ಕರೆತರುತ್ತಾನೆ. ಮಳೆಯಿಂದ ರಾತ್ರಿ, ಬೆಳಗುಗಳ ಹವೆಯಲ್ಲಿ ಶೈತ್ಯ ತುಂಬಿಕೊಳ್ಳುತ್ತದೆ. ಅಂಥ ಸಮಯದಲ್ಲಿ ಶಂಕರ ಕಟ್ಟಿಸಿದ ಬಿದಿರು ತಟ್ಟಿಯ ಮನೆ ಮಾತ್ರ ಅಲ್ಲಿನ ಜೀವನಕ್ಕೆ ತಕ್ಕುದಲ್ಲ-ಎಂದು ಅವನಿಗೂ ತಿಳಿಯತೊಡಗಿತು. ಹೊರಗೆ ಮಳೆಗಾಳಿಗಳು ಬೀಸತೊಡಗಿದ್ದರೆ, ಮನೆಯೊಳಗೆಲ್ಲ ನೀರೇ. ತೆಂಗಿನ ಸೋಗೆಯ ಚಾಪೆಗಳಿಂದ ಗೋಡೆಗಳನ್ನು ಹೊದೆಯಿಸಬೇಕಾಯಿತು. ಮುಂದಿನ ವರ್ಷ ಮಣ್ಣಿನ ಗೋಡೆಯನ್ನಾದರೂ ಮಾಡಬೇಕೆಂಬ ನಿರ್ಧಾರ ಅಲ್ಲಿಯೇ ಆತ ಮಾಡಬೇಕಾಯಿತು. ಮಳೆಗಾಲದ ವೆಚ್ಚಕ್ಕೆಂದು ತಂದಿರಿಸಿದ ಕಟ್ಟಿಗೆ, ರಕ್ಷಣೆ ಸಾಲದೆ ನೀರಿಂದ ತೊಯ್ದು, ಅಡುಗೆಯ-ಕೆಲಸದಲ್ಲಿ ಕಣ್ಣುರಿಯನ್ನು ಹುಟ್ಟಿಸಿತು.

ಗದ್ದೆಗಳನ್ನು ವಿಂಗಡಿಸಿ, ಉತ್ತಂಥ ನೆಲದಲ್ಲಿ ಮೇಲಿಂದ ಮೇಲೆ ಕಳೆ ಚಿಗುರಿಕೊಂಡಿತು. ಆ ಗದ್ದೆಗಳಲ್ಲಿ ನೀರು ನಿಲ್ಲಿಸಿಕೊಂಡು, ಕಳೆಗಳನ್ನು ಬುಡ ಮೇಲಾಗಿಸಿ, ನಾಶಮಾಡಿ, ಸೊಪ್ಪು ಗೊಬ್ಬರವನ್ನು ತಂದು, ತುಂಬಿಸಿ, ಉಳುವ ಕೆಲಸ ಸಾಗಿಸಿದರು. ಎಳಚಿತ್ತಾಯರು ತಂದುಕೊಟ್ಟ ಅಗೆಯನ್ನು ಆ ಗದ್ದೆಯಲ್ಲಿ ತಂದು ನೆಟ್ಟುದೂ ಆಯಿತು. ಈ ಬೆಟ್ಟು ಗದ್ದೆಗಳ ಮೇಲಿದ್ದುದು ಪೂರ್ವದ ಜವುಗು ನೆಲ. ಅಲ್ಲೇ ಹೂಡಿದ ಕಾಲುವೆಗಳಿಂದ ನೀರು ಇಂಗಿತ್ತು. ಅಲ್ಲಿಯೂ ಉಳುಮೆ, ಬೇಸಾಯಗಳು ನಡೆದುವು; ಬತ್ತದ ಸಸಿಗಳನ್ನು ನೆಟ್ಟರು. ಎರಡು ಕಡೆಗಳಲ್ಲೂ ಪೈರೇನೋ ಚೆನ್ನಾಗಿ ಮೇಲಕ್ಕೆ ಬರತೊಡಗಿತು. ಗಾಳಿಗೆ ಅಲೆಯಲೆಯಾಗಿ ತಲೆದೂಗುವ "ಸ್ಯವ್ರಂದ ಮನಸ್ಸಿಗೆ ಉಲ್ಲಾಸ ತರತೊಡಗಿತು. ಅದನ್ನು ಕಂಡ ಎಳಚಿತ್ತಾಯರು, "ಈಗಿನ ಸಿಟ್ಟಿಗೆ ಬೆಳೆ ತುಂಬ ಹುಲುಸಾಗಿ ಕಾಣಿಸುತ್ತಿದೆ. ಗಿಡಗಳು ಸೊಕ್ಕದಿದ್ದರೆ ಒಳ್ಳೆಯ ತೆನೆಗಳೇ ದಾವು" ಎಂದು ಶಂಕರನೊಡನೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಹೊಲದ ಕೃಷಿ ಮೊದಲ ಎರಡು ತಿಂಗಳ ಕಾಲ ನಡೆಯಿತು. ಮುಂದೆ, ಆಳುಗಳಿಗೆ ಕೆಲಸವಿಲ್ಲ–ಕೊಯ್ಲಿನ ತನಕ ಕೆಲಸವನ್ನು ಒದಗಿಸಿಕೊಡುವ ಹೊಣೆ ಅವನದು. ಇಲ್ಲದೆ ಹೋದರೆ ಆಳುಗಳ ಜೀವನ ಹೇಗೆ ಸಾಗಬೇಕು? ಪ್ರತಿ ತಿಂಗಳೂ ಅವನ ತಮ್ಮ ಕಳುಹಿಸುತ್ತಿದ್ದ 200 ರೂಪಾಯಿಗಳಲ್ಲಿ 150ರಷ್ಟು ಕೂಲಿಗೇನೆ ಕರಗುತ್ತಿತ್ತು. ಹಾಗೆ ವ್ಯಯಿಸಿದ ಹಣ ಒಂದು ಪ್ರಯೋಜನಕ್ಕೆ ಬರಬೇಡವೇ? ಮೂಡೋಡಿಯಲ್ಲಿ ಸಾಗುಮಾಡದ ಭೂಮಿಯೇ ಇರಬಾರದೆಂದು ಅವನ ಹಂಬಲ.

ಶಂಕರ ಮುತ್ತಯ್ಯನನ್ನು ಕರೆದು 'ಗೌಡ, ಮಳೆಗಾಲದಲ್ಲಿ ಬರಿದೆ ಕುಳಿತು ಮಾಡುವುದೇನು? ಬಹುಮಟ್ಟಿನ ಬೆಟ್ಟು ಬರಿದಾಗಿದೆ. ಮೂಡಣದ ಗುಡ್ಡದ ಸೆರಗು ಬರಿದೇ. ಯಾಕೆ ಹಾಗೆ ಅದನ್ನು ಸುಮ್ಮನಿರಿಸಬೇಕು? ಏನಾದರೂ ಮಾಡಲು ಬರಲಾರದೇ?" ಎಂದು ಕೇಳಿದ. ಆತ ವಿಚಾರ ಮಾಡಿದ; ಮಳೆಯ ಭರ ಕಡಿಮೆಯಾದರೆ ಅಲ್ಲಿ ಏನಾದರೂ ಮಾಡಬಹುದು ಎಂದು ಸೂಚಿಸಿದ. "ಬದನೆ, ಮೆಣಸು, ಒಂದಲ್ಲ ಒಂದನ್ನು ಬೆಳೆಯಬಹುದು. ಇಲ್ಲಿಯ ತನಕ ನಮ್ಮ ಬೇಲಿ, ಕಂದಕಗಳು ಕಾಡುಪ್ರಾಣಿಗಳನ್ನು ತಡೆದುದಾಗಿದೆ. ಆದರೆ, ಮನೆಯ ವೆಚ್ಚಕ್ಕೆ ತರಕಾರಿ ಎಷ್ಟು ಬೇಕು ? ಅದನ್ನು ಇನ್ನಷ್ಟು ಹೆಚ್ಚಾಗಿ ಬೆಳೆದುದರಿಂದ ಲಾಭ ಬರಲಾರದು. ತಲೆಹೊರೆಯಾಗಿ ಹೊತ್ತು ಬೆಳ್ತಂಗಡಿಗೆ ಒಯ್ದು, ಸಂತೆಯಲ್ಲಿ ಮಾರಿದರೆ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಾರದು" ಎಂದು ಹೇಳಿದ. ಕೊನೆಗೆ, ನೆಲವನ್ನು ಬಂಜರು ಬಿಡುವುದರಲ್ಲಿ ಅವನಿಗೆ ಯಾವ ಸಮಾಧಾನವೂ ಕಾಣಲಿಲ್ಲ. ಎರಡು ಎಕ್ರೆಯಷ್ಟು ನೆಲದಲ್ಲಿ ಗೆಣಸನ್ನೂ, ಇನ್ನೆರಡು ಎಕ್ರೆಗಳಲ್ಲಿ ಮೆಣಸನ್ನೂ ಬೆಳೆಯಿಸುವ ಸೂಚನೆ ಕೊಟ್ಟ. ಸೂಚನೆಯೊಂದಿಗೆ ಕೆಲಸವೂ ತೊಡಗಿತು. ಮಡಿಮಾಡಿದರು, ಕುಣಿ ತೋಡಿದರು, ಏರಿ ಹೊಡೆದರು, ಸಸಿ ನೆಟ್ಟರು, ಗೊಬ್ಬರ, ಬೂದಿ ಹಾಕಿಸಿದರು. ದಿನಹೋದಂತೆ – ಏನು ಬೆಳೆದರೂ ಬೆಳೆಯಬಹುದಾದ ಭೂಮಿ ಅದು – ಎಂಬ ವಿಶ್ವಾಸ ಉಂಟಾಯಿತು. ಅಷ್ಟೊಂದು ವರ್ಷ ಪಡುಬಿದ್ದ ಭೂಮಿಯು ತನ್ನ ಸಸ್ಯಸಾರವನ್ನೆಲ್ಲ ತಾನೇ ಬಚ್ಚಿಟ್ಟುಕೊಂಡಿದೆ– ಎಂಬ ಸಂತೋಷ ಅವರಿಬ್ಬರಿಗೂ ಉಂಟಾಯಿತು. ಆದರೂ, ಗೊಬ್ಬರವೇ ಗಿಡಗಳ ಅನ್ನ – ಎಂದು ಬಲ್ಲ ಶಂಕರ ಅದನ್ನು ಶೇಖರಿಸವ ಯೋಚನೆ ಮಾಡಿದನು. ದೊಡ್ಡದೊಂದು ಕುಣಿ ಅಗೆಯಿಸಿ, ಕಾಟುಕಲ್ಲುಗಳ ಗೋಡೆಯಿಂದ ಕುಣಿಯ ಮಗ್ಗುಲನ್ನು ಗಟ್ಟಿಮಾಡಿ, ಅದಕ್ಕೆ ಹಟ್ಟಿಯ ಗೊಬ್ಬರ, ಗಂಜಳ ತಂದುಹಾಕಿಸಿದ. ಸುತ್ತಲೂ ಅನರ್ಘವಾಗಿ ಬೆಳೆಯುವ ಕಾಡಿನ ಸೊಪ್ಪುಗಳನ್ನು ತಂದು ತುಂಬಿಸಿದ. ಕುಣಿಯ ಗಾತ್ರವನ್ನು ಕಂಡು ಬೆದರಿದ ಮುತ್ತ "ಯಾಕೆ ಅಷ್ಟೆಲ್ಲ ಗೊಬ್ಬರ? ಇನ್ನು ಬೇಕಾಗುವುದು ಮುಂದಿನ ಮಳೆಗಾಲಕ್ಕೆ"

ಎಂದು ಅನುಮಾನ "ಮುತಯ್ಯ, ನಾನು ಓದಿದ ಮಾತನ್ನು ಹೇಳುತ್ತಿದ್ದೇನೆ. ಅನುಭವದ ಮಾತಲ್ಲ, ನಿಜ. ಇಷ್ಟೆಲ್ಲ ಬೇಯಿಸುತ್ತಿದ್ದೇವೆ. ನೆಲದ ಸಾರವನ್ನೇ ಹೀರಿ ಗಿಡಗಳು ಬೆಳೆಯುತ್ತವೆ ಎಂದ ಮೇಲೆ, ಅವು ಕೊಂಡ ಸಾರವನ್ನೆಲ್ಲ ತಿರುಗಿ ನಾವು ನೆಲಕ್ಕೆ ಒಪ್ಪಿಸಲೇ ಬೇಕು. ಈ ಊರ ಹೊಲಗಳಲ್ಲಿ ಎರಡೆರಡು ಬಾರಿ ಬೆಳೆ ತೆಗೆಯುತ್ತಿದ್ದಾರೆ. ಅದಕ್ಕೆ ಎಷ್ಟೆಲ್ಲ ಸಾರ ಬೇಡ? ನೆಲದ್ದು ನೆಲಕ್ಕೇ ಸಲ್ಲಬೇಕು" ಎಂದ.

"ಅದೇನೋ ಸಮ. ನೆಲದಿಂದ ತೆಗೆದುದನ್ನು ನೆಲಕ್ಕೆ ಕೊಡಬೇಕಾದುದು ನ್ಯಾಯ. ಆದರೆ ಎಲ್ಲ ನೆಲದಂತಲ್ಲ ಈ ನೆಲ. ಮೊದಲೇ ಇದು ಸಾರ ತುಂಬಿದ ಭೂಮಿ, ಗೊಬ್ಬರ ಹೆಚ್ಚಾಗಿ ಸಾಕಿದರೆ, ಗಿಡಗಳು ಸೊಕ್ಕುವ ಭೀತಿ ಹೆಚ್ಚು. ತೆನೆಯ ಬದಲು ಸೊಪ್ಪು ಬಂದೀತು. ಅದಕ್ಕೇನೆ ಊರವರು ಗೊಬ್ಬರ ಹಾಕುವ ಬದಲು, ಗೊಬ್ಬರ ಸುಟ್ಟು ಬೂದಿಯನ್ನು ಹಾಕುತ್ತಾರೆ. ಇಬ್ಬರ ಇಲ್ಲಿನ ನೆಲಕ್ಕೆ ಹೆಚ್ಚಿಗೆ ಬೇಡ. ಮೇಲಿನ ಕಾಡನ್ನು ನೋಡಬಾರದೇ? ಎಷ್ಟು ಗಿಡಮರಗಳು ಬೆಳೆದಿಲ್ಲ. ಅವಕ್ಕೆ ಯಾರು ಗೊಬ್ಬರ ಹಾಕಿದ್ದಾರೆ. ಕಡಿದ ಹಾಗೆ ಗಿಡ ಚಿಗುರುತ್ತದೆ. ನಮ್ಮ ಕಣಕ್ಕಿರುವ ಆಚೆಗಿನ ಗುಡ್ಡವನ್ನು ನೋಡಿ. ಅಲ್ಲಿ ಕಾಡು ಕಡಿದು ಎರಡು ವರ್ಷವಾಗಿಲ್ಲ. ಹೆಚ್ಚು ಹೆಚ್ಚಾಗಿ ಬೆಳೆದಿವೆ–ಗಿಡ ಬಲ್ಲೆಗಳು. ಗೊಬ್ಬರ ಹೆಚ್ಚಾದರೂ ಅಪಾಯವೇ."

"ಮುತ್ತಾ, ಕಾಡಿನಲ್ಲಿ ಅದಕ್ಕೆ ಬೇಕಾಗುವ ಗೊಬ್ಬರ ಅಲ್ಲೇ ಸಿಗುತ್ತದೆ. ವರ್ಷಂಪ್ರತಿ ಕುರುವ ಎಲೆಗಳು ಕೊಳೆತು ಗಿಡಗಳಿಗೆ ಸಾರವಾಗುತ್ತದೆ. ಆ ಸಾರ ಮಳೆಯಿಂದ ಇಂಗಿ ಗಳಿಗೆ ಒದಗುತ್ತದೆ. ನಮ್ಮ ಬೇಸಾಯ ಹಾಗಿದೆಯೇ? ಬತ್ತ ಬೆಳೆಯಿಸಿದರೆ, ನಾವು ಕಾಳನ್ನೂ ತೇವೆ, ಹುಲ್ಲನ್ನೂ ತೆಗೆಯುತ್ತೇವೆ. ತೆಗೆದ ಅಷ್ಟೊಂದು ಪದಾರ್ಥದ ಬಗ್ಗೆ ತಿರುಗಿ ನಾವು 2ಕ್ಕೆ ಕೊಡುವ ಗೊಬ್ಬರ ಸಾಕಾಗುವುದಿಲ್ಲ. ನಿಮ್ಮೂರ ವಾಡಿಕೆ ಹೇಗಿದೆಯೋ. ಆದರೆ, ಚೆನ್ನಾಗಿ ಗೊತ್ತು. ಬೂದಿ ಗೊಬ್ಬರದ ಕೆಲಸ ಮಾಡಲಾರದು. ಗೊಬ್ಬರ ಸುಟ್ಟು ಬೂದಿ ಆದರೆ ಅದರ ಎಷ್ಟೋ ಸಾರಾಂಶ ನಷ್ಟವಾಗುತ್ತದೆ."

"ಹಾಗೆಂದರೆ! ನಾನು ಕಣ್ಣಾರೆ ಕಂಡ ಅನುಭವ ಸುಳ್ಳೆನ್ನುತ್ತೀರಾ?"

"ಗೌಡ, ಸುಳ್ಳಲ್ಲ. ಗಿಡಬೆಳೆಯುವುದಕ್ಕೆ ಹತ್ತೆಂಟು ಬಗೆಯ ವಸ್ತುಗಳು ಬೇಕು. ಬೂದಿಯಲ್ಲಿ ಒಂದಂಶ ಮಾತ್ರ. ಗಾಳಿಯ ರೂಪದ ಸಾರವುಂಟು, ಉಪ್ಪಿನ ರೂಪದ ಸಾರವುಂಟು. ಇವುಳಲ್ಲಿ ಯಾವುದೊಂದು ಕಡಿಮೆಯಾದರೂ ಫಸಲು ಚೆನ್ನಾಗಿ ಬರುವುದಿಲ್ಲ. ನೆಲದೊಳಗೇನ ಕಾದ ಎಷ್ಟೋ ವಸ್ತುಗಳುಂಟು.

ಅದಕ್ಕೇನೆ ಇಲ್ಲಿನ ಜಾಗದ ನಾಲ್ಕಾರು ಕಡೆಗಳಿಂದ ತೆಗೆದು ಪರೀಕ್ಷೆಗೆಂದು ಕಳುಹಿಸಿದ್ದೇನೆ. ಈ ನೆಲದಲ್ಲಿ ಯಾವುದುಂಟು, ಯಾವುದಿಲ್ಲ ತಿಳಿಯಬೇಕಲ್ಲ, ಅದನು ತಿಳಿದಮೇಲೆ ಕಡಿಮೆಯಾದ ಅಂಶ ತುಂಬಿಸಿಕೊಡಬೇಕು

"ಹೌದು, ಆ ದಿನ ನೀವು ಅಲ್ಲಿಂದ ಇಲ್ಲಿಂದ ಒಂದೊಂದು ಮುಷ್ಠಿ ಮಣ್ಣು ತೆಗೆದು, ಪೊಟ್ಟಣ ಕಟ್ಟುವುದನ್ನು ನೋಡಿದೆ. ಆದರೆ, ಅಷ್ಟರಿಂದ ಏನು ಪರೀಕ್ಷೆಯಾದೀತು?"

"ಮುತ್ತಯ್ಯ, ನಿನಗೆ ಆ ಸಂಗತಿ ತಿಳಿಯುತ್ತದೋ ಇಲ್ಲವೋ, ನಮ್ಮ ಊರಲ್ಲಿ ಕೃಷಿಯೆಂದರೆ, ಪೂರ್ವಾಚಾರದಿಂದ ಬಂದ ಒಂದು ಕಸುಬು, ಹಿರಿಯರೆಂದಂತೆ ಮಾಡಿಬರುವ ಒಂದು ಕಟ್ಟಳೆ. ಆದರೆ ಈ ಹೊತ್ತು, ಕೃಷಿ ಎಂಬುದು ಬಹು ದೊಡ್ಡ ಕೆಲಸವೆಂದು ತಿಳಿದಿದ್ದಾರೆ. ನಾನು ಕಳುಹಿಸಿದ ಒಂದು ಮುಷ್ಟಿ ಮಣ್ಣಿನಿಂದಲೇ ಅದರ ಸ್ವಭಾವ ತಿಳಿದು ಹೇಳುವವರಿದ್ದಾರೆ. ಅದು ಒಂದೇನೆ ಅಲ್ಲ–ಪರದೇಶಗಳಲ್ಲಿ, ಮೂರು ತಿಂಗಳಲ್ಲಾಗುವ ಬೆಳೆಯನ್ನು ಎರಡು ತಿಂಗಳಲ್ಲಾಗಬೇಕು ಎಂದು ಹೇಳಿದರೆ, ಅದಕ್ಕೆ ಬೇಕಾದ ಬೀಜವನ್ನು ತಯಾರಿಸುತ್ತಾರೆ. ಅಷ್ಟು ಮಾತ್ರವಲ್ಲ, ನಾವೀಗ ಮೆಣಸು ನೆಟ್ಟಿದ್ದೇವಲ್ಲ. ಈ ಮೆಣಸಿನ ಖಾರ ಇನ್ನಷ್ಟು ಹೆಚ್ಚಬೇಕು; ಒಳಗಿನ ಬೀಜ ತೀರ ಕಡಿಮೆಯಾಗಿರಬೇಕು, ಅದಕ್ಕೆ ಇಂಥದೇ ಬಣ್ಣ ಬರಬೇಕು–ಎಂದು ಹೇಳಿದರೆ ಹತ್ತೆಂಟು ವರ್ಷಗಳಲ್ಲಿ ಅಂಥ ಗುಣಗಳುಳ್ಳ ಮೆಣಸಿನ ಬೀಜಗಳನ್ನೇ ಸೃಷ್ಟಿ ಮಾಡುವ ಪಂಡಿತರಿದ್ದಾರೆ" ಎಂದು ಹಲವು ಪಾಶ್ಚಾತ್ಯ ಶೋಧನೆಗಳನ್ನು ಗೌಡನಿಗೆ ಹೇಳಿ ಬೆರಗು ಉಂಟಾಗುವಂತೆ ಮಾಡುತ್ತಿದ್ದ.

ಮುತ್ತಯ್ಯನಾದರೂ ತಾನು ಬಲ್ಲವ; ಧನಿ ಏನೂ ತಿಳಿಯದ ಮುದ್ದು ಕೂಸು–ಎಂದವನಲ್ಲ. ಧನಿಗಳಲ್ಲಿ ವಿಶ್ವಾಸ ಅವನಿಗಿದೆ. ಆ ವಿಶ್ವಾಸದಿಂದ–ಅವರೇನು ಪ್ರಯತ್ನ ಪಡುತ್ತಿದ್ದಾರೆ; ಆ ಪ್ರಯತ್ನಗಳ ಫಲವಾಗಿ ಇಂದಿನ ಬೆಳೆ ಕೆಟ್ಟು ಹೋದರೂ ನಾಳೆ ಚೆನ್ನಾಗಿ ಸಿಗಬಹುದು – ಎಂಬ ನಂಬುಗೆ ಅವನಿಗೂ ಉಂಟಾಗುತ್ತಿತ್ತು. ಗೌಡನ ಈ ನಂಬಿಕೆಯ ಕಾರಣ ವಿಜ್ಞಾನವಲ್ಲ, ವಿವೇಕವಲ್ಲ; ಶಂಕರನ ಮೇಲಿದ್ದ ಭಕ್ತಿ, ಪ್ರೀತಿ.

ಮಳೆಗಾಲದಲ್ಲಿ ಶಂಕರ ಸದಾ ಆಳುಗಳ ಬೆನ್ನಿನ ಹಿಂದೆ ನಲಿಯುತ್ತಿರ ಬೇಕಾಗಿರಲಿಲ್ಲ. ಅವನ ಈ ಕೆಲಸದ ಭಾರವನ್ನು ಮುತ್ತಯ್ಯ ವಹಿಸುತ್ತಿದ್ದಾನೆ, ಗೆಳೆಯ ಕೃಷ್ಣ ವಹಿಸುತ್ತಿದ್ದಾನೆ. ಆದುದರಿಂದ ಅವನಿಗೆ ತುಂಬಾ ವಿರಾಮವಿದೆ. ಆ ವಿರಾಮವನ್ನು ತನ್ನ ಇನ್ನೊಂದು ಕನಸಿಗಾಗಿ ಬಳಸುತ್ತಿದ್ದಾನೆ. ಮನೆಯ

ಮಗ್ಗುಲಲ್ಲಿಯೇ ಒಂದು ತಿದಿ ಹೂಡಿ, ಏನೋ ಕಬ್ಬಿಣದ ಕೆಲಸ ತೊಡಗಿದ್ದಾನೆ. ಅರ ಹಾಕಿ ಉಜ್ಜುತ್ತಾನೆ. ಬಿಡುವು ಮಾಡಿಕೊಂಡು ಮಂಗಳೂರಿಗೆ ಹೋಗಿ ಏನೇನೋ ಸಾಧನ, ಸಲಕರಣೆಗಳನ್ನು ಮಾಡಿಸಿಕೊಂಡು ತರುತ್ತಾನೆ. ಅವನ ದೃಷ್ಟಿಯು–ತನ್ನ ಭೂಮಿಯ ತುತ್ತುದಿಯಲ್ಲಿ ಹರಿದೋಡುವ ಅಬ್ಬಿಯ ಕಡೆಗೆ ನೆಟ್ಟಿದೆ. ಆ ಓಡುವ ನೀರಿನ ಶಕ್ತಿಯನ್ನು ಬಳಸಿಕೊಂಡು, ಸಣ್ಣ ಪ್ರಮಾಣದಲ್ಲಾದರೂ ವಿದ್ಯುತ್ತನ್ನು ಗಳಿಸಬೇಕೆಂಬ ಹಟ ಅವನದು. ಎಷ್ಟೆಂದರೂ ಅವನು ಈ ವಿಷಯದಲ್ಲೇ ಶಿಕ್ಷಣ ಪಡೆದವನಲ್ಲವೆ? ಬೀಳುವ ನೀರು ಬರಿದೆ ವ್ಯರ್ಥವಾಗಬಾರದು–ಎಂಬುದು ಅವನ ಬಾಯಾರಿಕೆ. ಆ ಬಾಯಾರಿಕೆ ತಣಿಸುವುದಕ್ಕೆ ಸಿದ್ಧವಾದ ಯಂತ್ರಸಾಮಗ್ರಿಗಳಿಲ್ಲ. ಯುದ್ಧದ ಕಾಲವದು. ಒಂದು ವಸ್ತು ಸಿಕ್ಕಿದರೆ, ಇನ್ನೊಂದು ಸಿಗುತ್ತಿರಲಿಲ್ಲ. ಸಿಗುವ ವಸ್ತುವಿಗೂ ವಿಪರೀತ ಬೆಲೆ. ಆದುದರಿಂದ, ಗೆಳೆಯ ಸೀತಾರಾಮನನ್ನು ಪೀಡಿಸಿ, ಏನೇನೋ ಸಲಕರಣೆಗಳನ್ನು ತರಿಸಿಕೊಂಡಿದ್ದಾನೆ. ಕಡಿಮೆ ಬೀಳುವ ವಸ್ತುಗಳನ್ನು ತಾನೇ ನಿರ್ಮಿಸುತ್ತೇನೆ ಎಂಬ ಹಟ ತೊಟ್ಟಿದ್ದಾನೆ. ಅವನ ಈ ಕಮ್ಮಾರ ಕೆಲಸದಲ್ಲಿ ಕೃಷ್ಣನಿಗೂ ಆಸಕ್ತಿಯೇ. ಶಂಕರ ಅಬ್ಬಿಯ ನೀರಿನಿಂದ ವಿದ್ಯುತ್ತನ್ನು ಹೊರಡಿಸುತ್ತಾನೆ ಎಂದು ಕೇಳಿದ ಮೇಲೆ, ಅವನ ಕುತೂಹಲ ಇನ್ನಷ್ಟು ಹೆಚ್ಚಿದೆ. ಆತನನ್ನು ಪೀಡಿಸಿ, ಕೃಷ್ಣನು ಭೌತವಿಜ್ಞಾನ ಕಲಿಯುತ್ತಿದ್ದಾನೆ. ಅಸ್ಪಷ್ಟವಾದರೂ, ಅವನು ಕನಸಿನ ರಾಜ್ಯದಲ್ಲಿ ತೇಲುತ್ತಾನೆ.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.324 ರಿಂದ 327}

ಕೃಷಿ ಸಮಸ್ಯೆ

ಈ ಮಾತುಕತೆ ನಡೆದ ಮರುದಿನವೇ ಮುತ್ತಯ್ಯ ಓಡೋಡಿ ಕೃಷ್ಣನಿದ್ದಲ್ಲಿಗೆ ಬಂದು ಮುಖ ಇದು ಮಾಡಿ ಹೇಳಿದ "ಅಯ್ಯಾ, ನಾನು ಯಾವ ಹಾಳು ಗಳಿಗೆಯಲ್ಲಿ ಹಾಗೆಂದೆನೋ! ಈ ವಿಚಾರ ನಿನ್ನೆಯಷ್ಟೆ ಹೇಳಿದ್ದಲ್ಲವೆ! ನಿನ್ನೆ ರಾತ್ರಿಯೇ ಅವು ಗೆಣಸಿನ ಗದ್ದೆಗಳನ್ನು ಎಕ್ಕು, ರಾಮಾರೂಥಿ ಮಾಡಿಬಿಟ್ಟಿದ್ದಾನೆ. ಇನ್ನಾಯಿತು; ಒಂದು ಸಾರಿ ರುಚಿ ಕಂಡ ಮೇಲೆ ಕುರುವಂತಿಲ್ಲ. ಮಾಡಿದ್ದೆಲ್ಲ ಅವುಗಳ ದರಿದ್ರ ಬಾಯಿಗಾಯಿತು" ಎಂದು ವ್ಯಸನ ತೋಡಿಕೊಂಡ. ತಕ್ಷಣ ಎದ್ದು ನಿಂತ. ರಾಮಯ್ಯನನ್ನು ಕೂಗಿ ಕರೆದುಕೊಂಡು ಮುದುಕನೊಂದಿಗೆ ಗೆಣಸು ತಾವಿಗೆ ಹೋಗಿ ನೋಡಿದ. ಒಂದು ಮೂಲೆಯ ಗೆಣಸಿನ ಏರಿಗಳೆಲ್ಲ, ಹಂದಿಗಳ ಕಾಲ ತುಳಿತದಿಂದ, ಕೆದಕಾಟದಿಂದ ತಲೆಕೆಳಗಾಗಿದ್ದವು. ಅಷ್ಟೆಲ್ಲ ಮಾಡಿದ್ದು ಹಂದಿ ಎಂಬುದಕ್ಕೆ ಅನುಮಾನವಿಲ್ಲ. ಒಮ್ಮೆ ಗೆಣಸಿನ ರುಚಿಕಂಡ ಮೇಲೆ, ನಾಳೆಯ

ದಿನ – ಹೆಚ್ಚಿನ ಹಾನಿಯಾಗುವುದೆಂಬ ಭೀತಿ ಉಂಟಾಯಿತು. ಆದುದರಿಂದಲೇ ಅವುಗಳು ಎಲ್ಲಿಂದ ನುಗ್ಗಿದುವು, ಹೇಗೆ ಬಂದವು ಎಂಬುದರ ಸಂಶೋಧನೆಯನ್ನು ಮಾಡಬೇಕಾಯಿತು. ಹೆಜ್ಜೆಯ ಜಾಡನ್ನು ಅನುಸರಿಸಿ, ದಾರಿಯಲ್ಲಿ ಬಿದ್ದ ಗೆಣಸಿನ ತುಣುಕುಗಳನ್ನು, ಬೀಳಲುಗಳನ್ನು ಕಾಣುತ್ತ ಹೋದಂತೆ, ಮೂಡೋಡಿಯ ತೆಂಕುಭಾಗದ ಬೇಲಿಯನ್ನು ಮುರಿದು ಅವು ಬಂದುದು ಕಾಣಿಸಿತು. ಅಲ್ಲಿನ ದರೆಯೊಂದು ಕುಸಿದಿತ್ತು. ಅದರ ಮಣ್ಣು ಮಗ್ಗುಲ ಕುಣಿಯನ್ನು ಮುಚ್ಚಿತ್ತು. ಅವುಗಳ ಪ್ರವೇಶಕ್ಕೆ ಇಂಬು ಮಾಡಿಕೊಟ್ಟಿತ್ತು. ರಾಮಯ್ಯ ಆ ಬೇಲಿ ಮತ್ತು ಕಣಿಗಳನ್ನು ಸರಿಮಾಡಿ, ಇನ್ನಷ್ಟು ಮುಳ್ಳನ್ನು ನಟ್ಟು, ಹಂದಿಗಳ ದಾರಿಗೆ ಪ್ರತಿಭಟೆ ಹೂಡಿದ. ಮುತ್ತಯ್ಯನಿಗೆ– ಎಷ್ಟೆಂದರೂ ತಮ್ಮ ಬೇಲಿ ಎಷ್ಟು ಬಲವಾಗಿದ್ದರೂ ಹಂದಿಗೆ ಈಡಲ್ಲ–ಎಂಬ ಯೋಚನೆಯಾಗಿ, ಗೆಣಸಿನ ಹೊಲಕ್ಕೆ ರಾತ್ರಿ ಕಾವಲುಬೇಕು ಎಂದು ನಿರ್ಧರಿಸಿದ. ಆಳುಗಳನ್ನು ಕೂಡಿಕೊಂಡು ಹೊಲದ ಹತ್ತಿರ ಅಟ್ಟಳಿಗೆ ಕಾವಲಿನ ಮನೆಯನ್ನು ಕಟ್ಟತೊಡಗಿದ. ಆ ರಾತ್ರಿ ಅರ್ಧಮರ್ಧ ತಯಾರಾದ ಆ ಮನೆಯಲ್ಲಿ ಅವನೇ ಕಾವಲಾದ.

{ಶಿವರಾಮ ಕಾರಂತರ ಎರಡು ಅಧ್ಯಯನಗಳು ; ಟಿ ಪಿ ಅಶೋಕ; ಅಕ್ಷರ ಪ್ರಕಾಶನ ಹೆಗ್ಗೋಡು; ಪು.ಸಂ–329}

ಭೂಮಿ ರಕ್ಷಣೆ

ಅಜ್ಜಿಗೆ ಮೊಮ್ಮಗನನ್ನು ಕಾಣುವ ಆತುರವಾಯಿತು. ರಂಗನಿಲ್ಲದ ದಿನ ನೋಡಿ "ಮಗು ಒಮ್ಮೆ ಬಂದು ಹೋಗಲಿ" ಎಂದು ಹೇಳಿ ಕಳುಹಿಸಿದಳು. ಶಂಕರ ಮಂಗಳೂರಿನಿಂದ ಬಂದ ಮೇಲೆ, ಗೆಣಸು ಸೂರೆಯಾದ ವಿಚಾರದಲ್ಲಿ ಶ್ಯಾನುಭೋಗ ಊರಲ್ಲೆಲ್ಲ ಹಬ್ಬಿಸಿದ ವಾರ್ತೆಗಳನ್ನು ಕೇಳಿದ್ದ. ಸಾಲದುದಕ್ಕೆ, ವಿದ್ಯುತ್ ಬೇಲಿಯ ವಿಚಾರದಲ್ಲಿ ಹಬ್ಬಿಸಿದ ಸುದ್ದಿಯೂ ತಿಳಿದಿತ್ತು. ಹೀಗಾಗಿ, ಅವರ ಮನೆಗೆ ಹೋಗುವ ಇಷ್ಟವೇ ಆಗಲಿಲ್ಲ. ಮನೆಯಲ್ಲಿ ಬೇಕಷ್ಟು ಕೆಲಸವಿದೆ. ಅವನ ವಿದ್ಯುತ್ ಸಲಕರಣೆ ಸಿದ್ಧವಾಗಿದೆ. ಅದನ್ನು ತಾತ್ಕಾಲಿಕವಾಗಿ ಅಬ್ಬಿಯ ಪಕ್ಕದಲ್ಲಿ ಕೂಡಿಯಾಯಿತು. ಹಂದಿಯ ಪ್ರವೇಶದಿಂದ ಅವನ ಈ ಕೆಲಸ ಚುರುಕಾಗಿ ನಡೆಯಿತು. ಸೂಮಿಯ ಸುತ್ತಲೂ ಅಲ್ಲಲ್ಲಿ ಮರದ ಕಂಬಗಳನ್ನು ನಿಲ್ಲಿಸಿದ. ಅವಕ್ಕೆ ಅಂತರ, ಅಂತರವಾಗಿ ಸರಿಗೆಯ ಬೇಲಿಯನ್ನು ಬಿಗಿಯಿಸಿದ. ಅಬ್ಬಿಯ ನೀರಿಂದ ಚಿಕ್ಕ ಡೈನಮೋ ತಿರುಗುವಂತೆ ನಾಡಿ ವಿದ್ಯುತ್ತನ್ನು ಹೊರಡಿಸಿ, ಆ ವಿದ್ಯುತ್ತನ್ನು ಬೇಲಿಯ ಸರಿಗೆಗಳಿಗೆ ಒದಗಿಸಿದ. ಈ ಕೆಲಸ ಕಾರ್ಯವಾಗಿ, ಎಳಚಿತ್ತಾಯರನ್ನು ಕರೆದುಕೊಂಡು ತನ್ನ ಆಳುಗಳ ಸಮ್ಮುಖದಲ್ಲಿ ಅದರ

ಸರಿಗೆಯನ್ನು ತೋರಿಸಿದ. ತಾನು ಸರಿಗೆಯನು ಮುಟ್ಟಿದ: ಉಳಿದವರಿಗೆ ಮುಟ್ಟಲು ಹೇಳಿ ಮೈ ಜುಮ್ಮಾಗುವಂತೆ ಮಾಡಿದ. ಎಳಚಿತ್ತಾಯರಿಗಂತೂ ತುಂಬ ಆಶ್ಚರ್ಯ, ಆಸೆ ಉಂಟಾಯಿತು. ಇಂಥ ಬೇಲಿಗಳಿದ್ದರೆ ಹೊರಗಿನ ಪ್ರಾಣಿಗಳಿಂದ ಬೆಳೆ ರಕ್ಷಿಸುವುದು ಸಾಧ್ಯ – ಎಂದೆನಿಸಿತು. ಎಲ್ಲರಿಂದಲೂ ಅಂಥ ಕೆಲಸ ಮಾಡಲು ಬಂದಿದ್ದರೆ ಆಗುತ್ತಿತ್ತು–ಎಂಬುದಷ್ಟೇ ಅವರ ಅಪೇಕ್ಷೆ. ಮುತ್ತಯ್ಯಗೌಡನ ಪಾಲಿಗೆ ಅದೊಂದು ಮಂತ್ರ ಶಕ್ತಿಯೇ ಎನಿಸಿತು. ಶಂಕರನ ಆ ಬೇಲಿಯ ನಿರ್ಮಾಣವನ್ನು ಕುರಿತು ಚರ್ಚಿಸುತ್ತ ರಂಗರಾಯರ ಹುಚ್ಚು ಮಾತುಗಳನ್ನು ನೆನೆದು ಹೇಳಿದ "ಸ್ವಾಮಿ, ನೀವೂ ಬೇಲಿ ಮುಟ್ಟಿದ್ದೀರಿ, ಮುತ್ತಯ್ಯನೂ ಮುಟ್ಟಿದ್ದಾನೆ. ಯಾರು ಇದರಲ್ಲಿ ಸತ್ತವರು? ನಮ್ಮ ರಂಗರಾಯರು ಏನೇನೊ ಹೇಳುತ್ತಿದ್ದಾರಂತೆ. ವಿದ್ಯುತ್ ಬೇಲಿ ಹಾಕಿ ಜನರನ್ನು ಕೊಂದು ತಮಗೆ ಅಪಕೀರ್ತಿ ತರುತ್ತಾನೆ ಎನ್ನುತ್ತಿದ್ದಾರಂತೆ. ಕೃಷಿಗೆ ನಾನು ಹೊಸಬನಿರಬಹುದು; ಅದರಲ್ಲಿ ನಾನು ಹೆಡ್ಡನೂ ಇರಬಹುದು. ಅದಕ್ಕೇನೆ–ಏನು ಕೆಲಸ ಮಾಡಬೇಕಾದರೂ ನಿಮ್ಮಂಥವರನ್ನು ಹೆಜ್ಜೆ ಹೆಜ್ಜೆಗೂ ಕೇಳಿ ಮುಂದುವರಿಯುತ್ತಿದ್ದೇನೆ. ಆದರೆ, ನಾಲ್ಕು ವರ್ಷ ಕಾಲ ಕಾಲೇಜಿನಲ್ಲಿ ಪಾಠ ಹೇಳಿಸಿಕೊಂಡ ನನಗೆ, ವಿದ್ಯುತ್ತಿನ ವಿಚಾರವೇ ತಿಳಿದಿಲ್ಲ ಎಂಬ ರೀತಿಯಲ್ಲಿ ದೂರಿ, ಶ್ಯಾನುಭೋಗರು ಅಪಪ್ರಚಾರ ಮಾಡಿದರೆ ಯಾರಿಗೆ ಭೂಷಣ?" ಎಂದು ನೋವಿನಿಂದ ನುಡಿದ.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.331}

ಕೃಷಿ ಆಧುನಿಕತೆ

ಶಂಕರ ಅವನ ಹಿಂದೆಯೇ ಹೋದ. ಹೋಗಿ ಮನೆಯನ್ನು ಸೇರುವಾಗ, ಮನೆಯ ಮುಂಗಡೆ ಶ್ಯಾನುಭೋಗ ರಂಗರಾಯರು, ಮೂರು ನಾಲ್ಕು ಜನ ಸರಕಾರಿ ನೌಕರರು ನಿಂತದ್ದು ಕಾಣಿಸಿತು. ಆ ತನಕ ತನ್ನ ಭೂಮಿಗೆ ಕಾಲಿರಿಸದ ರಂಗರಾಯರನ್ನು ಕಂಡು ಶಂಕರನಿಗೆ ಆಶ್ಚರ್ಯವಾಯಿತು. ಅವರು ಇವನನ್ನು ಮಾತನಾಡಿಸಲಿಲ್ಲ, ಈತ ಅವರನ್ನು ಮಾತನಾಡಿಸಲಿಲ್ಲ. ಬಂದವರಲ್ಲಿ ಒಬ್ಬರು ಮಣೆಗಾರರು. ಅವರು ಶಂಕರನಿಗೆ, ಬಂದಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಟ್ಟರು. "ಇವರು ತಹಶೀಲ್ದಾರರು, ಇವರು ಕಲೆಕ್ಟರರು, ಇವರು ಅರಣ್ಯ ಇಲಾಖೆಯವರು" ಎಂಬುದಾಗಿ ತಿಳಿಸಿದರು. ಜತೆಗೆ ಅವರವರ ಪರಿವಾರವಿತ್ತು; ಊರವರೇ ಆದ ಅರಿಗರೂ, ಎಳಚಿತ್ತಾಯರೂ ಬಂದೇ ಬಂದಿದ್ದರು. ಬಂದವರಿಗೆ ಊರಿನ ಮಾತು ಬರುತ್ತಿರಲಿಲ್ಲ. ಹೀಗಾಗಿ, ಮಣೆಗಾರರು ಶಂಕರನೊಡನೆ

"ಶಂಕರರಾಯರೇ, ಆ ವಿವಾದದ ಭೂಮಿ ನೋಡಬೇಕಾಗಿದೆ, ಅಲ್ಲದೆ ನಿಮ್ಮ ಕೆಲಸವನ್ನೂ ಇವರಿಗೆ ತೋರಿಸಬೇಕು" ಎಂದು ಕೇಳಿದರು. ಶಂಕರನಿಗೆ ಸಂತೋಷವೇ ಆಯಿತು. ಅವರನ್ನು ಕರೆದುಕೊಂಡು ಆ ಭೂಮಿಯನ್ನೆಲ್ಲ ಸುತ್ತಿಸಿದ. ಹೊಸತಾಗಿ ಮಾಡಿದ ಹೊಲಗಳು, ತರಕಾರಿಯ ತೋಟ, ಗೆಣಸು, ಮೆಣಸು ನಟ್ಟ ಸ್ಥಳ ಎಲ್ಲವನ್ನೂ ತೋರಿಸಿದ. ತಾನು ಮಾಡಿದ ಯಾವತ್ತು ಪ್ರಯತ್ನಗಳನ್ನು ವಿವರಿಸಿ ಹೇಳಿದ. ಇಲ್ಲಿನ ಸುಮಾರು ಐವತ್ತು ಎಕ್ರೆ ಭೂಮಿಯಲ್ಲಿ ಪ್ರತಿಯೊಂದು ಚೂರನ್ನೂ ಕೃಷಿ ಮಾಡಬೇಕೆಂದು ನನ್ನ ಇಷ್ಟ. ಗುಡ್ಡದ ನೀರಿದೆ; ಹರಿಯುವ ನದಿ ಇದೆ. ನದಿಗೆ ಒಡ್ಡು ಹಾಕಿ ವರ್ಷವೆಲ್ಲ ಬೆಳೆ ಬೆಳೆಯಬಹುದು. ಇನ್ನು ಬರುವುದು ಬೇಸಿಗೆ. ಪಂಪಿನಿಂದ ನೀರೆತ್ತಿ ಬೆಳೆ ಬೆಳೆಯಬೇಕೆಂದು ನನ್ನಿಷ್ಟ. ಏನೋ, ಯುದ್ಧ ಕಾಲವಾದುದರಿಂದ ಎಂಜಿನು, ಪಂಪು ಸಿಗುವುದು ಕಷ್ಟ' ಎಂದು ವಿವರಿಸಿದ. ಬಂದವರು ಕಣ್ಣಿಂದ ಕಾಣುತ್ತಿದ್ದರು, ಕಿವಿಯಿಂದ ಕೇಳುತ್ತಿದ್ದರು.

"ನಿಮ್ಮ ಊರವರು–ಇಲ್ಲಿ ಬೆಳೆ ಬೆಳೆದರೆ ಕಾಟಿ, ಕಡವೆಗಳ ಉಪದ್ರ ಹೇಳತೀರದು ಎನ್ನುತ್ತಾರೆ. ನಿಮಗೆ ಅವುಗಳ ಬಾಧಕವಿಲ್ಲವೇ?" ಎಂದು ತಹಶೀಲ್ದಾರರು ಕೇಳಿದರು. ಶಂಕರ ಅವರನ್ನು ಕರೆದುಕೊಂಡು ಭೂಮಿಯ ಕುಡಿಗೆ ಹೋದ. ಅಲ್ಲಿನ ಪುಟ್ಟ ಅಬ್ಬಿಯಿಂದ ವಿದ್ಯುತ್ತನ್ನು ಸಂಗ್ರಹಿಸಿ, ಅದರಿಂದ ಸಾಧ್ಯವಾಗಿ ಮಾಡಿದ ಮಿಂಚಿನ ಬೇಲಿ ತೋರಿಸಿದ. ಅವರಿಗೂ ಮುಟ್ಟಲು ಹೇಳಿದ. ಎಳಚಿತ್ತಾಯರು "ಸ್ವಾಮಿ, ಅವರೊಬ್ಬರಿಂದಲೇ ಇದು ಸಾಧ್ಯ. ಅವರು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪಾಸಾದವರು. ಇದನ್ನೆಲ್ಲ ಮಾಡಿಕೊಂಡರು! ನಮ್ಮಂಥ ಹಳ್ಳಿಯ ಜನಕ್ಕೆ ಇದು ಸಾಧ್ಯವೇ?" ಎಂದರು. ರಂಗರಾಯರು ಆ ಬೇಲಿಯನ್ನು ದೂರದಿಂದಲೇ ನೋಡುತ್ತಿದ್ದರೇ ಹೊರತು ಮುಟ್ಟುವ ಹವ್ಯಾಸಕ್ಕೆ ಹೋಗಲಿಲ್ಲ. ಮುಟ್ಟುವ ವ್ಯಕ್ತಿಗಳು ಸಾಯದೆ ಇರುವುದನ್ನು ಕಂಡು, ತಮ್ಮ ಅಪಪ್ರಚಾರಕ್ಕಾಗಿ ನಾಚಿಕೆಯೂ ಆಯಿತು.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.341–342}

ಮಹಾಯುದ್ಧ ಕೃಷಿ ಸಮಸ್ಯೆ

ದಿನಗಳು ಸರಿಯುತ್ತ ಹೋದಂತೆ ಯುದ್ಧದ ಸವಿಯನ್ನು ಜಗತ್ತಿನ ಪ್ರತಿಯೊಂದು ರಾಷ್ಟವೂ ಅನುಭವಿಸಲೇ ಬೇಕಾಯಿತು. ಹಿಂದೂಸ್ಥಾನಕ್ಕೆ ಅದರ ನಿಜವಾದ ಅನುಭವ ತೊಡಗಿದ್ದು ಬರ್ಮಾದೇಶ ಜಪಾನಿಯರ ವಶವಾದ ಮೇಲೆ.

ಪೌರ್ವಾತ್ಯ ದೇಶಗಳ ಮೇಲೆ ಎಂದು ಜಾಪಾನಿನ ಬರೆಬಿದ್ದಿತೊ, ಅಂದು ಭಾರತದಲ್ಲಿ ಅನ್ನದ ಕೊರತೆ ಕಾಣಿಸತೊಡಗಿತು. ನಾಡಿನ ಜನಗಳಿಗೆ ಆಹಾರದ ಕೊರತೆಯೊಂದಿದೆ – ಎಂಬ ಕೂಗು ಚೆನ್ನಾಗಿ ಕೇಳಿಸತೊಡಗಿತು. ದವಸಧಾನ್ಯಗಳ ಬೆಲೆ ಏರಿತು; ಇತರ ವಸ್ತುಗಳೂ ತುಟ್ಟಿಯಾದುವು. ಮಳೆಯ ಮುದ್ದಿನ ಮಗುವಾದ ದಕ್ಷಿಣಕನ್ನಡವೂ ಆಹಾರ ಸಾಲದೆ ಕಂಗೆಡಬೇಕಾಯಿತು.

ಬರಿಯ ಹತ್ತು ವರ್ಷಗಳ ಹಿಂದೆ ನಾಡಿನ ರೈತರು ಹಣದ ಮುಗ್ಗಟ್ಟಿನಿಂದ ಕಂಗಾಲಾಗಿದ್ದರು. ಬಿತ್ತಿದ್ದನ್ನು, ಬೆಳೆದದ್ದನ್ನು ಹೇಳಿದ ಬೆಲೆಗೆ ಮಾರಬೇಕಿತ್ತು: ರೈತ. ಬೇಸಾಯಗಾರ, ನೆಲವನ್ನಾಶ್ರಯಿಸಿದ ಕೂಲಿ, ಎಲ್ಲರೂ ಕಸಕ್ಕಿಂತ ಕಡಿಮೆಯಾಗಿದ್ದರು. ಹತ್ತು ವರ್ಷಗಳ ಅವಧಿಯಲ್ಲಿ ಪರಿಸ್ಥಿತಿಯೇ ತಲೆಕೆಳಗಾಯಿತು. ಅಂದು ಶಂಕರ ಬೇಸಾಯ ತೊಡಗಿದ್ದರೆ ಮೇಲೇಳುವುದಕ್ಕಿರಲಿಲ್ಲ. ಇಂದು, ಅವನಿಗನುಕೂಲವಾದಂಥ ಕಾಲ ಒದಗಿಬಂದಿದೆ. ಬಿತ್ತಿದ ಬೆಳೆಗೆ ಬೆಲೆಯಿದೆ, ಗಿರಾಕಿಯೂ ಇದೆ. ಬೆಳೆದುದು ಮಣಸಿರಲಿ, ಗೆಣಸಿರಲಿ, ಬತ್ತವಿರಲಿ– ಕೊಳ್ಳುವವರಿದ್ದಾರೆ; ಕೊಂಡು ತಿನ್ನುವವರೂ ಇದ್ದಾರೆ. ಹೀಗಾಗಿ, ಶಂಕರ ಬೇಸಾಯದಲ್ಲಿ ಚೆಲ್ಲಿದ ಹಣ ಉಸುಬಿನ ಮೇಲೆ ಸುರಿದ ನೀರಾಗಲಿಲ್ಲ. ಅವನ ಕೃಷಿಯ ವೆಚ್ಚವೂ ದಿನದಿನ ಏರತೊಡಗಿದೆ. ಎಲ್ಲ ವಸ್ತುಗಳ ಅಭಾವವು ಸತ್ಯಕ್ಕೋ ಸುಳ್ಳಿಗೋ ಕಾಣಿಸುತ್ತಿದೆ; ವೆಚ್ಚ ಹೆಚ್ಚಿದೆ, ಕಷ್ಟವೂ ಹೆಚ್ಚಿದೆ. ಆದರೆ, ದುಡಿದಂತೆ, ದುಡಿತಕ್ಕೆ ತಕ್ಕ ಪ್ರತಿಫಲವೂ ದೊರೆಯುತ್ತಿದೆ.

{ಶಿವರಾಮ ಕಾರಂತರ ಎರಡು ಅಧ್ಯಯನಗಳು, ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ–350–351}

ಹೊಲೆಯರು ಮತ್ತು ಕೃಷಿ

ಹೊಲೆಯ ಬೇಸಾಯಗಾರನಾಗುವುದುಂಟೇ ಎನಿಸಿತು. ಆದರೆ ಅವರಲ್ಲಿ ಬಂಜರು ಬಿದ್ದ ಎಷ್ಟೋ ಜಮೀನುಗಳಿದ್ದುವು. ಅದನ್ನೇಕೆ ಅವನು ಸಾಗುವಳಿ ಮಾಡಬಾರದೆಂದು ತೋರಿದುದರಿಂದ, ಅದೇ ವಿಷಯವನ್ನು ಪ್ರಸ್ತಾಪಿಸಲು ಒಳಕ್ಕೆ ತಮ್ಮ ತಾಯಿಯ ಬಳಿಗೆ ಹೋದರು. ಚೋಮನ ಆಸೆಯಿಂದ ಹೊರಕ್ಕೆ ಕಾದು ಕುಳಿತ. ತಾನು ಬೇಸಾಯಗಾರನಾಗುವ ಸುದಿನ ಬಂತೆಂದು ಎದೆಯ ಉಲ್ಲಾಸದಿಂದ ಬಡಿಯಿತು. ಕಾಫಿತೋಟದ ಮರವೆಯಾಯಿತು. ಧನಿಗಳು ತಿರುಗಿ ಬಂದು "ಚೋಮ ಇದುವರೆಗೆ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟಿದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೂ ಇಲ್ಲ" ಅಂದರು. ಆ ಮಾತಿಗೆ ಪ್ರತಿ

ಮಾತಿಲ್ಲ. ವಿಷಯ ಅಲ್ಲಿಗೆ ಮುಗಿಯಿತು. ಮನೆಯೊಳಗಿಂದ ಸಂಕಪ್ಪಯ್ಯನವರ ತಾಯಿ "ಅಬ್ಬಾ! ಈ ಹೊಲೆಯರಿಗೆ ಬಂದ ಸೊಕ್ಕೇ" ಎಂದು ಶಪಿಸುತ್ತಿದ್ದಳು. ಚೋಮ ನಿರಾಶೆಯಿಂದ ಮನೆಗೆ ಮರಳುವ ನಿಶ್ಚಯ ಮಾಡಿದ. ಗ್ರಹಚಾರವಶಾತ್ ಮನ್ನೇಲನ ಸವಾರಿ ಅವನು ಅಲ್ಲಿಂದೆದ್ದು ಹೊರಡುವಷ್ಟರಲ್ಲಿ ಸಂಕಪ್ಪಯ್ಯನವರಲ್ಲಿಗೆ ಬಂತು.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ; ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.18}

ಸಂಕಪ್ಪಯ್ಯನವರ ಮನೆಯಿಂದ ಬಿರುಮ ಪೂಜಾರಿಯ 'ಹೆಂಡದಂಗಡಿ'ಗೆ ಒಂದೂವರೆ ಮೈಲು ದೂರವಿದೆ. ಚೋಮನು ನಡೆಯುತ್ತಲೇ ಇದ್ದ. ಹಾದಿಯುದ್ದಕ್ಕೂ, ಏನು ಬಂದುವು, ಯಾರೆಲ್ಲ ಸಂಧಿಸಿದರು ಎಂಬುದರ ಪರಿವೆ ಅವನಿಗೆ ಉಂಟಾಗಲಿಲ್ಲ. ಅವನ ಮನಸ್ಸು ಉದ್ವೇಗದಿಂದ ಕುದಿಯುತ್ತಲಿತ್ತು. ತನ್ನ ಹಣೆಯಲ್ಲಿ ನೇಗಿಲಿನ ಯೋಗ ಬರೆಯಲಿಲ್ಲವೆಂದು ಅವನು ಚಿಂತಿಸುತ್ತಿದ್ದ.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ–19}

ಕೃಷಿಕನಾಗುವ ಆಸೆ

"ಅದಕ್ಕೇನು ಸಾಯಲಿ ನಾನು?"

"ಸಾಯುವುದೂ ಬೇಡ, ಇನ್ನೇನೂ ಬೇಡ. ನಮಗೆ ಹೇಗೂ ಗದ್ದೆ ಬೇಸಾಯ ಮಾಡುವ ಋಣವಿಲ್ಲ. ಬರಿದ ಆ ಎತ್ತುಗಳನ್ನು ಕಟ್ಟಿಕೊಂಡು ಮಾಡುವುದೇನು?"

"ಮಾಡುವುದೇನು–ಎಂದರೆ? ಸರಕಾರದ ಜಾಗವನ್ನು ದರಕಾಸ್ತಿಗೆ ಪಡೆದು ಅದರಲ್ಲಿ ಸಾಗುವಳಿ ಮಾಡುತ್ತೇನೆ! ಗುಡ್ಡವಾದರೂ ಗುಡ್ಡ. ಅಂತು ನನ್ನದೇ ನಾಲ್ಕು ಗೇಣು ನೆಲವನ್ನು ಉಳಲೇಬೇಕು."

"ಉಳುವುದೆಂದರೆ ಬರಿದೆ ಚಂದಕ್ಕೇನು? ಹಾಗಿದ್ದರೆ ಮನೆ ಮುಂದಿನ ಅಂಗಳವನ್ನೇ ಉಳಬಹುದು. ಒಂದು ನಾಲ್ಕು ಸೇರು ಬತ್ತವಾದರೂ ಸಿಕ್ಕಿ, ಬೇಡುವುದು ನಿಂತೀತಲ್ಲ ಎಂದು ಯೋಚಿಸುವ ಬದಲು, ಗುಡ್ಡ ಮಗುಚುತ್ತೇನೆ, ಕಾಡನ್ನು ಕಡಿಯುತ್ತೇನೆ, ತೋಡನ್ನು ಅಗೆಯುತ್ತೇನೆ– ಎಂದರೆ ಉಪಯೋಗವಿದೆಯೆ! ಬಿಡು, ಅದೆಲ್ಲ ಯೋಚನೆ. ಹಿರಿಯರು ಸಂಕಪ್ಪಯ್ಯ ಧನಿಯರ ಉಪ್ಪನ್ನು ತಿಂದೇ ಬೆಳೆದರು. ನಾವು ಆ ಉಪ್ಪಿನ ಋಣವನ್ನು ಹರಿಯಲು ಬರುವುದಿಲ್ಲ. ಮೊನ್ನೆ

ನೀನು ಅಷ್ಟು ಉಡಾಪೆ' ಮಾತನಾಡಿ ಬಂದ ಮೇಲೂ ಅವನು ಕೆಲಸವನ್ನು ಮಾಡಲಿ, ಬಿಡಲಿ, ಅವನ ಪಾಲಿನ ಪಡಿಯನ್ನು ನೀನು ನಿತ್ಯ ಬಂದು ತೆಗೆದುಕೊಂಡು ಹೋಗು' ಎಂದರು. ಹಾಗೆ ಇನ್ನಾರು ಉಪಕಾರ ಮಾಡುವವರು? ಚಿನ್ನದಂಥ ಧನಿಯರ ನೆಲ ಬಿಟ್ಟರೆ ನಮಗೆ ದೇವರು ಒಳ್ಳೆಯದನ್ನು ಮಾಡಲಾರ."

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.62–63}

ಕಾಫೀ ಕೃಷಿ

ಸಂಜೆ ಸಮೀಪಿಸಲು ಅವರ ಪಯಣ ಮುಗಿಯಿತು. ಮಳೆಯು ಸಣ್ಣದಾಗಿ ಹನಿಯುತ್ತಲೇ ಇತ್ತು. ನೀಲ ಬೆಳ್ಳಿಯರು ಮನೋಲನ ಹಿಂದೆ, ತಮ್ಮ ಸಾಮಾನುಗಳನ್ನು ಹೊತ್ತುಕೊಂಡು ಹೋಗಿ ತೋಟವನ್ನು ಸೇರಿದರು. ಹೊತ್ತು ಮುಳುಗದಿದ್ದರೂ ಮುಗಿಲುಗಳಿಂದ ಕತ್ತಲಾಗಿಯೇ ಕಾಣಿಸುತ್ತಿತ್ತು. ಮನೋಲನು ಕೂಲಿ ಲಾಯದ ಒಂದು ಕೊಠಡಿಯನ್ನು ಅವಳಿಗೆ ತೋರಿಸಿಕೊಟ್ಟು "ನೀನಿನ್ನು ಇಲ್ಲೇ ಬಿಡಾರ ಮಾಡೆಂದು" ತಿಳಿಸಿ, ನೀರು ಕಟ್ಟಿಗೆ ಮೊದಲಾದವುಗಳ ಅನುಕೂಲತೆ ತೋರಿಸಿಕೊಟ್ಟು ಹೊರಟು ಹೋದ. ಈ ಉದ್ದದ ಲಾಯದಲ್ಲಿ ಬೇರೆ ಯಾವ ಬಿಡಾರಗಳೂ ಬಂದಿರಲಿಲ್ಲ. ಇತರ ಕೂಲಿಗಳು ಬರಲು ಇನ್ನೂ ಎರಡು ದಿನಗಳು ಬೇಕು. ಅಲ್ಲಿಯ ತನಕ ಯಾವ ಕೆಲಸವೂ ಇಲ್ಲ. ಮನ್ನೇಲ ಅವರನ್ನು ದೊರೆಗಳ ತನಕ ಕರೆದೊಯ್ಯಲೂ ಇಲ್ಲ. ಅವಳನ್ನೂ ಮಾತನಾಡಿಸಲಿಲ್ಲ. ಮೂರು ದಿನ ಕಳೆಯಲು ಬೆಳ್ತಂಗಡಿಯಿಂದ ಹೊರಟ ಕೂಲಿಗಳ ತಂಡ ಕಾಲುನಡೆಯಿಂದ ತಮ್ಮ ಯಾತ್ರೆಯನ್ನು ಪೂರೈಸಿ ತೋಟವನ್ನು ಸೇರಿತು. ಆಗ ಮನ್ನೇಲನು ಬಂದು, ಅವರೆಲ್ಲರ ಜತೆಯಲ್ಲಿಯೆ ಬೆಳ್ಳಿ, ನೀಲರನ್ನೂ ತನ್ನ ದೊರೆಗಳ ಬಳಿಗೆ ಕರೆದೊಯ್ದು. ಅಲ್ಲಿ ಎಲ್ಲರಿಗೂ ಸಂಬಳ ನಿರ್ಣಯವಾಯಿತು. ಈ ವರ್ಷ ಗಂಡಾಳಿಗೆ ತಿಂಗಳೊಂದರ ಏಳು ರೂಪಾಯಿಗಳೆಂದು ತಿಳಿಸಿದ. ಎಷ್ಟೋ ಜನ ಕೂಲಿಗಳು ಅಸಮಾಧಾನಗೊಂಡರು. "ಮಾಡುವುದೇನು? ಈ ವರ್ಷ ಕಾಫಿ ಬೀಜಕ್ಕೆ ಧಾರಣೆಯೇ ಇಲ್ಲ" ಎಂದು ಸಮಾಧಾನ ಹೇಳಿದರು.

ಸರಿ, ಎಲ್ಲರ ಹೆಸರನ್ನು ಬರೆದುಕೊಂಡಾಯಿತು. ಬೆಳ್ಳಿಯ ಸರದಿ ಬಂದಿತು. ಅಲ್ಲಿ ಬೆಳ್ಳಿಯ ಬಣ್ಣ ತುಸು ಹೊಡೆದು ಕಾಣುತ್ತಿತ್ತು. ಇತರ ಹೊಲೆಯರಿಗಿಂತ ತುಸು ಬಿಳಿದಾಗಿ ಅವಳು ಕಾಣಿಸುತ್ತಿದ್ದುದರಿಂದಲೂ, ತೀರ ಹೊಸಬಳಾಗಿ ಕಂಡುದರಿಂದಲೂ ಮಿಂಗೇಲ ದೊರೆಗಳು "ಇವಳು ಯಾರು?" ಎಂದು

ವಿಚಾರಿಸಿದರು. ಮಲನು, ಚೋಮನ ವಿಚಾರವನ್ನೂ, ಅವನ ಮಕ್ಕಳು ಕಳೆದ ವರ್ಷ ಬಂದು ಹೋದುದನ್ನೂ ತಿಳಿಸಿದ. ದೊರೆಗಳು ತಮ್ಮ ಲೆಕ್ಕದ ಪುಸ್ತಕವನ್ನು ಬಿಡಿಸಿ, "ನಿನ್ನ ತಂದೆಯಿಂದ ನಮಗೆ 15 ರೂಪಾಯಿ ಇನ್ನೂ ಬರುವುದಿದೆ. ನೀನು ಕಷ್ಟ ಮಾಡಿ ತೀರಿಸುತ್ತೀಯಲ್ಲ" ಎಂದರು. ಬೆಳ್ಳಿಗೆ ಒಮ್ಮೆ ಸಂತೋಷವೂ ಇನ್ನೊಮ್ಮೆ ಸಂಶಯವೂ ಆಯಿತು. ಮನ್ನೇಲ, ಅವರ ಸಾಲದ ಹಣ 25 ರೂಪಾಯಿಯೆಂದು ಹೆದರಿಸಿದ್ದ. ಅದೀಗ 15 ರೂಪಾಯಿಗೆ ಇಳಿದುದಕ್ಕೆ ಸಂತೋಷವಾಯಿತು. ಸುಳ್ಳು ಲೆಕ್ಕವನ್ನು ಹೇಳಿದ ಮಲನ ಕೆಳಗೆ ಜೀವನ ಮಾಡುವುದು ಹೇಗೆಂಬ ಅಂಜಿಕೆಯೂ ಆಯಿತು. ಆದರೆ ಮನ್ನೇಲ ಅವಳನ್ನು ಸಮಾಧಾನಪಡಿಸುವುದಕ್ಕೆ "ಅಷ್ಟು ಹೆದರಿಸದಿದ್ದರೆ ನೀವು ನಿಮ್ಮ ಸಾಲ ತೀರಿಸುವುದುಂಟೇ?" ಎಂದು ಹೇಳಿದ.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.72–73}

ಚೋಮ ನಿಟ್ಟುಸಿರೊಂದನ್ನು ತೆಗೆದು "ದೈವ ನನ್ನ ಹಣೆಯಲ್ಲಿ ಹಾಗೆ ಬರೆದಿದ್ದರೆ ಯಾರೇನು ಮಾಡಲು ಬಂದೀತು?" ಎಂದ.

"ಯಾವುದನ್ನು ಹಾಗೆ ಬರೆಯುವುದು?"

"ಯಾವುದನ್ನೆಂದರೆ? ನನ್ನ ಬೇಸಾಯದ ಆಸೆಯನ್ನು"

"ಅದೋ! ಅಪ್ಪಾ, ಸುಮ್ಮನೆ ಇಲ್ಲದ ಚಿಂತೆಯನ್ನು ನೀನು ಕಟ್ಟಿಕೊಳ್ಳುತ್ತೀ. ನಾವು ಹೊಲೆಯರಾಗಿ ಹುಟ್ಟಿ, ನಮ್ಮ ಅಂತಸ್ತಿಗೂ ಮೀರಿದ ಆಸೆ ಹಿಡಿದರೆ ಹೇಗೆ? ಅದೃಷ್ಟ ಬೇಡವೇ? ಮುಖ್ಯ ಬೇಕು ಅದೃಷ್ಟ, ದೇವರು ಹಣೆಯಲ್ಲಿ ಬರೆದಿರಬೇಕು. ಗುರುವನೊಬ್ಬನ ಹಣೆಯಲ್ಲಿ ಬರೆದಿರಬೇಕೆಂದು ಕಾಣುತ್ತದೆ. ಅವನು ತನ್ನ ಜಾತಿಯನ್ನು ಬಿಟ್ಟರೂ, ಬೇಸಾಯಗಾರನಾದ. ಅವನೊಬ್ಬನಾದರೂ ನಮ್ಮ ಕುಲದಲ್ಲಿ ಹುಟ್ಟಿದರೂ ಬೇಸಾಯದ ಋಣ ಪಡೆದ." ಗುರುವನ ಹೆಸರು ಚೋಮನಿಗೆ ರೋಮಾಂಚನ ಹುಟ್ಟಿಸಿತು. ಅವನು ತನ್ನ ಮಾತನ್ನು ಕೇಳದಿದ್ದ ಚಿಂತೆ ಬೇರೆ, ತಿರುಗಿ ತನ್ನ ಮನೆಯ ಮುಖ ತಿರುಗಿಸದಿದ್ದುದೊಂದು ಸಿಟ್ಟು ಬೇರೆ. ತನ್ನ ಕಣ್ಮುಂದೆಯೇ ಅವನ ಬೇಸಾಯಗಾರನಾದನಲ್ಲ ಎಂಬ ಅಸೂಯೆ! ಎಲ್ಲವೂ ಸೇರಿಕೊಂಡವು.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ; ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.80–81}

ಕುಟುಂಬದ ಆಂತರಿಕ ಸಂಬಂಧ

"ಅವನೀಗ ಅಲ್ಲಿದ್ದಾನೆ; ಅಲ್ಲದೆ ಚೆನ್ನಾಗಿ ದುಡಿಯುತ್ತಲೂ ಇದ್ದಾನೆ. ನೋಡಿ, ಒಂದು ಸಂಗತಿ ನಿಮಗೆ ಹೇಳುತ್ತೇನೆ. ನಿಮಗೆ ಹೇಗೆ ಅನಿಸುತ್ತದೆಯೋ, ನನ್ನ ಅಭಿಪ್ರಾಯ ಹೇಳುವುದಾದರೆ-ಕಂಗಿನ ತೋಟಕ್ಕೂ, ನಮ್ಮಂಥ ಹವ್ಯಕ ಬ್ರಾಹ್ಮಣರಿಗೂ ಜೋಡಿ ಸಮ. ನಮ್ಮ ಕೈಯಲ್ಲಿ ತೋಟ ಊರ್ಜಿತಕ್ಕೆ ಬಂದ ಹಾಗೆ, ಇನ್ನು ಯಾವಾವ ಜನರಿಂದಲೂ ಅದು ಮೇಲಕ್ಕೆ ಬರಲಾರದು. ಈ ನಮ್ಮ ನಾರಾಯಣ ಬರುವ ಮೊದಲು, ಒಬ್ಬಿಬ್ಬರು ಬ್ಯಾರಿಗಳಿಗೆ ಗೇಣಿಗೆ ಕೊಟ್ಟು ನೋಡಿದೆ. ಅವರು ಅಡಿಕೆ ಮರದ ಕುಡಿಯನ್ನು ಕಂಡರೇ ಹೊರತು, ಅದರ ಬುಡವನ್ನು ಕಾಣಲಿಲ್ಲ. ಬುಡಕ್ಕೆ ಈಟು ಬಿದ್ದರೆ ಕುಡಿಯಲ್ಲಿ ಫಲ ಉಂಟೆಂದು ಅವರು ತಿಳಿಯಲಾರರು. ಅಲ್ಲದೆ, ಗೇಣಿಯಾದರೂ ಮನೆಗೆ ಬರುತ್ತಿತ್ತೇ? ಸಾಕು ಸಾಕಾಯಿತು. ಆದರೆ ನಾರಾಯಣನನ್ನು ತಂದು ಹಾಕಿದ ಮೇಲೆ ಆ ಯೋಚನೆ ನನಗಿಲ್ಲ. ತೋಟವನ್ನು ಸಾಬೀತಾಗಿ ಇರಿಸಿಕೊಂಡಿದ್ದಾನೆ. ಅಲ್ಲದೆ ನಮ್ಮಿಂದ ತನಗೊಂದು ಜೀವನವಾಯಿತು ಎಂಬ ಹಂಗೂ ಇದೆ ಮನಸ್ಸಿನಲ್ಲಿ."

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.220}

ಕೃಷಿ ವಿನಾಶ

ಭಟ್ಟರು "ಹೂಂ, ಆಗಲಿ, ಗೇಣಿಯ ವಿಚಾರ ಆಯಿತಲ್ಲ- ಏನೋ ಸುದ್ದಿ ಕೇಳಿದೆ. ಗಂಡ ಒಕ್ಕಲು ಬಿಡುತ್ತಾನೆ" ಎಂದು. ಬಿಡುವುದಾದರೆ ಬಿಡಲಿ, ಆದರೆ ಮುಂಚೆಯೇ ಹೇಳಿ ಬಿಡು ಬೇಗನೆ ಬಿಟ್ಟರೆ ನನಗೂ ಒಳ್ಳೆಯದೇ, ಮಳೆಯ ಸುರುವಿಗೆ ಮಡಿಕೆ, ಕುಡಿಕೆ ಹಿಡಿದುಕೊ ಮಾಯವಾದರೆ ನನಗೆ ಬೇಸಾಯ ಮಾಡಲಿಕ್ಕೂ ಅಲ್ಲ, ಹೊಸ ಒಕ್ಕಲನ್ನು ಹುಡುಕಲಿಕ್ಕೂ ಇಲ್ಲ ಎಂದು ಹೇಳಿ ಹಿಂದಿರುಗಿದರು.

"ನಾನೆಂದೆ ಇಂಥ ಒಕ್ಕಲಿದ್ದರೆ ಹೇಗೆ ನಿಮಗೆ ಪೂರೈಸುತ್ತದೆ?" ಎಂದು. ಅವರು ನಗುತ್ತ "ಪೂರೈಸುವುದೂ ಇಲ್ಲ, ಮಣ್ಣೂ ಇಲ್ಲ. ಈಗ ಭೂಮಿಯ ತೀರ್ವೆಯನ್ನು ಕೈಯಿಂದಲೇ ಹಾಕುತ್ತಿದ್ದೇನೆ. ನನ್ನ ಗೇಣಿಯು ಬಾರದೆ ಹೋದರೂ ಚಿಂತೆಯಿಲ್ಲ; ಅವಾದರೂ ಬೆಳೆದು ತಿನ್ನುತ್ತವೆಯೋ? ಹೂಡುವ ಹಾಗಿಲ್ಲ, ಬೇಲಿ ಮಾಡುವ ಹಾಗಿಲ್ಲ, ಜಾಗ ಬಿಡುವಂತೆಯೂ ಇಲ್ಲ. ನಾನಾಗಿ ಇವರನ್ನು ಓಡಿಸಬಾರದು ಎಂದು ಇದ್ದೇನೆ. ಅಂದರೆ, ಇಲ್ಲಿ ಗೈಮೆ ಮಾಡಲು ಮನೆಯಲ್ಲಿ

ನಾಲ್ಕಾರು ಜನಗಳಿರುವ ಒಕ್ಕಲು ಬೇಕು. ಮೊದಲು ಕೆಂಚನೂ, ಅವನ ಅಣ್ಣ ತಮ್ಮಂದಿರೂ ಸೇರಿ ಮೂರು ನಾಲ್ಕು ಜನರು ಇದ್ದರು. ಆಗ ಅವನು ಅಷ್ಟೊಂದು ಪಡಪೋಶಿಯಾಗಿರಲಿಲ್ಲ. ಈಗ ಗಂಡ ಹೆಂಡಿರಿಬ್ಬರೇ ಇದ್ದಾರೆ. ಉಳಿದವರು ನಂಟರಂತೆ ಎರಡು ಮೂರು ದಿನ ಬಂದಿರುತ್ತಾರೆ, ಹೋಗುತ್ತಾರೆ. ಚೆನ್ನಾಗಿ ಬೆಳೆದಾಗಲೂ, ಈ ಸುತ್ತಲಿನ ಕಾಡಿನಿಂದಾಗಿ ಸಿಗುವುದು, ಮುಡಿಗೆ ಕಳಸೆ ಬತ್ತ. ಇವನ ಸಾಗುವಳಿಯಿಂದ ಹೊಟ್ಟು ಮಾತ್ರ ಸಿಕ್ಕಿತು. ಒಳ್ಳೆಯ ಒಕ್ಕಲು ಸಿಗುವ ಹಾಗೆಯೇ ಇಲ್ಲ. ಇವನನ್ನು ಓಡಿಸಿದರೆ, ಇನ್ನೂ ಇಲ್ಲದೆ, ನೆಲವೇ ಕಾಡು ಬೆಳೆದುಬಿಟ್ಟರೆ! ಈಗ ಗದ್ದೆಯೆಂಬ ಗುರುತಾದರೂ ಉಳಿದಿದೆ. ನಮ್ಮ ಹಿರಿಯರು ಹಿಂದಿನ ಕಾಲದಲ್ಲಿ ಏನು ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ಆದರೆ, ಈಗ ಇಲ್ಲಿ ಯಾರೂ ಬಂದಿರಲು ಇಷ್ಟಪಡುವುದಿಲ್ಲ. ಮೊದಲು, ಈಗಿನಷ್ಟು ಕಾಡು ಇರಲಿಲ್ಲವೆಂದೇ ಕಾಣುತ್ತದೆ. ಇಲ್ಲಿಂದ ನೀವು ಅರ್ಧ ಮೈಲು ಮುಂದುವರಿದರೆ ತೆಂಗಿನ ತೋಟ ಬಂದಿದೆ. ಈಗಿನ ಹಾಗೆ ಸುತ್ತಲೆಲ್ಲ ಕಾಡು ಇರುತ್ತಿದ್ದರೆ, ಹಾಗೆ ತೋಟ ಇರುವುದು ಸಾಧ್ಯವೇ ಇರಲಿಲ್ಲ" ಎಂದರು.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ. ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.338}

ಹೊಲ ನಾಶ

ಕೂಜಪ್ಪನ ಪಿತ್ರಾರ್ಜಿತ ಹೊಲಗಳ ಮೇಲುಗಡೆಯಲ್ಲಿ ಬೇರೊಬ್ಬರಿಗೆ ಸ್ವಲ್ಪ ಜಮೀನಿತ್ತು. ಅದನ್ನು ಹೇಗಾದರೂ ಮಾಡಿ ತಾನೇ ದೊರಕಿಸಿಕೊಂಡರಾಗುತ್ತಿತ್ತು – ಎಂದು ಕೂಜಪ್ಪನ ಹಂಬಲವಿತ್ತು. ಆದರೆ ಹಳ್ಳಿಯವರ ಗಾದೆಯಂತೆ 'ಹಣವಿಲ್ಲದೆ ಬಡ್ಡಿ ಕಳೆದುಕೊಳ್ಳುವಂತಾಯಿತು.' ಆ ಭೂಮಿಯನ್ನು ಅನಾವಶ್ಯಕವಾಗಿ ಮೇಲಾಡಿಸಿ ರಾಮಣ್ಣನೇ ಕೊಂಡುಕೊಂಡನು. ಅವನು ಕೊಂಡನೆಂದು ತಿಳಿದುದೇ – ಅವನ ಆಳುಗಳು ಸುತ್ತಲೂ ಅಗಳು, ಬೇಲಿ ಹಾಕಿಸಲು ತೊಡಗಿದ ಮೇಲೆ, ಕೂಜಪ್ಪನ ಎದೆ ಧಸಲ್ಲೆಂದಿತು. ಹೊಸ ಅಗಳಿನ ಕಂದಕ ಕೂಜಪ್ಪನ ಜಾಗದಿಂದ ಹೋಯಿತು. ಒಂದು ಮಗ್ಗುಲಲ್ಲಿ ಬಾಂದು ಕಲ್ಲನ್ನು ಮೀರಿ ಆವಾರವೂ ಎದ್ದಿತು. ಅಷ್ಟಕ್ಕೂ ಅವನು ಸುಮ್ಮನಿದ್ದ. ಆದರೆ ರಾಮಣ್ಣನ ತಂತ್ರ ಸ್ಪಷ್ಟವಾಗಿ ಬಯಲಾದುದು ಮಳೆಗಾಲ ತೊಡಗಿದ ಮೇಲೆ ಮೇಲಣ ಜಾಗದ ನೀರು ಬೇರೆಯೇ ಒಂದು ತೋಡಿನ ಮೂಲಕ ಹರಿಯುತ್ತಿತ್ತು, ಈ ತನಕ. ಈ ವರ್ಷ ನಡೆದ ಹೊಸ ಏರ್ಪಾಟಿನಿಂದ, ಅದೆಲ್ಲ ಕೂಜಪ್ಪನ ಹೊಲಗದ್ದೆಗಳ ಮೇಲೆ ಕೊಚ್ಚಿ ಹರಿದು, ಆ ವರ್ಷ ಬಿತ್ತಿದಂತೆ, ನಡದಂತೆ ಮರಳಿನಿಂದ ತುಂಬಿಸಿಬಿಟ್ಟಿತು. ಕೂಜಪ್ಪ ರಾಮಣ್ಣನನ್ನು

ಕಂಡು ಹೇಳಿದ ಬಲ್ಲವರಿಂದ ತಿಳಿಸಿ ಹೇಳಿಸಿದ. ಅದಕ್ಕೆ "ಅಂಥಾದಿದ್ದರೆ ಕೋರ್ಟಿಗೆ ಹೋಗಲಿ" ಎಂದು ಜಬರಿಸಿದ ರಾಮಣ್ಣ.

ಬೆಳೆಯೆಲ್ಲವೂ ಮಣ್ಣು ಪಾಲಾದ ಮೇಲೆ ಕೂಜಪ್ಪ ಸುಮ್ಮನಾದಾನೆಯೇ? ಕೋರ್ಟಿಗೆ ಹೋದ. ಎರಡು ವರ್ಷಗಳ ಕಾಲ ಕೋರ್ಟು ಮನೆಗಳ ಜಾತ್ರೆಯು ಸತತವಾಗಿ ನಡೆಯಿತು. ಸುಳ್ಳು ಸಾಕ್ಷಿಗಳ ಬಲದಿಂದ ಮೊದಲನೆಯ ಬಾರಿ ಆತನೇ ಸೋತು, ಮಂಗಳೂರಿನಲ್ಲಿ ಅಪೀಲು ಮಾಡುವಂತಾಯಿತು. ಇಷ್ಟಕ್ಕೆ ಮೂರು ವರ್ಷಕಾಲ ಹಿಡಿಯಿತು. ಕೂಜಪ್ಪ ಅನ್ನಕ್ಕೆ ಸಾಲಮಾಡುವಂತಾಯಿತು. ಈ ನಡುವೆ ರಾಜಿಮಾಡುವ ಮುಖಂಡರೂ ಮುಂದೆ ಬಂದರು. ಆದರೆ ನೋವಿನಿಂದ ಕೂಜಪ್ಪನ ಕೋಪ ಶಾಂತವಾಗುವಂತಿರಲಿಲ್ಲ. "ಒಂದೂ ನಾನು ಮುಳುಗುತ್ತೇನೆ, ಇಲ್ಲವಾದರೆ ಅವನು ಹಾಳಾಗಿ ಹೋಗಬೇಕು" ಎಂಬುದೇ ಅವನ ಖಂಡು ತುಂಡು ನಿರ್ಣಯವಾಗಿತ್ತು. ಕೂಜಪ್ಪನ ರಥಕ್ಕೆ ಈ ಕೋರ್ಟಿನ ಬಿರಿಯನ್ನೇ ಹಾಕಿ, ತರುಬಿ, ತನ್ನ ದಾರಿಗೆ ತಿರುಗಿಸಿಕೊಳ್ಳುವ ಎಂದು ಯೋಚಿಸಿದ್ದ ಯೋಚನೆಗಳು ಮಾತ್ರ ಸಫಲವಾಗಲಿಲ್ಲ. ಮಗಳನ್ನು ಲಗ್ನಮಾಡಿಕೊಡುವುದಾದರೆ – ಎಲ್ಲ ನಷ್ಟವನ್ನು ತುಂಬಿಸಿಕೊಡುತ್ತೇನೆಂದು ಹೇಳಿಯೂ ಕಳುಹಿಸಿದ. "ನಮ್ಮ ಜಾತಿ ಹುಡುಗರು ಸಿಗದೆ ಹೋದರೆ, ಬೇರೆ ಜಾತಿ ನಾಯಿಗೆ ಮಗಳನ್ನು ಕೊಡುವುದಲ್ಲವೇ?" ಎಂದು ಅಭಿಮಾನದಿಂದ ಕೂಜಪ್ಪ ನುಡಿದ.

{ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಸಂಪುಟ–3, ಬಿ ಮಾಲಿನಿ ಮಲ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಪು.ಸಂ.367}

ಮಾರ್ಕ್ಸವಾದವು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಅಂಶಗಳನ್ನು ಹೇಳುತ್ತದೆ. ಮನುಷ್ಯ ಮತ್ತು ಅವನ ಸೃಜನಶೀಲತೆಯನ್ನು ಈ ದೃಷ್ಟಿಯಲ್ಲಿ ನಾವು ಸಮಾಜ ಮತ್ತು ವ್ಯಕ್ತಿ ಸಂಬಂಧದ ವಿವರದಲ್ಲಿಯೇ ನೋಡಬೇಕಾಗುತ್ತದೆ. ಮನುಷ್ಯನಿಗೆ ಅವನು ಹೇಳುವ ಸಂಗತಿಗಳಿಗೆ ದ್ವಂದ್ವಾತ್ಮಕವಾದ ಸಂಬಂಧವೂ ಇದೆ. ಯಾವುದೇ ರೀತಿಯಲ್ಲಿ ನಾವು ಹೇಳಿದರೂ ನಮಗೂ ನಮ್ಮ ಬರಹಕ್ಕೂ ಸಮಾಜಕ್ಕೂ ಒಂದು ನಂಟು ಇದ್ದೇ ಇರುತ್ತದೆ. ವಾಸ್ತವವಾಗಿ ಅತ್ಯಂತ ಹೆಚ್ಚು ಚರ್ಚೆಗೆ ಒಳಗಾದ, ಗೋಲ್ಡ್‌ಮನ್ ಪ್ರತಿಪಾದಿಸಿದ ಜೆನೆಟಿಕ್ ಸ್ಟಕ್ಚುರಲಿಸಂ ಸಮಾಜವನ್ನು ಕೇಂದ್ರ ಮಾಡಿಕೊಂಡಿದೆ. ಅದು ಸಾಮಾಜಿಕ ಚಿಂತನೆ ಮತ್ತು ಸಾಹಿತ್ಯವನ್ನು ಹೇಳುತ್ತದೆ. ಸಾಮಾಜಿಕ ಜೀವನ ಮತ್ತು ಸಾಹಿತ್ಯವನ್ನು ಅದು ದ್ವಂದ್ವಾತ್ಮಕವಾಗಿಯೂ ಗ್ರಹಿಸುತ್ತದೆ. ವಾಸ್ತವವಾಗಿ ಯಾವುದೇ ರಚನೆಯು ನಿರ್ದಿಷ್ಟವಾಗು ಕೆಲವು ಸಂಗತಿಗಳನ್ನು ಹೇಳುತ್ತದೆ. ಅದು ಸಮಾಜವನ್ನು ಗ್ರಹಿಸುವ

ಮತ್ತು ಅದರ ಅಗತ್ಯವನ್ನು ನಿರೂಪಿಸುವ ಕ್ರಮವೂ ಹೌದು. ಅದರಲ್ಲಿ ಇತ್ಯಾತ್ಮಕವಾದ ಅಂಶಗಳು ಇದ್ದೇ ಇರುತ್ತವೆ. ಅಂದರೆ ವಾಸ್ತವವಾದ ರಚನೆ ಮತ್ತು ಅದರ ಚಹರೆಗಳು ವಿಶಿಷ್ಟವೂ ಹೌದು. ಇದು ವೈಜ್ಞಾನಿಕವಾದ ಪರಿಕಲ್ಪನೆಯೂ ಹೌದು. ಇದನ್ನು ಫುಕೋ ಬೇರೆ ಥರ ವ್ಯಾಖ್ಯಾನಿಸುತ್ತಾನೆ.

ಫುಕೋ ಒಬ್ಬ ಇತಿಹಾಸವನ್ನು ಮಾತ್ರವೇ ಹೇಳುವ ವಿದ್ವಾಂಸನಲ್ಲ. ಅವನು ವಿವಿಧ ದೃಷ್ಟಿಕೋನವನ್ನು ಹೊಂದಿದ್ದಾನೆ. ಅವನಲ್ಲಿ ಚರಿತ್ರೆ ಮತ್ತು ತತ್ವಜ್ಞಾನವು ಜೊತೆಗೆ ಹೋಗುತ್ತವೆ. ಆದ್ದರಿಂದ ಅವನು ತತ್ವಜ್ಞಾನದ ಚರಿತ್ರೆಯನ್ನು ಮತ್ತು ಚರಿತ್ರೆಯ ತತ್ವಜಜ್ಞಾನವನ್ನು ಹೇಳುತ್ತಾನೆ. ಹೀಗೆ ಇದ್ದರೂ ಅವನ ಅತ್ಯಂತ ಮುಖ್ಯವಾದ ಒಂದು ದೃಷ್ಟಿಕೋನವೆಂದರೆ ಅವನು ಮನುಷ್ಯ ಮತ್ತು ಅವನ ಪ್ರಜ್ಞೆ, ಅದು ಅತ್ಯಂತ ಮಹತ್ವದ್ದು ಎಂದು ಅವನು ಭಾವಿಸುತ್ತಾನೆ. ಮನುಷ್ಯನ ಪ್ರಜ್ಞೆಯು ಜಗತ್ತನ್ನು ಅರ್ಥ ಮಾಡಿಕೊಳ್ಳಲು ಅಗತ್ಯ. ಅದು ನಿಯಮಬದ್ಧವಾಗಿದೆ ಅಥವಾ ಅದು ನಿಯಮಬದ್ಧವಾಗಿಲ್ಲ ಎಂದು ಹೇಳುವಂತೆ ಇಲ್ಲ. ಆದ್ದರಿಂದ ಭಾಷೆ ಎನ್ನುವುದು ನಮ್ಮ ಪ್ರಜ್ಞೆ ಮತ್ತು ಜಗತ್ತಿಗೆ ಸಂಬಂಧವನ್ನು ಕಲ್ಪಿಸುವ ಒಂದು ಕೊಂಡಿಯಾಗಿದೆ. ಒಂದು ಕಡೆಯಿಂದ ಭಾಷೆಗೆ ಒಂದು ಪ್ರದರ್ಶಾತ್ಮಕವಾದ ಗುಣವು ಇದೆ. ನೀಶೆಯು ಹೇಳಿದ ವಿಚಾರವನ್ನು ನಾವು ಇಲ್ಲಿ ಗಮನಿಸಬೇಕು. ಭಾಷೆಯು ನಮಗೆ ವಾಸ್ತವವನ್ನು ಅರ್ಥ ಮಾಡಕೊಳ್ಳಲು ಬೇಕಾದ ಪರಿಕರವನ್ನು ಕೊಡುತ್ತದೆ. ಭಾಷೆಗೆ ಮತ್ತು ನಮ್ಮ ಆಲೋಚನೆಗೆ ಸಂಬಂಧವು ಇದೆ. ಜಗತ್ತನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದು ಸಂಪೂರ್ಣವಾದ ಸತ್ಯವನ್ನು ಸೆರೆ ಹಿಡಿಯುತ್ತದೆ ಎಂದು ಹೇಳಲು ಬರುವುದಿಲ್ಲ. ಅವನ ಮತ್ತೊಂದು ವಾದವನ್ನು ನಾವು ಇಲ್ಲಿ ಗಮನಿಸಬೇಕು. ಸ್ವಯಂಸಂಪೂರ್ಣವಾದ ಒಂದು ಸತ್ಯ ಎನ್ನುವುದು ಇಲ್ಲ. ಭಾಷೆಯು ನಮ್ಮ ಆಲೋಚನೆಗೆ ಒಂದು ರೂಪವನ್ನು ಕೊಡುತ್ತದೆ. ನಮ್ಮ ಆಲೋಚನೆ ಮತ್ತು ನಮ್ಮ ಅನುಭವದ ರೂಪದ ಮೂಲಕ ಭಾಷೆಗೆ ಒಂದು ಶಕ್ತಿಯನ್ನು ಕೊಡುತ್ತದೆ. ಭಾಷೆಯ ಮೂಲಕ ನಾವು ಜಗತ್ತನ್ನು ನೋಡುತ್ತೇವೆ ಎನ್ನುವುದು ಒಂದು ಸಂಗತಿಯಾದರೆ ವಾಸ್ತವ ಎನ್ನುವುದು ಸಂವಾದಿಯಾಗಿದೆ. ಪ್ರತಿಯೊಂದು ಭಾಷೆಯು ತನ್ನದೇ ಆದ ಒಂದು ಲೋಕದ ಗ್ರಹಿಕೆಯನ್ನು ಮಂಡಿಸುತ್ತದೆ. ಅದು ಒಂದು ವಿವರಣೆಯು ಆಗಿರುತ್ತದೆ. ಸರಿಯಾದ ಒಂದು ಸತ್ಯ ಎನ್ನುವುದು ಇಲ್ಲ. ನಾವು ಜಗತ್ತನ್ನು ಸೃಷ್ಟಿ ಮಾಡಿದ್ದೇವೆ, ಜಗತ್ತು ಭಾಷೆಯನ್ನು ಸೃಷ್ಟಿ ಮಾಡಿದೆ ಎನ್ನುವುದು ನೀಶೆಯ ನಿಲುವು. ಹಾಗೆ ನೋಡಿದರೆ ಜಗತ್ತು ಮತ್ತು ಅದರ ಸತ್ಯ ಎನ್ನುವುದು ಇದೆಯೇ ಎನ್ನುವುದು ಒಂದು ಪ್ರಶ್ನೆ. ಸತ್ಯ

ಎನ್ನುವುದೇ ಒಂದು ರೂಪಕವಾಗಿದೆ ಎನ್ನುವುದು ನೀಶೆಯ ಮಾತು. ಸತ್ಯ ಎನ್ನುವುದು ಒಂದು ಭ್ರಮೆ. ಆದರೆ ಅದು ಭ್ರಮೆ ಆದರೆ ಅದು ಭ್ರಮೆ ಎನ್ನುವಬುದು ನಮಗೆ ಗೊತ್ತಿಲ್ಲ ಅಷ್ಟೆ. ಆದ್ದರಿಂದ ಸತ್ಯವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಅದನ್ನು ನಾವು ನಮಗೆ ಗೊತ್ತಿರುವ ಭಾಷೆಯ ಮೂಲಕ ಅರ್ಥ ಮಾಡಿಕೊಳ್ಳುವುದು. ಇದು ಅವನ ಅತ್ಯಂತ ಪ್ರಮುಖವಾದ ಒಂದು ನಿಲುವು. ನಮ್ಮ ದೈನಂದಿನ ಮಾತಿಗಿಂತ ಬೇರೆಯಾದ ಸ್ವರೂಪವನ್ನು ಕಾವ್ಯದ ಭಾಷೆಯು ಹೇಳುತ್ತದೆ ಎಂದು ಮಲ್ಲರೆಮ ಹೇಳುತ್ತಾನೆ. ಇದನ್ನು ನೋಡಿದರೆ ನಮಗೆ ಫುಕೋ ಭಾಷೆಯ ಕುರಿತು ಯಾವ ನಿಲುವನ್ನು ತಳೆಯುತ್ತಾನೆ ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ.

ಫುಕೋ ಚರಿತ್ರೆಯು ನಮಗೆ ಒಂದು ನಿರಂತರವಾದ ಒಂದು ಸ್ವರೂಪವನ್ನು ಹೇಳುತ್ತದೆ ಎಂದು ಭಾವಿಸುವುದಿಲ್ಲ. ಅವನು ಅದನ್ನು ಚರಿತ್ರೆ ಮತ್ತು ಅದರ ಬಿರುಕು ಎಂದು ಗ್ರಹಿಸುತ್ತಾನೆ. ನಮಗೆ ಅತ್ಯಂತ ಮುಖ್ಯವಾಗಿ ಒಂದು ಆತಂಕವು ಇರುತ್ತದೆ. ಅದನ್ನು ನಾವು ಚರಿತ್ರೆಯಲ್ಲಿಯೂ ಕಾಣುತ್ತೇವೆ. ಚರಿತ್ರೆಯನ್ನು ನೋಡುವಾಗ ಒಂದು ಅವಕಾಶವು ಇರುತ್ತದೆ. ಅದನ್ನು ನಾವು ಮೊದಲು ಸರಿಯಾಗಿ ಗುರುತಿಸಬೇಕು. ಚರಿತ್ರೆ ಮತ್ತು ಅದರ ಸಂಕಥನಗಳು ಅತ್ಯಂತ ಖಾಲಿಯಾದ ಒಂದು ಅವಕಾಶಗಳನ್ನು ತುಂಬುತ್ತದೆ. ಜೀವನ, ಕಾರ್ಮಿಕರು ಮತ್ತು ಭಾಷೆ ಎನ್ನುವುದು ನಮಗೆ ಮಾನವಿಕ ವಿಜ್ಞಾನಗಳಲ್ಲಿ ಬೇರೆ ಥರ ಆಗುತ್ತದೆ. ಎಕ್ಸ್‌ರೆಯನ್ನು ನೋಡುವ ಒಬ್ಬ ತಜ್ಞನಂತೆ ಪಠ್ಯಗಳನ್ನು ನೋಡಬೇಕಾಗುತ್ತದೆ ಎನ್ನುವುದು ಫುಕೋನ ನಿಲುವೂ ಹೌದು. ಹಾಗಿದ್ದರೂ ಫುಕೋ ತೌಲನಿಕ ಅಧ್ಯಯನವನ್ನು ನಿರಾಕರಿಸುತ್ತಾನೆ. ಅದರ ಬದಲು ಅವನದು ವಿಶ್ಲೇಷಣೆಯ ಕ್ರಮ. ಅವನಿಗೆ ಮಾದರಿಗಳು ಮತ್ತು ಅದರ ಅಧ್ಯಯನವು ಕೂಡಾ ಅಷ್ಟು ಮುಖ್ಯವಾಗಿಲ್ಲ. ಮತ್ತೂ ಒಂದು ಅಂಶವನ್ನು ಫುಕೋ ವಿವರಿಸುತ್ತಾನೆ: ಅದರಲ್ಲಿ ಅವನು ಚರಿತ್ರೆಯನ್ನು ಅಧ್ಯಯನ ಮಾಡುವುದು ಅಂದರೆ ಅದನ್ನು ಬೇರೆ ಥರ ನೋಡುವುದೂ ಹೌದು. ನಮ್ಮ ಆಲೋಚನೆ ಎನ್ನುವುದು ಹೇಗೆ ಮುಂದುವರಿಯುತ್ತದೆ ಎಂದು ಫುಕೋ ಸಾಕಷ್ಟು ವಿವರವಾಗಿ ಚರ್ಚೆ ಮಾಡಿದ್ದು ಸತ್ಯ. ಮನುಷ್ಯ ಮತ್ತು ವಿಜ್ಞಾನ ಎನ್ನುವುದು ಅವನಲ್ಲಿ ಭಿನ್ನವಾದ ಒಂದು ಚರ್ಚೆಗೆ ಕಾರಣವಾಗಿದೆ. ಭಾಷೆ ಎನ್ನುವುದು ಕೂಡಾ ಅತ್ಯಂತ ಪವಿತ್ರವೆಂದು ಭಾವಿಸಬೇಕಾಗಿಲ್ಲ. ಅದು ಕೂಡಾ ಇತರ ವಸ್ತುಗಳ ಥರ ಇರುತ್ತದೆ. ಎಲ್ಲಿ ನಮಗೆ ಮಾತು ಮತ್ತು ಅದರ ಅವಕಾಶವು ಇಲ್ಲವೋ ಆಗ ನಾವು ಮೌನವನ್ನು ಅನುಸರಿಸಲೇ ಬೇಕಾಗುತ್ತದೆ. ಅದರ ಜೊತೆಗೆ ಭಾಷೆ ಎನ್ನುವುದು ಒಂದು ಪ್ರಾತಿನಿಧಿಕವಾದ ರೂಪವು ಮಾತ್ರವೇ. ಕೆಲವನ್ನು ಸಮಾಜವು

ಮಾತಾಡಬಾರದು ಎಂದು ಹೇಳುತ್ತದೆ. ಆದ್ದರಿಂದ ನಮ್ಮ ಮಾತು ಒಂದು ಒತ್ತಡಕ್ಕೆ ಸಿಗುತ್ತದೆ.

ಫುಕೋ ಹೇಳುವ ಅತ್ಯಂತ ಮುಖ್ಯವಾದ ಒಂದು ನಿಲುವನ್ನು ಇಲ್ಲಿ ಪ್ರಸ್ತುತಪಡಿಸಬಹುದು. ಹತ್ತೊಂಬ್ಬತ್ತನೆಯ ಶತಮಾನದಲ್ಲಿ ಸಂಕೇತಶಾಸ್ತ್ರ, ಜೀವ ವಿಜ್ಞಾನ ಮತ್ತು ಸಂಪತ್ತುಗಳ ಪ್ರಶ್ನೆಗಳು ಬಂದವು. ಇದಕ್ಕೆ ಬೇಕದ ಜ್ಞಾನವನ್ನು ರೂಪಿಸಿದ್ದು ನಿಜ. ಇನ್ನೊಂದು ಅತ್ಯಂತ ಕುತೂಹಲ ಉಂಟು ಮಾಡುವ ಸಂಗತಿಯನ್ನು ನಾವು ನೆನಪಿನಲ್ಲಿ ಇಡಬೇಕಾಗುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಅತ್ಯಂತ ಹೆಚ್ಚು ಚಾಲ್ತಿಯಲ್ಲಿ ಇದ್ದುದು ಸಾಮಾನ್ಯ ಭಾಷಾವಿಜ್ಞಾನ. ಹತ್ತೊಂಬತ್ತನೆಯ ಶತಮಾನದಲ್ಲಿ ಜೀವ ವಿಜ್ಞಾನ ಮತ್ತು ಸಂಕೇತ ಶಾಸ್ತ್ರಗಳು ಹಾಗೂ ಜನಾಂಗ ಮತ್ತು ಇತಿಹಾಸಗಳ ಸಂಬಂಧವು ಅತ್ಯಂತ ಹೆಚ್ಚು ಚರ್ಚೆಗೆ ಒಳಗಾಯಿತು. ಹತ್ತೊಂಬ್ಬತ್ತನೆಯ ಶತಮಾನದಲ್ಲಿ ರಾಜಕೀಯ ಅರ್ಥಶಾಸ್ತ್ರಜ್ಞರು ಸಂಪನ್ಮೂಲವನ್ನು ಕುರಿತು ಹೇಚ್ಚು ಚರ್ಚೆಯನ್ನು ಮಾಡದೆ ಅದರ ಬದಲಿಗೆ ಅವರು ಉತ್ಪಾದನೆ ಮತ್ತು ಅದರ ಸ್ವರೂಪವನ್ನು ವಿವರಿಸಿದರು. ಅದೇ ವೇಳೆಗೆ ಜೀವ ವಿಜ್ಞಾನಿಗಳು ಜೀವ ವಿಕಾಸವನ್ನು ಹೆಚ್ಚು ವಿಶ್ಲೇಷಣೆ ಮಾಡಿದರು. ಯಾವುದನ್ನು ನಮ್ಮ ಶೈಕ್ಷಣಿಕ ಇತಿಹಾಸಕಾರರು ವಿವರಿಸುತ್ತಾರೆಯೋ ಅದರ ಆಚೆಗೆ ಇರುವ ಇತಿಹಾಸವು ಅತ್ಯಂತ ಮುಖ್ಯವೆಂದು ಫುಕೋ ಭಾವಿಸುತ್ತಾನೆ. ಇತಿಹಾಸವು ಈವತ್ತು ಬರೀ ವಿವರಣಾತ್ಮಕವಾದಿಗಳ ಜೊತೆಗೆ ಇದೆ ಎಂದು ಅವನು ಭಾವಿಸುತ್ತಾನೆ.

ಫುಕೋನಲ್ಲಿ ಭ್ರಾಂತಿ ಮತ್ತು ಅದರ ವಿಷಯಗಳು ಅತ್ಯಂತ ಮುಖ್ಯವಾಗಿವೆ. ಯಾರಿಗೆ ಭ್ರಾಂತಿಗಳು ಇವೆ? ಅದನ್ನು ಗುರುತಿಸುವುದು ಹೇಗೆ? ಅದಕ್ಕೆ ಏನು ಮಾನದಂಡವು ಇದೆ ಎಂದು ಅವನು ವಿವರಿಸುತ್ತಾನೆ. ಅವನಲ್ಲಿ ಅದು ಒಂದು ಪ್ರಮುಖವಾದ ಪ್ರಶ್ನೆಯೂ ಹೌದು. ಅದನ್ನು ಅವನು ಸೈದ್ಧಾಂತಿಕವಾಗಿ ಇದನ್ನು ಗ್ರಹಿಸುತ್ತಾನೆ. ಯಾವುದು ಕಾರಣ ರಹಿತವಾದ್ದು ಇದೆಯೋ ಅದನ್ನು ಕೂಡಾ ಅನೇಕರು ಭ್ರಾಂತಿ ಎಂದು ತಿಳಿದರು. ಯಾವುದು ವಿಷಯವೆಂದು ಹೇಳುತ್ತೇವೆಯೋ ಅದು ಅನೇಕ ಸನ್ನಿವೇಶದಲ್ಲಿ ವಸ್ತು ಮತ್ತು ಅದರ ಗ್ರಹಿಕೆಯಾಗಿ ಬದಲಾಗುತ್ತದೆ. ಈ ಬದಲಾವಣೆಯು ಸಾಂದರ್ಭಿಕವೂ ಆಗುತ್ತದೆ. ಪಶ್ಚಿಮದ ಮನುಷ್ಯರು ಕಾರಣ ಮತ್ತು ಅಕಾರಣವನ್ನು ಹೆಚ್ಚು ಅಂಗೀಕರಿಸುತ್ತಾರೆ. ಆದ್ದರಿಂದ ಅವರಲ್ಲಿ ಇದರ ಸಮಸ್ಯೆಯು ಇರುತ್ತದೆ.

ಫುಕೋ ಸಹಜವಾದ್ದನ್ನು ನೋಡುವಾಗ ಅದರ ಜೊತೆಗೆ ಇರುವ ಮೃಗೀಯತೆಯನ್ನು ಬಿಡುವುದಿಲ್ಲ. ಅದನ್ನೂ ಅವನು ಹೇಳುತ್ತಾನೆ. ಅಪರಾಧ

ಮತ್ತು ಪಾಪ ಎರಡೂ ಕೂಡಾ ಒಂದು ಹಂತದಲ್ಲಿ ನಾಗರಿಕತೆಗೆ ಅಪಾಯ ಎಂದು ಅವನು ತಿಳಿಯುತ್ತಾನೆ. ಬಡವರು ಕೂಡಾ ಪಾಪದಿಂದ ಇರುತ್ತಾರೆ ಎಂದು ಫುಕೋ ಹೇಳುತ್ತಾನೆ. ಕಾರಣ ಎನ್ನುವುದು ಆಧುನಿಕ ಸಮಾಜದಲ್ಲಿ ಹೇಗೆ ಒಂದು ಮಹತ್ವದ ಪರಿಣಾಮವನ್ನು ಉಂಟು ಮಾಡಿದೆ ಎನ್ನುವುದೂ ಅವನಿಗೆ ತಿಳಿದಿದೆ. ವೈದ್ಯ ವಿಜ್ಞಾನ ಎನ್ನುವುದು ಒಂದು ಮುಗಿದ ಅಧ್ಯಾಯ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ವೈದ್ಯಕೀಯ ಎನ್ನುವುದು ಯಾವತ್ತೂ ಬೆಳೆಯುತ್ತದೆ. ವೈದ್ಯ ಶಾಸ್ತ್ರ ಎನ್ನುವುದು ಕೂಡಾ ರಾಜಕೀಯವಾಗಿದೆ. ಅದನ್ನು ನಾವು ಬರೀ ಒಂದು ವೈದ್ಯಕೀಯವಾದ ವಿಜ್ಞಾನ ಎಂದು ತಿಳಿಯಬೇಕಾಗಿಲ್ಲ. ಔಷಧ ಎನ್ನುವುದು ಮನುಷ್ಯರನ್ನು ಒಂದು ವಸ್ತು ಎನ್ನುವಂತೆ ನೋಡುತ್ತದೆ. ಅದು ಮನುಷ್ಯರನ್ನು ಮತ್ತು ಮೃಗಗಳನ್ನು ಬೇರೆ ಮಾಡುವುದಿಲ್ಲ.

ಸಾಮಾಜಿಕ ಜೀವನ ಮತ್ತು ಅದರ ಅಗತ್ಯಕ್ಕೆ ತಕ್ಕಂತೆ ಬೇರೆ ಬೇರೆ ರೀತಿಯ ರಚನೆಗಳು ಇರುತ್ತವೆ. ಅದನ್ನು ನಾವು ಕಟ್ಟುತ್ತೇವೆ ಮತ್ತು ಬೇಕಾದ ಅದನ್ನು ಒಡೆಯುತ್ತೇವೆ. ಅದು ಅಗತ್ಯವಾಗುತ್ತದೆ. ಜೀವನದ ಕೆಲವು ಅಂಶಗಳನ್ನು ಅದು ಹೇಳುತ್ತದೆ. ಹೇಗೆ ಬೇರೆ ಬೇರೆ ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುತ್ತದೆ. ಮತ್ತು ಹೇಗೆ ಬೇರೆ ಬೇರೆ ಸನ್ನಿವೇಶಗಳು ನಮ್ಮ ವಿವಿಧ ರಚನೆಗೆ ಕಾರಣವಾಗುತ್ತವೆ ಎನ್ನುವುದು ಮೂಲಭೂತವಾಗಿ ತಾತ್ವಿಕ ಪ್ರಶ್ನೆಗಳೇ ಆಗುತ್ತವೆ. ಬೇರೆ ಬೇರೆ ಸನ್ನಿವೇಶಗಳು ನಮಗೆ ಬೇರೆ ಅನುಭವನ್ನು ಕೊಡುವಾಗಲೂ ಅದು ಅರ್ಥ ರಚನೆಯು ಆಗಿರುವುದೇ ಇಲ್ಲ. ಅರ್ಥ ರಚನೆ ಅಥವಾ ಅರ್ಥ ಸಾಲು, ಅಥವಾ ಒಂದು ಅಕ್ಷರವು ಯಾವುದೇ ಸಂಗತಿಯನ್ನು ಹೇಳಲಾರದು. ಅಂದರೆ ಒಂದು ಸಣ್ಣ ಘಟಕ ಯಾವುದನ್ನು ನಿರೂಪಿಸುವುದೂ ಇಲ್ಲ. ಇಲ್ಲಿ ನಮಗೆ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಘಟಕಗಳು ಮೂಲಭೂತವಾಗಿ ಯಾವುದನ್ನು ಸ್ವಯಂಸಂಪೂರ್ಣವಾಗಿಯೂ ಇರುವುದೂ ಇಲ್ಲ. ಕಾಲ ಮತ್ತು ಸನ್ನಿವೇಶಗಳು ಹಾಗೂ ತಾತ್ವಿಕತೆಗಳು ನಮಗೆ ರಚನೆಯನ್ನು ಕಟ್ಟಲು ಸಹಾಯವನ್ನು ಮಾಡುತ್ತವೆ. ರಚನೆ ಮತ್ತು ಅದರ ರೂಪವು ವಂಶವಾಹಿಯನ್ನು ಹೇಳುತ್ತವೆ. ಅಂದರೆ ಹಿಂದಿನ ರಚನೆ ಮತ್ತು ಅದರ ಪರಂಪರೆಯು ಮುಂದುವರಿಯುತ್ತವೆ. ಅದಕ್ಕೆ ಚಾರಿತ್ರಿಕತೆಯೂ ಇರುತ್ತದೆ. ಒಡೆಯುವುದು ಮತ್ತು ಪುನರಚಿಸುವುದು ನಮಗೆ ಅತ್ಯಂತ ಅಗತ್ಯವಾಗುತ್ತದೆ. ಹಾಗೆ ನೋಡುವುದಿದ್ದರೆ ಸಮಾಜ ಮತ್ತು ಅದರ ರಚನೆಗಳು ನಿಸರ್ಗವನ್ನು ವಿಶಿಷ್ಟವಾಗಿಯೇ ಹೇಳುತ್ತದೆ. ನಮ್ಮ ನಡತೆ ಮತ್ತು ಸಾಮಾಜಿಕ ನಡವಳಿಕೆಗಳು ಮೂಲಭೂತವಾಗಿ ಕೆಲವು ಸಂಗತಿಗಳನ್ನು ಹೇಳುತ್ತವೆ. ಹೇಗೆ

ನಮ್ಮ ಸಮಾಜವು ಬದಲಾಗುತ್ತವೆ ಮತ್ತು ಯಾವ ರೀತಿಯಲ್ಲಿ ಬದಲಾಗುತ್ತದೆ ಮತ್ತು ಅದರ ಕಾರಣವು ಯಾವುದು ಎನ್ನುವುದೂ ಅಷ್ಟೇ ಮುಖ್ಯ. ಸಾಹಿತ್ಯ ಮತ್ತು ಅದರ ಸ್ವರೂಪವು ಹೇಗೆ ಬದಲಾಗುತ್ತದೆ ಮತ್ತು ಅದರ ಕಾರಣವು ಯಾವುದು ಯಾಕೆ ಬದಲಾಗುತ್ತದೆ ಎಂದು ಹೇಳಲು ನಮಗೆ ಜೋತಿಷ್ಯದ ಅಗತ್ಯವಿಲ್ಲ. ಅದರಲ್ಲಿ ನಾವು ಮತ್ತೆ ಬೇರೆ ಅಂಶಗಳನ್ನು ನೋಡಬೇಕಾಗುತ್ತದೆ. ಅದು ತರ್ಕ ರಹಿತವಲ್ಲ. ಅದರಲ್ಲಿ ಭಿನ್ನತೆಯು ಇರುತ್ತದೆ. ಹಾಗೂ ಅದರಲ್ಲಿ ನಿರ್ದಿಷ್ಟವಾದ ಆಶಯವು ಇರುತ್ತದೆ. ಲುಕಾಕ್ಸ್ ಸಾಹಿತ್ಯ ಮತ್ತು ಅದರ ಸ್ವರೂಪವು ಬದಲಾಗುವುದು ಸಾಮಾಜಿಕ ಅಗತ್ಯವೆಂದು ಹೇಳುತ್ತಾನೆ. ಆಶಯ ಮತ್ತು ಅದರ ಅರ್ಥವು ಬದಲಾಗುವುದು ಕೂಡಾ ಸಮಾಜಕ್ಕೆ ಲಗತ್ತಾಗಿಯೇ ಇರುತ್ತದೆ. ಆಶಯ ಮತ್ತು ಅದರ ಅಗತ್ಯಗಳು ಬೇರೆ ಬೇರೆ ಕಾರಣದಿಂದ ಅತ್ಯಂತ ಮಹತ್ವದ್ದೂ ಆಗುತ್ತದೆ. ಮಾನಸಿಕವಾದ ರಚನೆ ಮತ್ತು ಅದರ ಅಗತ್ಯಗಳು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಅಸ್ತಿತ್ವ ಮತ್ತು ಅದರ ಅಗತ್ಯಗಳೂ ಕೂಡಾ ಈ ದೃಷ್ಟಿಯಲ್ಲಿ ಭಿನ್ನವಾದ ಅರ್ಥವನ್ನು ಹೇಳುತ್ತವೆ. ಮಾನಸಿಕ ರಚನೆ ಮತ್ತು ಅದರ ಅರ್ಥವು ಈ ದೃಷ್ಟಿಯಿಂದ ಭಿನ್ನವಾದ ಒಂದು ಸಂಗತಿಯೂ ಆಗುತ್ತದೆ. ಚರಿತ್ರೆ ಮತ್ತು ಅದರ ವಾಸ್ತವ ನಮಗೆ ಈ ದೃಷ್ಟಿಯಲ್ಲಿ ಮಹತ್ವದ ಕೆಲವು ಸೂಚನೆಗಳನ್ನು ಕೊಡುತ್ತವೆ. ಮತ್ತು ಅದರಲ್ಲಿ ನಮಗೆ ಅನೇಕ ಅಂಶಗಳೂ ಇರುತ್ತವೆ.

ಲೇಖಕನು ಅನೇಕವನ್ನು ತನ್ನ ಕೃತಿಯಲ್ಲಿ ಹೇಳುತ್ತಾನೆ. ಮತ್ತು ಅನೇಕವನ್ನು ಬಿಡುತ್ತಾನೆ. ಅದು ಅವನ ಆಯ್ಕೆಯೂ ಆಗಿರುತ್ತದೆ. ಯಾವುದನ್ನು ಈವತ್ತು ಒಬ್ಬ ಲೇಖಕ ನೋಡುತ್ತಾನೆ ಮತ್ತು ಯಾವುದನ್ನು ನಿರಾಕರಿಸುತ್ತಾನೆ ಎನ್ನುವುದು ಮುಖ್ಯವಾದ ಪ್ರಶ್ನೆಯೂ ಆಗುತ್ತದೆ. ಸಾಹಿತ್ಯ ಮತ್ತು ಅದರ ಗುಣಮಟ್ಟವು ಬೇರೆ ಬೇರೆಯಾಗುವುದಕ್ಕೆ ಬೇರೆ ಬೇರೆ ಕಾರಣವೂ ಇರುತ್ತದೆ. ಅಂದರೆ ಸಾಹಿತ್ಯವನ್ನು ಮತ್ತು ಅದರ ಗುಣಮಟ್ಟವನ್ನು ಆಯಾ ಸಮಾಜವು ನಿರ್ಧಾರ ಮಾಡುತ್ತದೆ. ಒತ್ತಡ ಮತ್ತು ಅದರ ಅಭಿವ್ಯಕ್ತಿಯೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗುತ್ತದೆ. ಲೇಖಕನು ಆಯ್ಕೆ ಮಾಡುವ ಪದಗಳು ಮತ್ತು ಮನಸ್ಸಿನ ಒತ್ತಡಗಳು ಕೆಲವು ಸೂಚನೆಗಳನ್ನು ಕೊಡುತ್ತವೆ. ಕೆಲವು ಗೆಶ್ಚರ್‌ಗಳು ನಮಗೆ ಈ ದೃಷ್ಟಿಯಲ್ಲಿ ಯಾವುದೇ ಮೇಲುನೋಟದ ತೀರ್ಮಾನವನ್ನು ಕೊಡಲು ಬಿಡುವುದೂ ಇಲ್ಲ. ಅರಿವು ಇಲ್ಲದೆಯೇ ಅನೇಕ ಗೆಶ್ಚರ್ ಬರುತ್ತದೆ. ಅದು ನಮ್ಮ ಸುಪ್ತವಾದ ಪ್ರಜ್ಞೆಯಲ್ಲಿ ಇರುತ್ತದೆ. ವಾಸ್ತವವಾಗಿ ಈವತ್ತು ನಮ್ಮ ಪ್ರಶ್ನೆಗಳಲ್ಲಿ ವಿವಿಧತೆಯು ಇದೆ. ಆದರೆ ಇದು ಯಾವುದನ್ನು ಸೂಚಿಸುತ್ತದೆ ಎನ್ನುವುದು ಬಹಳ ಮುಖ್ಯ. ಪ್ರಜ್ಞೆ ಮತ್ತು

ಅದರ ಸ್ವರೂಪವನ್ನು ಈವತ್ತು ನಾವು ನಮ್ಮ ಸಮಕಾಲೀನವಾದ ಸನ್ನಿವೇಶದಲ್ಲಿಯೇ ನೋಡಬೇಕಾಗುತ್ತದೆ. ಬರಹಕ್ಕೆ ಒಂದು ನಿಶ್ಚಿತವಾದ ಗುಣವಿದೆ. ಅದು ಆಲೋಚನೆ ಮತ್ತು ಅದರ ಸಂಕೇತವನ್ನು ಹೇಳುತ್ತದೆ. ಮತ್ತು ಯಾವುದು ಆಲೋಚನೆಯಾಗಿದೆಯೋ ಅದರ ಸ್ವರೂಪವನ್ನು ಬರಹವು ಹೇಳುತ್ತದೆ. ಅದು ಅಗತ್ಯವಾದ ಪ್ರಕ್ರಿಯೆಯೂ ಹೌದು. ಆಲೋಚನೆ ಮತ್ತು ಅದರ ಕ್ರಿಯಾಶೀಲತೆಯು ಅತ್ಯಂತ ಅಗತ್ಯವಾದ ಒಂದು ಪ್ರಕ್ರಿಯೆಯೂ ಆಗಿರುತ್ತದೆ. ಅದರ ಅಗತ್ಯಗಳೂ ಕೂಡಾ ಭಿನ್ನವಾದ್ದು ಸತ್ಯ. ಆಲೋಚನೆಯು ವ್ಯಕ್ತಿಯದೂ ನಿಜ. ಆದರೆ ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕಾದ ಕೆಲವು ಅಂಶಗಳೂ ಇವೆ. ಸಾಹಿತ್ಯವೇ ಆಗಲೀ ಇತರ ಸಂಗತಿಗಳೇ ಆಗಲಿ, ಅವುಗಳು ಮೂಲರೂಪವಾಗಿ ಪ್ರಾಯೋಗಿಕ ಮತ್ತು ನೈತಿಕವಾದ ಅನೇಕ ತಿಳುವಳಿಕೆಯನ್ನು ಹೇಳುತ್ತದೆ. ಯಾವುದು ನಮ್ಮನ್ನು ನಿರ್ದಿಷ್ಟವಾಗಿ ರೂಪುಗೊಳಿಸುತ್ತದೆ ಮತ್ತು ಅದು ಯಾಕೆ ಹಾಗೆ ರೂಪಿಸುತ್ತದೆ ಎಂದು ತಿಳಿಯಬೇಕಾಗುತ್ತದೆ. ಜೀವನ ಮತ್ತು ಮನಸ್ಸಿಗೆ ಸಂಬಂಧವೂ ಇದೆ. ಅಂದರೆ ಲೇಖಕನ ಜೀವನವನ್ನು ತಿಳಿಯದೆ ನಾವು ಅನೇಕವನ್ನು ಅರ್ಥಮಾಡಿಕೊಳ್ಳಲಾರೆವು. ನಮ್ಮ ಜೀವನದಲ್ಲಿ ಯಾವುದು ಹೆಚ್ಚು ಪ್ರಭಾವಶಾಲಿಯೂ ಆಗಿದೆ ಎಂದರೆ ಹೇಳುವುದು ಅತ್ಯಂತ ಕಷ್ಟವೂ ಹೌದು. ವ್ಯಕ್ತಿಯನ್ನು ಯಾವುದು ಬರೆಯುವಂತೆ ಮಾಡಿದೆ ಮತ್ತು ಅವನು ಯಾಕೆ ಹಾಗೆ ಬರೆಯುತ್ತಾನೆ ಎನ್ನುವುದನ್ನು ಕೇಳಿದರೆ ಅದನ್ನು ವಿವರಿಸುವುದು ಅತ್ಯಂತ ಕಷ್ಟವೂ ಆಗಿದೆ. ಅಂದರೆ ಬರಹವು ಮನಸ್ಸನ್ನು ಹೇಳುತ್ತದೆ. ಮತ್ತು ಅದರಲ್ಲಿ ಜೀವನದ ಅನೇಕ ಸಂಗತಿಗಳೂ ಇರುತ್ತವೆ. ವ್ಯಕ್ತಿ ಮತ್ತು ಅವನ ಮನೋಸ್ಥಿತಿಯು ಸಂಕೀರ್ಣವಾದ್ದು. ಮನಸ್ಸು ಮತ್ತು ಅದರ ಪರಿಣಾಮ ಹಾಗೂ ಅದರ ಕಾರ್ಯ ವ್ಯವಸ್ಥೆಯು ಸುಲಭವಾದ ಒಂದು ಪ್ರಕ್ರಿಯೆಯು ಅಲ್ಲ. ಓದುವುದು ಅಂದರೆ ಈ ದೃಷ್ಟಿಯಲ್ಲಿ ಬರೀ ಓದುವುದು ಮಾತ್ರವೇ ಅಲ್ಲ. ಅದು ಒಂದು ಮನೋಸ್ಥಿತಿಯ ಜತೆಗೆ ಅನುಸಂಧಾನವನ್ನು ಮಾಡುವ ಕ್ರಮವೂ ಆಗಿದೆ. ಅಂದರೆ ಅದರಲ್ಲಿ ವ್ಯತ್ಯಾಸವಿದೆ. ಸಂಘರ್ಷವಿದೆ. ಅನುಸಂಧಾನವೂ ಇದೆ. ಓದುವುದು ಈ ಅರ್ಥದಲ್ಲಿ ಬರೀ ಅಕ್ಷರದ ಜೊತೆಗೆ ನಾವು ನಡೆಸುವ ಯಾಂತ್ರಿಕವಾದ ಒಂದು ಸಂಗತಿಯಲ್ಲ. ಬರಹ ಮತ್ತು ಅದರ ಸಂಕೇತಗಳನ್ನು ನಾವು ಈ ದೃಷ್ಟಿಯಿಂದ ಬರೀ ವ್ಯವಸ್ಥೆ ಎಂದು ಭಾವಿಸದೆ ಅದನ್ನು ನಾವು ಈಗ ನಮ್ಮ ಸಾಂಕೇತಿಕವಾದ ಒಂದು ಜೀವನದ ಬಹಳ ಮುಖ್ಯವಾದ ಒಂದು ಚಟುವಟಿಕೆಯೆಂದು ಭಾವಿಸಬೇಕಾಗುತ್ತದೆ. ಬರಹವನ್ನು ನಾವು ಮನಸ್ಸು ಮತ್ತು ಅದರ ಪ್ರಕ್ರಿಯೆ ಎಂದೂ ಭಾವಿಸಬೇಕಾಗುತ್ತದೆ. ಅದು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮನುಷ್ಯನು ಅದನ್ನು ಉತ್ಪಾದಿಸುತ್ತಾನೆ. ಅವನಿಗೆ

ಅದು ಅತ್ಯಂತ ಮುಖ್ಯವಾದ ಪ್ರಕ್ರಿಯೆಯೂ ಆಗಿದೆ. ಬರಹವನ್ನು ಓದುವುದು ಅಂದರೆ ಅದು ವ್ಯಕ್ತಿ ಮತ್ತು ಅವನ ಚಟುವಟಿಕೆಯನ್ನು ಅರ್ಥಮಾಡಿಕೊಳ್ಳುವ ಒಂದು ಕೆಲಸವೇ ಆಗಿದೆ. ವ್ಯಕ್ತಿ, ಮನೋಸ್ಥಿತಿ, ಚರಿತ್ರೆ, ಸಮಾಜಗಳ ನಡುವೆ ಒಂದು ನಿರ್ಣಾಯಕವಾದ ಸಂಬಂಧವೂ ಇದೆ. ಬಯಕೆಯು ಕೆಲವನ್ನು ಉತ್ಪಾದಿಸುತ್ತದೆ. ಮತ್ತು ಅದಕ್ಕೆ ಕೆಲವು ಕಾರಣಗಳೂ ಇರುತ್ತವೆ. ಮನುಷ್ಯ ಮತ್ತು ಅವನ ಗುಣವು ಅನೇಕ ಸಂದರ್ಭದಲ್ಲಿ ಕ್ರಿಯಾಶೀಲವೂ ಅಗಿರುತ್ತದೆ.

ಮನುಷ್ಯ ಮತ್ತು ಅವನ ಗುಣಸ್ವಭಾವಗಳು ಈ ಕಾರಣದಿಂದ ಚಾರಿತ್ರಿಕವಾಗಿಯೂ ಕಟ್ಟಲ್ಪಟ್ಟಿರುತ್ತವೆ. ಮತ್ತು ಯಾವುದನ್ನು ಸಾಹಿತ್ಯ ಮತ್ತು ಅದರ ಸಂಯೋಜನೆ ಎಂದು ಹೇಳುತ್ತೇವೆಯೋ ಅದು ಕೂಡಾ ಬೇರೆ ಬೇರೆ ವಿಧವಾದ ಚಹರೆಯನ್ನು ಪಡೆದುಕೊಂಡಿರುತ್ತವೆ. ಖಿನ್ನತೆ ಮತ್ತು ನೋವುಗಳೂ ಮನುಷ್ಯನನ್ನು ಬರೆಯುವಂತೆ ಪ್ರೇರಣೆಯನ್ನು ನೀಡುತ್ತದೆ. ಅದು ಅವನಿಗೆ ಒಂದು ಬಿಡುಗಡೆಯೂ ಆಗಿದೆ. ಮನುಷ್ಯನು ಯಾವ ಪರಿಸರದಲ್ಲಿ ಬದುಕುತ್ತಾನೆಯೋ ಅದು ಕೂಡಾ ಪ್ರಭಾವಶಾಲಿಯಾಗಿದೆ. ಪರಿಸರದ ರಚನೆಯು ನಮಗೆ ಬೇಕಾದ ಅನೇಕವನ್ನು ಬರೆಯಲಿಕ್ಕೆ ಅವಕಾಶವನ್ನು ಕೊಡುತ್ತದೆ. ಅಂದರೆ ಅದರಲ್ಲಿ ಪಠ್ಯ ಮತ್ತು ಸಾಮಾಜಿಕ ಸತ್ಯಗಳ ಪ್ರಶ್ನೆಯೂ ಬರುತ್ತದೆ. ಸಾಮಾಜಿಕ ಸನ್ನಿವೇಶವನ್ನು ನೋಡಿಕೊಂಡು ಲೇಖಕನು ಬರೆಯುತ್ತಾನೆ. ಸನ್ನಿವೇಶವೆಂದರೆ ಅದು ಸಮಾಜಿಕ ಸತ್ಯಗಳ ಪ್ರಶ್ನೆ. ಅದರಲ್ಲಿ ಕಲ್ಪಿತವಾದುದು ಇರಬಹುದು ಆದರೆ ಅದು ಅಷ್ಟು ಮಾತ್ರವೇ ಆಗಿರುವುದೂ ಇಲ್ಲ. ಅದರಲ್ಲಿ ಭಿನ್ನವಾದ ಅನೇಕ ಸಮಸ್ಯೆಗಳು ಸೇರಿಕೊಂಡಿರುತ್ತವೆ. ನಾವು ನಮ್ಮ ಪರಿಸರ ಮತ್ತು ಅದರ ರಚನೆಗಳ ಮೂಲಕವೇ ಅನೇಕವನ್ನು ಗ್ರಹಿಸುತ್ತೇವೆ. ಅದು ನಮಗೆ ಅನೇಕವನ್ನು ಹೇಳುತ್ತದೆ. ವಾಸ್ತವವಾಗಿ ಕಾರಂತರ ಕಾದಂಬರಿಗಳು ಮತ್ತು ಅದರ ನಿರೂಪಣೆಗಳಲ್ಲಿ ಎದ್ದು ಕಾಣಿಸುವ ಮುಖ್ಯವಾದ ಪ್ರಶ್ನೆಯೂ ಇದುವೇ ಆಗಿದೆ. ಅವರ ಪರಿಸರದಲ್ಲಿ ಕಾಣದೇ ಇದ್ದುದನ್ನು ಅವರು ವಿವರಿಸಿಲ್ಲ. ಅದರಲ್ಲಿ ಅವರಿಗೆ ಯಾವುದು ಮುಖ್ಯವೆಂದು ಅನಿಸಿತೋ ಅದನ್ನು ಮಾತ್ರವೇ ಅವರು ಬರೆದರು. ಲೇಖಕನು ಒಂದು ಸನ್ನಿವೇಶ ಮತ್ತು ಅದರ ಸ್ವರೂಪವನ್ನು ನೋಡಿಕೊಂಡೇ ಬರೆಯುತ್ತಾನೆ. ಮತ್ತು ಅವನಿಗೆ ಅದು ಮುಖ್ಯವಾಗುತ್ತದೆ. ಆಯಾ ರಚನೆಯ ಜೊತೆಗೆ ಲೇಖಕನು ಯಾವ ರೀತಿಯ ಸಂಬಂಧವನ್ನು ಇಟ್ಟುಕೊಂಡಿದ್ದಾನೆ ಎನ್ನುವುದನ್ನು ನೋಡಿಕೊಂಡೇ ನಾವು ಕೆಲವು ನಿರ್ಧಾರಕ್ಕೂ ಬರಬಹುದು. ಆದರೆ ಕಾರಂತರ ಕಾದಂಬರಿಯನ್ನು ಓದಿದರೆ ಅದರಲ್ಲಿ ಮತ್ತೆ ಬೇರೆ ಅಂಶಗಳೂ ನಮಗೆ ಕಾಣಿಸುತ್ತದೆ. ಅದು

ಅವರು ಆಯಾ ರಚನೆಯಿಂದ ಯಾವುದನ್ನು ಅಯ್ಕೆ ಮಾಡಿಕೊಂಡಿದ್ದಾರೆಯೋ ಅದು ಅವರ ವಿವರಣೆಯನ್ನು ಹೇಳುತ್ತದೆ. ಮತ್ತು ಅದರ ಕುರಿತಾದ ಅವರ ಆನ್ವಯಿಕತೆಯನ್ನೂ ಅದು ನಿರ್ಧರಿಸುತ್ತದೆ. ಅವರ ಆಲೋಚನೆಗಳು ಅಂತ ಯಾವುದು ಇದೆಯೋ ಅದನ್ನು ಅವರು ಅವರ ಕಾದಂಬರಿಯಲ್ಲಿ ಹೇಳಿದರು. ಮತ್ತು ಅವರು ಬರೆದುದು ಒಂದು ಕಾಲದ ನಿರ್ದಿಷ್ಟವಾದ ಸಾಮಾಜಿಕ ಜೀವನ ಮತ್ತು ಅದರ ಅರ್ಥವನ್ನು ಮಾತ್ರವೇ. ಮೈಮನಗಳ ಸುಳಿಯಲ್ಲಿ ಕಾದಂಬರಿಯ ಮಂಜುಳೆಗೆ ಒಂದು ನಿರ್ದಿಷ್ಟವಾದ ಮಾದರಿಯೂ ಇದೆ. ಅದು ಅವಳ ಹೆಣ್ತನವನ್ನು ಹೇಳುತ್ತದೆ. ಅವಳ ಬಯಕೆಯನ್ನು ಪ್ರಸ್ತುತ ಪಡಿಸುತ್ತದೆ. ಹೆಣ್ಣಾಗಿ ಅವಳು ಯಾವುದನ್ನು ಬಯಸುತ್ತಾಳೆ ಮತ್ತು ಅದನ್ನು ಅವಳು ಹೇಗೆ ಭಾವಿಸಿಕೊಳ್ಳುತ್ತಾಳೆ ಎನ್ನುವುದನ್ನು ಕಾರಂತರು ಅದರಲ್ಲಿ ನಿರೂಪಿಸುತ್ತಾರೆ. ವಾಸ್ತವವಾಗಿ ಇಡೀ ಕಾದಂಬರಿಯು ಅಂತಿಮವಾಗಿ ಹೇಳುವುದು ಹೆಣ್ಣೊಬ್ಬಳ ಅಂತರಂಗವನ್ನು ಮಾತ್ರವೇ ಅಲ್ಲ, ಅದು ಮನಸ್ಸನ್ನು ಹೇಳುತ್ತದೆ. ಅದರಲ್ಲಿ ಸತ್ಯವೂ ಇದೆ. ಇದನ್ನು ನಾವು ಮನೋವೈಜ್ಞಾನಿಕ ಕ್ರಮದಲ್ಲಿ ನೋಡುವುದೂ ಸಾಧ್ಯ. ಮತ್ತು ಇದನ್ನು ಗ್ರಹಿಸುವಾಗ ನಾವು ಮನೋವಿಜ್ಞಾನವನ್ನು ಮಾತ್ರವೇ ಗ್ರಹಿಸಬೇಕೆಂದು ಅರ್ಥವೂ ಅಲ್ಲ. ಹಾಗೆ ನೋಡುವುದಿದ್ದರೆ ಸಾಂಪ್ರದಾಯಿಕ ವಿಮರ್ಶಕರು ಸಾಹಿತ್ಯವನ್ನು ನೋಡುವುದು ಮತ್ತು ಗ್ರಹಿಸುವುದು ಕೇವಲ ಒಂದು ಪಾತ್ರವಾಗಿ ಮಾತ್ರವೇ. ಆದರೆ ಮನೋವೈಜ್ಞಾನಿಕ ವಿಮರ್ಶೆಯು ಸುಪ್ತಪ್ರಜ್ಞೆ ಮತ್ತು ಅದರ ಅಭಿವ್ಯಕ್ತಿಯನ್ನು ಗ್ರಹಿಸುತ್ತದೆ. ಆದರೆ ಇದರಲ್ಲಿ ನಾವು ಬಯಕೆ ಮತ್ತು ಅಭಿವ್ಯಕ್ತಿಯನ್ನು ನೋಡುವಾಗ ಬರೀ ಅಭಿವ್ಯಕ್ತಿಯನ್ನು ಮಾತ್ರವೇ ಗ್ರಹಿಸಿದರೆ ಸಾಕಾಗುವುದೂ ಇಲ್ಲ. ಈಡಿಪಸ್ ನಾಟಕದಲ್ಲಿ ಬರುವ ಅವನ ಪಾತ್ರವನ್ನು ಗ್ರಹಿಸಲು ನಮಗೆ ಬರೀ ಸಾಂಪ್ರದಾಯಿಕವಾದ ವಿಮರ್ಶೆಯು ಉಪಯುಕ್ತವಲ್ಲ. ಸಾಹಿತ್ಯದ ಅನೇಕ ಕೃತಿಗಳು ನಮಗೆ ಅಂತರಂಗವನ್ನು ಹೇಳುತ್ತವೆ. ಅದು ಬಹಳ ಅಗತ್ಯವೂ ಆಗಿರುತ್ತದೆ. ಆದ್ದರಿಂದಲೇ ಅನೇಕ ಸಾಂಪ್ರದಾಯಿಕವಾದ ವಿಮರ್ಶೆಯು ತಳೆಯುವ ಅನೇಕ ನಿರ್ಣಯುಗಳು ನಮಗೆ ಬರೀ ಶೈಕ್ಷಣಿಕ ಅಗತ್ಯದಂತೆ ಕಾಣಿಸುತ್ತವೆ. ಸಮಾಜಶಾಸ್ತ್ರೀಯವಾದ ದೃಷ್ಟಿಕೋನದಲ್ಲಿ ಮನೋಸ್ಥಿತಿ ಮತ್ತು ಅದರ ಸಾಮಾಜಿಕ ನಿಲುವುಗಳ ಅಗತ್ಯವೂ ಇರುತ್ತದೆ. ಕೃತಿಯಲ್ಲಿ ಬರುವ ಪಾತ್ರಗಳು ಮತ್ತು ಅವುಗಳ ಸ್ವಭಾವಗಳು ಮನಸ್ಸು ಮತ್ತು ಅದರ ಪರಿಣಾಮವನ್ನು ಹೇಳುತ್ತವೆ. ಆದರೆ ಅದರ ಜೊತೆಗೆ ಅವುಗಳು ಕೃತಿಯಲ್ಲಿ ಹೇಗೆ ಹಾಜರಾಗುತ್ತವೆ ಎನ್ನುವುದನ್ನೂ ನೋಡಬೇಕಾಗುತ್ತದೆ. ಅವುಗಳು ಒಂದು ರೀತಿಯಿಂದ ಭೌತಿಕವಾದ ಅಸ್ತಿತ್ವವನ್ನು ಪಡೆಯುತ್ತವೆ. ಮತ್ತು ಅವುಗಳ ಸ್ವಭಾವ ಮತ್ತು ವರ್ತನೆಗಳಿಗೆ ನಿರ್ದಿಷ್ಟವಾದ

ಒಂದು ಅರ್ಥವೂ ಇರುತ್ತದೆ. ಅಂದರೆ ಅವುಗಳಿಗೆ ಇರುವ ಅರ್ಥವು ಮನಸ್ಸು ಮತ್ತು ಅದರ ನಿರೂಪಣೆಯನ್ನು ಮಾಡುತ್ತವೆ. ವಸ್ತು ಮತ್ತು ಅದರ ಅಯ್ಕೆಯು ಸಮಾಜವನ್ನು ಹೇಳುತ್ತದೆ ಎನ್ನುವುದು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ನಮ್ಮ ಗಮನವು ಇರಬೇಕಾದ್ದು ಈ ದೃಷ್ಟಿಯಿಂದ ಕೃತಿ ಮತ್ತು ಅದರ ವಸ್ತುವು ಯಾವ ರೀತಿಯದು ಎನ್ನುವುದರ ಬಗೆಗೆ. ನಮಗೆ ಮನುಷ್ಯ ಮತ್ತು ಅವನ ನಿಜವಾದ ಸ್ವರೂಪವು ಮುಖ್ಯವಾಗುತ್ತದೆ. ಅದನ್ನು ಲೇಖಕನು ಹೇಗೆ ಹೇಳುತ್ತಾನೆ ಮತ್ತು ಅದನ್ನು ಅವನು ಹೇಳುವಾಗ ತಳೆಯುವ ನಿಲುವು ಯಾವುದು ಎನ್ನುವುದು ಮಾತ್ರವೇ ಮುಖ್ಯವಾಗುತ್ತದೆ. ಮನೋಸ್ಥಿತಿಯೆನ್ನುವುದು ನಿಜವಾಗಿಯೂ ನಿರ್ಮಾಣವಾಗುತ್ತದೆ. ಮತ್ತು ಅದು ಸಮಾಜ ಮತ್ತು ಪರಿಸರವನ್ನು ಅವಲಂಬಿಸುತ್ತದೆ. ಅದರಲ್ಲಿ ವ್ಯಕ್ತವಾಗುವುದು ಜೀವನ ಮತ್ತು ಅದರ ಅರ್ಥಗಳು ಮಾತ್ರವೇ. ಲೇಖಕ ಮತ್ತು ಅವನ ಮನೋಭಾವವು ಹೀಗೆ ಬೇರೆ ಬೇರೆ ರೀತಿಯಲ್ಲಿ ರೂಪುಗೊಳ್ಳುತ್ತದೆ. ಲೇಖಕನು ಸಮಾಜ ಮತ್ತು ಬಾಹ್ಯದ ಅನೇಕ ನಿಯಮವನ್ನು ಮೀರಿ ಇರುವುದು ಸಾಧ್ಯವಿಲ್ಲ. ಅವನು ಅದರ ಮೂಲಕವೇ ಅನೇಕವನ್ನು ಗ್ರಹಿಸುತ್ತಾನೆ. ಅದನ್ನು ಕ್ಷಣಗಳು ಮತ್ತು ಅದರ ಅರಿವು ಎಂದೂ ಹೇಳಬೇಕಾಗುತ್ತದೆ. ಅದರ ಜೊತೆಗೆ ಕೆಲವು ರೀತಿಯಲ್ಲಿ ಕೇಂದ್ರಗಳು ಇರುತ್ತವೆ. ಯಾವುದನ್ನು ಲೇಖಕ ಕೇಂದ್ರ ಮಾಡಿಕೊಳ್ಳುತ್ತಾನೆ ಮತ್ತು ಅದರ ಮೂಲಕ ಅವನು ನಿರೂಪಿಸುವ ಸಂಗತಿಗಳು ಯಾವುವು ಎನ್ನುವುದು ಮಾತ್ರವೇ ಬಹಳ ಮುಖ್ಯ. ಸಾರ್ತ್ರೆಯ ನಾಸಿಯಾ ಅಥವಾ ಗಿರಿಯವರು ಗತಿಸ್ಥಿತಿ ಮುಂತಾದ ಬರಹಗಳು ಸ್ವಂತವನ್ನು ಕೇಂದ್ರ ಮಾಡಿಕೊಂಡಿವೆ. ಇಲ್ಲಿ ಕೇಂದ್ರಕ್ಕೆ ಮಹತ್ವವು ಇದೆ. ಗತಿಸ್ಥಿತಿಯಲ್ಲಿ ವ್ಯಕ್ತಿಯು ಮುಖ್ಯನೂ ಆಗಿದ್ದಾನೆ. ವಾಸ್ತವವಾಗಿ ಕೃತಿಯಲ್ಲಿ ಬರುವ ಹೇಳಿಕೆ ಮತ್ತು ಅದರ ಅನ್ವಯಗಳಿಗೆ ನಿಜವಾದ ಅರ್ಥವು ಬೇರೆಯಿರುತ್ತದೆ. ಅದನ್ನು ಹೀಗೆಯೂ ಹೇಳಬಹುದು: ಕೃತಿಯಲ್ಲಿ ಬರುವ ಕೆಲವು ವಿಷಯಗಳು ಹೇಳಿಕೆಯನ್ನು ನೀಡುತ್ತವೆ. ಮತ್ತೆ ಕೆಲವು ಅನ್ವಯವನ್ನು ಸೂಚಿಸುತ್ತವೆ. ಬೆಟ್ಟದಜೀವ ಕಾದಂಬರಿಯಲ್ಲಿ ನಿರೂಪಕನು ನೋಡುವುದು ಅವನ ಅನ್ವಯವನ್ನೂ ಸೂಚಿಸುತ್ತದೆ. ಉದ್ದೇಶವು ಯಾವುದು ಮತ್ತು ಅದರ ಅನ್ವಯವು ಯಾವುದು ಎಂದು ಕಾದಂಬರಿಯನ್ನು ಓದುವಾಗ ತಿಳಿಯುತ್ತದೆ. ಕೃತಿಯಲ್ಲಿ ಅನ್ವಯವೇ ಕೃತಿಕಾರನ ಉದ್ದೇಶವನ್ನು ಹೇಳುತ್ತದೆ. ಮತ್ತು ಅದರಲ್ಲಿ ಅವನ ಮನೋಭಾವವೂ ಬಹಳ ಮುಖ್ಯವಾಗುತ್ತದೆ. ಕೃತಿಯಲ್ಲಿ ಬರುವ ಕ್ರಿಯೆಗಳು ಮತ್ತು ಅದರ ಸಂಗತಿಗಳೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಸಾಹಿತ್ಯ ಮತ್ತು ಅದರ ಲಕ್ಷಣವೂ ಒಂದು ದೃಷ್ಟಿಯಿಂದ ಮಹತ್ವದ್ದೂ ಆಗುತ್ತದೆ. ಸಾಹಿತ್ಯ ಮತ್ತು ಅದರ ಕ್ರಿಯೆ ಅದರ ಉದ್ದೇಶ ಮತ್ತು

ಅದರಲ್ಲಿ ಬಳಕೆಯಾಗುವ ಪ್ರತೀಕಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಮತ್ತು ಮನೋವೈಜ್ಞಾನಿಕವಾದ ಹಿನ್ನೆಲೆಯಲ್ಲಿಯೂ ಗುರುತಿಸುವುದು ಸಾಧ್ಯ.

ಬರಹವು ಒಂದು ರೀತಿಯಿಂದ ಲೇಖಕನಿಗೆ ನೆಮ್ಮದಿಯನ್ನು ಕೊಡುತ್ತದೆ. ಅಂದರೆ ಅವನಿಗೆ ಖುಷಿಯು ಸಿಗುತ್ತದೆ. ಆ ಖುಷಿಯು ಅವನಿಗೆ ಬೇರೆಯವರ ಜೊತೆಗೆ ತೋಡಿಕೊಂಡ ಸಂಗತಿಯನ್ನು ಹೇಳುತ್ತದೆ. ವೈಯಕ್ತಿಕ ರಚನೆ ಅದರ ಅಗತ್ಯಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಬರಹವು ಒಂದು ಸುಖವೂ ಹೌದು. ನಾವು ನಮ್ಮ ವಿಷಯಗಳನ್ನು ಇನ್ನೊಬ್ಬರಲ್ಲಿ ನಮಗೆ ಗೊತ್ತಿರುವುದನ್ನು ತೋಡಿಕೊಂಡ ಅನುಭವನ್ನು ಅದು ಕೊಡುವುದರಿಂದ ನಮಗೆ ನೆಮ್ಮದಿಯನ್ನು ಕೊಡುತ್ತದೆ. ಮತ್ತು ಅದರಲ್ಲಿ ನಮ್ಮ ನೆಮ್ಮದಿಯು ಮಾತ್ರವೇ ಇಲ್ಲ ನಮ್ಮ ಬರಹವನ್ನು ಓದುವ ನಮ್ಮ ಸ್ನೇಹಿತನ ನೆಮ್ಮದಿಯೂ ಇರುತ್ತದೆ. ಅವನು ಸ್ನೇಹಿತನು ಯಾಕೆಂದರೆ ಅವನು ನಮ್ಮ ಬರಹವನ್ನು ಓದುತ್ತಾನೆ. ಮತ್ತು ಹಾಗೆ ನಮ್ಮೊಂದಿಗೆ ಅವನು ವಿಷಯವನ್ನು ಹಂಚುತ್ತಾನೆ. ಮತ್ತು ನಮಗೆ ಗೊತ್ತಿಲ್ಲದಂತೆ ನಮ್ಮ ನಿಲುವುಗಳನ್ನು ವಿರೋಧಿಸಬಹುದು ಅಥವಾ ನಮ್ಮ ಅಭಿಪ್ರಾಯವನ್ನು ಸ್ವೀಕರಿಸಲೂಬಹುದು. ಅಥವಾ ನಮ್ಮ ಅಭಿಪ್ರಾಯವನ್ನು ಮುಂದುವರಿಸಲೂ ಬಹುದು. ಅಂದರೆ ನಮ್ಮ ಬರಹ ಮತ್ತು ಅದನ್ನು ಸ್ವೀಕರಿಸುವ ನಮ್ಮ ಓದುಗನು ಸಂವಾದವನ್ನು ಮಾಡುತ್ತಾನೆ. ಆದರೆ ಅದರಲ್ಲಿ ಖುಷಿಯು ಇರುತ್ತದೆ. ಆದರೆ ಇಲ್ಲಿ ಮತ್ತೆ ಕೆಲವು ಅಭಿಪ್ರಾಯವನ್ನು ನೋಡಬಹುದು: ಬರಹವನ್ನು ಯಾರು ಓದುವುದೇ ಇಲ್ಲವೋ ಅವನು ನಿಜವಾಗಿಯೂ ನಮ್ಮೊಂದಿಗೆ ಸಂವಾದವನ್ನು ಮಾಡುವುದೇ ಇಲ್ಲವೆಂದು ನಾವು ತಿಳಿಯಬೇಕಾಗುತ್ತದೆ. ಮತ್ತು ಅದರಲ್ಲಿ ನಿರ್ದಿಷ್ಟವಾದ ಕೆಲವು ಸಂಗತಿಗಳು ಇರುತ್ತವೆ. ಅಂದರೆ ಬರಹ ಮತ್ತು ಅದರ ಸ್ವರೂಪವನ್ನು ನಾವು ಈ ದೃಷ್ಟಿಯಿಂದ ನಾವು ನೋಡಬೇಕಾದ ಕ್ರಮವೂ ಬೇರೆಯಾಗುತ್ತದೆ. ಅದರ ಅರ್ಥವು ಇಷ್ಟೇ: ಬರಹವು ನಮ್ಮ ಮೌನವನ್ನು ಭೇದಿಸುತ್ತದೆ. ಮತ್ತು ಅದರಲ್ಲಿ ವೈಯಕ್ತಿಕ ರಚನೆ ಮತ್ತು ಅದರ ಸ್ವರೂಪವು ಇರುವುದು ನಮಗೆ ಬೇಕಾದ ಸಂಗತಿಗಳನ್ನು ಹೇಳಲು. ವೈಯಕ್ತಿಕ ರಚನೆಯು ನಮ್ಮ ಮನೋಭಾವನ್ನು ಹೇಳುತ್ತದೆ. ಆದರೆ ಸಮಾಜ ಮತ್ತು ಅದರ ರಚನೆಗಳು ಮತ್ತೊಂದನ್ನು ಹೇಳುತ್ತದೆ, ನಾವು ಬರೆಯುವುದು ಎಂದರೆ ಸಮಾಜ ಮತ್ತು ಅದರ ರಚನೆಯೊಂದಿಗೆ ನಾವು ಸಾಧ್ಯವಾದಷ್ಟು ಸಂಬಂಧವನ್ನು ಸ್ಥಾಪಿಸಿಕೊಳ್ಳುವುದೂ ಹೌದು. ಫ್ರಾಯ್ಡನ ವಿಶ್ಲೇಷಣೆಯಲ್ಲಿ ವೈಯಕ್ತಿಕತೆ ಮತ್ತು ಅದರ ಸ್ವರೂಪವು ಬೇರೆಯಾಗುತ್ತದೆ. ಅಂದರೆ ಅದರಲ್ಲಿ ವೈಯಕ್ತಿಕತೆ ಮತ್ತು ಅದರ ಸ್ವರೂಪವು ಈ ದೃಷ್ಟಿಯಿಂದ ಮನೋಸ್ಥಿತಿಯನ್ನು ಹೇಳುತ್ತದೆ.

ಯಾವುದನ್ನು ನಾವು ಹೇಗೆ ಹೇಳಬೇಕು ಎನ್ನುವುದು ಮನೋಸ್ಥಿತಿಯ ಪ್ರಶ್ನೆಯೂ ಆಗಿದೆ. ಅವನು ಹೇಳುವುದು ನಮಗೆ ಇರುವ ಮನೋಸ್ಥಿತಿ ಮತ್ತು ಅದರ ಅರ್ಥವೂ ಬೇರೆ. ಅದರಲ್ಲಿ ನಾವು ಯಾವುದನ್ನು ಹೇಳುತ್ತೇವೆಯೋ ಅದರ ನಮ್ಮ ಅಭಿವ್ಯಕ್ತಿಯೂ ಹೌದು. ಅದರಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಇವೆ. ಅಂದರೆ ನಾವು ಇರುವುದನ್ನು ಮತ್ತು ಮನಸ್ಸು ಯಾವುದನ್ನು ಹೇಳುತ್ತದೆಯೋ ಅದನ್ನು ಮಾತ್ರವೇ ವಿವರಿಸುವುದಿಲ್ಲ ಅದರ ಬದಲು ನಮಗೆ ಯಾವುದನ್ನು ಹೇಳಬೇಕೆಂಬ ಬಯಕೆಯು ಇರುತ್ತದೆಯೋ ಅದನ್ನೂ ಹೇಳುತ್ತೇವೆ. ಮನಸ್ಸು ಮತ್ತು ಅದರ ಒತ್ತಡಗಳು ನಮಗೆ ಬಹಳ ವಿಷಯವನ್ನು ಹೇಳುತ್ತದೆ. ಅಂದರೆ ಮನಸ್ಸು ಮತ್ತು ಅದರ ಸಂಕಟವು ಸಾಮಾನ್ಯರಿಗೆ ಒಂದೊಂದು ರೀತಿಯಲ್ಲಿ ಕಾಣಿಸಲೂ ಬಹುದು: ಅಂದರೆ ಅದು ಕೆಲವರಿಗೆ ನೋವು ಕೊಡುತ್ತದೆ. ಮನಸ್ಸು ಮತ್ತು ಅದರ ಒತ್ತಡವು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣಿಸುತ್ತದೆ. ಕೆಲವರಿಗೆ ಅದು ತಲೆನೋವು, ಮತ್ತೆ ಕೆಲವರಿಗೆ ಅದು ದೇಹವನ್ನು ಹಿಂಡಿದ ಅನುಭವವನ್ನು ಮತ್ತೆ ಕೆಲವರಿಗೆ ಅದು ಸುಸ್ತನ್ನು ಉಂಟಮಾಡಬಹುದು. ಅದರೆ ಅದು ಲೇಖಕನಲ್ಲಿ ಮಾತ್ರವೇ ಬೇರೆಯಾಗುತ್ತದೆ.

ಒಬ್ಬ ಪ್ರಗತಿಪರ ಚಿಂತಕನು ತನ್ನ ನೋವನ್ನು ತನಗೆ ಅನಿಸಿದ್ದನ್ನು ತನ್ನ ಜೊತೆಯವರೊಂದಿಗೆ ಚಳುವಳಿಯನ್ನು ಮಾಡಬಹುದು. ಮತ್ತೆ ಕೆಲವರು ಅದನ್ನು ಬರಬೇಕಾದ ಆಶಯದ ಹಿನ್ನೆಲೆಯಲ್ಲಿಯೂ ನೋಡಬಹುದು. ಇರುವುದು ಮತ್ತು ಬರಬೇಕಾದ್ದು ಪ್ರಗತಿಪರ ಚಿಂತಕನಿಗೆ ಅತ್ಯಂತ ಆವಶ್ಯಕವೂ ಆಗಿರುತ್ತದೆ. ಮನುಷ್ಯ ಮತ್ತು ಅವನ ನಡತೆಯು ಬೇರೆ ಬೇರೆ ವಿಷಯಗಳನ್ನು ಹೇಳುತ್ತವೆ. ನಡತೆಗೂ ಒಂದು ರಾಚನಿಕವಾದ ಸ್ವರೂಪವು ಇದೆ. ಅದು ನಿರ್ದಿಷ್ಟವಾದ ಆಶಯವನ್ನು ಸೂಚಿಸುತ್ತದೆ. ರಚನೆ ಮತ್ತು ಅದರ ವಿಶ್ಲೇಷಣೆಯನ್ನು ಮಾಡುವಾಗ ನಾವು ಇದನ್ನು ಯೋಚಿಸಬೇಕಾಗುತ್ತದೆ. ರಾಚನಿಕ ವಿಶ್ಲೇಷಣೆಯಲ್ಲಿ ಚರಿತ್ರೆ ಮತ್ತು ಅದರ ಅರಿವು ಬಹಳ ಮುಖ್ಯವಾಗುತ್ತದೆ. ನಮಗೆ ಗೊತ್ತಿರಬೇಕಾದ ಅನೇಕ ಅಂಶಗಳು ಇವೆ. ವಾಸ್ತವ ಮತ್ತು ಅದರ ರಚನೆಗಳು ಸ್ಥಿರವಾಗಿ ಇರುವುದೂ ಇಲ್ಲ. ಅದು ಬದಲಾಗುತ್ತದೆ. ಮತ್ತು ಬದಲಾಗುವುದು ಬೇರೆ ಬೇರೆ ಕಾರಣಗಳಿಂದ. ಆದರೆ ಸಮಾಜ ಮತ್ತು ಅದರ ಅರಿವು ಹೆಚ್ಚು ಅಗತ್ಯವೂ ಆಗುತ್ತದೆ. ನಮಗೆ ಸಾಮಾಜಿಕ ಜೀವನ ಮತ್ತು ಅದರ ವಾಸ್ತವವಾದ ಅರಿವು ಇರಬೇಕಾಗುತ್ತದೆ. ವಾಸ್ತವವು ಕೆಲವನ್ನು ನಿರ್ಮಾಣ ಮಾಡುತ್ತದೆ. ಅದು ಅಗತ್ಯವೂ ಆಗಿರುತ್ತದೆ. ಯಾಕೆಂದರೆ ನಿಜವೆನ್ನುವುದು ನಮಗೆ ಅಗತ್ಯವಾದ ಒಂದು ಪರಿಕರವೂ ಆಗಿದೆ. ಅನೇಕ

ಅಂಶಗಳನ್ನು ರಚನೆಯು ನಿರ್ಮಾಣ ಮಾಡುತ್ತದೆ. ಮತ್ತು ಅದುವೇ ವಾಸ್ತವವಾದ ಸೂಚನೆಯನ್ನು ಕೊಡುವುದೂ ನಿಜ.

ರಚನೆ ಮತ್ತು ಅದಕ್ಕೆ ಯಾವುದನ್ನು ನಾವು ಅನ್ವಯಿಸಬೇಕು ಎನ್ನುವುದೇ ಮುಖ್ಯ. ಯಾವುದು ಹೊಸತು ಮತ್ತು ಯಾವುದು ಅತ್ಯಂತ ಹಳೆಯದು ಎನ್ನುವುದೂ ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಹಳೆಯ ರಚನೆಗೆ ಹೊಸದಾದ ಅಂಶಗಳು ಸೇರಿಕೊಂಡು ಮತ್ತೆ ಹೊಸದಾದ ರಚನೆಯು ಆಗುತ್ತದೆ. ಅಂದರೆ ರಚನೀಕರಣ ಮತ್ತು ನಿರಚನೀಕರಣದ ಪ್ರಕ್ರಿಯೆಗಳು ನಡೆಯುತ್ತವೆ. ಆಂಶಿಕ ಅಗತ್ಯ ಮತ್ತು ಅದರ ಪುನರೂಪೀಕರಣವನ್ನು ನಾವು ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಮೌಲ್ಯ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಗಮನಿಸಬೇಕಾಗುತ್ತದೆ. ಮತ್ತೊಂದು ಅಂಶವೂ ಇದೆ. ಕೆಲವು ಸಾಮಾಜಿಕ ಅಂಶಗಳು ಚರಿತ್ರೆ ಮತ್ತು ಅದರ ಪರಿಣಾಮದಿಂದ ಹುಟ್ಟಿರುತ್ತವೆ. ಅವುಗಳಿಗೆ ಅವುಗಳೇ ಆದ ಅರ್ಥವೂ ಇರುತ್ತದೆ. ವಾಸ್ತವವಾಗಿ ಯಾವುದನ್ನು ಸಮಾಜವೆಂದು ಕರೆಯುತ್ತಿದ್ದೆವೆಯೋ ಅದು ರಚನೆಯು ಆಗಿದೆ. ಅದರಲ್ಲಿ ಕೆಲವು ಸಂಗತಿಗಳು ಸೇರ್ಪಡೆಯು ಆಗುತ್ತದೆ. ಮತ್ತು ಕೆಲವು ಸಂಗತಿಗಳು ನಿರಾಕರಣೆಗೆ ಗುರಿಯಾಗುತ್ತವೆ. ಅಂದರೆ ನಿರಾಕರಣೆ ಮತ್ತು ಹೊಸ ರಚನೆಗಳ ನಡುವೆ ಬೇರೆ ಬೇರೆ ಸಂಗತಿಗಳು ಸೇರುತ್ತವೆ. ಯಾವುದನ್ನು ಯಾವುದಕ್ಕೆ ಅನ್ವಯಿಸಬೇಕಿದೆ ಎಂದು ನಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಯಾವುದೇ ಸಮಾಜಕ್ಕೆ ಹೊಸತು ಸೇರಿದರೆ ಅದರಲ್ಲಿ ಬದಲಾವಣೆಯು ಆಗುತ್ತದೆ ಮತ್ತು ಅದರಲ್ಲಿ ಹೊಸತು ಸೇರ್ಪಡೆಯಾದರೆ ಹೊಸತು ಕಾಣಿಸಿಕೊಳ್ಳುತ್ತದೆ. ಹೊಸ ಅಂಶಗಳು ಹೊಸದಾದ ರಚನೆಗೆ ಕಾರಣವೂ ಆಗುತ್ತದೆ. ಬೇರೆ ಬೇರೆ ರಚನೆಗಳು ಅವುಗಳ ಸ್ವರೂಪವನ್ನು ನೋಡುವಾಗ ನಾವು ಅದರ ಹಿನ್ನೆಲೆಯನ್ನೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸನ್ನಿವೇಶ ಮತ್ತು ರಚನೆಗಳಿಗೆ ದ್ವಂದ್ವಾತ್ಮಕತೆಯೂ ಇರುತ್ತದೆ. ಹೊಸಮೌಲ್ಯವು ಬರುವಾಗ ಅದರ ಅರ್ಥವೂ ಬೇರೆಯಾಗುತ್ತದೆ. ಮತ್ತು ಹೊಸತರ ಜೊತೆಗೆ ಮುಖಾಮುಖಿಯೂ ಆಗುತ್ತದೆ. ಹೊಸತು ಮತ್ತು ಹಳೆಯದರ ನಡುವೆ ಸಂಘರ್ಷ ವಾಗುತ್ತದೆ. ಮೌಲ್ಯ ಮತ್ತು ವಿವರಣೆಗಳ ನಡುವೆಯೇ ಕೆಲವು ಸಂಗತಿಗಳು ನಡೆಯತ್ತವೆ. ರಚನೆಯು ವಾಸ್ತವವಾಗಿ ವಿಶ್ವಾತ್ಮಕತೆಯ ಜೊತೆಗೆ ಸಂಬಂಧವನ್ನು ಕಲ್ಪಿಸುತ್ತವೆ. ಮತ್ತು ಅದರ ಅಗತ್ಯವೂ ಇದೆ. ಒಂದು ಚಾರಿತ್ರಿಕ ರಚನೆಯು ಮತ್ತೊಂದು ರಚನೆಯೊಂದಿಗೆ ಹೊಂದಾಣಿಕೆಯನ್ನೂ ಮಾಡಿಕೊಳ್ಳುತ್ತವೆ.ಆದರೆ ರಚನೆಯೂ ಕೂಡಾ ಒಂದು ರೀತಿಯಲ್ಲಿ ಹೊಂದಾಣಿಕೆಯೂ ಆಗುತ್ತದೆ. ಯಾಕೆಂದರೆ ಅದು ಗುಂಪಿನಿಂದ ಕೂಡಿರುತ್ತವೆ.

ರಚನೆಯು ಕೂಡಾ ಒಂದು ಬಗೆಯ ಅಭಿವ್ಯಕ್ತಿಯೂ ಹೌದು. ಅದನ್ನು ಕಲೆ ಮತ್ತು ತತ್ವಜ್ಞಾನವು ಹೇಳುತ್ತದೆ. ಮತ್ತು ಸಾಹಿತ್ಯ ಮತ್ತು ಅದರ ರಚನೆಗಳು ಮೂಲಭೂತವಾಗಿ ಒಂದು ಪ್ರತಿಕ್ರಿಯೆಯೂ ಹೌದು. ಸಾಹಿತ್ಯ ಮತ್ತು ಅದರ ರಚನೆಯು ಮಾತ್ರವೇ ಸಂವಾದದ ಬಗೆಯದೂ ಹೌದು. ಅದನ್ನು ಮನಸ್ಸು ಮತ್ತು ಅದರ ರಚನೆಯೊಂದಿಗೆ ನೋಡಬೇಕಾಗುತ್ತದೆ.ಮನಸ್ಸು ಮತ್ತು ಅದರ ರಚನೆಯು ಯಾವಾಗಲೂ ವ್ಯಕ್ತಿಯಿಂದ ರಚಿತವಾಗುತ್ತದೆ. ಮತ್ತು ಅದರಲ್ಲಿ ಅವನ ಅಭಿಪ್ರಾಯವೂ ಸೇರಿಕೊಂಡಿರುತ್ತದೆ. ಸ್ವಗತ ಮತ್ತು ಅದರ ಮಾದರಿಗಳು ಒಂದು ರೀತಿಯಲ್ಲಿ ಇರುತ್ತವೆ. ಸಂವಾದವು ಮತ್ತೊಂದು ಬಗೆಯಲ್ಲಿ ಇರುತ್ತವೆ. ಆದರೆ ಅವರೆಡೂ ಲೋಕ ಮತ್ತು ಅದರ ಸತ್ವವನ್ನು ಹೇಳುತ್ತವೆ. ಸಾಹಿತ್ಯ ಮತ್ತು ಅದರ ಅಭಿವ್ಯಕ್ತಿಯು ಈ ದೃಷ್ಟಿಯಲ್ಲಿ ಭಿನ್ನವಾದುದೂ ಹೌದು. ಅದರ ಹಿಂದೆ ರಾಜಕಾರಣ, ಸಮಾಜ, ಮನೋವಿಜ್ಞಾನ ಮತ್ತು ಇತರ ಅಂಶಗಳೂ ಸೇರಿಕೊಂಡು ಬೇರೆ ಸಂಗತಿಗಳನ್ನು ಹೇಳುತ್ತವೆ. ಹಾಗೆ ನೋಡುವುದಿದ್ದರೆ ಬರೆಯುವುದು ಮತ್ತು ಓದುವುದು ಎರಡೂ ಸಮಾಜ ಮತ್ತು ಅದರ ಪ್ರತಿಕ್ರಿಯೆಗಳೇ ಆಗಿರುತ್ತವೆ. ಓದುವುದು ಅಂದರೆ ಒಂದು ನಿರ್ದಿಷ್ಟವಾದ ರೀತಿಯ ಸಂಬಂಧವನ್ನು ನಾವು ಸ್ಥಾಪಿಸಿಕೊಳ್ಳುವುದೂ ನಿಜ. ಬರೆಯುವುದು ಮತ್ತು ಓದುವುದೂ ಕೂಡಾ ಸಮಾಜವನ್ನು ಹೇಳುತ್ತವೆ. ಸಾಹಿತ್ಯ ಮತ್ತು ಅದರೊಡನೆ ನಾವು ಸಂಬಂಧವನ್ನು ಸ್ಥಾಪಿಸಿಕೊಳ್ಳುವುದು ಅಂದರೆ ನಿಜವಾದ ಅರ್ಥದಲ್ಲಿ ಸಮಾಜ ಮತ್ತು ಅದರ ಜೊತೆಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದೂ ಹೌದು. ಆದರೆ ಸಾಹಿತ್ಯವನ್ನು ಕಲಿಸುವ ಸಂಸ್ಥೆಗಳು ಕೆಲವನ್ನು ಓದಲು ಸೂಚಿಸುತ್ತವೆ. ಆದರೆ ಸಾಹಿತ್ಯ ಮತ್ತು ಇತರ ರಚನೆಗಳಿಗೆ ಕೆಲವು ರೀತಿಯ ಪ್ರಾಶಸ್ತ್ಯವಿರುತ್ತದೆ. ಸಮಾಜ ಮತ್ತು ಅದರ ಚಹರೆಗಳು ಬದಲಾಗುತ್ತಾ ಬಂದಂತೆ ಅದರ ಪರಿಣಾಮವು ಕಲೆಯ ಮೇಲೆ ಆಗುತ್ತದೆ. ಅದು ಅನಿವಾರ್ಯವೂ ಆಗುತ್ತದೆ. ಸಾಹಿತ್ಯವನ್ನು ಒಂದು ಅನನ್ಯವಾದ ಘಟಕವೆಂದು ಹೇಳಬೇಕಾಗಿಯೂ ಇಲ್ಲ. ಅದು ಭಿನ್ನವಾಗುತ್ತದೆ. ಅದರ ಅರ್ಥವೂ ಬೇರೆಯಾಗುತ್ತದೆ.

ಕಾದಂಬರಿಯು ನಿಜವಾಗಿಯೂ ನಿರ್ದಿಷ್ಟವಾದ ಓದುಗರನ್ನು ಸೆಳೆದಿದೆ. ಮತ್ತು ಹೀಗೆ ಸೆಳೆದ ಸಂಗರತಳಲ್ಲಿ ಕಾವ್ಯವೂ ಸೇರಿತ್ತದೆ. ಕಾವ್ಯದ ರಚನೆಗೆ ಕೇಳುಗರೂ ಕಾರಣ. ಅದು ಹೊಸ ಓದುಗರನ್ನು ಸೆಳೆಯಿತು. ಮತ್ತು ಅದರಲ್ಲಿ ಹೊಸದಾದ ಅಗತ್ಯಗಳೂ ಇದ್ದವು. ಅಂದರೆ ಅವುಗಳನ್ನು ನಾವು ನೋಡಿಕೊಳ್ಳುವ ಕ್ರಮಗಳು ಭಿನ್ನವಾಗುತ್ತವೆ. ಸಾಹಿತ್ಯ ಮತ್ತು ಸಮಾಜದ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು

ನಮಗೆ ಸರಿಯಾದ ಪರಿಕರವು ಇಲ್ಲದೆ ಹೋದರೆ ಅದು ವಿಫಲವಾಗುತ್ತದೆ. ಅದನ್ನು ಗ್ರಹಿಸಲು ನಮಗೆ ಬುದ್ಧಿಜೀವಿಗಳ ಚರಿತ್ರೆಯೂ ಅಗತ್ಯವಿದೆ. ನವೋದಯವು ಬರೀ ಸಾಮಾನ್ಯರನ್ನು ಮಾತ್ರವೇ ಕೇಂದ್ರ ಮಾಡಿಕೊಂಡಿಲ್ಲ. ಅದು ಸಾಮಾನ್ಯವಾದ ಸಂವೇದನೆಯನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ಆದರೆ ಸಮಾಜ ಮತ್ತು ಸಂಸ್ಕೃತಿಯನ್ನು ಅದು ನೋಡುವ ಮತ್ತು ಗ್ರಹಿಸುವ ಕ್ರಮಗಳು ಭಿನ್ನವಾಗಿದೆ. ಅದರಲ್ಲಿ ಸಮಾಜವೆಂದರೆ ಸುಂದರವಾದ ಒಂದು ಆದರ್ಶವೂ ಹೌದು. ಸಮಾಜವನ್ನು ನವೋದಯದ ಲೇಖಕರು ನೋಡಿದ ಮತ್ತು ಅದನ್ನು ಸ್ವೀಕರಿಸಿದ ಕ್ರಮವು ಬೇರೆಯಾಗಿದೆ. ಹಾಗೆ ನೋಡುವುದಿದ್ದರೆ ಸಮಾಜವನ್ನು ಯಾವ ಲೇಖಕರು ಯಾವ ರೀತಿಯಲ್ಲಿ ಗ್ರಹಿಸುತ್ತಾರೆ ಮತ್ತುಅದನ್ನು ಸ್ವೀಕರಿಸಿಕೊಳ್ಳುತ್ತಾರೆ ಎನ್ನುವುದೂ ಅಷ್ಟೇ ಮುಖ್ಯ. ಅದನ್ನು ಅವರು ನೋಡುವ ಕ್ರಮದ ಆಧಾರದ ಮೇಲೆಯೇ ನಾವು ನಿರ್ಧಾರಮಾಡಬೇಕಾಗುತ್ತದೆ. ನಾವು ನಮ್ಮ ಸಂವಹನ ಮತ್ತು ಅದರ ಹಿಂದೆ ಇರುವ ಆಲೋಚನೆಯನ್ನು ಗ್ರಹಿಸಬೇಕಾದ ಕ್ರಮವೇ ಭಿನ್ನವಾಗುತ್ತದೆ. ಸಂವಹಹನವೂ ಒಂದು ಬಗೆಯಲ್ಲಿ ತಂತ್ರಗಾರಿಕೆಯೂ ಆಗಿರುತ್ತದೆ ಎಂದು ಎಡ್ಮಂಡ್ ಬರ್ಕ್ ಹೇಳುತ್ತಾನೆ.

ನಾನು 1924ರ ಸುಮಾರಿಗೆ ವಸಂತ ಎಂಬ ಮಾಸಪತ್ರಿಕೆಯನ್ನು ನಡೆಯಿಸತೊಡಗಿದಾಗ, ವಾಚಕರ ಅಭಿರುಚಿಯನ್ನು ಚಿಗುರಿಸುವ ಸಲುವಾಗಿ ಅದರಲ್ಲಿ ಕತೆ ಕಾದಂಬರಿಗಳನ್ನು ಬರೆದು ತುಂಬಿಸುವ ಅನಿವಾರ್ಯ ಬಂತು. ನನ್ನ ಆರಂಭದ ಕಥೆಗಳು–ಅನುಭವಶೂನ್ಯವಾದ ದಿನಗಳಲ್ಲಿ ಬರಿಯ ಮನರಂಜನೆಗಾಗಿ ಬರೆದುವು. ಪತ್ತೇದಾರಿ ಕಾದಂಬರಿ ಆ ಜಾತಿಯದು. ಆದರೆ– ಈ ಪತ್ರಿಕಾ ಉದ್ಯೋಗ ನನ್ನನ್ನು ಒಂದೇ ಕಡೆ ಕುಳಿತುಕೊಳಿಸಲಿಲ್ಲ. ನಾನು ದಕ್ಷಿಣಕನ್ನಡ ಜಿಲ್ಲೆಯ ಒಳಗೂ ಹೊರಗೂ ಅಲೆದಾಡುತ್ತ ಸುತ್ತಲಿನ ಜನಜೀವನವನ್ನು ನೋಡಿ ನನ್ನ ಅನುಭವವನ್ನು ಹೆಚ್ಚಿಸಿಕೊಳ್ಳುವ ಸಂದರ್ಭ ಒದಗಿತು. ಅಂಥ ಅನುಭವಗಳಿಂದ ಪ್ರೇರಿತವಾದ ಕಥೆಯಲ್ಲಿ– ಚೋಮನ ದುಡಿ ಮೊದಲಿನದು.

ಮುಂದೆ ನಾನು ಪುತ್ತೂರಿನಲ್ಲಿ ನೆಲೆಸಿ, ನಾಲ್ಕು ಸುತ್ತಲಿನ ಕೃಷಿಕ ಜೀವನ, ನಿತ್ಯ ಜೀವನ ನೋಡಿ, ತಿಳಿಯುವ ಅವಕಾಶ ದೊರಕಿದ ಹಾಗೆ – ನನ್ನ ಬರಹಗಳಿಗೆ ಅನುಭವ ಪ್ರಧಾನ ಪ್ರೇರಣೆ ಆಗತೊಡಗಿತು. ಅಂಥ ಬರಹ – ಬೆಟ್ಟದ ಜೀವ. ಅದನ್ನು ನಾನು ಬರೆಯುವ ಮುಂಚೆಯೇ ಕಡಬ ಎಂಬ ಹಳ್ಳಿಯಲ್ಲಿ ಬಾಲಪ್ರಪಂಚ ಬರೆಯಲು ತೊಡಗಿದ್ದೆ. ಆ ಗ್ರಾಮದ ಪೂರ್ವ ದಿಕ್ಕಿನಲ್ಲಿ ಸದಾ ಕಣ್ಣಿಗೆ ಹೊಡೆದು ಕಾಣಿಸುತ್ತಿದ್ದ ದೃಶ್ಯ– ಸುಬ್ರಮಣ್ಯದ ಬೆಂಗಡೆಯಿದ್ದ ಕುಮಾರ ಪರ್ವತ ಶಿಖರ,

ಮುಂದೆ ಕೆಲವು ತಿಂಗಳ ಕಾಲ ನಾನು ಪುತ್ತೂರಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಚರಿಸುತ್ತ ಜನರ ಜೀವನಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಲ್ಲಿ ನಿರತನಾದೆ.

ನನ್ನ ಕೇಂದ್ರ– ಆ ತಾಲೂಕಿನ 'ಕಡಬ' ಎಂಬ ಊರು. ಅದರ ತೆಂಕಣ ದಿಕ್ಕಿನಲ್ಲಿ ಕಳಂಜಿಮಲೆ ಎಂಬ ಬೆಟ್ಟದ ಸಾಲಿದೆ. ಆ ಭವ್ಯ ನೋಟ ನನ್ನನ್ನು ಅಲ್ಲಿಗೂ ಆಕರ್ಷಿಸಿತು. ಮಿತ್ರರೊಡನೆ ಆ ಬೆಟ್ಟದ ಹಾದಿಯಾಗಿ ಏರಿ ಇಳಿಯುವ ಸಾಹಸ ಮಾಡಿದೆ. ಕಾಡಿನ ದಾರಿ ತುಳಿಯುತ್ತಿದ್ದ ಹೊತ್ತಿನಲ್ಲಿ– ದುರ್ಗಮ ಕಾಡಿನ ನಡುವೆ ಒಂದು ವಿಶಾಲ ಅಡಿಕೆ ತೋಟ ಕಂಡೆ. ಏಳೆಂಟು ಎಕ್ರೆ ಕಾಡನ್ನು ಸವರಿ ಒಬ್ಬ ಮುದುಕ, ದೇರಣ್ಣಗೌಡ ಎಂಬಾತ ಅಲ್ಲಿ– ಕೆಲವೇ ಕೂಲಿಗಳ ಜತೆಗೆ ನೆಲೆಸಿ ಬಲು ವಿಶಾಲ ಅಡಿಕೆ ತೋಟ ಮಾಡಿದ್ದನ್ನು ಕಂಡೆ. ಆತನಿಗೆ ಅರುವತ್ತು ವರ್ಷ ಪ್ರಾಯ ಸಂದಿರಬಹುಮ. ತಾನೊಬ್ಬನೇ ಅಲ್ಲಿ ಆತ ಕೂಲಿಗಳ ಜತೆಗೆ ದುಡಿದು ಮಾಡಿದ ಆ ತೋಟ ನನಗೆ ಅಚ್ಚರಿ ಹುಟ್ಟಿಸಿತು.

ಮುಂದೆ ಅದೇ ಪರಿಸರದಲ್ಲಿ ಅಲೆದಾಡಿದಾಗ ಕಟ್ಟ ಎಂಬಲ್ಲಿ ಗೋವಿಂದಯ್ಯ ಎಂಬ ಹಿರಿಯರು ಅತಿ ಸಾಹಸದ ಕೃಷಿಕರಾಗಿ ದುಡಿದುದನ್ನು ಕಂಡೆ. ಅವರ ಬದುಕು ನನ್ನನ್ನು ಅಚ್ಚರಿಗೊಳಿಸಿತು. ಅವರ ಧೀಮಂತಿಕೆ, ನಡೆ, ನುಡಿ, ಸಾಹಸ ಬೆರಗುಗೊಳಿಸಿತು. ಅವರ ಬದುಕಿನ ಸಮಗ್ರ ಚಿತ್ರ ಕಣ್ಮುಂದೆ ಕುಣಿಯತೊಡಗಿತು. ಮುಂದೊಂದು ದಿನ ನಾನು ಕೊಡಗಿನ ಮಿತ್ರ ಮಂಜುನಾಥಯ್ಯ ಎಂಬವರಲ್ಲಿ ಹೋದಾಗ ಅಲ್ಲೇ ಹತ್ತು ದಿನ ಕುಳಿತು– ಗೋವಿಂದಯ್ಯನವರ ಬದುಕಿನ ಸಾರ ಸರ್ವಸ್ವವನ್ನು ಬರೆದು ಮುಗಿಸಿದೆ.

ಇಂದಿಗೂ ಕಳಂಜಿಮಲೆಯ ಪಳಂಗಾಯಿ ದೇರಣ್ಣಗೌಡರು, ಕಟ್ಟದ ಗೋವಿಂದಯ್ಯನವರು ನನ್ನ ಸ್ಮರಣೆಯಲ್ಲಿ ನೆಲೆ ನಿಂತ ಧೀಮಂತರು. ಅವರು ಇಂದು ಉಳಿದಿಲ್ಲ. ಅವರ ನೆನಪು ಮಾತ್ರ ನನಗೆ ಅಳಿದಿಲ್ಲ.

ಶಿವರಾಮ ಕಾರಂತ

(20–5–1997) (ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸರಸಮ್ಮನ ಬೆಟ್ಟದ ಜೀವ ಕಾದಂಬರಿ, ಮುನ್ನುಡಿ ಭಾಗ) ಎಂದು ಕಾರಂತರು ಹೇಳುತ್ತಾರೆ.

ಈ ಶತಮಾನದಲ್ಲಿ 1930ರಿಂದ 1955ರ ತನಕ ಚಾಚುವ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ನಮ್ಮ ನಾಡಿನ ಒಂದು ಭಾಗವಾದ ದಕ್ಷಿಣ ಕನ್ನಡ ಜಿಲ್ಲೆಯನ್ನು ಆವರಿಸಿದ ಸಾಮಾಜಿಕ ಆವರಣವನ್ನು ಬ್ರಹ್ಮಾವರವೆಂಬ ಒಂದು ಹಳ್ಳಿಗೆ ಅನ್ವಯಿಸಿದಂತೆ ಇಲ್ಲಿ ಚಿತ್ರಿಸಿದ್ದೇನೆ. ಅದು ಕೇವಲ ಅದೊಂದೇ ಹಳ್ಳಿಗೆ

ಸೀಮಿತವಾಗಿರದೆ, ಅಲ್ಲಿನ ಜನರ ಹೋಗುವಿಕೆ ಬರುವಿಕೆಗಳಿಂದಾಗಿ ಆಚೀಚಿನ ಪ್ರದೇಶಕ್ಕೂ ಸಾಕಷ್ಟು ಅನ್ವಯಿಸುತ್ತದೆ.

ಇಲ್ಲಿ ಬರುವ ಹಳ್ಳಿಗಳು ಸಾಮಾನ್ಯವಾದುವು; ಜನರೂ ಅಷ್ಟೇ ಸಾಮಾನ್ಯರು. ಆದರೂ ಅಲ್ಲಿರುವ ಜನರ ನಿತ್ಯ ಜೀವನ ಯಾವೆಲ್ಲ ಬಗೆಗಳಿಂದ ಈ ಅವಧಿಯಲ್ಲಿ ಕಲಕಿ ತಳಮಳಗೊಂಡಿತು. ಅದರಿಂದಾದ ಆರ್ಥಿಕ, ನೈತಿಕ ಪರಿಣಾಮಗಳು ಯಾವ ತೆರನವು–ಎಂಬುದನ್ನು ತೋರಿಸುವ ಪ್ರಯತ್ನ ಇಲ್ಲಿದೆ. ಈ ಕಾದಂಬರಿಯ ಕಾಲ ಸಂದು ಮತ್ತೂ ಇಪ್ಪತ್ತೈದು ವರ್ಷಗಳು ಕಳೆದಿವೆಯಾದರೂ, ಜನಜೀವನದ ಪ್ರವಾಹದಲ್ಲಿ ಹೆಚ್ಚಿನ ಸುಧಾರಣೆ ಉಂಟಾಗಿಲ್ಲ. ಶಾಂತಿ ನೆಮ್ಮದಿಗಳ ಭರವಸೆ, ನೈತಿಕ ಉನ್ನತಿ ಒಂದಿಷ್ಟು ಕೀಳಾಗಿರಬಹುದೇ ಹೊರತು ಮೇಲಾಗಿಲ್ಲ. ಜನಜೀವನದ ಒಳಿತು–ಕೆಡುಕುಗಳ ಚಿತ್ರ ಇಲ್ಲಿನ ಪರಿಮಿತಿಯಲ್ಲಿ ಯಾರಿಗೂ ಹೊಡೆದು ಕಾಣಿಸಬಹುದು. ಜೀವನದಲ್ಲಿ ತೋರಿಕೆಯ ಯಶಸ್ಸಿಗೆ, ದ್ರವ್ಯಾರ್ಜನೆಗೆ, ಅಧಿಕಾರ ಲಾಲಸೆಗೆ ಜನಸಾಮಾನ್ಯರ ಮನಸ್ಸು ಯಾವ ತೆರನಲ್ಲಿ ಧಾವಿಸುತ್ತಿದೆ. ಅದರಲ್ಲಿ ಯಶಸ್ಸು ಎಂಥವರದ್ದು, ಯಾವ ತೂಕಗಳು ಸಮಾಜ ಸರಸ್ಸಿನ ತಳವನ್ನು ಸೇರಿ ಇದ್ದೂ ಕಾಣಿಸದಾಗುತ್ತವೆ, ಯಾವುವು ನೀರಮೇಲಣ ಬುರುಗಿನಂತೆ ಮೇಲಕ್ಕೆ ಬರುತ್ತವೆ – ಅಂಥ ಬುರುಗೇ ಎಂಥ ಮನ್ನಣೆ ಗಳಿಸುತ್ತದೆ–ಎಂಬೆಲ್ಲ ದೃಶ್ಯಗಳನ್ನು ಈ ಕತೆಯಿಲ್ಲದ ಕತೆಯಲ್ಲಿ ಓದುವಿರಂತೆ.

(ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಉಕ್ಕಿದ ನೊರೆ ಕಾದಂಬರಿ, ಮುನ್ನುಡಿ ಭಾಗ)

ಗೋಲ್ಡ್‌ಮನ್ ಬದ್ಧತೆ ಮತ್ತು ಮನುಷ್ಯ ಸಂಬಂಧವನ್ನು ಹೇಳುತ್ತಾನೆ. ಯಾವುದೇ ಸಮಾಜದಲ್ಲಿ ನಿರ್ದಿಷ್ಟವಾದ ಒಂದು ಸಹಯೋಗವೂ ಇರುತ್ತದೆ. ಆ ಸಹಯೋಗವನ್ನು ನಾವು ನೋಡಬೇಕಾಗುತ್ತದೆ. ಅದು ಅಗತ್ಯವೂ ಆಗುತ್ತದೆ. ಹಾಗೆಯೇ ನಮಗೆ ಗೊತ್ತಿರಬೇಕಾದ ಮತ್ತೊಂದು ಅಂಶವೆಂದರೆ ವ್ಯಕ್ತಿಗೂ ಒಂದು ಚರಿತ್ರೆಯು ಇರುತ್ತದೆ. ಅದನ್ನೂ ನಾವು ಗಮನಿಸಬೇಕಾಗುತ್ತದೆ. ವ್ಯಕ್ತಿವಾದ ಮತ್ತು ಅದರ ಚಿಂತನೆಯನ್ನು ಈ ವ್ಯಕ್ತಿ ಮತ್ತು ಅವನ ಅಸ್ತಿತ್ವದ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಸಮಾಜ ಮತ್ತು ವ್ಯಕ್ತಿ ಸಂಬಂಧದಿಂದಲೇ ಆಲೋಚನೆಯು ಹುಟ್ಟುತ್ತದೆ. ಮತ್ತು ಅದರಲ್ಲಿ ವ್ಯಕ್ತಿಯು ಯಾವ ರೀತಿಯಲ್ಲಿ ಗ್ರಹಿಸುತ್ತಾನೆ, ಅದರ ಹಿನ್ನೆಲೆಯು ಯಾವ ಬಗೆಯದು ಎನ್ನುವುದು ಮಾತ್ರವೇ ಬಹಳ ಮುಖ್ಯ. ವ್ಯಕ್ತಿಯೂ ನಿಜವಾಗಿ ಒಂದು ಮೌಲ್ಯವನ್ನು ಮಾತ್ರವೇ ಪ್ರತಿನಿಧಿಸುತ್ತಾನೆ. ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಯಾವತ್ತು ಒಂದು ಸಮಾಜವನ್ನು ಗ್ರಹಿಸುವುದು ನಿರ್ದಿಷ್ಟವಾದ ರೂಪದಲ್ಲಿ

ಮಾತ್ರವೇ ಆಗಿರುತ್ತದೆ. ವ್ಯಕ್ತಿ ಮತ್ತು ಅವನ ಆಲೋಚನೆಗಳು ಯಾವತ್ತೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಅದು ಬದಲಾಗುತ್ತದೆ. ಬದಲಾವಣೆಯನ್ನು ನಾವು ಒಂದು ಬರೀ ಘಟಕವಾಗಿ ಮಾತ್ರವೇ ಆಗಿ ನೋಡಬಾರದು. ಅದು ಸಮಾಜ ಮತ್ತು ಅದರ ಗುಂಪುಗಳನ್ನು ಆಧರಿಸಿಕೊಂಡು ಬೇರೆಯಾಗುತ್ತದೆ. ಮತ್ತೆ ಹಾಗೆ ಬದಲಾಗುದು ಅಂದರೆ ಅದು ವ್ಯಕ್ತಿ ಮತ್ತು ಅವನ ಆವಶ್ಯಕತೆಯೂ ಆಗುತ್ತದೆ.

ಕಾರಂತರ ಕಾದಂಬರಿ ಉಲ್ಲೇಖ ಸ್ವಪ್ನದ ಹೊಳೆ. ವ್ಯಕ್ತಿ ಮತ್ತು ಅವನ ಚಿಂತನೆಯು ಕೆಲವೊಮ್ಮೆ ವಿಷಯನಿಷ್ಟವಾದುದೂ ಆಗಿರುತ್ತದೆ. ಅದರಲ್ಲಿ ಎಲ್ಲವೂ ಬರೀ ತಳಹದಿರಹಿತವಾದ ಸಂಗತಿಯೆಂದು ಗ್ರಹಿಸಬೇಕಾದ ಅಗತ್ಯವೂ ಇಲ್ಲ. ಅದು ಬದಲಾಗುತ್ತದೆ ಅಂದರೆ ಅದರ ಹಿಂದೆ ಕೆಲವು ಕಾರಣಗಳೂ ಇರುತ್ತವೆ. ವಿಷಯ ಮತ್ತು ಅದರ ಸಾಧ್ಯತೆಯು ಬೇರೆಯೂ ಆಗಿರುತ್ತದೆ. ಅಂದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ನಿಲುವುಗಳು ಭಿನ್ನವಾದ್ದು ಕೂಡಾ ನಿಜ. ಅದರಲ್ಲಿ ಅವನ ಆಯ್ಕೆಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅವನು ಎಲ್ಲವನ್ನೂ ವಸ್ತುನಿಷ್ಟವಾಗಿಯೇ ಗ್ರಹಿಸುತ್ತಾನೆ ಎಂದು ಅರ್ಥವಲ್ಲ. ಅವನು ತನ್ನ ಭಾವನೆಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮಕ್ಕೆ ಅನುಗುಣವಾಗಿಯೇ ಬೇರೆ ಸಾಧ್ಯತೆಗಳು ಉಂಟಾಗುತ್ತವೆ. ಆಯ್ಕೆ ಮತ್ತು ಪರಿಸರ ಹಾಗೂ ವ್ಯಕ್ತಿತ್ವ ಮತ್ತು ಅದರ ಚಹರೆಗಳಲ್ಲಿ ಉಂಟಾಗುವ ಭಿನ್ನತೆಗಳೂ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ವಾಸ್ತವವಾಗಿ ಯಾವುದೇ ವ್ಯಕ್ತಿಯು ತನ್ನಮಟ್ಟಿಗೆ ತಾನೇ ನಿರ್ಧರಿಸುವುದು ಅತ್ಯಂತ ಕಷ್ಟದಾಯಕವೂ ಹೌದು. ಅದರಲ್ಲಿ ವ್ಯತ್ಯಾಸಗಳಿವೆ. ಮತ್ತು ಅದರ ಸ್ವಭಾವ ಮತ್ತು ಅದರ ಸ್ವರೂಪವನ್ನು ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಅದರಲ್ಲಿ ಕ್ರಿಯೆ ಮತ್ತು ಅದರ ಚಹರೆಗಳೂ ಮುಖ್ಯವಾಗುತ್ತದೆ. ವ್ಯಕ್ತಿವಾದಿ ಚಿಂತನೆ ಮತ್ತು ವ್ಯಕ್ತಿವಾದಿ ಗ್ರಹಿಕೆಗಳ ಒಂದು ಬಗೆಯವು. ಅದರಲ್ಲಿ ಚಿಂತನೆಯು ವ್ಯಕ್ತಿಯನ್ನು ಒಂದು ಘಟಕವಾಗಿ ಮಾತ್ರವೇ ನೋಡುತ್ತದೆ. ವ್ಯಕ್ತಿಯನ್ನು ಅದು ಪ್ರತ್ಯೇಕ ಮಾಡುತ್ತಾ ಬಂದಿದೆ.

ವ್ಯಕ್ತಿ ಮತ್ತು ಅವನ ಆಲೋಚನೆಯನ್ನು ಅದು ಹೇಳುವ ಕ್ರಮಗಳು ಭಿನ್ನವಾಗಿವೆ. ಅಂದರೆ ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಅದು ಹೇಳುವ ಕ್ರಮಗಳು ಬೇರೆಯಾಗುತ್ತದೆ. ಅದರಲ್ಲಿ ಭಿನ್ನವಾದ ಮತ್ತೆ ಕೆಲವು ಸಂಗತಿಗಳು ಸೇರಿಕೊಂಡಿವೆ. ವ್ಯಕ್ತಿಯನ್ನು ಒಂದು ಪ್ರತ್ಯೇಕವಾದ ಮೌಲ್ಯವನ್ನು ಧರಿಸುವವನು ಎಂದು ಅದು ಹೇಳುತ್ತದೆ. ಅಂದರೆ ಅದರಲ್ಲಿ ವ್ಯಕ್ತಿಯನ್ನು ಗ್ರಹಿಸುವಾಗ ವ್ಯಕ್ತಿ ಮತ್ತು ಅವನ ಕ್ರಿಯೆಯನ್ನು ಮಾತ್ರವೇ ಒಂದು ನಿರ್ದಿಷ್ಟವಾದ ಪ್ರಜ್ಞಾವಂತ

ಸ್ಥಿತಿಯೆಂದು ಅದು ಹೇಳುತ್ತದೆ. ಅಂದರೆ ಅದು ಪ್ರಜ್ಞೆಯನ್ನು ನೋಡಿಕೊಳ್ಳುವ ಕ್ರಮವು ಬೇರೆಯಾಗಿದೆ. ಪ್ರಜ್ಞೆ ಮತ್ತು ಅದರ ಸ್ಥಿತಿಯನ್ನು ಅದು ಗ್ರಹಿಸುವಾಗ ಒಂದು ಸಿದ್ಧಾಂತ ರಹಿತವಾಗಿಯೂ ನೋಡುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಚಿಂತನೆಯನ್ನು ವಾಸ್ತವವಾಗಿ ಬರೀ ಒಂದು ಮೌಲ್ಯವನ್ನು ಮಾತ್ರವೇ ಹೇಳುತ್ತಾನೆ ಮತ್ತು ಅದು ಅದುವೇ ಸರ್ವತಂತ್ರ ಸ್ವತಂತ್ರವೆಂದು ಹೇಳಲು ಬರುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಜೀವನವು ಹೇಗೆ ಭಿನ್ನವಾಗುತ್ತದೆ ಎನ್ನುವುದನ್ನು ಹೇಳಲು ಅದು ಬರೀ ಒಂದು ಮಾನದಂಡವನ್ನು ಮಾತ್ರವೇ ಬಳಸುತ್ತದೆ. ಆಧುನಿಕತೆ ಮತ್ತು ಅದರ ಸ್ವರೂಪವನ್ನೂ ವ್ಯಕ್ತಿವಾದವು ನೋಡುವ ಕ್ರಮವು ಬೇರೆಯಾಗಿದೆ. ಅದು ವ್ಯಕ್ತಿಯ ಆಧುನಿಕತೆಯನ್ನು ಮಾತ್ರವೇ ಪ್ರಧಾನವೆಂದು ಗಣಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಗುಣವು ಆಧುನಿಕ ಸನ್ನಿವೇಶದಲ್ಲಿ ಚಿಂತನೆಯ ಕ್ರಮದಲ್ಲಿ ಹೇಗೆ ವ್ಯಕ್ತವಾಗುತ್ತದೆ ಎನ್ನುವುದು ಮಾತ್ರವೇ ಅದರಲ್ಲಿ ಮುಖ್ಯ.

ಆಧುನಿಕತಾವಾದಿಗಳು ವ್ಯಕ್ತಿಯನ್ನು ಮಾತ್ರವೇ ಒಂದು ನಿಯಂತ್ರಣ ರೂಪವಾದ ಸಂಗತಿಯೆಂದು ಹೇಳುತ್ತಾರೆ. ಅಂದರೆ ವ್ಯಕ್ತಿಯೇ ನಿರ್ದಿಷ್ಟವಾಗಿ ಒಂದು ವಿಶಿಷ್ಟವಾದ ಘಟಕವೆಂದೂ ಅದನ್ನು ಮಾತ್ರವೇ ನೋಡಿದರೆ ಸಾಕು ಎಂದೂ ಅದು ಭಾವಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ನಡೆ ನುಡಿಯನ್ನು ಮತ್ತು ಅದರ ಸ್ವಭಾವವನ್ನು ಅದು ಗ್ರಹಿಸುವ ರೀತಿಯು ಬೇರೆಯಾಗುತ್ತದೆ. ವ್ಯಕ್ತಿಯೇ ಇಲ್ಲಿ ಒಂದು ಮುಖ್ಯವಾದ ವಿಷಯ. ಅದನ್ನು ನೋಡಿದರೆ ಸಾಕು ಎಂದೇ ಭಾವಿಸಲಾಗುತ್ತದೆ. ವ್ಯಕ್ತಿಯ ಸ್ವಾತಂತ್ರ್ಯವನ್ನು ಮಾತ್ರವೇ ಅದು ನಿರ್ದಿಷ್ಟವಾದ ಅರ್ಥದಲ್ಲಿ ಗುರುತಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅದರ ಚಹರೆಗಳನ್ನು ವ್ಯಕ್ತಿ ಮತ್ತು ಅವನ ಗ್ರಹಿಕೆಗೆ ಕಾರಣವು ಆಗುತ್ತದೆ. ವ್ಯಕ್ತಿಯನ್ನು ವಿವರಿಸುವುದು ಮಾತ್ರವೇ ಇಲ್ಲಿ ಮುಖ್ಯ. ಸಿದ್ಧಾಂತ ಮತ್ತು ಅದರ ಸಂಘರ್ಷಗಳನ್ನು ಅದು ವ್ಯಕ್ತಿಯ ಹಂತದಲ್ಲಿ ಮಾತ್ರವೇ ನೋಡುತ್ತದೆ. ಸಿದ್ಧಾಂತ ಮತ್ತು ಅದರ ಅನ್ವಯನ್ನು ಕೂಡಾ ಅದು ನೋಡುವುದು ಬೇರೆ ರೀತಿಯಲ್ಲಿ. ವ್ಯಕ್ತಿ ಮತ್ತು ಅವನ ಹಿಂದೆ ಇರಬಹುದಾದ ಕೆಲವು ಒತ್ತಡಗಳನ್ನು ಅದು ಅಷ್ಟಾಗಿ ಗ್ರಹಿಸುವುದೇ ಇಲ್ಲ. ವ್ಯಕ್ತಿಯೆಂದರೆ ಅವನ ಪಾಡಿಗೆ ಅವನು ಸ್ವತಂತ್ರನಲ್ಲ. ಅವನು ವಿಶೇಷವಾಗಿ ಕೆಲವು ಮಾದರಿಯ ರಚನೆಯ ಭಾಗವೂ ಆಗಿರುತ್ತಾನೆ. ಸಾಮಾಜಿಕ ಗುಂಪು ಮತ್ತು ಅದರ ಪ್ರಭಾವವು ವ್ಯಕ್ತಿಯ ಮೇಲೆ ಆಗುತ್ತದೆ. ಚರಿತ್ರೆ ಮತ್ತು ಅದರ ಸ್ವರೂಪ ಹಾಗೂ ಅದರ ಪಲ್ಲಟದಲ್ಲಿ ವ್ಯಕ್ತಿಯು ಹೆಚ್ಚು ವಾಹಕನು ಮಾತ್ರವೇ ಆಗಿರುತ್ತಾನೆ. ಅಂದರೆ ಅವನ ವ್ಯಕ್ತಿತ್ವ ಮತ್ತು ಅದರ ಸ್ವರೂಪವು ಒಂದು ಪರಿಕರವೂ

ಹೌದು. ಅಂದರೆ ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮವನ್ನು ಸಾಮಾಜಿಕ ವರ್ಗಗಳ ಹಿನ್ನೆಲೆಯಲ್ಲಿ ಮಾತ್ರವೇ ನೋಡಬೇಕಾಗುತ್ತದೆ. ಸಾಮಾಜಿಕ ವರ್ಗಗಳು ಕೆಲವನ್ನು ಸೂಚಿಸುತ್ತವೆ. ಮತ್ತು ಅದರಲ್ಲಿ ಭೂತಕಾಲ, ವರ್ತಮಾನ, ಭವಿಷ್ಯದ ಸಂಗತಿಗಳೂ ಸೇರಿಕೊಂಡಿರುತ್ತವೆ. ವ್ಯಕ್ತಿವಾದ ಮತ್ತು ಅದರ ಸ್ವರೂಪವನ್ನು ನೋಡುವುದು ಅಂದರೆ ಈ ಕಾರಣದಿಂದ ಅವನ ವ್ಯಕ್ತಿತ್ವ ಮತ್ತು ಅವನ ಚರಿತ್ರೆಯ ಹಿನ್ನೆಲೆಯನ್ನೂ ಗ್ರಹಿಸಬೇಕು. ಆದರೆ ಇಲ್ಲಿ ಅನೇಕ ಪ್ರಶ್ನೆಗಳು ಬರುತ್ತವೆ. ಅಂದರೆ ವ್ಯಕ್ತಿಯನ್ನು ಒಂದು ಸಮಗ್ರವಾದ ಮತ್ತು ಪ್ರತ್ಯೇಕವಾದ ವ್ಯಕ್ತಿತ್ವ ಎಂದು ಭಾವಿಸಬೇಕಾದ ಅಗತ್ಯವಿದೆಯೇ? ಅಳಿದ ಮೇಲೆ ಇದಕ್ಕೆ ಒಂದು ಉದಾಹರಣೆಯಾಗಿದೆ.

ವ್ಯಕ್ತಿ ಮತ್ತು ಅವನ ಜೀವನದ ಪ್ರಶ್ನೆಯನ್ನು ನಾವು ಈವತ್ತು ಯಾವ ರೀತಿಯಲ್ಲಿ ನೋಡಬೇಕು ಎನ್ನುವುದೂ ಮುಖ್ಯವಾದ ಪ್ರಶ್ನೆ. ಅಂದರೆ ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ನಾವು ಈವತ್ತು ನೋಡಬೇಕಾದರೆ ಅದರಲ್ಲಿ ಸಮಾಜ ಮತ್ತು ಅದರ ಅರಿವಿನ ಪ್ರಶ್ನೆಯೇ ಮುಖ್ಯವಾಗಬೇಕಾಗುತ್ತದೆ. ನಾವು ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ನೋಡುವುದು ಮತ್ತು ಗ್ರಹಿಸುವುದರಲ್ಲಿಯೂ ತಪ್ಪುಗಳಿವೆ. ವ್ಯಕ್ತಿ ಮತ್ತು ಅವನ ಅಸ್ತಿತ್ವವನ್ನು ಮಾತ್ರವೇ ನಾವು ಮಾನದಂಡವಾಗಿ ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಮತ್ತು ಅದರಲ್ಲಿ ಅವನನ್ನು ಒಂದು ಪ್ರತ್ಯೇಕ ಘಟಕವಾಗಿ ನೋಡಲಾಗುತ್ತದೆ. ವ್ಯಕ್ತಿ ಮತ್ತು ಅವನ ಚಿಂತನೆಯನ್ನು ಮಾತ್ರವೇ ಬಹಳ ಮುಖ್ಯವೆಂದು ಗಣಿಸಿದರೆ ಅದರ ಅರ್ಥವು ಬೇರೆಯಾಗುತ್ತದೆ. ಮತ್ತು ಅವನ ವ್ಯಕ್ತಿತ್ವವನ್ನು ಸ್ವಯಂಸಂಪೂರ್ಣವಾಗಿದೆ ಎಂದು ಗ್ರಹಿಸಲಾಗುತ್ತದೆ. ವ್ಯಕ್ತಿ ಮತ್ತು ಅವನ ವ್ಯಕ್ತಿತ್ವವನ್ನು ನೋಡಿದರೆ ಅದರ ಸ್ವರೂಪವೂ ಬೇರೆಯಾಗುತ್ತದೆ. ವ್ಯಕ್ತಿ ಒಂದು ನಿರ್ದಿಷ್ಟವಾದ ಮೌಲ್ಯವನ್ನು ಮಾತ್ರವೇ ಪ್ರಸ್ತುತಪಡಿಸುತ್ತಾನೆ. ಮತ್ತು ಅದು ಬಹಳ ಮುಖ್ಯವೆಂದು ಅವರು ಭಾವಿಸುತ್ತಾರೆ. ವ್ಯಕ್ತಿಯು ತನ್ನದೇ ಆದ ಪಾತ್ರವನ್ನು ವಹಿಸುತ್ತಾನೆ. ಆದರೆ ಅದರಲ್ಲಿ ವ್ಯಕ್ತಿಯನ್ನು ಸಮಾಜದ ಒಂದು ಭಾಗವೆನ್ನುವ ಕಲ್ಪನೆಯೇ ಇಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ವ್ಯಕ್ತಿ ಮತ್ತು ಅವನ ಮೌಲ್ಯವನ್ನು ಮಾತ್ರವೇ ನೋಡುವವರು ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಮಾತ್ರವೇ ಗಮನಿಸುತ್ತಾರೆ. ಆದರೆ ವ್ಯಕ್ತಿ ಕೇಂದ್ರಿತ ಚಿಂತನೆಯು ಒಂದು ವಿಷಯನಿಷ್ಟವಾದ ಸಂಗತಿಯು ಮಾತ್ರವೇ ಆಗಿದೆ. ವ್ಯಕ್ತಿ ಮತ್ತು ಅವನ ಚಿಂತನೆಯು ಕ್ರಮವು ಮೂಲಭೂತವಾಗಿ ಕೆಲವು ಸಂಗತಿಗಳನ್ನು ಹೇಳುತ್ತವೆ. ಅದು ವ್ಯಕ್ತಿಯ ಕುರಿತಾಗಿ ಕೆಲವು ನಿರೂಪಣೆಯನ್ನು ಮಾಡುತ್ತವೆ. ಮತ್ತು ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಆಧುನಿಕತೆಯು ಗ್ರಹಿಸಿದ ಕ್ರಮವು

ಬೇರೆಯಾಗಿದೆ. ಅದರಲ್ಲಿ ವ್ಯಕ್ತಿಯ ನಿಲುವುಗಳೇ ಪ್ರಧಾನವಾಗುತ್ತದೆ. ಮತ್ತು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ವ್ಯಕ್ತಿಯನ್ನು ನೋಡುವಾಗ ಅವನೇ ಅನೇಕ ಸಂಗತಿಗಳ ವಾರಸುದಾರನೆಂದು ಅದು ವಿವರಿಸುತ್ತದೆ. ವಿಷಯನಿಷ್ಠತೆ ಮತ್ತು ವಸ್ತುನಿಷ್ಠತೆಯು ಈ ಚರ್ಚೆಯಲ್ಲಿ ಬೇರೆಯಾಗುತ್ತದೆ. ಮತ್ತು ಸ್ವಾತಂತ್ರ್ಯದ ಪ್ರಶ್ನೆಯನ್ನು ಈ ಸಂಗತಿಗಳು ನೋಡುವ ಕ್ರಮವು ಬೇರೆಯಾಗುತ್ತದೆ. ಮತ್ತು ಇದರಲ್ಲಿ ಸ್ವಾತಂತ್ರ್ಯವನ್ನು ವಿವರಿಸುವ ಕ್ರಮವು ಬೇರೆಯಾಗುತ್ತದೆ. ವಿವರಣೆ ಮತ್ತು ಅದರ ಅರ್ಥವೂ ಇಲ್ಲಿ ನಿರ್ದಿಷ್ಟವಾಗುತ್ತದೆ. ಅಂದರೆ ವ್ಯಕ್ತಿಯನ್ನು ನಾವು ಬರೀ ವಿಷಯನಿಷ್ಠವಾಗಿ ಮಾತ್ರವೇ ನೋಡುವುದು ಅಸಾಧ್ಯ.

ಆಧುನಿಕತೆಯು ಅದರ ಸಿದ್ಧಾಂತವನ್ನು ನೋಡುವುದು ಬರೀ ಒಂದು ಗ್ರಹಿಕೆಯ ಕ್ರಮವಾಗಿ ಮಾತ್ರವೇ. ಅದರಲ್ಲಿ ವ್ಯತ್ಯಾಸವಿದೆ. ಇಲ್ಲ. ಇಲ್ಲಿ ನೋಡಬೇಕಾದ ಮತ್ತೊಂದು ಅಂಶವೂ ಇದೆ. ಆಧುನಿಕತೆಯು ಹೇಗೆ ವ್ಯಕ್ತಿಯನ್ನು ಸ್ವೀಕರಿಸುತ್ತದೆ ಎನ್ನುವುದೂ ಬಹಳ ದೊಡ್ಡದಾದ ಪ್ರಶ್ನೆಯೂ ಆಗಿದೆ. ಆಧುನಿಕತೆಯಲ್ಲಿ ವ್ಯಕ್ತಿಯ ವಾಹಕನು ಮಾತ್ರವೇ ಆಗಿದ್ದಾನೆ. ಮತ್ತು ಅವನ ವ್ಯಕ್ತಿತ್ವವನ್ನು ಈ ದೃಷ್ಟಿಯಿಂದ ನೋಡಬೇಕಾದ ಕ್ರಮವೂ ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ಗ್ರಹಿಕೆಗಳು ಆಧುನಿಕತೆಯಲ್ಲಿ ಬೇರೆ ಬೇರೆ ಆಗುತ್ತದೆ. ವ್ಯಕ್ತಿಯು ಇದರಲ್ಲಿ ಘಟಕ ಮಾತ್ರವೇ ಆಗಿರುವುದರಿಂದ ಅದರ ಅರ್ಥವೂ ಬೇರೆಯಾಗುತ್ತದೆ. ಆದರೆ ವಾಸ್ತವವಾಗಿ ವ್ಯಕ್ತಿಯು ಬರೀ ಸ್ವಾಯತ್ತವೆನ್ನಬಹುದಾದ ಸಂಗತಿಯು ಅಲ್ಲ. ವ್ಯಕ್ತಿಯು ಅರೆ ಸಾಮಾಜಿಕನೂ ಆಗಿರುತ್ತಾನೆ. ಸಾಮಾಜಿಕ ಗುಂಪು ಮತ್ತು ವ್ತಕ್ತಿಗೆ ಸಂಬಂಧವು ಇರುತ್ತದೆ. ಮತ್ತು ವ್ಯಕ್ತಿಯು ಗುಂಪಿನಿಂದ ಅನೇಕವನ್ನು ಪಡೆಯುತ್ತಾನೆ. ಅಂದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಬೇರೆಯಾಗುತ್ತದೆ. ವ್ಯಕ್ತಿಯನ್ನು ಆಧುನಿಕತೆಯು ಯಾವ ರೀತಿಯಲ್ಲಿ ನೋಡುತ್ತದೆ ಮತ್ತು ಅದನ್ನು ಹೇಗೆ ಸ್ವೀಕರಿಸುತ್ತದೆ ಎನ್ನುವುದು ಒಂದು ಬಗೆಯ ನಿಲುವು ಆಗಿದ್ದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಮತ್ತೊಂದು ರೀತಿಯಲ್ಲಿ ಇರುತ್ತದೆ. ಅಂದರೆ ವ್ಯಕ್ತಿಯು ಅವನ ಚರಿತ್ರೆಯನ್ನು ಮತ್ತು ಅವನ ಅಗತ್ಯವನ್ನು ತನಗೆ ಬೇಕಾದ ಕ್ರಮದಲ್ಲಿ ಕಟ್ಟುತ್ತಾನೆ. ಅಸಿತ್ವವನ್ನು ಉಳಿಸಿಕೊಳ್ಳಲು ಹೋರಾಟವನ್ನು ಮಾಡುತ್ತಾನೆ.

ಚರಿತ್ರೆಯು ಬದಲಾಗುತ್ತಾ ಹೋದರೆ ವ್ಯಕ್ತಿಯ ಜೀವನ ಮತ್ತು ಅವನ ಸ್ವಭಾವಗಳೂ ಬದಲಾಗುತ್ತವೆ. ಅಂದರೆ ವ್ಯಕ್ತಿ ಮತ್ತು ಅವನ ಅಗತ್ಯಗಳು ಅನೇಕವನ್ನು ಹೇಳುತ್ತವೆ. ಅವನು ಅದನ್ನು ಸಾಧಿಸಲು ಯತ್ನವನ್ನು ಮಾಡುತ್ತಾನೆ. ಅವನಿಗೆ ಅದು ಹೆಚ್ಚಿನ ಮಹತ್ವದ್ದೂ ಆಗುತ್ತದೆ. ಆದರೆ ವ್ಯಕ್ತಿಯನ್ನು ಸಮಾಜ ಮತ್ತು

ಅವನ ವರ್ಗವು ನಿಯಂತ್ರಿಸುತ್ತದೆ. ಅವನ ಜೀವನವನ್ನು ಅದು ನಿರೂಪಿಸುತ್ತದೆ. ವರ್ಗ ಮತ್ತು ವಿಶ್ವಾತ್ಮಕತೆಗೆ ಕೆಲವು ರೀತಿಯ ಸಂಬಂಧವೂ ಇದೆ. ಅದನ್ನು ಹೀಗೆ ಹೇಳಬಹುದು. ವ್ಯಕ್ತಿಯನ್ನು ನಾವು ನೀತಿ ಮತ್ತು ಅವನ ನಡವಳಿಕೆಯನ್ನು ಆಧರಿಸಿಕೊಂಡು ವ್ಯಾಖ್ಯಾನಿಸುತ್ತೇವೆ. ವ್ಯಕ್ತಿ ಮತ್ತು ಅವನ ಸಾಮಾಜಿಕ ವಾಸ್ತವವು ಈ ದೃಷ್ಟಿಯಿಂದ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ರೊಮಾಂಟಿಕ್ ಯುಗವು ವ್ಯಕ್ತಿಯನ್ನು ನೋಡಿದ ಮತ್ತು ಅದನ್ನು ಚಿತ್ರಿಸಿದ ಕ್ರಮವು ಬೇರೆಯಾಗಿದೆ. ವ್ಯಕ್ತಿಯನ್ನು ಅದು ಉದಾರವಾಗಿಯೂ ನೋಡಿತು. ಅದರಲ್ಲಿ ನೈತಿಕತೆಯು ಹೆಚ್ಚು ಮುಖ್ಯ. ದೇವರನ್ನು ರೊಮಾಂಟಿಕ್ ಯುಗವು ಸೃಷ್ಟಿಕರ್ತ ಮತ್ತು ಜೀವನವನ್ನು ಕೈಹಿಡಿದು ನಡೆಸುವವನು ಎಂದು ಭಾವಿಸುತ್ತದೆ. ಅದರೆ ಇಲ್ಲಿ ಮತ್ತೆ ಅದು ಬಾಹ್ಯ ಮತ್ತು ಅಂತರಂಗ ಶುದ್ಧಿಯನ್ನು ಮಾತ್ರವೇ ಹೇಳುತ್ತದೆ. ಜನಾಂಗ ಮತ್ತು ವಿಶ್ವಾತ್ಮಕತೆಯನ್ನು ಅದು ಹೇಳುವ ಕ್ರಮಗಳು ಬೇರೆಯಾಗಿವೆ. ಅಂದರೆ ವ್ಯಕ್ತಿಯನ್ನು ರೊಮಾಂಟಿಕ್ ಯುಗವು ಗ್ರಹಿಸುವ ಕ್ರಮವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಜನಾಂಗ ಮತ್ತು ಲೋಕವನ್ನು ಅದು ಗ್ರಹಿಸುವುದು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆಧುನಿಕತೆಗಿಂತ ಭಿನ್ನವಾದ ಒಂದು ಕ್ರಮವು ಇದರಲ್ಲಿದೆ. ಅದು ಲೋಕವನ್ನು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾಗಿಯೂ ಹೌದು. ಆದರೆ ವ್ಯಕ್ತಿ ಮತ್ತು ಅವನ ಜೀವನವನ್ನು ನಾವು ನೋಡುವುದು ಅವನ ಸ್ಥಾನಮಾನದ ಹಿನ್ನೆಲೆಯಿಂದ ಮಾತ್ರವೇ. ಅವನ ಚರಿತ್ರೆ ಮತ್ತು ಅವನ ಪರಿಸರವನ್ನು ನಾವು ಅಷ್ಟಾಗಿ ಗಮನಿಸಲು ಹೋಗುವುದೇ ಇಲ್ಲ. ಮರಳಿ ಮಣ್ಣಿಗೆ ಕಾದಂಬರಿ ಇದಕ್ಕೆ ಉದಹಾರಣೆ

ವಾಸ್ತವವಾಗಿ ವ್ಯಕ್ತಿ ಮತ್ತು ಅವನ ಸೌಂದರ್ಯದ ಅಭಿರುಚಿಯನ್ನು ಮಾತ್ರವೇ ರೊಮಾಂಟಿಕರು ಎತ್ತಿ ಹಿಡಿಯುತ್ತಾರೆ. ಅವರಿಗೆ ಅದು ಬಹಳ ಮುಖ್ಯವಾದ ಸಂಗತಿಯ ಹಾಗೆ ಕಾಣುತ್ತದೆ. ಹಾಗೆ ನೋಡುವುದಿದ್ದರೆ ನವೋದಯವನ್ನು ವ್ಯಕ್ತಿ ಮತ್ತು ಅವನ ಸೌಂದರ್ಯವನ್ನು ಕುರಿತು ಹೇಳುವುದು ಭಿನ್ನವಾದ ರೀತಿಯಲ್ಲಿಯೇ. ಅದರಲ್ಲಿ ವ್ಯತ್ಯಾಸವಿದೆ. ಅಂದರೆ ನವೋದಯಕ್ಕೆ ಅತ್ಯಂತ ಮುಖ್ಯವಾದ ಸಂಗತಿಯು ಇರುವುದು ವ್ಯಕ್ತಿ ಮತ್ತು ಅವನ ಸೌಂದರ್ಯದ ಪರಿಕಲ್ಪನೆಯು ಮಾತ್ರವೇ. ಸಾಮಾಜಿಕ ರಚನೆಯನ್ನು ಅವರು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾದ ಕ್ರಮದಲ್ಲಿಯೂ ಹೌದು. ಕಲಾವಿದರು ಸಮಾಜ ಮತ್ತು ಅದರ ಸ್ವರೂಪವನ್ನು ಹೇಗೆ ನೋಡುತ್ತಾರೆ ಎನ್ನುವುದು ಮೂಲಭೂತವಾಗಿ ಮಹತ್ವದ ಅಂಶವೇ ಆಗುತ್ತದೆ. ಎಡ್ಮಂಡ್ ಬರ್ಕೆಯು ಅದನ್ನು ಸಂವಹನದ ತಂತ್ರಗಾರಿಕೆಗಳು ಎಂದು ಕರೆಯುತ್ತಾನೆ. ಗೋಲ್ಡ್ ಮನ್ ಮಾನವೀಯತೆ ಮತ್ತು ಅದರ ಬದ್ಧತೆಯ ಹಿನ್ನೆಲೆಯಲ್ಲಿ

ವಿವರಿಸುತ್ತಾನೆ. ಜನಾಂಗ ಮತ್ತು ಅದರ ಸಹಯೋಗದಲ್ಲಿ ಒಂದು ಖಚಿತತೆಯು ಇರುತ್ತದೆ. ಮತ್ತು ಅದರಲ್ಲಿ ಸಹಯೋಗವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ಅವನು ಹೇಳುತ್ತಾನೆ ಆದರೆ ವ್ಯಕ್ತಿವಾದಕ್ಕೆ ಒಂದು ಚರಿತ್ರೆಯು ಇದೆ ಎನ್ನುವುದನ್ನು ಅವನು ಪ್ರತಿಪಾದಿಸುತ್ತಾನೆ. ರೊಮಾಂಟಿಕರಲ್ಲಿ ಅತ್ಯಂತ ವಿಸ್ತಾರವಾದ ಒಂದು ನಂಬಿಕೆ ಮತ್ತು ವಿಶ್ವಾತ್ಮಕತೆಯು ಇರುತ್ತದೆ. ಸಮಗ್ರತೆ ಮತ್ತು ಅದರ ಕುರಿತಾದ ಕೆಲವು ಮೌಲ್ಯಗಳು ಅದರಲ್ಲಿ ಇರುತ್ತದೆ. ಸಾಮೂಹಿಕವಾದ ಒಂದು ಪ್ರಜ್ಞೆಯನ್ನು ಅದು ಹೇಳುತ್ತಾ ಬಂದಿದೆ. ಈ ಅರ್ಥದಲ್ಲಿ ಅದರ ಅರ್ಥವೂ ಬೇರೆಯಾಗುತ್ತದೆ. ಸಾಹಿತ್ಯವು ಸಮಾಜ ಮತ್ತು ಸಾಮಾಜಿಕ ಸಂಗತಿಗಳನ್ನು ಅತ್ಯಂತ ವಿಶಿಷ್ಟವಾಗಿ ಹೇಳುತ್ತದೆ ಎನ್ನುವುದನ್ನು ರೊಮಾಂಟಿಕ್ ಪಂಥವು ಒಪ್ಪುತ್ತದೆ. ನವ್ಯವು ವ್ಯಕ್ತಿ ಮತ್ತು ಯಾಂತ್ರಿಕತೆಯನ್ನು ನೋಡುವುದು ಭಿನ್ನವಾಗಿ. ಅದಕ್ಕೇ ಅದರಲ್ಲಿ ಜೀವನ ಮತ್ತು ಅದರ ದೃಷ್ಟಿಕೋನವು ಬೇರೆಯಾಗುತ್ತದೆ. ವ್ಯಕ್ತಿಯನ್ನು ಅದು ಹೇಳುವುದು ಭಿನ್ನವಾದ ನೆಲೆಯಲ್ಲಿಯೂ ಹೌದು. ಅದರಲ್ಲಿ ಬರುವ ನಿರಾಶೆಯು ಕೂಡಾ ಒಂದು ಸನ್ನಿವೇಶವನ್ನು ಹೇಳುತ್ತದೆ. ನವ್ಯವು ದೇವರಿಲ್ಲದ ಜಗತ್ತನ್ನು ಹೇಳುತ್ತದೆ. ವ್ಯಕ್ತಿ ಮತ್ತು ಅವನ ಚಿಂತನೆಗಳನ್ನು ಅದು ಹೆಚ್ಚು ಪ್ರಗತಿಪರವಾದ್ದು ಎಂದು ಹೇಳುತ್ತದೆ. ತಂತ್ರ ಮತ್ತು ಅದರ ಪ್ರಯೋಗವು ಅದರಲ್ಲಿ ಹೆಚ್ಚು ಪ್ರಭಾವಶಾಲಿಯೂ ಆಯಿತು. ತಾಂತ್ರಿಕತೆ ಮತ್ತು ಅದರ ಪರಿಣಾಮವನ್ನು ನಾವು ನವ್ಯದಲ್ಲಿ ಕಾಣುತ್ತೇವೆ. ತಂತ್ರಜ್ಞಾನ ಮತ್ತು ಅದರ ಕೌಶಲವು ಅವರಿಗೆ ಹೆಚ್ಚು ಮುಖ್ಯವಾಯಿತು. ತಾಂತ್ರಿಕತೆ ಮತ್ತು ಅದರ ಸ್ವರೂಪವು ಅತ್ಯಂತ ಹೆಚ್ಚು ಪ್ರಭಾವವನ್ನು ಬೀರಿತು. ತಾಂತ್ರಿಕತೆಯು ಅತ್ಯಂತ ಮುಖ್ಯವೆಂದು ಆ ಲೇಖಕರಿಗೆ ಅನಿಸಿತು. ವ್ಯಕ್ತಿತ್ವ ಮತ್ತು ಪರಕೀಯತೆಯನ್ನು ಅವರು ನೋಡಿದ ಮತ್ತು ಗ್ರಹಿಸಿದ ಕ್ರಮಗಳು ಬೇರೆಯಾಗಿವೆ. ನವ್ಯದಲ್ಲಿ ಪರಕೀಯತೆಯು ಅತ್ಯಂತ ಸಾಧ್ಯತೆಯನ್ನು ತೆರೆಯಿತು. ವ್ಯಕ್ತಿ ಮತ್ತು ಅವನ ಸ್ವಂತಿಕೆಯೇ ಅದರಲ್ಲಿ ಬಹಳ ಮುಖ್ಯ. ಪ್ರತ್ಯೇಕತೆಯು ಮಾತ್ರವೇ ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯವೆಂದು ಅದು ಹೇಳಿತು. ಬೇರೆ ಯಾವುದೇ ರೀತಿಯ ಅತಿಮಾನುಷವಾದ ಒಂದು ಸುಂದರ ಜಗತ್ತು ಇದೆ ಎನ್ನುವುದನ್ನು ನವ್ಯವು ಒಪ್ಪುವುದೂ ಇಲ್ಲ. ಅದು ಯಾವುದು ನಿಜವಾದ ಘಟನೆ ಅಥವಾ ವಸ್ತು ಎನ್ನುವುದು ಇದೆಯೋ ಅದನ್ನು ಮಾತ್ರವೇ ಸ್ವೀಕರಿಸುತ್ತದೆ. ಘಟನೆ ಮತ್ತು ಅದರ ಮೌಲ್ಯಮಾಪನವು ಅದಕ್ಕೆ ಮುಖ್ಯ. ಆದರೆ ಕನ್ನಡದಲ್ಲಿ ದಲಿತ ಸಾಹಿತ್ಯವು ಬಂದಾಗ ಅದರ ಚಹರೆಗಳು ಬೇರೆಯಾದವು.

ದಲಿತ ಮತ್ತು ಅದರ ನಂಬಿಕೆಗಳು ಭಿನ್ನವಾದವು. ಅದರ ತಾತ್ವಿಕತೆಯೇ ಈ ದೃಷ್ಟಿಯಿಂದ ಭಿನ್ನವಾಗಿದೆ. ವಾಸ್ತವವಾಗಿ ವ್ಯಕ್ತಿವಾದ ಮತ್ತು ಅದರ ನಂಬಿಕೆಗಳು

ಭಿನ್ನವಾಗುತ್ತದೆ. ಆಧುನಿಕ ಬಂಡವಾಳವಾದದಲ್ಲಿ ವ್ಯಕ್ತಿವಾದವು ಹೆಚ್ಚಿನ ಅವಕಾಶವನ್ನು ಪಡೆಯುತ್ತದೆ. ಆದರೆ ಅದು ಮಾತ್ರವೇ ಮುಖ್ಯವಾಗಬೇಕು ಎಂದು ಅರ್ಥವಲ್ಲ. ಅನೇಕ ಚರಿತ್ರೆಕಾರರು ಇದನ್ನು ನೋಡುವುದು ಒಂದು ವಿವರಣೆಯಾಗಿ ಮಾತ್ರವೇ. ಆದರೆ ವಿವರಣೆಯು ಮಾತ್ರವೇ ಸಾಕಾಗುವುದೇ ಇಲ್ಲ. ಅದರಲ್ಲಿ ಬರೀ ಘಟನೆ ಮತ್ತು ಅದರ ವಿವರಣೆಯು ಸಾಕಾಗುತ್ತದೆ ಎಂದು ಭಾವಿಸಬೇಕಾಗಿಯೂ ಇಲ್ಲ.

ಚೋಮನದುಡಿ ಕಾದಂಬರಿಯನ್ನು ನಾವು ಈ ದೃಷ್ಟಿಯಿಂದ ಚಾರಿತ್ರಿಕ ಸನ್ನಿವೇಶದ ಹಿನ್ನೆಲೆಯಿಂದ ಗ್ರಹಿಸುವುದು ಸೂಕ್ತ. ಇದು ಕಾದಂಬರಿಯು ಅತ್ಯಂತ ಮಹತ್ವದ ಚರ್ಚೆಯನ್ನು ಎತ್ತುತ್ತದೆ. ದಲಿತ ಎನ್ನುವುದು ಆಗ ಹೇಗೆ ವ್ಯಾಖ್ಯಾನಕ್ಕೆ ಗುರಿಯಾಯಿತು ಎಂಬುದನ್ನು ಕಾದಂಬರಿಯು ಹೇಳುತ್ತದೆ. ಅದು ತಾರತಮ್ಯದ ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತದೆ. ಮೊದಲು ನಾವು ಅರ್ಥ ಮಾಡಿಕೊಳ್ಳಬೇಕಾದ್ದು ಚೋಮನದುಡಿ ಕಾದಂಬರಿಯು ಒಂದು ವಾಸ್ತವವಾದಿ ಕಾದಂಬರಿ. ವಾಸ್ತವವಾದ ತನ್ನದೇ ಕೆಲವು ಮಿತಿಗಳನ್ನು ಹೊಂದಿರುತ್ತದೆ.

ಚರಿತ್ರೆ ಮತ್ತು ಅದರ ಹಿಂದೆ ಇರುವ ತತ್ವಜ್ಞಾನವನ್ನು ನೋಡಿದರೆ ಈ ಸಂಗತಿಗಳು ನಮಗೆ ತಿಳಿಯುತ್ತದೆ. ಚರಿತ್ರೆ ಮತ್ತು ಅದರ ಹಿಂದೆ ಇರುವ ತತ್ವಜ್ಞಾನವನ್ನು ನಾವು ಅರ್ಥ ಮಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮತ್ತು ಅದರ ಸ್ವರೂಪವೇ ನಮಗೆ ಮುಂದೆ ಹೋಗಲು ದಾರಿಯನ್ನು ಹೇಳುತ್ತವೆ. ಅದರಲ್ಲಿ ನಿಸರ್ಗ ಮತ್ತು ಮನುಷ್ಯರ ನಡುವೆ ಇರುವ ಸಂಬಂಧ ಮತ್ತು ಅದರ ಸಂಘರ್ಷಗಳ ವಿವರಣೆಗಳೂ ನಮಗೆ ದೊರೆಯುತ್ತವೆ. ಆಲೋಚನೆ ಮತ್ತು ಅದರ ಹಿಂದೆ ಇರುವ ತತ್ವವು ಮೂಲಭೂತವಾಗಿ ವಿಶಿಷ್ಟವೂ ಆಗಿರುತ್ತದೆ. ಅಂದರೆ ನಿಸರ್ಗ ಮತ್ತು ವ್ಯಕ್ತಿಯ ನಡುವಣ ಸಂಬಂಧವನ್ನು ನಾವು ಇತ್ಯಾತ್ಮಕವಾಗಿಯೂ ನೋಡಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಜ್ಞಾನವು ಬೇರೆ ಬೇರೆ ವಿಧದಲ್ಲಿ ಬೆಳೆದು ಬಂದಿದೆ. ಅದನ್ನು ನಾವು ನೋಡುವ ಮತ್ತು ಗ್ರಹಿಸುವ ಕ್ರಮವೂ ಬೇರೆಯಾಗಬೇಕಾಗುತ್ತದೆ. ಪ್ರಜ್ಞೆ ಮತ್ತು ಅದರ ರಚನೆಯು ಈ ಕಾರಣದಿಂದ ಬೇರೆ ಬೇರೆ ರೀತಿಯಲ್ಲಿ ಆಗಿರುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನವು ಈವತ್ತು ಅತ್ಯಂತ ಮಹತ್ವದ ಜಾಗವನ್ನು ಪಡೆದುಕೊಂಡಿದೆ. ಮತ್ತು ಅದರ ಪರಿಣಾಮವಾಗಿ ಮನುಷ್ಯ ಮತ್ತು ಅವನ ಜೀವನ ಕ್ರಮವು ಬದಲಾಗಿದೆ. ಅದರ ಅನುಭವವು ನಮಗೆ ನೇರವಾಗಿಯೂ ಆಗಿದೆ. ಮನುಷ್ಯ ಮತ್ತು ಅವನ ತಿಳುವಳಿಕೆಗಳಲ್ಲಿ ಕೇವಲ ಪ್ರಮೇಯ ಮಾತ್ರವೇ ಇರುವುದಿಲ್ಲ..ಯಾವುದನ್ನು ನಾವು ತಿಳುವಳಿಕೆ ಎಂದು ಹೇಳುತ್ತೇವೆಯೋ ಅದರಲ್ಲಿ

ಕೇವಲ ಕೆಲವು ನಿಯಮವು ಮಾತ್ರವೇ ಇರುತ್ತದೆ ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಅದರಲ್ಲಿ ಅನೇಕ ಸಂಗತಿಗಳು ಸೇರಿಕೊಂಡು ಇರುತ್ತದೆ. ಮತ್ತು ಅದರಲ್ಲಿ ವೈಜ್ಞಾನಿಕತೆ, ಉತ್ಪಾದನೆಗಳು, ಜೀವನ ಕ್ರಮಗಳು, ಸಮಾಜ, ಚರಿತ್ರೆಗಳು ಸೇರಿಕೊಂಡಿರುತ್ತವೆ. ಮನುಷ್ಯ ಮತ್ತು ಅವನ ಜ್ಞಾನವನ್ನು ನಾವು ಅಷ್ಟು ಸುಲಭವಾಗಿ ವರ್ಗೀಕರಿಸಲು ಬರುವುದೂ ಇಲ್ಲ. ರಚನೆಯೂ ಕೂಡಾ ಇದೇ ರೀತಿಯಲ್ಲಿ ಬರುತ್ತದೆ. ಮತ್ತು ಅದನ್ನು ನೋಡುವಾಗ ಅದರ ಸಾಧ್ಯತೆಯನ್ನು ಬೇರೆ ಮಾಡಿ ನೋಡಬೇಕಾಗುತ್ತದೆ. ಅದರಲ್ಲಿ ಅನುಭವವು ಇದೆ. ಆಲೋಚನೆಗಳು ಇರುತ್ತವೆ. ಮತ್ತು ಅದನ್ನು ನೋಡಿದರೆ ಅದರ ಅರ್ಥವನ್ನು ನಮ್ಮ ಗುಣ ಮತ್ತು ನಡತೆಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ವಾಸ್ತವವಾಗಿ ಇದನ್ನು ನಾವು ಈವತ್ತು ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ಅದನ್ನು ನೋಡಬೇಕಾಗುತ್ತದೆ. ನಗರದಿಂದ ಹಳ್ಳಿಗೆ ಬರುವ (ಶಂಕರ ಸ್ವಪ್ನದ ಹೊಳೆ) ಹಳ್ಳಿಯಿಂದ ನಗರಕ್ಕೆ ಯಶವಂತರಾಯ (ಅಳಿದ ಮೇಲೆ) ತಮ್ಮದೇ ಆದ ಅನನ್ಯತೆಯನ್ನು ಹೊಂದಿದ್ದಾರೆ.

ಲೇಖಕನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಸ್ವತ್ತು ಮಾತ್ರವೇ ಅಲ್ಲ ಅದರಲ್ಲಿ ಸಮಾಜದ ಅಂಶಗಳೂ ಸೇರುತ್ತವೆ. ಆದರೆ ಆಧುನಿಕತೆಯು ವ್ಯಕ್ತಿಯನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ಕ್ರಮದಲ್ಲಿ. ಮತ್ತು ವ್ಯಕ್ತಿಯನ್ನು ಹೇಳುವ ಕ್ರಮವು ಬೇರೆಯಾಗಿದೆ. ಅವನನ್ನು ಅತ್ಯಂತ ಮಹತ್ವದ ಭಾಗವೆಂದು ಹೇಳುವುದು ಮುಖ್ಯವಾಗುತ್ತದೆ. ಅಂದರೆ ವ್ಯಕ್ತಿಯನ್ನು ಒಂದು ಘಟಕವೆಂದು ಹೇಳುವುದರಿಂದ ಅದನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಲೇಖಕ ಮತ್ತು ಅವನ ಗ್ರಹಿಕೆಯು ಯಾವ ರೂಪದಲ್ಲಿ ಇರುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಬಹಳ ಮುಖ್ಯವಾಗುತ್ತದೆ. ವ್ಯಕ್ತಿಯನ್ನು ಬರೀ ಒಂದು ನೆಲೆಯಲ್ಲಿ ಮಾತ್ರವೇ ನೋಡುವುದು ಮತ್ತು ಅದೇ ರೀತಿಯಲ್ಲಿ ಗ್ರಹಿಸುವುದು ಸರಿಯಾದ ಕ್ರಮವು ಅಲ್ಲ. ಅದನ್ನು ಮತ್ತೆ ಭಿನ್ನವಾಗಿಯೂ ನೋಡಬೇಕಾಗುತ್ತದೆ. ಲೇಖಕ ಮತ್ತು ಅವನ ಜೀವನವೂ ಹೇಗೆ ಒಂದು ಕೃತಿಯಲ್ಲಿ ಪಾತ್ರವನ್ನು ವಹಿಸುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎಂದು ನೋಡಬೇಕಾಗುತ್ತದೆ. ಇಲ್ಲಿ ಲೇಖಕ ಮತ್ತು ಅವನ ಜೀವನ ಹಾಗೂ ಅವನ ಯೋಚನೆಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದರಲ್ಲಿ ಎರಡು ಮಾತು ಇಲ್ಲ. ಅದು ಜೀವನ ಮತ್ತು ಅವನ ಅನುಭವ ಮತ್ತು ಯೋಚನೆಯನ್ನು ಹೇಳುತ್ತದೆ. ಅದರಲ್ಲಿ ಅವನ ವ್ಯಕ್ತಿತ್ವವನ್ನು ಭಿನ್ನವಾಗಿಯೂ

ಹೇಳುತ್ತದೆ. ಬರಹವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಕ್ರಿಯೆಯು ಆಗಿದೆ. ಯಾಕೆ ಬರೆಯುಲು ನಮಗೆ ಶಕ್ತಿಯು ಇರುತ್ತದೆ ಅಥವಾ ಯಾಕೆ ನಮಗೆ ಓದುವ ಮತ್ತು ಕಲ್ಪಿಸುವ ಶಕ್ತಿಯು ಇರುತ್ತದೆ ಎಂದು ಯೋಚಿಸಬೇಕಾಗುತ್ತದೆ. ಬರಹ ಮತ್ತು ಅದರ ಸನ್ನಿವೇಶವು ಬರೀ ಆಕಸ್ಮಿಕವಾದ ಚಟುವಟಿಕೆಯು ಅಲ್ಲ. ಅದರಲ್ಲಿ ಭಿನ್ನತೆ ಇದೆ. ಲೇಖಕ ಮತ್ತು ಅವನ ಟಿಪ್ಪಣಿಯೂ ಒಂದು ಹಂತದಲ್ಲಿ ಸಹಾಯವನ್ನು ಮಾಡುವುದು ಸಾಧ್ಯ. ಪದಗಳು, ಅದರ ಜೋಡಣೆ, ಅದರ ಅಕ್ಷರದ ಸ್ವರೂಪ, ಅದರ ವಿಶಿಷ್ಟವಾದ ಅರ್ಥ, ಸಂಯೋಜನೆ ವಿಶಿಷ್ಟವಾದ ಪರಿಣಾಮವನ್ನು ಬೀರುತ್ತದೆ ಎಂದು ಫಾಸ್ಕಲ್ ಹೇಳುತ್ತಾನೆ. ಪದಗಳು ಕೂಡಾ ಸಂಕಥನವನ್ನು ಹೇಳುತ್ತದೆ. ಮತ್ತು ಅದರಲ್ಲಿ ವಿವಿಧ ರೀತಿಯ ಸಂಬಂಧ ಮತ್ತು ಅದರ ಚಹರೆಗಳೂ ಇರುತ್ತವೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ಸ್ವಭಾವವು ಅವನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ನಿರ್ದಿಷ್ಟವಾದ ಸನ್ನಿವೇಶ ಮತ್ತು ಸಂದರ್ಭಗಳು ವ್ಯಕ್ತಿಯ ನಡೆಯನ್ನು ನಿರ್ಧರಿಸುತ್ತದೆ. ಅದು ಕೆಲವು ಬಗೆಯ ಚಟುವಟಿಕೆಯನ್ನು ರೂಪಿಸುತ್ತದೆ. ದುರಂತ ನಾಟಕಗಳಲ್ಲಿ ವ್ಯಕ್ತಿ ಮತ್ತು ಅವನ ದುರಂತವು ಮಾತ್ರವೇ ಮುಖ್ಯವಾಗುತ್ತದೆ. ಮತ್ತು ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತದೆ. ವ್ಯಕ್ತಿಯು ದುರಂತವು ಅತ್ಯಂತ ಮುಖ್ಯವಾಗುತ್ತದೆ. ವ್ಯಕ್ತಿಯು ಅದರಲ್ಲಿ ಮುಖ್ಯ. ದುರಂತ ಎನ್ನುವುದು ಮೂಲಭೂತವಾಗಿ ಕೆಲವು ಪ್ರಮೇಯಗಳನ್ನು ಇಟ್ಟು ಕೊಂಡಿವೆ. ಮತ್ತು ಅದರಲ್ಲಿ ಸ್ವಲ್ಪ ಮಟ್ಟಿಗೆ ಆಧ್ಯಾತ್ಮಿಕತೆಯು ಸೇರಿದೆ. ಅದನ್ನು ಈ ದೃಷ್ಟಿಯಿಂದ ಬೇರೆಯಾಗಿಯೂ ನೋಡಬೇಕಾಗುತ್ತದೆ. ಅದು ವ್ಯಕ್ತಿ ಮತ್ತು ಸ್ವಭಾವವನ್ನು ಮಾತ್ರವೇ ಕೇಂದ್ರ ಮಾಡಿಕೊಂಡಿದೆ. ಮಧ್ಯಯಗದ ಅನೇಕ ನಂಬಿಕೆಗಳನ್ನು ಆಧುನಿಕ ಯಗವು ಬದಲು ಮಾಡಿದೆ. ಮತ್ತು ಅದರ ಸ್ವರೂಪಗಳಲ್ಲಿ ವ್ಯತ್ಯಾಸವೂ ಇದೆ. ಆಧುನಿಕ ಯುಗದ ಮನುಷ್ಯನು ಈಗ ತನ್ನ ವ್ಯಾಖ್ಯೆಗಳನ್ನು ಬದಲು ಮಾಡಿದ್ದಾನೆ. ಅವನ ಚಹರೆಗಳು ಬದಲಾಗಿವೆ. ಈ ದೃಷ್ಟಿಯಿಂದ ಆಧುನಿಕರದ್ದು ಬೇರೆ ದೃಷ್ಟಿಕೋನ, ಅದರಲ್ಲಿಯೂ ರೊಮಾಂಟಿಕರು ಜೀವನ ಮತ್ತು ಅದರ ಆದರ್ಶಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗಿದೆ. ಅದರಲ್ಲಿ ತಾರತಮ್ಯಗಳೂ ಇವೆ. ವ್ಯಕ್ತಿ ಮತ್ತು ಅವನ ಆದರ್ಶಗಳು ಬದಲಾದಾಗ ಅದರ ಸ್ವರೂಪದಲ್ಲಿ ವ್ಯತ್ಯಾಸವೂ ಆಗುತ್ತದೆ. ವಾಸ್ತವವವಾಗಿ ಲೋಕವನ್ನು ರೊಮಾಂಟಿಕರು ಲೋಕವನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ರೀತಿಯಿಂದಲೂ ಹೌದು. ವ್ಯಕ್ತಿಯನ್ನು ನೋಡುವುದು ಮತ್ತು ಅವನನ್ನು ಒಂದು ಕೇಂದ್ರಕ್ಕೆ ತರುವುದು ಇಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ರೀತಿಯು ಅದರಲ್ಲಿ ಬದಲಾಗುತ್ತದೆ.

ವ್ಯಕ್ತಿಯನ್ನು ಉದಾರತೆಯಿಂದ ನೋಡಲಾಗುತ್ತದೆ. ಮತ್ತು ಅವನ ಆದರ್ಶಗಳನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತದೆ. ಆದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯನ್ನು ನಾವು ಯಾವ ರೀತಿಯಲ್ಲಿ ನೋಡುತ್ತೇವೆ ಮತ್ತು ಗ್ರಹಿಸುತ್ತೇವೆ ಎನ್ನುವುದು ಬಹಳ ಮುಖ್ಯ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಅದು ವ್ಯಕ್ತಿಯನ್ನು ವ್ಯಾಖ್ಯಾನಿಸುವ ಕ್ರಮವನ್ನು ಅವಲಂಬಿಸಿದೆ. ಅದರಲ್ಲಿ ಬಹಳ ಮುಖ್ಯವಾದ್ದು ವ್ಯಕ್ತಿಯನ್ನು ಗುರುತಿಸುವ ಕ್ರಮ. ವ್ಯಕ್ತಿಯನ್ನು ಬರೀ ಒಂದು ಘಟಕವೆಂದು ಗುರುತಿಸಿದರೆ ಅದರ ಸಾಧ್ಯತೆಯು ಬೇರೆಯಾಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಆಧುನಿಕತೆಯು ವ್ಯಕ್ತಿಯನ್ನು ಬರೀ ಒಂದು ಧರ್ಮದ ಪಾಲನೆಯನ್ನು ಮಾಡುವವನು ಎಂದು ಹೇಳುವುದೇ ಇಲ್ಲ. ಅದರಲ್ಲಿ ಅದರ ವ್ಯಾಖ್ಯೆಯು ಬೇರೆಯಾಗುತ್ತದೆ. ರೊಮಾಂಟಿಕರ ಆದರ್ಶವು ವ್ಯಕ್ತಿಯನ್ನು ಗ್ರಹಿಸುವ ಕ್ರಮವು ಬೇರೆಯಾಗಿದೆ. ಅದರಲ್ಲಿ ಆದ ಅರ್ಥವೂ ಭಿನ್ನವಾಗುತ್ತದೆ. ವ್ಯಕ್ತಿಯನ್ನು ಅತ್ಯಂತ ಸಾಚಾ ಎಂದು ಅದು ಹೇಳುತ್ತದೆ. ಅದರ ಅರ್ಥವೂ ಬೇರೆಯಾಗುತ್ತದೆ. ಅದರಲ್ಲಿ ವ್ಯಕ್ತಿಯನ್ನು ಗ್ರಹಿಸುವ ಕ್ರಮದಲ್ಲಿ ಆದರ್ಶವು ಮಾತ್ರವೇ ಬಹಳ ಮುಖ್ಯ.ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಅದನ್ನು ಗ್ರಹಿಸುವ ಕ್ರಮವೂ ಭಿನ್ನವಾಗುವುದು ಅದರ ನಿರೂಪಣೆಯಲ್ಲಿ ಕಾಣಿಸುತ್ತದೆ. ವ್ಯಕ್ತಿ ಮತ್ತು ಅವನ ಆದರ್ಶವು ಅದರಲ್ಲಿ ಬಹಳ ಮುಖ್ಯವೂ ಆಗಿದೆ. ಮನುಷ್ಯನ ಹೊಸದಾದ ಘನತೆಯು ಎದ್ದು ಕಾಣಿಸುತ್ತದೆ. ವ್ಯಕ್ತಿಯನ್ನು ಅದು ಗ್ರಹಿಸುವಲ್ಲಿ ಇರುವ ಮತ್ತೊಂದು ಅಂಶವೆಂದರೆ ಉದಾರತೆಯೊಂದಿಗೆ ಬರುವ ವಿವರಣೆಗಳು. ಅವನು ಅನ್ಯಾಯವನ್ನು ಮಾಡಬಾರದು ಮತ್ತು ಅದರಲ್ಲಿ ಅವನು ಘನತೆಯನ್ನು ಹೇಳಬೇಕು. ಆದ್ದರಿಂದ ಮೂಲತಃ ನವೋದಯದಲ್ಲಿ ವ್ಯಕ್ತಿ ಮತ್ತು ಅವನ ಆದರ್ಶಗಳಿಗೆ ಅದರದೇ ಆದ ಆಯಾಮವೂ ಇದೆ.

ಆಧುನಿಕ ನಾಗರಿಕ ಜಗತ್ತು ವ್ಯಕ್ತಿಯನ್ನು ಕೇವಲ ವ್ಯಕ್ತಿಯಾಗಿ ಮಾತ್ರವೇ ನೋಡುತ್ತದೆ. ಅಳಿದ ಮೇಲೆ ಕಾದಂಬರಿಯ ಯಶವಂತರಾಯ ಇದಕ್ಕೆ ಉದಾಹರಣೆ. ಮುಂಬೈಯಲ್ಲಿ ಅವನು ಒಬ್ಬಂಟಿ. ಮನಸ್ಸು ಬಂದರೆ ಚಿತ್ರ ಬರೆಯುತ್ತಾನೆ. ಚೆನ್ನಾಗಿರುವ ಚಿತ್ರವನ್ನು ಅವನು ಬರೆಯುತ್ತಾನೆಂದು ನಿರೂಪಕನಿಗೆ ಅನಿಸುವುದಿಲ್ಲ. ಯಶವಂತರಾಯ ಸಾಯುವ ಗಳಿಗೆಯಲ್ಲಿ ಅವನಿಗೆ ಅವನ ವರ ಅಂತ ಯಾರೂ ಇರುವುದಿಲ್ಲ. ಹೇಳುವವರು ಕೇಳುವವರು ಇಲ್ಲದ ಸ್ಥಿತಿ. ಆದರೆ ಕಾದಂಬರಿಯು ಅವನು ಸತ್ತ ಮೇಲಿನ ಜೀವನವನ್ನು ಹೇಳುತ್ತದೆ. ಅವನ ಸಾಮಾಜಿಕ, ಕೌಟುಂಬಿಕ ಸಂಬಂಧಗಳು ಅಲ್ಲಿಂದ ಶುರುವಾಗುತ್ತದೆ. ಈ ದೃಷ್ಟಿಯಿಂದ ಮುಖ್ಯವಾದ ಕಾದಂಬರಿಯಿದು.

ಧರ್ಮ ಮತ್ತು ವ್ಯಕ್ತಿಯ ಸಂಬಂಧವೂ ಅದರಲ್ಲಿ ಅತ್ಯಂತ ನಿರ್ಣಾಯಕವೂ ಆಗುತ್ತದೆ. ವ್ಯಕ್ತಿ ಮತ್ತು ಅವನ ವರ್ತನೆಗಳು ಹಾಸ್ಯವಾಗುತ್ತದೆ. ಅವನು ದುರಂತವನ್ನೂ ಅಪ್ಪುತ್ತಾನೆ. ವಾಸ್ತವವಾಗಿ ವ್ಯಕ್ತಿ ಮತ್ತು ಅವನ ಜೀವನ ಕ್ರಮವೇ ಮೂಲಭೂತವಾಗಿ ರೊಮಾಂಟಿಕ್ ಪರಂಪರೆಯಲ್ಲಿ ಬೇರೆ ಬೇರೆ ವ್ಯಾಖ್ಯಾನವನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿಯನ್ನು ಅವನ ಜೀವನ ಕ್ರಮದ ಆದರ್ಶದ ಹಿನ್ನೆಲೆಯಲ್ಲಿಯೂ ಹೇಳಲಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಸಾಹಿತ್ಯ ಮತ್ತು ಅದರ ರೂಪವು ನಿರ್ಧಾರವಾಗುವುದು ಅದರ ಸಾಮಾಜಿಕವಾದ ಅಗತ್ಯದ ಹಿನ್ನೆಲೆಯಲ್ಲಿಯೂ ಹೌದು. ಲುಕಾಕ್ಸ ರೂಪವನ್ನು ಒಂದು ಸಂಕೇತವಾದ ರಚನೆಯೆಂದೂ ಹೇಳುತ್ತಾನೆ. ಅವನ ಪ್ರಕಾರ ಸಾಹಿತ್ಯ ಮತ್ತು ಅದರ ರೂಪವು ಸಮಾಜದ ಅಗತ್ಯವಾಗುತ್ತದೆ. ಅದರಲ್ಲಿ ಅರ್ಥವೂ ಇರುತ್ತದೆ. ಅಂದರೆ ರೊಮಾಂಟಿಕರು ಬಳಸಿಕೊಂಡ ಭಾವಗೀತೆ, ಕಾದಂಬರಿಗಳು, ವಿಮರ್ಶೆಯು ಭಿನ್ನವಾದ ಒಲವನ್ನು ಸೂಚಿಸುತ್ತದೆ. ಒಂದು ಕಾದಂಬರಿಯಲ್ಲಿ ಬಳಕೆಯಾಗುವ ಜನಾಂಗವೂ ಅದರದೇ ಆದ ಅರ್ಥವನ್ನು ಹೇಳುತ್ತದೆ. ಒಂದು ಮಹಾಕಾವ್ಯದಲ್ಲಿಯೂ ಜನಾಂಗವು ಇರುತ್ತದೆ. ಅದರ ಅರ್ಥವೂ ಅದರಲ್ಲಿ ಬೇರೆಯಾಗುತ್ತದೆ. ಕಾದಂಬರಿಯಲ್ಲಿ ವ್ಯಕ್ತಿ ಮತ್ತು ಸಮಾಜವು ಜೊತೆಗೆ ಇರುತ್ತದೆ. ವ್ಯಕ್ತಿ ಮತ್ತು ಅವನ ಜೀವನದ ಕ್ರಮದಲ್ಲಿ ಪಲ್ಲಟವೂ ಬಹಳ ದೊಡ್ಡದೂ ಹೌದು.

ಪುನರುಜ್ಜೀವನ ಮತ್ತು ಅದರ ಅಂತರದ ಬೆಳವಣಿಗೆಗಳು ಅನೇಕ ರೀತಿಯ ಸಾಹಿತ್ಯವನ್ನು ಹುಟ್ಟುಹಾಕಿದೆ. ವ್ಯಕ್ತಿ ಮತ್ತು ಅವನ ಚಹರೆಗಳು ಆಧುನಿಕ ಯುಗದಲ್ಲಿ ವ್ಯತ್ಯಾಸವೂ ಆಗಿದೆ. ವಾಸ್ತವವಾಗಿ ಆಧುನಿಕ ಯಗವು ವ್ಯಕ್ತಿಯನ್ನು ಅವನ ಅನನ್ಯತೆಯ ಹಿನ್ನೆಲೆಯಲ್ಲಿ ಗ್ರಹಿಸುತ್ತದೆ. ಅದರೊಂದಿಗೆ ಆಧುನಿಕ ಯಗವು ಹುಟ್ಟುಹಾಕಿದ ರೊಮ್ಯಾಂಟಿಕ್ ಪರಂಪರೆಯು ಆಧುನಿಕ ಸಮಾಜದ ನಿರ್ದಿಷ್ಟವಾದ ವರ್ಗವನ್ನು ಹೇಳುತ್ತದೆ. ರೊಮ್ಯಾಂಟಿಕ್ ವ್ಯಕ್ತಿಯು ಮಧ್ಯಮ ವರ್ಗದವನು. ಅವನು ನಿರ್ದಿಷ್ಟವಾದ ವರ್ಗವನ್ನು ಸೂಚಿಸುತ್ತಾನೆ. ಅವನದು ನಿರ್ದಿಷ್ಟವಾದ ಮತ್ತು ಅತ್ಯಂತ ಸುರಕ್ಷಿತವಾದ ಅಕ್ಷರಸ್ಥವಾದ ವರ್ಗವಾಗಿದೆ. ಅವನಿಗೆ ಸ್ವಂತ ಎನ್ನುವುದೂ ಅತ್ಯಂತ ಮುಖ್ಯವಾಗಿದೆ. ಜೀವನದ ಪ್ರೀತಿಯು ಇದೆ. ವ್ಯಕ್ತಿಯು ಜೀವನದ ವಿರೋಧಿಯು ಅಲ್ಲ. ಅವನಿಗೆ ಅವನದೇ ಆದ ಸ್ವಂತಿಕೆ ಮತ್ತು ಕನಸುಗಳೂ ಇದೆ. ಹೊಸದಾಗಿ ಶುರುವಾದ ಒಂದು ವರ್ಗವನ್ನು ಅವನು ಪ್ರತಿನಿಧಿಸುತ್ತಾನೆ. ಅಂದರೆ ಆಗ ವಸಾಹತುಕಾಲದ ಕೆಲವು ವರ್ಗವನ್ನು ಆಧುನಿಕ ರೊಮಾಂಟಿಕ್ ಕವಿಗಳು ಸೂಚಿಸುತ್ತಾರೆ. ಅವರು ಆಗಿನ ಶಿಕ್ಷಣದಿಂದ ಅನೇಕವನ್ನು

ಪಡೆದುಕೊಂಡಿದ್ದಾರೆ. ಮತ್ತು ಅವರಿಗೆ ದೇಶ ಮತ್ತು ಅದರ ಅಗತ್ಯವು ಇತ್ತು. ಅವರಿಗೆ ಒಂದು ಕಡೆಯಿಂದ ವಡ್ಸವರ್ತನ ಪ್ರಭಾವವೂ ಇದೆ. ಮತ್ತೊಂದು ಕಡೆಯಿಂದ ಅರವಿಂದರ ಪ್ರಭಾವವೂ ಇದೆ. ಅವರ ಆಯ್ಕೆಗಳು ಕೂಡಾ ಸಂವಾದಿಯಾಗಿದೆ. ಆಲೋಚನೆ ಮತ್ತು ಅದರ ಸ್ವರೂಪದಲ್ಲಿ ಇದನ್ನು ನಾವು ಕಾಣಬೇಕಾಗುತ್ತದೆ. ಅದರಲ್ಲಿ ಹೊಸದಾದ ಕಲ್ಪನೆಯು ಇದೆ. ಅದರಲ್ಲಿ ಅವರದೇ ಆದ ಆಲೋಚನೆಯು ಇದೆ. ಆಲೋಚನೆ ಮತ್ತು ಭಾವನೆಗಳು, ಹಾಗೂ ಉದಾರತೆಗಳು ಸಮನ್ವಯವಾಗುತ್ತದೆ. ಅದರಲ್ಲಿ ವಿಶಿಷ್ಟವಾದ ಮೌಲ್ಯಗಳು ಇವೆ. ಆದರೆ ಕನ್ನಡದ ಅನೇಕ ಕವಿಗಳು ತಮಗೆ ಬೇಕಾದ್ದನ್ನು ಮಾತ್ರವೇ ಬರೆದರು ಎಂದು ಹೇಳುವಂತೆ ಇಲ್ಲ. ಅವರ ಬರಹಗಳಲ್ಲಿ ವ್ಯಕ್ತಿ ಮತ್ತು ಅವನ ಜೀವನದ ದೃಷ್ಟಿಕೋನವು ಒಂದು ಕಾಲದ ಚರಿತ್ರೆಯನ್ನು ಹೇಳುತ್ತವೆ. ಒಂದು ಗುಂಪಿನ ಆವಶ್ಯಕತೆ ಮತ್ತು ಅದರ ಅಗತ್ಯಗಳನ್ನು ಅವರ ಕವಿತೆಗಳು ಹೇಳುತ್ತವೆ. ವ್ಯಕ್ತಿ ಮತ್ತು ವಿಶ್ವದ ಅಗತ್ಯವೇ ಅದರಲ್ಲಿ ಕಾಣಿಸುತ್ತದೆ. ವ್ಯಕ್ತಿ ಮತ್ತು ಅವನ ಅಗತ್ಯಗಳನ್ನು ಅದು ಸೂಚಿಸುತ್ತದೆ. ವ್ಯಕ್ತಿಯು ಹೊಸದಾದ ಜೀವನವನ್ನು ನೋಡುತ್ತಾನೆ ಮತ್ತು ಅದನ್ನು ಅವನು ಹೇಗೆ ಸ್ವೀಕರಿಸುತ್ತಾನೆಯೋ ಅದರ ಅನುಸಾರವಾಗಿಯೂ ಬರೆಯುತ್ತಾನೆ. ಇದು ರೊಮಾಂಟಿಕರ ನಿಲುವುಗಳೂ ಹೌದು. ವೈಯಕ್ತಿಕತೆ ಮತ್ತು ಅದರ ಗ್ರಹಿಕೆಗೆ ಬೇರೆ ಬೇರೆ ಆಯಾಮವೂ ಇದೆ. ವ್ಯಕ್ತಿತ್ವ ಮತ್ತು ಅದರ ಗುರಿಯು ಅದರಲ್ಲಿ ಬೇರೆ ಬೇರೆ ಚಹರೆಗಳನ್ನು ಹೇಳುತ್ತವೆ. ರಚನೆಗಳು ಮತ್ತು ಅದರ ಕುರಿತಾದ ಸಮಾಜ ಜ್ಞಾನವು ಕೂಡಾ ರೊಮಾಂಟಿಕರಲ್ಲಿ ಮುಖ್ಯವಾಗುತ್ತದೆ. ರಚನೆ ಮತ್ತು ಅದರ ಅರ್ಥವೂ ರೊಮಾಂಟಿಕರಲ್ಲಿ ಬೇರೆಯಾಗುತ್ತದೆ. ಜೀವನದ ಅನೇಕ ದೃಷ್ಟಿಕೋನಗಳನ್ನು ಅವುಗಳು ಹೇಳುತ್ತವೆ. ಅಂದರೆ ವ್ಯಕ್ತಿಯು ಸಮಾಜ ಮತ್ತು ಅದರ ಪ್ರಶ್ನೆಯಿಂದ ಹೊರಗಿನವನು ಅಲ್ಲವೆನ್ನುವುದು ನವೋದಯದಲ್ಲಿ ಬಹಳ ಮುಖ್ಯ. ಕವಿಗಳು ಮತ್ತು ಅವರ ಜೀವನದ ವಿಧಾನಕ್ಕೂ ಅವರು ಬರೆದ ಕವಿತೆಗಳಿಗೂ ಸಂಬಂಧವಿದೆ. ಅದರಲ್ಲಿ ವ್ಯಕ್ತಿ ಮತ್ತು ಸಮೂಹವಿದೆ. ನವೋದಯದ ಕವಿತೆಗಳಲ್ಲಿ ವ್ಯಕ್ತಿ ಅವನ ಧಾರ್ಮಿಕವಾದ ನಂಬಿಕೆಗಳು, ಅವನ ಆಲೋಚನೆ, ಅವನ ಹಿಂದೆ ಇರುವ ಸಂಸ್ಥೆಗಳು, ಅವನ ನೈತಿಕ ನಿಲುವುಗಳು ವಿಭಿನ್ನವಾಗಿ ವ್ಯಕ್ತವಾಗುತ್ತವೆ. ಅಂದರೆ ವ್ಯಕ್ತಿಯು ಸಮಾಜ ಮತ್ತು ಅವನ ಜ್ಞಾನದ ಮೂಲಕ ಒಂದು ಸಂಬಂಧವನ್ನು ಸ್ಥಾಪಿಸುತ್ತಾನೆ.

ಸಮಾಜಕ್ಕೆ ಇರುವ ನಿಯಮವನ್ನು ಬೇಂದ್ರಯವರು ತಿರಸ್ಕಾರ ಮಾಡುತ್ತಿಲ್ಲ. ಅವರು ಅದನ್ನು ಒಂದು ಚೌಕಟ್ಟಿನಲ್ಲಿ ಹೇಳುತ್ತಾರೆ. ಒಂದು ನಿಯಮವು ಇದೆ.

ಮತ್ತೊಂದು ಕಡೆಗೆ ಒಂದು ನೈತಿಕತೆಯು ಇದೆ. ಬೇರೊಂದು ಕಡೆಗೆ ಪ್ರಜೆಯಾಗಿ ತಾನು ಮಾಡಬೇಕಾದ ಕರ್ತವ್ಯವೂ ಇದೆ. ಅದು ಪ್ರಜ್ಞೆಯನ್ನು ಹೇಳುತ್ತದೆ. ನಾಗರಿಕವಾದ ನಿಲುವನ್ನು ಹೇಳುತ್ತದೆ. ನವೋದಯ ಕಾಲದ ಕಾದಂಬರಿಗಳು ನೀತಿ ಮತ್ತು ಅಮೂರ್ತವಾದ ಆದರ್ಶವನ್ನು ಹೇಳುತ್ತವೆ. ಅದರಲ್ಲಿ ಕೆಲವು ಹಾಜರಾಗುತ್ತವೆ. ಮತ್ತು ಮತ್ತೆ ಕೆಲವು ಗೈರುಹಾಜರಿಯಾಗುತ್ತವೆ. ಕಾದಂಬರಿಯಲ್ಲಿ ಬರುವ ಧೋರಣೆಗಳು ಸಮಾಜ ಮತ್ತು ಅದರ ಬೆಳವಣಿಗೆಯನ್ನು ಹೇಳುತ್ತವೆ. ಅದರಲ್ಲಿ ಸಮಾಜವು ಒಂದು ಮೌಲ್ಯವನ್ನು ಮಾತ್ರವೇ ಹೇಳಿಕೊಳ್ಳುವುದೂ ಇಲ್ಲ. ಅದು ದೊಡ್ಡದಾದ ಸಮಾಜದೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಸಾಹಿತ್ಯವೆನ್ನುವುದು ನಾವು ಭಾಷೆಯ ಮೂಲಕ ನಡೆಸುವ ಅನುಸಂಧಾನ. ಅದು ಒಂದು ಮಾದರಿಯ ಚಟುವಟಿಕೆಯೂ ಹೌದು. ರೊಮಾಂಟಿಕ್ ಪರಂಪರೆಯು ವಾಸ್ತವವಾಗಿ ಒಂದು ರೀತಿಯಲ್ಲಿ ಒಂದು ಭಾವವನ್ನು ಮಾತ್ರವೇ ಹೇಳುತ್ತದೆ. ಅದರಲ್ಲಿ ವ್ಯಕ್ತಿಯು ಯಾವುದನ್ನು ಸೂಚಿಸುತ್ತಾನೆಯೋ ಅದರ ಭಾವಗಳು ಮಾತ್ರವೇ ಮುಖ್ಯವಾಗುತ್ತವೆ.

ಇಲ್ಲಿ ಮತ್ತೊಂದು ಅಂಶವನ್ನು ಹೇಳಬೇಕಾಗುತ್ತದೆ. ವ್ಯಕ್ತಿಯ ರೊಮಾಂಟಿಕ್ ಕಲ್ಪನೆಯು ವಾಸ್ತವವಾಗಿ ಒಂದು ಕ್ಷಣವನ್ನು ಹೇಳುತ್ತದೆ. ಅದರಲ್ಲಿ ವಿವಿಧತೆಯು ಆ ಕ್ಷಣವನ್ನು ಮಾತ್ರವೇ ಹೇಳುತ್ತದೆ. ಅದರ ಆಯಾಮವೂ ಭಿನ್ನವಾಗುತ್ತದೆ. ಅದರಲ್ಲಿ ಒಂದು ಕ್ಷಣವೆನ್ನುವುದು ಒಂದು ಕಾಲವನ್ನು ಮಾತ್ರವೇ ಸೂಚಿಸುತ್ತದೆ. ಅದರಲ್ಲಿ ಆ ನಿಮಿಷ ಎನ್ನುವುದು ಮತ್ತು ಆ ಸೂಚನೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ಇಲ್ಲಿ ಮತ್ತೊಂದು ಅಂಶವನ್ನು ನಾವು ಹೇಳಬೇಕಾಗುತ್ತದೆ. ಚಿತ್ರದಲ್ಲಿ ಬರುವ ಒಂದು ಕಲ್ಪನೆಯು ಲ್ಯಾಂಡ್ ಸ್ಕೇಪ್ ಪರಿಕಲ್ಪನೆಯು ನಮಗೆ ಬಹಳ ಮುಖ್ಯ. ಅದನ್ನು ಸುಂದರವೆಂದು ಹೇಳುತ್ತೇವೆ. ಅದರಲ್ಲಿ ಬರುವ ಸಂಯೋಜನೆಯು ಯಾವುದೇ ಚಲನೆಯನ್ನು ಹೇಳುವುದೂ ಇಲ್ಲ. ಅದರಲ್ಲಿಯೂ ಕಲಾವಿದನು ನೋಡುವ ನೋಟ ಮಾತ್ರವೇ ಮುಖ್ಯವಾಗುತ್ತದೆ. ಲಿರಿಕಲ್ ಕವಿತೆಯೂ ಕೂಡಾ ಒಂದು ದೃಷ್ಟಿಯಿಂದ ಒಂದು ಬಗೆಯ ಲ್ಯಾಂಡ್‌ಸ್ಕೇಪ್. ಅದರಲ್ಲಿ ನಿಸರ್ಗವೂ ಇದೆ. ಅದರಲ್ಲಿ ನೀತಿಯೂ ಇದೆ. ಭಾವಗೀತೆಗಳಲ್ಲಿ ವ್ಯಕ್ತಿ ಮತ್ತು ಅವನ ಭಾವನೆಗಳು ಮಾತ್ರವೇ ಇದೆ. ಅದರಲ್ಲಿ ಅದು ವಿಷಯನಿಷ್ಠವಾದ ಒಂದು ನಿರೂಪಣೆಯೂ ಹೌದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಭಾವಗೀತೆಯು ವ್ಯಕ್ತಿ ಮತ್ತು ಅವನ ಕೆಲವು ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಅವನ ಒಂದು ಕ್ಷಣದ ಭಾವನೆಗಳು ಮಾತ್ರವೇ ಇದೆ. ಭಾವಗೀತೆಗಳು

ವ್ಯಕ್ತಿಯ ಕೆಲವು ವಿಷಯಗಳನ್ನು ಮಾತ್ರವೇ ಹೇಳುತ್ತವೆ. ಅದರಲ್ಲಿ ಭಾವನೆ ಮತ್ತು ಅದರ ಸ್ವರೂಪಗಳು ಇತ್ಯಾತ್ಮಕವಾಗಿಯೂ ಇರುತ್ತದೆ. ಅಂದರೆ ವ್ಯಕ್ತಿಯು ಒಂದು ಕ್ಷಣಕ್ಕೆ ಯಾವುದನ್ನು ಕಾಣುತ್ತಾನೆಯೋ ಅದನ್ನು ಮಾತ್ರವೇ ಅವನು ಹೇಳುತ್ತಾನೆ. ಅದರಲ್ಲಿ ಭಾವನೆ ಮತ್ತು ಅದರ ವಿಷಯನಿಷ್ಠವಾದ ಒಂದು ಸಂಗತಿಯು ಮಾತ್ರವೇ ಇರುತ್ತದೆ.

ಸಮಾಜವಾದಿ ವಾಸ್ತವವಾದವು ಒಂದು ನಿಲುವನ್ನು ಹೇಗೆ ತಳೆಯುತ್ತದೆ ಎನ್ನುವುದನ್ನು ನೋಡಲು ನಮಗೆ ಅದರ ಸಾರವೇ ಅತ್ಯಂತ ಮುಖ್ಯವಾಗುತ್ತದೆ. ಅದರಲ್ಲಿ ಸಾಹಿತ್ಯ ಮತ್ತು ಅದರ ನಿರ್ವವಚನವೂ ಇರುತ್ತದೆ. ಸಾಹಿತ್ಯವನ್ನು ಸಮಾಜವಾದಿ ವಾಸ್ತವವು ನೋಡುವುದು ಮತ್ತು ಗ್ರಹಿಸುವುದು ಒಂದು ಕ್ರಮದಲ್ಲಿ. ಅದರಲ್ಲಿ ಸೃಜನಶೀಲತೆ ಮತ್ತು ಅದರ ಚಹರೆಗಳು ಭಿನ್ನವಾಗುತ್ತದೆ. ಅದೇ ರೀತಿಯಲ್ಲಿ ನವೋದಯವೂ ಕೂಡಾ ಸಾಹಿತ್ಯ ಮತ್ತು ಅದರ ನಿರ್ವಚನವು ಒಂದು ರೀತಿಯಲ್ಲಿ ಇರುತ್ತದೆ. ನವ್ಯ ಮತ್ತು ಅದರ ನಿರ್ವಚನವು ಬೇರೆ. ಆದರೆ ನಮಗೆ ಗೊತ್ತಿರಬೇಕಾದ ಅಂಶವೆಂದರೆ ಸಾಹಿತ್ಯ ಮತ್ತು ಅದರ ರಚನೆಯು ಲೇಖಕ ಮತ್ತು ಅವನ ಮನಸ್ಸನ್ನು ಹೇಳುತ್ತದೆ ಎಂಬುದು. ಈ ದೃಷ್ಟಿಯಿಂದ ಸಮಾಜಶಾಸ್ತ್ರೀಯವಾದ ವಿಮರ್ಶೆಯು ನಮಗೆ ಗೊತ್ತು ಗುರಿಯನ್ನು ಸೂಚಿಸುತ್ತದೆ. ಸಮಾಜ ಮತ್ತುಅದರ ಕ್ರಮವು ಅದಕ್ಕೆ ಹೆಚ್ಚು ಮುಖ್ಯ. ಸಮಾಜವನ್ನು ಇಟ್ಟುಕೊಂಡು ಅದು ಸಾಹಿತ್ಯವನ್ನು ಗ್ರಹಿಸುತ್ತದೆ. ಸಾಮಾಜಿಕ ಜೀವನ ಮತ್ತು ಅದರ ಪರಿಣಾಮಗಳು ಸಾಹಿತ್ಯದ ಮೇಲೆ ಆಗುತ್ತದೆ ಎನ್ನುವುದು ಅದರ ವಾದವಾಗಿದೆ. ಜೀವನ ಮತ್ತು ಅದರ ಪ್ರಾತಿನಿಧಿಕತೆಯು ಬಹಳ ಮುಖ್ಯವೆಂದು ಅದು ಹೇಳುತ್ತದೆ. ಜೀವನ ಮತ್ತು ಅದರ ಅನೇಕ ಸಂಗತಿಗಳನ್ನು ಸಾಹಿತ್ಯವು ಹೇಳುತ್ತದೆ ಮತ್ತು ಅದರಲ್ಲಿ ವ್ಯಕ್ತಿ ಮತ್ತು ಅವನ ಗ್ರಹಿಕೆಗಳು ಬಹಳ ಮುಖ್ಯವೆಂದು ಅದರ ಪ್ರತಿಪಾದನೆಯೂ ಆಗಿದೆ. ಸಾಹಿತ್ಯ ಮತ್ತು ಅದರ ಗುಣವನ್ನು ಹೇಳುವುದೂ ಕೂಡಾ ಸಮಾಜಶಾಸ್ತ್ರವೇ ಆಗಿದೆ. ಅದರಲ್ಲಿ ತಾರತಮ್ಯವೂ ಇರುತ್ತದೆ. ಸಾಹಿತ್ಯ ಮತ್ತು ಅದರ ತಾತ್ವಕತೆಯನ್ನು ಹೊರತುಪಡಿಸಿಕೊಂಡು ನಾವು ಯಾವುದನ್ನು ಹೇಳಲಾಗುವುದೂ ಇಲ್ಲ. ಲೇಖಕನು ಆಯ್ಕೆಯನ್ನು ಮಾಡುತ್ತಾನೆ. ಮತ್ತು ಅದನ್ನು ಬರೆಯುತ್ತಾನೆ. ಸಮಾಜ ಮತ್ತು ಕಲೆಯ ಪ್ರಶ್ನೆಯು ಈ ದೃಷ್ಟಿಯಿಂದ ಸಂಕೀರ್ಣವೂ ಆಗುತ್ತದೆ. ಅದರಲ್ಲಿ ಬರೀ ಕಲ್ಪನೆಯು ಮಾತ್ರವೇ ಇದೆ ಎಂದು ಹೇಳಬೇಕಾಗಿಯೂ ಇಲ್ಲ. ಅಂದರೆ ಯಾವುದೇ ಲೇಖಕ ಬರೀ ಕಲ್ಪನೆಯಿಂದ ಯಾವುದನ್ನೂ ಉತ್ಪಾದಿಸಲಾರ. ಯಾವುದೇ ಪ್ರತೀಕ ಮತ್ತು ಕಲ್ಪನೆಯು ಕೆಲವನ್ನು ಮಾತ್ರವೇ ಹೇಳುತ್ತದೆ. ಅದು ಕೆಲವನ್ನು

ಸೂಚಿಸುತ್ತದೆ. ಲೇಖಕ ಮತ್ತು ಅವನ ಶಕ್ತಿಯು ಒಂದು ರೀತಿಯಲ್ಲಿ ಇರುತ್ತದೆ. ಅದರಲ್ಲಿ ಬರಹ ಮತ್ತು ಅದರ ಸಾಧ್ಯತೆಯೂ ಇರುತ್ತದೆ. ಕೆಲವು ಪ್ರತಿಮೆಗಳಿಗೆ ವೈಜ್ಞಾನಿಕತೆಯೂ ಇರುತ್ತದೆ ಎನ್ನುವುದನ್ನು ಮರೆಯಲು ಆಗುವುದೂ ಇಲ್ಲ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಚಾರವೂ ಇದೆ. ಅದನ್ನು ಹೀಗೆ ಹೇಳಬಹುದು: ಮಾರ್ಕ್ಸ್‌ವಾದವು ರೊಮಾಂಟಿಕ್ ಪರಂಪರೆಯನ್ನು ನೋಡಿದ್ದು ಅದರ ಹಿಂದೆ ಇರುವ ತಾತ್ವಿಕತೆಯ ದೆಸೆಯಿಂದಲೇ. ಆದ್ದರಿಂದ ಅದಕ್ಕೆ ಸಮಾಜ ಮತ್ತು ಚರಿತ್ರೆಯು ಮುಖ್ಯವಾದವು. ಲೇಖಕ ಮತ್ತು ಅವನ ಶಕ್ತಿಯನ್ನು ಅವನ ಬರಹದಲ್ಲಿ ನೋಡುತ್ತೇವೆ ನಿಜ. ಆದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ಪ್ರಜ್ಞೆಯ ಇರುತ್ತದೆ. ಅದರ ಅಗತ್ಯವೂ ಆದಾಗುತ್ತದೆ. ವ್ಯಕ್ತಿಯನ್ನು ನೋಡುವುದು ಮತ್ತು ಅವನ ಚೈತನ್ಯವನ್ನು ಗುರುತಿಸುವುದು ಮೂಲಭೂತವಾಗಿ ಒಂದು ಅಗತ್ಯವಾಗಿ ಮಾತ್ರವೇ. ಯಾವುದೇ ಕಲಾಕೃತಿಯಲ್ಲಿ ಬರುವ ಅನೇಕ ಸಂಕೇತಗಳು ಮೂಲತಃ ಕೆಲವು ತಾತ್ವಿಕತೆಯನ್ನು ಹೇಳುತ್ತದೆ. ಅದರಲ್ಲಿ ಅದು ಮೂಲಭೂತವಾಗಿ ಒಂದು ಕ್ರಮ ಮಾತ್ರವೇ ಆಗಿರುತ್ತದೆ. ಬುಡಕಟ್ಟು ಸಮಾಜ ಮತ್ತು ಅದರ ಸ್ವರೂಪವು ಒಂದು ಬಗೆಯಲ್ಲಿ ಇತ್ತು. ಅದರಲ್ಲಿನ ಭಾವನೆಗಳು ಅವರ ಅಭಿವ್ಯಕ್ತಿಯನ್ನು ಹೇಳುತ್ತದೆ. ಬುಡಕಟ್ಟು ಸಮಾಜ ಮತ್ತು ಅವರು ಕಟ್ಟುವ ಕತೆಗಳು ಒಂದು ಬಗೆಯಲ್ಲಿ ಇರುತ್ತವೆ. ಅದರಲ್ಲಿ ಬರುವ ಆಶಯವು ಒಂದು ಬಗೆಯಲ್ಲಿ ಇದ್ದರೆ ಶಿಷ್ಟರು ಹೇಳುವ ಕತೆ ಮತ್ತು ಅವರ ಬರಹಗಳ ನಿಲುವು ಮತ್ತೊಂದು ಥರ ಇರುತ್ತದೆ. ಬರಹ ಮತ್ತು ಅದರಲ್ಲಿ ಬರುವ ಪ್ರತೀಕಗಳು ವಾಸ್ತವವಾಗಿ ಒಂದು ಉದ್ದೇಶವನ್ನು ಹೊಂದಿರುತ್ತದೆ. ಆದರೆ ಪ್ರತೀಕವನ್ನು ಹೇಳುವಾಗ ಸಹಜವಾದಿಗಳು ಅವನ ಅನುಭವಕ್ಕೆ ಮಾತ್ರವೇ ಬದ್ಧರಾಗುತ್ತಾರೆ. ಆದರೆ ಅದು ಮಾತ್ರವೇ ಸಾಕಾಗುವುದೂ ಇಲ್ಲ. ಸಹಜವಾದಿಗಳಲ್ಲಿ ಅಭಿವ್ಯಕ್ತಿ ಮತ್ತು ಅದರ ಪ್ರಶ್ನೆಯು ಅತ್ಯಂತ ಸೀಮಿತವೂ ಆಗುತ್ತದೆ.

ಮಾದರಿಯ ಅಭಿವ್ಯಕ್ತಿಗಳ ಉದಾಹರಣೆಯಾಗಿ 'ಬೆಟ್ಟದ ಜೀವ' ಕಾದಂಬರಿಯ ಪಾತ್ರಗಳು ಕಂಡುಬರುತ್ತವೆ. ಈ ಕಾದಂಬರಿಯ ವಸ್ತು ತೀರಾ ಕಾಲ್ಪನಿಕವಾದುದಲ್ಲ. ಪುತ್ತೂರಿನ "ಪರಿಸರದಲ್ಲಿ ಅಲೆದಾಡಿದಾಗ ಕಟ್ಟಿ ಎಂಬಲ್ಲಿ ಗೋವಿಂದಯ್ಯ ಎಂಬ ಹಿರಿಯರು ಅತಿ ಸಾಹಸದ ಕೃಷಿಕರಾಗಿ ದುಡಿದುದನ್ನು ಕಂಡೆ. ಅವರ ಬದುಕು ನನ್ನನ್ನು ಅಚ್ಚರಿಗೊಳಿಸಿತು. ಅವರ ಧೀಮಂತಿಕೆ, ನಡೆ, ನುಡಿ, ಸಾಹಸ ಬೆರಗುಗೊಳಿಸಿತು. ಅವರ ಬದುಕಿನ ಸಮಗ್ರ ಚಿತ್ರ ಕಣ್ಮುಂದೆ ಕುಣಿಯತೊಡಗಿತು. ಮುಂದೊಂದು ದಿನ... ಗೋವಿಂದಯ್ಯನವರ ಬದುಕಿನ ಸಾರಸರ್ವಸ್ವವನ್ನು ಬರೆದು ಮುಗಿಸಿದೆ... ಅವರು ಇಂದು ಉಳಿದಿಲ್ಲ, ಅವರ

ನೆನಪು ಮಾತ್ರ ನನಗೆ ಅಳಿದಿಲ್ಲ" ಎಂದು ಕಾರಂತರೇ ಬರೆದಿದ್ದಾರೆ. ಆ ಬೆಟ್ಟದ ಸೆರಗಿನಲ್ಲಿ ಮುಕುತ್ತಿದ್ದ ದೇರಣ್ಣಗೌಡ, ಗೋವಿಂದಯ್ಯ ಮುಂತಾದ ವ್ಯಕ್ತಿಗಳ ಬದುಕನ್ನೇ ಪ್ರಶ್ನಾತ್ಮಕವಾಗಿ ಅಕ್ಷರ ಜಗತ್ತಿಗೆ ಪರಿಚಯಿಸಿದ ಕೃತಿಯಾಗಿ 'ಬೆಟ್ಟದ ಜೀವಕ್ಕೆ ಮಹತ್ವವಿದೆ.

ಇದರಲ್ಲಿ ಬರುವ ಗೋಪಾಲಯ್ಯ-ಶಂಕರಿ ದಂಪತಿಗೆ ಬದುಕೆಲ್ಲವೂ ಹೋರಾಟವೇ. ಇದರಲ್ಲಿ ಅರ್ಧ ಭಾಗ ಹೊರಗಿನ ಶಕ್ತಿಗಳೊಂದಿಗಾದರೆ, ಉಳಿದರ್ಧ ಸ್ವಂತದ ಒಂಟಿತನ, ಅವಿಶ್ವಾಸಗಳ ವಿರುದ್ಧ ನಡೆಯುತ್ತದೆ. ಯಾವುದೋ ದೂರದ, ಹಂಬಲ, ಮನೆ ಬಿಟ್ಟು ಹೋದ ಮಗನು ಮರಳಿ ಬರಬಹುದೆಂಬ ನಿರೀಕ್ಷೆಗಳು ಈ ಮನಸ್ಸುಗಳಿಗೆ ಬಲವನ್ನು ನೀಡುತ್ತವೆ. ಇನ್ನೊಂದು ಸಂದರ್ಭದಲ್ಲಿ ಕಾರಂತರು ಹೇಳುವ, "ಬರುವ ಕಷ್ಟಗಳೆಲ್ಲ ಬಂದೇ ಬರುತ್ತವೆ. ಕೆಲವೊಂದು ತೆರನ ಕಷ್ಟಗಳನ್ನು ನೋವುಗಳನ್ನು... ಪರಿಹರಿಸುವುದಕ್ಕೆ ಬರಲಾರದೆಂದಲ್ಲ. ಆದರೆ ಹೆಚ್ಚಿನ ಕಷ್ಟಗಳೆಂಬುವು ...ನಾವೇ ನುಂಗಿ ಸಹಿಸಬೇಕಾದುವು... ನಾನು ತಲೆ ಕೆಡೆಸಿಕೊಂಡರೂ, ಕೊಳ್ಳದಿದ್ದರೂ ಬರುವ ಕಷ್ಟ ಬಂದೇ ಬರುತ್ತದೆ' ಎನ್ನುವುದಕ್ಕೆ ಕಲಿಯಬೇಕಪ್ಪ, ಮನುಷ್ಯನಾದವ" ಎನ್ನುವ ಮಾತುಗಳು ಈ ಜನರ ಬದುಕುಗಳಿಗೆ ಅನ್ವಯವಾಗುತ್ತವೆ.

ಈ ಹೋರಾಟದಲ್ಲಿ ಅವರಿಗೆ ಬೆಂಬಲ ನೀಡುವುದು ಅವರು ಸ್ವೇಚ್ಛೆಯಿಂದ ರೂಢಿಸಿಕೊಂಡ ಶ್ರಮಜೀವನ, ಮನಸ್ಸಿನ ಕೊರಗನ್ನು ಮರೆಯುವುದಕ್ಕೆ, ಜನರ ಸಂಚಾರವೇ ಇಲ್ಲದ ಜ್ವರದ ಕೊಂಪೆಯಲ್ಲಿ ಕಳೆಯಬೇಕಾದ ದಿನಚರಿಗಳಿಗೆ ವಿಧ್ಯಗಳನ್ನು ತುಂಬುವುದಕ್ಕೆ ಅದು ಸಹಾಯ ಮಾಡುತ್ತದೆ. "ಉದ್ಯೋಗವಿಲ್ಲದೆ ಸಮಯ ಕಳೆಯುವುದು ಅವರ ಜೀವಕ್ಕೆ ಒಗ್ಗದ ಸಂಗತಿ. ಆದುದರಿಂದಲೇ ಅವರಿಗೇ ಅರಿವಿಲ್ಲದಂತೆ, ಸುಪುಷ್ಟವಾದ ಶ್ರಮಸಂಸ್ಕೃತಿಯೊಂದು ಅಲ್ಲಿ ರೂಪಿತಕ್ಕೆ ಬರುತ್ತದೆ.

ಈ ಚೆಂದದ ನೆಲದ ಪ್ರತಿ ಅಂಗುಲವೂ ಮನುಷ್ಯನ ಅಸ್ತಿತ್ವಕ್ಕೆ ಸವಾಲೆಸೆಯುವಂಥದ್ದಾಗಿದೆ. ಇಲ್ಲಿ ನಿರೂಪಕನು ಹೇಳುವ, "ಮಾನವನ ಎಟಕು, ಹಿಡಿತಗಳನ್ನು ಮೀರಿ ನಿಂತತಂತೆ ಆ ಊರಿನ ಬೆಟ್ಟ, ಹಳ್ಳಗಳು ನನಗೆ ಕಾಣಿಸುತ್ತಿದ್ದುವು.. ಅಂಥ ಬೆಟ್ಟಗಳ ಎಡೆಯಲ್ಲಿ ಈ ಮನುಷ್ಯ ತನ್ನ ಆಳನವನ್ನು ಮರೆಯಿಸಲು ನಿಂತ ಅವನಿಗೆ ಜಯವೆಲ್ಲಿಯದು? ಅವನ ಪರಮಕೃತಿಯಾದ ಅಡಕೆಯ ಮರ ಕೂಡಾ, ಕಣಿವೆಯ ಪಾಲಿಗೆ ಪುಟ್ಟ ಹುಲ್ಲಿನ ಗಿಡವಾಗಿದೆ. ಈ ನಾಡು ಮನುಷ್ಯನನ್ನು ಕೆಣಕುವುದಕ್ಕಾಗಿಯೇ ನಿಂತಿದೆ..." ಮಾತುಗಳು ತುಂಬ ಅರ್ಥಗರ್ಭಿತವೆನಿಸುತ್ತವೆ. ಇಂಥ ಅರಣ್ಯದೊಡನೆ ಕಾದಾಡುವ ಹುಮ್ಮಸ್ಸು ಗೋಪಾಲಯ್ಯನವರಲ್ಲಿ ಕಂಡರೆ

ಅದಕ್ಕೆ ನಡುವಯಸ್ಸನ್ನು ಮೀರಿದ ಅವರ ದುರ್ಬಲ ಶರೀರದೊಳಗೆ ಪ್ರಬಲವಾಗಿರುವ ಇಚ್ಛಾಶಕ್ತಿಯೇ ಕಾರಣವೆನಿಸುತ್ತದೆ. ಇದು ಕಾರಂತರು ಕಾಣುವ, ಗ್ರಹಿಸುವ, ಅಭಿವ್ಯಕ್ತಿ ನೀಡುವ ವ್ಯಕ್ತಿತ್ವದ ವೈಶಿಷ್ಟವೇ ಆಗಿದೆ.

ಗೋಪಾಲಯ್ಯನವರ ಪರಿಸರಕ್ಕೆ ಸೌಂದರ್ಯದಷ್ಟೇ ಕ್ರೌರ್ಯವೂ ಇದೆ. ಅದು ಕ್ರೌರ್ಯವೆಂದು ಕರೆಯುವ ಧಾರ್ಷ್ಟ್ಯವನ್ನು ನಾವು ಮಾಡಬಹುದಾದರೆ, "ವರ್ಷವೆಲ್ಲ, ನೆಟ್ಟು, ಬೆಳೆಸಿ, ಕಾದು, ಕಬ್ಬು ಕೈಗೆ ಬರುತ್ತದೆ ಎನ್ನುವಾಗಲೇ ಹಂದಿ, ಕಾಡಾನೆಗಳನ್ನು ಬಲಿಕೊಡಬೇಕಾಗಿ ಬರುವ" ಪರಿಸ್ಥಿತಿಯು ಅಲ್ಲಿದೆ. ಮೇವು ಕೊಟ್ಟು ಸಾಕುವ । ಕರುಗಳನ್ನು ಕ್ಷಣಾರ್ಧದಲ್ಲಿ ಕೊಂದು ತಿನ್ನುವ ಹುಲಿಯೂ ಅಲ್ಲಿ ನಿರಾತಂಕವಾಗಿ ಕಡ್ಡಾಡುತ್ತದೆ. ಇವನ್ನೆಲ್ಲ ಉಪದ್ರವಿಗಳೆನ್ನುತ್ತದೆ, ನಮ್ಮಮನುಷ್ಯ ಕೇಂದ್ರಿತ ಚಿಂತನೆ. ಎಲ್ಲವನ್ನೂ ಸಮಭಾವದಿಂದ ಕಾಣುವ ನಿಸರ್ಗಕ್ಕೆ ಮನುಷ್ಯನ ಹಾಗೆಯೇ ಅವೆಲ್ಲವೂ ವಾತ್ಸಲ್ಯವನ್ನು ಅಪೇಕ್ಷಿಸುವ ಶಿಶುಗಳೇ ತಾನೇ!

'ಗುಡ್ಡ ಕಡಿದು, ಕಾಡು ಸವರಿ, ಕಣಿ ಹೊಡೆಸಿ, ಕೋಟೆಯಂಥ ಆವಾರವನ್ನು ಎಕಿಸಿ'ದ ಗೋಪಾಲಯ್ಯನವರು ಒಂದೆಡೆಯಿಂದ ಪ್ರಕೃತಿಯನ್ನು ಒಲಿಸಿಕೊಂಡರು. ಸ್ವಾಭಾವಿಕವಾಗಿ, ಆತ್ಮತೃಪ್ತಿಯಿಂದ ತಮ್ಮ ಜೀವನ ಸಂಗರದ ಸಾರ್ಥಕ ಸಾಹಸ" ಕಾರ್ಯವನ್ನು ನೆನೆಯುವ ಸೌಖ್ಯವನ್ನು ಸಂಪಾದಿಸಿದರು. ಆದರೆ ಬದುಕು, ಕಾರಂತರೇ ಹೇಳುವ ಹಾಗೆ, ದೊಂಬರ ಗಣೆಯಂಥದ್ದು. ಏರಿಸುತ್ತದೆ, ಇಳಿಸುತ್ತದೆ. ತನ್ನ ಮನಸ್ಸಿಗೆ ಬದಂತೆ ವರ್ತಿಸುತ್ತದೆ. ಹಾಗೇ 'ಎಳೆತನದ ತಮ್ಮ ಸಾಹಸವನ್ನು ನೆನೆದುಕೊಂಡು ಬಂದಂಥ ಗೋಪಾಲಯ್ಯನ ಮನಸ್ಸು... ಯಾವುದೆಂದು ಹೇಳುವ ಅವಶ್ಯಕತೆಯಿರದ ನೆನಪಿನಿಂದ ನೆಲಕ್ಕೆ ಕುಸಿಯುತ್ತದೆ. ಹೀಗೆ ಈ ಹೋರಾಟದಲ್ಲಿ ಒಮ್ಮೆ ವ್ಯಕ್ತಿಯು ಜಯಶಾಲಿಯಾದರೆ ಮತ್ತೊಮ್ಮೆ ಕಾಡುವ ಹಟ ತೊಟ್ಟ ಬದುಕಿನ ಕೈಯೇ ಮೇಲಾಗುತ್ತದೆ. ಹಾಗೆ ನೋಡಿದರೆ, ಗೋಪಾಲಯ್ಯನವರ ಜೀವಕ್ಕೆ ಹೋರಾಟವೆನ್ನುವುದು ಪ್ರಿಯವೇ ಎನಿಸುತ್ತದೆ. "ಗುಡ್ಡದ ಹಾದಿಯ ಗಾಳಿ, ಚಂದ, ಮನಸ್ಸಿನ ಉಕ್ಕು" ಬಯಲು ದಾರಿಯ ಸಲೀಸು ನಡೆಗಿಲ್ಲವೆನ್ನುವುದು ಅವರ ಖಚಿತವಾದ ಅಭಿಪ್ರಾಯವಾಗಿದೆ.

ಗೋಪಾಲಯ್ಯ-ಶಂಕರಿಯರ ದಾಂಪತ್ಯವು ಪರಸ್ಪರ ಕೊಡುವ, ಸೌಖ್ಯದ ಹೊಂದಾಣಿಕೆಯಾಗಿತ್ತೇ ಹೊರತಾಗಿ, ಒಬ್ಬರು ಇನ್ನೊಬ್ಬರಿಂದ "ಕಿತ್ತು ಕೊಳ್ಳುವ ಕ್ರಮದ್ದಾಗಿರಲಿಲ್ಲ. ಇದು ಚಿಂತೆಯಿಲ್ಲದ ಬದುಕಲ್ಲ, ದುಃಖವನ್ನೇ ಕಾಣದ ಬದುಕೂ" ಅಲ್ಲ. ತೃಪ್ತಜೀವಗಳಿಗೆ ಸುಖ-ದುಃಖಗಳನ್ನಾದರು ಅಷ್ಟಾಗಿಲ್ಲವೆಂದು ಋಜುವಾತು ಕೊಡುವ ಸಾರ್ಥಕ ಬದುಕು. ಬಾಳಿನ ಹೋರಾಟದಲ್ಲಿ ಅವರ 'ಗೆಲುವಿಗೆ ಪ್ರಮಾಣ'

ಪತ್ರಗಳಾಗುವ ಹಲವು ಅಂಶಗಳು ಈ ಕಾದಂಬರಿಯಲ್ಲಿ ಎಡಪಡೆದಿವೆ. ನಿರೂಪಕನ ಮೈಗೆಲ್ಲ ಎಣ್ಣೆಯೊತ್ತಿ, ಹಂಡೆ ತುಂಬಿದ ನೀರನ್ನೆರೆದು ಮೀಯಿಸುವ ಗೋಪಾಲಯ್ಯನವರ ಉತ್ಸಾಹ, ಅಡಕೆ ಮಾರಾಟದಂಥ ಲೌಕಿಕ ವಿಚಾರಗಳಲ್ಲಿ ಅವರು ತೋರಿಸುವ ವ್ಯವಹಾರ ಜಾಣ್ಮ ಇಳಿವಯಸ್ಸಿನಲ್ಲೂ ಕೃಷಿಯ ಹೊಸ ಸಾಧ್ಯತೆಗಳನ್ನು ಗಮನಿಸುವ ಅವರ ಕನಸುಗಾರಿಕೆಗಳೆಲ್ಲವೂ ಅವರ ವಿಜಯದ ಸೂಚ್ಯಂಕಗಳನ್ನು ಏರಿಸುತ್ತಲೇ ಹೋಗುತ್ತವೆ. ಒಂದೆಡೆಯಿಂದ ಇಂಥ ಆಳವಾದ ಜೀವನ ಶ್ರದ್ಧೆ ಇನ್ನೊಂದೆಡೆಯಿಂದ, "ಬದುಕಬೇಕೆಂಬ ಆಸೆಯೂ ಇಲ್ಲ: ಸಾಯಬೇಕಲ್ಲ ಎಂಬ ಭಯವೂ ಇಲ್ಲ" ಎನ್ನುವಂಥ ನಿರ್ಲಿಪ್ತಿಗಳು ಇಂಥವರ ಅಂಗರಕ್ಷಕಗಳಾಗಿರುತ್ತವೆ; ಸೋತು ಹೈರಾಣಾಗುವ ಸಂದರ್ಭಗಳು ಬಾರದಂತೆ ಕಾಯುತ್ತವೆ. ಹೀಗೆ, ಜೀವವೇ ಬೆಟ್ಟದ ಎತ್ತರ, ಗಡುಸುಗಳನ್ನು ಗಳಿಸುವ, ಬೆಟ್ಟದ ಜೀವಂತಿಕೆಯನ್ನು ದಾಟಿಸುವ, ಬೆಟ್ಟದಲ್ಲಿರುವ ಜೀವಗಳ ಸಂವೇದನೆಗಳಿಗೆ ಸ್ವರ ನೀಡುವ ಈ ಕಾದಂಬರಿಯ ಹೆಸರಿನ ಅರ್ಥಗಾಂಭೀರ್ಯವನ್ನೂ ಈ ಸಂಘರ್ಷದ ಘಟಗಳು ಹೆಚ್ಚಿಸುತ್ತವೆ.

(ಶಿವರಾಮ ಕಾರಂತ; ಡಾ.ತಾಳ್ತಜೆ ವಸಂತಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪು.ಸಂ.122 ರಿಂದ 125)

ಅದರಲ್ಲಿ ಅಭಿವ್ಯಕ್ತಿಯು ಸರಳೀಕರಣವನ್ನು ಸೂಚಿಸುತ್ತದೆ. ಆದರೆ ಒಬ್ಬ ನಿಜವಾದ ಕಲಾವಿದನು ಕಲೆಯನ್ನು ಬಳಸುವುದು ತಾನು ಯಾವುದನ್ನು ನೋಡಿದ್ದಾನೆಯೋ ಅದನ್ನು ಮಾತ್ರವೇ ಹೇಳಲು ಅಲ್ಲ. ಅದರಲ್ಲಿ ಅಷ್ಟನ್ನು ಮಾತ್ರವೇ ಹೇಳಿದ್ದಾನೆ ಎಂದರೆ ಅದರ ಸ್ವರೂಪವು ಮಿತಿಗೆ ಮಾತ್ರವೇ ಒಳಪಡುತ್ತವೆ. ಕಲಾವಿದನು ಕಲೆಯನ್ನು ಬಳಸುವುದಕ್ಕೂ ಅವನ ನಿಲುವಿಗೂ ಸಂಬಂಧವಿರುತ್ತದೆ. ಈ ಕಾರಣದಿಂದ ಅವನ ಆಲೋಚನೆ ಮತ್ತು ಅವನ ಅಭಿಪ್ರಾಯವು ಅತ್ಯಂತ ಸಂಕೀರ್ಣವಾಗುತ್ತದೆ. ಜೀವನವು ಅತ್ಯಂತ ಮುಖ್ಯವಾದ ಕೆಲವು ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಬಹಳ ಮುಖ್ಯವಾಗಿ ದಿನ ನಿತ್ಯ ಮತ್ತು ಅದರ ಆಳವಾಗಿ ಕಲಕುವ ಸಂಗತಿಗಳು ನಮಗೆ ಅತ್ಯಂತ ಮುಖ್ಯವಾಗುತ್ತದೆ. ದಿನ ನಿತ್ಯವೆನ್ನುವುದು ವ್ಯಕ್ತಿಯನ್ನು ಮತ್ತು ಅವನ ಪ್ರಜ್ಞೆಯನ್ನು ಬಾಧಿಸುತ್ತದೆ. ಕಲಾತ್ಮಕವಾದ ಪ್ರತೀಕಗಳು ಎಂದರೆ ಅದರಲ್ಲಿ ಜೀವನ ಮತ್ತು ಅದರ ಅಭಿವ್ಯಕ್ತಿಯು ನಿಜ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನಾವು ನೋಡಬೇಕಾಗುತ್ತದೆ. ವ್ಯಕ್ತಿಯು ಕಟ್ಟುವ ಪ್ರತೀಕಗಳು ರಚನೆಗಳು ಮಾತ್ರವೇ. ಆದರೆ ಈ ಪ್ರತೀಕಗಳು ಆಧುನಿಕ ಜಗತ್ತಿನಲ್ಲಿ ಬೇರೆ ಬೇರೆ ಸಂಜ್ಞೆಗಳಾಗಿವೆ. ಅದರಲ್ಲಿ ವ್ಯಕ್ತಿ ಮತ್ತು ಅವನ ಬಯಕೆಗಳು ಇವೆ. ಅದರಲ್ಲಿ

ವ್ಯಕ್ತಿತ್ವ ಮತ್ತು ಬದಲಾಗುತ್ತಿರುವ ಸಮಾಜ ಪ್ರಶ್ನೆಗಳು ಇವೆ. ಕೆಲವು ಅಗತ್ಯಗಳು ನಮಗೆ ಕೆಲವನ್ನು ಕಟ್ಟುವ ಅಗತ್ಯವನ್ನು ಸೂಚಿಸುತ್ತವೆ. ಸಂದರ್ಭ ಎನ್ನುವುದೂ ಅಷ್ಟೇ ಮುಖ್ಯ. ಆದರೆ ಇರುವ ಅನೇಕ ಪ್ರಶ್ನೆಗಳು ರೊಮಾಂಟಿಕ್ ಯುಗವನ್ನು ನೋಡಿದ ಕ್ರಮವನ್ನು ಮಾತ್ರವೇ ಹೇಳುತ್ತವೆ. ವಾಸ್ತವವಾಗಿ ಸಾಹಿತ್ಯವು ನಿಜವಾಗಿಯೂ ಜೀವನ ಮತ್ತು ಅದರ ಪಲ್ಲಟಗಳನ್ನು ಹೇಳುತ್ತದೆ. ಅಂದರೆ ಸಾಹಿತ್ಯಕ್ಕೆ ಒಂದು ಆಳವಾದ ಸಂಗತಿಯೂ ಇರುತ್ತದೆ. ಅದರಲ್ಲಿ ದಿನ ಮತ್ತು ಅದರ ಕುರಿತಾದ ಪ್ರಜ್ಞೆಯು ಅತ್ಯಂತ ಮಹತ್ವದ್ದೂ ಆಗಿದೆ. ಕಲಾತ್ಮಕವಾದ ಒಂದು ಪ್ರಜ್ಞೆಯು ಕೂಡಾ ಜೀವನ ಮತ್ತು ಅದರ ಗ್ರಹಿಕೆಯನ್ನು ಹೇಳುತ್ತದೆ. ಅಂದರೆ ಅದರಲ್ಲಿ ಜೀವನದ ಕುರಿತಾದ ನೋಟವು ಇರುತ್ತದೆ. ಹಾಗೂ ಅದನ್ನು ವ್ಯಕ್ತಿ ಮತ್ತು ಅವನ ಭಾವನೆಗೆ ಸಂಬಂಧ ಪಟ್ಟಂತೆ ಹೇಳಬೇಕಾಗುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಭಾವನೆಯು ವಾಸ್ತವವಾಗಿ ಅವನ ಅಭಿವ್ಯಕ್ತಿಗೆ ಕಾರಣವಾಗುತ್ತದೆ. ಆದರೆ ಇದರಲ್ಲಿ ವ್ಯಕ್ತಿ ಮತ್ತು ಅವನ ನಿಲುವು ಅತ್ಯಂತ ಮಹತ್ವದ್ದೂ ಆಗಿದೆ. ನಮಗೆ ಯಾವುದನ್ನು ಹೇಳಬೇಕು ಮತ್ತು ಯಾವುದನ್ನು ಹೇಳಬಾರದು ಎನ್ನುವ ವಿವೇಕವು ಇರಬೇಕಾಗುತ್ತದೆ. ಮತ್ತು ಸಾಮಾನ್ಯವಾಗಿ ಇರುತ್ತದೆ. ಅದರಲ್ಲಿ ಅಗತ್ಯ ಮತ್ತು ಪ್ರತೀಕವನ್ನು ಕಟ್ಟುವ ಕೆಲಸವು ಅತ್ಯಂತ ಮುಖ್ಯವಾದ ಸಂಗತಿಯೂ ಆಗಿರುತ್ತದೆ.

ಇಲ್ಲಿ ಮತ್ತೊಂದು ಸಂಗತಿಯನ್ನು ಹೇಳಬೇಕಾಗುತ್ತದೆ. ಸಾಹಿತ್ಯವೆನ್ನುವುದು ಬುದ್ಧಿಜೀವಿಗಳ ಕೆಲಸ ಎನ್ನುವುದಕ್ಕೆ ಎರಡು ಮಾತು ಇಲ್ಲ. ಅದರಲ್ಲಿ ವ್ಯಕ್ತಿ ಮತ್ತು ಅವನ ಗುಣ ಅವನ ಗ್ರಹಿಕೆ ಮುಂತಾದವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇಲ್ಲಿ ಮತ್ತೊಂದು ಅಂಶವನ್ನು ಹೇಳಬೇಕಾಗುತ್ತದೆ. ವ್ಯಕ್ತಿಯು ತನ್ನದೇ ಆದ ನಿಲುವನ್ನು ಹೊಂದುತ್ತಾನೆಯಾದರೂ ಅವನಿಗೆ ಅದನ್ನು ಹೇಳುವಾಗ ಯಾವ ಸನ್ನಿವೇಶವು ಕಾರಣವಾಗಿದೆ ಎನ್ನುವುದು ಅತ್ಯಂತ ಮುಖ್ಯವಾದ ಅಂಶವಾಗಿದೆ. ಸಾಹಿತ್ಯದಲ್ಲಿ ಯಾವುದನ್ನು ಹೆಚ್ಚು ಸ್ಪಷ್ಟವಾಗಿ ಯಾವುದನ್ನು ಹೇಳುತ್ತೇವೆಯೋ ಅದರ ಕಾರಣವು ಅವನ ಅಮೂರ್ತವಾದ ಆಲೋಚನೆಯೂ ಆಗಿದೆ. ವಾಸ್ತವವಾಗಿ ಲಿರಿಕ್ ಎನ್ನುವುದು ವಿಷಯ ನಿಷ್ಠವಾದ ಒಂದು ಸಂಗತಿಯೂ ಆಗಿದೆ. ಆದರೆ ಮಹಾಕಾವ್ಯಗಳು ಹಾಗೆ ಇಲ್ಲ. ಅದರಲ್ಲಿ ಸಮಾಜದ ಅನೇಕ ಅಂಶಗಳು ಇರುತ್ತವೆ. ಯಾವುದೇ ಮಹಾಕಾವ್ಯಗಳು ನಿರ್ದಿಷ್ಟವಾದ ಒಂದು ಉದ್ದೇಶವನ್ನು ಹೊಂದಿರುತ್ತವೆ. ಮಹಾಕಾವ್ಯಗಳು ಬರೀ ಸ್ಫೂರ್ತಿಯನ್ನು ಮಾತ್ರವೇ ಹೇಳುವುದೂ ಇಲ್ಲ. ಮಹಾಕಾವ್ಯವನ್ನು ಬರೀ ಒಂದು ಪ್ರತಿಭಾಜನ್ಯವಾದ ಸಂಗತಿಯೆಂದು

ಹೇಳಬೇಕಾಗಿಯೂ ಇಲ್ಲ. ಅದರಲ್ಲಿ ಉದ್ದೇಶವೂ ಅತ್ಯಂತ ಸ್ಪಷ್ಟವಾದ ಸಂಗತಿಯೂ ಇರುತ್ತದೆ. ಸಾಹಿತ್ಯ ಮತ್ತು ಅದರ ಅಗತ್ಯಗಳು ಸಾಮಾಜಿಕವೂ ಆಗಿರುತ್ತದೆ. ಅದು ಸಾಮಾಜಿಕವಾದ ಕೆಲವು ನಿಲುವನ್ನು ಸೂಚಿಸುತ್ತದೆ. ಬರೀ ಕವಿಗಳು ಮಾತ್ರವೇ ಒಂದು ಸಮಾಜದ ಅಗತ್ಯವನ್ನು ಪೂರೈಸುತ್ತಾರೆ ಎಂದು ಭಾವಿಸಬಾರದು. ಆದರೆ ಕವಿಗಳ ಭಾವನಾತ್ಮಕವಾದ ಪ್ರತಿಕ್ರಿಯೆಯು ಕೂಡಾ ಕೆಲವು ತಾತ್ವಿಕತೆಯನ್ನು ಹೇಳುತ್ತದೆ. ಯಾವುದೇ ಉದ್ದೇಶ ಮತ್ತು ಅದರ ಅಗತ್ಯಗಳು ಯಾವಾಗ ಯಾವ ರೀತಿಯಲ್ಲಿ ಇರುತ್ತದೆ ಎನ್ನುವುದು ಮಾತ್ರವೇ ಇಲ್ಲಿ ಗಮನಿಸಬೇಕಾದ ಸಂಗತಿಯೂ ಆಗುತ್ತದೆ. ಉದ್ದೇಶಕ್ಕೂ ಅದರ ಹಿಂದೆ ಇರುವ ಆಲೋಚನೆಗೂ ಒಂದು ಸಂಬಂಧವಿದೆ. ಜೀವನ ಮತ್ತು ಅದರ ಕುರಿತಾದ ಕೆಲವು ನಂಬಿಕೆಗಳನ್ನು ಲೇಖಕರು ಹೇಳುತ್ತಾರೆ. ಮತ್ತು ಅದರ ಅಗತ್ಯವನ್ನು ಅವರು ನಿರೂಪಿಸುತ್ತಾರೆ. ಯಾವುದನ್ನು ನಾವು ಭಾವನಾತ್ಮಕವಾದ ಸಂಗತಿಯೆಂದು ಹೇಳುತ್ತೇವೆಯೋ ಅದು ಕೂಡಾ ಕೆಲವು ತಾತ್ವಿಕತೆಯನ್ನು ಹೇಳುತ್ತವೆ. ಲೇಖಕರು ಮತ್ತು ಸ್ಫೂರ್ತಿ ಮತ್ತು ಅದರ ಪರಿಣಾಮವು ಸಾಹಿತ್ಯದ ಮೇಲೆ ಆಗುತ್ತದೆ. ಆದರೆ ಅದರಲ್ಲಿ ಬೇರೆ ಸಂಗತಿಗಳೂ ಇರುತ್ತವೆ. ಅದು ಸಮಾಜದ ಒಂದು ಅಂಗವೂ ಆಗಿದೆ. ಸಮಾಜ ಮತ್ತು ಅದರ ಅಗತ್ಯಗಳು ಯಾವ ರೀತಿಯಲ್ಲಿ ಇರುತ್ತದೆಯೋ ಅದಕ್ಕೆ ಸರಿಯಾಗಿ ನಾವು ಬರೆಯುತ್ತೇವೆ. ಆಲೋಚನೆಯನ್ನು ನಾವು ಯಾವ ರೀತಿಯಲ್ಲಿ ಹೇಳಬೇಕು ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದೂ ಇಲ್ಲಿ ಮುಖ್ಯ. ವಾಸ್ತವವಾಗಿ ಸಾಹಿತ್ಯ ಮತ್ತು ಅದರ ಸ್ವರೂಪಕ್ಕೂ ಅದರ ವಸ್ತುವಿಗೂ ಒಂದು ಸಂಬಂಧವಿದೆ. ಸಾಹಿತ್ಯ ಮತ್ತು ಅದರ ಆಶಯವು ಅತ್ಯಂತ ಮುಖ್ಯವಾದದ್ದೂ ಆಗಿದೆ. ಸಾಮಾಜಿಕ ಆಶಯವೆಂದರೆ ಅದು ಬರೀ ಒಂದು ನಿರೂಪಣೆಯು ಮಾತ್ರವೇ ಆಗುವುದೂ ಇಲ್ಲ. ಅದರಲ್ಲಿ ಬೇರೆ ಅಂಶಗಳೂ ಇರುತ್ತವೆ. ಲೇಖಕರು ಅವರ ಆಸಕ್ತಿ ಮತ್ತು ಅವರ ಅನಾಸಕ್ತಿಯೆರಡೂ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಸಾಮಾಜಿಕ ಅನುಭವ ಎಂದರೆ ಅದು ಒಂದು ವಿಷಯವು ಮಾತ್ರವೇ ಆಗುವುದೂ ಇಲ್ಲ. ಕ್ರಿಯೆ, ಪ್ರತಿಕ್ರಿಯೆ, ಸಾರಾಂಶ ಮುಂತಾದವುಗಳು ಸಾಮಾಜಿಕವಾದ ದೃಷ್ಟಿಕೋನವನ್ನು ಹೇಳುತ್ತವೆ.

ನಮ್ಮ ಸಾಮಾಜಿಕ ನಡತೆ ಮತ್ತು ಅದರ ಸ್ವಭಾವವವೂ ಕೂಡಾ ಸಮಾಜದ ಕುರಿತಾಗಿ ನಾವು ತಳೆಯುವ ಅಭಿಪ್ರಾಯವೂ ಆಗಿರುತ್ತದೆ. ಆದರೆ ನಮಗೆ ಗೊತ್ತಿರಬೇಕಾದ ಅಂಶವೆಂದರೆ ಅದರಲ್ಲಿ ಕೆಲವು ಸಂಗತಿಗಳು ಇರುತ್ತವೆ. ಸಾಮಾಜಿಕ ಸಂಬಂಧವೆಂದರೆ ಸಮಾಜದ ಜೊತೆಗೆ, ಅದರ ನಿರ್ದಿಷ್ಟವಾದ ಘಟಕಗಳ ಜೊತೆಗೆ ನಾವು ಸ್ಥಾಪಿಸಿಕೊಳ್ಳುವ ಸಂಬಂಧವೂ ಆಗಿರುತ್ತದೆ. ಅದರಲ್ಲಿ ಜೀವನ ಮತ್ತು

ಅದರ ಅರ್ಥವಂತಿಕೆಯು ಇರುತ್ತದೆ. ಸಾಮಾಜಿಕ ನಡತೆಯೆಂದರೆ ನಾವು ಅದಕ್ಕೆ ತೋರಿಸುವ ಒಂದು ನಿಲುವು ಮಾತ್ರವೇ ಆಗಿರುತ್ತದೆ. ಸಮಾಜದಲ್ಲಿ ಕೆಲವು ಸಂಬಂಧಗಳು ಮೂಲಭೂತವಾಗಿರುತ್ತವೆ. ಅದನ್ನು ಬದಲಿಸುವುದು ಅಸಾಧ್ಯ. ಗಂಡು ಮತ್ತು ಹೆಣ್ಣುಗಳ ಸಂಬಂಧವು ಅತ್ಯಂತ ಅಗತ್ಯದ್ದೂ ಆಗಿದೆ. ಸಮಾಜವು ಅನೇಕ ರೀತಿಯ ಸಂಬಂಧಗಳನ್ನು ಹೊಂದಿರುತ್ತವೆ. ಆದರೆ ಅವುಗಳು ನಿರ್ದಿಷ್ಟವಾದ ಅರ್ಥವನ್ನು ಹೇಳುತ್ತವೆ. ಅದರಲ್ಲಿ ಮೂಲಭೂತವಾದ ನಿಲುವುಗಳು ಇರುತ್ತವೆ. ಸಾಮಾಜಿಕ ಸಂಬಂಧವೆನ್ನುವುದು ನಮ್ಮ ಅಗತ್ಯವನ್ನು ನಿರೂಪಿಸುತ್ತವೆ. ಸಾಮಾಜಿಕ ಸಂಬಂಧವೆನ್ನುವುದು ನಮ್ಮ ಲೋಕ ದೃಷ್ಟಿಯೂ ಹೌದು. ಸಾಹಿತ್ಯದಲ್ಲಿ ನಾವು ನಿರೂಪಣೆಯ ಕಾರಣಕ್ಕಾಗಿ ಅದನ್ನು ಬದಲಿಸುತ್ತೇವೆ, ಹೊಸದಾದ ಆಯಾಮವನ್ನು ಕೊಡುತ್ತೇವೆ, ಸಂಯೋಜನೆಯನ್ನು ಮಾಡುತ್ತೇವೆ. ಆದರೆ ಅದನ್ನು ನಾವು ಅರ್ಥವಾದ ಸಂಗತಿಯೆಂದು ಹೇಳಬೇಕಾಗುತ್ತದೆ. ಮತ್ತು ಅದರಲ್ಲಿ ತಾತ್ವಿಕತೆಯು ಇರುತ್ತದೆ. ಯಾವುದೇ ಸಂಬಂಧವನ್ನು ನಾವು ನಿರ್ಭಾವುಕ ಎಂದು ಹೇಳಬೇಕಾಗಿಯೂ ಇಲ್ಲ. ಇಲ್ಲಿ ಮಾತು ಮತ್ತು ಬರಹವೆರಡೂ ಮೂಲಭೂತವಾಗಿ ಸಮಾಜದ ನಡುವೆ ಸಂಬಂಧವನ್ನು ಸೂಚಿಸುವ ಪ್ರಕ್ರಿಯೆ ಎನ್ನುವುದನ್ನು ನಾವು ಮರೆಯಬಾರದು. ("ಕತ್ತಲಾಯಿತು. ಬಿದ್ದ ದ್ರೋಹಿಗಳನ್ನು ಉಪಚರಿಸುವ ಕೆಲಸ ಪೊಲೀಸರದ್ದಲ್ಲ. ಆದರೂ ಅವರ ಹೃದಯದಲ್ಲಿ ಕರುಣೆ ಬತ್ತಿ ಹೋಗಿದ್ದಂತೆ, ಊರ ಜನರಿಂದ ಅದು ಮಾಯವಾಗಿರಲಿಲ್ಲ. ಯಾರೋ ಶ್ಯಾಮನನ್ನು ಎತ್ತಿದರು. ಮೂರ್ಛಾವಸ್ಥೆಯಲ್ಲಿದ್ದ ಅವನನ್ನು ಎಲ್ಲಿಗೋ ಒಯ್ದು ಉಪಚರಿಸಿದರು. ಆತ ಎಚ್ಚರ ತಿಳಿಯುವಾಗ ಕತ್ತಲಾಗಿತ್ತು; ಮಧ್ಯರಾತ್ರಿ ಸರಿದಿತ್ತು. ಅವನಂತೆಯೇ ಗಾಯಗೊಂಡು ನರಳುತ್ತಿರುವವರು ಸುತ್ತ ಕಾಣಿಸಿದರು. ಆ ಅರೆ ಸ್ಮರಣೆಯಲ್ಲಿ ಅವನಿಗೆ ಅದೆಲ್ಲ ಬರಿಯ ಕನಸಾಗಿ ಕಾಣಿಸಿತು. ಬೆಳಗಾಗುವಾಗ ಆತ ಪೂರ್ಣಪ್ರಜ್ಞ, ಅವನಂತೆ ಆರೇಳು ಮಂದಿ, ಕೈ ಕಾಲು, ತಲೆಗಳಿಗೆ ಅರಿವೆ ಸುತ್ತಿಕೊಂಡು ಮಲಗಿದ್ದಾರೆ. ತಾನು ಎಲ್ಲಿದ್ದೇನೆ, ಯಾರ ಮನೆ ಅದು ಎಂದು ವಿಚಾರಿಸುವ ಮನಸ್ಸಾಯಿತು. ಅವನಂತೆಯೇ ಇರುವ ಗಾಯಗೊಂಡವರನ್ನು ಕೇಳಬೇಕಷ್ಟೆ. ಸ್ವಯಂ ಸೇವಕರು ಯಾರೂ ಇರಲಿಲ್ಲ. ಉಪಚರಿಸುವವರೂ ಇರಲಿಲ್ಲ. ಬೆಳಕು ಹರಿಯುತ್ತಲೇ ಈತ ಎದ್ದು ತಡವರಿಸುತ್ತ ಬಾಗಿಲಿಗೆ ಬಂದ. ಅವನಿಗೆ ಮೊದಲ ದರ್ಶನ ಸ್ವಯಂ-ಸೇವಕರದ್ದಲ್ಲ; ಬದಲು ಪೊಲೀಸರದು. ಅವರೆಲ್ಲರನ್ನೂ ಬಲವಂತದಿಂದ ಎಳೆದು, ಒಂದು ಮೋಟರಿನಲ್ಲಿ ತುಂಬಿಸಿ ಪೊಲೀಸರು ಸಾಗಿಸಿಬಿಟ್ಟರು." {ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ-5, ಔದಾರ್ಯದ ಉರುಳಲ್ಲಿ- ಕಾದಂಬರಿ-4; ಪು.ಸಂ-206} ಲೋಕದೃಷ್ಟಿಯೆನ್ನುವುದಕ್ಕೆ ಕಾರಣವು ಇರುವುದರಿಂದ ಅದರ

ಸ್ವರೂಪವೂ ಬಹಳ ಮುಖ್ಯವಾಗುತ್ತದೆ. ಅದರಲ್ಲಿ ವಿಶಿಷ್ಟತೆಯು ಇರುತ್ತದೆ. ಮನುಷ್ಯ ಮತ್ತು ಅವನ ಚಟುವಟಿಕೆಯು ಮೂಲಭೂತವಾಗಿ ಮನಸ್ಸಿಗೆ ಸಂಬಂಧ ಪಟ್ಟದ್ದೂ ಆಗಿದೆ. ಆದ್ದರಿಂದ ಬರಹ ಮತ್ತು ಮಾತುಗಳು ಸಾಮಾಜಿಕ ಜೀವನವನ್ನು ಹೇಳುತ್ತವೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಒಬ್ಬೊಬ್ಬ ಲೇಖಕರಿಗೆ ಒಂದೊಂದು ಬಗೆಯ ನಿಲುವುಗಳು ಇರುತ್ತವೆ. ಮತ್ತು ಒಂದೊಂದು ಬಗೆಯ ಬರಹಗಳನ್ನು ಅವರು ಮಾಡುತ್ತಾರೆ. ಅದು ಅವರಿಗೆ ಯಾವುದು ಹೆಚ್ಚು ಅನುಕೂಲವನ್ನು ಕಲ್ಪಿಸುತ್ತದೆಯೋ ಅದರ ಸೂಚನೆಯು ಮಾತ್ರವೇ ಆಗುತ್ತದೆ. ವ್ಯಕ್ತಿಯು ಯಾವುದನ್ನು ಹೇಗೆ ಹೇಳಬೇಕು ಎಂದು ಯೋಚಿಸುತ್ತಾನೆಯೋ ಆ ರೀತಿಯಲ್ಲಿ ಅದನ್ನು ನಿರೂಪಿಸುತ್ತಾನೆ. ಕಾರಂತರಿಗೆ ಕಾದಂಬರಿಯು ಹೆಚ್ಚು ಮುಖ್ಯವಾದ ಸಾಹಿತ್ಯ ರೂಪವಾಗಿತ್ತು. ಅದನ್ನು ಅವರು ಆ ರೀತಿಯನ್ನು ಅಳವಡಿಸಿಕೊಂಡರು. ಅವರಿಗೆ ಅದು ಸುಲಭವೆಂದು ಅನಿಸಿರಬಹುದು. ಆದರೆ ಅವರಿಗೆ ಅದು ಅನುಕೂವಾದರೆ ಬೇಂದ್ರೆಗೆ ಕಾವ್ಯವು ಮಾಧ್ಯಮವಾಗಿತ್ತು. ಕುಮಾರವ್ಯಾಸನಿಗೆ ಷಟ್ಪದಿಯೇ ಹೆಚ್ಚು ಅನುಕೂಲವನ್ನು ಕೊಟ್ಟಿತು. ಅವರ ಅಭಿವ್ಯಕ್ತಿಯಲ್ಲಿ ಭಿನ್ನತೆಯೂ ಇದೆ. ಅವರು ಹೇಳಿದ ವಿಷಯಗಳೂ ಬೇರೆಯಾಗಿವೆ. ಅವರ ಆಲೋಚನೆಯನ್ನು ಅವರ ಬರಹಗಳು ಹೇಳುತ್ತವೆ. ಹಾಗೆ ನೋಡುವುದಿದ್ದರೆ ಮನುಷ್ಯ ಮತ್ತು ಅವನ ವರ್ತನೆಗಳನ್ನು ಅವರ ಬರಹಗಳು ಅನನ್ಯವಾಗಿಯೇ ನಮಗೆ ತೋರಿಸಿಕೊಟ್ಟಿವೆ. ನಂಬಿದವರ ನಾಕ ನರಕದಲ್ಲಿ ಬರುವ ವಾಗ್ದೇವಿ ಅಂತರಂಗವು ಕಾರಂತರಿಗೆ ಹೆಚ್ಚು ಮುಖ್ಯವಾಗುತ್ತದೆ. ಅದು ಕಾರಂತರ ಜೀವನದ ದೃಷ್ಟಿಕೋನವನ್ನು ಹೇಳುತ್ತದೆ. ಆ ಕಾದಂಬರಿಯು ಅವರ ನಿಲುವನ್ನು ಸೂಚಿಸುತ್ತದೆ. ಮತ್ತು ಅದರಲ್ಲಿ ಅವರಿಗೆ ಒಂದು ಉದ್ದೇಶವೂ ಇದೆ. ಕಾರಂತರ ಸಾಹಿತ್ಯದ ದೃಷ್ಟಿಕೋನವನ್ನು ಅದು ಸೂಚಿಸುತ್ತದೆ. ಅಂದರೆ ಕಾರಂತರೂ ಒಂದು ಜೀವನ ದರ್ಶನವನ್ನು ಹೇಳುತ್ತಾರೆ. ಅದರಲ್ಲಿ ಧರ್ಮ ಮತ್ತು ಕರ್ಮದ ಭಾಷೆಯೂ ಬೇರೆಯಾಗಿದೆ. ಅದು ಒಂದು ಕಾಲದ ಸನ್ನಿವೇಶವನ್ನು ಹೇಳುತ್ತದೆ. ಅದರಲ್ಲಿ ಒಂದು ಕಾಲದ ಸಮಾಜ ಮತ್ತು ಅದರ ಸಂಬಂಧದ ನಿರೂಪಣೆಯೂ ಇದೆ. ಅವರ ಕಾದಂಬರಿಗಳು ಪ್ರಯೋಗ ಮತ್ತು ಜೀವನದ ದೃಷ್ಟಿಕೋನವನ್ನು ಸೂಚಿಸುತ್ತದೆ. ಕಾರಂತರು ಅವರ ಬರಹಗಳಲ್ಲಿ ಚರಿತ್ರೆ ಮತ್ತು ಸಮಾಜವು ಬದಲಾಗುವುದನ್ನು ಹೇಳಿದರು. ಆದರೆ ಅದು ವ್ಯಕ್ತಿಯ ಅನುಭವವನ್ನು ಮಾತ್ರವೇ ಸೂಚಿಸುತ್ತದೆ. ಕಾರಂತರ ಕಣ್ಣಿನ ಮೂಲಕವೇ ಅದು ನಮಗೆ ಬಂದಿದೆ. ಕಾರಂತರ ದೃಷ್ಟಿಕೋನವು ಇದೆ. ಆದರೆ ಇದೇ ಮಾತನ್ನು ನಾವು ಕುಮಾರವ್ಯಾಸನಿಗೆ ಹೇಳಲು ಬರುವುದಿಲ್ಲ. ಅದು ಸಂಕೀರ್ಣವಾಗಿದೆ. ಅನೇಕ ಸಂಗತಿಗಳನ್ನು ಅದು ಹೇಳುವುದು

ಭಿನ್ನವಾದ ಪ್ರಕ್ರಿಯೆಯಲ್ಲಿ. ಲಿರಿಕಲ್ ಕೆಲಸದಲ್ಲಿ ಕಲಾವಿದ ಮತ್ತು ಅವನ ಭಾವನೆಗಳು ಹಾಗೂ ಅವನ ನಿಲುವುಗಳು ಬೇರೆಯಾಗಬಹುದು. ಈ ಅರ್ಥದಲ್ಲಿ ಬೇರೆ ಬೇರೆ ಪ್ರಕಾರಗಳು ಬೇರೆ ಬೇರೆ ಮನೋಭಾವವನ್ನು ಹೇಳುತ್ತವೆ. ಮತ್ತು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಮಾದರಿಗಳು ಚಾಲ್ತಿಗೆ ಬರುತ್ತವೆ. ಬೇರೆ ಸನ್ನಿವೇಶಗಳು ಬೇರೆ ಸೃಜನಶೀಲತೆಯನ್ನು ಸೂಚಿಸುತ್ತವೆ. ಆದರೆ ನಾವು ಇಲ್ಲಿ ಮತ್ತೆ ಯೋಚಿಸಬೇಕಾದ ಕೆಲವು ಅಂಶಗಳೂ ಇವೆ. ಸಾಹಿತ್ಯ ಮತ್ತು ಸಮಾಜವನ್ನು ಕುರಿತು ಯೋಚಿಸುವಾಗ ಅದರೆ ಚರಿತ್ರೆಯುನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಲೇಖಕರು ಹೇಗೆ ಒಂದು ಸನ್ನಿವೇಶಕ್ಕೆ ಪ್ರತಿಕ್ರಿಯೆಯನ್ನು ಕೊಡುತ್ತಾರೆ ಎನ್ನುವುದೂ ಇಲ್ಲಿ ಬಹಳ ಮುಖ್ಯವಾದ ಸಂಗತಿಯೂ ಆಗುತ್ತದೆ. ಸಾಮಾಜಿಕ ಜೀವನ ಮತ್ತು ಅದರ ವಿವರಣೆಯು ನಮಗೆ ಅತ್ಯಂತ ಮುಖ್ಯವಾದ ಸಂಗತಿಯೂ ಆಗಿರುತ್ತದೆ. ಯಾವುದೇ ಸಮಾಜದಲ್ಲಿ ಬೇರೆ ಬೇರೆ ಒತ್ತಡಗಳು ಕೆಲಸವನ್ನು ಮಾಡುತ್ತವೆ. ನಮ್ಮ ಆಲೋಚನೆ ಮತ್ತು ಅದರ ವಿವರಣೆಗಳು ಬಹಳ ಮುಖ್ಯವಾದುದು ಆಗುತ್ತದೆ. ಆಲೋಚನೆ ಮತ್ತು ಅದರ ಅಭಿವ್ಯಕ್ತಿಯನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಯಾವುದೇ ಒಂದು ವರ್ಗಕ್ಕೆ ಇರುವ ಸಾಮಾನ್ಯವಾದ ತಾತ್ವಿಕತೆ ಮತ್ತು ಅದರ ಸ್ವರೂಪವು ಒಂದು ರೀತಿಯಲ್ಲಿ ಇರುತ್ತದೆ. ಆದರೆ ಕಲಾವಿದನು ಅದನ್ನು ಸ್ವೀಕರಿಸುವುದು ಮತ್ತು ಅದನ್ನು ಪುನಃ ಬೇರೆ ರೀತಿಯಲ್ಲಿ ರೂಪಿಸುತ್ತಾನೆ. ಹಾಗೂ ಅದನ್ನು ನಾವು ಲೇಖಕನ ತಾತ್ವಿಕತೆಯೆಂದು ಹೇಳುತ್ತೇವೆ. ಅವನ ಯಾವುದನ್ನು ಹೇಳುತ್ತಾನೆ ಮತ್ತು ಅದನ್ನು ಹೇಗೆ ಹೇಳುತ್ತಾನೆ ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಒಂದು ವರ್ಗ ಮತ್ತು ಅದರ ಮನೋಭಾವವು ಒಂದು ಕೃತಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಮತ್ತು ಅದರ ಪ್ರಭಾವವು ಸಣ್ಣದು ಅಲ್ಲವೆನ್ನುವುದನ್ನು ನಾವು ಒತ್ತುಕೊಟ್ಟು ನೋಡಬೇಕಾಗುತ್ತದೆ. ಅಂದರೆ ವ್ಯಕ್ತಿಯನ್ನು ಪ್ರಭಾವಿಸುವುದು ಆಯಾ ಸನ್ನಿವೇಶಗಳು. ಅವನ ಆಲೋಚನೆಯನ್ನು ಅದು ಹೇಳುತ್ತದೆ. ಅದು ಅಗತ್ಯವಾಗುತ್ತದೆ. ಆದರೆ ಇಲ್ಲಿ ಮತ್ತೆ ನೋಡಬೇಕಾದ ಅಂಶಗಳು ಇವೆ. ವ್ಯಕ್ತಿ ಮತ್ತು ಅವನ ಮನೋಭಾವವು ಒಂದು ದೃಷ್ಟಿಯಿಂದ ಬಹಳ ಮಹತ್ವದ್ದೂ ಆಗಿರುತ್ತದೆ. ಅಂದರೆ ಅವನ ಮನೋಭಾವವನ್ನು ಒಂದು ಸನ್ನಿವೇಶವು ಆಳುತ್ತದೆ. ಅದರಲ್ಲಿ ಅವನ ಪರಿಸರ ಮತ್ತು ಅವನ ಕುಟುಂಬ, ಅವನ ಕಾಲ ಮುಂತಾದವು ಬಹಳ ಮುಖ್ಯವಾಗುತ್ತದೆ. ಅಂದರೆ ಅದರ ಪ್ರಭಾವವು ಅವನ ಬರಹವನ್ನು ರೂಪಿಸುತ್ತದೆ. ಅದರಲ್ಲಿ ಮತ್ತೆ ಕೆಲವು ಅಂಶಗಳೂ ಇರುತ್ತವೆ. ಅಂದರೆ ಸಮಾಜ ಮತ್ತು ಅದರ ಪರಿಣಾಮವನ್ನು ನಾವು ಶೂನ್ಯವೆಂದು ಹೇಳಲು ಆಗುವುದೂ

ಇಲ್ಲ. ಸಾಹಿತ್ಯವೆಂದರೆ ಅದು ಸಮಾಜದ ಪ್ರಶ್ನೆಯೂ ಆಗುತ್ತದೆ. ಅದರಲ್ಲಿ ಯಾವುದು ಅಗತ್ಯವಿದೆಯೋ ಅದನ್ನು ಮಾತ್ರವೇ ಲೇಖಕನು ಹೇಳುತ್ತಾನೆ. ಅದು ಅವನಿಗೆ ಮುಖ್ಯವೆಂದು ಕಾಣಬೇಕು. ಲೇಖಕ ಮತ್ತು ಅವನ ಸಾಮಾಜಿಕ ರಾಜಕೀಯವಾದ ಸಿದ್ಧಾಂತಗಳು ಅವನ ಬರಹವನ್ನು ಸೂಚಿಸುತ್ತದೆ. ಒಂದು ಚರಿತ್ರೆ ಮತ್ತು ಅದರ ನಿರ್ಣಯವು ಲೇಖಕನನ್ನು ಪ್ರಭಾವಿಸುತ್ತದೆ. ಅದು ಅವನ ಮೇಲೆ ಬೀರುವ ಪ್ರಭಾವವನ್ನು ನಾವು ವಿವರಿಸುವ ಅಗತ್ಯವು ಇಲ್ಲವೆಂದು ಹೇಳಬೇಕಾಗಿಲ್ಲ. ವ್ಯಕ್ತಿ ಮತ್ತು ಅವನ ಸಮಾಜವು ಅವನ ಮೇಲೆ ಉಂಟು ಮಾಡುವ ಪ್ರಭಾವವು ಸಣ್ಣದು ಅಲ್ಲ. ಅದರಲ್ಲಿ ಇಂತಹುದು ಮಾತ್ರವೇ ಪ್ರಭಾವವನ್ನು ಬೀರಿದೆ ಎಂದು ಹೇಳಲು ಬರುವುದೂ ಇಲ್ಲ. ಪ್ರಭಾವಕ್ಕೆ ಬೇರೆ ಬೇರೆ ಆಯಾಮವು ಇರುತ್ತದೆ. ಅದರಲ್ಲಿ ಒಂದು ಸನ್ನಿವೇಶವು ಮಾತ್ರವೇ ಇದೆ ಎಂದು ಹೇಳಲು ಆಗುವುದೂ ಇಲ್ಲ. ಆದರೆ ಸಮಾಜಶಾಸ್ತ್ರೀಯವಾದ ದೃಷ್ಟಿಕೋನವನ್ನು ಹೊರಗಟ್ಟಲು ಅನೇಕ ಸಿದ್ಧಾಂತಗಳು ಬಂದಿವೆ. ಅದನ್ನು ಬೇಕೆಂದೇ ಚಾಲ್ತಿಗೆ ತರಲಾಯಿತು. ಅದರಲ್ಲಿ ವರ್ಗಗಳ ನಿರಾಕರಣೆಯೂ ಇದೆ. ಅದರಲ್ಲಿ ವಾಸ್ತವವಾಗಿ ಅನೇಕ ಸಮಸ್ಯೆಗಳು ಇವೆ. ಇಲ್ಲಿ ಹೇಳಬೇಕಾದ ಮತ್ತೆ ಕೆಲವು ಅಂಶಗಳನ್ನು ನಾವು ನೋಡಬೇಕಾಗುತ್ತದೆ. ಕೆಲವರು ರಾಷ್ಟ್ರವನ್ನು ಮಾತ್ರವೇ ಕೇಂದ್ರವಾಗಿ ಇರಿಸಿಕೊಂಡರು. ಮತೆ ಕೆಲವರು ಕಾಲವನ್ನು ಗಣನೆಗೆ ತರದೆ ಅದನ್ನು ಬರೀ ಕಲೆಯೆಂದು ಮಾತ್ರವೇ ಗುರುತಿಸುವ ಪ್ರಯತ್ನವನ್ನು ಮಾಡುತ್ತಾರೆ. ಅದರ ಉದ್ದೇಶವು ಅತ್ಯಂತ ಸೀಮಿತವಾದ್ದೂ ಆಗಿದೆ. ಇನ್ನು ಕೆಲವರಿಗೆ ಪ್ರದೇಶ ಮಾತ್ರವೇ ಕಾಣಿಸಿತು. ಮತ್ತೊಂದಿಷ್ಟು ಜನರು ಪ್ರಜಾಪ್ರಭುತ್ವ ಮತ್ತು ಅದರ ಉದಾರವಾದವನ್ನು ಮಾತ್ರವೇ ಗ್ರಹಿಸಿದರು. ಅದರ ಮೂಲಕವೇ ಕೆಲವು ಸ್ಥಾಪಿತವಾದ ಹಿತಾಸಕ್ತಿಯನ್ನು ಗುರುತಿಸಿದರು. ಮೌಲ್ಯ ಮತ್ತು ಅದರ ಪ್ರಶ್ನೆಯನ್ನು ಕೆಲವರು ಸೀಮಿತವಾಗಿ ನೋಡುವ ಯತ್ನವನ್ನು ಮಾಡಿದರು. ಜನರು ಮತ್ತು ಅವರ ಮೌಲ್ಯವು ಯಾವ ಬಗೆಯದು ಎನ್ನುವುದೂ ಅಷ್ಟೇ ಮುಖ್ಯ. ಬರೀ ನಮ್ಮ ಎದುರು ಇರುವ ವಾಸ್ತವವನ್ನು ಮಾತ್ರವೇ ನೋಡಿಕೊಂಡು ಅದನ್ನು ವಿವರಿಸುವುದು ಸರಿಯಾದ ಕ್ರಮವಲ್ಲ. ಅದರಲ್ಲಿ ಯಾವುದು ಹಿನ್ನೆಲೆಯು ಆಗಿದೆ ಎಂದೂ ನೋಡಬೇಕಾಗುತ್ತದೆ. ಅಂದರೆ ಇರುವ ವಾಸ್ತವವು ಕಣ್ಣಿಗೆ ಕಾಣಿಸುತ್ತದೆ. ಆದರೆ ಇದರ ಸ್ವರೂಪವನ್ನು ನಾವು ಮೇಲು ನೋಟದೊಂದಿಗೆ ಮಾತ್ರವೇ ವಿವರಿಸುವ ಅಗತ್ಯವಿಲ್ಲ. ಒಂದು ಸಾಮಾನ್ಯೀಕೃತವಾದ ಹೇಳಿಕೆಯು ಯಾವ ರೀತಿಯ ಸಹಾಯವನ್ನು ಮಾಡುವುದಿಲ್ಲ. ಲೇಖಕ ಮತ್ತು ಅವನ ಉದ್ದೇಶವನ್ನು ನೋಡದೆ ಯಾವುದೇ ತೀರ್ಮಾನವನ್ನು ನಾವು ಮಾಡಲು ಬರುವುದೇ ಇಲ್ಲ. ವಾಸ್ತವ ಮತ್ತು ಅದರ ಸಾಧ್ಯತೆಗಳು ಬೇರೆ ಇರುತ್ತವೆ. ಅದರ

ಕಾರಣಗಳೂ ಭಿನ್ನವಾಗುತ್ತವೆ. ವಾಸ್ತವವೆಂದು ಯಾವುದನ್ನು ಹೇಳುತ್ತೇವೆಯೋ ಅದರ ಅರ್ಥಗಳು ಭಿನ್ನವೂ ಆಗಿದೆ. ಅದರ ಹಿಂದೆ ಚರಿತ್ರೆಯು ಇದೆ. ಆ ಚರಿತ್ರೆಯನ್ನು ಲೇಖಕನು ಹೇಗೆ ಗ್ರಹಿಸುತ್ತಾನೆ ಎನ್ನುವುದೂ ಅಷ್ಟೇ ಮುಖ್ಯ. ವಾಸ್ತವ ಮತ್ತು ಅದರ ಆಶಯವನ್ನು ನಾವು ವಿಸ್ತರಿಸಲು ಸಾಧ್ಯ. ಅದರ ಬೇರೆ ಸಮಾಜದಲ್ಲಿ ಇದೆ. ಕಾರಂತರು ಬರೆದಿರುವ ಚೋಮನದುಡಿ ಕೃತಿಯನ್ನು ಬರೀ ಕಾದಂಬರಿಯಾಗಿ ನೋಡದೆ ಅದನ್ನು ಒಂದು ಸಮಾಜದ ಸಮಸ್ಯೆ ಎಂದು ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಚೋಮನು ರಾಷ್ಟ್ರೀಯ ನಾಯಕನು ಅಲ್ಲ. ಆದರೆ ಅವನಿಗೆ ಸಮಸ್ಯೆಯು ಇದೆ. ಅದರಲ್ಲಿ ಅವನ ವ್ಯಕ್ತಿತ್ವ ಮತ್ತು ಅದರ ಸ್ವರೂಪಗಳು ಇವೆ. ಈ ಅರ್ಥದಲ್ಲಿ ಕಾರಂತರು ಒಬ್ಬ ಚೋಮನ ಮೂಲಕ ಒಂದು ಸಮಾಜದ ಸಮಸ್ಯೆಯನ್ನು ಹೇಳುತ್ತಿದ್ದಾರೆ. ಸಾಮಾಜಿಕ ಜೀವನ ಮತ್ತು ಅದರ ಸಮಸ್ಯೆಗಳನ್ನು ಕಾರಂತರು ಹೇಳುತ್ತಾ ಬಂದಿದ್ದಾರೆ. ರಾಷ್ಟ್ರೀಯತೆ ಮತ್ತು ಅದರ ವಿವಿಧ ವರ್ಗಗಳನ್ನು ಕಾರಂತರು ಭಿನ್ನವಾದ ನೆಲೆಯಲ್ಲಿ ಶೋಧಿಸಿದ್ದಾರೆ. ವರ್ಗಗಳು ಮತ್ತು ಅವುಗಳ ವಿವಿಧ ಸಂಸ್ಕೃತಿಗಳು ಕಾರಂತರಿಗೆ ಹೆಚ್ಚು ಮುಖ್ಯವಾಗಿದೆ. ಅವುಗಳನ್ನು ಕಾರಂತರು ಒಂದು ಚರಿತ್ರೆಯು ಮೂಲಕವೇ ಕಂಡುಕೊಳ್ಳಲು ಯತ್ನವನ್ನು ಮಾಡುತ್ತಾರೆ. ರಾಷ್ಟ್ರ ಮತ್ತು ಅದರ ಒಳಗೆ ಇರುವ ತಾರತಮ್ಯವನ್ನು ಕಾರಂತರು ಅತ್ಯಂತ ಯಶಸ್ವಿಯಾಗುವಂತೆ ಕಾರಂತರು ಕಾದಂಬರಿಗಳಲ್ಲಿ ಹೇಳುತ್ತಾರೆ. ಸಂಕಪ್ಪಯ್ಯ, ಕೆಂಚ, ಬೆಳ್ಳಿ, ಸೂರ, ಕೊಕ್ಕರ್ಣೆ ಶೀನ, ಮಂಜುಳೆ ಹೀಗೆ ಅವರ ಕಾದಂಬರಿಗಳಲ್ಲಿ ಅನೇಕ ಪಾತ್ರಗಳು ಬರುತ್ತವೆ. ಮತ್ತು ಆ ಪಾತ್ರಗಳು ಬಂದದ್ದು ರಾಷ್ಟ್ರ ಮತ್ತು ಅದರ ಚರ್ಚೆಯ ಸಂದರ್ಭದಲ್ಲಿ ಎಂದು ಮನಗಾಣಬೇಕಾಗುತ್ತದೆ. ಆದರೆ ಈ ಪಾತ್ರಗಳು ಕೇಲವು ರೀತಿಯ ಚಲನೆಯನ್ನು ಹೇಳುತ್ತವೆ. ಕೆಲವು ಮೊದಲಿನ ಸ್ಥಿತಿಯಲ್ಲಿ ಇಲ್ಲ. ಸೂರ ಮುಂತಾದವರು ಇರುವುದು ಹಳೆಯ ಸಮಾಜದಲ್ಲಿ ಅಲ್ಲ. ಅವರ ಜೀವನ ಮತ್ತು ಅವರ ನೋಟಗಳು ಬದಲಾಗಿವೆ. ಕುಡಿಯರ ಕೂಸು ಕಾದಂಬರಿಯಲ್ಲಿ ಬರುವ ಕೆಂಚ ಬೂದ ಮುಂತಾದವರ ಜೀವನವನ್ನು ನಾವು ಮಧ್ಯಕಾಲೀನ ಸಮಾಜದಲ್ಲಿ ನೋಡಲು ಬರುವುದೂ ಇಲ್ಲ. ಆದರೆ ಜೀವನಕ್ಕೆ ಒಂದು ಚರಿತ್ರೆಯು ಇದೆ. ಅದರಲ್ಲಿ ಅವರ ವರ್ತಮಾನವೂ ಇದೆ. ವಿಲಾಯಿತಿಯವರು ಬಂದಿದ್ದಾರೆ. ಮತಾಂತರ ಮಾಡುತ್ತಾರೆ. ಅವರದು ಒಂದು ಬಗೆಯ ಶೋಷಣೆಯೇ. ಆದರೆ ಅವರ ಶೋಷಣೆ ಮತ್ತು ಅವರು ಒಡ್ಡುವ ಆಮಿಶವು ಬೇರೆ ಬೇರೆ ಕಾರಣಗಳಿಂದ ಸೆಳೆಯುತ್ತದೆ. ಕುಡಿಯರ ಬಡತನ, ಅವರ ಜಾತಿ, ಅವರ ನಂಬಿಕೆಗಳನ್ನು ಮಿಶಿನರಿಗಳು ಬಳಸಿಕೊಳ್ಳುತ್ತವೆ. ತಿರುಮಲ ಭಟ್ಟನ ದರ್ಪವು ಮತ್ತೊಂದು

ಬಗೆಯದು. ಅವನೂ ಸಾಮಾನ್ಯನಲ್ಲ. ಅವನಿಗೆ ಬೇರೆ ಆಸಕ್ತಿಯೂ ಇದೆ. ಮಾರುಕಟ್ಟೆ ಮತ್ತು ಅದರ ಧಾರಣೆಯು ಅವನಿಗೆ ಗೊತ್ತಿದೆ. ಚರಿತ್ರೆ ಮತ್ತು ಅದರ ಸಮಸ್ಯೆಗಳು ವ್ಯಕ್ತಿಯನ್ನು ಹೇಗೆ ರೂಪಿಸುತ್ತವೆ ಎನ್ನುವುದಕ್ಕೆ ಕಾರಂತರ ಕಾದಂಬರಿಗಳಲ್ಲಿ ಹೇರಳವಾದ ಉದಾಹರಣೆಗಳು ಇವೆ. ಆದರೆ ಇದೇ ಸಮಸ್ಯೆಯನ್ನು ಮರಳಿಮಣ್ಣಿಗೆ ಕಾದಂಬರಿಯ ಲಚ್ಚನು ಎದುರಿಸುವುದಿಲ್ಲ. ಸಂದರ್ಭ ಮತ್ತು ವ್ಯಕ್ತಿಗಳು ಬದಲಾಗಿದ್ದಾರೆ. ಆದರೆ ಸಾಹಿತ್ಯ ಮತ್ತು ಅದರ ಪ್ರಶ್ನೆಗಳನ್ನು ನೋಡುವುದು ಮತ್ತು ಗ್ರಹಿಸುವುದು ಮುಖ್ಯವಾಗಿ ನಾವು ಒಂದು ದೃಷ್ಟಿಯಲ್ಲಿ ಮಾತ್ರವೇ. ಆದ್ದರಿಂದ ಸಮಸ್ಯೆಯು ಆಗಿದೆ. ಅದರಲ್ಲಿ ಸಾಹಿತ್ಯವನ್ನು ನಾವು ಅದರ ಸಾಮಾಜಿಕವಾದ ಕಾರ್ಯದ ಹಿನ್ನೆಲೆಯಲ್ಲಿ ನೋಡುವುದು ಅತ್ಯಂತ ಕಡಿಮೆ. ಆಲೋಚನೆಯನ್ನು ನಾವು ಹೆಚ್ಚು ನಿಗದಿ ಮಾಡುತ್ತೇವೆ. ಅದನ್ನು ಸೀಮಿತವಾಗಿ ಗ್ರಹಿಸುವ ಪ್ರಯತ್ನವನ್ನು ಮಾಡುತ್ತೇವೆ. ಹಾಗೆ ನೋಡುವುದಿದ್ದರೆ ಪ್ರಜಾಪ್ರಭುತ್ವ ಮತ್ತು ಅದರ ದೃಷ್ಟಿಕೋನವನ್ನು ಉದಾರವಾಗಿ ಗ್ರಹಿಸಿದ್ದು ಹೆಚ್ಚು. ಮತ್ತು ಜೀವನ ಮತ್ತು ಅದರ ಉದಾತ್ತವಾದ ಮೌಲ್ಯವನ್ನು ಹೇಳುವುದೇ ಭಿನ್ನವಾದ ರೀತಿಯಲ್ಲಿ ಮನುಷ್ಯನು ಉದಾರನಾಗಬೇಕು ಮತ್ತು ಸಾಮಾನ್ಯರನ್ನು ಹೆಚ್ಚು ಪ್ರೀತಿಯಿಂದ ಕಾಣಬೇಕು ಎನ್ನುವುದು ಅದರ ನಿಲುವು. ಆದರೆ ಉದಾತ್ತತೆಯೆಂದರೆ ಏನು ಎನ್ನುವುದೇ ನಿಜವಾದ ಸಮಸ್ಯೆಯೂ ಆಗುತ್ತದೆ. ಯಾವುದು ನಿಜವಾದ ಅರ್ಥದಲ್ಲಿ ಮಾನವೀಯವಾದ ಮೌಲ್ಯ ಎನ್ನುವುದೇ ನಿಜವಾದ ಸಮಸ್ಯೆಯು ಆಗುತ್ತದೆ. ಆದರೆ ಅದನ್ನು ನೋಡುವಾಗ ನಾವು ಅನೇಕ ರೀತಿಯಲ್ಲಿ ಸಮಸ್ಯೆಯನ್ನು ಅನುಭವಿಸುತ್ತೇವೆ. ಪ್ರತಿಯೊಂದು ವರ್ಗವೂ ತನ್ನದೇ ಆದ ಮನೋಸ್ಥಿತಿಯನ್ನು ಅವಲಂಬಿಸುತ್ತದೆ. ಜೀವನ ಮತ್ತು ಅದರ ಅರ್ಥವನ್ನು ಕೂಡಾ ನಿರ್ಧರಿಸುವುದು ಕೂಡಾ ಅದೇ. ಆರ್ಥಿಕತೆ ಮತ್ತು ಸಮಾಜವೆನ್ನುವುದು ಈ ಕಾರಣದಿಂದ ಅತ್ಯಂತ ಮಹತ್ವದ್ದೂ ಆಗಿದೆ. ಅಂದರೆ ಅದು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಅಂದರೆ ಸಾಮಾಜಿಕ ಜೀವನ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ನಮಗೆ ನಿರ್ದಿಷ್ಟವಾದ ಅರ್ಥವನ್ನು ಕೊಡುತ್ತದೆ. ಆದರೆ ಅನೇಕರು ಜೀವನ ಮತ್ತು ಅದರ ವರ್ಗವನ್ನು ತಿರಸ್ಕರಿಸಿದರು. ಮತ್ತು ಅದರ ಪರಿಣಾಮವಾಗಿ ಕೆಲವನ್ನು ಅವರು ನೋಡಿದ ಕ್ರಮವು ಬೇರೆಯಾಗುತ್ತದೆ. ಅಂದರೆ ಅವರು ಜೀವನವನ್ನು ನೋಡುವುದು ಮತ್ತು ಗ್ರಹಿಸುವುದು ಬರೀ ಒಂದು ಸ್ವಾಯತ್ತವಾದ ಸಂಗತಿಯೆನ್ನುವ ಹಾಗೆ. ಅಂದರೆ ಅದರಲ್ಲಿಯೇ ಅವರಿಗೆ ಅರ್ಥ ಪೂರ್ಣತೆಯು ಕಾಣಿಸುತ್ತದೆ. ಸಮಾಜ ಮತ್ತು ಅದರ ಕುರಿತಾದ ಸಾಮಾಜಿಕ ಸಿದ್ಧಾಂತಗಳನ್ನು ಹೊರಗಟ್ಟುವುದು ಹೇಗೆ ಎನ್ನುವುದು ಮಾತ್ರವೇ ಅವರಿಗೆ ಮುಖ್ಯವಾಯಿತು. ಮತ್ತೆ ಕೆಲವರು ರಾಷ್ಟ್ರ ಮತ್ತು ಅದರ

ಸಾಹಿತ್ಯವನ್ನು ಮಾತ್ರವೇ ಬಹಳ ಮುಖ್ಯವೆಂದು ಭಾವಿಸಿದರು. ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವನ್ನು ನೋಡದೆ ಅನೇಕರು ಬರೀ ಸಾಹಿತ್ಯವನ್ನು ಮಾತ್ರವೇ ಕೇಂದ್ರಮಾಡಿಕೊಂಡರು. ಪ್ರಜಾಪ್ರಭುತ್ವ ಮತ್ತು ಅದರ ಪ್ರಶ್ನೆಗಳನ್ನು ಎತ್ತಿಕೊಂಡು ಅನೇಕರು ಮತ್ತೆ ವಾದ ವಿವಾದವನ್ನು ಮಾಡಿದರು. ಸಾಹಿತ್ಯವನ್ನು ಉದಾರತೆಯೊಂದಿಗೆ ವಿವರಿಸುವ ಪ್ರಯತ್ನವನ್ನು ಮಾಡಿದರು. ಮತ್ತೆ ಅವರು ಅದನ್ನು ನೋಡಿದ್ದು ಮತ್ತು ವಿವರಿಸಿದ್ದು ಬರೀ ಒಂದು ಉಪಯೋಗವನ್ನು ಮಾತ್ರವೇ. ಪ್ರಜಾಪ್ರಭುತ್ವ ಮತ್ತು ಅದರ ಉದಾರತೆಯು ಮಾತ್ರವೇ ಸಾಕಾಗುವುದಿಲ್ಲ. ಅದರಲ್ಲಿ ಬೇರೆ ಪ್ರಶ್ನೆಯೂ ಇದೆ. ಮನುಷ್ಯ ಮತ್ತು ಅವನ ಮೌಲ್ಯವೆನ್ನುವುದು ಬರೀ ಒಂದು ಸೀಮಿತವಾದ ಸಂಗತಿಯು ಮಾತ್ರವೇ ಆಗಿಲ್ಲ. ಮನುಷ್ಯ ಮತ್ತು ಅವನ ಜೀವನದ ಮೌಲ್ಯವನ್ನು ನಾವು ಸೀಮಿತವಾಗಿ ನೋಡಲು ಸಾಧ್ಯವೇ ಇಲ್ಲ. ಅನೇಕ ಸರ್ತಿ ಲೇಖಕ ಮತ್ತು ಅವನ ನಂಬಿಕೆಯನ್ನು ನೋಡಬೇಕಾಗುತ್ತದೆ. ಲೇಖಕ ಮತ್ತು ಅವನ ಸಾಧ್ಯತೆಗಳು ರೂಪುಗೊಳ್ಳುವುದು ಮತ್ತು ಅದು ವಿಸ್ತಾರವಾಗುವುದು ನಿಜವಾದ ಒಂದು ಸಾಮಾಜಿಕವಾದ ಸ್ಥಿತಿಯಿಂದ. ವ್ಯಕ್ತಿ ಮತ್ತು ಅವನ ಮೌಲ್ಯಗಳು ಒಂದು ಸಾಧಾರಣವಾದ ಸ್ಥಿತಿಯು ಅಲ್ಲವಾಗಿದೆ. ಅದರಲ್ಲಿ ಅನೇಕ ಅಂಶಗಳು ಸೇರಿಕೊಳ್ಳುತ್ತವೆ. ಆದರೆ ನಮಗೆ ಹೆಚ್ಚು ಅವಕಾಶವನ್ನು ಕೊಡುವುದು ಸಾಹಿತ್ಯದಲ್ಲಿ ವಾಸ್ತವತೆಯು ಮಾತ್ರವೇ ಆಗಿದೆ. ಅದನ್ನು ನಾವು ನೋಡಲು ಹೆಚ್ಚು ಕಷ್ಟ ಪಡಬೇಕಾಗಿಲ್ಲ. ಅದರಲ್ಲಿ ನೇರವಾದ ನಿಲುವು ಇರುತ್ತದೆ. ಆದರೆ ಉಳಿದ ಪ್ರಕಾರಗಳು ನಮಗೆ ವಕ್ರತೆಯನ್ನು ಹೇಳುತ್ತವೆ. ವಕ್ರತೆಯು ನಮಗೆ ಕೊಡುವ ಅನುಭವಗಳು ಬೇರೆ. ಆದರೆ ಅದನ್ನು ಸಮಾಜ ಮತ್ತು ಅನ್ಯವಾದ ನಿಲುವು ಎಂದು ಭಾವಿಸಬಾರದು. ಮನುಷ್ಯ ಮತ್ತು ಅವನ ಆಗತ್ಯಗಳು ಯಾವಾಗಲೂ ಬೇರೆಯಾಗಿರುತ್ತದೆ. ಆದರೆ ಅದನ್ನು ಸಮಾಜದಿಂದ ಬೇರೆ ಎಂದು ತಿಳಿಯಬಾರದು. ವಾಸ್ತವವನ್ನು ಇಟ್ಟುಕೊಂಡು ನಾವು ವಾಸ್ತವವಾದವನ್ನು ನೋಡಬೇಕಾಗುತ್ತದೆ. ವಾಸ್ತವವಾದ ಮತ್ತು ಅದರ ನಿಲುವನ್ನು ನಾವು ವಿಮರ್ಶೆಯಲ್ಲಿ ವಿವರಿಸಲು ಸಾಧ್ಯ. ಅದರ ಬೇರು ಸಮಾಜದಲ್ಲಿ ಇದೆ. ಅದಕ್ಕೂ ಚರಿತ್ರೆಯ ಆಗು ಹೋಗುಗಳಿಗೂ ನೇರವಾದ ಸಂಬಂಧವಿದೆ. ಕಾರಂತರ ಚೋಮನದುಡಿ ಮತ್ತು ಅದರ ನಿಲುವನ್ನು ನಾವು ಆ ಕಾಲದ ಅಗತ್ಯ ಮತ್ತು ಆ ಕಾಲದ ಪ್ರಶ್ನೆಯಾಗಿಯೂ ನೋಡಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಚೋಮನದುಡಿಯಲ್ಲಿ ಬರುವ ಚೋಮನು ರಾಷ್ಟ್ರ ಮತ್ತು ಅದರ ಉತ್ತರಾಧಿಕಾರಿಯು ಅಲ್ಲ. ಅವನಿಗೆ ಕೆಲವು ಸಮಸ್ಯೆಯು ಇದೆ. ಮತ್ತು ಆ ಸಮಸ್ಯೆಯನ್ನು ಅವನು ನೋಡುವುದು ತನ್ನ ಜೀವನ ಮತ್ತು ಅದರ ವಿನ್ಯಾಸದಲ್ಲಿ ಎಂದು

ಮನಗಾಣಬೇಕಾಗುತ್ತದೆ. ಸಾಹಿತ್ಯವು ವಿಕಾಸದ ಹಾದಿಯನ್ನು ಹೇಳುತ್ತದೆ. ಅದು ಚರಿತ್ರೆ ಮತ್ತು ಸಮಾಜವು ಬೆಳೆದು ಬಂದ ಬಗೆಯನ್ನು ನಿರೂಪಿಸುತ್ತದೆ.

ರಾಷ್ಟ್ರ ಮತ್ತು ಅದರ ಸಂಗತಿಯನ್ನು ಇಟ್ಟುಕೊಂಡು ಅದರ ಸ್ವರೂಪವನ್ನು ಸಾಹಿತ್ಯಕ್ಕೆ ಅನ್ವಯಿಸುವುದು ಸಾಧ್ಯವೇ ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗಿದೆ. ಅದನ್ನು ಹಾಗೆ ಹೇಳುವುದು ಸಮರ್ಥನೀಯವಲ್ಲ. ಸಾಹಿತ್ಯವು ಅದರದೇ ಆಗಿರುವ ಅನನ್ಯತೆಯನ್ನು ಹೊಂದಿರುತ್ತದೆ. ಅದನ್ನು ಅದರ ವಿಕಾಸದಲ್ಲಿಯೇ ನೋಡಬೇಕಾಗುತ್ತದೆ. ರಾಷ್ಟ್ರ ಮತ್ತು ಅದರ ಒಳಗಡೆಗೆ ಇರುವ ಬೇರೆ ಬೇರೆ ವರ್ಗಗಳನ್ನು ನಾವು ಅಂಗೀಕರಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಸಾಹಿತ್ಯ ಮತ್ತು ಅದರ ಅರ್ಥವು ಬೇರೆಯಾಗುತ್ತದೆ. ಅದರಲ್ಲಿ ಭಿನ್ನವಾದ ನೆಲೆಗಳು ಇರುತ್ತದೆ. ಚರಿತ್ರೆ ಮತ್ತು ಅದರ ಆಚೆಗೆ ಇರುವ ಸಂಗತಿಗಳು ಎಂದು ವರ್ಗವನ್ನು ಹೇಳಲು ಬರುವುದೂ ಇಲ್ಲ. ಆದು ನಿರ್ದಿಷ್ಟವಾದ ಅರ್ಥವನ್ನು ಹೊಂದಿರುತ್ತದೆ. ವರ್ಗವೂ ಒಂದು ಅರ್ಥದಲ್ಲಿ ನಿರ್ದಿಷ್ಟವಾದ ಒಂದು ಚರಿತ್ರೆಯನ್ನು ಹೇಳುತ್ತದೆ. ಅದರಲ್ಲಿ ಸಮಾಜ ಮತ್ತು ಅದರ ಸ್ವರೂಪವೂ ಇರುತ್ತದೆ. ಅದರಲ್ಲಿ ಆ ರೀತಿಯಲ್ಲಿ ನೋಡುವಾಗ ಅದರ ಅರ್ಥವನ್ನು ನಾವು ಸಮಾಜ ಮತ್ತು ಅದರ ಸೃಷ್ಟಿಯಲ್ಲಿಯೂ ನೋಡಬೇಕಾಗುತ್ತದೆ. ಸಮಾಜ ಮತ್ತು ಅದರ ಅರ್ಥವನ್ನು ಈ ದೃಷ್ಟಿಯಿಂದ ಭಿನ್ನವಾಗಿಯೂ ನೋಡಬೇಕಾಗುತ್ತದೆ. ಅಂದರೆ ಅದು ಸಮಾಜವನ್ನು ಹೇಳುತ್ತದೆ. ಸಮಾಜವೇ ಒಂದು ಅರ್ಥದಲ್ಲಿ ಸಾಹಿತ್ಯವನ್ನು ಸೂಚಿಸುತ್ತದೆ. ಅದರ ನಿಲುವು ಈ ದೃಷ್ಟಿಯಿಂದ ಸಾಮಾಜಿಕ ಸ್ವರೂಪವನ್ನು ಅದರ ಅರ್ಥದಲ್ಲಿ ನೋಡುವಾಗ ಅದರ ಇತಿಹಾಸ ಮತ್ತು ಅದರ ಅಗತ್ಯಗಳೂ ಬಹಳ ಮುಖ್ಯವಾಗುತ್ತದೆ. ಅನೇಕ ಸಾಮಾಜಿಕ ಚಳುವಳಿಗಳು ಒಂದು ಕಾರಣಕ್ಕೆ ಹುಟ್ಟಿರುತ್ತವೆ. ಚಳುವಳಿಗಳು ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದರ ಪರಿಣಾಮವೂ ಸಾಹಿತ್ಯದ ಮೇಲೆ ಆಗುತ್ತದೆ. ಅಂದರೆ ಸಾಹಿತ್ಯವನ್ನು ಅನೇಕ ಸಂದರ್ಭದಲ್ಲಿ ಚಳುವಳಿಗಳು ನಿರ್ದೇಶನ ಮಾಡುತ್ತವೆ. ಅದರ ಸ್ವರೂಪವನ್ನು ನಿರ್ಧರಿಸುತ್ತವೆ. ಸಮಾಜವು ತನಗೆ ಯಾವುದು ಅಗತ್ಯವಾಗಿದೆಯೋ ಅದನ್ನು ಉತ್ಪಾದಿಸುತ್ತವೆ. ಅದರಲ್ಲಿ ಅತ್ಯಂತ ಮುಖ್ಯವಾಗಿ ನಾವು ಗಮನಿಸಬೇಕಾದ್ದು ಅದರ ನಿಜವಾದ ಅಥೆಂಟಿಕ್ ಆದ ಆಸಕ್ತಿಯನ್ನು ಮಾತ್ರವೇ. ಸೌಂದರ್ಯ ಮತ್ತು ಅದರ ಅರ್ಥ ಪೂರ್ಣತೆಯನ್ನು ಈ ದೃಷ್ಟಿಯಿಂದ ನಾವು ಗಮನಿಸಬೇಕಾಗುತ್ತದೆ. ಆದರೆ ಯಾವುದನ್ನು ಈವತ್ತು ನಿಜವಾದ ಕಲಾತ್ಮಕವಾದ ಸೌಂದರ್ಯವೆಂದು ಹೇಳುತ್ತೇವೆಯೋ ಅದು ಕೆಲವು ಸಂಗತಿಗಳನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿಯೂ ಸಾಹಿತ್ಯದಲ್ಲಿ ಬರುವ ವಾಸ್ತವವಾದ ಮಾತ್ರವೇ ಸಾಹಿತ್ಯ ಮತ್ತು ಅದರ ಗುಣಾತ್ಮಕವಾದ

ಮೌಲ್ಯವನ್ನು ನಿರ್ಧರಿಸಲು ಇರುವ ಮಾನದಂಡವಾಗಬೇಕಾಗಿಲ್ಲ. ಅದು ನಿಚ್ಚಳವಾಗಿರುತ್ತದೆ. ಆದರೆ ಅಷ್ಟಕ್ಕೆ ಅದು ಸ್ವಯಂಸಂಪೂರ್ಣವೆಂದು ಹೇಳಬೇಕಾಗಿಯೂ ಇಲ್ಲ. ರಾಷ್ಟ್ರೀಯವಾದಿಗಳು ಸಾಹಿತ್ಯವನ್ನು ಹೇಗೆ ನಿರ್ವಚಿಸುತ್ತಾರೆ ಎನ್ನುವುದಕ್ಕಿಂತ ವರ್ಗಗಳನ್ನು ಹೇಗೆ ಕಾಣುತ್ತಾರೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ರಾಷ್ಟ್ರೀಯತೆ ವರ್ಗವನ್ನು ಹೇಗೆ ಕಾಣುತ್ತದೆ ಮತ್ತು ಅದನ್ನು ಹೇಗೆ ನಿರ್ವಚಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಸಾಹಿತ್ಯವನ್ನು ನೋಡುವಾಗ ಅದರ ಸ್ವರೂಪವನ್ನು ಅದರ ಸಾಮಾಜಿಕತೆಯ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆ.

ಜೀವನ ಮತ್ತು ಅದರ ಸಾಧ್ಯತೆಯು ಯಾವಗಲೂ ಒಂದು ನಿಲುವನ್ನು ಹೊಂದಿರುವುದಿಲ್ಲ. ಮತ್ತು ಅದನ್ನು ಬರೀ ಒಂದು ರಾಷ್ಟದ ನಿರ್ವಚನವಾಗಿ ನೋಡಬೇಕಾಗಿಯೂ ಇಲ್ಲ. ಜೀವನ ಮತ್ತು ಅದರ ಸಾಧ್ಯತೆಯು ನಿರ್ಧಾರವಾಗುವುದು ಬರೀ ಒಂದು ರಾಷ್ಟ್ರೀಯತೆಯ ಆಧಾರದ ಮೇಲೆ ಅಲ್ಲವೆನ್ನುವುದು ಇಲ್ಲಿ ಉಲ್ಲೇಖನೀಯ. ವರ್ಗ ಮತ್ತು ಅದರ ರಚನೆಯು ಬರೀ ಒಂದು ದೇಶದ ಆಧಾರದ ಮೇಲೆ ನಡೆಯುವುದಿಲ್ಲ. ಅದರ ಅರ್ಥವು ಇರುವುದು ಅದರ ಆರ್ಥಿಕತೆಯನ್ನು ಹೇಳುತ್ತದೆ. ಔದಾರ್ಯದ ಉರುಳಲ್ಲಿ ಇದಕ್ಕೆ ಉದಾಹರಣೆಯಾಗಿದೆ.

ವರ್ಗವೇ ವಾಸ್ತವವಾಗಿ ಒಂದು ನಿಜವಾದ ಸಾಧ್ಯತೆಯೂ ಆಗುತ್ತದೆ. ಅಂದರೆ ವರ್ಗವೇ ಮನೋಭಾವವನ್ನು ಹೇಳುತ್ತದೆ. ಅದರಲ್ಲಿ ಕೆಲವು ಮುಖ್ಯವಾದ ಸಂಗತಿಯು ಇರುತ್ತದೆ. ವರ್ಗವು ನಿಸ್ಸಂಶಯವಾಗಿ ಒಂದು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಆದರೆ ಅದರೊಂದಿಗೆ ನಾವು ಒಂದು ಸಂಗತಿಯನ್ನು ಹೇಳಬೇಕಾಗುತ್ತದೆ. ಅಂದರೆ ವ್ಯಕ್ತಿಯನ್ನು ನಾವು ನೋಡಬೇಕಾದ್ದು ಅವನ ಸಮಾಜ ಮತ್ತು ಅವನ ಪರಿಸರದ ಹಿನ್ನೆಲೆಯಲ್ಲಿ. ಅದರ ಪರಿಣಾಮವಾಗಿ ಕೆಲವು ತಾತ್ವಿಕತೆಗಳು ಉಂಟಾಗುತ್ತವೆ. ಮತ್ತು ಅದರ ಕಾರಣವಾಗಿ ನಾವು ವರ್ಗವನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದರ ಅರ್ಥವೂ ಬೇರೆಯಾಗುತ್ತದೆ. ಆದರೆ ಇಂತಹಾ ಸಂದರ್ಭದಲ್ಲಿ ನಾವು ಅದು ಹೇಗೆ ಸಮಾಜ ಮತ್ತು ಸಾಹಿತ್ಯವನ್ನು ನಿರ್ಧರಿಸುತ್ತದೆ ಎಂದೂ ನೋಡಬೇಕಾಗುತ್ತದೆ. ಸಾಹಿತ್ಯವನ್ನು ಅದು ನಿರ್ದೇಶಿಸುತ್ತದೆ. ಸಮಾಜದಲ್ಲಿ ಸಾಹಿತ್ಯ ಮತ್ತು ಅದರ ಸ್ವರೂಪವು ಹೇಗೆ ನಿರ್ಧಾರವನ್ನು ಮಂಡಿಸುತ್ತದೆ. ಮತ್ತು ಅದರ ಅಗತ್ಯವು ಹೇಗಾಗಿದೆ ಎನ್ನುವುದನ್ನು ಇಲ್ಲಿ ನೋಡಬೇಕಾಗುತ್ತದೆ. ಅಂದರೆ ಸಾಹಿತ್ಯವನ್ನು ಸಮಾಜವು ನಿರ್ಧಾರ ಮಾಡುತ್ತದೆ. ಅಂದರೆ ಅದರಲ್ಲಿ ಸಾಮಾಜಿಕ ಜೀವನವು ಇರುತ್ತದೆ. ಅದರಲ್ಲಿ ಸಮಾಜವು ನಿರ್ಣಾಯಕವಾಗುತ್ತದೆ. ಸಾಹಿತ್ಯವೂ ಕೂಡಾ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಅದರಲ್ಲಿ ಈ ದೃಷ್ಟಿಯಿಂದ

ಅರ್ಥವಂತಿಕೆಯು ಇರುತ್ತದೆ. ಒಂದು ಸಮಾಜದಲ್ಲಿ ಬುದ್ಧಿಜೀವಿಗಳ ಪಾತ್ರವನ್ನು ನಿರಾಕರಿಸಲು ಬರುವುದೂ ಇಲ್ಲ. ಒಂದು ದೇಶದಲ್ಲಿ ವಿವಿಧ ವರ್ಗಗಳಿದ್ದು ನಿರ್ಣಾಯಕವೂ ಆಗಿರುತ್ತದೆ. ಜನಾಂಗವೂ ಅಷ್ಟೇ ಮುಖ್ಯವಾದ ಸಂಗತಿಯು ಆಗುತ್ತದೆ. ಅಂದರೆ ಅದನ್ನು ಹೊರತು ಪಡಿಸಿದ ಸಂಗತಿಗಳು ಇಲ್ಲವಾಗಿದೆ. ಪ್ರತಿ ಸಮಾಜಕ್ಕೂ ಅದರದೇ ಆದ ಒಂದು ನಿಲುವು ಇರುತ್ತದೆ. ಅದನ್ನು ಅದರ ಸೃಜನಶೀಲತೆಯು ಹೇಳುತ್ತದೆ. ಹಾಗೆ ನೋಡುವುದಿದ್ದರೆ ಸೃಜನಶೀಲತೆಯು ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತದೆ. ಸಮಾಜದಲ್ಲಿ ಬುದ್ಧಿಜೀವಿಗಳ ಪಾತ್ರವನ್ನು ನಿರಾಕರಿಸಲು ಬರುವುದೇ ಇಲ್ಲ. ಆ ಬುದ್ಧಿಜೀವಗಳು ಯಾವುದನ್ನು ಹೇಳುತ್ತಾರೆ ಮತ್ತು ಅವರ ಪಾತ್ರವು ಯಾವ ಬಗೆಯದು ಎನ್ನುವುದು ಮಾತ್ರವೇ ಬಹಳ ಮುಖ್ಯವಾಗುತ್ತದೆ. ಯಾವುದೇ ರಾಷ್ಟ್ರವು ತನ್ನದೇ ಆದ ಚೌಕಟ್ಟನ್ನು ಹೊಂದಿರುತ್ತದೆ ಮತ್ತು ಅದರಲ್ಲಿ ನಿಜವಾದ ಸಂಗತಿಯು ಯಾವ ಬಗೆಯದು ಎನ್ನುವುದು ಬಹಳ ಮುಖ್ಯವಾಗುತ್ತದೆ. ಅಂದರೆ ನಿಜವಾಗಿಯೂ ಅದು ಹುಸಿಯಾದ ರಾಷ್ಟ್ರವಾದವನ್ನು ಹೇಳುತ್ತದೆ ಎಂದರೆ ಅದರಲ್ಲಿ ಅರ್ಥವೇ ಇರುವುದಿಲ್ಲ. ಅದು ಅನಗತ್ಯವಾದ ಒಂದು ನಿಲುವನ್ನು ಹೊಂದಿರುತ್ತದೆ. ಆ ಕಾಲಕ್ಕೆ ಅನುಗುಣವಾಗಿ ಸಾಮಾಜಿಕ ಜೀವನ ಮತ್ತು ಅದರ ಸಾಂಸ್ಕೃತಿಕವಾದ ನಿಲುವನ್ನು ಹೊಂದಿರುತ್ತದೆ. ಮತ್ತು ಆಯಾ ಕಾಲಕ್ಕೆ ಅನುಗುಣವಾಗಿ ಧರ್ಮ ಮತ್ತು ನಂಬಿಕೆಗಳು ಬದಲಾಗುತ್ತವೆ. ಕೆಲವು ನಿರ್ದಿಷ್ಟವಾದ ತಾತ್ವಿಕತೆಯು ಹುಟ್ಟುತ್ತದೆ. ಯಾವುದನ್ನು ನಾವು ನಿಜವಾದ ಪರಂಪರೆ ಎಂದು ಹೇಳುತ್ತೇವೆಯೋ ಅದರ ಅರ್ಥವು ಆಯಾ ಕಾಲದ ಸನ್ನಿವೇಶಗಳಿಂದ ನಿರ್ಧಾರವಾಗುತ್ತದೆ. ಆದರೆ ಸಾಹಿತ್ಯಕ್ಕೂ ಒಂದು ನಿರ್ದಿಷ್ಟವಾದ ತಳಹದಿಯು ಇರುತ್ತದೆ. ಅದನ್ನು ಲೇಖಕನು ವಿಸ್ತರಿಸುತ್ತಾನೆ. ಅವನಿಗೆ ಅದು ಅಗತ್ಯವೂ ಆಗುತ್ತದೆ. ಅದರಲ್ಲಿ ಲೇಖಕನು ತನ್ನ ಜ್ಞಾನ ಮತ್ತು ಅರಿವನ್ನು ವಿವರಿಸುತ್ತಾನೆ ಲೇಖಕರು ಮೂಲಭೂತವಾಗಿ ಒಂದು ತಾತ್ವಿಕತೆಯ ಮುಖಂಡತ್ವವನ್ನು ವಹಿಸಬೇಕಾಗುತ್ತದೆ. ಅದರಲ್ಲಿ ಅದರ ಅಗತ್ಯವೂ ಇರುತ್ತದೆ. ಅಂದರೆ ಲೇಖಕ ಮತ್ತು ಅವನ ಜವಾಬ್ದಾರಿಯೂ ಬಹಳ ಮುಖ್ಯವಾಗುತ್ತದೆ. ಆದರೆ ಲೇಖಕನಿಗೆ ಸರಿಯಾದ ಒಂದು ದರ್ಶನವು ಇಲ್ಲದೆ ಹೋದಲ್ಲಿ ಅವನೂ ಜನರನ್ನು ತಪ್ಪುದಾರಿಗೆ ಕರೆದೊಯ್ಯುತ್ತಾನೆ. ಲೇಖಕನಿಗೆ ಚರಿತ್ರೆ ಮತ್ತು ಸಮಾಜದ ಸರಿಯಾದ ಅರಿವು ಇಲ್ಲದೆ ಹೋದಲ್ಲಿ ಈ ಸಮಸ್ಯೆಯು ಉಂಟಾಗುತ್ತದೆ. ಚಳುವಳಿ ಮತ್ತು ಅದರ ಅಗತ್ಯವನ್ನು ಲೇಖಕನು ಗ್ರಹಿಸದೇ ಇದ್ದರೆ ಅದರ ಸ್ವರೂಪವು ಬದಲಾಗುತ್ತದೆ. ಅದರಲ್ಲಿ ಒಂದು ಗಂಭೀರವಾದ ನಿಲುವು ಇರಬೇಕಾಗುತ್ತದೆ. ಮತ್ತು ಅದನ್ನು ರೂಪಿಸುವ ಅಗತ್ಯವೂ ಇರುತ್ತದೆ. ಅಂದರೆ ಲೇಖಕರು ಕೆಲವು

ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಅದು ಬಹಳ ದೊಡ್ಡದೂ ಹೌದು. ಲೇಖಕನು ಇಂದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುವ ಅಗತ್ಯವು ಇದೆ. ನಾವು ಈ ವಿಷಯದಲ್ಲಿ ಸಿನಿಕರಾಗಬೇಕಾದ ಅಗತ್ಯವೂ ಇಲ್ಲ. ಅದು ಒಂದು ವಿಶಿಷ್ಟವಾದ ಪ್ರಕ್ರಿಯೆಯೂ ಹೌದು. ಅದು ಗಂಭೀರವಾದ ಭಾವನೆಯು ಆಗುತ್ತದೆ. ಅಂದರೆ ವ್ಯಕ್ತಿಗಳು ತಮಗೆ ಬೇಕಾದ್ದನ್ನು ಮಾತ್ರವೇ ಹೇಳುವುದು ಅಲ್ಲ, ಅದರಲ್ಲಿ ಅವನು ಯಾರ ಪರವಾಗಿ ಮಾತಾಡುತ್ತಾನೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಪ್ರಜೆಗಳಿಗೆ ಭೂತಕಾಲವಿದೆ ಮತ್ತು ಅವರಿಗೆ ಭವಿಷ್ಯವೂ ಇದೆ. ಸಾಮಾಜಿಕ ಚಳುವಳಿ ಮತ್ತು ಒಂದು ಆದರ್ಶವು ಜೊತೆಯಲ್ಲಿ ಹೋಗಬೇಕಾಗುತ್ತದೆ. ಆದರೆ ಇಲ್ಲಿ ಮತ್ತೆ ಬೇರೆ ಸಮಸ್ಯೆಗಳೂ ಇರುತ್ತವೆ. ನಿತ್ಯದ ಸಮಸ್ಯೆ ಮತ್ತು ಅದರ ಪರಿಣಾಮಗಳು ಬೇರೆ ಬೇರೆ ವಿನ್ಯಾಸಗಳನ್ನು ಹೊಂದಿರುತ್ತವೆ. ವ್ಯಕ್ತಿ ಮತ್ತು ಸಮುದಾಯದ ಪ್ರಶ್ನೆಯು ಬಹಳ ಮುಖ್ಯವಾದ್ದು ಆಗಿದೆ. ಸಮುದಾಯಕ್ಕೆ ಒಂದು ಚರಿತ್ರೆಯು ಇದೆ. ಸ್ಥಳ ಮತ್ತು ಕಾಲವು ನಮಗೆ ಕೆಲವನ್ನು ಹೇಳುತ್ತದೆ. ವ್ಯಕ್ತಿಯನ್ನು ಒಂದು ಸಮುದಾಯವು ನಿರ್ದಿಷ್ಟವಾಗಿ ಸಂಯೋಜನೆ ಮಾಡುತ್ತದೆ. ನಮ್ಮ ವಾಸ್ತವ ಎಂದರೆ ಅದು ಅದು ನಮ್ಮ ಸಮುದಾಯದ ಪ್ರಶ್ನೆಯೂ ಆಗುತ್ತದೆ. ವ್ಯಕ್ತಿ ಮತ್ತು ಅವನ ಸಮಗ್ರತೆಯು ಒಂದು ಬಗೆಯಲ್ಲಿ ಇರುತ್ತದೆ. ಅದೇ ರೀತಿಯಲ್ಲಿ ನಮಗೆ ವ್ಯಕ್ತಿ ಮತ್ತು ಅವನ ಆಲೋಚನೆಯನ್ನು ಕೆಲವೊಮ್ಮೆ ಒಂದು ಗುಂಪು ನಿರ್ದೇಶಿಸುತ್ತದೆ. ಆದರೆ ನಮಗೆ ದೊರೆಯುವ ಜ್ಞಾನಗಳು ಒಂದೇ ರೂಪದಲ್ಲಿ ಇರುವುದೂ ಇಲ್ಲ. ಬುದ್ಧಿವಂತನಾದ ಮನುಷ್ಯನು ತನ್ನತನವನ್ನು ತಾನೇ ಸಾಧಿಸಿಕೊಳ್ಳುತ್ತಾನೆ. ವ್ಯಕ್ತಿ ಮತ್ತು ಅವನ ಜ್ಞಾನವು ಒಂದು ಬಗೆಯದು. ಅವನು ಸಾಧಿಸಿಕೊಳ್ಳುತ್ತಾನೆ. ಅದರ ಜೊತೆಗೆ ವ್ಯಕ್ತಿ ಮತ್ತು ಅವನ ವ್ಯಕ್ತಿತ್ವ ಅಂದರೆ ಅದು ಒಂದು ಅಭಿಪ್ರಾಯವು ಮಾತ್ರವೇ ಅಲ್ಲ.

ವಾಸ್ತವ ಮತ್ತು ಮಿಥ್ಯೆಗಳು

ಈ ಚರ್ಚೆಯು ಪ್ರಾರಂಭವಾಗಿದ್ದು ಆಧುನಿಕತೆ ಮತ್ತು ಆಧುನಿಕೋತ್ತರದ ಸಮಸ್ಯೆಯಲ್ಲಿ. ಒಂದು ಸಮಸ್ಯೆಯನ್ನು ಎತ್ತಿಕೊಂಡು ಇದನ್ನು ಪ್ರಾರಂಭ ಮಾಡಬಹುದು: ಇದು ಕಾರಂತರ ಕಾದಂಬರಿಯಲ್ಲಿ ಬರುತ್ತದೆ: "ತಲೆಮಾರುಗಳಿಂದಲೂ ನಂಬಿ ಬಂದಿರುವ ದೇವರನ್ನು ಮರೆತು, ತಾನಿಂಥ ಉದ್ಧಟ ಕೆಲಸವನ್ನು ಮಾಡುವುದು ಸರಿಯಲ್ಲ – ಪಾದ್ರಿ ಮತದವರು ಸಾಯುವುದಿಲ್ಲವೆ? ಕಷ್ಟ, ಸುಖ ಒಂದಲ್ಲ ಒಂದು ರೀತಿಯಿಂದ ಕ್ರಿಸ್ತೇಯರಿಗೂ ತಪ್ಪಿದುಂಟೆ ?... ಏನೇ ಇರಲಿ, ಇದ್ದಂತೆ ಇದ್ದು, ಬಂದುದನ್ನು ಅನುಭವಿಸುತ್ತೇನೆ" – ಚೋಮ (ಚೋಮನ ದುಡಿ, ಪು.133).

"ಅದೇ! ಅಯ್ಯೋ ಅಪ್ಪಾ, ಸುಮ್ಮನೆ ಇಲ್ಲದೆ ಚಿಂತೆಯನ್ನು ನೀನು ಕಟ್ಟಿಕೊಳ್ಳುತ್ತೀ, ನಾವು ಹೊಲೆಯರಾಗಿ ಹುಟ್ಟಿ, ನಮ್ಮ ಅಂತಸ್ತಿಗೂ ಮೀರಿದ ಆಸೆ ಹಿಡಿದರೆ ಹೇಗೆ? ಅದೃಷ್ಟ ಬೇಡವೆ? ಮುಖ್ಯ ಬೇಕು ಅದೃಷ್ಟ. ದೇವರು ಹಣೆಯಲ್ಲಿ ಬರೆದಿರಬೇಕು" – ಬೆಳ್ಳಿ (ಚೋಮನ ದುಡಿ, 110).

ಕಾರಂತರು ಈಗಿನವರ ದೃಷ್ಟಿಯಲ್ಲಿ ಹಳಬರು. ವಾಸ್ತವವನ್ನು ಕಾರಂತರು ಆಗ ಹೇಳಿದರು ಅದು ಅವರ ಕಾದಂಬರಿಗಳ ಅತ್ಯಂತ ಮುಖ್ಯವಾದ ಒಂದು ಜೀವನದ ಚಿತ್ರಣವೂ ಆಗಿದೆ. ಅವರಿಗೆ ಅದು ಅಗತ್ಯವಾಗಿತ್ತು ಹಾಗೆ ನೋಡಿದರೆ ಕಾರಂತರದ್ದು ಒಂದು ಪ್ರತಿರೋಧದ ವ್ಯಕ್ತಿತ್ವ, ಅವರು ಅನೇಕವನ್ನು ನೋಡಿದರು ಮತ್ತು ಬರೆದರು. ಅದುವೇ ನಮಗೆ ಕುತೂಹಲದಾಯಕ. ಅವರು ಬರೆದುದು ನಮಗೆ ಈಗ ಒಂದು ಅದ್ಭುತವಾದ ಸಂಗತಿಯ ಹಾಗೆ ಕಾಣಿಸುತ್ತದೆ. ಅವರು ಬರೆದದ್ದು ಜೀವನವನ್ನು ಮತ್ತು ಅದರ ಹೋರಾಟವನ್ನು ಕುರಿತು.

ಆಧುನಿಕೋತ್ತರವೆನ್ನುವುದು ನಮಗೆ ಈವತ್ತು ಬಹಳ ದೊಡ್ಡ ಸುನಾಮಿಯಾದ ಅಲೆಯಂತೆ ಕಾಣುವಾಗಲೇ ನಮಗೆ ತೇಜಸ್ವಿ ಮತ್ತು ಕಾರಂತರು ಹಾಗೂ ದೇವನೂರರ ಬರಹಗಳು ಬೇರೆ ಆಯಾಮಾವನ್ನು ಕಲ್ಪಿಸುತ್ತವೆ. ಅದರಲ್ಲಿಯೂ ನಮಗೆ ಕಾರಂತರು ಅನೇಕ ವಿವರಣೆಗಳನ್ನು ಕೊಡುತ್ತಾರೆ. ಅದರಲ್ಲಿ ಅತ್ಯಂತ ಮುಖ್ಯವಾದದ್ದು ಯಾರನ್ನು ಸಮಾಜದಲ್ಲಿ ನಾವು ಅಧಿಕೃತ ವ್ಯಕ್ತಿಗಳು ಮತ್ತು ಯಜಮಾನರುಗಳು ಎಂದು ತಿಳಿದ್ದೇವೆಯೋ ಅವರ ವಿರುದ್ಧ ಇರುವ ಜನರನ್ನು ಕುರಿತು ಅವರು ಬರೆದರು. ಅವರು ಅಂದರೆ ಸಾಮಾನ್ಯರಾದ ಜನರು ಹೇಗೆ ಬದುಕುತ್ತಿದ್ದಾರೆ ಮತ್ತು ಅವರ ಜೀವನವು ಹೇಗಿದೆ ಎನ್ನುವ ದಟ್ಟವಾದ ಒಂದು ವಿವರಣೆಯು ನಮಗೆ ಅವರ ಕಾದಂಬರಿಗಳಲ್ಲಿ ಸಿಗುತ್ತದೆ. ಜೀವನವೇ ಅವರಿಗೆ ಒಂದು ನೋಟವನ್ನು ಕೊಟ್ಟಿದೆ. ಇನ್ನೊಂದು ಸಂಗತಿಯನ್ನು ನಾವು ಬೇರೆ ಮಾದರಿಗಳಿಂದ ತೆಗೆದುಕೊಳ್ಳಬಹುದು. ಅದನ್ನು ತೇಜಸ್ವಿಯವರು ಹೇಳುತ್ತಾರೆ ನಮಗೆ ಇರುವ ಜ್ಞಾನಗಳು ಮತ್ತು ಅವುಗಳ ಸ್ವರೂಪಗಳು ಬೇರೆ ಬೇರೆ ಥರದಲ್ಲಿ ಇರುತ್ತವೆ. ಅದನ್ನು ಹೀಗೆಯೂ ಹೇಳಬಹುದು: ಪಾರಂಪರಿಕವಾದ ಜ್ಞಾನ. ಕುಲಜ್ಞಾನ, ವ್ಯಾವಹಾರಿಕವಾದ ಜ್ಞಾನ, ಶಾಸ್ತ್ರ ಜ್ಞಾನ ಮತ್ತು ಆಧಿಭೌತಿಕವಾದ ಜ್ಞಾನ. ಜ್ಞಾನವನ್ನು ನಾವು ಅರಿವು ಎನ್ನುವ ಅರ್ಥದಲ್ಲಿ ಬಳಸುತ್ತೇವೆ. ನಮಗೆ ಬಂದ ಆಧುನಿಕ ಚಿಂತನೆಗಳು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದಾಗಿದೆ.

ಜಗತ್ತನ್ನು ಒಂದು ಕಾಲಕ್ಕೆ ಆಳುತ್ತಿದ್ದ ಪುರಾಣಗಳು ಅದರ ಅನ್ವಯಗಳು ಹೊಸದಾದ ಅರ್ಥವನ್ನು ಕೊಟ್ಟವು ಮತ್ತು ಜೀವ ವಿಜ್ಞಾನವೆಂದರೆ ಬೇರೆ ಎನ್ನುವುದು ನಮಗೆ ಅರ್ಥವಾಯಿತು. ಈ ದೃಷ್ಟಿಯಿಂದ ಪುನರುಜ್ಜೀವನ ಮತ್ತು ಅದರ ಅನಂತರದ ಕಾಲಘಟ್ಟವು ಅತ್ಯಂತ ಮಹತ್ವದ್ದು. ಪುನರುಜ್ಜೀವನದ ಅನಂತರ ತತ್ವಜ್ಞಾನ ಮತ್ತು ಅದರ ಬಗ್ಗೆ ಇದ್ದ ದೃಷ್ಟಿಕೋನವು ವ್ಯತ್ಯಾಸವಾಯಿತು. ಆಧುನಿಕ ಚಿಂತನೆಯು ಬದಲಾದದ್ದು ಸ್ಪಷ್ಟವಾಗಿದೆ. ತತ್ವಜ್ಞಾನ ಮತ್ತು ಅದರ ಪ್ರಯೋಗಗಳು ನಮಗೆ ಅನ್ವಯವಾಗುತ್ತದೆ ಎನ್ನುವುದು ಈ ಕಾಲದಲ್ಲಿ ಚರ್ಚೆಗೆ ಬಂದಿರುವುದೂ ನಿಜ. ಜೀವನ ಮತ್ತು ಅದರ ಅರ್ಥವನ್ನು ಕಾರಂತರು ಒಂದು ಥರ ಹುಡುಕಿದರು. ಕುವೆಂಪು ತತ್ವಜ್ಞಾನವನ್ನು ಮತ್ತೆ ಕಟ್ಟಲು ಯತ್ನವನ್ನು ಮಾಡಿದರು. ಮನಸ್ಸು ಮತ್ತು ದೇಹ, ಮನಸ್ಸು ಮತ್ತು ನಿಸರ್ಗ ಎನ್ನುವುದು ಭಿನ್ನವಾದ ವಿವರಣೆಗೆ ಸಿಕ್ಕಿದ್ದೂ ಅಷ್ಟೇ ನಿಜ. ಹಾಗೆ ನೋಡಿದರೆ ನಮಗೆ ಆಧುನಿಕ ಚಿಂತನೆ ಮತ್ತು ಹಿಂದಿನ ಚರಿತ್ರೆಗಳು ಹೇಗೆ ಬೇರೆಯಾದವು ಎನ್ನುವುದು ಎಲ್ಲರು ತಿಳಿದಿದ್ದಾರೆ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಆಧುನಿಕ ಯುಗದಲ್ಲಿ ಭೂಮಿ ಮತ್ತು ಅದರ ಸ್ವರೂಪವನ್ನು ಅರ್ಥಮಾಡಿಕೊಳ್ಳುವಾಗ ನಮಗೆ ಬೇರೆ ಬೇರೆ ಪರಿಕರಗಳು ನಮಗೆ ಸಹಾಯವನ್ನು ಮಾಡಿದವು. ಅದರಲ್ಲಿ ಭೂಪಟ, ಕೋನಗಳು ಮತ್ತು ಇತರ ಸಂಗತಿಗಳು ನಮಗೆ ಉಪಯೋಗಕ್ಕೆ ಬಂದವು. ಸಂಪತ್ತು ಮತ್ತು ಅದರ ಸ್ವರೂಪವು ಬೇರೆಯಾಯಿತು. ಅದರ ಜೊತೆಗೆ ನಮಗೆ ಇದ್ದ ಅಧಿಕಾರದ ಕಲ್ಪನೆಯು ವ್ಯತ್ಯಾಸವಾದವು. ಕಾರಂತರ DOG ಕಟ್ಟಿದ ಸ್ವರ್ಗದಲ್ಲಿ ಬರುವ ಮಾತುಗಳು ಹೀಗಿವೆ. "ಅವರು–ಪರವಾಯಿಲ್ಲ: ನೀವು ಸಹೋದ್ಯೋಗಿಗಳು ಅಂದ ಮೇಲೆ ವಂಚನೆ ಇಲ್ಲದೆ ಮಾತನಾಡುವುದು ನನ್ನ ಕರ್ತವ್ಯ.

ನಾನು–ನೋಡಿ, ನೀವು 'ಹರಿಜನರ' ಸಲುವಾಗಿ ಎಂದಿರಿ. ನಾನು ಸಣ್ಣವನಿದ್ದಾಗ ನಮ್ಮೂರಿನ ಅಸ್ಪೃಶ್ಯ ವರ್ಗದವರನ್ನು ಅವರವರ ಜಾತಿಯ ಹೆಸರಿನಿಂದ ಕರೆಯುತ್ತಿದ್ದರು. ಆದರೂ ನಾವು ಜಂಭ ಕೊಚ್ಚಿಕೊಳ್ಳುತ್ತೇವೆ–ನಮ್ಮದು ಜಾತ್ಯಾತೀತ ರಾಷ್ಟ್ರ ಎಂತ.

ಗಾಂಧೀಜಿಯವರು ಯಾರನ್ನು ಹರಿಜನ ಎಂದು ಕರೆದರೋ, ಅವರನ್ನೇ ನಮ್ಮ ಹಳೆ ಮೈಸೂರಿನವರು ಸರ್ಕಾರಿ ರೆಕಾರ್ಡುಗಳಲ್ಲಿ 'ಆದಿ ಕರ್ನಾಟಕರು' ಎಂದು ಲಿಖಾವಟ್ ಮಾಡಿದರು. ಇವೆರಡರಲ್ಲಿ ಒಂದು ಇದ್ದರೆ ಸಾಕಿತ್ತು. ಅಲ್ಲವೇ?

ಅವರು–ಯಥೇಷ್ಟವಾಯಿತು. ಹರಿಜನ ಎಂದರೆ ಜನರಿಗೆ ಅರ್ಥವಾಗುತ್ತದೆ–ಮೇಲಿನವರ ತುಳಿತದಿಂದ ಹರಿಹಂಚಾದ ಜನರು: ನಿರ್ಗತಿಕರು, ನಿಸ್ಸಹಾಯಕರು ಎಂದು.

ನಾನು–ಹಾಗಿರುತ್ತ, ಇನ್ನೊಂದು ಶಬ್ದವನ್ನು 'ಗಿರಿಜನ' ಅಂತ ಯಾಕೆ ಸೇರಿಸಿದರು?

ಅವರು ಹೇಳಲೋ? ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಆರಂಭದಿಂದಲೂ ಎಂದರೆ, ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಹರಿಜನರೆಂಬುವರು ಮೇಲಿನವರ ಮನಸ್ಸಿಗೆ ಬಂದಿರಲಿಲ್ಲ. ನಮಗೂ ತಮಗೂ ನಡುವೆ ಇರುವ ಇನ್ನೆಷ್ಟೋ ಜಾತಿ, ಕೋಮಿನವರನ್ನು ಕಂಡು ಹಿಡಿದು, ಅವರ ಸಾವಿರ ಹೆಸರುಗಳನ್ನು ಮರೆತು 'ಗಿರಿಜನರು' ಎಂದು ಕರೆದರು. ಯಾವ ಗಿರಿ? ತಿರುಪತಿಯೋ? ಹಿಮಾಲಯವೋ? ಅದು ಯಾಕೆ ಬೇಕಿತ್ತು? ಅವರು ಯಾರೂ ಅಸ್ಪೃಶ್ಯರಲ್ಲ. ಈ ಉಪಾಯದಿಂದ ನಮ್ಮ ಪುಡಾರಿಗಳು ತಮಗೆ ಸಮೀಪರಾದ, ತಾವು ಹೇಳಿದಂತೆ ಕೇಳುವ ಸಾಕಷ್ಟು ಜನಸಂಖ್ಯೆಯುಳ್ಳ ಇನ್ನೊಂದೇ ಬಳಗವನ್ನು ಸೃಷ್ಟಿ ಮಾಡಿದರು. ಎಲ್ಲೋ ಆಸ್ಸಾಮಿನಲ್ಲಿ, ಮಧ್ಯಪ್ರದೇಶದಲ್ಲಿ, ಬೆಟ್ಟಗಳ ಮೇಲೆ ಓದದ. ಮಾಡದ ಆದಿವಾಸಿಗಳು

ಇದ್ದರು ಎಂದು ಆ ಬೆಟ್ಟದ ಹೆಸರಲ್ಲಿ 'ಗಿರಿಜನ' ಎಂದು ಕರೆದು, ಬಯಲ ಸೀಮೆಯಲ್ಲಿ ಎಲ್ಲರಂತೆ ಬಾಳುತ್ತಿರುವ ಅವರಿಗೆ ಹೊಸ ಹೆಸರನ್ನು ಕೊಟ್ಟರು.'

{ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ ಸಂಪುಟ-21; ನಾವು ಕಟ್ಟಿದ ಸ್ವರ್ಗ; ಕಾದಂಬರಿ-20; ಪು.ಸಂ-20}

ಇಲ್ಲಿ ಹೇಳಬೇಕಾದ ಅಂಶವೆಂದರೆ ಮನುಷ್ಯ ಮತ್ತು ಅವನ ಜ್ಞಾನವು ಒಂದು ಇತ್ಯಾತ್ಮಕವಾದ ಶಕ್ತಿಯೂ ಆಗಿದೆ ಎನ್ನುವುದೇ ಮುಖ್ಯವಾದ ತಿಳಿವಳಿಕೆಯು ಆಯಿತು. ನಿಸರ್ಗವನ್ನು ನಾವು ಈವತ್ತು ಭಿನ್ನವಾಗಿ ನೋಡುವುದು ಮಾತ್ರವೇ ಅಲ್ಲ, ಅದರ ಮೇಲೆ ನಮಗೆ ಬೇರೆ ಬೇರೆ ಹಕ್ಕುಗಳನ್ನು ಸ್ಥಾಪಿಸಲು ಸಾಧ್ಯ. ನಮ್ಮ ಶಕ್ತಿಯಿಂದ ನಾವು ನಿಸರ್ಗವನ್ನು ಬದಲಿಸಬಲ್ಲೆವು ಎನ್ನುವುದೂ ಒಂದು ನಿಲುವು. ಆಧುನಿಕ ಯಗದಲ್ಲಿ ಗಣಿತಶಾಸ್ತ್ರವು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿರುವುದು ಕೂಡಾ ಇಲ್ಲಿ ಮುಖ್ಯವಾಗುತ್ತದೆ. ಭೂಮಿಯೆಂದರೆ ಅದು ಕೇವಲ ಒಬ್ಬ ರಾಜನ ಸೊತ್ತು ಅಲ್ಲವೆನ್ನುವುದು ಇಲ್ಲಿ ಮುಖ್ಯ. ನಿಸರ್ಗವನ್ನು ನೋಡುವ ಕ್ರಮಗಳು ಬದಲಾದವು. ಇದನ್ನು ನಿಸರ್ಗದ ವಿರುದ್ಧದ ಒಂದು ಕಲ್ಪನೆ ಎಂದು ಭಾವಿಸುವುದು ಸರಿಯಲ್ಲ. ಅದರ ಬದಲು ಇದು ಅಂದರೆ ನಿಸರ್ಗವು ಹೇಗೆ ಮನುಷ್ಯನಿಗೆ ಅತ್ಯಂತ ಅಗತ್ಯವೆಂದು ಪ್ರತಿಪಾದಿಸಲಾಯಿತು. ಮನಸ್ಸು ಭೂತ ಮತ್ತು ದೆವ್ವದಂಥ ವಿಚಾರಗಳನ್ನು ಪ್ರಶ್ನೆ ಮಾಡಬಹುದು ಎಂದು ತಿಳಿಸಿತು. ನಿಸರ್ಗ ಮತ್ತು ಅದರ ಜ್ಞಾನ ಎನ್ನುವುದು ಕಾರಂತರಲ್ಲಿ ಯಾವೆಲ್ಲಾ ಅರ್ಥವನ್ನು ಪಡೆದುಕೊಳ್ಳುತ್ತದೆ ಎಂದು ನೋಡಬೇಕಾಗುತ್ತದೆ. ಅನುಭವವು ವಿಸ್ತಾರವಾಗುತ್ತಾ ಹೋದಂತೆ ಅದರ ಆಯಾಮವು ಬೇರೆಯಾಗುತ್ತದೆ ಎನ್ನುವುದು ಕಾರಂತರ ನಿಲುವು. ಕುಡಿಯರು ನಿಸರ್ಗವನ್ನು ನೋಡುವುದು ಮತ್ತು ಬೆಟ್ಟದ ಜೀವ ಕಾದಂಬರಿಯಲ್ಲಿ ಬರುವ ನಿಸರ್ಗದ ಚಿತ್ರ ಎರಡೂ ಬೇರೆಯಾಗುತ್ತವೆ. ಕುಡಿಯರ ಕೂಸು ಕಾದಂಬರಿಯಲ್ಲಿ ನಿಸರ್ಗವು ಸುಮ್ಮನೆ ಕುಳಿತಿಲ್ಲ. ಅದು ಕಾಡುತ್ತದೆ. ಅದರ ಜೊತೆಗೆ ಜನರೂ ಇದ್ದಾರೆ. ಅದರಲ್ಲಿ ನಿಸರ್ಗ ಮತ್ತು ಮನುಷ್ಯನ ಸಂಬಂಧವು ದ್ವಂದ್ವಾತ್ಮಕ. ಅದನ್ನು ಕಾರಂತರು ಹೇಳುತ್ತಾರೆ. ಅದಕ್ಕೆ ಸಿಟ್ಟು ಬಂದರೆ ಕಷ್ಟ. ಆದರೆ ಬೆಟ್ಟದ ಜೀವದಲ್ಲಿ ಕಾಡು ಮತ್ತು ಮನುಷ್ಯರ ಸಂಬಂಧವು ಬೇರೆ. ಮನುಷ್ಯ ಅದರ ಜೊತೆಯಲ್ಲಿ ಜಗಳವನ್ನು ಮಾಡಲೂ ಸಿದ್ಧನಾಗಿರುತ್ತಾನೆ. ಆದರೆ ಕಾರಂತರ ಸ್ವಪ್ನದ ಹೊಳೆ ಕಾದಂಬರಿಯಲ್ಲಿ ಪ್ರಯೋಗವು ಅತ್ಯಂತ ಮಹತ್ವದ ಜಾಗವನ್ನು ಪಡೆದುಕೊಂಡಿದೆ. ಆಧುನಿಕ ಜ್ಞಾನ ಮತ್ತು ಅದರ ಸ್ವರೂಪವು ಮಹತ್ವದ್ದೂ ಆಗಿದೆ. ತಾಂತ್ರಿಕತೆ ಎನ್ನುವುದು ಮುಖ್ಯವಾಗಿ ಇಂದು ಬಹಳ

ಮಹತ್ವದ್ದೂ ಆಗಿದೆ. ಆದರೆ ಅದು ತಿಳುವಳಿಕೆಯ ಜ್ಞಾನರೂಪವೂ ಆಗಿದೆ. ಪುನರಜ್ಜೀವನ ಕಾಲದ ಅನಂತರ ಅದು ಅತ್ಯಂತ ಮಹತ್ವದ ಜಾಗವನ್ನು ಪಡೆಯಿತು. ಜ್ಞಾನವು ಅನೇಕ ಅನ್ವೇಷಣೆಗೆ ಕಾರಣವೂ ಆಯಿತು. ಹಾಗೆ ನೋಡುವುದಿದ್ದರೆ ಆಧುನಿಕ ಚಿಂತನೆಗಳು ಹುಟ್ಟಿಕೊಂಡಿದ್ದು ಜನರಿಗೆ ಒಂದು ಹೊಸದಾದ ಅವಕಾಶವನ್ನು ಕಲ್ಪಿಸಿತು. ಆದರಿಂದ ನಮ್ಮ ಓದು ಮತ್ತು ಚಿಂತನೆಗಳು ಅವುಗಳ ಕ್ರಮಗಳು ಬದಲಾದವು. ಅದು ಒಂದು ಮಹತ್ವದ ತಿರುವು ಕೂಡಾ ಹೌದು. ನಮಗೆ ಆಧುನಿಕ ಅಧ್ಯಯನದ ಕ್ರಮಗಳು ಇಲ್ಲಿಂದ ಪ್ರಾರಂಭವಾದವು. ಪುನರುಜ್ಜೀವನವು ನಮಗೆ ಸ್ವಂತಿಕೆ ಮತ್ತು ಅದರ ಎಚ್ಚರವನ್ನು ಹೇಳಿತು. ಪುನರುಜ್ಜೀವನವು ನಮಗೆ ಸುಖವನ್ನು ಕೊಟ್ಟಿತು. ಅಷ್ಟೇ ಅಲ್ಲ ಅದು ನಮಗೆ ಹೊಸದಾದ ಚಿಂತೆಗೆ ಅವಕಾಶವನ್ನು ಕಲ್ಪಿಸಿತು. ಯಾವಾಗ ಜ್ಞಾನ ಮತ್ತು ಅದರ ಸ್ವರೂಪವು ಬದಲಾವಣೆಯನ್ನು ಕಂಡುಕೊಂಡಿತೋ ಆಗ ಅದನ್ನು ಜನರು ಬಳಸುವ ಕ್ರಮವು ವ್ಯತ್ಯಾಸವಾಯಿತು.. ಜ್ಞಾನವು ಭಿನ್ನವಾದಾಗ ಅದರ ಅರ್ಥವು ವ್ಯತ್ಯಾಸವಾಯಿತು. ಅದರ ನಿರೂಪಣೆಯ ಕ್ರಮವು ಬೇರೆಯಾಯಿತು. ಜ್ಞಾನ ಮತ್ತು ಅದರ ರೂಪಗಳು ಯಾವತ್ತೂ ಒಂದು ತೆರನಾಗಿ ಇರುವುದಿಲ್ಲ. ಅದಕ್ಕೆ ಅನೇಕ ಆಯಾಮಗಳು ಇರುತ್ತವೆ. ನಮ್ಮ ಅನೇಕ ನಿಲುವುಗಳು ಸಾಂಸ್ಥಿಕವೂ ಆದವು. ಯಾವಾಗ ವಿಭಾಗಗಳು ಮತ್ತು ಅವುಗಳ ಸ್ವರೂಪವು ಜಾರಿಗೆ ಬಂದವೋ ಆಗ ಅದರ ಅರ್ಥ ಮತ್ತು ಅದರ ಚಹರೆಗಳು ಭಿನ್ನವಾದವು. ವಿಜ್ಞಾನ ಮತ್ತು ಅದರ ಸಂಕಥನಗಳು ಒಂದು ಮಾದರಿಯಲ್ಲಿ ಇದ್ದರೆ ಸಾಹಿತ್ಯ ಮತ್ತು ಅದರ ಸಂಕಥನಗಳು ಮತ್ತೊಂದು ರೂಪದಲ್ಲಿ ಪ್ರವೇಶವನ್ನು ಪಡೆದವು. ಹಾಗೆ ನೋಡಿದರೆ ಸಾಹಿತ್ಯ ಮತ್ತು ಅದರ ಅಧ್ಯಯನವನ್ನು ಒಂದು ಕೇಂದ್ರವಾಗಿರಿಸಿಕೊಂಡಾಗ ಅದರ ಅರ್ಥವು ಬೇರೆಯಾಗುತ್ತದೆ. ಸಾಂಪ್ರದಾಯಿಕವಾಗಿ ಶಾಕುಂತಲವನ್ನು ಓದುವುದು ಮತ್ತು ಗ್ರಹಿಸುವುದು ಒಂದು ಕ್ರಮ ಆದರೆ ಅದನ್ನು ಕಾಲೇಜುಗಳಲ್ಲಿ ಒಂದು ಶಿಸ್ತಾಗಿ ಓದುವುದು ಮತ್ತೊಂದು ಕ್ರಮ. ಆದರೆ ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬಂದವು. ಸಾಹಿತ್ಯವನ್ನು ಗಣಿತದಂತೆ ಹೇಳುವುದು ಸಾಧ್ಯವಾಗದ ವಿಚಾರ. ಅದನ್ನು ಚರ್ಚೆ ಮಾಡುವಾಗ ನಮಗೆ ಸಾಹಿತ್ಯ ಮತ್ತು ಅದರ ಭಾಷೆ, ಅದು ಅನುಭವಲೋಕ, ಅದು ಹೇಳುವ ಕ್ರಮ ಮುಂತಾದವು ಅತ್ಯಂತ ಮುಖ್ಯವಾದವು. ತತ್ವಜ್ಞಾನ ಮತ್ತು ಸಾಹಿತ್ಯ ಎರಡನ್ನೂ ಬೇರೆ ಮಾಡಬೇಕಾಯಿತು. ಸಾಹಿತ್ಯ ಮತ್ತು ಅದರ ಎಲ್ಲೆಯು ಎಲ್ಲಿದೆ ಎಂದು ಕೇಳಲಾಯಿತು. ಒಂದು ಹಂತದಲ್ಲಿ ಭಾಷೆ ಮತ್ತು ಅದರ ವಿವರಣೆಗಳನ್ನು ಹೆಚ್ಚು ಮುಖ್ಯವೆಂದು ಪರಿಗಣಿಸಲಾಯಿತು. ಸಾಹಿತ್ಯವನ್ನು ಕಲಿಸುವಾಗ ನಮಗೆ ಅದನ್ನು ತಾತ್ವಿಕ

ಮಾಡುವುದು ಹೇಗೆ ಎನ್ನುವುದು ಒಂದು ಪ್ರಶ್ನೆ. ಯಾವುದೋ ಒಂದು ಅಜ್ಞಾತವಾದ ಶಕ್ತಿಯು ನಮ್ಮನ್ನು ನಿಯಂತ್ರಿಸುತ್ತದೆ ಎನ್ನುವುದೇ ಒಂದು ಪ್ರಶ್ನೆ. ಪುನರುಜ್ಜೀವನದ ಅನಂತರ ಹಿಂದೆ ಜ್ಞಾನ ಮತ್ತು ಅಧಿಕಾರದ ಕೇಂದ್ರಗಳನ್ನು ಜನರು ಒಪ್ಪುವುದು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯು ಉಂಟಾಯಿತು. ಯಾವುದನ್ನು ನಾವು ಕಾರಣವೆಂದು ಹೇಳುತ್ತೇವೆಯೋ ಅದಕ್ಕೆ ಒಂದು ಹಿನ್ನೆಲೆಯೂ ಇದೆ. ಕಾರಣವಾದವು ಅನೇಕವನ್ನು ಪ್ರಶ್ನೆ ಮಾಡಿತು. ನಾವು, ನಮ್ಮ ಜೀವನ ಎನ್ನುವುದಕ್ಕೆ ಆಧ್ಯಾತ್ಮಿಕವಾದ ಅರ್ಥವು ಬೇರೆಯಿದೆ. ಆದರೆ ಕಾರಂತರಲ್ಲಿ ಅದು ಮುಖ್ಯವಲ್ಲ. ವಾಸ್ತವವಾಗಿ ಕಾರಣ ಎನ್ನುವುದು ಯಾವುದೂ ಕಾರಣವಿಲ್ಲದೆ ನಡೆಯುವುದಿಲ್ಲವೆಂದು ಹೇಳುತ್ತದೆ. ಆಧುನಿಕ ಅರ್ಥದಲ್ಲಿ ಮನುಷ್ಯರು ಮತ್ತು ಅವರ ಜೀವನವನ್ನು ವಿಧಿಯು ನಿರ್ಧಾರವನ್ನು ಮಾಡುವುದೂ ಇಲ್ಲ. ಹಾಗೆಯೇ ನಮಗೆ ಒಂದು ಅದ್ಭುತವಾದ ಶಕ್ತಿಯು ಇದೆ. ಅದನ್ನು ಮಾತ್ರವೇ ನಾವು ನೋಡಿದರೆ ಸಾಕು ಎನ್ನುವುದು ಪ್ರಶ್ನೆಯಲ್ಲ. ಅತೀಂದ್ರಿಯವಾದದ್ದು ಒಂದು ಇದೆ. ಅದು ನಮ್ಮನ್ನು ನಿಯಂತ್ರಿಸುತ್ತದೆ ಎನ್ನುವುದಕ್ಕೆ ಅರ್ಥವೇ ಇಲ್ಲ. ಈ ಜಗತ್ತು ಯಾವುದೋ ಒಂದು ನೆಲೆಯಿಂದ ಮಾತ್ರವೇ ಅರ್ಥವನ್ನು ಪಡೆದುಕೊಂಡಿದೆ ಎಂದು ಕಾರಂತರು ನಂಬುವುದೂ ಇಲ್ಲ.

ಹಳೆಯ ಪುರಾಣಗಳು ನಮಗೆ ಒಂದು ವ್ಯಾಖ್ಯಾನವನ್ನು ಕೊಟ್ಟಿದೆ, ಆದರೆ ವಿಷಯವು ಹಾಗೆ ಇಲ್ಲ. ಪುರಾಣಗಳ ನಂಬಿಕೆಯ ಪ್ರಕಾರ ಈ ಜಗತ್ತನ್ನು ಬ್ರಹ್ಮನು ಸೃಷ್ಟಿ ಮಾಡಿದ. ಆದರೆ ನಮ್ಮ ಆಧುನಿಕ ತಿಳುವಳಿಕೆಯು ಇದನ್ನು ಹೇಳುತ್ತಾ ಇಲ್ಲ ಹೊಸ ರೀತಿಯ ತತ್ವಜ್ಞಾನಗಳು ಹೊಸದಾದ ಅರ್ಥವನ್ನು ಹೇಳಿದವು. ಜ್ಞಾನ ಮತ್ತು ಅದರ ರೂಪಾಂತರಗಳು ಹೇಗೆ ಪರಿವರ್ತನೆಯಾದವು ಎನ್ನುವುದಕ್ಕೆ ಅನೇಕ ಉದಾಹರಣೆಗಳು ಇವೆ. ಜ್ಞಾನದ ಪರಿಧಿಯಲ್ಲಿ ಹೊಸದು ಸೇರ್ಪಡೆಯಾದವು. ಮನಸ್ಸು ಅದರ ಸತ್ಯಗಳ ಪ್ರಶ್ನೆಯು ಒಂದು ತರವಿದ್ದರೆ ಬಹಿರಂಗ ಮತ್ತು ಅದರ ಬಹಿರಂಗದ ಪ್ರಶ್ನೆಯು ಮತ್ತೊಂದು ಥರವಾಯಿತು. ನಾವು ನಮ್ಮದೇ ಆದ ಸನ್ನಿವೇಶವನ್ನು ಆಧರಿಸಿಕೊಂಡು ಹೇಗೆ ಜಗತ್ತನ್ನು ನೋಡುತ್ತವೆ ಎನ್ನುವುದೂ ಅತ್ಯಂತ ಮುಖ್ಯವಾದ ಪ್ರಶ್ನೆ. ಹಾಗೆ ನೋಡಿದರೆ ಆಧುನಿಕ ಜ್ಞಾನವು ಅನೇಕವನ್ನು ವಿವರಿಸುವುದಿಲ್ಲ. ಇದನ್ನು ಲಕಾನ್ ಕಾರಣವಲ್ಲದ ಆತ್ಮರತಿ ಎಂದು ಹೇಳುತ್ತಾನೆ. ಶೈಕ್ಷಣಿಕ ನಮಗೆ ಕೆಲವು ಅತ್ಮರತಿಗಳು ಇರುತ್ತವೆ. ವಾಸ್ತವವಾಗಿ ನಮಗೆ ಬೇರೆ ಬೇರೆ ರೀತಿಯ ಆತ್ಮಶಕ್ತಿಯು ಇರುತ್ತದೆ. ನಾವು ಅದನ್ನು ವಿಶ್ಲೇಷಣೆಗೆ ಬಳಸುತ್ತೇವೆ. ಕೆಲವು ನಮ್ಮ ಸಾಮಾನ್ಯವಾದ ಜ್ಞಾನದ

ಆಧಾರದ ಮೇಲೆ ನಾವು ಕೆಲವು ಸಂಗತಿಗಳಿಗೆ ವಿವರಣೆಯನ್ನು ಕೊಡುತ್ತೇವೆ. ಹಾಗೆ ನೋಡಿದರೆ ಗ್ರೀಕ್ ತತ್ವಜ್ಞಾನವು ಪ್ರಾರಂಭವಾದದ್ದು ಕೂಡಾ ಪ್ಲೇಟೋನ ಮೂಲಕ. ಅನೇಕರು ಅವನನ್ನು ಅನುಸರಿಸಿದರು. ತತ್ವಜ್ಞಾನಕ್ಕೆ ಅರಿಸ್ಟಾಟಲ್ ಮತ್ತು ಪ್ಲೇಟೋ ಅಡಿಗಲ್ಲನ್ನು ಹಾಕಿದರು. ಹಾಗೆ ನೋಡಿದರೆ ನಾವು ಈವತ್ತು ಮಾತಾಡುತ್ತಿರುವ ಅನೇಕ ವಿಷಯಗಳಲ್ಲಿ ಅವರ ಮಾತುಗಳು ಬೇರೆ ಬೇರೆ ಪ್ರಭಾವವನ್ನು ಬೀರಿದೆ. ತತ್ವಜ್ಞಾನ ಮತ್ತು ವೈಚಾರಿಕತೆ ಎನ್ನುವುದು ಬೇರೆ ವಿಂಗಡಣೆಗೆ ಕಾರಣವೂ ಆಗಿತ್ತು ಎನ್ನುವುದು ಇಲ್ಲಿ ಉಲ್ಲೇಖನೀಯ. ದೈವ ಎನ್ನುವುದು ಒಂದು ಇದೆಯೋ ಇಲ್ಲವೋ ಎನ್ನುವುದು ಮುಖ್ಯವಾಗಿ ಚೋಮನಿಗೆ ಗೊತ್ತಿಲ್ಲ. ಆದರೆ ಅವನು ನಂಬಿದ್ದಾನೆ. ಅವನ ಒಳ ಮನಸ್ಸು ಕಲ್ಲುಕುಡನನ್ನು ದಾಟಿ ಹೋಗದ ಹಾಗೆ ಮಾಡಿದೆ. ನಂಬಿಕೆಯನ್ನು ದಾಟುವುದು ಅತ್ಯಂತ ಸುಲಭವಾದ ಕೆಲಸವು ಅಲ್ಲ. ಅದನ್ನು ನಂಬಿದವರು ಮಾತ್ರವೇ ಈ ಸಮಸ್ಯೆಯನ್ನು ಎದುರಿಸುತ್ತಾರೆ. ವೈಚಾರಿಕತೆಯು ಇರುವವರಿಗೆ ಮಾತ್ರವೇ ಇದು ಸಮಸ್ಯೆಯು ಅಲ್ಲ. ವೈಚಾರಿಕತೆ ಮತ್ತು ಅದರ ಸ್ವರೂಪವು ಹೇಗೆ ತತ್ವಜ್ಞಾನವನ್ನು ಪ್ರವೇಶ ಮಾಡಿತು ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ವಾಸ್ತವವಾಗಿ ಇಲ್ಲಿ ಮತ್ತೊಂದು ಪ್ರಶ್ನೆಯು ಬಂತು. ಹೆಗೆಲ್ ಸ್ವಂತಿಕೆ ಮತ್ತು ಆದರ ಸ್ವಾಯತ್ತತೆಯನ್ನು ಹೇಳುತ್ತಾನೆ. ಆದರೆ ಹೆಗೆಲ್ ಅನಂತರ ಅನೇಕರು ಇದನ್ನು ಭಿನ್ನವಾಗಿ ನೋಡಿದರು. ಯಾವುದೇ ಆಲೋಚನೆ ಎನ್ನುವುದು ಸ್ವತಂತ್ರವಲ್ಲ. ಸ್ಕೆಲಿಂಗ್ ಆಲೋಚನೆ ಮತ್ತು ಅದರ ಸ್ವಾಯತ್ತತೆ ಎಂದು ಹೇಳುವಾಗ ಮನುಷ್ಯ ಮತ್ತು ಅವನ ಧೀಶಕ್ತಿಯನ್ನು ಹೇಳುತ್ತಾನೆ. ಕಿರ್ಕೆಗಾರ್ಡ ವ್ಯಕ್ತಿ ಮತ್ತು ಅವನ ಅಸ್ತಿತ್ವವನ್ನು ಹೇಳುತ್ತಾನೆ. ಮಾರ್ಕ್ಸ್ ಉತ್ಪಾದನೆ ಮತ್ತು ಆಲೋಚನೆಯ ಕ್ರಮವನ್ನು ಹೇಳುತ್ತಾನೆ. ಹೆಗೆಲ್ ಅನಂತರ ಅನೇಕ ವಾದಗಳು ಬಂದವು. ಜ್ಞಾನ ಮತ್ತು ಅದರ ಕುರಿತಾದ ಚಿಂತನೆಗಳು ಭಿನ್ನವಾದವು. ತತ್ವಜ್ಞಾನ ಮತ್ತು ವಿಜ್ಞಾನದಲ್ಲಿ ಕಾರಣವಾದವು ಮುಂದೆ ಬಂದವು. ಕಾರಣ ಎನ್ನುವುದು ಅತ್ಯಂತ ಮುಖ್ಯವಾದ ಪರಿಭಾಷೆಯೂ ಆಯಿತು. ಹೆಗೆಲ್‌ನ ವಾದವು ಒಂದು ವಿಚಾರವನ್ನು ಪರೋಕ್ಷವಾಗಿ ಹೇಳುತ್ತದೆ: ನನಗೆ ತಿಳಿದಿದೆ. ಅಂದರೆ ಅರಿವು ಮತ್ತು ಸ್ವಂತಿಕೆಯು ಭಿನ್ನವಾದ ಒಂದು ಸಂಗತಿಯನ್ನು ಹೇಳುತ್ತದೆ. ಸ್ವಂತಿಕೆ ಎನ್ನುವುದು ಜೀವನದ ಒಂದು ಸ್ವರೂಪವಾಗಿದೆ. ಜ್ಞಾನವನ್ನು ನಾವು ಸಾಧಿಸವುದು. ಜ್ಞಾನ ಎನ್ನುವುದು ಅನೇಕವನ್ನು ಬಗೆಹರಿಸುತ್ತದೆ. ಆದರೆ ಯಾವುದನ್ನು ನಾವು ಅಂತಿಮವಾದ ಜ್ಞಾನ ಎಂದು ಹೇಳುತ್ತೇವೆಯೋ ಅದನ್ನು ಸಾಧಿಸುವುದು ಕಷ್ಟ. ಹಾಗೆ ನೋಡಿದರೆ ನಾವು ಈವತ್ತು ಯಾವುದನ್ನು ಜ್ಞಾನ ಎಂದು ಕರೆಯುತ್ತೇವೆಯೋ ಅದರ ರೂಪವು ಕ್ರಿಯೆ ಸಾಧಿತ, ಇಚ್ಛೆ ಮುಂತಾಗಿ

ಗುರುತಿಸುತ್ತಾರೆ. ವಾಸ್ತವ ಮತ್ತು ಅದರ ಅರಿವು ನಮ್ಮ ಜ್ಞಾನವನ್ನು ರೂಪಿಸುತ್ತದೆ ಎನ್ನುವ ಮಾತು ಇದೆ. ಕಾರಂತರು ಒಮ್ಮೆ ಅನುಭವ ಮತ್ತು ತಿರುಗಾಟವನ್ನು ಬರಹದ ಕೇಂದ್ರವಾಗಿಸುತ್ತಾರೆ. ಅದರಲ್ಲಿ ಲೋಕ ಜ್ಞಾನವು ಅತ್ಯಂತ ಪ್ರಧಾನವಾಗಿದೆ. ಇಲ್ಲಿ ಮತ್ತೊಂದು ಮಾತನ್ನು ಹೇಳಬೇಕು: ಲಕಾನ್ ನಿಜ ಎನ್ನುವುದು ಕಟ್ಟಲಾಗಿದೆಯೇ ಹೊರತು ಅದರ ಸ್ವರೂಪವು ಪೂರ್ವ ನಿರ್ಧಾರಿತವಲ್ಲ ಎಂದು ಹೇಳುತ್ತಾನೆ. ಅಂದರೆ ಅದು ವಾಸ್ತವವಾಗಿ ಅಸ್ತಿತ್ವದಲ್ಲಿ ಇರುವುದಿಲ್ಲ. ಅದನ್ನು ನಾವು ಗ್ರಹಿಸುವುದು ಮಾತ್ರವೇ ಅದನ್ನು ನಾವು ಒಂದು ಅರ್ಥದಲ್ಲಿ ಅನ್ವಯ ಮಾಡುತ್ತೇವೆ. ಈ ದೃಷ್ಟಿಯಿಂದ ವಾಸ್ತವ ಎನ್ನುವುದು ಲಕಾನ್‌ನಲ್ಲಿ ಸಮಸ್ಯಾತ್ಮಕವೂ ಆಗುತ್ತದೆ. ನಮಗೆ ಯಾವುದೇ ಜ್ಞಾನವು ಇಲ್ಲವಾದರೆ ನಾವು ವಾಸ್ತವವನ್ನು ಅರ್ಥಮಾಡಿಕೊಳ್ಳುವುದೂ ಒಂದು ಸಮಸ್ಯೆಯಾಗುತ್ತದೆ. ಅಭಿವೃದ್ಧಿ ಮತ್ತು ಅದರ ಹಿನ್ನಲೆಗೂ ಕಾರಣಕ್ಕೂ ಒಂದು ಸಂಬಂಧವಿದೆ ಎಂದು ಹೇಳಿದ್ದೂ ಅಷ್ಟೇ ನಿಜ. ಇಲ್ಲಿ ಆಗ ಕಾಂಟ್ ಹೇಳಿದ ಸತ್ಯ ಕಲ್ಪನೆಯನ್ನು ನೋಡುವುದು ಅಗತ್ಯ. ಅವನು ಅದನ್ನು ಸ್ವಲ್ಪ ವಿಮರ್ಶಾತ್ಮಕವಾಗಿ ನೋಡಬೇಕು ಎಂದು ಹೇಳಿದ ಕಾರಂತರ ಕಾದಂಬರಿಯಲ್ಲಿ ಬರುವ ಈ ವಾಕ್ಯಗಳು ಉದಾಹರಣೆಯಾಗಿದೆ.

ಒಂದು ಅರ್ಥದಲ್ಲಿ ಲಕಾನ್ ಮತ್ತು ಹೆಗೆಲ್ ವಾದಕ್ಕೆ ಸಂಬಂಧವಿದೆ. ಲಕಾನ್ ಮನೋವೈಜ್ಞಾನಿಕವಾದ ನಿಲುವನ್ನು ತಳೆಯುತ್ತಾನೆ. ಬಯಕೆ ಹಾಗೂ ಅದರ ಹಿಂದೆ ಇರುವ ತರ್ಕವನ್ನು ಕುರಿತು ಅವನು ಯೋಚನೆ ಮಾಡುತ್ತಾನೆ. ಆದರೆ ಪರಿಪೂರ್ಣವಾದ ಒಂದು ಜ್ಞಾನದ ಬಗ್ಗೆ ಲಕಾನ್‌ಗೆ ಅನುಮಾನವೂ ಇದೆ. ವರ್ತುಲದೊಳಗೆ ವರ್ತುಲ ಇರುವಂತೆ ಜ್ಞಾನವೂ ಬೇರೆ ಬೇರೆ ಮಡಿಕೆಗಳನ್ನು ಹೊಂದಿರುತ್ತವೆ. ಹೆಗೆಲ್ ಸೂಚಕ ಮತ್ತು ಅವನ ಸೂಚನೆಯನ್ನು ಹೇಳುತ್ತಾನೆ. ಯಾವುದು ಸೂಚನೆಯಾಗಿದೆಯೋ ಅದರ ಸ್ವರೂಪವನ್ನು ನಾವು ಸೂಚನೆಗಳಲ್ಲಿ ಮಾತ್ರವೇ ಕಾಣುತ್ತೇವೆ. ಹೆಗೆಲ್ ಚರಿತ್ರೆ ಮತ್ತು ಅದರ ಸೂಚಕನನ್ನು ವಿವರಿಸುತ್ತಾನೆ. ಹೆಗಲ್ ಕಾರಣಗಳು ಮತ್ತು ಅದರ ಪ್ರಭುತ್ವವನ್ನು ಹೇಳಿರುವುದೂ ಇಲ್ಲಿ ಗಮನಾರ್ಹವಾಗಿದೆ. ಆದರೆ ದ್ವಂದ್ವತೆ ಮತ್ತು ಅದರ ಸ್ವರೂಪವನ್ನು ಹೆಗೆಲ್ ಹೇಳಿದ್ದು ಅತ್ಯಂತ ಗಮನಾರ್ಹವಾಗಿದೆ. ವಾಸ್ತವವಾಗಿ ಹೆಗೆಲ್ ಹೇಳುವ ಸೂಚಕ ಸಮಸ್ಯೆಯನ್ನು ನಾವು ಬೇರೆ ಥರ ನೋಡಲು ಸಾಧ್ಯವಿದೆ. ಸೂಚಕ ಮತ್ತು ಜಗತ್ತು ಎನ್ನುವ ಸಂಬಂಧವನ್ನು ಭಿನ್ನವಾದ ನೆಲೆಯಲ್ಲಿ ಅರ್ಥವಿಸಿಕೊಳ್ಳಲು ಆಗುತ್ತದೆ. ಲಕಾನ್ ವಾಸ್ತವವಾಗಿ ಹೆಗೆಲ್ ಹೇಳುವ ಸೂಚಕ ಮತ್ತು ಸೂಚನೆಯ ಪ್ರಶ್ನೆಯನ್ನು ಭಿನ್ನವಾಗಿಯೂ ಗ್ರಹಿಸುತ್ತಾನೆ. ಅವನು ಭಾಷೆ ಮತ್ತು ಅದರ

ಸಂಕೇತಗಳನ್ನು ವಿಶಿಷ್ಟವಾದ ಅರ್ಥದಲ್ಲಿ ಬಳಸುತ್ತಾನೆ. ಮಾತು ಮತ್ತು ಅದರ ಕ್ರಿಯೆ ಹಾಗೂ ಅದರ ಸಂಕೇತಗಳು ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಮಾತು ನಮ್ಮ ಇಚ್ಛೆಯನ್ನು ಹೇಳಲು ಇರುವ ಸಾಧನವೂ ಆಗಿದೆ. ಲಕಾನ್ ಒಂದು ಸಂದರ್ಭದಲ್ಲಿ ಅದನ್ನು ವಿಷಯನಿಷ್ಠವೆಂದು ಹೇಳುತ್ತಾನೆ. ಅದಕ್ಕೆ ಒಂದು ನಿರ್ದಿಷ್ಟವಾದ ಚಿಹ್ನೆಯು ಇದೆ. ಭಾಷೆಗೆ ಒಂದು ಒಂದು ಅನುಭವ ಮತ್ತು ಅದರ ಜಗತ್ತು ಎನ್ನುವುದು ಇದ್ದೇ ಇರುತ್ತದೆ. ಭಾಷೆಯಲ್ಲಿ ಅದರ ಸಾಂಕೇತಿಕವೂ ಆಗಿರುತ್ತದೆ. ಆದ್ದರಿಂದ ಇದನ್ನು ನೋಡುವಾಗ ನಾವು ಭಾಷೆ ಮತ್ತು ಅದರ ಚರ್ಚೆಯನ್ನು ಭಿನ್ನವಾಗಿ ಗ್ರಹಿಸಬೇಕಾಗುತ್ತದೆ ಎನ್ನುವುದು ಲಕಾನ್ ಹೇಳುವ ನಿಲುವು. ವಿಷಯನಿಷ್ಠ ಎನ್ನುವುದನ್ನು ಮಾತ್ರವೇ ನಾವು ಇಲ್ಲಿ ಗಮನಿಸಬೇಕು. ಎರಡನೆಯ ಹಂತದಲ್ಲಿ ಲಕಾನ್ ಭಾಷೆಯೆನ್ನುವುದು ಮುಖ್ಯವಾಗಿ ಮಾತಿಗೆ ಅನುಗುಣವಾಗಿ ಇರುತ್ತದೆ. ಭಾಷೆಯನ್ನು ಒಂದು ಲಕ್ಷಣವನ್ನು ಆಧರಿಸಿಕೊಂಡು ಹೇಳಲು ಬರುವುದೂ ಇಲ್ಲ.

ರಚನಾವಾದವು ಭಾಷೆ ಮತ್ತು ಅದರ ರಚನೆಯನ್ನು ಹೇಳುತ್ತದೆ. ಆದರೆ ಅದರಲ್ಲಿ ಹಾಗೆ ನೋಡುವುದು ಸರಿಯಾದ ಒಂದು ಕ್ರಮವು ಅಲ್ಲ ಎನ್ನುವುದು ಲಕಾನ್ ಹೇಳುವ ನಿಲುವು. ಮಾತು ಮತ್ತು ಅದರ ಸಂಕೇತಗಳು ನಮ್ಮ ಕಲ್ಪಿತವಾದ ಅಹಂಕಾರವನ್ನು ಹೇಳುತ್ತದೆ ಎಂದು ಅವನು ವಾದಿಸುತ್ತಾನೆ. ಕಾರಣಗಳು ಮತ್ತು ಅದರ ಉಪಯೋಗವನ್ನು ನಾವು ಈ ಹಿನ್ನೆಲೆಯಲ್ಲಿ ನೋಡಬೇಕು. ಆದರೆ ವಿಷಯವೇ ಇಲ್ಲದೆ ಯಾವುದೇ ರಚನೆಯು ಇರಲು ಸಾಧ್ಯವಿಲ್ಲ. ಮೂರನೆಯ ಹಂತದಲ್ಲಿ ಲಕಾನ್ ಭಾಷೆ ಮತ್ತು ಅದರ ಸಾರ ರೂಪವನ್ನು ಹೇಳುತ್ತಾನೆ. ಅಂದರೆ ಅವನ ಪ್ರಕಾರ ಅದು ಪರಿಪೂರ್ಣವಾದ ಒಂದು ಪ್ರಕ್ರಿಯೆಯು ಅಲ್ಲ. ಅದು ಸಂವಾದಿ. ಅಪರಿಪೂರ್ಣವಾದದ್ದು. ಈ ದೃಷ್ಟಿಯಿಂದ ಅವನಿಗೆ ಅನ್ಯವೆನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಸೂಚಕನು ಹೊರಗೆ ಇರುತ್ತಾನೆ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಇದುವೇ ನಿರಚನೆಗೂ ಹೆಚ್ಚು ಪ್ರಭಾವವನ್ನು ಬೀರಿದೆ. ಪೂರ್ಣವಾದ ಮಾತು ಎನ್ನುವುದು ಮುಖ್ಯವಾಗಿ ವಿಷಯ ಮತ್ತು ಅದರ ಸಾರಾಂಶದಲ್ಲಿ ಇರುತ್ತದೆ. ಆದ್ದರಿಂದ ಪರಿಪೂರ್ಣವಾದ ಜ್ಞಾನ ಎನ್ನುವುದು ಸಂಕೇತ ಮತ್ತು ಅದರ ವಾಸ್ತವಿಕರಣದಲ್ಲಿ ಇರುತ್ತದೆ. ಈ ದೃಷ್ಟಿಯಿಂದ ಅವನು ಹೆಗೆಲ್ ಹೇಳುವ ಪರಿಪೂರ್ಣ ಜ್ಞಾನ ಎನ್ನುವುದನ್ನು ಬೇರೆ ಥರ ನೋಡುತ್ತಾನೆ. ಹಾಗೆ ನೋಡಿದರೆ ತತ್ವಜ್ಞಾನ ಮತ್ತು ಅದರ ಸ್ವಾತಂತ್ರ್ಯವೆಂದರೆ ಏನು ಎನ್ನುವ ಪ್ರಶ್ನೆಯೂ ಇತ್ತು. ಹೆಗೆಲ್ ಹೊರಗಿನದು ಎನ್ನುವುದನ್ನು ಅಷ್ಟು ಒಪ್ಪುವುದೂ

ಇಲ್ಲ ವಾಸ್ತವವಾಗಿ ಇದನ್ನು ಇನ್ನೊಂದು ಥರ ಹೇಳಬಹುದು: ಅರಿಸ್ಟಾಟಲ್ ಮತ್ತು ಅವನ ಚಿಂತನೆಗೂ ಪ್ಲೇಟೋನ ಚಿಂತನೆಗೂ ವ್ಯತ್ಯಾಸವಿದೆ. ಲಕಾನ್ ಸಂಕೇತ ಮತ್ತು ಅದರ ವಾಸ್ತವಿಕರಣವನ್ನು ಹೇಳುತ್ತಾನೆ. ಅದನ್ನು ಅಷ್ಟಾಗಿ ಅಚಾರಿತ್ರಿಕ ಮಾಡುವುದೂ ಇಲ್ಲ. ಅನುಭವವೂ ಒಂದು ಅರ್ಥದಲ್ಲಿ ಸಂಕೇತವೇ ಆಗಿರುತ್ತದೆ. ಪದ ಎನ್ನುವುದು ಒಂದು ಸರಳವಾದ ಪ್ರಕ್ರಿಯೆ ಅಲ್ಲ. ಅದನ್ನು ಒಂದು ಸರಳವಾದ ಪ್ರಾತಿನಿಧಿಕವಾದ ರೂಪ ಎನ್ನುವುದನ್ನು ಲಕಾನ್ ಒಪ್ಪುವುದೂ ಇಲ್ಲ. ಯಾವುದು ನಮ್ಮ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ ಎನ್ನುವುದರ ಆಧಾರದ ಮೇಲೆ ಜ್ಞಾನ ಮತ್ತು ಅದರ ರೂಪೀಕರಣವು ನಡೆಯುತ್ತದೆ. ಹೆಗೆಲ್ ಸಮಯದ ಪರಿಕಲ್ಪನೆ ಎನ್ನುವುದು ಮುಖ್ಯವಾಗಿ ವಸ್ತುವಿನ ಪರಿಕಲ್ಪನೆಯೂ ಆಗಿದೆ ಎಂದು ಭಾವಿಸುತ್ತಾನೆ. ವಾಸ್ತವ ಎನ್ನುವುದು ಸಮಯವನ್ನು ಆಧರಿಸಿಕೊಂಡು ಇರುತ್ತದೆ. ಅಷ್ಟೇ ಅಲ್ಲ, ಅದು ಬದಲಾಗುತ್ತದೆ. ಸಮಯವು ಕೂಡಾ ಒಂದು ಕಡೆಗೆ ನಿಂತ ನೀರು ಆಗಿರುವುದೂ ಇಲ್ಲ. ಸಮಯ, ವಾಸ್ತವ, ವಿಜ್ಞಾನ ಮತ್ತು ಜಗತ್ತು – ಈ ಸಂಬಂಧಗಳು ಅತ್ಯಂತ ಸಂಕೀರ್ಣವಾಗಿರುತ್ತದೆ.

ಸಮಯ ಮತ್ತು ಅದರ ಚಹರೆಗಳು ಯಾವತ್ತೂ ಒಂದು ತಾತ್ವಿಕವಾದ ಸಮಸ್ಯೆಯೂ ಅಗುತ್ತದೆ. ಮನುಷ್ಯನು ಒಂದು ಕಾಲದಲ್ಲಿ ಬದುಕುತ್ತಾನೆ. ಆ ಕಾಲವು ಅವನ ಜೀವನದ ದೃಷ್ಟಿಯಿಂದ ಹೆಚ್ಚು ಮಹತ್ವದ್ದು. ಆದರೆ ಅವನು ಬದುಕುತ್ತಿರುವ ಕಾಲ ಮತ್ತು ಅದರ ಸ್ವರೂಪವು ಅವನ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತದೆ. ಯಾವುದನ್ನು ನಾವು ವಿಶ್ವ ಮತ್ತು ಅದರ ಸತ್ಯವೆಂದು ಹೇಳುತ್ತೇವೆಯೋ ಅದು ಒಬ್ಬ ವ್ಯಕ್ತಿಯಲ್ಲಿ ಬೇರೆ ಪ್ರಭಾವವನ್ನು ಬೀರಲೂಬಹುದು. ಒಂದು ಅರ್ಥದಲ್ಲಿ ವ್ಯಕ್ತಿ ಮತ್ತು ಅವನ ಸತ್ಯ ಎನ್ನುವುದು ಸ್ವಯಂಸಂಪೂರ್ಣವಲ್ಲ. ಅನೇಕ ತತ್ವಜ್ಞಾನಿಗಳು ಸತ್ಯವನ್ನು ಮತ್ತು ಅದರ ಅನಾವರಣವನ್ನು ಮಾಡಿದ್ದೇವೆ ಎಂದು ಭಾವಿಸುತ್ತಾರೆ, ಆದರೆ ಕಾಲವು ಬದಲಾಗುತ್ತಾ ಹೋದಂತೆ ಸತ್ಯ ಮತ್ತು ಅದರ ಮೌಲ್ಯಗಳು ವ್ಯತ್ಯಾಸವಾಗಿದೆ ಹಾಗೆ ನೋಡಿದರೆ ನಮ್ಮ ವ್ಯಕ್ತಿತ್ವದಲ್ಲಿ ಸತ್ಯ ಮತ್ತು ಸುಳ್ಳು ಎರಡೂ ಜೊತೆಗೆ ಇರುತ್ತವೆ. ಯಾವುದನ್ನು ನಾವು ಸತ್ಯ ಎಂದು ಹೇಳುತ್ತೇವೆಯೋ ಅದರ ರೂಪವು ನಮಗೆ ಹೊರಗಿನದೋ ಅಥವಾ ಒಳಗಿನದೋ ಎನ್ನುವುದು ವಾಗ್ವಾದಕ್ಕೆ ಗುರಿಯಾಯಿತು. ಕೆಲವು ಕಾಲದ ಒಳಗೆ ಮತ್ತು ಮತ್ತೆ ಕಾಣದ ರೀತಿಯಲ್ಲಿ ಕಾಲದ ಹೊರಗೆ ಇರುತ್ತದೆ. ನಮಗೆ ಇದಕ್ಕೆ ಕಾರಂತರಲ್ಲಿ ದೃಷ್ಟಾಂತವು ಸಿಗುತ್ತದೆ. ಕಾಲವು ಅದರ ಪಾಡಿಗೆ ಅದು ಹೋಗುತ್ತದೆ ಕಾಲವು ಬಂದಾಗ ನಾವು ಹೋಗುತ್ತೇವೆ, ಆಲೋಚನೆ ಮತ್ತು ಕಾಲಕ್ಕೆ ಒಂದು ಸಂಬಂಧವು ಇದೆ.

ನಾವು ಕಾಲವನ್ನು ಮೀರಿಯೂ ಯೋಚನೆಯನ್ನು ಮಾಡುವುದಕ್ಕೆ ಸಾಧ್ಯವೇ ಎನ್ನುವುದು ಅತ್ಯಂತ ಮೂಲಭೂತವಾದ ಒಂದು ಪ್ರಶ್ನೆ. ಕಾಲವು ನಮಗೆ ಒಂದು ಸಾಧ್ಯತೆಯೂ ಆಗಿದೆ. ಕಾಲವು ಬದಲಾಗುತ್ತದೆ ಅಂದರೆ ನಾವು ಬದಲಾಗುತ್ತೇವೆ ಎಂದೂ ಅರ್ಥವಾಗುತ್ತದೆ. ಇದನ್ನು ಅತ್ಯಂತ ವಿಸ್ತಾರವಾದ ಅರ್ಥದಲ್ಲಿ ಮಾರ್ಕ್ಸ್ ಚರಿತ್ರೆ ಎಂದು ಕರೆದ. ಹೈಡೆಗಾರ್ ಕಾಲ ಮತ್ತು ಅದರ ಪ್ರಜ್ಞೆಯನ್ನು ವಿವರಿಸಿದ್ದ. ಹೆಗೆಲ್ ಕೂಡಾ ಕಾಲವನ್ನು ಕುರಿತು ಹೇಳುತ್ತಾನೆ. ಕಾಲ ಮತ್ತು ಅದರ ಗಣನೆಯನ್ನು ಹೆಗೆಲ್ ಹೇಳುತ್ತಾನೆ. ಎರಡನೆಯದಾಗಿ ಕಾಲವನ್ನು ಹೆಗೆಲ್ ಒಂದು ಪರಿಕಲ್ಪನೆಯ ಅರ್ಥದಲ್ಲಿ ಬಳಸುತ್ತಾನೆ. ಕಾಲಕ್ಕೂ ಅವಕಾಶಕ್ಕೂ ಒಂದು ಸಂಬಂಧವು ಇದೆ. ಆದರೆ ಹೆಗೆಲ್ ಹೇಳುವಾಗ ಕಾಲವನ್ನು ಅವನು ಜ್ಞಾನವನ್ನು ಗಣಿಸಿದ್ದಾನೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಕಾಲ ಎನ್ನುವುದಕ್ಕೆ ಕೆಲವು ಮಿತಿಯೂ ಇದೆ. ಪ್ಲೇಟೋನಲ್ಲಿ ಕಾಲವು ಬಾಹ್ಯಕ್ಕೆ ಸಂಬಂಧಪಟ್ಟದ್ದು ಎನ್ನುವುದೂ ನಿಜ. ಹಾಗೆ ನೋಡಿದರೆ ಮನಸ್ಸು ಮತ್ತು ಅದರ ಸ್ಥಿತಿಯು ನಮಗೆ ಅನೇಕವನ್ನು ಕಲಿಸುತ್ತದೆ. ಕಾಲ ಮತ್ತು ಸತ್ಯವನ್ನು ಹೆಗೆಲ್ ನೋಡುವುದು ಭಿನ್ನವಾದ ಕ್ರಮದಲ್ಲಿ. ಜ್ಞಾನ ಮತ್ತು ಸತ್ಯವನ್ನು ಅವನು ದ್ವಂದ್ವಾತ್ಮಕವಾಗಿ ನೋಡುತ್ತಾನೆ. ವಿಷಯ ಮತ್ತು ವಸ್ತು ಎನ್ನುವುದು ನಮಗೆ ವರ್ಗೀಕರಣಗಳು ಆಗಿವೆ. ಆಧುನಿಕ ಯುಗದಲ್ಲಿ ಲೇಖಕರು ಮತ್ತು ಬುದ್ಧಿಜೀವಿಗಳು ತಮಗೆ ಗೊತ್ತಾದ್ದನ್ನು ಮಾತ್ರವೇ ಜ್ಞಾನವೆಂದು ಪರಿಗಣಿಸುತ್ತಾರೆ. ಅವರಿಗೆ ಯಾವುದು ಗೊತ್ತಿಲ್ಲವೋ ಅದರ ಬಗ್ಗೆ ಅವರಿಗೆ ಒಂದು ಬಗೆಯ ತಾತ್ಸಾರವೂ ಇರುತ್ತದೆ. ಇಲ್ಲಿ ಅರಿಸ್ಟಾಟಲ್ ಮತ್ತು ಅವನ ದೃಷ್ಟಿಕೋನವನ್ನು ಮತ್ತೆ ಹೇಳಬೇಕಾಗಿದೆ: ಅವನು ಸತ್ಯವನ್ನು ಒಂದು ಅರ್ಥದಲ್ಲಿ ಭೌತಿಕವಾದ ನೆಲೆಯಿಂದ ನೋಡುವುದೂ ಇಲ್ಲ. ಯಾವಾಗ ಪುನರುಜ್ಜೀವನವು ಬಂತೋ ಆಗ ಅದರ ಅರ್ಥವು ಬೇರೆಯಾಯಿತು. ಅವರು ತಮ್ಮ ನಿಲುವನ್ನು ಹೇಳಿದರು. ಪುನರುಜ್ಜೀವನವು ಹೇಳಿದ ಕೆಲವು ಮಾತುಗಳು ವಿಶ್ವಾತ್ಮಕವಾಯಿತು. ಹಳೆಯ ವಿಶ್ವಾತ್ಮಕತೆಗೂ ಹೊಸದಾದ ವಿಶ್ವಾತ್ಮಕತೆಗೂ ವ್ಯತ್ಯಾಸವಿದೆ.

ಪುನರುಜ್ಜೀವನ ಕಾಲದ ವೈಚಾರಿಕತೆಯು ಅತ್ಯಂತ ಮುಖ್ಯವಾಗಿದೆ. ಅದು ತನ್ನ ನಿಲುವನ್ನು ಲೋಕಕ್ಕೆ ಅನ್ವಯ ಮಾಡಿದ್ದೂ ಸತ್ಯ. ಆದರೆ ಪುನರುಜ್ಜೀವನ ಕಾಲದ ಚಿಂತನೆಗಳು ಅನೇಕವನ್ನು ಒಂದು ವಲಯಕ್ಕೆ ತರುವ ಯತ್ನವನ್ನು ಮಾಡಿದ್ದು ಸತ್ಯ. ಇದರಿಂದ ಅನೇಕ ದೆವ್ವಗಳು, ಅನೇಕ ನಿಸರ್ಗ, ಅನೇಕ ರೀತಿಯ ಕೇಡು ಎನ್ನುವ ಕಲ್ಪನೆಯನ್ನು ಅದು ನಿರಾಕರಿಸಿತು. ಒಂದು ವಿಚಾರವಾದವು ಮುಂಚೂಣಿಗೆ ಬಂತು. ವಿಷಯ ಮತ್ತು ವಸ್ತು ಎನ್ನುವುದು

ಒಂದು ಪ್ರಭೇದ. ಅದನ್ನು ಅಂಗೀಕರಿಸಿದಲ್ಲಿ ಮಾತ್ರವೇ ಲೋಕವನ್ನು ನಾವು ಗ್ರಹಿಸುವುದು ಸಾಧ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ಸಾಧ್ಯತೆಗಳು ಹೇಗೆ ಮುಖ್ಯವಾಗುತ್ತದೆ ಎನ್ನುವುದೂ ಇದರ ಪ್ರತಿಫಲನವಾಗಿದೆ. ಕೇಡು ಮತ್ತು ಅದರ ಶಕ್ತಿಯು ಯಾವುದು ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆ. ಕೇಡು ಮತ್ತು ಅದರ ಶಕ್ತಿಯನ್ನು ನಾವು ನಿವಾರಿಸಲು ಸಾಧ್ಯ. ಚರಿತ್ರೆ ಎಂದರೆ ಅದು ಘಟನೆ. ಆದರ್ಶವೆಂದರೆ ನಾವು ಸಾಧಿಸಬೇಕಾದ್ದು. ಮತ್ತೊಂದು ಕಡೆಯಿಂದ ವಸ್ತು ಮತ್ತು ಅದರ ಏಕತೆಯು ಅತ್ಯಂತ ಮುಖ್ಯವಾಗಿದೆ ಎಂದು ಪುನರುಜ್ಜೀವನವು ಹೇಳಿತು. ಹಾಗೆ ನೋಡಿದರೆ ಆದರ್ಶ ಎನ್ನುವುದು ಒಂದು ನಿಯಮ. ಅದು ನಮಗೆ ದಕ್ಕಬೇಕಾದ್ದೂ ಹೌದು. ಒಂದು ಹಂತದಲ್ಲಿ ವಿವರಣಾತ್ಮಕವಾದಿಗಳು ಮತ್ತು ವೈಚಾರಿಕರು ಇದನ್ನು ನಿರೂಪಿಸಿದರು. ವಿಜ್ಞಾನವು ಏಕತೆಯನ್ನು ಹೇಳುತ್ತದೆ ಎನ್ನುವುದು ಮತ್ತೊಂದು ನಂಬಿಕೆಯೂ ಆಗಿದೆ. ನಾವು ಯಾವ ಥರ ಅನ್ವಯ ಮಾಡಿದರೂ ವಿಜ್ಞಾನ ಮತ್ತು ಅದರ ಸತ್ಯವು ಒಂದೇ ಎನ್ನುವ ಕಲ್ಪನೆಯು ಬಂದಿತು. ನಮ್ಮ ಅನುಭವ ಮತ್ತು ನಮ್ಮ ಕಣ್ಣಿಗೆ ಯಾವುದು ದಕ್ಕುತ್ತದೆಯೋ ಅದನ್ನು ನಾವು ಸ್ವೀಕಾರ ಮಾಡಲು ಸಾಧ್ಯ ಎನ್ನುವುದು ಈ ಹೊತ್ತಿನ ಚಿಂತಕರ ನಿಲುವೂ ಹೌದು. ನಾವು ಯಾವ ಪದವನ್ನು ಬಳಸುತ್ತೇವೆಯೋ ಅದರ ಸ್ವರೂಪವು ಅದರ ಅರ್ಥವನ್ನು ಹೇಳುತ್ತದೆ. ಅದು ನಮ್ಮ ಜ್ಞಾನವನ್ನು ನಿರೂಪಿಸುತ್ತದೆ. ನಾವು ಯಾವುದನ್ನು ಹೇಗೆ ಅರ್ಥ ಮಾಡಿಕೊಂಡಿದ್ದೇವೆ ಮತ್ತು ಅದರ ನಿರೂಪಣೆಯು ಏನು ಎನ್ನುವುದು ನಮ್ಮ ಜ್ಞಾನವನ್ನು ಹೇಳುತ್ತದೆ. ನಾವು ಪದಗಳನ್ನು ದುರುಪಯೋಗ ಮಾಡಿದರೆ ಆಗ ಮಾತ್ರವೇ ಅರ್ಥವು ವ್ಯತ್ಯಾಸವಾಗುತ್ತದೆ, ಹಾಗೇ ನೋಡಿದರೆ ಈ ಜಗತ್ತು ಮತ್ತು ಅದರ ಲೆಕ್ಕಾಚಾರವನ್ನು ನಾವು ಈವತ್ತು ಮಾಡಬಲ್ಲೆವು ಎಂದು ಆ ಕಾಲದ ಚಿಂತಕರು ಭಾವಿಸಿಕೊಂಡಿದ್ದರು. ಅಂಕೆ ಸಂಖ್ಯೆಗಳು ಕೂಡಾ ಆಗ ಮಹತ್ವದ ಪಾತ್ರವನ್ನು ವಹಿಸಿದ್ದು ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಅಂಕೆಗಳು ಹೇಗೆ ಅತ್ಯಂತ ಪ್ರಭಾವಶಾಲಿಯಾದ ಒಂದು ಮಾನದಂಡವು ಆಯಿತು ಎನ್ನುವುದನ್ನು ಅನೇಕ ಚಿಂತಕರು ವಿವರಿಸಿದರು ರಸೆಲ್ ಹೇಳುವ ಮಹತ್ವದ ವ್ಯಾಖ್ಯೆ ಎಂದರೆ ಎಲ್ಲಾ ದೇವತೆಗಳನ್ನು ನಾಶ ಮಾಡಿ. ಆದರೆ ಒಂದು ಕಾಲಕ್ಕೆ ಸೃಷ್ಟಿ ಮತ್ತು ಅದರ ಪುರಾಣಗಳು ಬೇರೆಯಿದ್ದವು. ದೇವರು ಈ ಭೂಮಿಯನ್ನು ಸೃಷ್ಟಿ ಮಾಡಿದ ಅವು ಸಕಲ ಪ್ರಾಣಿಗಳನ್ನು ಭೂಲೋಕಕ್ಕೆ ಕಳಿಸಿದ ಇತ್ಯಾದಿ ಅಂಶಗಳು ಇದ್ದವು. ಆದರೆ ಅನೇಕ ಕತೆಗಳು ದೇವರು ಮತ್ತು ಅವನ ಶಕ್ತಿಯನ್ನು ಹೇಳುತ್ತವೆ. ನಮ್ಮ ಶಕ್ತಿಯನ್ನು ದೇವರು ನಿರಾಕರಿಸುತ್ತಾನೆ.

ದೇವರಿಗೆ ಅತ್ಯಂತ ಹೆಚ್ಚು ಶಕ್ತಿಯು ಇದೆ. ಅವನು ಸರ್ವಶಕ್ತ. ಅವನಿಗೆ ಈ ಜಗತ್ತನ್ನು ಆಳುವ ಶಕ್ತಿಯು ಇದೆ. ದೇವರು ನಮ್ಮ ಹಣೆಯಲ್ಲಿ ಅನೇಕವನ್ನು ಬರೆದಿದ್ದಾನೆ. ಅವನು ಏನು ಬರೆದಿದ್ದಾನೆಯೋ ಅದರಂತೆ ನಾವು ಆಗುತ್ತೇವೆ. ದೇವರು ಮತ್ತು ಅವನ ಸರ್ವಶಕ್ತಿಯೇ ನಮಗೆ ಅನ್ನವನ್ನು ಕೊಟ್ಟಿದೆ ಎನ್ನುವುದು ಹಿಂದಿನ ನಂಬಿಕೆಗಳು. ಆದ್ದರಿಂದ ಜನರು ದೇವರಿಗೆ ಭಯ ಪಡುತ್ತಿದ್ದರು. ಅವನೇ ನಮಗೆ ಗುರಿ, ನಮ್ಮ ಪಾಪವೋ, ಪುಣ್ಯವೋ ನಮ್ಮ ಮುಂದಿನ ಜನ್ಮವನ್ನು ನಿರ್ಧರಿಸುತ್ತದೆ. ಯಾರು ಪುಣ್ಯವನ್ನು ಮಾಡಿದ್ದಾರೆಯೋ ಅವರು ದೇವರ ಪಾದವನ್ನು ಸೇರುತ್ತಾರೆ. ದೇವರು ಮತ್ತು ಅವನ ನಾಮದ ಬಲವು ಅತ್ಯಂತ ದೊಡ್ಡದು. ಯಾರು ಅವನ ಹೆಸರನ್ನು ಹೇಳುತ್ತಾರೆಯೋ ಅವರಿಗೆ ದೇವರು ಒಲಿಯುತ್ತಾನೆ. ಇಲ್ಲಿ ನಾಮ ಮತ್ತು ಅದರ ಉಚ್ಚಾರಣೆಯೇ ಮೂಲವಾಗುತ್ತದೆ. ಹಾಗಿದ್ದರೆ ದೇವರನ್ನು ಗುರುತಿಸುವುದು ಹೇಗೆ? ವಿಧಿವಾದಿಗಳು ಎಲ್ಲವನ್ನೂ ಅವನಿಗೆ ಬಿಟ್ಟಿದ್ದಾರೆ. ಅವನು ಸಕಲ ಚರಾ ಚರದಲ್ಲಿ ಇರುತ್ತಾನೆ. ದೇವರು ನಿಸರ್ಗದಲ್ಲಿ ಇರುತ್ತಾನೆ. ಭೂಮಿಯಲ್ಲಿ ಇರುತ್ತಾನೆ. ಅವನ ಶಕ್ತಿಯನ್ನು ಯಾರು ಒಪ್ಪುವುದಿಲ್ಲವೋ ಅವರು ನಾಶ ಹೊಂದುತ್ತಾರೆ. ಯಾರು ನಿಜವಾಗಿಯೂ ಅತ್ಯಂತ ಅನಾರೋಗ್ಯದಲ್ಲಿ ಇರುತ್ತಾರೆಯೋ ಅವರು ದೇವರ ಶಾಪಕ್ಕೆ ಗುರಿಯಾಗಿದ್ದಾರೆ ಎಂದು ಅರ್ಥ. ಇವುಗಳು ದೇವರನ್ನು ಕುರಿತಾದ ನಂಬಿಕೆಗಳು. ನಾವು ಸ್ವತಃ ಏನೂ ಮಾಡಬೇಕಾಗಿಲ್ಲ. ದೇವರ ಋಣವು ನಮಗೆ ಇದೆ. ಆದ್ದರಿಂದ ನಾವು ಕಷ್ಟವನ್ನು ಬಗೆಹರಿಸಲು ದೇವರನ್ನು ಒಲಿಸಬೇಕು. ಅವನ ನಾಮ ಸ್ಮರಣೆಯೆ ನಮಗೆ ಅವನ ಋಣವನ್ನು ದಾಟಲು ಇರುವ ಒಂದು ದಾರಿಯೆಂದು ನಂಬಲಾಗಿತ್ತು. ಆದರೆ ಪ್ರಶ್ನೆ ಬಂದುದು ಬೇರೆ. ದೇವರು ನಮಗೆ ಎಲ್ಲವನ್ನು ಕೊಟ್ಟಿದ್ದಾನೆ ಎಂದಾದರೆ ನಾವು ಯಾಕೆ ಹೀಗೆ ಇದ್ದೇವೆ? ಕೂತಲ್ಲಿಯೇ ನಮ್ಮ ಬಾಯಿಗೆ ಅನ್ನವು ಬಂದು ಬೀಳುತ್ತದೆಯೇ? ದೇವರು ವಾಸ್ತವವಾಗಿ ಕಲ್ಪಿತನೇ ಹೊರತು ಮತ್ತೇನೂ ಅಲ್ಲವೆಂದು ತರ್ಕವಾದಿಗಳು ಹೇಳಿದರು. ಯಾವುದು ನಮ್ಮ ಕಣ್ಣಿಗೆ ಕಾಣಿಸುವುದೇ ಇಲ್ಲವೋ ಅದನ್ನು ದೇವರು ಎಂದು ಕರೆಯುವುದು ಹೇಗೆ ಎನ್ನುವುದು ತರ್ಕವಾದಿಗಳ ನಿಲುವು. ತರ್ಕವು ಒಂದು ಹೇಳುತ್ತದೆ. ವಿಧಿವಾದವು ಮತ್ತೊಂದನ್ನು ಹೇಳುತ್ತದೆ. ವಿಧಿವಾದಿಗಳು ನಮಗೆ ಹೇಳುವುದೇ ಬೇರೆ ವಿಚಾರಗಳನ್ನು. ಅವರು ದೇವರು ಇದ್ದಾನೆ. ಆದರೆ ಅವನು ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ವಿಚಾರವಾದಿಗಳು ಇದನ್ನು ಒಪ್ಪುವುದು ಸಾಧ್ಯವೇ ಇರಲಿಲ್ಲ. ಉದಾ: ಮೂಕಜ್ಜಿಯ ಕನಸುಗಳು.

ಪುನರುಜ್ಜೀವನ ಕಾಲದ ಅನಂತರ ಮನುಷ್ಯ ಮತ್ತು ಅವನ ಅಸ್ತಿತ್ವವು ಅತ್ಯಂತ ಮಹತ್ವದ ತಿರುವನ್ನು ಪಡೆಯಿತು. ಅವನು ಶಕ್ತಿವಂತ ಮತ್ತು ಅವನು ಅನೇಕವನ್ನು ನಿಯಂತ್ರಿಸಬಲ್ಲ ಎನ್ನುವ ಅರಿವು ಉಂಟಾಯಿತು. ಚೋಮನಿಗೆ ದೈವ ಮತ್ತು ಅದರ ಶಕ್ತಿಯು ಅತ್ಯಂತ ದೊಡ್ಡದು. ಆದರೆ ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಲಚ್ಚನನ್ನು ಆ ಥರ ನೋಡಲು ಆಗುವುದಿಲ್ಲ. ದೈವೀವಾದಿಯಾದ ಅಥವಾ ಭೂತವಾದಿಯಾದ ಚೋಮನು ಇಬ್ಬರನ್ನು ಹೆಚ್ಚು ಶಕ್ತಿಶಾಲಿಗಳು ಎಂದು ಭಾವಿಸಿದ್ದಾನೆ: ಒಬ್ಬರು ಸಂಕಪ್ಪಯ್ಯ. ಅವರು ಮನಸ್ಸು ಮಾಡಿದರೆ ಅವನ ಸಣ್ಣ ಆಸೆಯನ್ನು ನೆರವೇರಿಸಲು ಶಕ್ತರು. ಮತ್ತೊಂದು ಭೂತ. ಇದು ದೇವರು ಅಲ್ಲ, ಭೂತ ಎಂದು ನೆನಪಿಟ್ಟುಕೊಳ್ಳಬೇಕು. ಭೂತವು ದೇವರ ಆಳು. ಅದರ ಜಾಗವೇ ಬೇರೆ. ಅದಕ್ಕೆ ಒಂದು ಕಲ್ಲೋ ಒಂದು ಮರವೋ, ಗುಡಿಯೋ ಇದ್ದರೆ ಸಾಕಾಗುತ್ತದೆ. ಆದರೆ ದೇವರಿಗೆ ಹಾಗೆ ಇಲ್ಲ. ಮನುಷ್ಯನೇ ಕೇಂದ್ರವಾಗುವುದು ಮತ್ತು ಅವನ ಸುತ್ತ ಪರಿಸರವು ಇರುವುದು ಒಂದು ಮಾದರಿ. ದೇವರು ಕೇಂದ್ರವಾಗುವುದು ಮತ್ತು ಮನುಷ್ಯನು ಅವನ ಕೆಳಗೆ ಆಳಿನಂತೆ ಇರುವುದು ಬೇರೆ. ಪುನರುಜ್ಜೀವನವು ಈ ಪ್ರಶ್ನೆಯನ್ನು ಕೇಳಿತು: ನಾವು ದೇವರ ಆಳುಗಳೇ? ಅಥವಾ ನಾವು ದೇವರ ಸಂದೇಶವನ್ನು ಹೊತ್ತು ತಂದವರೇ? ನಮಗೆ ಯಾವುದೇ ಸ್ವಾತಂತ್ರ್ಯವು ಇಲ್ಲವೆ? ವಾಸ್ತವವಾಗಿ ಇಲ್ಲಿ ಋಣ ಮತ್ತು ವ್ಯಕ್ತಿಯ ಸಂಬಂಧವು ಬೇರೆಯಿದೆ. ದೇವರನ್ನು ನಂಬುವವನು ಒಂದು ಅರ್ಥದಲ್ಲಿ ಯಾಕೆ ಮತ್ತು ಹೇಗೆ ಏನು ಮುಂತಾದ ಪ್ರಶ್ನೆಗಳನ್ನು ಕೇಳುವುದಿಲ್ಲ. ಮಾಟ, ಪವಾಡ, ಮದ್ದು ಹಾಕುವುದು ಇತ್ಯಾದಿಗಳನ್ನು ಜನರು ನಂಬುತ್ತಾರೆ. ಅವರ ಮಟ್ಟಿಗೆ ಅದು ಸರಿಯಾದ ನಿಲುವು ಹೌದು. ಪುನರುಜ್ಜೀವನ ಕಾಲಘಟ್ಟವು ಅಧಿಕಾರವನ್ನು ನಿರೂಪಿಸಿದ ಕ್ರಮವು ಬೇರೆಯಾದ್ದರಿಂದ ಅದರ ಚಹರೆಗಳೂ ಭಿನ್ನವಾಗುತ್ತವೆ. ಸ್ಫೂರ್ತಿ ಮತ್ತು ಅದರ ಪ್ರಶ್ನೆಗಳೂ ಭಿನ್ನವಾದವು. ದೇವರು ಮತ್ತು ಜ್ಞಾನ ಎನ್ನುವುದು ಸಮಸ್ಯಾತ್ಮಕವೂ ಆಯಿತು. ಕಾರಂತರು ವ್ಯಕ್ತಿ ಮತ್ತು ಅವನ ನಂಬಿಕೆಯನ್ನು ಬೇರೆ ಮಾಡುತ್ತಾರೆ. ಅದನ್ನು ಯಾರೂ ಒತ್ತಾಯಿಸಲು ಬರುವುದಿಲ್ಲ. ಇಲ್ಲಿ ಮತ್ತೆ ಒಂದು ಮಾತನ್ನು ನೋಡಬೇಕಾಗುತ್ತದೆ. ಪುನರುಜ್ಜೀವನವು ಹೊಸದಾದ ಕೆಲವು ಚಿಂತನೆಗಳನ್ನು ಹುಟ್ಟು ಹಾಕಿದ್ದು ನಿಜ. ಅದು ಜನರ ಶಕ್ತಿಯನ್ನು ಹೆಚ್ಚು ಮಾಡಿತು. ತರ್ಕಗಳು ಬದಲಾದವು. ವಸ್ತು ಮತ್ತು ಅದರ ಸತ್ಯವನ್ನು ನೋಡುವ ಕ್ರಮಗಳು ಬೇರೆಯಾದವು. ಡಾ.ಡಿ.ಆರ್. ನಾಗರಾಜರವರು ಹೀಗೆ ಅಭಿಪ್ರಾಯ ಪಡುತ್ತಾರೆ." ಹೊಸ ಚಾರಿತ್ರಿಕಯುಗಗಳು ತಮ್ಮ ಅಭಿವ್ಯಕ್ತಿಗೆ ಹೊಸ ಪ್ರಕಾರಗಳನ್ನು ಹುಡುಕಿಕೊಳ್ಳುತ್ತವೆ. ಎಂಬ ಮಾತಿನ ಹಿನ್ನೆಲೆಯಲ್ಲಿ

ನೋಡುವುದಾದರೆ ಕಾದಂಬರಿ ಪ್ರಕಾರ ಆಧುನಿಕ ಬಂಡವಾಳಶಾಹಿ ಜಗತ್ತಿನ ಕೂಸು ಅಥವಾ ಹೃದಯ. ಮಧ್ಯಮ ವರ್ಗಗಳ ಮಹಾಕಾವ್ಯ ಕಾದಂಬರಿ ಎಂದು ಹೆಗೆಲ್ ಹೇಳಿದ್ದು ಈ ಅರ್ಥದಲ್ಲಿಯೇ. ಒಂದು ವಿಶಿಷ್ಟ ಜೀವನ ದರ್ಶನ ಕಾದಂಬರಿ ಪ್ರಕಾರದ ಅಸ್ತಿತ್ವದೊಳಗೆ ಮೂಲಭೂತವಾಗಿ ಬೆರೆತಿರುತ್ತದೆ. (ಅಮೃತ ಮತ್ತು ಗರುಡ, 1990, ಪುಟ.25)

ಇಲ್ಲಿ ನಾವು ನೋಡಬೇಕಾದದ್ದು ವ್ಯಕ್ತಿತ್ವ ಎನ್ನುವುದು ಹೇಗೆ ಮುನ್ನೆಲೆಗೆ ಬಂದವು ಎಂದು ಮಾತ್ರವೇ. ಹೆಗೆಲ್ ತನ್ನ ವಾದವನ್ನು ಮಂಡಿಸುವಾಗ ಅದನ್ನು ದ್ವಂದ್ವ ಎನ್ನುವ ಪರಿಕಲ್ಪನೆಯ ಜೊತೆಗೆ ವಿವರಿಸುತ್ತಾನೆ. ಇದು ಒಂದು ತಾತ್ವಿಕವಾದ ಚರ್ಚೆಯನ್ನು ಮಂಡಿಸುತ್ತದೆ. ವೈರುಧ್ಯಗಳು ಮತ್ತು ಸ್ಥಾನಾಂತರಗಳನ್ನು ಇದು ಸೂಚಿಸುತ್ತದೆ. ಅಷ್ಟೇ ಅಲ್ಲ ದ್ವಂದ್ವ ಎಂದರೆ ಅದು ಎರಡು ನಿಲುವು ಎನ್ನುವುದನ್ನು ಇದು ಹೇಳುತ್ತದೆ. ಇದನ್ನು ಒಂದು ತರ್ಕವೆಂದು ಹೆಗೆಲ್ ಭಾವಿಸುತ್ತಾನೆ. ಇದರಲ್ಲಿ ಮೊದಲನೆಯದಾಗಿ ಅರ್ಥಮಾಡಿಕೊಳ್ಳುವ ಒಂದು ಕ್ರಮ. ಎರಡನೆಯಾಗಿ ಇದು ಒಂದು ವೈಚಾರಿಕವಾದ ನಿಲುವು. ಮೂರನೆಯದಾಗಿ ಇದು ಸ್ವಯಂ ಪ್ರಕಟಣೆ. ಇದನ್ನು ಊಹಾತ್ಮಕ ಎಂದೂ ಅವನು ಭಾವಿಸುತ್ತಾನೆ. ಇದನ್ನು ವಿವರಿಸುವಾಗ ನಿರಾಕರಣೆ ಎನ್ನುವುದನ್ನು ಅವನು ಹೇಳುತ್ತಾನೆ. (ನೆಗೇಶನ್) ಆಂತರಿಕತೆಯೆನ್ನುವುದು ಇದರಲ್ಲಿ ಮುಖ್ಯ. ಆದರೆ ಇದನ್ನು ನಾವು ಬರೀ ಸರಳವಾದ ತರ್ಕವನ್ನು ಮಂಡಿಸುವ ಕ್ರಮವೆಂದು ತಿಳಿಯಬಾರದು. ಇದರಲ್ಲಿ ಬರುವ ನಿರಾಕರಣೆ ಎನ್ನುವುದಕ್ಕೆ ಹೆಚ್ಚು ವಿವರವಾದ ಅರ್ಥವು ಇದೆ. ಸಂಕಥನವೇ ಇಲ್ಲಿ ಮುಖ್ಯವಾಗುತ್ತದೆ. ಮತ್ತೊಂದು ಅತ್ಯಂತ ಸರಳವಾದ ಉದಾಹರಣೆಯನ್ನು ಕೊಡಬಹುದು ಪ್ಲೇಟೋ ಇದನ್ನು ವಿರೋಧಗಳ ಸ್ವಭಾವ ಎಂದು ಕರೆದಿದ್ದಾನೆ. ಅವನಲ್ಲಿ ಆಗುವುದು ಎನ್ನುವುದೇ ದ್ವಂದ್ವಾತ್ಮಕವಾಗಿದೆ. ಅದು ವಸ್ತುನಿಷ್ಟತೆ ಮತ್ತು ಆಗುವುದನ್ನು ಹೇಳುತ್ತದೆ. ವಾಸ್ತವ ಮತ್ತು ಆಗುವುದು ಒಂದು ಕಡೆಗೆ ಇದ್ದರೆ ಇನ್ನೊಂದು ಕಡೆಯಿಂದ ಇದು ನಮಗೆ ತತ್ವಜ್ಞಾನವನ್ನು ಹೇಳುತ್ತದೆ. ಹೆಗೆಲ್ ಇದನ್ನು ಲಕ್ಷಣವೆಂದು ಹೇಳುತ್ತಾನೆ. ಇದು ವೈಜ್ಞಾನಿಕವೂ ಆಗಿದೆ. ಅದರ ಜೊತೆಗೆ ಇದು ನಮಗೆ ವಾಸ್ತವ ಮತ್ತು ಅದರ ಪ್ರಾತಿನಿಧೀಕರಣವನ್ನು ಹೇಳುತ್ತದೆ. ವೈಜ್ಞಾನಿಕ ಜ್ಞಾನವು ಅದರ ಪಾಡಿಗೆ ಅದು ಅನನ್ಯವೂ ಆಗಿರುತ್ತದೆ, ನಿಜವಾಗಿ ಆಗುವುದು ಅಂದರೆ ತನ್ನನ್ನು ರೂಪಿಸಿಕೊಳ್ಳುವುದೂ ಆಗುತ್ತದೆ.

ಯಾವಾಗ ವಾಸ್ತವವು ನಮ್ಮ ಅರಿವಿಗೆ ಬರುತ್ತದೆಯೋ ಆಗ ಅದರ ಬಗ್ಗೆ ನಾವು ಮಾತಾಡಲು ಪ್ರಾರಂಭ ಮಾಡುತ್ತೇವೆ. ಹೆಗೆಲ್ ಆಗುವುದು ಎಂದರೆ

ಒಂದು ನಮಗಾಗಿ ನಾವು ಆಗುವುದು. ಇದನ್ನು ವಸ್ತುವಿಗೂ ಅನ್ವಯವನ್ನು ಮಾಡಬಹುದು. ಮತ್ತೊಂದು ಆಗುವುದು ಅಂದರೆ ಇನ್ನೊಬ್ಬರಿಗೆ ನಾವು ಆಗುವುದು. ಇದು ವಸ್ತುವಿಗೂ ಅನ್ವಯವಾಗುತ್ತದೆ. ಇದು ಜ್ಞಾನವನ್ನು ಹೇಳುತ್ತದೆ. ಆಲೋಚನೆಯ ಕ್ರಮವನ್ನು ಸೂಚಿಸುತ್ತದೆ. ಪರಿಕಲ್ಪನೆಯನ್ನು ಕೂಡಾ ಪ್ರತಿನಿಧಿಸುತ್ತದೆ. ಸತ್ಯ ಮತ್ತು ಅದರ ಜ್ಞಾನ ಎನ್ನುವುದು ಧನಾತ್ಮಕವಾಗಿದ್ದು ಅದು ವಾಸ್ತವವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವನ್ನು ಮಾಡುತ್ತದೆ. ವಿವೇಕಿಯಾದ ಮನುಷ್ಯನು ಈ ದೃಷ್ಟಿಯಿಂದ ನಮಗೆ ಜೀವನ ಮತ್ತು ಅದರ ಅರ್ಥಪೂರ್ಣತೆಯನ್ನು ಹೇಳುತ್ತಾನೆ. ನಿಜವಾದ ಜ್ಞಾನ ಎಂದರೆ ಅದು ವಾಸ್ತವವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು. ನಿಜವಾದ ಜ್ಞಾನವು ನಮಗೆ ಸಮಗ್ರವಾದ ಒಂದು ಅರಿವನ್ನು ಕೊಡುತ್ತದೆ. ಪ್ರಜ್ಞೆಗೂ ದ್ವಂದ್ವಾತ್ಮಕ ಸ್ವರೂಪಕ್ಕೂ ಸಂಬಂಧವಿದೆ. ವಿವೇಕಿಗೆ ತಾನು ಏನು ಮತ್ತು ಎತ್ತ ಎನ್ನುವುದು ಗೊತ್ತಿರುತ್ತದೆ. ನಮ್ಮ ಅಸ್ತಿತ್ವವು ಆಗುತ್ತದೆ. ಮತ್ತು ಅದರ ಸ್ವರೂಪವು ಅತ್ಯಂತ ಖಚಿತವೂ ಆಗಿರಬೇಕಾಗುತ್ತದೆ. ಅದನ್ನು ಒಬ್ಬ ವಿವೇಕಿಯು ಹೇಳುತ್ತಾನೆ. ತುಂಬಾ ಶುದ್ಧವಾದ ಅರ್ಥದಲ್ಲಿ ಹೇಳಬೇಕೆಂದರೆ ಅಸ್ತಿತ್ವ ಮತ್ತು ಆಗುವುದು ಎನ್ನುವುದಕ್ಕೆ ಹೇಗೆ ಸಂಬಂಧವಿದೆಯೋ ಅದೇ ರೀತಿಯಲ್ಲಿ ಆಗುವುದು ಮತ್ತು ಅನುಭವಕ್ಕೆ ಒಂದು ಸಂಬಂಧವಿದೆ. ಇಲ್ಲಿ ಒಂದು ಮಾತನ್ನು ನಾವು ಹೇಳಬೇಕಾಗುತ್ತದೆ: ಆಗುವುದು ಅಂದರೆ ಅದನ್ನು ಹೆಗೆಲ್ ವೈಜ್ಞಾನಿಕ ಎಂದು ಕರೆಯುತ್ತಾನೆ. ಈ ಜಗತ್ತು ವಿಜ್ಞಾನದ ಸಹಾಯದಿಂದಲೂ ಆಗಿದೆ. ಅದರ ಜೊತೆಗೆ ಅದು ನಮ್ಮನ್ನು ಬದಲಿಸಿದೆ. ಆದ್ದರಿಂದ ಆಗುವುದು ಎನ್ನುವುದು ವಿಜ್ಞಾನದ ವಾಸ್ತವಿಕವಾದ ಅರಿವು. ಆದರೆ ಹೆಗೆಲ್ ವಿಜ್ಞಾನವನ್ನು ದ್ವಂದ್ವಾತ್ಮಕತೆಯಲ್ಲಿ ಕಾಣುತ್ತಾನೆ. ಅದರಲ್ಲಿ ಅವನು ಭೌತಶಾಸ್ತ್ರವನ್ನು ಗಮನಕ್ಕೆ ತಂದುಕೊಂಡಿದ್ದಾನೆ. ಭೌತಿಕವಾದ ಸತ್ಯವನ್ನು ಅವನು ಪರಿಶೀಲಿಸುವುದೂ ಇದೇ ಅರ್ಥದಲ್ಲಿ. ವಾಸ್ತವ ಮತ್ತು ಅನುಭವ ಎರಡನ್ನೂ ಈವತ್ತು ನಾವು ಭೌತಿಕವಾದ ಸ್ವರೂಪದಲ್ಲಿ ನೋಡಬಹುದು. ವಸ್ತು ಮತ್ತು ಅದರ ರಚನೆಯೂ ವಾಸ್ತವವಾಗುತ್ತದೆ. ವಾಸ್ತವ ಮತ್ತು ಅದರ ಅನುಸಂಧಾನದಲ್ಲಿ ಸಂಕಥನಗಳು ರೂಪುಗೊಳ್ಳುತ್ತವೆ. ವಾಸ್ತವ ಎನ್ನುವುದು ನಮಗೆ ಗಣಿತಶಾಸ್ತ್ರದಂತೆ. ಅದು ಅಮೂರ್ತವಲ್ಲ. ಆದರೆ ಇದನ್ನು ವಿವರಿಸುವಾಗ ಕ್ರೋಚೆ ಒಂದು ರೂಪಕವನ್ನು ಕೊಡುತ್ತಾನೆ: ಪ್ರತಿಯೊಂದು ವಿಜ್ಞಾನವೂ ಹುಟ್ಟುವುದು ಒಂದು ಐತಿಹ್ಯದಂತೆ ಹುಟ್ಟುತ್ತದೆ. ಆದರೆ ತತ್ವಜ್ಞಾನ ಅಥವಾ ವಿಜ್ಞಾನವು ಸತ್ಯದ ಹುಡುಕಾಟದ ಮೂಲಕ ಹುಟ್ಟುತ್ತದೆ. ಆದರೆ ಇಲ್ಲಿ ಅದನ್ನು ನಾವು ವಿಶ್ವಾತ್ಮಕ ಎಂದು ಕರೆಯಬೇಕಾಗುತ್ತದೆ ಎಂದು ಹೆಗೆಲ್‌ನ ಅಭಿಪ್ರಾಯ. ಪ್ರಮೇಯ ಮತ್ತು ಪ್ರತಿಪ್ರಮೇಯಗಳ ಸಂಘರ್ಷದಿಂದ ನಿಜವಾದ

ಒಂದು ರೂಪವು ಸಿಗುತ್ತದೆ. ಗ್ರೀಕ್ ಪರಂಪರೆಯ ಮಾತುಕತೆಗಳ ರೂಪವನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಸಾಕ್ರೇಟಿಸ್ ಮತ್ತು ಪ್ಲೇಟೋ ಅವರ ಮಾತಿನ ಕ್ರಮವು ಈ ರೀತಿಯದು. ಇದನ್ನು ಯಕ್ಷಗಾನ ತಾಳಮದ್ದಲೆಗೆ ಹೋಲಿಸಬಹುದು. ಮಾತಿಗೆ ಮಾತು ಪ್ರಶ್ನೆ ಮತ್ತು ಉತ್ತರದ ಥರ ಇರುತ್ತದೆ. ಪ್ಲೇಟೋ ಮತ್ತು ಸಾಕ್ರೇಟಿಸ್‌ನ ಮಧ್ಯೆ ನಡೆಯುವ ಮಾತುಕತೆಗಳು ಥೀಸೀಸ್ ಮತ್ತು ಆಂಟಿಥೀಸಿಸ್ ಮತ್ತು ಸಾರ ಎನ್ನುವ ರೂಪದಲ್ಲಿ ಇದೆ. ಏಕಮುಖವಾದ ನಿಲುವು ದ್ವಂದ್ವಾತ್ಮಕವಲ್ಲ. ಡೆಸ್ಕಾರ್ಟೆಸ್ ಇದನ್ನು ಹೇಳುವಾಗ ದ್ವಂದ್ವಾತ್ಮಕತೆ ಎನ್ನುವುದು ಒಂದು ರೀತಿಯಿಂದ ಮಾಧ್ಯಮವೂ ಆಗಿದೆ ಎಂದು ಹೇಳುತ್ತಾನೆ. ಆಶಯ ಮತ್ತು ಸಂಕಥನವನ್ನು ಅವನು ಜೊತೆಗೆ ನೋಡುತ್ತಾನೆ. ದ್ವಂದ್ವಾತ್ಮಕತೆ ಎನ್ನುವುದು ಅನ್ವಯದ ಕ್ರಮವೂ ಆಗಿದೆ. ವಾಸ್ತವವನ್ನು ನೋಡುವುದು ಅಂದರೆ ಅದು ಒಂದು ದೃಷ್ಟಿಕೋನವೂ ಆಗಿದೆ. ಸತ್ಯ ಎನ್ನುವುದು ನಮಗೆ ಬಾಹ್ಯದ ರಚನೆಯೂ ಆಗಿದೆ. ಅದನ್ನೇ ಮೇಲು ರಚನೆ ಎಂದೂ ಕರೆಯುತ್ತಾರೆ. ತತ್ವಜ್ಞಾನದಲ್ಲಿ ಯಾವುದು ಸತ್ಯ ಮತ್ತು ಯಾವುದು ಮಿಥ್ಯೆ ಎನ್ನುವ ಪ್ರಶ್ನೆಯು ಇದ್ದೇ ಇದೆ. ವಾಸ್ತವವು ಸಮಗ್ರವೂ ಆಗಿದೆ. ಮರ ಮತ್ತು ನೆರಳು ಎನ್ನುವುದನ್ನು ಇಲ್ಲಿ ನೆನಪು ಮಾಡುವುದು ಸೂಕ್ತ. ನೆರಳು ಸತ್ಯವೇ ಸುಳ್ಳೆ? ಆದ್ದರಿಂದ ವಾಸ್ತವವನ್ನು ನಾವು ಈವತ್ತು ದ್ವಂದ್ವಾತ್ಮಕವಾಗಿ ನೋಡಬೇಕಾಗುತ್ತದೆ. ಹಾಗೆ ನೋಡಿದರೆ ನಾವು ವಾಸ್ತವವನ್ನು ಬರಹದಲ್ಲಿ ರೂಪಿಸುವುದು ಹೇಗೆ ಎನ್ನುವುದು ಹೆಗೆಲನ ಪ್ರಶ್ನೆ. ಯಾವುದು ವಾಸ್ತವವಾಗಿತ್ತೋ ಅದು ನಾವು ಬರೆಯುವ ಹೊತ್ತಿಗೆ ಭೂತಕಾಲವಾಗುತ್ತದೆ ಅಷ್ಟೇ ಅಲ್ಲ ಬರಹದಲ್ಲಿ ನಾವು ಒಂದು ತಪ್ಪನ್ನು ಮಾಡಿರುತ್ತೇವೆ. ಅದು ಭೂತಕಾಲವನ್ನು ಹೇಳುತ್ತಾ ಹೋಗುವುದು. ಬರೆಯುವುದು ಅಂದರೆ ಅದು ನಮಗೆ ಕಳೆದು ಹೋದ ಕ್ಷಣವನ್ನು ಹೇಳುವುದು.

ಹೀಗಾಗಿ ಲಕಾನ್ ವಾಸ್ತವ ಮತ್ತು ವಾಸ್ತವತೆಯನ್ನು ಬೇರೆ ಮಾಡುತ್ತಾನೆ. ಕೆಲವು ವಿಷಯಗಳಿಗೆ ಭೌತಿಕವಾದ ಸ್ವರೂಪವೂ ಇರುತ್ತದೆ. ಮತ್ತು ಅವನ್ನು ಹಾಗೆ ವಿವರಿಸುತ್ತೇವೆ. ವಸ್ತು ಮತ್ತು ಅದರ ಭೌತಿಕವಾದ ಅಸ್ತಿತ್ವವೂ ಅತ್ಯಂತ ಮುಖ್ಯವಾಗುತ್ತದೆ. ಆದರೆ ಯಾರು ವಿವರಣೆಯನ್ನು ಒಪ್ಪುವುದಿಲ್ಲವೋ ಅವರು ಪರಿಣಾಮವನ್ನು ಕುರಿತು ಹೇಳಲಾರರು. ಈ ದೃಷ್ಟಿಯಿಂದ ಉದ್ದೇಶಿತ ವಸ್ತು ಮತ್ತು ಅದರ ವಿವರಣೆಗೆ ಅತ್ಯಂತ ಮಹತ್ವ ಇದೆ. ವಸ್ತು ಮತ್ತು ಅದು ಕೊಡುವ ಸೂಚನೆಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವವೂ ಇದೆ. ವ್ಯತ್ಯಾಸವು ಇರುವುದು ನಿಜ ಮತ್ತು ಅದನ್ನು ಸಂಕೇತದ ಮೂಲಕವೇ ಹೇಳಿಕೊಳ್ಳುವುದರಲ್ಲಿ ಎನ್ನುವುದನ್ನು

ಮರೆಯಬಾರದು. ವಾಸ್ತವತೆಯ ಭಾಷೆ ಎಂದರೆ ಅದು ಹೇಗೆ ಹೇಳುತ್ತದೆ ಎಂದು ಮಾತ್ರವೇ ಮುಖ್ಯ. ಅದರಲ್ಲಿ ನೇರ ಸಂಕೇತಗಳು ಇರುತ್ತವೆ. ಈ ಮಾದರಿಯಲ್ಲಿ ಶುದ್ಧ ಸೂಚಕನು ಇರುತ್ತಾನೆ. ಚಾರಿತ್ರಿಕ ಅನುಭವನ್ನು ಅವನು ನೇರವಾಗಿಯೇ ಹೇಳುತ್ತಾನೆ. ಏಕತೆ, ಅನನ್ಯತೆ ಮತ್ತು ಚಾರಿತ್ರಿಕವಾದ ಸತ್ಯಗಳು ಮುಖ್ಯವಾಗುತ್ತವೆ. ಆದ್ದರಿಂದ ಸೂಚಕನನ್ನು ಹೊರತುಪಡಿಸಿದ ಸೂಚನೆ ಎನ್ನುವುದೂ ಅರ್ಥ ಹೀನವಾಗುತ್ತದೆ. ಎಲ್ಲಕ್ಕಿಂತ ಅರ್ಥದ ತಾತ್ವಿಕತೆಯನ್ನು ನಾವು ಓದುವ ಸಂದರ್ಭದಲ್ಲಿ ಗ್ರಹಿಸಬೇಕಾಗುತ್ತದೆ. ಅರ್ಥದ ಅನುಭವ ನಮಗೆ ಬೇಕಾಗುತ್ತದೆ. ಯಾರು ನಿಜವಾಗಿಯೂ ಈ ರೀತಿಯ ಬರಹವನ್ನು ರೂಪಿಸುತ್ತಾರೆಯೋ ಅವರು ಬರವಣಿಗೆಯಲ್ಲಿ ತಮ್ಮ ಅನುಭವ ಮತ್ತು ಅದರ ಗ್ರಹಿಕೆಯನ್ನು ಒಂದು ರೀತಿಯಲ್ಲಿ ಮಂಡಿಸುತ್ತಾರೆ. ಅವರ ಬರಹದಲ್ಲಿ ವಸ್ತುವು ಎದ್ದುಕಾಣಿಸುತ್ತದೆ. ವಸ್ತು ಮತ್ತು ಅದರ ವಿವರಣೆಯು ಅವರಲ್ಲಿ ಹೆಚ್ಚು ಮುಖ್ಯವಾಗುತ್ತದೆ. ವಾಸ್ತವತೆಯಲ್ಲಿ ವ್ಯಕ್ತಿಯು ಮಾಡುವ ನಿರೂಪಣೆಯು ವಸ್ತು ಮತ್ತು ಅದರ ಸಾರವನ್ನು ಹೇಳುತ್ತದೆ. ಯಾರು ವಿವರಣೆಯನ್ನು ಮಾಡುತ್ತಾರೆಯೋ ಅವರು ತಮ್ಮ ಜನಾಂಗ ಮತ್ತು ದೇಶವನ್ನು ನೋಡುವ ವಿಧಾನವೂ ಬೇರೆಯಾಗುತ್ತದೆ. ಅವು ನಿರ್ದಿಷ್ಟವಾದ ಅರ್ಥವನ್ನು ಹೇಳುತ್ತವೆ. ಅರ್ಥಗಳನ್ನು ಅವರು ಕಟ್ಟಿ ಕೊಡುತ್ತಾರೆ. ಇದರಲ್ಲಿ ವಸ್ತು ಮತ್ತು ಅದರ ಅನನ್ಯತೆಯು ಹೆಚ್ಚು ಮುಖ್ಯವಾಗುತ್ತವೆ. ತಾತ್ವಿಕ ಅರ್ಥಕ್ಕೂ ಇದರಲ್ಲಿ ಹೆಚ್ಚು ನಿರ್ದಿಷ್ಟತೆಯು ಇದೆ. ಸೂಚಕನು ಇಲ್ಲಿ ತನ್ನ ಅನನ್ಯತೆಯನ್ನು ಮತ್ತು ನಿಲುವನ್ನು ಹೆಚ್ಚು ಖಚಿತವಾಗಿಯೂ ಹೇಳುತ್ತಾನೆ. ಸೂಚಕ ಮತ್ತು ಸೂಚಿತರು ಹಾಗೂ ಸೂಚನೆಗಳು ಹೆಚ್ಚು ಸ್ಪಷ್ಟವೂ ಆಗಿರುತ್ತದೆ ಪರಸ್ಪರ ಸಂಬಂಧವು ಇಲ್ಲಿ ಹೆಚ್ಚು ನಿಖರವೂ ಆಗಿರುತ್ತದೆ.

ಯಾವುದನ್ನು ವಾಸ್ತವ ಎಂದು ಗಣಿಸುತ್ತೇವೆಯೋ ಅದರಾಚೆಗೆ ಅನೇಕ ಸಂಗತಿಗಳು ಇವೆ. ಕೆಲವು ನಿಜವಾದ ಮೂಲ ಸ್ವರೂಪವನ್ನು ಹೊಂದಿವೆ. ಮತ್ತೆ ಕೆಲವು ಬೇರೆ ಅಂಶಗಳನ್ನು ಸೇರಿಸಿಕೊಂಡಿವೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ಎದುರು ಕಾಣಿಸುವ ಸಂಗತಿಗಳನ್ನು ಮಾತ್ರವೇ ಅರ್ಥ ಮಾಡಿಕೊಳ್ಳುವುದು ಅಲ್ಲ. ಅದು ಮೂಲ ಮತ್ತು ಅದು ಹೇಗೆ ರಚನೆಯು ಆಗಿದೆ ಎಂದು ನೋಡಿಕೊಳ್ಳುವುದೂ ಅತ್ಯಂತ ಮುಖ್ಯವಾಗುತ್ತದೆ. ಕೆಲವು ಸಮಸ್ಯೆಗಳು ಇವೆ. ಕೆಲವು ಮೂಲಭೂತವಾಗಿಯೇ ನಮ್ಮ ಎದುರು ಇರುವ ವಾಸ್ತವವನ್ನು ಹಾಗೆಯೇ ಪ್ರತಿನಿಧಿಸುತ್ತವೆ. ಅವುಗಳನ್ನು ನಾವು ಸಾಚಾ ಅನುಭವಗಳು ಎಂದು ಹೇಳಬಹುದು. ಮತ್ತೆ ಕೆಲವು ವಾಸ್ತವವದಲ್ಲಿ ಇನ್ನು ಯಾವುದನ್ನೋ

ಸೇರಿಕೊಂಡಿರುತ್ತವೆ. ಆದರೆ ವಾಸ್ತವವಕ್ಕೆ ಆಶಯಗಳು ಇರುವುದು ಅತ್ಯಂತ ನಿಜವಾದ ಸಂಗತಿಗಳೂ ಹೌದು.

ನಿಜವಾದ ಚರಿತ್ರೆಯು ಒಂದು ರೀತಿಯಲ್ಲಿ ಇರುತ್ತದೆ. ಪ್ರಾತಿನಿಧಿಕವಾದ ಚರಿತ್ರೆಯು ಮತ್ತೊಂದು ಬಗೆಯದು. ತಾತ್ವಿಕ ಚರಿತ್ರೆಯು ಮತ್ತೊಂದು ರೀತಿಯದೂ ಹೌದು. ಚರಿತ್ರೆಯು ನಡೆಯವುದು ಮತ್ತು ಅದರ ದಾಖಲೀಕರಣವು ಬೇರೆ ಬೇರೆಯಾಗುತ್ತದೆ. ದಾಖಲೀಕರಣವು ನಡೆಯುವಾಗ ಅದರ ಸ್ವರೂಪವು ಒಂದು ಬಗೆಯಲ್ಲಿ ಇರುತ್ತದೆ. ಚರಿತ್ರೆಯನ್ನು ದಾಖಲೆ ಮಾಡುವಾಗ ನಮಗೆ ಆಕರಗಳು ಮುಖ್ಯ. ಆದರೆ ಈ ಆಕರಗಳನ್ನು ನಾವು ಹೇಗೆ ಗ್ರಹಿಸುತ್ತೇವೆ ಎನ್ನುವುದು ಅತ್ಯಂತ ಮುಖ್ಯವಾಗಿದೆ. ಇನ್ನೊಬ್ಬರು ಹೇಳಿದ್ದನ್ನು ನಾವು ದಾಖಲಿಸುತ್ತೇವೆ. ಅವರು ಹೇಳಿದ್ದನ್ನು ನಿರೂಪಿಸುತ್ತೇವೆ. ಇದರಲ್ಲಿ ಕಣ್ಣು ಮತ್ತು ಕಿವಿಗಳೇ ನಮಗೆ ಆಧಾರವಾಗಿರುತ್ತವೆ. ಒಂದು ಅರ್ಥದಲ್ಲಿ ಚರಿತ್ರೆಕಾರರು ಕತೆಯನ್ನು ನಿರೂಪಿಸುತ್ತಾರೆ. ಕತೆಯನ್ನು ಹೇಳುವಾಗ ಅವರಿಗೆ ಕೆಲವು ಅಂಶಗಳು ಮಾತ್ರವೇ ಮುಖ್ಯವಾಗಬಹುದು. ಅದನ್ನು ಅವರು ಪರಿಕಲ್ಪನೆ ಮಾಡುತ್ತಾರೆ. ಸರಿಯಾದ ರೀತಿಯಲ್ಲಿ ಸಂಯೋಜನೆಯನ್ನು ಮಾಡುತ್ತಾರೆ. ಆಗ ಅದು ರೂಪವಾಗುತ್ತದೆ. ಒಬ್ಬ ಕತೆಗಾರನೂ ಇದನ್ನೇ ಮಾಡುತ್ತಾನೆ. ಅವನೂ ತನಗೆ ಸಿಕ್ಕಿದನ್ನು ರಚನೆ ಮಾಡುತ್ತಾನೆ. ತನಗೆ ದೊರೆತದ್ದನ್ನು ನಿರೂಪಿಸುತ್ತಾನೆ. ಅವನು ತನಗೆ ಯಾವುದು ಸಿಕ್ಕಿದೆಯೋ ಅದನ್ನು ನಿರೂಪಿಸುವಾಗ ಅದಕ್ಕೆ ಒಂದು ಚಿತ್ರವನ್ನು ಕೊಡುತ್ತಾನೆ. ವಿವರಣೆಯು ಕೂಡಾ ಅವನಿಗೆ ಅತ್ಯಂತ ಮಹತ್ವದ್ದು ಮತ್ತು ಆ ವಿವರಣೆಯನ್ನು ಅವನು ಒದಗಿಸುವುದು ಅವನ ಮನೋಭಾವಕ್ಕೆ ಸರಿಯಾಗಿ ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ಅವನು ತಾನು ಕಂಡದ್ದು ಎನ್ನುವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾನೆ. ನಿಜವಾದ ಚರಿತ್ರೆಕಾರರು ಮತ್ತು ಕತೆಯನ್ನು ಹೇಳುವವರು ಈ ದೃಷ್ಟಿಯಲ್ಲಿ ಮಾತ್ರವೇ ಬೇರೆ ಬೇರೆ ರೀತಿಯಲ್ಲಿ ಸಾಗುತ್ತಾರೆ. ಜೀವನ ಮತ್ತು ಅದರ ನಿರೂಪಣೆಯನ್ನು ಅವನು ಮಾಡುವುದು ಭಾಷಿಕವಾದ ಸಂಗತಿಗಳಲ್ಲಿ ಎನ್ನುವುದು ಇಲ್ಲಿ ಮುಖ್ಯವಾಗಿದೆ. ನಿಜವಾದ ಚರಿತ್ರೆಕಾರರು ಐತಿಹ್ಯ, ಪುರಾಣ, ಕತೆಗಳು, ಬ್ಯಾಲೆಡ್‌ಗಳು, ಪರಂಪರೆಗಳು ಇತಿಹಾಸವು ಅಲ್ಲವೆಂದು ಹೇಳಿದರು. ಅವುಗಳು ವಾಸ್ತವವಲ್ಲ ಎನ್ನುವುದು ಅವರ ವಾದ. ಹಾಗಿದ್ದರೆ ನಿಜವಾದ ವಾಸ್ತವ ಎಂದರೇನು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯವಾಗುತ್ತದೆ. ಚರಿತ್ರೆಕಾರರು ನಿಜವಾದುದು ಏನು ಇದೆ ಅದನ್ನು ಮಾತ್ರವೇ ಹೇಳಿದರೆ ಅದು ಚರಿತ್ರೆಯು ಆಗುತ್ತದೆ ಎಂದು ಭಾವಿಸಿದರು. ಹಾಗೂ ನಿಜವಾಗಿ ನಡೆದ ವಿಚಾರವನ್ನು ಹೇಳುವುದು

ಇತಿಹಾಸಕಾರರ ಜವಾಬ್ದಾರಿ ಎಂದು ತಿಳಿದುಕೊಂಡರು. ವಾಸ್ತವವಾಗಿ ಒಬ್ಬ ಲೇಖಕನು ವಾಸ್ತವವನ್ನು ತನಗೆ ಬೇಕಾದ ರೀತಿಯಲ್ಲಿ ಬಾಗಿಸುತ್ತಾನೆ ಹಾಗೂ ತನಗೆ ಸಿಕಿದ್ದನ್ನು ಕಲ್ಪನೆಯೊಂದಿಗೆ ಹೇಳುತ್ತಾನೆ. ಅವನು ಹೇಳುವುದಕ್ಕೂ ಒಂದು ಸಂಗತಿಯು ಇದೆ. ಅದನ್ನು ಮರೆಯಬಾರದು. ಅವನು ಹೇಳುತ್ತಿರುವುದು ತನ್ನ ಅನುಭವಕ್ಕೆ ಬಂದುದನ್ನು ಎಂದರೆ ಅನುಭವವವು ಶೂನ್ಯದಿಂದ ಬಂದಿಲ್ಲವೆಂದು ಅರ್ಥವಾಗುತ್ತದೆ. ಅವನ ನೋಟ ಮತ್ತು ಅವನ ಶಕ್ತಿಯು ಇಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ತನಗೆ ಗೊತ್ತಿರುವುದಕ್ಕೆ ಅವನು ಒಂದು ರೂಪವನ್ನು ಕೊಟ್ಟರೆ ಮಾತ್ರವೇ ಅದು ಕತೆಯೋ ಕಾದಂಬರಿಯೋ ಮತ್ತೊಂದೋ ಆಗಲು ಸಾಧ್ಯ. ತನ್ನ ವೈಯಕ್ತಿಕವಾದ ಗ್ರಹಿಕೆಯೇ ಇಲ್ಲಿ ಅತ್ಯಂತ ಮುಖ್ಯ. ತನ್ನ ವಿವರಣೆಯನ್ನು ಅವನು ಸೇರಿಸಿಕೊಳ್ಳುವುದು ಅವನಿಗೆ ಅತ್ಯಂತ ಮುಖ್ಯ. ಆದರೆ ಇರುವುದನ್ನು ಇರುವ ಹಾಗೆ ಹೇಳುವುದು ಅಥವಾ ಬರಹದಲ್ಲಿ ಇರುವುದನ್ನು ಮಾತ್ರ ಪ್ರತಿಫಲಿಸುವುದು ಅವನ ಕೆಲಸವಲ್ಲ. ಅವನು ಏನನ್ನು ಹೇಳಲು ಬಯಸುತ್ತಾನೆಯೋ ಅದನ್ನು ಅವನು ತನ್ನ ಗುರಿಯ ಹಿನ್ನೆಲೆಯಲ್ಲಿ ನಿರೂಪಿಸುತ್ತಾನೆ. ಆದರೆ ಅಸ್ತಿತ್ವ ಮತ್ತು ಅದರ ಸ್ವರೂಪವನ್ನು ನಾವು ನಮ್ಮದೇ ಆದ ಲೆಕ್ಕಾಚಾರದಲ್ಲಿ ಮಾಡುತ್ತೇವೆ.

ವಸಾಹತು ಮತ್ತು ಅದರ ಅನ್ಯತೆಯು ಒಂದು ಥರ. ಅದರಲ್ಲಿ ಬೇರೆ ಭಾವನೆಗಳೂ ಇವೆ. ಅನನ್ಯತೆಯು ವಾಸ್ತವಾಗಿ ಒಂದೇ ರೀತಿಯಲ್ಲಿ ಇರುವುದೂ ಇಲ್ಲ. ಪುನರುಜ್ಜೀವನ ಕಾಲದ ತಾತ್ವಿಕತೆ ಮತ್ತು ಅದು ಪ್ರತಿಪಾದಿಸಿದ ಅನನ್ಯತೆಯ ಒಂದು ಬಗೆಯಲ್ಲಿ ಇದ್ದರೆ ಆಧುನಿಕ ಅನನ್ಯತೆಯ ಪ್ರಶ್ನೆಯು ಬೇರೆಯಾಗಿದೆ.

ವಾಸ್ತವದ ಬೇರೆ ಬೇರೆ ಮುಖಗಳನ್ನು ಹಿಡಿಯುತ್ತವೆ. ಹೀಗಾಗಿ ಸಾಹಿತ್ಯ ಕೃತಿಗಳು ಸಮಾಜವನ್ನು ತಮ್ಮ ಆಯ್ಕೆಗೆ ಅನುಸಾರವಾಗಿ ಬೇರೆ ಬೇರೆ ರೀತಿಯಲ್ಲಿ ನೋಡುತ್ತವೆ. ಸಾಹಿತ್ಯ ಕೃತಿಯು ಭಾಷೆಯಲ್ಲಿ ಮೂರ್ತ ರೂಪಗೊಳ್ಳುವ ಪ್ರಕ್ರಿಯೆಯಾಗಿರುವುದರಿಂದ ಈ ಸಮಸ್ಯೆಯಿದೆ. ಭಾಷೆಯ ಪ್ರಾತಿನಿಧೀಕರಣಕ್ಕೆ ಗುರಿಯಾಗುವ ಸಮಾಜ; ಜಗತ್ತು ಕೃತಿಯೊಳಗೆ ಬರುವಾಗ 'ಸೋಸಿದ ಪಠ್ಯ'ವಾಗಿ ಪರಿವರ್ತನೆಗೊಳ್ಳುತ್ತದೆ. ಬರಹ ರೂಪದಲ್ಲಿ ಇಳಿವ ಜಗತ್ತು ನಿಜವಾದ ಜಗತ್ತಿನ ಎಲ್ಲಾ ಅಂಶಗಳನ್ನು ಒಳಗೊಂಡಿರುವುದಿಲ್ಲ. ಒಳಗೊಳ್ಳುವುದು ಸಾಧ್ಯವೂ ಇಲ್ಲ. ಸಾಹಿತ್ಯ ಕೃತಿಗಳನ್ನು ಸಾಂಸ್ಕೃತಿಕ ಪಠ್ಯವೆಂದೋ, ಸಾಮಾಜಿಕ ಪಠ್ಯವೆಂದೋ ಕರೆಯುವಾಗ ಕೆಲವು ಅಂಶಗಳನ್ನು ನಾವು ಗಮನಿಸಬೇಕಾಗುತ್ತದೆ. ಬರಹದ ಜಗತ್ತನ್ನು ನಾವು ಚರ್ಚಿಸುವಾಗ ಅದು ಸಮಾಜದ ಭಾಗಶಃ ಚರ್ಚೆಯೇ ಹೊರತು ಅದು ಸಂಪೂರ್ಣವಾದ ಸಮಾಜದ ಚರ್ಚೆಯ ಭಾಗವಲ್ಲ; ಸಂಪೂರ್ಣವೂ

ಅಲ್ಲ. ಕೃತಿಯೊಂದನ್ನು ಸಾಂಸ್ಕೃತಿಕ ಪಠ್ಯವಾಗಿ ಓದುವಾಗ ಸಂಸ್ಕೃತಿಗಳಲ್ಲಿರುವ ಭಿನ್ನಸ್ತರಗಳನ್ನು ಗಮನಿಸುವುದು ಅವಶ್ಯವಿದೆ. ರೇಮಾಂಡ್‌ವಿಲಿಯಮ್ಸ್ ಸಂಸ್ಕೃತಿಯ ಬಗ್ಗೆ ಹೇಳುತ್ತಾ ಮೂರು ರೀತಿಯ ವರ್ಗೀಕರಣವಿರುವುದುನ್ನು ಪ್ರಸ್ತಾವಿಸುತ್ತಾನೆ.

(1961. The Long Revolution, ಪುಟ 41).

1. ಆದರ್ಶ ಸಂಸ್ಕೃತಿ: ಸಂಸ್ಕೃತಿಯು ಒಂದು ರಾಜ್ಯವ್ಯವಸ್ಥೆ ಅಥವಾ ವಿಶ್ವಾತ್ಮಕ ಮೌಲ್ಯಕ್ಕೆ ಸಂಬಂಧಿಸಿದಂತೆ ರೂಪುಗೊಳ್ಳುವ ಸಂಸ್ಕೃತಿಯ ಪರಿಕಲ್ಪನೆ – ಕರ್ವಾಲೋದ ಹುಡುಕಾಟವನ್ನು ಇಲ್ಲಿ ಉಲ್ಲೇಖಿಸಬಹುದು.

2. ದಾಖಲೆ ಸಂಸ್ಕೃತಿ: ಬುದ್ಧಿ ಜೀವಿಗಳ; ಕಲಾವಿದರ ಸೃಜನಶೀಲ ಪ್ರಕ್ರಿಯೆಯಲ್ಲಿ ರೂಪುಗೊಳ್ಳುವ ಸಂಸ್ಕೃತಿ. ಇದರಲ್ಲಿ ಮನುಷ್ಯರ ಆಲೋಚನೆ ಮತ್ತು ಅನುಭವಗಳನ್ನು ಬೇರೆ ಬೇರೆ ರೀತಿಯಲ್ಲಿ ದಾಖಲುಗೊಳಿಸಲಾಗುತ್ತದೆ – ಮುಸ್ಸಂಜೆಯ ಕಥಾ ಪ್ರಸಂಗವನ್ನು ಗಮನಕ್ಕೆ ತಂದುಕೊಳ್ಳಬಹುದು.

3. ಸಾಮಾಜಿಕ ಸಂಸ್ಕೃತಿ: ನಿರ್ದಿಷ್ಟ ಬಗೆಯ ಜೀವನಕ್ರಮಕ್ಕೆ ಇದು ಸಂಬಂಧಿಸಿದೆ. ದೈನಂದಿನ ಜೀವನದ ನಡವಳಿಕೆಯಲ್ಲಿ ವ್ಯಕ್ತವಾಗುವ ಮೌಲ್ಯಗಳಿಗೆ: ಅದರ ಅರ್ಥಗಳಿಗೆ ಅನುಸಾರವಾಗಿ ಇದರ ನಿರ್ವಚನ ನಡೆಯುತ್ತದೆ – ಅಕ್ಕ ಮತ್ತು ಚಿದಂಬರ ರಹಸ್ಯ ಇದಕ್ಕೆ ಉದಾಹರಣೆಯಾಗಿದೆ.

ನಾವು ಬರಹಗಳಲ್ಲಿ ಸಾಮಾನ್ಯವಾಗಿ ಸಮಾಜವೆನ್ನುವುದರ ಬದಲಿಗೆ ಸಂಸ್ಕೃತಿಯೆಂದು ಕರೆದು ಅದಕ್ಕೆ ಪರಿಮಿತಿಗಳನ್ನು ಹಾಕಿದ್ದೇವೆ. ಹೀಗಾಗಿಯೇ ಸಾಹಿತ್ಯ ಕೃತಿಗಳನ್ನು 'ಸಾಂಸ್ಕೃತಿಕ ಪಠ್ಯ'ಗಳೆಂದು ಸಾಮಾಜಿಕ ಪಠ್ಯವೆನ್ನುವುದರ ಬದಲಿಗೆ ಕರೆಯುತ್ತಿದ್ದೇವೆ ಅಷ್ಟೆ ಮತ್ತು ವಸಾಹತೋತ್ತರ ಸಂದರ್ಭದಲ್ಲಿಯಂತೂ ಸಂಸ್ಕೃತಿಯ ಚರ್ಚೆಯ ಭಾರ ದೊಡ್ಡದು. ನಮ್ಮ ಅನುಭವಕ್ಕೆ ಬಂದಿರುವ ಸಾಮಾಜಿಕ ವಾಸ್ತವದ ಹಿನ್ನೆಲೆಯಿಂದಲೇ ನಮ್ಮ ಅನುಭವಕ್ಕೆ ತಕ್ಕನಾಗಿ ಬರೆಯದ ಲೇಖಕನನ್ನು ವೈರಿಬಣದಲ್ಲಿ ಗುರುತಿಸುವುದು ಕೂಡಾ ಇದೇ ಕಾರಣಕ್ಕೆ. ಲೇಖಕ ತನ್ನ ಬರಹಗಳಿಗೆ ಬೇಕಾದುದನ್ನು ಮಾತ್ರ ಆಯ್ಕೆಮಾಡುತ್ತಾನೆ. ಅವನು ಯಾವ ಗುಂಪಿನಲ್ಲಿದ್ದಾನೆ ಮತ್ತು ಯಾವುದನ್ನು ತನ್ನ ಕೃತಿಯಲ್ಲಿ ಹೇಳಬಯಸುತ್ತಾನೆ. ಅದಕ್ಕೆ ಅನುಸಾರವಾಗಿ ಅವನ ಆಯ್ಕೆಯು ರೂಪುಗೊಳ್ಳುತ್ತದೆ.

ಹೀಗೆ ವಾಸ್ತವತೆಯಲ್ಲಿ ದಿನ ನಿತ್ಯದ ಸಂಗತಿಗಳೇ ಹೊಸತೊಂದು ಅರ್ಥವನ್ನು ಪಡೆದುಕೊಳ್ಳುತ್ತವೆ. ಮತ್ತು ಅವುಗಳ ಸ್ವರೂಪಗಳೂ ಭಿನ್ನವಾಗುತ್ತದೆ. ನಿತ್ಯದ ಸಂಗತಿಗಳು ಯಾವುದೇ ಸಂಗತಿಗಳನ್ನು ಅದು ನೋಡುವ ಕ್ರಮ ಮತ್ತು

ಅದು ನಿರೂಪಿಸುವ ಕ್ರಮಗಳು ಬೇರೆಯಾಗಿರುತ್ತವೆ. ಆದರೆ ವಿಷಯವು ಸ್ಪಷ್ಟವಾಗಿದೆ. ಯಾವುದೇ ಬರಹಗಳು ಕೃತಿಯಲ್ಲಿ ಬಹಳ ಮುಖ್ಯವಾದ ಸಂಗತಿಯೇ ಆಗಿರುತ್ತದೆ. ಮತ್ತು ಅದನ್ನು ನೋಡುವಾಗ ಅದರಲ್ಲಿ ವ್ಯಕ್ತವಾದ ಸಂಗತಿಗಳು ಲೋಕವನ್ನು ಬಿಟ್ಟು ಇರುವುದೂ ಇಲ್ಲ. ವಾಸ್ತವವಾದಿ ಬರಹಗಳಲ್ಲಿ ಬರುವ ಅನೇಕ ಸಂಕೇತಗಳನ್ನು ನೋಡುವುದು ಮತ್ತು ಅದು ಹೇಳುವ ಸಂಗತಿಗಳನ್ನು ಗಮನಿಸಿಕೊಳ್ಳುವುದು ಬೇರೆ ರೀತಿಯಲ್ಲಿಯೇ ಆಗಿರುತ್ತದೆ. ವಾಸ್ತವತೆಯ ಪರಿಣಾಮಗಳು ಕೂಡಾ ದೊಡ್ಡವು. ಅದರ ಕೆಲಸಗಳೂ ಬೇರೆಯಾಗಿವೆ. ವಾಸ್ತವತೆಯೆಂದರೆ ಅದರ ನಿರ್ವಹಣೆಯು ಭಿನ್ನವಾದುದೂ ಹೌದು. ವಾಸ್ತವತೆಯಲ್ಲಿ ಬರುವ ಅನೇಕ ವಿವರಣೆಗಳು ಕೇವಲ ಒಂದು ಪಠ್ಯವೆಂದು ಭಾವಿಸಿಕೊಳ್ಳುವುದೂ ಸರಿಯಲ್ಲ. ರೂಪನಿಷ್ಠರು ಮಾತ್ರವೇ ವಾಸ್ತವತೆಯನ್ನು ಒಂದು ಕೃತಿಯೊಳಗಿನ ಜಗತ್ತು ಎಂದು ಭಾವಿಸುತ್ತಾರೆ. ಅದೇ ರೀತಿಯಲ್ಲಿ ಬಾರ್ತ್ ಸಂಕೇತವನ್ನು ಒಂದು ವಿಜ್ಞಾನವೆಂಬಂತೆ ನೋಡಿದ. ಆದರೆ ಇದರ ಹಿಂದಿರುವ ತತ್ವಗಳೇ ಬೇರೆ. ಅದನ್ನು ಹೀಗೆಯೂ ಹೇಳಬಹುದು– ಸಾಹಿತ್ಯದಲ್ಲಿ ಬರುವ ಸಂಕೇತಗಳನ್ನು ನೋಡುವುದು ಎಂದರೆ ಅದರ ಜೊತೆಗೆ ಬರುವ ತಾತ್ವಿಕ ಆಯಾಮಗಳನ್ನು ಗುರುತಿಸುವುದು. ಅದನ್ನು ನಾವು ನೋಡುವಾಗ ಅದರ ಅರ್ಥ ಮತ್ತು ಅದರ ತಾತ್ವಿಕ ಬಳಕೆಯು ಹೇಗಾಗಿದೆ ಎಂದು ನೋಡುವುದು ಅಗತ್ಯ. ಆದರೆ ಅವನಲ್ಲಿ ಇದಕ್ಕೆ ಹೆಚ್ಚಿನ ಮಹತ್ವವಿದೆ. ಕೃತಿಯ ಅರ್ಥ ಮತ್ತು ಅದರ ಬಳಕೆ ಹಾಗೂ ಅದರ ಹಿನ್ನೆಲೆಯಲ್ಲಿನ ಮೂಲರೂಪವೂ ಬಾರ್ತ್‌ಗೆ ಬಹಳ ಮುಖ್ಯ. ಕೃತಿಯ ಅರ್ಥ ಮತ್ತು ಅದರ ಬಾಹ್ಯದ ರೂಪ ಹಾಗೂ ಅದರ ಅಸ್ತಿತ್ವವು ಅವನಿಗೆ ಅಗತ್ಯವಾಗಿದೆ. ಆದರೆ ಯಾವುದೇ ಒಂದು ಕೃತಿಯ ಒಳಗೆ ಬರುವ ಮಾತುಗಳಿಗೆ ಒಂದು ಚೌಕಟ್ಟು ಮಾತ್ರವೇ ಇದೆ ಎಂದು ಯಾರೂ ಹೇಳಿಕೊಳ್ಳುವುದಿಲ್ಲ. ಆದರೆ ಅದರಲ್ಲಿ ಬರುವ ಯಾವುದೇ ಒಂದು ನಿರ್ದಿಷ್ಟವಾದ ಸಂಕೇತವೂ ಕೂಡಾ ಮತ್ತೆ ಯಾವುದನ್ನೋ ಹೇಳುತ್ತದೆ. ಮತ್ತು ಅದರ ಅರ್ಥವೂ ಪೂರ್ತಿಯಾಗಿ ಕೃತಿಗೆ ಸೀಮಿತವೂ ಅಲ್ಲ. ಬಾರ್ತ್ ಯಾವುದೇ ಕೃತಿಯೊಳಗೆ ಬರುವ ಅರ್ಥಕ್ಕೂ ಅದರ ರೂಪಕ್ಕೂ ಸಂಬಂಧವಿರುವುದನ್ನು ಗಮನಿಸುತ್ತಾನೆ. ಇಲ್ಲಿ ಬಾರ್ತ್ ಬಳಸುವ ಪಠ್ಯ ಮತ್ತು ರೂಪದ ನಡುವಣ ಸಂಬಂಧದ ಸಂಕೀರ್ಣತೆಯನ್ನು ಗಮನಿಸಬೇಕಾಗುತ್ತದೆ. ಅವನ ಪ್ರಕಾರ ರೂಪ ಮತ್ತು ಪಠ್ಯಕ್ಕೆ ಒಂದು ಸಂಘರ್ಷವಿರುತ್ತದೆ. ಅದನ್ನು ಅವನು 'ಟೆನ್ಶನ್' ಎಂದು ಕರೆಯುತ್ತಾನೆ ಮತ್ತು ಅದರಲ್ಲಿ ಅವನು ಬಳಸುವ ಪಠ್ಯವೆಂದರೆ ಅದು ಒಂದು ಸಮಗ್ರವಾದ ಕೃತಿಯಲ್ಲ. ಪಠ್ಯವು ಅವನ ದೃಷ್ಟಿಯಲ್ಲಿ ಸಾಲು ಸಾಲುಗಳು ಮತ್ತು ಪ್ರತೀ ಸಾಲಿನಲ್ಲಿ ಬರುವ ಪದಗಳು ಮತ್ತು ಅವುಗಳ

ಧ್ವನಿ. ಕೃತಿಯೊಳಗಿನಿಂದ ಬರುವ ಅನೇಕ ಧ್ವನಿಗಳೂ ಅವನಿಗೆ ಮುಖ್ಯ. ಆದರೆ ಈ ಸಂಗತಿಯು ಭಿನ್ನವೂ ಹೌದು. ಯಾಕೆಂದರೆ ಅವನು ವಿವರಿಸುವುದು ಭಾಷೆ ಮತ್ತು ಅದರ ಸಂಕೇತವನ್ನು. ಒಂದು ವಿಜ್ಞಾನದ ಮಾದರಿಯಲ್ಲಿ ಹುಡುಕುವುದು ಮುಖ್ಯವೆಂದು ಅವನು ಭಾವಿಸುತ್ತಾನೆ. ಸಾಂಪ್ರದಾಯಿಕ ವಿದ್ವಾಂಸರು ಸಂಕೇತವನ್ನು ಗ್ರಹಿಸುವಾಗ ಅದಕ್ಕೇ ಸೀಮಿತವಾದ ಅರ್ಥವನ್ನು ಮಾತ್ರವೇ ಕೊಟ್ಟರು. ಆದರೆ ವಿಷಯವು ಹಾಗೆ ಇಲ್ಲ. ಅದರಲ್ಲಿ ಬರುವ ಅನೇಕ ಸಂಕೇತಗಳನ್ನು ನೋಡುವಾಗ ಸಾಂಪ್ರದಾಯಿಕರು ಸಾಹಿತ್ಯವನ್ನು ಮತ್ತು ಅದರಲ್ಲಿ ಬರುವ ಸಂಕೇತವನ್ನು ಸೀಮಿತವಾದ ಅರ್ಥದಲ್ಲಿ ಮಾತ್ರವೇ ಗ್ರಹಿಸಿದ್ದು ಮಾತ್ರವೇ ಅಲ್ಲ; ಅವರು ಸಂಕೇತವನ್ನು ನಿಘಂಟಿನಲ್ಲಿ ಬರುವ ಅರ್ಥದ ಥರ ಗ್ರಹಿಸಿದರು. ಮತ್ತು ಇದನ್ನು ಆಧುನಿಕತಾವಾದಿಗಳು ತಿರಸ್ಕರಿಸಿದರು. ಯಾವುದೇ ಒಂದು ಸಂಗತಿಯು ನಿಘಂಟು ಮತ್ತು ಅದರ ಅರ್ಥದ ಥರ ಇರುವುದಿಲ್ಲ. ಅದ್ದರಿಂದಲೇ ರಷ್ಯನ್ ರೂಪನಿಷ್ಠರು ವಸ್ತು ಮತ್ತು ರೂಪಗಳ ಕುರಿತು ಹೇಳುವಾಗ ಅದನ್ನು ಸ್ಥಿರವಾದ ರೀತಿಯಲ್ಲಿ ಗ್ರಹಿಸಬಾರದು ಎಂದು ಹೇಳುತ್ತಾರೆ. ಅವರ ಪ್ರಕಾರ ಅದು ಚಲನಶೀಲ.

ಸಾಂಸ್ಕೃತಿಕ ಅರ್ಥಗಳು ಮತ್ತು ಅದರ ಹಿನ್ನೆಲೆಯು ಅವರಿಗೆ ಬಹಳ ಮುಖ್ಯವಾಯಿತು. ಇವುಗಳು ಮುಖ್ಯವಾಗುವುದು ವಾಸ್ತವವಾದದಲ್ಲಿ. ಆದ್ದರಿಂದ ವಾಸ್ತವತೆಯನ್ನು ಇಲ್ಲಿ ವಿವರಿಸುವುದು ಅತ್ಯಂತ ಆವಶ್ಯಕವೂ ಹೌದು. ವಾಸ್ತವವೆಂದರೆ ಅದುವೇ ಒಂದು ಮಹತ್ವದ ವಿಷಯವೂ ಹೌದು. ವಾಸ್ತವವಾದವು ಸಾಹಿತ್ಯದ ಚರ್ಚೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ವಿಷಯಗಳೂ ಇವೆ. ಅದು ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದು ಅದರ ನಿರೂಪಣೆಯ ಕಾರಣಕ್ಕೆ ಮಾತ್ರವೇ ಅಲ್ಲ ಎನ್ನುವುದನ್ನು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ. ವಾಸ್ತವತೆಯೆಂದರೆ ಅದು ಬರಹಕ್ಕೆ ಕೊಟ್ಟ ಒಂದು ಶಾಸ್ತ್ರೀಯವಾದ ಹೆಸರು ಮಾತ್ರವೇ ಆಗಿದೆ. ಅದರಲ್ಲಿ ಮತ್ತೆ ಬೇರೆ ಅಂಶಗಳೂ ಇವೆ. ಅದು ಬರೀ ಸತ್ಯವನ್ನು ಮಾತ್ರವೇ ಹೇಳುತ್ತದೆ ಎಂದು ಅರ್ಥವಲ್ಲ. ವಾಸ್ತವವತೆಯೆಂದರೆ ಅದು ಭಾಷೆಯ ವಸ್ತು ಮತ್ತು ಅದರ ಸಂಯೋಜನೆಯೂ ಹೌದು. ವಾಸ್ತವತೆಯ ಹಿಂದೆ ಇರುವ ತಾತ್ವಿಕ ಗ್ರಹಿಕೆಯು ಬೇರೆಯಾಗಿದೆ. ವಾಸ್ತವವತೆಯಲ್ಲಿ ನಿರ್ದಿಷ್ಟವಾದ ಅನುಕರಣೆ ಮತ್ತು ಪ್ರಾತಿನಿಧೀಕರಣವೂ ಇದೆ. ಅದರಲ್ಲಿ ಸತ್ಯವು ಒಂದು ಭಾಗವಾಗಿದೆ. ಈ ಮೊದಲು ಹೇಳಿದಂತೆ ಸತ್ಯವನ್ನು ಮಾತ್ರವನ್ನು ಮಾತ್ರವೇ ಹೇಳುತ್ತದೆ ಎಂದು ಇದರ ಅರ್ಥವಲ್ಲ. ಅದರ ಬದಲು ವಾಸ್ತವವಾದದಲ್ಲಿ ಸತ್ಯವೂ ಒಂದು ಭಾಗವಾಗಿದೆ.

ಕೆಲವೊಮ್ಮೆ ವಾಸ್ತವವಾದವನ್ನು ನಾವು ನಮ್ಮ ಗ್ರಹಿಕೆ ಮತ್ತು ಅದರ ಮಿತಿಯಲ್ಲಿ ನೋಡಬೇಕಾಗುತ್ತದೆ. ವಾಸ್ತವತೆಯಲ್ಲಿ ಬಾಹ್ಯದ ನಿರೂಪಣೆಯೂ ಮುಖ್ಯವಾಗುತ್ತದೆ. ಅಂದರೆ ಅದರಲ್ಲಿ ಬಾಹ್ಯವೂ ಒಂದು ಘಟಕವಾಗಿದೆ. ವಾಸ್ತವತೆಯು ಒಂದು ವಸ್ತು ನಿಷ್ಠತೆಯನ್ನು ಎತ್ತಿಹಿಡಿಯುತ್ತದೆ. ಆದರೆ ಈ ವಸ್ತು ನಿಷ್ಠತೆಯು ವ್ಯಕ್ತವಾಗುವುದು ಆಯಾ ಸಂದರ್ಭದ ಹಿನ್ನೆಲೆಯಲ್ಲಿ ಮಾತ್ರವೇ ಆಗಿದೆ. ಹೊರಗಿನ ವಾಸ್ತವವನ್ನು ಗ್ರಹಿಸುವುದು ನಮ್ಮ ತಲೆಯ ಮೂಲಕವೇ. ಆದರೆ ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವಿದೆ. ಯಾವುದೇ ವಾಸ್ತವತೆಯು ವ್ಯಕ್ತವಾಗುವುದು ಒಂದು ನಿಲುವಿನ ಮೂಲಕವೇ ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಅನೇಕ ಸಂಸ್ಕೃತಿಗಳು ಇರುವ ಜಾಗದಲ್ಲಿ ಲೇಖಕನು ಯಾವ ಮಾದರಿಯನ್ನು ಅಂಗೀಕರಿಸುತ್ತಾನೆ ಎನ್ನುವುದೂ ಬಹಳ ಮುಖ್ಯವಾಗಿದೆ. ಮತ್ತು ಅವನಿಗೆ ಸಂಸ್ಕೃತಿಯು ಬಹಳ ಅಗತ್ಯವಾಗಿದೆ ಎನ್ನುವುದೂ ಅಷ್ಟೇ ಸತ್ಯ. ಈಗಾಗಲೇ ಇರುವ ವಾಸ್ತವವನ್ನು ಲೇಖಕನು ಬರೆಯುತ್ತಾನೆ. ಬರೆಯುವುದು ಅಂದರೆ ಅದರಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಳ್ಳುವುದೂ ಹೌದು. ವಾಸ್ತವವಾದದ ಗುರಿಯು ಬೇರೆಯಿರುತ್ತದೆ. ಅಂದರೆ ಅದರಲ್ಲಿ ಗುರಿಯೂ ಭಿನ್ನವಾಗುತ್ತದೆ. ಕೃತಿ ಮತ್ತು ಅದರ ಸ್ವರೂಪದ ಬಗ್ಗೆ ಆಧುನಿಕತವಾದಿಗಳಲ್ಲಿ ಮತ್ತು ವಾಸ್ತವವಾದಿಗಳಲ್ಲಿ ಭಿನ್ನಾಭಿಪ್ರಾಯವೂ ಇದೆ. ವಾಸ್ತವವು ಹೇಳುವುದು ಬಾಹ್ಯವನ್ನು ಮಾತ್ರವೇ ಎನ್ನುವುದು ಆಧುನಿಕತಾವಾದಿಗಳ ತಕರಾರು. ವಾಸ್ತವವಾದದಲ್ಲಿ ವ್ಯಕ್ತಿ ಮತ್ತು ಅವನ ಅಭಿರುಚಿಯು ಮಾತ್ರವೇ ಮುಖ್ಯವಾಗುತ್ತದೆ. ವಾಸ್ತವವಾದಿ ಲೇಖಕನು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಮತ್ತು ಹೇಗೆ ಆಯ್ಕೆಯನ್ನು ಮಾಡುತ್ತಾನೆ ಎನ್ನುವುದೂ ಬಹಳ ಮುಖ್ಯ. ಹೊರಗಿನ ವಾಸ್ತವವಕ್ಕೆ ಯಾವ ಸ್ವರೂಪವು ಇದೆಯೋ ಅದನ್ನು ಹೇಗೆ ಹೇಳಬೇಕು ಎನ್ನುವುದೂ ಮೂಲಭೂತವಾಗಿ ಒಂದು ತಾತ್ವಿಕ ಸಮಸ್ಯೆಯೂ ಆಗಿದೆ. ವಾಸ್ತವಕ್ಕೆ ಅತ್ಯಂತ ವಿಶಾಲವಾದ ಒಂದು ಚರಿತ್ರೆಯು ಇರುತ್ತದೆ. ಮತ್ತು ಅದು ಚರಿತ್ರೆಯನ್ನು ಛೇದಗೊಳಿಸುವುದೂ ಇಲ್ಲ. ಆದರೆ ವಾಸ್ತವವಾದಿ ಬರಹಗಳು ಅದನ್ನು ಕಾಣುವ ದೃಷ್ಟಿಕೋನವೂ ಬೇರೆಯಾಗುತ್ತದೆ. ತುಂಬಾ ವಿಶಾಲವಾದ ಒಂದು ಚರಿತ್ರೆಯು ನಮ್ಮ ಗಮನಕ್ಕೆ ಬರುವಾಗ ಒಂದು ತುಂಡಾಗಿ ಮಾತ್ರವೇ ಕಾಣಿಸುತ್ತದೆ. ಅದು ಮಿತಿಯೂ ಹೌದು. ಆದರೆ ಅದು ಆಧುನಿಕತಾವಾದಿಗಳು ಹೇಳುವ ರೀತಿಯಲ್ಲಿ ಇರುವುದಿಲ್ಲ. ಆಧುನಿಕತೆಯನ್ನು ಮಾತ್ರವೇ ಸತ್ಯವೆಂದು ಹೇಳುವವರು ಈ ದೃಷ್ಟಿಯಿಂದ ಚರಿತ್ರೆಯನ್ನು ಪ್ರಶ್ನಿಸುತ್ತಾರೆ. ಅವರು ಅಚಾರಿತ್ರಿಕವಾದಿಗಳು ಆಗಿದ್ದಾರೆ. ಅಂದರೆ ಅದರಲ್ಲಿ ಅವರು ಚರಿತ್ರೆಯ ಅಗತ್ಯವೇ ಇಲ್ಲವೆಂದು ಹೇಳುತ್ತಾರೆ. ವಾಸ್ತವವಾದವು ಎಷ್ಟರ ಮಟ್ಟಿಗೆ ಸೆಕ್ಯುಲರ್ ಆಗಿದ್ದಾರೆ ಎನ್ನುವುದೂ ಬಹಳ

ಮುಖ್ಯ. ಅಂದರೆ ಸೆಕ್ಯುಲರ್ ಆಗಿ ವಾಸ್ತವವನ್ನು ಗ್ರಹಿಸಿದರೆ ಅದರ ಸ್ವರೂಪವು ಬೇರೆಯಾಗುತ್ತದೆ. ಇಲ್ಲಿ ಮತ್ತೊಂದು ಅಂಶವೂ ಇದೆ. ಯಾವುದೇ ನಮ್ಮ ಗ್ರಹಿಕೆಯು ಬಹಳ ಮಿತಿಯುಳ್ಳದ್ದು ಆಗಿದ್ದರೆ ಅದರ ಮಿತಿಯು ನಮ್ಮ ವಾಸ್ತವತೆಯಲ್ಲಿ ಕಾಣಿಸಿಕೊಳ್ಳುತ್ತದೆ. ವಾಸ್ತವ ಮತ್ತು ಅದರ ಸ್ವರೂಪವು ಕೂಡಾ ಬೇರೆ ಬೇರೆ ಕಾಲ ಕಾಲಕ್ಕೆ ಬೇರೆ ಬೇರೆಯಾಗುತ್ತದೆ. ಯಾವುದನ್ನು ನಾವು ವಾಸ್ತವವೆಂದು ಹೇಳುತ್ತೇವೆಯೋ ಅದರಲ್ಲಿ ಭಿನ್ನತೆಗಳು ಕಾಣಲು ಸಾಧ್ಯ. ಆದು ಬದಲಾಗುತ್ತಾ ಹೋಗುತ್ತದೆ. ಮತ್ತು ಅದರ ಸ್ವರೂಪದಲ್ಲಿ ವ್ಯತ್ಯಾಸವೂ ಆಗುತ್ತದೆ. ವಾಸ್ತವವತೆಯನ್ನು ಯಾರೂ ಸಮಗ್ರವಾಗಿ ಗ್ರಹಿಸುವುದು ಕಷ್ಟ. ಆದರೆ ಅದೇ ಕಾರಣಕ್ಕೆ ರಚನೋತ್ತರವಾದಿಗಳು ಹೇಳುವ ರೀತಿಯಲ್ಲಿ ಅದು ಖಾಲಿಯಾದ ಅವಕಾಶವೂ ಅಲ್ಲ. ವಾಸ್ತವತೆ ಮತ್ತು ಅದರ ಗ್ರಹಿಕೆಯನ್ನು ನಾವು ಸಮಗ್ರವಾಗಿ ಮಾಡಲು ಯತ್ನವನ್ನು ಮಾಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಆದರೆ ಯಾವಾಗ ನಾವು ಅದನ್ನು ಹೇಗೆ ಹೇಳುತ್ತೇವೆ ಮತ್ತು ಅದರ ಹಿಂದೆ ಇರುವ ಕಾಳಜಿಗಳು ಯಾವ ಬಗೆಯವು ಅನ್ನುವುದೂ ಅಷ್ಟೇ ಮುಖ್ಯವಾಗಿದೆ. ಅಂದರೆ ಯಾವುದೇ ಗ್ರಹಿಕೆ ಮತ್ತು ಅದರ ಹಿಂದೆ ಇರುವ ಸತ್ಯಗಳನ್ನೂ ನಾವು ಮಾನದಂಡವಾಗಿಯೂ ನೋಡಬೇಕಾಗುತ್ತದೆ. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬರುತ್ತವೆ. ಯಾವುದನ್ನು ನಾವು ವಾಸ್ತವವೆಂದು ಹೇಳಿಕೊಂಡಿದ್ದೇವೆಯೋ ಅದು ಒಂದು ಸಮಾಜದಲ್ಲಿ ಒಂದು ರೀತಿಯಲ್ಲಿ ಇರಬಹುದು, ಮತ್ತೊಂದು ಸಮಾಜದಲ್ಲಿ ಮತ್ತೊಂದು ರೀತಿಯಲ್ಲಿ ಇರಬಹುದು. ಹಾಗೆ ಅದು ಸ್ಥಳ ಮತ್ತು ಅವಕಾಶಗಳ ಹಿನ್ನೆಲೆಯಲ್ಲಿ ಬೇರೆಯಾಗಬಹುದು. ಸಮಾಜವು ಬದಲಾಗುತ್ತಾ ಹೋದಂತೆ ಅದರ ವಾಸ್ತವವು ಕೂಡಾ ಬದಲಾಗುತ್ತಾ ಹೋಗುತ್ತದೆ. ಮತ್ತು ಅದಕ್ಕೂ ಮಿತಿಗಳು ಇವೆ. ಆದರೆ ವಾಸ್ತವವೆಂದು ಯಾವುದನ್ನು ಹೇಳುತ್ತಾ ಬಂದಿದ್ದೇವೆಯೋ ಅದು ಜನರ ಇತಿಹಾಸವನ್ನೂ ಹೇಳುತ್ತದೆ. ಜಮೀನ್ದಾರಿ ಪದ್ಧತಿಯನ್ನು ನೋಡುವಾಗ ಅದರ ಸ್ವರೂಪವು ಒಂದು ಬಗೆಯಲ್ಲಿ ಇರುತ್ತದೆ. ಮತ್ತು ಅದರ ವಾಸ್ತವವನ್ನು ನಾವು ಒಂದು ಬಗೆಯಲ್ಲಿ ಗ್ರಹಿಸಬೇಕಾಗುತ್ತದೆ. ಮತ್ತು ಅದರ ವಾಸ್ತವತೆಗೂ ಬಂಡವಾಳವಾದದ ವಾಸ್ತವತೆಗೂ ತುಂಬಾ ವ್ಯತ್ಯಾಸವಿದೆ. ವಾಸ್ತವವನ್ನು ಆಯಾ ಸನ್ನಿವೇಶದಲ್ಲಿ ಲೇಖಕನು ಗ್ರಹಿಸುವಾಗ ಅವನು ಅವನ ದೃಷ್ಟಿಕೋನದಲ್ಲಿ ಮಾತ್ರವೇ ವಿವರಿಸುತ್ತಾನೆ. ಅವನಿಗೆ ಅವನ ದೃಷ್ಟಿಕೋನ ಮಾತ್ರವೇ ಮುಖ್ಯವಾಗುತ್ತದೆ. ಅಂದರೆ ಅದನ್ನು ಅವನು ಹೇಗೆ ಸ್ವೀಕರಿಸಿದ್ದಾನೆಯೋ ಅದೇ ರೀತಿಯಲ್ಲಿ ಅದರ ಕುರಿತಾಗಿ ಬರೆಯುತ್ತಾನೆ. ಇಲ್ಲಿ ಮತ್ತೊಂದು ಪ್ರಶ್ನೆಯು ಬರುತ್ತದೆ. ಯಾವುದೇ ಸಮಾಜವು ತನಗೆ ಅನುಕೂಲವಾದ ಸಂಗತಿಗಳನ್ನು ಇಟ್ಟುಕೊಳ್ಳುತ್ತದೆ. ಮತ್ತು

ಅದನ್ನು ಸ್ವೀಕರಿಸುವಾಗ ಅದಕ್ಕೂ ಬೇರೆ ಒತ್ತಡಗಳು ಇರುತ್ತವೆ. ಸಾಮಾಜಿಕ ಜೀವನ ಮತ್ತು ಅದರ ಒತ್ತಡಗಳನ್ನು ನಾವು ಒಂದೇ ರೂಪವೆಂದು ಹೇಳಲು ಬರುವುದೂ ಇಲ್ಲ. ವಾಸ್ತವವೇ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಅದು ಕಣ್ಣು ಮತ್ತು ಕಿವಿ, ಮಾತು ಮತ್ತು ಅದು ಒತ್ತಡಗಳನ್ನು ಸೂಚಿಸುತ್ತವೆ. ಇಲ್ಲಿ ನಾವು ನೋಡಬೇಕಾದ ಅಂಶವೆಂದರೆ ಯಾವುದನ್ನು ವಾಸ್ತವವಾದಿಗಳು ಅತ್ಯಂತ ಮಹತ್ವದ್ದು ಎಂದು ಹೇಳುತ್ತಾರೆಯೋ ಅದನ್ನೇ ಆಧುನಿಕತಾವಾದಿಗಳು ನಿರಾಕರಿಸುತ್ತಾರೆ. ಪ್ರಮಾಣಗಳು ಬೇಕಾಗಿಲ್ಲವೆಂದು ಅವರ ವಾದವಾಗಿದೆ ವಾಸ್ತವ ಮತ್ತು ಅದರ ರೂಪೀಕರಣವನ್ನು ನಾವು ಹೇಗೆ ನೋಡಬೇಕು ಮತ್ತು ಅದನ್ನು ಹೇಗೆ ಗ್ರಹಿಸಬೇಕು ಎನ್ನುವುದಕ್ಕೆ ಯಾವುದೇ ಒಂದು ಮಾನದಂಡವೂ ಇಲ್ಲ. ನಾವು ಅದನ್ನು ನಮಗೆ ಬೇಕಾದಂತೆ ಸ್ವೀಕರಿಸುತ್ತೇವೆ.

ಸಮಾಜವು ಹೇಳುವ ಕ್ರಮಗಳನ್ನು ನಾವು ಬರೀ ಒಂದು ವಾಸ್ತವ ಎಂದು ಹೇಳಿದರೆ ಅದು ಅಷ್ಟು ಮಾತ್ರವೇ ಕಾಣಿಸುತ್ತದೆ. ಇಲ್ಲಿ ನಾವು ನೋಡಬೇಕಾದ ಮತ್ತೊಂದು ಅಂಶವಿದೆ. ಯಾವುದನ್ನು ನಾವು ಆಧುನಿಕ ಬಂಡವಾಳವಾದವೆಂದು ಹೇಳುತ್ತೇವೆಯೋ ಅದು ಒಂದು ವಾಸ್ತವವಾಗಿದೆ. ಆದರ ವಾಸ್ತವದಲ್ಲಿ ಬಡವರು ಇರುವುದೂ ಸರಿಯಾಗಿಯೇ ಕಾಣಿಸುತ್ತದೆ. ಬಂಡವಾಳವಾದವನ್ನು ಅಂಗೀಕರಿಸುವವರು ಹೇಳುವ ವಾಸ್ತವವು ವಿಕಾರವೂ ಹೌದು. ಅದು ಕೆಲವು ಮಿಥ್ಯೆಗಳನ್ನು ಸೃಷ್ಟಿಸುತ್ತದೆ. ಆದರೆ ಆ ಮಿಥ್ಯೆಯು ಹೇಗಿದೆ ಎಂದರೆ ಅದರಲ್ಲಿ ಸೋಗು ಜೀವನವೂ ಇದೆ. ಆದರೆ ಅವರು ಹೇಳುವ ಸತ್ಯಗಳನ್ನು ಉಳಿದವರು ಒಪ್ಪುವುದೇ ಸಾಧ್ಯವಿಲ್ಲ. ವಾಸ್ತವ ಮತ್ತು ಅದರ ಕುರಿತು ಮತ್ತೆ ಮತ್ತೆ ತಕರಾರುಗಳನ್ನು ಎತ್ತಿಕೊಂಡವರು ಆಧುನಿಕತಾವಾದಿಗಳು. ಅವರ ಪ್ರಕಾರ ವಾಸ್ತವ ಮತ್ತು ಅದರ ಸ್ವರೂಪವೇ ಅವರಿಗೆ ಚರ್ಚಾಹವಾಗಿದೆ. ವಾಸ್ತವ ಮತ್ತು ಅದರ ವ್ಯಾಖೆಗಳನ್ನು ಅವರು ಒಪ್ಪುವುದೇ ಇಲ್ಲ. ಆದರೆ ವಾಸ್ತವವಾದವು ನಿಜವನ್ನು ಹೇಳುತ್ತದೆ. ಆ ನಿಜದ ಕುರಿತು ನಮ್ಮ ತರ್ಕಗಳು ಯಾವುದೇ ಇರಲಿ ಅದರಲ್ಲಿ ಕೆಲ ಮಟ್ಟಿಗೆ ಚರಿತ್ರೆಯನ್ನು ನಾವು ಗ್ರಹಿಸಬೇಕಾದ ಅಂಶಗಳನ್ನು ಅದು ಹೇಳುತ್ತದೆ. ಅದು ಹೇಳುವ ವಸ್ತುನಿಷ್ಠತೆಯು ಮಾತ್ರವೇ ನಮಗೆ ಮುಖ್ಯವಾಗಬೇಕು. ಅದು ಒಂದು ಸಾಧ್ಯತೆಯೂ ಹೌದು. ಅದಕ್ಕೆ ಕೆಲವು ಕ್ರಿಯೆಗಳು ಇವೆ. ಮತ್ತು ಸಾಮಾನ್ಯವಾದ ಅನೇಕ ಸಂಗತಿಗಳನ್ನು ಅದು ಹೇಳುತ್ತದೆ. ಸಾಮಾನ್ಯವಾದ ಕೆಲವು ಸತ್ಯಗಳು 'ಆಗಿವೆ.' ಸಾಂಸ್ಕೃತಿಕ ವಾಸ್ತವವು ಮಾರ್ಕ್ಸ ಮತ್ತು ಏಂಗಲ್ಸರಲ್ಲಿ ಅತ್ಯಂತ ಸಂಕೀರ್ಣವಾಗಿದೆ. ಬೂರ್ಜ್ವಾಗಳು ಹೇಳುವ ಸತ್ಯಗಳು ಮಾತ್ರವೇ ವಾಸ್ತವ

ಆಗಬೇಕಾಗಿ ಇಲ್ಲವೆಂದು ಅವರು ಹೇಳುತ್ತಾರೆ. ಅವರ ಪ್ರಕಾರ ಸಾಂಸ್ಕೃತಿಕ ವಾಸ್ತವ ಎಂದರೆ ಅದು ಮಾತ್ರವೇ ಅಲ್ಲ. ಬಂಡವಾಳವಾದವು ತನ್ನ ಸಾಧ್ಯತೆಯನ್ನು ವಿಸ್ತರಿಸಿದ್ದು ನಿಜ. ಸಾಂಪ್ರದಾಯಿಕ ಸಮಾಜವನ್ನು ನೋಡಿದರೆ ಬಂಡವಾಳವಾದವು ಹೆಚ್ಚು ಕ್ರಾಂತಿಕಾರಕವಾಗಿತ್ತು. ಅದು ಹೆಚ್ಚು ಕೌರ್ಯವನ್ನು ಹೊಂದಿದೆ. ಮತ್ತು ಅದರಲ್ಲಿ ಏಕಾಂತವಾದಿ ಪ್ರಕ್ರಿಯೆಯು ಇದೆ. ಆದರೆ ಹಿಂದಿನ ಚರಿತ್ರೆಯನ್ನು ನೋಡಿದರೆ ಬಂಡವಾಳವಾದವು ಹೆಚ್ಚು ಉದಾರವೂ ಆಗಿತ್ತು. ಮತ್ತು ಅದರಲ್ಲಿ ಮಾನವೀಯ ಅಂಶವೂ ಹೆಚ್ಚಾಗಿತ್ತು. ಮತ್ತು ಅದರಲ್ಲಿ ಮತ್ತೆ ಮತ್ತೆ ಬೇರೆ ಅಂಶಗಳೂ ಬಂದವು. ಅದನ್ನು ಹೀಗೆ ಹೇಳಬಹುದು: ಬಂಡವಾಳವಾದವು ಮೂಲತಃ ಮಾನವೀಯ ಸಂಬಂಧವನ್ನು ಹದಗೆಡಿಸಿತು. ಸಮಾಜದಲ್ಲಿ ಬಂಡವಾಳವಾದವು ಕೂಡಾ ಒಂದು ಹಂತವಾಗಿದೆ. ಅದು ಹಳ್ಳಿಯ ಜೀವನ ಕ್ರಮವನ್ನು ಪಲ್ಲಟಗೊಳಿಸಿತು. ಅದರಲ್ಲಿ ಪರಿವರ್ತನೆಗಳೂ ತರುವ ಹೇರಳ ಅಂಶಗಳೂ ಇದ್ದವು. ಬಂಡವಾಳವಾದದಲ್ಲಿ ನಿಷೇಧಾತ್ಮಕ ಮತ್ತು ಧನಾತ್ಮಕ ಅಂಶಗಳೂ ಇದ್ದವು. ಈ ಅರ್ಥದಲ್ಲಿ ಅದು ಹೆಚ್ಚು ಸಂಕೀರ್ಣವೂ ಆಗಿತ್ತು. ಅದರಲ್ಲಿ ಒಳ್ಳೆಯ ಮತ್ತು ಕೆಟ್ಟ ಅಂಶಗಳು ಎರಡೂ ಇವೆ. ಅದು ತನ್ನನ್ನು ತಾನೇ ಬೇಗ ಪ್ರಕಟ ಮಾಡುವುದೂ ಇಲ್ಲ. ಅದೂ ಕೂಡಾ ಚಾರಿತ್ರಿಕ ಸೃಷ್ಟಿಯಾಗಿದೆ. ಮತ್ತು ಅದರಲ್ಲಿ ಬೇರೆ ಬೇರೆ ಆಶಯಗಳೂ ಸೇರಿಕೊಂಡಿವೆ. ಅದರ ಗರ್ಭದಲ್ಲಿಯೇ ಬೂರ್ಜ್ವಾ ಆಲೋಚನೆಗಳು ಹುಟ್ಟಿಕೊಂಡವು. ಅದಕ್ಕೂ ಆಲೋಚನೆಗೂ ದ್ವಂದ್ವಾತ್ಮಕವಾದ ಸಂಬಂಧವಿದೆ. ಅದನ್ನು ಹೀಗೆ ಹೇಳಬಹುದು : ಅದು ಕಲೆ ಮತ್ತು ಅದರ ಸೌಂದರ್ಯದ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ನೋಡಿತು. ವಾಸ್ತವತೆಯನ್ನು ಅದು ಹೇಳಿದ ಕ್ರಮಗಳೂ ಬೇರೆಯಾಗಿವೆ. ಅದರ ನಿರೂಪಣೆಯೂ ಬೇರೆಯಾಯಿತು. ತಪ್ಪಾದ ಮನುಷ್ಯರ ಪ್ರಜ್ಞೆಯು ಕಾಣಿಸಿಕೊಂಡಿತು. ಹಳೆಯ ಸಮಾಜದಲ್ಲಿ ಇದ್ದ ವರ್ಗೀಕರಣವು ಬದಲಾದವು. ಅದರಲ್ಲಿ ಗುಲಾಮರು ಇದ್ದರು. ಬಾರ್ಬೆರಿಕ್ ಸಂಸ್ಕೃತಿಯೂ ಇತ್ತು. ಆಧುನಿಕ ಬಂಡವಾಳವಾದವೇ ಅನೇಕ ಹೊಸ ರೂಪಗಳ ಹುಟ್ಟಿಗೆ ಕಾರಣವೂ ಆಯಿತು. ಪರಿಕಲ್ಪನಾತ್ಮಕವಾದ ಅನೇಕ ಸಂಗತಿಗಳು ಚಾಲ್ತಿಗೆ ಬಂದವು. ಮೋರ್ಗನ್ ಇದರ ಬೇರೆ ರೂಪಗಳನ್ನು ಹೇಳುತ್ತಾನೆ. ಅವನು ಮಾನವಶಾಸ್ತ್ರದ ಬೆಳವಣಿಗೆಯಲ್ಲಿ ಗುರುತಿಸುತ್ತಾನೆ. ಚರಿತ್ರೆಯು ಕೆಲವು ಮೂಲಭೂತವಾದ ರೂಪಗಳನ್ನು ಹೊಂದಿರುತ್ತವೆ ಎಂದು ಅವನ ವಾದವಾಗಿದೆ. ಅಂದರೆ ಅದರಲ್ಲಿ ಮಾನವ ಮತ್ತು ಅವನ ಇತಿಹಾಸವು ಬದಲಾಗುತ್ತಾ ಬಂದಿದೆ. ಚರಿತ್ರೆ ಮತ್ತು ಅದರ ಬೆಳವಣಿಗೆ ಭಾಗವಾಗಿಯೇ ಹುಟ್ಟಿಕೊಂಡ ರೂಪಗಳನ್ನು ಗುಟ್ಟಾರಿ ಮತ್ತು ಡೆಲ್ಯಾಸೆ ಅವರು ಚರ್ಚಿಸುತ್ತಾರೆ. ಅವರು ಅದನ್ನು ಹೇಳುವಾಗ

ಅದರಲ್ಲಿ ಇರುವ ಈಡಿಪಸ್ ಮನೋಭಾವದ ಬದಲಾವಣೆಯನ್ನು ಹೇಳುತ್ತಾರೆ. ಅವರು ಸಮಾಜ ಮತ್ತು ಆದರ ಆಂತರಿಕ ಬದಲಾವಣೆಯನ್ನು ಹೇಳುತ್ತಾರೆ. ಅವರ ಪ್ರಕಾರ ಅದು ಬದಲಾಗಿದ್ದರೆ. ಮತ್ತು ಅದರಲ್ಲಿ ಹಿಂಸಾತ್ಮಕವಾದ ಮನೋಭಾವವವೂ ಇದೆ. ಅಂದರೆ ಈಡಿಪಸ್ ಪುರಾಣವೇ ಭಿನ್ನವಾದ ಒಂದು ಚೌಕಟ್ಟೂ ಆಗಿದೆ. ಮಾರ್ಕ್ಸ್ ಮತ್ತು ಫ್ರಾಯ್ಡ್ ಇಬ್ಬರೂ ದೇಹವನ್ನು ಆವರಿಸಿಕೊಳ್ಳುವ ಕೆಲವು ಬಾಹ್ಯದ ಅಂಶಗಳನ್ನು ಹೇಳುತ್ತಾರೆ. ಅವರ ಪ್ರಕಾರ ಭಾವನೆಗಳಿಗೆ ಒಂದು ತರ್ಕವಿದೆ. ಮತ್ತು ಆ ತರ್ಕವನ್ನು ಸ್ಕಿಜೋಪ್ರೆನಿಯಾ ಕಾಯಿಲೆಯು ನಿರಾಕರಿಸುತ್ತದೆ. ಅದಕ್ಕೆ ಯಾವುದೇ ತರ್ಕವು ಇಲ್ಲ. ಸ್ಕಿಜೋಪ್ರೆನಿಯಾ ರೋಗಿಗೆ ಯಾವುದೇ ಸಹಜವಾದ ಒಂದು ಜೀವನ ಕ್ರಮವು ಇರುವುದೂ ಇಲ್ಲ. ಅವನು ಉಳಿದವರಂತೆ ಬಾಳಲಾರ. ಅವನ ಮನೋಸ್ಥಿತಿಯು ಮೂಲಭೂತವಾಗಿ ಒತ್ತಡಕ್ಕೆ ಗುರಿಯಾಗಿರುತ್ತದೆ. ಅಮೂರ್ತವಾದ ಅನೇಕ ಅರ್ಥಗಳನ್ನು ಅವನು ಹೊಂದಿರುತ್ತಾನೆ. ಅವನಲ್ಲಿ ಬೇರೆ ಬೇರೆ ಭಾವನೆಗಳು ಕಾಣಿಸಿಕೊಳ್ಳುತ್ತವೆ. ಅವನ ಸಂಹಿತೆಗಳು ಬದಲಾಗುತ್ತವೆ. ಹಾಗೆ ನೋಡುವುದಿದ್ದರೆ ಯಾವುದೇ ಭಾವನೆಗಳನ್ನು ರೂಪಿಸುವುದು ಸಮಾಜವೇ. ಬೇರೆ ಬೇರೆ ಸಮಾಜದ ಸ್ಥಿತಿಗಳು ನಮಗೆ ಬೇರೆ ಒತ್ತಡವನ್ನು ಹೇರುತ್ತವೆ. ಆಧುನಿಕ ಬಂಡವಾಳವಾದವು ರೂಪಿಸಿಕೊಡುವ ಸಂಬಂಧಗಳು ಇದಕ್ಕೆ ತಾಜಾ ಉದಾಹರಣೆಯಾಗಿದೆ. ಅದರಲ್ಲಿ ತಂತ್ರಜ್ಞಾನವು ಇದೆ. ಮತ್ತು ಹೆಚ್ಚು ಐಷಾರಾಮಿ ಜೀವನ ಮತ್ತು ಅದರ ಸ್ಥಿತಿಗತಿಗಳೂ ಇವೆ. ಆಧುನಿಕ ವಾಸ್ತವವಾದ ಮತ್ತು ಏಕ ಕೇಂದ್ರಿತ ಬಂಡವಾಳವಾದವು ದ್ವಂದ್ವಾತ್ಮಕವಾದ ಸಂಬಂಧವನ್ನು ಹೊಂದಿವೆ. ಹೆಚ್ಚು ತಾಂತ್ರಿಕ ಪರಿಣಿತಿಯನ್ನು ಹೊಂದಿದ ವ್ಯಕ್ತಿಗಳು ಇದ್ದಾರೆ. ಆದರೆ ಇದರಲ್ಲಿ ಸಾಮಾನ್ಯರಾದ ಮನುಷ್ಯರು ಎಲ್ಲಿದ್ದಾರೆ ಎಂದು ಹುಡುಕಬೇಕಾಗುತ್ತದೆ. ಇದಕ್ಕೆ ಪೂರಕವಾದ ಕೆಲವು ವಿವರಣೆಗಳನ್ನು ಇಲ್ಲಿ ಕೊಡಬೇಕಾಗುತ್ತದೆ. ಬರಹವನ್ನು ಮನುಷ್ಯನು ರೂಪಿಸಿದ್ದೂ ಕೂಡಾ ಒಂದು ಮಹತ್ವದ ಸಾಧನೆಯೇ ಆಗಿದೆ. ಅಂದರೆ ಅದಕ್ಕೂ ಒಂದು ಚರಿತ್ರೆಯು ಇದೆ. ಮೊದಲು ಬಿಲ್ಲು ಬಾಣಗಳು ಇದ್ದವು. ಮಡಿಕೆಗಳು ಇದ್ದವು. ಮತ್ತು ಅದರಲ್ಲಿಯೇ ಚಿತ್ರಗಳೂ ಇದ್ದವು. ಇವುಗಳಿಂದ ಜನರು ಬರಹಕ್ಕೆ ಶಿಫ್ಟ್ ಆದದ್ದು ಕೂಡಾ ಚರಿತ್ರೆಯಲ್ಲಿ ಅತ್ಯಂತ ಮಹತ್ವದ್ದೂ ಆಗಿದೆ. ಬಿಲ್ಲು ಮತ್ತು ಬಾಣಗಳ ಅನಂತರ ಬಂದ ಕೃಷಿಯೂ ಕೂಡಾ ಬಹಳ ಮಹತ್ವದ್ದು. ಮನುಷ್ಯ ಸಮಾಜದಲ್ಲಿ ಬರಹವು ಒಂದು ದೊಡ್ಡದಾದ ಮೈಲಿಗಲ್ಲು. ಬರಹವನ್ನು ಸಂಶೋಧನೆ ಮಾಡದೇ ಹೋಗಿದ್ದರೆ ಇಷ್ಟು ಬೆಳವಣಿಗೆ ಸಾಧ್ಯವೇ ಇರಲಿಲ್ಲ. ಆದರೆ ಈ ಎಲ್ಲಾ ಸಂಗತಿಗಳು ಮುಖ್ಯವಾಗಿ ಮನುಷ್ಯನ ಇತಿಹಾಸದಲ್ಲಿ ಬಹಳ ದೊಡ್ಡ ಸಂಗತಿಯೂ ಆಗಿದೆ. ಈ ಮಾತುಗಳನ್ನು

ಹೇಳಲು ಕಾರಣವಿದೆ. ಯಾವುದನ್ನು ನಾವು ಈಗ ಬಹಳ ದೊಡ್ಡ ಸಂಗತಿಯೆಂದು ಹೇಳುತ್ತಿದ್ದೆವೆಯೋ ಅದರ ಸ್ವರೂಪಕ್ಕೂ ಒಂದು ಚರಿತ್ರೆಯು ಇದೆ. ನಾಗರಿಕತೆಯು ಇದ್ದಕ್ಕಿದ್ದಂತೆ ಹುಟ್ಟಿಲ್ಲ. ಅದಕ್ಕೂ ಒಂದು ಕಾರಣವಿದೆ. ಅಂದರೆ ಅದು ಇದ್ದಕ್ಕಿದ್ದಂತೆ ಹುಟ್ಟಿಕೊಂಡಿಲ್ಲ. ಅದರಲ್ಲಿ ಬೇರೆ ಸಂಗತಿಗಳೂ ಇವೆ. ಮನುಷ್ಯನು ತನಗೆ ಬೇಕಾದ್ದನ್ನು ಸೃಷ್ಟಿಸಿದ್ದಾನೆ. ಮತ್ತು ಅದರಲ್ಲಿ ಬೇರೆ ಬೇರೆ ಆಯಾಮಗಳೂ ಇವೆ. ಆದರೆ ಮಾರುಕಟ್ಟೆಯನ್ನು ಮಾತ್ರವೇ ಆಧರಿಸಿಕೊಂಡ ಬಂಡವಾಳವಾದವು ತನಗೆ ಬೇಕಾದ್ದನ್ನು ಮಾತ್ರವೇ ಹೇರುತ್ತದೆ. ಅದು ತನಗೆ ಬೇಕಾದ ರೂಪವನ್ನು ಮಾತ್ರವೇ ಉಳಿಸಿಕೊಳ್ಳುತ್ತದೆ. ಅದೂ ಕೂಡಾ ತನಗಾಗಿ. ಅಂದರೆ ಅದರಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಅದರ ಹಿತಾಸಕ್ತಿಯೇ ಬಹಳ ಮುಖ್ಯವಾಗುತ್ತದೆ. ಆದರ ರಚನೆಯೂ ಬೇರೆಯಿರುತ್ತದೆ. ಮತ್ತು ಅದರಲ್ಲಿ ಬೇರೆ ಬೇರೆ ಆಸಕ್ತಿಯೂ ಇರುತ್ತದೆ.

ಬಾಳು ಮುಖ್ಯ

ಬಾಳು ನನಗೆ ಮುಖ್ಯ. ಬಾಳನ್ನು ತಿಳಿಯಲು ಬೇಕಾಗುವ ಸಾಧನಗಳೂ ಅಷ್ಟೇ ಪ್ರಾಮುಖ್ಯ. ಇಂದ್ರಿಯಗಳು ನಮ್ಮ ವೈರಿಗಳಲ್ಲ. ಅವುಗಳಿಂದಾಗಿ ಬೆಳೆಯುವ ಮನಸ್ಸು, ಬುದ್ಧಿಗಳು ನಮ್ಮ ವೈರಿಗಳಾಗಲಾರವು. ಅವು ನಮ್ಮ ಜೀವನದ ಪ್ರಾಮುಖ್ಯ ಸಾಧನಗಳು. ಇಂಥ ವಿಚಾರಗಳಿಂದ ಪ್ರಪಂಚ, ಬದುಕು ಮತ್ತು ಜೀವನಗಳ ಕಡೆಗಿದ್ದ ನನ್ನ ದೃಷ್ಟಿಕೋನ ಬದಲಾಯಿತು. ಇವನ್ನು ಕುರಿತು "ಬಾಳ್ವೆಯೇ ಬೆಳಕು" ಬರದಿರುವೆನಾದುದರಿಂದ, ಇಲ್ಲಿ ಅದನ್ನು ಚರ್ಚಿಸುವುದಿಲ್ಲ. {ಹುಚ್ಚು ಮನಸ್ಸಿನ ಹತ್ತು ಮುಖಗಳು, ಅಳಿದುಳಿದ ನೆನಪುಗಳೊಂದಿಗೆ, ಶಿವರಾಮ ಕಾರಂತ, ಪು.ಸಂ.125}

ಜ್ಞಾನಕ್ಷೇತ್ರ ಎಂಬುದೇನು? ಮನುಷ್ಯನ ಪಾಲಿಗೆ ತನ್ನನ್ನೂ, ತನ್ನ ಸುತ್ತಲೂ ಬದುಕುತ್ತಿರುವ ಜೀವಕೋಟಿಗಳನ್ನೂ, ಅವೆಲ್ಲವೂ ಬಾಳಿ ಬದುಕುತ್ತಿರುವ ಯಾವತ್ತೂ ಪ್ರಪಂಚವನ್ನೂ ಕುರಿತು ತಿಳಿಸಬಲ್ಲ ಸಂಗತಿಗಳು. ನಮಗೂ, ಪ್ರಕೃತಿಗೂ ಸಂಬಂಧವಿದೆ; ನಾವು ವಾಸಿಸುತ್ತಿರುವ ನೆಲ, ಜಲ, ವಾಯುಕ್ಷೇತ್ರಗಳಿಗೂ, ನಮಗೂ ಸಂಬಂಧವಿದೆ. ನಮ್ಮಿಂದ ಅನಂತ ದೂರದಲ್ಲಿರುವ ಖಗೋಲಕ್ಕೂ, ನಮಗೂ ಸಂಬಂಧವಿದೆ. ನಮಗೆ ಕಾಣಸಿಗುವ ಅಥವಾ ಸಿಗದಿರುವ ಸಸ್ಯ ಮತ್ತು ಜೀವಕೋಟಿಗಳಿಗೂ, ನಮಗೂ ಸಂಬಂಧವಿದೆ. ಹೀಗೆ, ನಮ್ಮ ಬದುಕಿಗೆ ಸಂಬಂಧಪಟ್ಟ ಪ್ರಕೃತಿಯ ಮತ್ತು ಜೀವಿಗಳ ರೀತಿನೀತಿಗಳ ವಿಚಾರ ನಮ್ಮ ಆಹಾರ ಸಂಪಾದನೆಗೂ, ಬದುಕಿನ ನಿರ್ವಹಣೆಗೂ ಬೇಕೇಬೇಕಾಗುತ್ತದೆ. ಅಂಥ ಜ್ಞಾನವಿಲ್ಲದೆಯೆ ನಾವು ಬದುಕುವುದಾದರೂ ಹೇಗೆ?

{ಶಿವರಾಮ ಕಾರಂತರ ಲೇಖನಗಳು, ಸಂಪುಟ-4, ಅನುಭವಗಳು ಮತ್ತು ಸಾಹಿತ್ಯಚಿಂತನ, ಸಂಪಾದಕಿ : ಬಿ. ಮಾಲಿನಿ ಮಲ್ಯ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ, ಪು.ಸಂ.215}

ನಮ್ಮ ಸಾಂಪ್ರಾದಾಯಿಕವಾದ ಚರಿತ್ರೆಯನ್ನು ಬಿಟ್ಟು ಹೊಸದಾದ ರೀತಿಯಲ್ಲಿ ಚರಿತ್ರೆಯನ್ನು ನೋಡಿದರೆ ನಮಗೆ ಕಾರಂತರ ಕಾದಂಬರಿಗಳ ಜಗತ್ತು ಹೊಸ ಅನುಭವವನ್ನು ಹೇಳುತ್ತದೆ. ಜ್ಞಾನ ಮತ್ತು ಅದರ ಚರಿತ್ರೆಯನ್ನು ನಾವು ಕಂಡು ಕೊಳ್ಳುವುದು ಹೇಗೆ ಎನ್ನುವುದೇ ನಮ್ಮ ಮುಂದೆ ಇರುವ ಪ್ರಮುಖವಾದ ಪ್ರಶ್ನೆ. ಮೊದಲನೆಯದಾಗಿ ಇದರಲ್ಲಿ ವ್ಯಕ್ತಿ ಮತ್ತು ಅವನ ಪ್ರಜ್ಞೆಯ ಪ್ರಶ್ನೆಯು ಬರುತ್ತದೆ. ವ್ಯಕ್ತಿ ಮತ್ತು ಅವನ ಪ್ರಜ್ಞೆಯ ಪ್ರಶ್ನೆಯು ಶೂನ್ಯದಿಂದ ಹುಟ್ಟುವುದಿಲ್ಲ. ಅದರ ಮೇಲೆ ಬೇರೆ ಬೇರೆ ಪ್ರಭಾವಗಳು ಇರುತ್ತವೆ. ರಾಜಕಾರಣ. ಆರ್ಥಿಕತೆ, ಸಮಾಜ ಮತ್ತು ತತ್ವಜ್ಞಾನವು ಒಂದು ಬಗೆಯ ಪ್ರಭಾವವನ್ನು ಬೀರುತ್ತದೆ. ಜ್ಞಾನ ಎನ್ನುವುದನ್ನು ನಾವು ಪಾಂಡಿತ್ಯ ಎಂದು ತೆಗೆದುಕೊಂಡರೆ ಅದರಲ್ಲಿ ಅನೇಕ ಅಂಶಗಳು ಸೇರ್ಪಡೆಯಾಗಿರುತ್ತದೆ. ಒಬ್ಬ ವ್ಯಕ್ತಿಯು ತನ್ನಿಂದ ತಾನೇ ಬುದ್ಧಿಜೀವಿಯು ಆಗಿರುವುದಿಲ್ಲ. ವಿವಿಧ ಕಾಲಮಾನಗಳು ವ್ಯಕ್ತಿಯನ್ನು ರೂಪಿಸುತ್ತದೆ. ಜ್ಞಾನಕ್ಕೂ ತತ್ವಜ್ಞಾನಕ್ಕೂ ಸಂಬಂಧವಿದೆ. ಅದೇ ರೀತಿಯಲ್ಲಿ ಚರಿತ್ರಗೆ ಮತ್ತು ಬುದ್ಧಿಜೀವಿಗೆ ಒಂದು ಸಂಬಂಧವು ಇದೆ. ಹತ್ತನೆಯ ಶತಮಾನದ ಬುದ್ಧಿಜೀವಿ ಮತ್ತು ಇಪ್ಪತ್ತನೆಯ ಶತಮಾನದ ಬುದ್ಧಿಜೀವಿಗಳಿಗೆ ಬಹಳ ವ್ಯತ್ಯಾಸವಿದೆ. ಒಂದು ಕಾಲದ ಜ್ಞಾನವು ಮತ್ತೊಂದು ಕಾಲಕ್ಕೆ ಬರುವಾಗ ಬೇರೆಯಾಗುತ್ತದೆ. ಚರಿತ್ರೆಯು ನಮ್ಮ ಜ್ಞಾನದ ರೂಪವನ್ನು ಬದಲಿಸುತ್ತದೆ. ಹತ್ತನೆಯ ಶತಮಾನದ ಚರಿತ್ರೆಯು ಇಪ್ಪತ್ತನೆಯ ಶತಮಾನಕ್ಕೆ ಬರುವಾಗ ವ್ಯತ್ಯಾಸವಾಗಿದೆ. ಇದಕ್ಕೆ ಕಾರಣ ಬದಲಾದ ಚರಿತ್ರೆ. ಸಾಂಸ್ಕೃತಿಕ ಚರಿತ್ರೆಯು ಬದಲಾದಾಗ ಅದರ ಮೂಲಕ ನಮ್ಮ ವ್ಯಕ್ತಿತ್ವ ಕೂಡಾ ಬದಲಾಗುತ್ತದೆ. ಜೀವನದ ಕ್ರಮಗಳು ಬೇರೆಯಾಗುತ್ತದೆ. ಚರಿತ್ರೆಯಲ್ಲಿ ಕೆಲವು ಉಳಿಯುತ್ತವೆ ಮತ್ತೆ ಕೆಲವು ಸಾಯುತ್ತವೆ. ಅದು ಅತ್ಯಂತ ಸಹಜವೂ ಹೌದು. ಜ್ಞಾನಕ್ಕೂ ನಾವು ಮಾಡುವ ಕೆಲಸಕ್ಕೂ ಒಂದು ಸಂಬಂಧವಿದೆ.ಅದಕ್ಕೂ ನಮ್ಮ ಮತ ಮತ್ತು ಧರ್ಮಕ್ಕೂ ಒಂದು ಸಂಬಂಧವು ಇರುತ್ತದೆ. ಆದ್ದರಿಂದ ನಮ್ಮ ಜ್ಞಾನವು ಸ್ವಾಯತ್ತವಲ್ಲ. ಅದೇ ರೀತಿಯಲ್ಲಿ ಅದು ಸ್ವತಂತ್ರವೂ ಅಲ್ಲ. ಜ್ಞಾನವೂ ತಾತ್ವಿಕವಾದ್ದು. ಅದಕ್ಕೂ ಯಜಮಾನ್ಯಕ್ಕೂ ಸಂಬಂಧವಿದೆ ಎಂದು ಸೈದ್ ಹೇಳುತ್ತಾನೆ (ಕಲ್ಚರ್ ಅಂಡ್ ಇಂಪಿಯರಲಿಸಂ) ವಸಾಹತು ದೇಶಗಳಲ್ಲಿ ಇಂಗ್ಲೆಂಡಿನ ಪ್ರಭುತ್ವವು ಹೇಗೆ ತನ್ನ ಜ್ಞಾನವನ್ನು ರೂಪಿಸಿತು ಎಂದು ಅವನು ಹೇಳುತ್ತಾನೆ. ಹದಿನೆಂಟನೆಯ

ಶತಮಾನದ ಆದಿ ಭಾಗದಿಂದ ಹತ್ತೊಂಬತ್ತನೆಯ ಶತಮಾನದ ವರೆಗೆ ಇಂಗ್ಲೆಂಡ್ ಜಾಗತಿಕವಾದ ಯಜಮಾನಿಕೆಯನ್ನು ವಹಿಸಿದ್ದು ಸತ್ಯ. ಕಾರಂತರು ಹೇಳುವ ಮಾತು ಇಲ್ಲಿ ಉಲ್ಲೇಖನೀಯ "ವೈದಿಕ ಸಾಹಿತ್ಯದಂತ ಸಾಹಿತ್ಯವನ್ನು ಕಂಡು ನಾವು ಪ್ರಾಯಶಃ – ಇದು ವ್ಯಕ್ತಿ ಸೃಷ್ಟಿಯಲ್ಲ; ಸಾಮೂಹಿಕಸೃಷ್ಟಿ ಎಂಬ ಅಭಿಪ್ರಾಯಕ್ಕೆ ಬಂದಹಾಗಿದೆ. ವೈದಿಕ ಋಕ್ಕುಗಳ ಸಮೂಹ, ನಿಜಕ್ಕೂ ಒಬ್ಬನ ಸೃಷ್ಟಿಯಲ್ಲ. ಅದೊಂದು ಸಂಕಲನ, ಬೇರೆ, ಬೇರೆ ಗುಂಪುಗಳ ವ್ಯಕ್ತಿಗಳು ತಾವು ಒಂಟಿ, ಒಂಟಿಯಾಗಿ ರಚಿಸಿದ ಹಾಡುಗಳನ್ನು ಕಂಠಪಾಠ ಮಾಡುತ್ತ, ಜತನದಿಂದ ಕಾಪಾಡಿಕೊಂಡು ಬಂದರು. ನೂರಾರು ಕವಿಗಳು, ಬೇರೆ, ಸೇರೆ ಕಾಲದ, ಸಾಕಷ್ಟು ವೈಯಕ್ತಿಕ ರಚನೆಗಳನ್ನು ಅವರಿಗಿಂತ ಮುಂದಿನ ಜನರು, ಒಂದೇ ಸಂಕಲನದಲ್ಲಿ ನಮಗೆ ಒದಗಿಸಿದರು. ಆದರೂ, ಅಲ್ಲಿಯೂ ನಾಲ್ಕು ಬೇರೆ ಬೇರೆ ವೇದಗಳನ್ನು ಕಾಣುತ್ತೇವೆ. ಇಂದು ನಾವೂ, ಕತೆಗಳ ಸಂಕಲನವನ್ನೂ, ಕವಿತೆಗಳ ಸಂಕಲನವನ್ನೂ ಪ್ರಕಟಿಸುವುದಿಲ್ಲವೇ? ಬಿಡು ವ್ಯಕ್ತಿಗಳ ಹೆಸರನ್ನು ಹೇಳದೆಯೆ, ಅವನ್ನು ಇದು ಕಟ್ಟಿನಲ್ಲಿ ಕೊಟ್ಟ ಮಾತ್ರಕ್ಕೆ, ಅವೆಲ್ಲ ಸಾಮೂಹಿಕ ಸೃಷ್ಟಿ ಎಂಬ ಅರ್ಥ ಬರಲಾರದಷ್ಟೇ {ಶಿವರಾಮ ಕಾರಂತರ ಲೇಖನಗಳು, ಸಂಪುಟ–4, ಅನುಭವಗಳು ಮತ್ತು ಸಾಹಿತ್ಯ ಚಿಂತನ, ಸಂಪಾದಕಿ: ಬಿ. ಮಾಲಿನಿ ಮಲ್ಯ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ, ಪು.ಸಂ.261} ಕಾರಂತರು ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಭವವನ್ನು ಗಮನಿಸಿಕೊಂಡು ಕಾದಂಬರಿಯನ್ನು ಬರೆದವರು. ಇದು ಅವರಿಗೆ ಅವರ ಅಭಿವ್ಯಕ್ತಿಯ ಮಾರ್ಗವೂ ಹೌದು.

ಸಾಮಾಜಿಕ ಮೌಲ್ಯಗಳೆಂಬುವುದು ಒಂದೆರಡಲ್ಲ ಹಲವಾರು, ಅವು ಈ ವಿಷಯಗಳಿಗೆ ಸಂಬಂಧಿಸಿದುವು. ಬಡತನದ ಪ್ರಶ್ನೆ ಎನ್ನುವ, ಇದು ಸಾಹಿತಿ ತೋರುವ ಮರುಕ, ನಿಜವಾದ ಮರುಕವೇ? ಆ ಪ್ರಶ್ನೆಯನ್ನು ತಾನೇ ಕೇಳಿಕೊಂಡರೆ ಒಳ್ಳೆಯದು. ಅವನ ಕಥೆಯನ್ನು ಓದಿ, ಯಾವನೋ ಅಲ್ಲ ವ್ಯಕ್ತಿಯ ಬಡತನಕ್ಕಾಗಿ ಕಣ್ಣೀರು ಕರೆದು, ಮೂರೋ, ನಾಲ್ಕೂ ಬ್ಯಾಟಿಂಗ್ ಪಟ ಒದ್ದೆ ಮಾಡಿದವರೂ ಇರಬಹುದು. ಹಾಗೆ ಬರೆದಾತನ ಮನಸ್ಸಿನಲ್ಲಿ ನಿಜವಾದ ಮಾತು ಎಷ್ಟಿತ್ತು? ಅವನು ಬರೆದ ಉದ್ದೇಶವೇನು? ಅವನ ಹಾಗೆ ಇನ್ನೊಬ್ಬರು ಅತ್ತರ ಸಾಕೋ, ಹೇಗೆ? ಇಲ್ಲವೆ ಇಲ್ಲದ ಒಂದು ಪ್ರಾಣಿಯ ವಿಚಾರದಲ್ಲಿ, ನನ್ನ ಅನುಕಂಪ ಬೆಳೆಯಬೇಕಾಗಿದೆಯೇ ಅಥವಾ ನನ್ನ ಜೀವನಕ್ಕೂ, ಸುತ್ತಣ ಜೀವನಕ್ಕೂ ಒಂದು ನಿಕಟವಾದ ಸಂಬಂಧವಿದೆ ಎಂಬ ಅರಿವು ನಮಗಾಗಬೇಕೋ? ಯಾವ ಸಮಾಜದಲ್ಲಿ ಅಳು, ದುಃಖ, ನೋವು, ವೇದನೆ ಮೊದಲಾದುವು ತುಂಬಿಕೊಂಡಿರುತ್ತವೆಯೋ

ಸಮಾಜದಲ್ಲಿ ಯಾವುದೋ ಕುಂದುಕೊರತೆಗಳು ಸಾಕಷ್ಟಿವೆ ಎಂದು ಸುಲಭವಾಗಿ ತರ್ಕಿಸಬಹುದು. ಅಂಥ ಕೊರತೆಗಳಿಂದ ತನಗೂ ಶ್ರೇಯಸ್ಸಿಲ್ಲ, ತನ್ನ ಸಮಾಜಕ್ಕೂ ಲ್ಲ–ಎಂಬ ವಿಶಾಲ ತಿಳಿವಳಿಕೆ ನಮಗೆ ಬರಬೇಕಾಗಿದೆ. ಹಾಗೆ ಬರುವ ಬದಲು, ಇವು ಕೃತಕವಾಗಿ ಹೊತ್ತ ಒಂದು ಮಾಸ್ತರಿಕೆಯಂತೆ, ಸಮಾಜದ ಉಳಿದವರಿಗೆ ಮಾತ್ರ ತೋರಿಸುವ ಪ್ರವೃತ್ತಿ ಅದಾದರೆ ಏನು ಪ್ರಯೋಜನ? ಇವೆಲ್ಲ ನಾವು ನಾವೇ ನಮಗೂ ಕೇಳಿಕೊಳ್ಳಬೇಕಾದ ಪ್ರಶ್ನೆಗಳು; ನಾವು, ನಾವೇ ಉತ್ತರಗಳನ್ನೂ ವಾದಿಸಬೇಕಾಗಿದೆ. ನಮ್ಮ ಅನುಭವ, ವಯಸ್ಸಿನೊಡನೆ ಹೆಚ್ಚಾಗುತ್ತಾ ಸರಿದಂತೆ, – ಪ್ರಾಮಾಣಿಕತೆ ಬೆಳೆದಂತೆ, ಇಂಥ ಅನೇಕ ವಿಷಯಗಳಲ್ಲಿ ದಿಟ್ಟತನ ಕಡಿಮೆ ಯಾಗುತ್ತದೆ. ನನಗಂತೂ ಹಾಗಾಗುತ್ತಾ ಬಂದಿದೆ. ಯಾವುದನ್ನು ಕುರಿತು ನಮ್ಮ ತರುಣರು ಹೀಗಲ್ಲ, ಹೀಗೆ, ಈ ಮೌಲ್ಯ ಹೀಗಲ್ಲ, ಹೀಗೆ ಎಂದು ಹೇಳುತ್ತಿದ್ದಾರೋ, 3 ಕುರಿತು ಅಷ್ಟೇ ಧೈರ್ಯದಿಂದ ಹೇಳುವುದಕ್ಕೆ ಅಂಜಿಕೆಯಾಗುತ್ತಿದೆ."

{ಶಿವರಾಮ ಕಾರಂತರ ಲೇಖನಗಳು, ಸಂಪುಟ–4, ಅನುಭವಗಳು ಮತ್ತು ಸಾಹಿತ್ಯಚಿಂತನ, ಸಂಪಾದಕಿ: ಬಿ. ಮಾಲಿನಿ ಮಲ್ಯ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ, ಪು.ಸಂ.278} ಚರಿತ್ರೆಯು ಯಾವಾಗಲೂ ಬದಲಾಗುತ್ತದೆ. ಅದು ಒಂದೇ ರೀತಿಯಲ್ಲಿ ಇರುವುದಿಲ್ಲ. ಇದು ಚಾರಿತ್ರಿಕತೆಗೂ ಅನ್ವಯವಾಗುತ್ತದೆ. ನಾವು ಇವತ್ತು ಚರಿತ್ರೆಯನ್ನು ಒಂದು ಅಧ್ಯಯನದ ಶಿಸ್ತಾಗಿ ತೆಗೆದುಕೊಂಡಿರುವುದರಿಂದ ಅದನ್ನು ಸಮಾಜಶಾಸ್ತ್ರ ಅಥವಾ ಮಾನವಿಕ ವಿಜ್ಞಾನಕ್ಕೆ ಸೇರಿಸುತ್ತೇವೆ. ಹಾಗಿದ್ದರೂ ನಾವು ಒಂದು ವಿಚಾರವನ್ನು ಮರೆಯುತ್ತೇವೆ. ಯಾವುದೇ ಸಮಾಜಶಾಸ್ತ್ರದ ಅಧ್ಯಯನಗಳು ಅಥವಾ ಮಾನವಿಕ ಅಧ್ಯಯನಗಳನ್ನು ಒಂದು ಕಡೆಗೆ ಅಂಟಿಸಿಕೊಂಡು ಅದನ್ನು ನಿರ್ವಚನ ಮಾಡುವುದು ಅತ್ಯಂತ ಕಷ್ಟ. ಚರಿತ್ರೆಗೆ ನಿರ್ದಿಷ್ಟವಾದ ಅನನ್ಯತೆಯು ಇವೆ. ಸಮಾಜಶಾಸ್ತ್ರಕ್ಕೆ ಒಂದು ಪ್ರತ್ಯೇಕವಾದ ಅಧ್ಯಯನ ಶಿಸ್ತು ಇದೆ ಎಂದು ಹೇಳುವುದು ನಿಜವಾಗಿಯೂ ಅತ್ಯಂತ ಕಷ್ಟ. ಇವೆಲ್ಲವು ಒಂದಕ್ಕೆ ಒಂದು ಮಿಶ್ರವಾಗುತ್ತವೆ. ಅದರಲ್ಲಿ ಯಾವುದು ಹೊರಗಿನದು, ಯಾವುದು ಸಮಾಜಶಾಸ್ತ್ರದ ಒಳಗಿನದು ಎಂದು ವಿವರಿಸುವುದು ಅತ್ಯಂತ ಹೆಚ್ಚು ಸಮಸ್ಯಾತ್ಮಕ. ಚರಿತ್ರೆಯ ಅಧ್ಯಯನವನ್ನು ನಾವು ಇಲ್ಲಿ ಗಮನಿಸಬಹುದು. ಇದರಲ್ಲಿ ಅನೇಕ ಅಸಾಂಗತ್ಯಗಳು ಇವೆ. ಅದರ ಜೊತೆಗೆ ಅನನ್ಯತೆಯ ಸಮಸ್ಯೆಯು ಇದೆ. ಕೆಲವು ಅಂಶಗಳು ಸತ್ಯಕ್ಕೆ ದೂರವಾದ್ದು ಇದೆ. ನಾವು ಇದರಲ್ಲಿ ಯಾವುದನ್ನು ನಂಬಬೇಕು ಎನ್ನುವುದು ಸಮಸ್ಯೆ. ಚರಿತ್ರೆಯು ಬರೀ ಚರಿತ್ರೆಯಾಗಿ ಮಾತ್ರವೇ ಉಳಿದಿಲ್ಲ. ಅದು ಸಾಂಸ್ಕೃತಿಕವಾದ ಚರಿತ್ರೆಯೂ ಆಗಿದೆ. ಆದ್ದರಿಂದಲೇ

ಕಾರಂತರನ್ನು ಓದುವಾಗ ನಮಗೆ ಬರೀ ಕಾದಂಬರಿಯನ್ನು ಮಾತ್ರವೇ ಓದುತ್ತಿದ್ದೇವೆ ಎಂದು ಅನಿಸುವುದಿಲ್ಲ. ನಾವು ಅವರ ಕಾದಂಬರಿಗಳನ್ನು ಓದುವಾಗ ಅನೇಕ ವಿಷಯಗಳನ್ನು ಮರೆಮಾಚಲು ಬರುವುದೇ ಇಲ್ಲ. ಅವರ ಕಾದಂಬರಿಗಳ ರಚನೆ, ಅದರ ವಿನ್ಯಾಸ, ಅದರ ವಸ್ತು, ಅದು ನಿರೂಪಿಸುವ ಕ್ರಮ– ಎಲ್ಲವೂ ಭಿನ್ನ. ಈ ದೃಷ್ಟಿಯಿಂದ ಕಾರಂತರ ಕಾದಂಬರಿಗಳು ಯಾವತ್ತೂ ಓದುಗರಿಗೆ ಒಂದು ಸವಾಲು ಎಂದು ಅನಿಸುತ್ತದೆ. ಕಾರಂತರ ಕರುಳಿನ ಕರೆಯಲ್ಲಿ ಬರುವ ಶ್ರೀನಿವಾಸಯ್ಯನ ಪರಿಸ್ಥಿತಿಯನ್ನು ನೋಡಿದರೆ ನಮಗೆ ಅಯ್ಯೋ ಎನಿಸುತ್ತದೆ. ಅವನು ಮುಟ್ಟಿದ್ದು ಚಿನ್ನವಾಗಲಿಲ್ಲ. ಪಡಬಾರದ ಕಷ್ಟ ಪಟ್ಟ. ಅಣ್ಣ ಹಾಗಲ್ಲ, ಬಡ್ಡಿಗೆ ದುಡ್ಡು ಬಿಡುವವನು. ಶ್ರೀಮಂತ. ಕರುಣೆಯೇ ಇಲ್ಲ. ಸಮಾಜದಲ್ಲಿ, ಚರಿತ್ರೆಯಲ್ಲಿ ಇಂಥಾದ್ದು ನಡೆದೇ ಇಲ್ಲ ಎಂದು ಹೇಳುವಂತೆಯೇ ಇಲ್ಲ. ಹಾಗೆ ನೋಡಿದರೆ ಶ್ರೀನಿವಾಸಯ್ಯನೂ ಕೊನೆಯ ಮನುಷ್ಯನೇ ಈ ಅನುಭವಗಳು ಅತ್ಯಂತ ಸಂಕೀರ್ಣ ಇದನ್ನು ಒಂದು ಶಿಸ್ತಿನಲ್ಲಿ ಮಾತ್ರವೇ ನೋಡಲು ಬರುವುದಿಲ್ಲ. ಇದು ಮೇಲಿನವರು ಮತ್ತು ಕೆಳಗಿನವರು ಎನ್ನುವುದನ್ನು ಮಾತ್ರವೇ ಹೇಳುವುದಿಲ್ಲ. ಕಾದಂಬರಿಯನ್ನು ಓದುವಾಗ ಇರ್ದೆಯ ಸುಬ್ರಾಯರ ಬಗ್ಗೆ ಸಿಟ್ಟು ಬರುತ್ತದೆ. ಸಮಾಜವು ಹೀಗೆಯೂ ಇದೆಯೇ ಅನಿಸುತ್ತದೆ. ಅತ್ಯಂತ ಮಿತಿಯುಳ್ಳ ಅನುಭವವನ್ನು ಮಾತ್ರವೇ ಈ ಕಾದಂಬರಿಯು ಹೇಳುವುದಿಲ್ಲ. (ನೋಡಿ Francis Fukuyama's End of History and the Last Man)

ಈಗ ಮತ್ತೆ ವಾಸ್ತವವಾದದ ಚರ್ಚೆಯು ನಡೆಯುತ್ತಿದೆ. ಆದರೆ ಈಗಿನ ವಾಸ್ತವವಾದದಲ್ಲಿ ಅನೇಕ ಚಿಂತೆಯಲ್ಲಿ ಇರುವ ಮನುಷ್ಯರು ಇದ್ದಾರೆ ಅದನ್ನೂ ಗಮನಿಸಬೇಕು. ಡೆರಿಡಾ ಕವಿತೆ ಮತ್ತು ತತ್ವಜ್ಞಾನದ ನಡುವಣ ಸಂಬಂಧವನ್ನು; ಅವುಗಳ ನಡುವಣ ಗೆರೆಯನ್ನು ಅಳಿಸಿ ಹಾಕಿದ್ದಾನೆ. ಮತ್ತು ಅವನೂ ಸಿದ್ಧಾಂತದ ಮಿತಿಯನ್ನು ಒರೆಸಿಹಾಕಿದ್ದಾನೆ. ಭಾಷೆ ಮತ್ತು ಅದರ ಮಿತಿಗಳನ್ನು ನಿರಚನವು ತೋರಿಸಿಕೊಡುತ್ತದೆ. ಮತ್ತು ಆ ಮೂಲಕ ಸಾಂಪ್ರದಾಯಿಕವಾದ ನಿಲುವುಗಳನ್ನು ಅದು ವಿರೋಧಿಸುತ್ತದೆ. ಆದರೆ ನಿರಚನವು ಕೆಲವು ಸಂದರ್ಭಗಳಲ್ಲಿ ಆಧ್ಯಾತ್ಮಿಕವಾದ ಭಾಷೆಯಂತೆ ಕಾಣಿಸುತ್ತದೆ. ಪಶ್ಚಿಮದ ಆಧುನಿಕತಾವಾದವು ಒಂದು ಕಾಲಕ್ಕೆ ವಿಕ್ಟೋರಿಯನ್ ಯುಗದ ತಾತ್ವಿಕತೆಯನ್ನು ವಿರೋಧಿಸಿತ್ತು. ಮತ್ತು ಅದರ ಪರಿಣಾಮವಾಗಿಯೇ ಅದು ಒಂದು ಮಾದರಿಯ ಚರಿತ್ರೆಯನ್ನು ಹೊಂದಿತ್ತು. ಆಧುನಿಕತೆಯು ಸಾಮಾಜಿಕ ಸನ್ನಿವೇಶದಲ್ಲಿ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಲ್ಲ ಎಂದೇ ಪ್ರತಿಪಾದಿಸಿತ್ತು. ಅದರ ನಿಲುವು ರೊಮ್ಯಾಂಟಿಕರ

ನಿಲುವಿಗಿಂತ ಭಿನ್ನವಾಗಿತ್ತು ಎನ್ನುವುದೂ ಅಷ್ಟೇ ಸತ್ಯ. ರೊಮಾಂಟಿಕರು ತಮ್ಮದೇ ಆದ ಸನ್ನಿವೇಶವನ್ನು ಎದುರಿಸಿದ್ದರು. ಸಾಹಿತ್ಯದ ಕೆಲಸವು ಆದರ್ಶಗಳನ್ನು ಪ್ರತಿಪಾದಿಸುವುದು ಎಂದು ಅವರು ನಂಬಿದ್ದರು. ಆದರೆ ಆಧುನಿಕರು ಇದನ್ನು ವಿರೋಧಿಸಿದರು. ಯಾವುದನ್ನು ಸಿದ್ಧಾಂತವನ್ನಾಗಿ ನೋಡಬಹುದೋ ಅದನ್ನು ನವ್ಯರು ತಿರಸ್ಕರಿಸಿದರು. ಆದರೆ ಅನೇಕ ಸಾಂಸ್ಕೃತಿಕ ಸಿದ್ಧಾಂತಗಳು ಮೂಲತಃ ಅಸ್ಪಷ್ಟವಾಗಿವೆ. ನಿರಚನವಾದಿಗಳು ಬರೀ ಪಠ್ಯವನ್ನು ಮಾತ್ರವೇ ಗಮನಿಸುವುದಿಲ್ಲ. ಬರಹವೆನ್ನುವುದು ಮಾತ್ರವೇ ಅದಕ್ಕೆ ಮುಖ್ಯವಲ್ಲ. ಪಠ್ಯವನ್ನು ಮಾತ್ರವೇ ನಂಬುವುದಿಲ್ಲ. ಅದರಾಚೆಗೆ ಇರುವ ಮೌನವನ್ನು ಕೂಡಾ ಗ್ರಹಿಸಬೇಕು ಎಂದು ಹೇಳುತ್ತದೆ. ಪಠ್ಯದ ಹತ್ತಿರ ಹೋಗುವುದು ಎಂದರೆ ಏನು ಎನ್ನುವುದೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಹತ್ತಿರ ಹೋಗುವುದು ಎನ್ನುವುದು ಬಹಳ ದೊಡ್ಡ ತಾತ್ವಿಕ ಪ್ರಶ್ನೆ. ಒಂದು ಚಿತ್ರವನ್ನು ಹತ್ತಿರ ನೋಡಿದರೆ ಅದರ ಪರಿಣಾಮ ಏನು ಎಂದೂ ಕೇಳಬೇಕಾಗುತ್ತದೆ. ಚಿತ್ರವನ್ನು ಹತ್ತಿರ ನೋಡಿದರೆ ಅದು ಬರೀ ಅಸ್ಪಷ್ಟವಾಗಿ ಕಾಣಿಸುತ್ತದೆ. ರಂಗಸ್ಥಳದಲ್ಲಿ ಇರುವ ನಟನನ್ನು ಹತ್ತಿರ ನೋಡಿದರೆ ನಮಗೆ ಕಾಣಿಸುವುದು ಏನು?

ಅನುಬಂಧ

ಇಮ್ಯಾನಲ್ ಕಾಂಟ್ : ಜರ್ಮನಿಯ ಒಬ್ಬ ತತ್ವಶಾಸ್ತ್ರಜ್ಞ, ಹುಟ್ಟಿದ್ದು 22–4–1724. ದಿವಂಗತನಾದುದು 12–2–1804. ಇವನನ್ನು ಪುನರುಜ್ಜೀವನ ಕಾಲದ ಮಹತ್ವದ ಚಿಂತಕನೆಂದು ಕರೆಯುತ್ತಾರೆ. ಅವಕಾಶ; ಕಾಲ ಮತ್ತು ಕಾರಣಗಳು ಹೇಗೆ ನಮ್ಮ ಸಂವೇದನೆಗಳನ್ನು ರೂಪಿಸುತ್ತವೆ ಎಂದು ಚರ್ಚಿಸುತ್ತಾನೆ. ಕ್ರಿಟಿಕ್ ಆಫ್ ಪ್ರಾಕ್ಟಿಕಲ್ ರೀಸನ್ ಫಿಲಾಸಫಿ ಆಫ್ ಮೆಟಿರಿಯಲ್ ನೇಚರ್ ಅವನ ಮಹತ್ವದ ಕೃತಿಗಳಾಗಿವೆ. ನಮ್ಮ ಚಟುವಟಿಕೆಗೂ ನೈತಿಕತೆಗೂ ಯಾವ ಸಂಬಂಧವಿಯೆಂದು ಅವನು ಚರ್ಚಿಸುತ್ತಾನೆ. ಕಾಂಟ್ ವಿಶ್ವಾತ್ಮಕನ್ಯಾಯದ ಕುರಿತು ಹೇಳುತ್ತಾನೆ. ನೈತಿಕತೆ ಮತ್ತು ಆಧ್ಯಾತ್ಮವು ಹೇಗೆ ಬೆಸೆದುಕೊಂಡಿದೆ ಎಂದು ವಿವರವಾಗಿ ಚರ್ಚೆ ಮಾಡಿದ್ದಾನೆ. ನೈತಿಕತೆ ಮತ್ತು ನಮ್ಮ ಕರ್ತವ್ಯಕ್ಕೆ ಸಂಬಂಧವಿದೆ ಯೆಂದು ಹೇಳುತ್ತಾನೆ.

ಲಕಾನ್ : ಜೇಕೂಸ್ ಲಕಾನ್ ಎನ್ನುವುದು ಅವನ ಪೂರ್ಣ ಹೆಸರು. ಮನೋವಿಜ್ಞಾನದಲ್ಲಿ ಬಹಳ ಕೆಲಸಗಳನ್ನು ಮಾಡಿದ್ದಾನೆ. ಫ್ರಾಯ್ಡ್ ಯೋಚನೆ ಮಾಡಿದ ಕ್ರಮಕ್ಕಿಂತ ಭಿನ್ನವಾಗಿ ಲಕಾನ್ ಯೋಚನೆ ಮಾಡುತ್ತಾನೆ. ಅವನ ಚರ್ಚೆಯು ಬರೀ ತತ್ವಜ್ಞಾನವನ್ನು ಮಾತ್ರವೇ ಕೇಂದ್ರವಾಗಿರಿಸಿಕೊಂಡಿಲ್ಲ. ಅದರ ಬದಲು ಅದರಲ್ಲಿ ಮನೋವಿಜ್ಞಾನದ ಬೌದ್ಧಿಕ ನೋಟವೂ ಇದೆ. ಹುಟ್ಟು 13–4–1901 ರಲ್ಲಿ ಮರಣ 9–9–1981. ಫ್ರಾನ್ಸ್ ದೇಶಕ್ಕೆ ಸೇರಿದವನು. ರಚನೋತ್ತರವಾದದ ಮೇಲೆ ಮಹತ್ವದ ಪ್ರಭಾವವನ್ನು ಬೀರಿದ್ದಾನೆ. ವಾಸ್ತವ; ಸಂಕೇತ; ಕಲ್ಪನೆ; ಬಯಕೆಗಳ ಕುರಿತು ವಿಶೇಷ ಚರ್ಚೆಯನ್ನು ಮಾಡಿರುವುದು ವಿಶೇಷ. ಅಹಮಿಕೆಯ ಮನೋಸ್ಥಿತಿ; ವಾಸ್ತವದ ಜೊತೆಗೆ ನಾವು ಸ್ಥಾಪಿಸುವ ಸಂಬಂಧ; ಸತ್ಯ ಎನ್ನುವುದು ಯಾವ ರೀತಿಯಲ್ಲಿರುತ್ತದೆ ಎಂದು ವಿವರವಾಗಿ ಚರ್ಚಿಸುತ್ತಾನೆ. ಮಗುವು ಬೆಳೆಯುವಾಗ ಹೇಗೆ ಕನ್ನಡಿ

ತತ್ವವು ರೂಪುಗೊಳ್ಳುತ್ತದೆಯೆಂದು ವಿವರಿಸುತ್ತಾನೆ. ಅದು ತನ್ನನ್ನು ತಾನು ಗುರುತಿಸಿಕೊಳ್ಳುವ ಕ್ರಮ. 'ಫೆಮಿನೈಸ್ ಸೆಕ್ಯುವಲಿಟಿ', 'ದಿ ಇಗೋ' ಇನ್ ಫ್ರಾಯ್ಡ್‌ಯನ್ ಥಿಯರಿ; 'ಸೆಮಿನಾರ್' ಅವನ ಕೃತಿಗಳು.

ಜಿಜೆಕ್ : ಸ್ಲಾವ್ರೋಜ್ ಜಿಜೆಕ್ ಈವತ್ತಿನ ಮಹತ್ವದ ತತ್ವಜ್ಞಾನಿ. 21-3-1949ರಲ್ಲಿ ಹುಟ್ಟಿ, ಸಿನಿಮಾ; ತತ್ವಜ್ಞಾನ ಮತ್ತು ಮಾರ್ಕ್ಸ್‌ವಾದದಲ್ಲಿ ಅಪಾರ ಕೆಲಸವನ್ನು ಮಾಡಿದ್ದಾನೆ. ಸ್ಲೊವನಿಯಾದವನು. 'ದಿ ಸಬ್ಲೈಮ್ ಅಬ್ಜೆಕ್ಟ್ ಆಫ್ ಈಡಿಯಾಲಜಿ', 'ಲೆಸ್‌ದೇನ್ ನ ಥಿಂಗ್', 'ಲಿವಿಂಗ್ ಇನ್ ದಿ ಎಂಡ್ ಟೈಮ್ಸ್', 'ಇನ್ ದಿ ಫೆನ್ಸ್ ಆಫ್ ಲಾಸ್ಟ್ ಕಾಸಸ್' ಅವನ ಕೃತಿಗಳು. ಅವನ ಎಲ್ಲಾ ಕೃತಿಗಳಲ್ಲಿಯೂ ತಾತ್ವಿಕ ಪ್ರಶ್ನೆಗಳು ಇರುವುದು ವಿಶೇಷ. ಸಮಾಜಶಾಸ್ತ್ರವು ಅವನ ಆಸಕ್ತಿ.

ಹೆಗಲ್: ಜರ್ಮನಿಯ ತತ್ವಜ್ಞಾನಿ. ಒಂದು ರೀತಿಯಿಂದ ಆದರ್ಶವಾದಿಯೂ ಹೌದು. 27-8-1770ರಲ್ಲಿ ಹುಟ್ಟಿದ. 14-11-1831 ರಲ್ಲಿ ದಿವಂಗತನಾದ. 'ಸೈನ್ಸ್ ಆಫ್ ಲಾಜಿಕ್', 'ದಿ ಫಿನಮನಾಲಜಿ ಆಫ್ ಮೈಂಡ', 'ಲೆಕ್ಚರ್ಸ್ ಆನ್ ಅಸ್ತೆಟಿಕ್ಸ್', 'ದಿ ಫಿಲಾಸಫಿ ಆಫ್ ಹಿಸ್ಟ್ರಿ' ಅವನ ಮುಖ್ಯ ಕೃತಿಗಳು. ಈ ಜಗತ್ತಿನಲ್ಲಿ ಯಾವುದೂ ಅತ್ಯಂತ ಮಹತ್ವಪೂರ್ಣವಾದ್ದು ಎಂದು ಭಾವಿಸಬೇಕಾಗಿಲ್ಲ ಎಂದು ಹೇಳುತ್ತಾನೆ. ಆಧ್ಯಾತ್ಮ, ರಾಜಕೀಯ, ತತ್ವಜ್ಞಾನ, ತರ್ಕಶಾಸ್ತ್ರ, ಸೌಂದರ್ಯಶಾಸ್ತ್ರ ಅವನ ಆಸಕ್ತಿಯ ಕ್ಷೇತ್ರಗಳು.

ಫುಕೋ : ಪಾಲ್ ಮಿಶೆಲ್ ಫುಕೋ ಎನ್ನುವುದು ಪೂರ್ಣ ಹೆಸರು. 15-10-1926ರಲ್ಲಿ ಹುಟ್ಟಿದ. 25-6-1984ರಲ್ಲಿ ಮರಣವಪ್ಪಿದ. ಫ್ರಾನ್ಸ್ ದೇಶದವನು. ನಿರಚನ ಸಿದ್ಧಾಂತ ಮತ್ತು ಸಬಾಲ್ಟ್ರನ್ ಅಧ್ಯಯನಗಳ ಮೇಲೆ ಪ್ರಭಾವ ಬೀರಿದ್ದಾನೆ. ಜ್ಞಾನವೇ ನಿಜವಾದ ಅಧಿಕಾರ ಎನ್ನುವುದು ಅವನ ಪ್ರಬಲವಾದ ನಂಬಿಕೆ. ಸಂಕಥನ ಸಿದ್ಧಾಂತವು ಅವನ ವಾದಗಳಲ್ಲಿ ಮುಖ್ಯವಾಗಿವೆ. 'ಡಿಸಿಪ್ಲಿನ್ ಅಂಡ್ ಪನಿಶ್', 'ದ ಹಿಸ್ಟ್ರಿ ಆಫ್ ಸೆಕ್ಷುವಾಲಿಟಿ', 'ಮ್ಯಾಡ್‌ನೆಸ್ ಅಂಡ್ ಸಿವಿಲೈಜೇಶನ್', 'ದಿ ಆರ್ಡರ್ ಆಫ್ ಥಿಂಗ್ಸ್', 'ದ ಆರ್ಕಿಯಾಲಜಿ ಆಫ್ ನಾಲೆಜ್', 'ದ ಬರ್ತ್ ಆಫ್ ಕ್ಲಿನಿಕ್' ಅವನ ಮುಖ್ಯ ಕೃತಿಗಳು. ಯಾವುದು ನಮ್ಮನ್ನು ಹೆಚ್ಚು ನಿಯಂತ್ರಣ ಮಾಡುತ್ತದೆ ಎಂದು ಅವನು ವಿವರಿಸುತ್ತಾನೆ. ಅಧಿಕಾರವು ಜ್ಞಾನ ವ್ಯವಸ್ಥೆಯನ್ನು ರೂಪಿಸುತ್ತದೆ. ಅದರ ಮೂಲಕ ಒಂದು ನಿಯಂತ್ರಣವನ್ನು ಸಾಧಿಸುತ್ತದೆಯೆನ್ನುವುದು ಅವನ ವಾದ. ಸಾಂಸ್ಥಿಕ ವ್ಯವಸ್ಥೆಗಳು ಹೇಗೆ ಕೆಲಸ ಮಾಡುತ್ತದೆಯೆಂದೂ ವಿವರಿಸುತ್ತಾನೆ.

ಕಾರಣವಾದ : ಕ್ರಿಯೆ ಅಥವಾ ಘಟನೆಯು ಸುಮ್ಮನೆ ನಡೆಯುವುದಿಲ್ಲ. ಅದಕ್ಕೆ ಕಾರಣವಿರುತ್ತದೆ. ಕಾರ್ಯ ಮತ್ತು ಕಾರಣಕ್ಕೆ ಸಂಬಂಧವಿದೆ. ಕಾರ್ಯಕ್ಕೆ ಕೊಡುವ

ಸಮರ್ಥನೆಯನ್ನು ನಾವು ಕಾರಣವೆಂದು ಕರೆಯಬಹುದು. 'ಆ ವಸ್ತುವನ್ನು ಅವಳು ಹಿಂತಿರುಗಿಸುವಂತೆ ಹೇಳಿದಳು. ಆದರೆ ಅದಕ್ಕೆ ಅವಳು ಕಾರಣವನ್ನು ಕೊಟ್ಟಿಲ್ಲ' ಎನ್ನುವುದು ಒಂದು ಉದಾಹರಣೆ. ಕಾರಣವನ್ನು ನಾವು ಪ್ರಜ್ಞಾಪೂರ್ವಕ ಮಾಡುತ್ತೇವೆ. ಕಾರಣವಾದ ಎನ್ನುವುದು ವೈಚಾರಿಕವಾದದ್ದು. ಅದಕ್ಕೆ ತಾರ್ಕಿಕತೆಯು ಇದೆ. ಗ್ರೀಕ್ ಭಾಷೆ 'Log' ಎನ್ನುವುದರಿಂದ ಇದು ಬಂತು.

ಫುಕೊಯಮ : ಫ್ರಾನ್ಸಿಸ್ ಫುಕೊಯಾಮ ಎನ್ನುವುದು ಪೂರ್ಣ ಹೆಸರು. 27–10–1952ರಲ್ಲಿ ಹುಟ್ಟಿದರು. 'ದಿ ಎಂಡ್ ಆಫ್ ಹಿಸ್ಟ್ರಿ' 'ದಿ ಒರಿಜಿನ ಆಫ್ ಪೊಲಿಟಿಕಲ್ ಆರ್ಡರ್' 'ಐಡೆಂಟಿಟಿ' 'ಟ್ರಸ್ಟ್' ಪ್ರಮುಖ ಕೃತಿಗಳು. ಇತಿಹಾಸವು ಅಂತ್ಯವನ್ನು ಕಾಣುತ್ತಿದೆಯೆನ್ನುವುದು ಅತ್ಯಂತ ಮುಖ್ಯವಾದ ವಾದ. ಪ್ರಜಾಪ್ರಭುತ್ವವಾದಿ ನಿಲುವು ಅವನ ತಾತ್ವಿಕ ನಂಬಿಕೆ.

ಸಿಗ್ಮಂಡ್ ಫ್ರಾಯ್ಡ್ : ಆಸ್ಟ್ರಿಯಾದ ನರಶಾಸ್ತ್ರಜ್ಞ, ಮನೋವಿಶ್ಲೇಷಣೆಯಲ್ಲಿ ಹೊಸ ಪಂಥವನ್ನು ಸ್ಥಾಪಿಸಿದನು. 6–5–1856ರಲ್ಲಿ ಚೇಕ್ ಗಣರಾಜ್ಯದಲ್ಲಿ ಹುಟ್ಟಿದನು. 23–9–1939 ರಲ್ಲಿ ಮರಣವಪ್ಪಿದನು. 'ದಿ ಇಂಟ್ರಡಕ್ಶನ್ ಆಫ್ ಡ್ರೀಮ್ಸ್', 'ದ ಇಗೋ ಅಂಡ್ ಇದ್', 'ಬಿಯಾಂಡ್ ದಿ ಪ್ಲೆಶರ ಪ್ರಿನ್ಸಿಪಲ್ಸ್', 'ಟೋಟೆಮ್ ಅಂಡ್ ಟಾಬೂ', 'ಸ್ಟಡೀಸ್ ಆನ್ ಹಿಸ್ಟಿರಿಯ' ಅವನ ಪ್ರಮುಖ ಕೃತಿಗಳು. ನಮ್ಮ ಅಹಮಿಕೆಯು ನಮ್ಮನ್ನು ಆಳುತ್ತದೆ ಎನ್ನುವುದು ಅವನ ವಾದ. ಈಡಿಪಸ್ ಕಾಂಪ್ಲೆಕ್ಸ್ ಎನ್ನುವ ಪರಿಕಲ್ಪನೆಯನ್ನು ತರುತ್ತಾನೆ. ಅಹಮಿಕೆ ಮತ್ತು ಆನಂದಕ್ಕೆ ಸಂಬಂಧವಿದೆಯೆಂದು ನಿರೂಪಿಸುತ್ತಾನೆ. ಅದರ ಜೊತೆಗೆ ಸಮಾಜದಲ್ಲಿ ವಿಧಿ–ನಿಷೇಧಗಳು ಇರುತ್ತವೆಯೆಂದು ಹೇಳುತ್ತಾನೆ. ಲೈಂಗಿಕತೆಯ ಕುರಿತಂತೆ ಅವನ ಸಿದ್ಧಾಂತವು ಅತ್ಯಂತ ಮಹತ್ವದ್ದು.

ಡೆರಿಡಾ : ಫ್ರೆಂಚ್‌ನ ಅತ್ಯಂತ ಮಹತ್ವದ ತತ್ವಜ್ಞಾನಿ ಜಾಕ್ವೆಸ್ ಡೆರಿಡಾ. ನಿರಚನ ಸಿದ್ಧಾಂತದ ಪ್ರತಿಪಾದಕ. ಸಂಕೇತಶಾಸ್ತ್ರದ ವಿಭಿನ್ನ ಆಯಾಮವನ್ನು ತತ್ವಶಾಸ್ತ್ರಕ್ಕೆ ಅನ್ವಯಿಸಿದವನು ಹೌದು. ಅವನ ವಾದದಲ್ಲಿ ವಿದ್ಯಮಾನ ಶಾಸ್ತ್ರದ ಆಯಾಮವೂ ಇದೆ. ರಚನೋತ್ತರವಾದಿಯೆಂದು ಅವನನ್ನು ಕರೆಯುತ್ತಾರೆ. 15–7–1930ರಲ್ಲಿ ಅಲ್ಜೇರಿಯಾದಲ್ಲಿ ಹುಟ್ಟಿದನು. 9–10–2004 ರಂದು ಮರಣವಪ್ಪಿದ. 'ಆಫ್ ಗ್ರಾಮಟಾಲಜಿ', 'ಮಾರ್ಜಿನ್ಸ್ ಆಫ್ ಫಿಲಾಸಫಿ', 'ದ ಗಿಫ್ಟ್ ಆಫ್ ಡೆತ್', 'ಡಿಸ್ಸಿಮೀನೇಶನ್' ಮುಖ್ಯ ಕೃತಿಗಳು. ಸ್ಪೀಚ್ ಅಂಡ್ ಫೆನೊಮಿನಾ; ಏಕ್ಟ್ಸ್ ಆಫ್ ಲಿಟರೇಚರ್ ಮುಖ್ಯ ಕೃತಿಗಳು. ರಚನಾವಾದವು ರಚನೆಗೆ ಒಂದು ಕೇಂದ್ರವಿದೆ ಎಂದು ಹೇಳುತ್ತದೆ. ನಿರಚನವಾದವು ರಚನೆಯನ್ನು ಒಡೆದು ಬಹುಕೇಂದ್ರಗಳ

ಕುರಿತು ಹೇಳುತ್ತದೆ. ನಿರಚನ ಎನ್ನುವುದಕ್ಕೆ ಅತ್ಯಂತ ವಿಸ್ತಾರವಾದ ಅರ್ಥವು ಇದೆಯೆಂದು ಡೆರಿಡಾ ಭಾವಿಸುತ್ತಾನೆ. ಅವನು ಪಠ್ಯ ಮತ್ತು ಅರ್ಥಕ್ಕೆ ಮಹತ್ವವನ್ನು ಕೊಡುತ್ತಾನೆ. ಭಾಷೆ ಮತ್ತು ಅದರ ಉಪಯೋಗ ಅದರ ಸಂಕೀರ್ಣತೆ ಅವನಿಗೆ ಮುಖ್ಯ. ಅವನ ವಾದವು ಆಧುನಿಕೋತ್ತರ ಎಂದು ಬಣ್ಣಿತವಾಗಿದೆ. ಅಂತರ ಅಥವಾ ಭಿನ್ನತೆಗಳು ಅವನ ವಾದದ ಪ್ರಮುಖ ಪರಿಕಲ್ಪನೆಯಾಗಿದೆ.

ಅಲೆನ್ ಬದಿಯೌ : ಫ್ರೆಂಚ್ ತತ್ವಜ್ಞಾನಿ 17–1–1937 ರಲ್ಲಿ ಹುಟ್ಟಿದನು. 'ಬೀಯಿಂಗ್ ಅಂಡ್ ಇವೆಂಟ್', 'ದಿ ಕಮ್ಯುನಿಷ್ಟ್ ಹೈಪಾಥಿಸಿಸ್' 'ಥಿಯರಿ ಆಫ್ ದಿ ಸಬ್ಜೆಕ್ಟ್', 'ಲಾಜಿಕ್ ಆಫ್ ದಿ ವರ್ಲ್ಡ್ಸ್' ಮುಖ್ಯ ಕೃತಿಗಳು. ಯಾವುದೇ ಸಂವಾದಿತನ ಎನ್ನುವುದು ಸತ್ಯಕ್ಕೆ ಪರ್ಯಾಯವಾಗಲಾರದು. ಯಾವುದು ಸಾಕ್ಷ್ಯ ಎಂದು ಅನಿಸುತ್ತದೆಯೋ ಅದನ್ನು ಸಂವಾದಿ ಪದಗಳಿಂದ ವಿವರಿಸುವುದು ಅಸಾಧ್ಯ. 'ಆಗುವುದು' ಮತ್ತು ಘಟನೆಯೆನ್ನುವುದಕ್ಕೆ ಸಂಬಂಧವಿದೆ. ಅವನ ಚಿಂತನೆಯ ಕ್ರಮದ ಮೇಲೆ ಗ್ರೀಕ್ ತತ್ವಜ್ಞಾನದ ಪ್ರಭಾವವಿದೆ. ಬಹುತ್ವ ಎನ್ನುವುದನ್ನು ಅವನು ಮರುಪರಿಶೀಲನೆ ಮಾಡುತ್ತಾನೆ.

ಹನ್ಸ್‌ಕೆಲ್ಸನ್ : 11–10–1881ರಲ್ಲಿ ಪ್ರೇಗ್‌ನಲ್ಲಿ ಹುಟ್ಟಿದನು. 19–4–1973ರಲ್ಲಿ ದಿವಂಗತನಾದನು. ಆಸ್ಟ್ರಿಯನ್ ನ್ಯಾಯಶಾಸ್ತ್ರಜ್ಞ, ಕಾನೂನು ಮತ್ತು ರಾಜಕೀಯ ತತ್ವಜ್ಞಾನಿ. ಪ್ರಜಾಪ್ರಭುತ್ವವಾದಿ ಚಿಂತಕ. ಕಾನೂನನ್ನು ಇವನು ಧನಾತ್ಮಕವಾಗಿ ನೋಡುತ್ತಾನೆ. ಕೆಲ್ಸನ್ ವಾದದ ಬಗ್ಗೆ ವಾದ–ಪ್ರತಿವಾದಗಳಿವೆ. ಪ್ರಭುತ್ವ ಮತ್ತು ನ್ಯಾಯಾಂಗ ಹಾಗೂ ಕಾನೂನುಗಳ ಪರಸ್ಪರ ಸಂಬಂಧಗಳನ್ನು ವಿಮರ್ಶಿಸುತ್ತಾನೆ. ರಾಜ್ಯ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳು ಕೆಲ್ಸನ್‌ಗೆ ಮುಖ್ಯವಾಗಿದೆ. ರಾಜ್ಯದ ಸ್ವಯಂ ಅಂಗೀಕಾರವನ್ನು ಪ್ರತಿಪಾದಿಸುತ್ತಾನೆ. ಕಾನೂನು ಮತ್ತು ಅದರ ಪರಿಶುದ್ಧತೆಯು ಅವನಿಗೆ ಮುಖ್ಯವಾಗಿದೆ. ಕಾನೂನು ಮತ್ತು ಅದರ ಆಧುನಿಕತೆ ಪ್ರತಿಪಾದಿಸುತ್ತಾನೆ. 'ಜನರಲ್ ಥಿಯೆರಿ ಆಫ್ ಲಾ ಅಂಡ್ ಸ್ಟೇಟ್', 'ಪ್ಯೂರ್ ಥಿಯೆರಿ ಆಫ್‌ಲಾ', 'ಪೀಸ್ ಥ್ರೂ ಆಫ್‌ಲಾ', 'ವಾಟ್ ಈಸ್ ಜಸ್ಟೀಸ್' ಮುಖ್ಯ ಕೃತಿಗಳು.

ಫಾಸ್ಕೆಲ್ : ಫ್ರೆಂಚಿನ ಗಣಿತಶಾಸ್ತ್ರಜ್ಞ, ಹುಟ್ಟಿದ್ದು 19–6–1623 ರಲ್ಲಿ. ನಿಧನ 19–8–1662. 'ದಿ ಮೈಂಡ್ ಆನ್ ಫೈರ್; ಕ್ರಿಶ್ಚಿಯಾನಿಟಿ ಫಾರ್ ಫಾಗನ್ಸ್', 'ದಿ ಜಿಯಾಮೆಟ್ರಿಕಲ್ ಸ್ಪಿರಿಡ್' ಕೃತಿಗಳು.

ಬೇಕನ್ : ಇಂಗ್ಲಿಷಿನ ತತ್ವಜ್ಞಾನಿ. ಜನನ 22–1–1561. 9–4–1626 ರಂದು ತೀರಿಕೊಂಡ. ಕಾನೂನನ್ನು ಅವನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ.

ತರ್ಕಕೇಂದ್ರಿತವಾದ ವಾದವನ್ನು ಅವನು ಮಂಡಿಸಿದ. 'ದ ವಿಸ್‌ಡಂ ಆಫ್ ದ ಏನ್ಸಿಯಂಟ್', 'ಆಫ್ ಎಂಪೈರ್' 'ಕೇಸ್‌ಸ್ ಆಫ್ ಟ್ರೆಸನ್', 'ಎ ಕಾನ್ಸ್‌ಫೆರನ್ಸ್ ಆಫ್ ಪ್ಲಶರ್' ಕೃತಿಗಳು ಅರಿಸ್ಟಾಟಲಿನ ಆಲೋಚನೆಯ ಕ್ರಮವು ಪ್ರಭಾವಿತವಾಗಿದೆ.

ರೆನೆ ಡೆಸ್ಕಾರ್ಟ್: 31–3–1596ರಲ್ಲಿ ಹುಟ್ಟಿದ. 11–2–1650ರಲ್ಲಿ ಮರಣವನ್ನಪ್ಪಿದ. ಜಿಮೆಟ್ರಿ ಮತ್ತು ಆಲ್ಜಿಬ್ರಾವನ್ನು ಸಂಯೋಜನೆ ಮಾಡಿ ತನ್ನ ತಾತ್ವಿಕ ನಿಲುವನ್ನು ಸ್ಪಷ್ಟಪಡಿಸಿದ. ನಾನು ಆಲೋಚಿಸುತ್ತಿದ್ದೇನೆ. ಆದ್ದರಿಂದ ನಾನು ಇದ್ದೇನೆ ಎನ್ನುವುದು ಅವನ ಪ್ರಧಾನವಾದ ನಿಲುವು. ಮನಸ್ಸಿ ಕುರಿತಾಗಿ ಚಿಂತಿಸಿದ. ತತ್ವಜ್ಞಾನಿಯೂ ಹೌದು. ಸತ್ಯಕ್ಕೂ ವಾಸ್ತವಕ್ಕೂ ಸಂಬಂಧವಿದೆ ಎಂದು ಹೇಳುತ್ತಾನೆ. ಮನಸ್ಸು ಮತ್ತು ಸಂವೇದನೆಯನ್ನು ವಿವರಿಸುತ್ತಾನೆ. ಮನೋಸ್ಥಿತಿ ಮತ್ತು ಅದರ ಸಾಮರ್ಥ್ಯವು ಅವನಿಗೆ ಮುಖ್ಯವಾಗಿದೆ.

ಲೆವಿಸ್ಟ್ರಾಸ್ : 28–11–1908 ರಂದು ಬೆಲ್ಜಿಯಂನಲ್ಲಿ ಹುಟ್ಟಿದ. 30–10–2009 ರಲ್ಲಿ ತೀರಿಹೋದ. 'ದಿ ಸೇವೇಜ್ ಮೈಂಡ್' 'ಮಿಥ್ ಅಂಡ್ ಮೀನಿಂಗ್' ಮುಖ್ಯ ಕೃತಿಗಳು. ಮಾನವಶಾಸ್ತ್ರಜ್ಞ, ಮಾನವ ಶಾಸ್ತ್ರಕ್ಕೆ ರಾಚನಿಕವಾದವನ್ನು ಅನ್ವಯಿಸಿದನು. ಯಾವುದೇ ವಿಜ್ಞಾನಿಯು ಸರಿಯಾದ ಉತ್ತರವನ್ನು ಕೊಡುವವನು ಅಲ್ಲ. ಅವನು ಸರಿಯಾದ ಪ್ರಶ್ನೆಗಳನ್ನು ಕೇಳುತ್ತಾನೆ ಎನ್ನುವುದು ಅವನ ವಾದ. ಭಾಷೆಯು ಮಾನವನ ಕಾರಣಕ್ಕೆ ಉಗಮವಾಗಿದೆ. ಅದಕ್ಕೆ ಆಂತರಿಕವಾದ ತರ್ಕವಿದೆ. ಭಾಷಾಶಾಸ್ತ್ರವು ಸಮಾಜವಿಜ್ಞಾನದ ಒಂದು ಭಾಗವೂ ಹೌದು ಎಂದು ಹೇಳುತ್ತಾನೆ.

ಎರಿಕ್ ಫ್ರಾಂ: 23–3–1900ರಲ್ಲಿ ಹುಟ್ಟಿದ. 18–3–1980ರಲ್ಲಿ ದಿವಂಗತನಾದ. ಸಿಗ್ಮಂಡ್ ಫ್ರಾಯ್ಡ್; ಕಾಲ್ಸ್‌ಮಾರ್ಕ್ಸ್; ಕಿರ್ಕೆಗಾರ್ಡ್ ಮುಂತಾದವರಿಂದ ಪ್ರಭಾವಿತನಾದ. ಸಾಮಾಜಿಕ ಮನೋವಿಜ್ಞಾನಿ ಸ್ವಾತಂತ್ರ್ಯ ಮತ್ತು ಮನುಷ್ಯ ಸ್ವಭಾವಗಳ ಕುರಿತು ಅಧ್ಯಯನ ಮಾಡಿದ್ದಾನೆ. 'ದಿ ಆರ್ಟ್ ಆಫ್ ಲಿವಿಂಗ್', 'ಎಸ್ಕೇಫ್ ಪ್ರೆಂ ಫ್ರೀಡಂ', 'ಮ್ಯಾನ್ ಪಾರ್ ಹಿಂಸೆಲ್ಫ್', 'ದ ಎನಾಟಮಿ ಆಫ್ ಹ್ಯೂಮನ್ ಡಿಸ್ಟ್ರಕ್ಟಿವೆನೆಸ್' ಮುಖ್ಯ ಕೃತಿಗಳು. ನವ ಫ್ರಾಯ್ಡ್ ವಾದಿ ಎಂದು ಖ್ಯಾತನಾಗಿದ್ದಾನೆ. ಎರಡು ಪ್ರಶ್ನೆಗಳಿವೆ ಎಂದು ಭಾವಿಸುತ್ತಾನೆ; ಸ್ವಾತಂತ್ರ್ಯ ಮತ್ತು ಅವಲಂಬನೆ. ಅಪ್ರಬುದ್ಧ ಪ್ರೇಮ ಮತ್ತು ಪ್ರಬುದ್ಧ ಪ್ರೇಮವೆಂದು ಎರಡು ಬಗೆಯನ್ನು ಗುರುತಿಸುತ್ತಾನೆ. ಅಪ್ರಬುದ್ಧ ಪ್ರೇಮವು 'ನಾನು ನಿನ್ನನ್ನು ಪ್ರೀತಿಸುತ್ತಾನೆ. ಅದಕ್ಕಾಗಿ ನೀನು ಬೇಕು' ಎಂದು ಹೇಳಿದರೆ ಪ್ರಬುದ್ಧ ಪ್ರೇಮವು 'ನನಗೆ ನಿನ್ನ ಅಗತ್ಯವಿದೆ. ಆದ್ದರಿಂದ ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳುತ್ತದೆ. ಮನುಷ್ಯನ ಅಸ್ತಿತ್ವದಲ್ಲಿ ಪ್ರೀತಿಯ ಪಾತ್ರವು ಅತ್ಯಂತ ಪ್ರಮುಖವಾದದ್ದು ಎಂದು ಅವನು ಹೇಳುತ್ತಾನೆ.


ಮಾರ್ಕೂಸ್ : ಹರ್ಬಟ್ ಮಾರ್ಕೂಸ್ ಪೂರ್ಣ ಹೆಸರು. ಸಮಾಜ ವಿಜ್ಞಾನ ರಾಜ್ಯಶಾಸ್ತ್ರದಲ್ಲಿ ಆಸಕ್ತನಾಗಿದ್ದ. ಫ್ರಾಂಕ್ ಫರ್ಟ್ ಸ್ಕೂಲಿಗೆ ಸೇರಿದವನು. 19–7–1898ರಲ್ಲಿ ಬರ್ಲಿನಿನಲ್ಲಿ ಹುಟ್ಟಿದ. 29–7–1979ರಲ್ಲಿ ತೀರಿಹೋದ. ಸ್ವತಂತ್ರ ಚುನಾವಣೆಯೂ ಕೂಡಾ ಯಜಮಾನ ಮತ್ತು ಆಳು ಎನ್ನುವ ಪ್ರಭೇದವನ್ನು ಅಳಿಸಲಾರದು ಎಂದು ನಂಬಿದ್ದ. ಮಾರ್ಕ್ಸ್‌ವಾದಿ ಚಿಂತಕನೂ ಹೌದು. 'ಒನ್ ಡೈಮನ್ಶಿಯಲ್ ಮ್ಯಾನ್', 'ರೀಸನ್ ಅಂಡ್ ರೆವ್ಯೂಲಷನ್', 'ಏ ಕ್ರಿಟಿಕ್ ಆಫ್ ಆಂಡ್ ಪ್ಯೂಲ್ ಟಾಲರೆನ್ಸ್' ಮುಖ್ಯ ಕೃತಿಗಳು.

ದ ಫ್ರಾಂಕ್ ಫರ್ಟ್ ಸ್ಕೂಲ್ : ಇದು ಸಾಮಾಜಿಕ ಮತ್ತು ತತ್ವಜ್ಞಾನಕ್ಕೆ ಹೊಸ ಕೊಡುಗೆಯನ್ನು ನೀಡಿತು. ಸಾಮಾಜಿಕ ಸಂಶೋಧನೆಗೆ ಹೆಸರುವಾಸಿಯಾಗಿದೆ. ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿದೆ.

ಡೆಲ್ಯೂಜ್ : ಫ್ರೆಂಚ್ ತತ್ವಜ್ಞಾನಿ. ಗಿಲ್ಲೆಸ್ ಡೆಲ್ಯೂಜ್ ಪೂರ್ಣ ಹೆಸರು. ತತ್ವಜ್ಞಾನ, ಸಾಹಿತ್ಯ, ಸಿನಿಮಾ, ಲಲಿತಕಲೆಗಳು ಆಸಕ್ತಿಯ ವಿಷಯ. 18–1–1925 ರಲ್ಲಿ ಹುಟ್ಟಿದನು. 4–11–1995ರಲ್ಲಿ ಮಡಿದನು. ಪ್ಯಾರಿಸಿನವನು. 'ಆಂಟ್ ಈಡಿಪಸ್', 'ದಿ ಫರೆನ್ಸ್ ಅಂಡ್ ರಿಪಿಟೇಶನ್', 'ದ ಲಾಜಿಕ್ ಆಫ್ ಸೆನ್ಸ್' ಮುಖ್ಯ ಕೃತಿಗಳು. ಬಂಡವಾಳವಾದ ಮತ್ತು ಸ್ಕಿಜೋಫ್ರೇನಿಯಾದ ಕುರಿತು ಅತ್ಯಂತ ಕುತೂಹಲದಾಯಕವಾದ ಚರ್ಚೆಯನ್ನು ಮಾಡಿದ್ದಾನೆ.

ಕೇಶವ ಶರ್ಮ ಕೆ. ನಮ್ಮ ನಡುವಿನ ಅತ್ಯಂತ ಸೂಕ್ಷ್ಮ ಸಂವೇದನೆಯ ಲೇಖಕ. ಅಪಾರವಾದ ಓದು ಮತ್ತು ಅದರ ಕುರಿತಾದ ಚಿಂತನೆಯನ್ನು ಮಾಡುತ್ತಾ ಬಂದ ಶರ್ಮ ತನ್ನ ಪಾಡಿಗೆ ತಾನು ಕೆಲಸ ಮಾಡುತ್ತಾ ಬರುವುದನ್ನು ನೋಡಿ ಸಂತೋಷವಾಗುತ್ತದೆ. ಯಾವುದೇ ಪ್ರಚಾರದ ಗೀಳಿಲ್ಲದೆ ಬರೆಯುವವರು ಈವತ್ತು ತುಂಬಾ ಕಡಿಮೆ. ಬೆರಳೆಣಿಕೆಯಷು ಇದ್ದಾರೆ. ಅದರಲ್ಲಿ ಕೇಶವ ಶರ್ಮ ಕೂಡಾ ಒಬ. ನನ್ನ ಆಪ್ತ ಸ್ನೇಹಿತ. ಎಷ್ಟೋ ವರ್ಷಗಳಿಂದ ಆತನ ಬರಹಗಳನ್ನು ನೋಡುತ್ತಾ ಬಂದಿದ್ದೇನೆ. ಅವನ ಒಳನೋಟ, ಸಾಹಿತ್ಯದ ಬಗ್ಗೆ ಆತನಿಗಿರುವ ಶ್ರದ್ಧೆ, ಬರಹದ ಕ್ರಮ ಇಷ್ಟವಾಗುತ್ತದೆ. ಕಾರಂತರು ಓದಲು ಇದು ಒಂದು ಮುಖ್ಯವಾದ ಪುಸ್ತಕ ಎಂದು ನಾನು ಭಾವಿಸುತ್ತೇನೆ. ಹಾಗೆ ನೋಡಿದರೆ ಈ ವಿಷಯದ ಕುರಿತು ಕನ್ನಡದಲ್ಲಿ ಚರ್ಚೆಯೇ ಆಗಿಲ್ಲ. ಅದನ್ನು ಶರ್ಮ ಮಾಡಿದ್ದಾನೆ. ನಮಗಿಬ್ಬರಿಗೆ ಇರುವ ಸ್ನೇಹದಿಂದಾಗಿ ಅವನನ್ನು ಬಹುವಚನದಿಂದ ಕರೆಯಲಾರೆ. ಅವನ ಈ ಪುಸ್ತಕವನ್ನು ಎಲ್ಲರೂ ಓದುತ್ತಾರೆ ಎಂದು ಭಾವಿಸುತ್ತೇನೆ

– ಆರ್.ಈ. ಹಳ್ಳಿ ನಾಗರಾಜ್



ಸಂಸ್ಕೃತಿ ಮತ್ತು ನಾಗರಿಕತೆ ಹಾಗೂ ಚರಿತ್ರೆಗಳ ಹೊಸದಾದ ಪಯಣಗಳು ಹೇಗೆ ನಮಗೆ ಅಗತ್ಯವಾಗುತ್ತದೆ ಚರಿತ್ರೆ ಎನ್ನುವುದಕ್ಕೆ ಒಂದು ಕ್ರಿಯಾತ್ಮಕವಾದ ರೂಪವೂ ಇದೆ. ಆದ್ದರಿಂದ ಅದು ನಿರ್ದಿಷ್ಟವಾದ ನಿರೂಪಣೆಗೆ ಗುರಿಯಾಗುತ್ತದೆ. ಚರಿತ್ರೆಯನ್ನು ನಾವು ಕತೆಯಂತೆ ಹೇಳುತ್ತಿದ್ದೇವೆ. ಇತಿಹಾಸಕಾರರು ಚರಿತ್ರೆಯನ್ನು ಕತೆ ಹೇಳುವಂತೆ ಹೇಳದೆ ವಿಧಿಯಿಲ್ಲ. ಚರಿತ್ರೆಯು ಒಂದು ಸಂವಾದವನ್ನು ಹೇಳುತ್ತದೆ. ಪ್ರತಿಯೊಬ್ಬ ಇತಿಹಾಸಕಾರನೂ ತನ್ನದೇ ಆದ ಒಂದು ಸಂವಾದವನ್ನು ರೂಪಿಸಿಕೊಳ್ಳುತ್ತಾನೆ. ಅವನು ಹೇಳುವ ಕತೆಗಳು ಅವನ ನಿಲುವನ್ನು ಹೇಳುತ್ತವೆ ಮಾತ್ರವೇ ಅಲ್ಲ, ಅವುಗಳು ನಮಗೆ ಒಂದು ಕಲ್ಪನೆಯನ್ನು ಹೇಳುತ್ತದೆ. ವಿವರಣೆ ಮತ್ತು ಅದರ ಪ್ರಾತಿನಿಧಿಕತೆಗೆ ಒಂದು ನಿರ್ದಿಷ್ಟವಾದ ಆಯಾಮವೂ ಇರುತ್ತದೆ. ಈಗಾಗಲೇ ಚರಿತ್ರೆಯನ್ನು ಹೇಳಿ ಮುಗಿಸಿದ್ದಾರೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಇತಿಹಾಸವು ನಮಗೆ ಅನೇಕ ಚಿಂತನೆಗಳನ್ನು ಹೇಳುತ್ತವೆ. ಆದರೆ ಅದರಲ್ಲಿ ಅನೇಕ ಘಟನೆಗಳೂ ಇರುತ್ತವೆ ಎನ್ನುವುದು ಸತ್ಯ. ಚರಿತ್ರೆಯಲ್ಲಿ ಯಾವುದು ನಿಜವಾಗಿಯೂ ಪ್ರಾತಿನಿಧಿಕವಾಗಿದೆ ಎನ್ನುವುದು ಅತ್ಯಂತ ಮುಖ್ಯ. ಚರಿತ್ರೆಯಲ್ಲಿ ಎಲ್ಲವೂ ನಿಜವಾದ ಅರ್ಥದಲ್ಲಿ ಪ್ರಾತಿನಿಧಿಕವಾಗಿ ಇರುವುದಿಲ್ಲ. ಕೆಲವು ದಿನಗಳಲ್ಲಿ ಕರಗುತ್ತವೆ. ಅದನ್ನು ನೋಡಲು ನಮಗೆ ಸರಿಯಾದ ಆವರಣಗಳು ಇಲ್ಲ. ಚರಿತ್ರೆಯ ರಚನೆಗಳು ತಮ್ಮದೇ ಆದ ಆಂಶಿಕ ಸಂಗತಿಗಳನ್ನು ಇಟ್ಟುಕೊಂಡಿರುತ್ತವೆ. ನಾವು ಯಾವ ಮಾಹಿತಿಯನ್ನು ಸಂಗ್ರಹ ಮಾಡುತ್ತೇವೆ ಮತ್ತು ಆ ಮಾಹಿತಿಯನ್ನು ಇಟ್ಟುಕೊಂಡು ನಾವು ಯಾವುದನ್ನು ಚರ್ಚೆ ಮಾಡುತ್ತೇವೆ ಎನ್ನುವುದು ಅತ್ಯಂತ ಮುಖ್ಯ. ಮಾಹಿತಿಯನ್ನು ತೆಗೆದುಕೊಳ್ಳುವಾಗ ಅದರ ನಿರೂಪಣೆಯು ಬೇರೆಯಾಗುತ್ತದೆ. ಮಾಹಿತಿ ಎನ್ನುವುದು ನಮಗೆ ಒಂದು ಆಕರವು ಮಾತ್ರವೇ. ಹೇಗೆ ಇದ್ದರೂ ನಮ್ಮ ಇತಿಹಾಸ ಮತ್ತು ಅದರ ಸ್ವರೂಪವನ್ನು ನಾವು ವಿವಿಧ ರೀತಿಯಲ್ಲಿ ಕ್ರೋಢೀಕರಣ ಮಾಡಲು ಸಾಧ್ಯವು ಇದೆ. ಚರಿತ್ರೆ ಮತ್ತು ಅದರ ಅಧ್ಯಯನವು ನಮಗೆ ಈ ದೃಷ್ಟಿಯಿಂದ ಅತ್ಯಂತ ಮುಖ್ಯ. ಆದರೆ ಒಂದು ಅಂಶವಂತೂ ಸತ್ಯ. ಅದು ಚರಿತ್ರೆಯು ನಿರ್ದಿಷ್ಟವಾದ ರಚನೆ ಮತ್ತು ಅದರಲ್ಲಿ ಒಂದು ಏಕತೆಯು ಇರುತ್ತದೆ. ಚರಿತ್ರೆಯು ಏನು ಆಗಿದೆಯೋ ಅದನ್ನು ನಿರೂಪಿಸುತ್ತದೆ. ಅಂದರೆ ಅದರಲ್ಲಿ ನಿರ್ದಿಷ್ಟವಾದ ಒಂದು ಧ್ವನಿಯೂ ಇದೆ. ಮತ್ತೊಂದು ಅರ್ಥದಲ್ಲಿ ಅದು ಚರಿತ್ರೆಯನ್ನು ಅನುಕ್ರಮವಾಗಿ ಹೇಳುತ್ತದೆ. ಆದರೆ ಆದು ನಿರೂಪಣೆಗೆ ಒಳಗಾಗುವಾಗ ಅದರಲ್ಲಿ ಕೆಲವು ಸತ್ಯವಾದ ಸಂಗತಿಯು ಇರುತ್ತದೆ. ಚರಿತ್ರೆಯು ನಿಂತ ನೀರಲ್ಲ. ಅದರ ಚಲನಶೀಲವಾದ್ದು ಎನ್ನುವುದು ನಿಜ. ಆದ್ದರಿಂದ ಅದರ ಸ್ವರೂಪವನ್ನು ಆಯಾ ಸನ್ನಿವೇಶಕ್ಕೆ ಅನುಸಾರವಾಗಿ ಹೇಳುತ್ತಾರೆ, ಚರಿತ್ರೆಯನ್ನು ನಿರೂಪಿಸುವಾಗ ನಾವು ಮಾಡುವ ಒಂದು ಮುಖ್ಯವಾದ ತಂತ್ರವೆಂದರೆ ಅದರಲ್ಲಿ ಕಾಲ ಮತ್ತು ಸ್ಥಳವನ್ನು ನೋಡುವುದು. ಇದು ಅತ್ಯಂತ ಅಗತ್ಯ. ಯಾವುದು ಚರಿತ್ರೆಯಲ್ಲಿ ಮುಕ್ತವಾದ ಒಂದು ನಿಲುವು ಎಂದು ಹೇಳುತ್ತೇವೆಯೋ ಅದು ಎಲ್ಲಿಂದಲೋ ಪ್ರಾರಂಭವಾಗುತ್ತದೆ. ಅದನ್ನು ಎಲ್ಲಿಯೋ ಮುಕ್ತಾಯ ಮಾಡಬೇಕಾಗುತ್ತದೆ. ಈ ಕಾರಣದಿಂದ ಅದು ತೆರೆದ ಪಠ್ಯವೂ ಹೌದು